ಕರ್ನಾಟಕ ಲೋಕಾಯುಕ್ತ : ಸಾಮಾಜಿಕ ಪರಿಣಾಮಗಳು

ರಾಜ್ಯಶಾಸ್ತ್ರ ವಿಷಯಕ್ಕೆ ಸಂಬಂಧಿಸಿದಂತೆ ಪಿಹೆಚ್.ಡಿ ಪದವಿಗಾಗಿ
ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಸಂಶೋಧನ ಮಹಾಪ್ರಬಂಧ

ಸಂಶೋಧಕರು
ಅಬ್ದುಲ್ ಹಕೀಂ
ಅಭಿವೃದ್ಧಿ ಅಧ್ಯಯನ ವಿಭಾಗ

ಮಾರ್ಗದರ್ಶಕರು
ಡಾ.ಜನಾರ್ದನ
ಸಹಾಯಕ ಪ್ರಾಧ್ಯಾಪಕರು

ಸಹ ಮಾರ್ಗದರ್ಶಕರು
ಡಾ.ಎ.ಶ್ರೀಧರ್
ಸಹ ಪ್ರಾಧ್ಯಾಪಕರು

ಸಮಾಜ ವಿಜ್ಞಾನಗಳ ನಿಕಾಯ
ಅಭಿವೃದ್ಧಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

೨೦೧೪

ಹಸ್ತಾಂತರದ ಪ್ರತಿ

೨೬/೧೧/೨೦೧೬

ಕರ್ನಾಟಕ ಲೋಕಾಯುಕ್ತ : ಸಾಮಾಜಿಕ ಪರಿಣಾಮಗಳು

ರಾಜ್ಯಶಾಸ್ತ್ರ ವಿಷಯಕ್ಕೆ ಸಂಬಂಧಿಸಿದಂತೆ ಪಿಹೆಚ್.ಡಿ ಪದವಿಗಾಗಿ
ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಸಂಶೋಧನ ಮಹಾಪ್ರಬಂಧ

ಸಂಶೋಧಕರು
ಅಬ್ದುಲ್ ಹಕೀಂ
ಅಭಿವೃದ್ಧಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ

ಮಾರ್ಗದರ್ಶಕರು
ಡಾ.ಜನಾರ್ದನ
ಸಹಾಯಕ ಪ್ರಾಧ್ಯಾಪಕರು

ಸಹ ಮಾರ್ಗದರ್ಶಕರು
ಡಾ.ಎ.ಶ್ರೀಧರ್
ಸಹ ಪ್ರಾಧ್ಯಾಪಕರು

ಸಮಾಜ ವಿಜ್ಞಾನಗಳ ನಿಕಾಯ
ಅಭಿವೃದ್ಧಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

೨೦೧೪

ದೃಢೀಕರಣ ಪತ್ರ

ಕರ್ನಾಟಕ ಲೋಕಾಯುಕ್ತ: ಸಾಮಾಜಿಕ ಪರಿಣಾಮಗಳು ಎಂಬ ವಿಷಯ ಕುರಿತು ಅಬ್ದುಲ್ ಹಕೀಂ ಅವರು ನನ್ನ ಮಾರ್ಗದರ್ಶನದಲ್ಲಿ ಸಂಶೋಧನಾತ್ಮಕ ಅಧ್ಯಯನ ಕೈಗೊಂಡು ಪಿಎಚ್.ಡಿ ಪದವಿಗಾಗಿ ಈ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿದ್ದಾರೆ.

ಈ ಮಹಾಪ್ರಬಂಧವನ್ನು ಇದುವರೆಗೆ ಯಾವುದೇ ಪದವಿ ಅಥವಾ ಡಿಪ್ಲೊಮಾಗಾಗಿ ಪ್ರಸ್ತುತಪಡಿಸಿಲ್ಲ. ಅಲ್ಲದೇ ಇದು ಇಲ್ಲಿಯವರೆಗೆ ಎಲ್ಲಿಯೂ ಇಡಿಯಾಗಿ ಅಥವಾ ಬಿಡಿಯಾಗಿ ಪ್ರಕಟಗೊಂಡಿಲ್ಲ ಮತ್ತು ಇದು ಅವರ ಸ್ವತಂತ್ರ ಸಂಶೋಧನ ಅಧ್ಯಯನವಾಗಿದೆ ಎಂದು ಈ ಮೂಲಕ ದೃಢೀಕರಿಸಲಾಗಿದೆ.

ಡಾ.ಜನಾರ್ದನ
ಸಹಾಯಕ ಪ್ರಾಧ್ಯಾಪಕರು
ಅಭಿವೃದ್ಧಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ

ಸ್ಥಳ : ವಿದ್ಯಾರಣ್ಯ
ದಿನಾಂಕ: ೧೦-೨-೨೦೧೪

ದೃಢೀಕರಣ ಪತ್ರ

ಕರ್ನಾಟಕ ಲೋಕಾಯುಕ್ತ: ಸಾಮಾಜಿಕ ಪರಿಣಾಮಗಳು ಎಂಬ ವಿಷಯ ಕುರಿತು ಅಬ್ದುಲ ಹಕೀಂ ಅವರು ನನ್ನ ಸಹ ಮಾರ್ಗದರ್ಶನದಲ್ಲಿ ಸಂಶೋಧನಾತ್ಮಕ ಅಧ್ಯಯನ ಕೈಗೊಂಡು ಪಿಎಚ್.ಡಿ ಪದವಿಗಾಗಿ ಈ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿದ್ದಾರೆ.

ಈ ಮಹಾಪ್ರಬಂಧವನ್ನು ಇದುವರೆಗೆ ಯಾವುದೇ ಪದವಿ ಅಥವಾ ಡಿಪ್ಲೊಮಾಗಾಗಿ ಪ್ರಸ್ತುತಪಡಿಸಿಲ್ಲ. ಅಲ್ಲದೇ ಇದು ಇಲ್ಲಿಯವರೆಗೆ ಎಲ್ಲಿಯೂ ಇಡಿಯಾಗಿ ಅಥವಾ ಬಿಡಿಯಾಗಿ ಪ್ರಕಟಗೊಂಡಿಲ್ಲ ಮತ್ತು ಇದು ಅವರ ಸ್ವತಂತ್ರ ಸಂಶೋಧನ ಅಧ್ಯಯನವಾಗಿದೆಯೆಂದು ಈ ಮೂಲಕ ದೃಢೀಕರಿಸಲಾಗಿದೆ.

ಡಾ. ಎ. ಶ್ರೀಧರ್
ಸಹ ಪ್ರಾಧ್ಯಾಪಕರು
ಅಭಿವೃದ್ಧಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ

ಸ್ಥಳ : ವಿದ್ಯಾರಣ್ಯ
ದಿನಾಂಕ: ೧೦-೨-೨೦೧೮

ಪ್ರಮಾಣ ಪತ್ರ

ಕರ್ನಾಟಕ ಲೋಕಾಯುಕ್ತ: ಸಾಮಾಜಿಕ ಪರಿಣಾಮಗಳು ಎಂಬ ವಿಷಯ ಕುರಿತು ಕನ್ನಡ ವಿಶ್ವವಿದ್ಯಾಲಯದ ಅಭಿವೃದ್ಧಿ ಅಧ್ಯಯನ ವಿಭಾಗದ ಸಹ ಪ್ರಾಧ್ಯಾಪಕರಾದ ಡಾ.ಜನಾರ್ದನ ಅವರ ಮಾರ್ಗದರ್ಶನದಲ್ಲಿ ಸಂಶೋಧನಾತ್ಮಕ ಅಧ್ಯಯನ ಕೈಗೊಂಡು ಪಿಎಚ್.ಡಿ ಪದವಿಗಾಗಿ ಈ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿದ್ದೇನೆ.

ಈ ಮಹಾಪ್ರಬಂಧವನ್ನು ಇದುವರೆಗೆ ಯಾವುದೇ ಪದವಿ ಅಥವಾ ಡಿಪ್ಲೊಮಾಗಾಗಿ ಪ್ರಸ್ತುತಪಡಿಸಿಲ್ಲ. ಅಲ್ಲದೇ ಇದು ಇಲ್ಲಿಯವರೆಗೆ ಎಲ್ಲಿಯೂ ಇಡಿಯಾಗಿ ಅಥವಾ ಬಿಡಿಯಾಗಿ ಪ್ರಕಟಗೊಂಡಿಲ್ಲ ಮತ್ತು ಇದು ನನ್ನ ಸ್ವತಂತ್ರ ಸಂಶೋಧನ ಅಧ್ಯಯನವಾಗಿದೆಯೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಅಬ್ದುಲ್ ಹಕೀಂ
ಸಂಶೋಧಕರು
ಅಭಿವೃದ್ಧಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ

ಸ್ಥಳ : ವಿದ್ಯಾರಣ್ಯ
ದಿನಾಂಕ : ೧೦-೨-೨೦೧೮

ಪರಿವಿಡಿ

ಅಧ್ಯಾಯ ಒಂದು

ಪ್ರಸ್ತಾವನೆ

ಅಧ್ಯಾಯ ಒಂದು

ವಿಷಯ ಪ್ರಸ್ತಾವನೆ

೧.೧. ಪ್ರಸ್ತಾವನೆ

ಇತ್ತೀಚಿನ ದಿನಗಳಲ್ಲಿ ಭ್ರಷ್ಟಾಚಾರ ಹಾಗೂ ದುರಾಡಳಿತ ಬಹು ಚರ್ಚಿತ ವಿಷಯವಾಗಿವೆ. ಭ್ರಷ್ಟಾಚಾರವು ಅಭಿವೃದ್ಧಿ ದೇಶಗಳಲ್ಲಿ ಸಾಂಕ್ರಾಮಿಕ ರೋಗವಾಗಿದೆ ಎಂದು ಕೆಲವರ ವಾದ. ಭ್ರಷ್ಟಾಚಾರವು ಸರ್ವವ್ಯಾಪಿಯು, ಸರ್ವಸ್ಪರ್ಶಿಯೂ ಆಗಿದೆ ಎಂಬುದಂತೂ ಸತ್ಯ. ಇತ್ತೀಚಿನ ದಿನಗಳಲ್ಲಿ ಇದು ವಿಶ್ವದ ಎಲ್ಲ ರಾಷ್ಟ್ರಗಳಲ್ಲಿಯೂ ತನ್ನ ಅಸ್ತಿತ್ವವನ್ನು ಬಹಿರಂಗವಾಗಿ ಪ್ರದರ್ಶಿಸುತ್ತ 'ಸರ್ವಾಂತರ್ಯಾಮಿ' ಎನಿಸಿಕೊಂಡಿದೆ. ದೇಶದ ಆಡಳಿತ ವ್ಯವಸ್ಥೆಯಲ್ಲಿ ಆಳವಾಗಿ ಬೇರು ಬಿಟ್ಟಿರುವ ಬಹು ದೊಡ್ಡ ಸಾಮಾಜಿಕ ಪಿಡುಗಾಗಿ ಭ್ರಷ್ಟಾಚಾರ ಪರಿಣಮಿಸಿದೆ. ಮಾನವ ತನ್ನ ನಾಗರೀಕ ಜೀವನವನ್ನು ಆರಂಭಿಸಿದ ಕಾಲದಿಂದ ಹಿಡಿದು ಇಂದಿನವರೆಗೂ ಭ್ರಷ್ಟಾಚಾರ ಹಲವಾರು ರೀತಿಯಲ್ಲಿ ತನ್ನ ಅಸ್ತಿತ್ವ ಹಾಗೂ ಪ್ರಸ್ತುತತೆಯನ್ನು ಉಳಿಸಿಕೊಂಡು ಬಂದಿರುವುದು ಕಂಡು ಬರುತ್ತದೆ. ಹೀಗಾಗಿ ಉತ್ತಮ ಆಡಳಿತ ಪಡೆಯುವುದು ಸಾಮಾನ್ಯ ಜನರ ಪಾಲಿಗೆ ಗಗನ ಕುಸುಮವೆನಿಸಿದೆ. ಈ ಹಿನ್ನೆಲೆಯಲ್ಲಿ ಭ್ರಷ್ಟಾಚಾರವನ್ನು ಉತ್ತಮ ಆಡಳಿತದ ಕೆಡುಕಿನ ತಾಯಿ ಎನ್ನಬಹುದೇನೊ! ಭ್ರಷ್ಟಾಚಾರವು ಉತ್ತಮ ಆಡಳಿತವನ್ನು ವಿಫಲಗೊಳಿಸಿದ್ದಲ್ಲದೇ ಸಾಮಾಜಿಕವಾಗಿ ದುಷ್ಪರಿಣಾಮಗಳನ್ನು ಬೀರಿದೆ. ಕರ್ನಾಟಕ ಲೋಕಾಯುಕ್ತ ಸ್ಥಾಪನೆ ಮಾಡಿರುವ ಮುಖ್ಯ ಉದ್ದೇಶವೂ ಕೂಡ ಸರ್ಕಾರಿ ಆಡಳಿತದಲ್ಲಿ ಭ್ರಷ್ಟಾಚಾರವನ್ನು ನಿರ್ಮೂಲನೆಗೊಳಿಸುವುದು ತನ್ಮೂಲಕ ಉತ್ತಮ ಆಡಳಿತ ನೀಡುವುದಾಗಿದೆ. ಈ ಹಿನ್ನೆಲೆಯಲ್ಲಿ **ಕರ್ನಾಟಕ ಲೋಕಾಯುಕ್ತ: ಸಾಮಾಜಿಕ ಪರಿಣಾಮಗಳು** ಇದನ್ನು ಅಧ್ಯಯನದ ವಸ್ತುವಾಗಿ ಮತ್ತು ವಿಷಯವಾಗಿ ಇಲ್ಲಿ ಪರಿಗಣಿಸಲಾಗಿದೆ.

ವಿಶ್ವದ ಅರ್ಧ ಸಂಪತ್ತು ಕೇವಲ ೮೫ ಜನರ ಬಳಿಯಿದೆ ಇದಕ್ಕೆ ಮೂಲಕಾರಣ ಉದಾರೀಕರಣ, ಜಾಗತೀಕರಣ ಹಾಗೂ ಖಾಸಗೀಕರಣ ಎಂದು ಆಕ್ಸಾಮ ಸಂಸ್ಥೆ ಇತ್ತೀಚೆಗೆ ಹೇಳಿದೆ. ಇಂತಹ ವೈರುಧ್ಯಗಳು ಜನಸಾಮಾನ್ಯರಲ್ಲಿ ಆಕ್ರೋಶ ಹೆಚ್ಚು ಮಾಡುತ್ತಿವೆ. ಅಪ್ರಾಮಾಣಿಕತೆ, ಮಿಥ್ಯ ಅಹಂಕಾರ ಇಂದು ಬಹು ದೊಡ್ಡ ಸಾಮಾಜಿಕ ಸಮಸ್ಯೆಯಾಗಿದ್ದು ಇದು ಸರ್ಕಾರಿ ನೌಕರರು ಸೇರಿದಂತೆ ನ್ಯಾಯಾಂಗ ಮತ್ತು ಮಾಧ್ಯಮದವರನ್ನ ಕಾಡುತ್ತಿದೆ. ವೈವಿಧ್ಯತೆಗಳೊಂದಿಗೆ ವೈರುಧ್ಯಗಳನ್ನು ತುಂಬಿಕೊಂಡಿರುವ ಭಾರತದಂತಹ ವಿಶಾಲ ದೇಶದಲ್ಲಿ ವೈರುಧ್ಯಗಳನ್ನು ಅನುಭವಿಸುವುದೇ ಒಂದು ದೊಡ್ಡ ಹಿಂಸೆ ಹಾಗೂ ದುರಂತ. ಇಂತಹ ಅನಿಷ್ಟಗಳನ್ನು ಬೇರು ಸಹಿತ ಕಿತ್ತು ಹಾಕುವ ಅಥವಾ ಕನಿಷ್ಠ ಪಕ್ಷ ನಿಯಂತ್ರಣಕ್ಕೊಳಪಡಿಸುವ ಕೂಗು ಈಗ ಎಲ್ಲೆಡೆ ಕೇಳಿ ಬರುತ್ತಿರುವುದು ನಿಜಕ್ಕೂ ಸಮಾಧಾನಕರ ಅಂಶ. ಉನ್ನತ ಮಟ್ಟದಲ್ಲಿರುವ ಸಾರ್ವಜನಿಕರಂಗದ ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಲೆಂದೇ ಜನರು ಲೋಕಪಾಲ ಮಸೂದೆಗೆ ಆಗ್ರಹಿಸಿ ಇತ್ತೀಚೆಗೆ ರಾಷ್ಟ್ರಾದ್ಯಂತ ಶ್ರೀ ಅಣ್ಣಾ ಹಜಾರೆಯವರ ನಾಯಕತ್ವದಲ್ಲಿ ಚಳವಳಿ ನಡೆಸಿದ್ದು ಗಮನಾರ್ಹ.

ಮಣಿದು ಕೇಂದ್ರ ಸರ್ಕಾರ ಮೊನ್ನೆಯಷ್ಟೇ ಲೋಕಪಾಲ ಮಸೂದೆ ಜಾರಿಗೆ ತಂದಿರುವುದು ಭ್ರಷ್ಟಾಚಾರ ಸಹನಾತೀತ ಎನ್ನಲು ಬಹು ದೊಡ್ಡ ಪುರಾವೆ. ಭಾರತದಲ್ಲಿ ಈ ಪಿಡುಗು ವೇದಗಳ ಕಾಲದಿಂದಲೂ ಗೋಚರಗೊಂಡಿದ್ದರೂ, ನವ ವಸಾಹತುಶಾಹಿಯ ಇಂದಿನ ಸಂಕೀರ್ಣ ಕಾಲಘಟ್ಟದಲ್ಲಿ ಭ್ರಷ್ಟಾಚಾರ ಹಾಗೂ ಉತ್ತಮ ಆಡಳಿತದ ಬಗ್ಗೆ ನಮ್ಮ ಬದುಕಿನ ಚಿಂತನೆಗಳು, ಆಲೋಚನಾ ಕ್ರಮಗಳು, ಜೀವನ ಶೈಲಿ, ಸಂಸ್ಕೃತಿ, ರಾಜಕೀಯ ಮುಂತಾದ ಸಂಗತಿಗಳು, ಭಿನ್ನ ನೆಲೆಗಳನ್ನು ಕಂಡುಕೊಳ್ಳುತ್ತಿವೆ. ಪಾಶ್ಚಾತ್ಯ ಚಿಂತನೆ, ಸಿದ್ಧಾಂತಗಳ ಪರಿಪಾಕದಲ್ಲಿ ನಮ್ಮ ಭರತಖಂಡ ಮತ್ತು ಕರ್ನಾಟಕದ ಆಡಳಿತ ಚರಿತ್ರೆ ಮತ್ತು ಸಂಸ್ಕೃತಿ ಪರಿಚಯವನ್ನು ಈಗೀಗ ಕುತೂಹಲದಿಂದ ಪರೀಕ್ಷಿಸುತ್ತಿದ್ದೇವೆ. ಈ ವಿಷಯಗಳ ಬಗ್ಗೆ ಹೇಳಲ್ಪಡುವ ನಮ್ಮದೆನ್ನುವ ಸಂಸ್ಕೃತಿ, ನಮ್ಮತನಗಳೇ ನಮಗಿಂದು ಹೊಸ ಆಕೃತಿಗಳಾಗಿ ಹೊರ ಹೊಮ್ಮುತ್ತಿವೆ. ಉತ್ತಮ ಆಡಳಿತವನ್ನು ಕಟ್ಟಿಕೊಡುವ ಚರಿತ್ರೆ ಎಂಬುದು ಗತಕಾಲದ ಘಟನೆಗಳ ಮೊತ್ತವಾಗಿದೆ. ಇತಿಹಾಸವನ್ನು ಅರಿಯದವನು ಇತಿಹಾಸವನ್ನು ಸೃಷ್ಟಿಸಲಾರ ಎನ್ನುವ ಮಾತು ಕೂಡ ಇಲ್ಲಿ ಸತ್ಯ. ಭಾರತೀಯರಿಗೆ ಆಡಳಿತ ಶೈಲಿಯ ವಿಷಯದಲ್ಲಿ ಬೇರೆಯವರಿಗಿಂತಲೂ ಭವ್ಯವಾದ ಇತಿಹಾಸವಿದೆ. ಆದರೆ ಇದರ ಕುರಿತು ಪ್ರಶ್ನೆ ಇಲ್ಲ ಎನ್ನುವ ವ್ಯಾಖ್ಯಾನಗಳ ಪುರ್ನಮೌಲ್ಯೀಕರಣದ ತುರ್ತು ನಮ್ಮ ಮುಂದಿದೆ. ಚರಿತ್ರೆಯು ನೇರವಾಗಿ ವರ್ತಮಾನಕ್ಕೆ ಸಂಬಂಧಿಸಿದ್ದಾಗಿದೆ. ವರ್ತಮಾನವನ್ನು ಸೂಕ್ಷ್ಮವಾಗಿ ಅರಿತವರು ಗತ ಜೀವನದ ಆಡಳಿತ ಹಾಗೂ ಸಾಮಾಜಿಕ ಜೀವನವನ್ನು ಅರ್ಥೈಸಿಕೊಳ್ಳಬಹುದು. ಚರಿತ್ರೆಯಲ್ಲಿ ಹುದುಗಿಹೋಗಿರುವ ಆಡಳಿತ ಪದ್ಧತಿ ಮತ್ತು ಕ್ರಿಯಾತ್ಮಕ ನಡಿಗೆ ಇವೆರಡು ಸಾಮಾಜಿಕ ಬದುಕಿನ ಚಿಂತನಾಶೀಲ ಜೈವಿಕ ಸ್ವರೂಪಗಳನ್ನು ಮುಂದಕ್ಕೆ ಹೊತ್ತೊಯ್ಯುವ ಪ್ರಮುಖ ಅಂಶಗಳಾಗಿವೆ.

ಭರತ ಖಂಡದ ಪಾರಂಪರಿಕ ಜ್ಞಾನ ಶಿಸ್ತುಗಳು ರಾಜ್ಯ, ರಾಜತ್ವ, ಉತ್ತಮ ಆಡಳಿತ, ಪ್ರಜೆಗಳು ಮತ್ತು ಆಯಾ ವ್ಯಕ್ತಿ, ಶಕ್ತಿಗಳ ಕರ್ತವ್ಯ ಹಕ್ಕುಗಳು ಮುಂತಾದ ವಿಷಯಗಳನ್ನು ಪ್ರತಿಪಾದಿಸಿವೆ. ಅಂಥವುಗಳಲ್ಲಿ ಕೌಟಿಲ್ಯನ ಅರ್ಥಶಾಸ್ತ್ರವನ್ನು ಮರೆಯಲಾಗದು. ಮಹಾಭಾರತದ ಶಾಂತಿ ಪರ್ವ, ಮನುಸ್ಮೃತಿಯ ಅಧ್ಯಾಯ ಏಳು ಮತ್ತು ಎಂಟು, ಕಾಮಂದಕ ನೀತಿಸಾರ, ಚಾಲುಕ್ಯ ಚಕ್ರವರ್ತಿ ಸೋಮೇಶ್ವರನ ಮಾನಸೋಲ್ಲಾಸ, ಚಾಂಡೇಶ್ವರನ ರಾಜನೀತಿ, ರತ್ನಾಕರನ ಭೋಜರಹಿತ ಯುಕ್ತಿ ಕಲ್ಪತರು, ಮಿತ್ರಮಿಶ್ರನ ರಾಜನೀತಿ ಪ್ರಕಾಶ, ಸೋಮದೇವನ ನೀತಿ ವಾಕ್ಯಾಮೃತ ಮತ್ತು ಕೇಶವ ಪಂಡಿತನ ರಾಜನೀತಿ ಮುಂತಾದ ಗ್ರಂಥಗಳು ರಾಜನ ಅಧಿಪತ್ಯದಲ್ಲಿ ನಡೆಯುವ ರಾಜ್ಯವ್ಯವಸ್ಥೆ ಹಾಗೂ ಉತ್ತಮ ಆಡಳಿತದ ಕುರಿತು ಪ್ರತಿಪಾದಿಸುತ್ತವೆ. ಧರ್ಮಶಾಸ್ತ್ರ ಸ್ಮೃತಿ ಮತ್ತು ಇತರ ಗ್ರಂಥಗಳಲ್ಲಿರುವ ಪ್ರಕರಣಗಳು ರಾಜ್ಯವ್ಯವಸ್ಥೆ, ರಾಜತ್ವ, ಉತ್ತಮ ಆಡಳಿತ, ರಾಜನ ಪದವಿಯನ್ನು ವಹಿಸಿಕೊಳ್ಳುವ ರೀತಿ, ರಾಜನ ಆಚಾರ ಸಂಹಿತೆ, ರಾಜತ್ವಕ್ಕೆ ಉತ್ತರಾಧಿಕಾರಿಯ ನಿಯಮ, ಯುವರಾಜರುಗಳ ವಿದ್ಯಾಭ್ಯಾಸ, ಮಂತ್ರಿ ಪರಿಷತ್ತಿನ ರಚನೆ, ನ್ಯಾಯಾಲಯಗಳ ಸ್ಥಾಪನೆ, ನ್ಯಾಯಾಧೀಶರ ನೇಮಕ. ಆಡಳಿತಾತ್ಮಕ ವಿಭಾಗಗಳು ಮತ್ತು ಕರ್ತವ್ಯಗಳು ಮುಂತಾದ ಹತ್ತು ಹಲವು ಸಂಗತಿಗಳನ್ನು ಅನಾವರಣಗೊಳಿಸುತ್ತವೆ. ರಾಜಾ ಪ್ರತ್ಯಕ್ಷ ದೇವಃ ಎಂದು ಹೇಳಿದ ಧರ್ಮಗ್ರಂಥಗಳು ಅದೇ ರಾಜನಿಗೆ ಪ್ರಜೆಗಳೇ ವಿಷ್ಣು ಎಂದು ಅಂಕುಶ ಕೂಡ ಹಾಕಿರುವುದನ್ನು ಕಾಣುತ್ತೇವೆ. ಇಲ್ಲಿ ರಾಜ ಮತ್ತು ಪ್ರಜೆಗಳ ಅಂಕುಶಗಳು ಪರಸ್ಪರರಲ್ಲಿ ಇರುವಂತೆ ಧರ್ಮಶಾಸ್ತ್ರವು ಬುದ್ಧಿವಂತಿಕೆಯಿಂದ ಪ್ರತಿಪಾದಿಸಿದೆ. ರಾಜನು ತನ್ನ ಅಧಿಕಾರವನ್ನು ದುರುಪಯೋಗಪಡಿಸಿಕೊಂಡರೆ, ಪ್ರಜೆಗಳೇ ಆತನನ್ನು ಸರಿದಾರಿಗೆ ತರುವ ಪ್ರಯತ್ನ ಮಾಡಬೇಕು. ಅಂತೆಯೇ ಪ್ರಜೆಗಳನ್ನು ಸನ್ಮಾರ್ಗದಲ್ಲಿ ನಡೆಸುವ ಚಾಣಾಕ್ಷತನವೂ ರಾಜನಿಗಿರಬೇಕು. ಅತ್ರಿ ಸಂಹಿತೆಯು ಪ್ರತಿಯೊಬ್ಬ ರಾಜನೂ ಮಾಡಬೇಕಾದ ಐದು ಮೂಲಭೂತ ಕರ್ತವ್ಯಗಳನ್ನು ಹೀಗೆ ನಿರೂಪಿಸುತ್ತದೆ.

ದುಷ್ಟರನ್ನು ಶಿಕ್ಷಿಸುವುದು, ಸಜ್ಜನರನ್ನು ಗೌರವಿಸುವುದು ಮತ್ತು ರಕ್ಷಿಸುವುದು, ನ್ಯಾಯವಾದ ರೀತಿಯಲ್ಲಿ ಬೊಕ್ಕಸವನ್ನು ತುಂಬುವುದು. ವಾದಿ ಮತ್ತು ಪ್ರತಿವಾದಿಗಳ ನಡುವೆ ನಿಷ್ಪಕ್ಷಪಾತ ಭಾವನೆಯಿಂದ ತೀರ್ಪು ನೀಡುವುದು ಮತ್ತು ರಾಜ್ಯವನ್ನು ಉತ್ತಮ ಆಡಳಿತದ ಮೂಲಕ ಸಂರಕ್ಷಿಸುವುದು ಇವೇ ರಾಜ ಮಾಡಬೇಕಾದ ಐದು ಯಜ್ಞಗಳು ಎಂದರೆ ನಿಸ್ವಾರ್ಥ ಕರ್ತವ್ಯಗಳು. ಕ್ರಿಪೂ. ೩೦೦ರಲ್ಲಿ ಕೌಟಿಲ್ಯನ ಅರ್ಥಶಾಸ್ತ್ರವು ಕೂಡ ರಾಜಪ್ರಭುತ್ವದ ಆಡಳಿತಾತ್ಮಕ ಸಂಗತಿಗಳ ಮಾನದಂಡವನ್ನು ಹೀಗೆ ನಿರ್ವಚಿಸುತ್ತದೆ. ಪ್ರಜೆಗಳ ಸುಖವೇ ರಾಜನ ಸುಖ, ಪ್ರಜೆಗಳ ಹಿತವೇ ರಾಜನ ಹಿತ, ರಾಜನಾದವನು ಪ್ರಜೆಗಳಿಗೆ ಹಿತವಾದುದನ್ನೇ ಮಾಡಬೇಕೇ ವಿನಃ ತಮಗೆ ಇಷ್ಟ ಬಂದಂತಲ್ಲ. ಮನುಸ್ಮೃತಿಯು ರಾಜ್ಯದ ಆಡಳಿತವು ಸುಗಮವಾಗಿ ಸಾಗಲು ರಾಜನು ತೆಗೆದುಕೊಳ್ಳಬೇಕಾದ ಕ್ರಮಗಳನ್ನು ಹೀಗೆ ಪಟ್ಟಿ ಮಾಡುತ್ತದೆ.

"ಅರಸನು ಒಳ್ಳೆಯ ಕುಟುಂಬಕ್ಕೆ ಸೇರಿದ ಶೂರರೂ, ನೀತಿವಂತರೂ, ಆದ ಏಳು ಅಥವಾ ಎಂಟು ಜನರನ್ನು ಮಂತ್ರಿಗಳನ್ನಾಗಿ ನಿಯಮಿಸತಕ್ಕದ್ದು, ಇದರ ಮುಖ್ಯ ಉದ್ದೇಶವೇ ಭ್ರಷ್ಟಾಚಾರ ಮುಕ್ತ ಉತ್ತಮ ಆಡಳಿತ ನೀಡುವುದಾಗಿದೆ. ಅತ್ಯಂತ ಕಷ್ಟಕರವಾದ ರಾಜ್ಯಭಾರ ಮಾಡಲು ಮಂತ್ರಿಗಳ ಸಹಾಯದ ಅವಶ್ಯಕತೆಯಿರುತ್ತದೆ. ರಾಜನು ಇಂತಹ ಮಂತ್ರಿಮಂಡಲದೊಡನೆ ಸಂಧಿ, ಸಮರ, ದಂಡ, ಕೋಶ, ರಾಜಧಾನಿ, ರಾಷ್ಟ್ರ ಇವುಗಳಿಗೆ ಸಂಬಂಧಪಟ್ಟ ವಿಷಯಗಳ ಬಗೆಗೆ ಹಾಗೂ ಧಾನ್ಯ, ಚಿನ್ನ ಇವುಗಳ ಉತ್ಪತ್ತಿ ಮತ್ತು ಆತ್ಮರಕ್ಷಣೆಯ ಬಗೆಗೆ ಸಮಾಲೋಚನೆ ನಡೆಸಬೇಕು. ರಾಜನು ಪ್ರತಿಯೊಬ್ಬ ಮಂತ್ರಿಯ ಮನಸ್ಸಿನ ಅಭಿಪ್ರಾಯವನ್ನು ಪ್ರತ್ಯೇಕವಾಗಿಯೂ ಮತ್ತು ಎಲ್ಲ ಮಂತ್ರಿಗಳ ಅಭಿಪ್ರಾಯವನ್ನು ಮಂತ್ರಿಮಂಡಲದ ಸಭೆಯಲ್ಲಿಯೂ ಪಡೆದು ಯೋಗ್ಯರೀತಿಯಲ್ಲಿ ಆಡಳಿತ ನಡೆಸಬೇಕು. ಅನ್ಯರಿಂದ ಲಂಚ ಪಡೆದ ಅಧಿಕಾರಿಗಳ ಸಮಸ್ತ ಸ್ವತ್ತನ್ನು ಮುಟ್ಟುಗೋಲು ಹಾಕಿಕೊಂಡು ಅವರನ್ನು ದೇಶದಿಂದ ಗಡಿಪಾರು ಮಾಡಬೇಕು. ಜನರಿಂದ ಅಲ್ಪಸ್ವಲ್ಪ ತೆರಿಗೆ ಸಂಗ್ರಹಿಸಬೇಕು. ಕುರುಡರು, ಬುದ್ಧಿಮಾಂದ್ಯರು, ಕುಂಟರು, ಎಪ್ಪತ್ತು ವರ್ಷ ದಾಟಿದ ವೃದ್ಧರಿಂದ ತೆರಿಗೆ ವಸೂಲು ಮಾಡಬಾರದು. ಹಾಗೆಯೇ ರಾಜನು ತೆರಿಗೆಯಿಂದ ಬಂದ ಹಣದ ಮೂಲಕ ತನ್ನ ಪ್ರಜೆಗಳ ಇಷ್ಟಾರ್ಥವನ್ನು ನೆರವೇರಿಸಬೇಕು ಎಂದಿದೆ.

ಮೇಲೆ ನಿರೂಪಿಸಲಾದ ರಾಜಪ್ರಭುತ್ವದ ಚಿಂತನಾಕ್ರಮಗಳು ಮತ್ತು ಅವುಗಳ ಅನುಷ್ಠಾನವನ್ನು ನಮ್ಮ ಭರತಖಂಡದ ಅರಸು ಮನೆತನಗಳು ಪಾಲಿಸಿಕೊಂಡು ಬಂದಿರುವುದನ್ನು ಕಾಣುತ್ತೇವೆ. ಈ ನಿಟ್ಟಿನಲ್ಲಿ ಕರ್ನಾಟಕದ ಅರಸು ಮನೆತನಗಳು ಧರ್ಮ, ಅರ್ಥ, ಕಾಮ ಎಂಬ ತ್ರಿವರ್ಗ ಸಿದ್ಧಾಂತದ ಆಧಾರದ ಮೇಲೆ ತಮ್ಮ ದೈನಂದಿನ ಆಡಳಿತಗಳನ್ನು ನಡೆಸಿರುವುದನ್ನು ಇತಿಹಾಸ ದಾಖಲಿಸುತ್ತದೆ. ಅಂದಿನ ರಾಜಪ್ರಭುತ್ವದಲ್ಲಿಯೂ ಇಂದಿನ ಪ್ರಜಾಪ್ರಭುತ್ವದ ಮೂಲಸೆಲೆಗಳಿರುವ ಜೊತೆಗೆ ಉತ್ತಮ ಆಡಳಿತ ನೀಡುವ ಮನಸಾಕ್ಷಿಯನ್ನು ಕೂಡ ಗುರುತಿಸಬಹುದು. ನಮ್ಮ ಸಂದರ್ಭದ ಅನೇಕ ಕೃತಿಗಳು ಪ್ರಜೆಗಳ ಹಿತ ಮತ್ತು ಸಂತೋಷಕ್ಕಾಗಿ ಅರಸನು ತನ್ನನ್ನು ಸಮರ್ಪಣೆ ಮಾಡಿಕೊಂಡಿರುವ ಬಹುಮುಖ್ಯ ಸಂಗತಿಗಳನ್ನು ತೆರೆದಿಡುತ್ತವೆ. ಕರ್ನಾಟಕದ ಎಲ್ಲ ರಾಜಮನೆತನಗಳು ಉತ್ತಮ ಆಡಳಿತದ ಮಾರ್ಗದರ್ಶಿ ಸೂತ್ರಗಳನ್ನು ಮರೆಯದೇ ಪಾಲಿಸಿಕೊಂಡು ಬಂದಿವೆ. ಕರ್ನಾಟಕವನ್ನು ಆಳಿದ ರಾಜಪ್ರಭುತ್ವಗಳ ಮೂಲ ನೆಲೆ ಜನಪರ. ರಾಜ್ಯಾಡಳಿತ ಸುಭಿಕ್ಷವಾಗಿರಲು ರಾಜಕೀಯ, ಧಾರ್ಮಿಕ, ಸಾಮಾಜಿಕ, ಆರ್ಥಿಕ ಮತ್ತು ಪ್ರಾಕೃತಿಕ ಅಂಶಗಳ ಜೊತೆಗೆ ಉತ್ತಮ ಆಡಳಿತವು ಪ್ರಮುಖ ಪಾತ್ರವಹಿಸುತ್ತದೆ. ಮೂಲತಃ ಕರ್ನಾಟಕದ ಜನಪದರು ಶಾಂತಿಪ್ರಿಯರು. ಈ ಹಿನ್ನೆಲೆಯಲ್ಲಿ ಧರ್ಮದ ನಿಯಮಗಳು ರಾಜರುಗಳನ್ನು ಕಟ್ಟಿ ಹಾಕಿದ್ದವು. ಅಂತೆಯೇ ಪ್ರಜೆಗಳು ಕೂಡಾ ಧರ್ಮದ ವ್ಯಾಪ್ತಿಯನ್ನು ಮೀರಿ ನಡೆದುಕೊಳ್ಳುತ್ತಿರಲಿಲ್ಲ.

ಜರ್ಮನಿಯ ದಾರ್ಶನಿಕ **'ಟ್ವೈಲೈಟ್ಸ್ ಆಫ್ ದಿ ಪಿಡಲ್ಸ್"** ಎಂಬ ಕೃತಿಯೊಂದರಲ್ಲಿ ಜರ್ಮನ್ ಜನಕ್ಕೆ ಏನೆಲ್ಲ ಕೊರತೆಗಳಿವೆ ಎಂಬ ಅಂಶವನ್ನು ಉಲ್ಲೇಖಿಸಿರುವುದು ಕುತೂಹಲಕಾರಿಯಾಗಿದೆ. ಇದರ ಪ್ರಕಾರ ರಾಜಕೀಯ ಅಧಿಕಾರ, ಆರ್ಥಿಕತೆ, ವಿಶ್ವವ್ಯಾಪಾರ, ಸೈನ್ಯ, ಇತ್ಯಾದಿಗಳ ದಿಕ್ಕಿನಲ್ಲಿ ಆಸಕ್ತಿ ವಹಿಸಿದಷ್ಟು ಉಳಿದ ಕಡೆಗೆ ಅಷ್ಟರ ಮಟ್ಟಿಗೆ ಶಕ್ತಿಯ ಕೊರತೆ ಉಂಟಾಗುತ್ತದೆ. ಅಂದರೆ ಸಾಂಸ್ಕೃತಿಕವಾಗಿ ಹಾಗೂ ಜನರ ಆಪ್ತತೆಯನ್ನು ಅರಿತುಕೊಳ್ಳುವಲ್ಲಿ ವಿಫಲವಾಗುತ್ತದೆ. ಸಮಾಜ ಬಡವಾಗುತ್ತದೆ. ಪ್ರಭುತ್ವ ಮತ್ತು ಸಂಸ್ಕೃತಿಗಳೆರಡೂ ಒಟ್ಟಿಗೆ ಹೋಗಲಾರದೇ ಉತ್ತಮ ಆಡಳಿತ ವಿಫಲವಾಗುತ್ತದೆ ಎಂದು ಆತ ವಾದಿಸುತ್ತಾನೆ. ಪ್ರಭುತ್ವ ಬಲಿಷ್ಠವಾದಂತೆಲ್ಲ ಸಂಸ್ಕೃತಿ ಸೊರಗುತ್ತದೆ ಎಂಬುದು ಇದರ ಸಿದ್ಧಾಂತ.

ಭಾರತದಲ್ಲಿ ಬ್ರಿಟಿಷ್‌ರ ಆಳ್ವಿಕೆಯಲ್ಲಿ ಭ್ರಷ್ಟಾಚಾರ ತನ್ನ ಅಸ್ತಿತ್ವವನ್ನು ಬಹು ಢಾಳಾಗಿ ಸಾರತೊಡಗಿದ್ದನ್ನು ನೋಡಬಹುದು. ಸ್ವಾತಂತ್ರ್ಯಾನಂತರದಲ್ಲಂತೂ ಭ್ರಷ್ಟಾಚಾರ ಕಡಿಮೆಯಾಗದೇ ವ್ಯತಿರಿಕ್ತವಾಗಿ ಹಿಮಾಲಯದೆತ್ತರ ಬೆಳೆದು ನಿಂತಿರುವುದು ವಿಪರ್ಯಾಸ. ಇದು ನಮ್ಮ ರಾಷ್ಟ್ರದಲ್ಲಿ ಕ್ಯಾನ್ಸರ್ ವ್ಯಾಧಿಯಂತೆ ಆಡಳಿತದ ಒಳ ಹಾಗೂ ಹೊರ ಮಗ್ಗಲುಗಳಲ್ಲಿ ವ್ಯಾಪಿಸಿಕೊಂಡಿರುವುದು ಕಂಡು ಬರುತ್ತದೆ. ಭಾರತದಲ್ಲಿ ಇಂದು ಭ್ರಷ್ಟಾಚಾರ ರಹಿತವೆನಿಸುವ ಯಾವ ಸರಕಾರಿ ಇಲಾಖೆಗಳಾಗಲೀ, ಸರಕಾರಿ ಅಧಿಕಾರಿಗಳಾಗಲೀ ಮತ್ತು ರಾಜಕಾರಣಿಗಳಾಗಲೀ ಇಲ್ಲವೆಂದೇ ಹೇಳಬಹುದು. ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ಎಲ್ಲರೂ ಸಹ ಭ್ರಷ್ಟಾಚಾರದ ಹೆಚ್ಚಳಕ್ಕೆ ಕಾರಣಕರ್ತರೇ ಆಗಿದ್ದಾರೆನ್ನಲು ಯಾವುದೇ ಅನುಮಾನ ಪಡಬೇಕಿಲ್ಲ.

ದ್ವಿತೀಯ ಮಹಾಯುದ್ಧದಿಂದೀಚೆಗೆ ಸಾರ್ವಜನಿಕ ಆಡಳಿತದಲ್ಲಿ ಭ್ರಷ್ಟಾಚಾರ ವ್ಯಾಪಕವಾಗಿ ಹರಡಿರುವುದು ಕಂಡುಬರುತ್ತದೆ. ಯುದ್ಧಗಳ ಹಿನ್ನೆಲೆಯಲ್ಲಿ ಎದುರಾದ ಆರ್ಥಿಕ ಮುಗ್ಗಟ್ಟಿನ ದುರುಪಯೋಗ ಮಾಡಿಕೊಂಡ ಕೆಲವು ಅಧಿಕಾರಿಗಳು ಭ್ರಷ್ಟಾಚಾರದ ಬೀಜವನ್ನು ಅಲ್ಲಲ್ಲಿ ಪಸರಿಸಿದರು. ನಂತರದ ದಿನಗಳಲ್ಲಿ ಇದು ವಿಶ್ವವ್ಯಾಪಿಯಾಗಿ ಹರಡಿತು. ಮುಂದೆ ಇದು ಹತ್ತು ಹಲವು ಹೊಸ ರೂಪ ಧರಿಸಿ ಭಾರತದಲ್ಲೂ ಕೂಡ ಪ್ರವೇಶಿಸಿರುವುದು ವೇದ್ಯವಾಗುತ್ತದೆ. ದುರಂತವೆಂದರೆ, ಸ್ವಾತಂತ್ರ್ಯಪೂರ್ವದ ಭಾರತೀಯರಲ್ಲಿದ್ದ ದೇಶಪ್ರೇಮ, ಪ್ರಾಮಾಣಿಕತೆ, ನೈತಿಕತೆ, ಸೇವಾ ಮನೋಭಾವನೆ ಮೆಟ್ಟಿ ಭ್ರಷ್ಟಾಚಾರ ವಿಜೃಂಭಿಸಿ ಉತ್ತಮ ಆಡಳಿತಕ್ಕೆ ಅಡ್ಡಿಯೆನಿಸುವಷ್ಟು ಬೆಳೆದು ನಿಂತಿತು.

ಇದರರ್ಥ ಬ್ರಿಟಿಷ್‌ರ ಆಡಳಿತಕ್ಕೆ ಮುಂಚೆ ಭಾರತದಲ್ಲಿ ಭ್ರಷ್ಟಾಚಾರ ಹಾಗೂ ದುರಾಡಳಿತ ಇದ್ದಿರಲಿಲ್ಲವೆಂತಲ್ಲ. ಭಾರತದಲ್ಲಿ ಭ್ರಷ್ಟಾಚಾರವು ಆಳವಾಗಿ ಬೇರೂರಲು ಬ್ರಿಟಿಷ್‌ರು ಪ್ರಬಲ ಕಾರಣೀಭೂತರಾದರಷ್ಟೇ. ಬ್ರಿಟಿಷರ 'ಒಡೆದು ಆಳುವ ನೀತಿ'ಯೂ ಸಹ ಭ್ರಷ್ಟಾಚಾರ ವಿಪುಲವಾಗಿ ಬೆಳವಣಿಗೆಯಾಗಲು ಅವಕಾಶ ನೀಡಿತು ಎಂದರೆ ತಪ್ಪಾಗಲಾರದು. ಆಂಗ್ಲರು ತಮ್ಮ ವಿರೋಧಿ

ರಾಜರುಗಳನ್ನು ಸದೆಬಡೆಯಲು ಅಂತಹ ವಿರೋಧಿ ರಾಜರುಗಳ ಸೇವಕರುಗಳಿಗೆ, ಅಧಿಕಾರಿಗಳಿಗೆ ಅಥವಾ ಮಂತ್ರಿಗಳಿಗೆ ಹಣದ ಅಥವಾ ಅಧಿಕಾರದ ಆಸೆ ತೋರಿಸಿ ಅವರನ್ನು ತಮ್ಮ ಕಡೆ ಸೆಳೆಯುವಂತೆ ಮಾಡುತ್ತಿದ್ದರು. ಟಿಪ್ಪು ಸುಲ್ತಾನ, ಸಂಗೊಳ್ಳಿ ರಾಯಣ್ಣ, ಕಿತ್ತೂರು ಚೆನ್ನಮ್ಮ ಮುಂತಾದ ದಿಟ್ಟ ದೇಶಪ್ರೇಮಿಗಳನ್ನು ಬ್ರಿಟಿಷರು ಸದೆಬಡೆದಿದ್ದು 'ಲಂಚ'ದ ಆಮಿಷದಿಂದಲೇ ಎಂಬುದಿಲ್ಲಿ ದಾಖಲಾರ್ಹ.

೧.೨. ಅಧ್ಯಯನ ವಿಷಯದ ಸಮಸ್ಯೀಕರಣ

ಮುಂದೆ ಸ್ವತಂತ್ರ ಭಾರತದಲ್ಲಿ ಸರ್ಕಾರದ ಕಾರ್ಯಕ್ಷೇತ್ರ ಅಪಾರವಾಗಿ ವಿಸ್ತಾರಗೊಂಡಿತು. 'ಪ್ರಜಾ ಕಲ್ಯಾಣ'ದ ಗುರಿ ಮತ್ತು ಧ್ಯೇಯಗಳನ್ನು ಲಕ್ಷ್ಯವಾಗಿ ಇಟ್ಟುಕೊಂಡು ಅದನ್ನು ಸಾಧಿಸುವತ್ತ ಹೊರಟ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸಾಮಾಜಿಕ ಪರಿಣಾಮ ಬೀರುವಂತಹ ಹಾಗೂ ಬಹುಮುಖಿ ಎನಿಸುವಂತಹ ಅನೇಕ ಆರ್ಥಿಕ ಅಭಿವೃದ್ಧಿ ಕಾರ್ಯಗಳನ್ನು ಹಮ್ಮಿಕೊಂಡವು. ಸರ್ಕಾರ ಇಂತಹ ಯೋಜನೆಗಳನ್ನು ಅನುಷ್ಠಾನಗೊಳಿಸಲು ಇಲಾಖಾ ಅಧಿಕಾರಿಗಳಿಗೆ ಹೆಚ್ಚಿನ ಹಣ ಮತ್ತು ವಿಶೇಷ ಅಧಿಕಾರಗಳನ್ನು ನೀಡಿತು. ಈ ಹಿನ್ನೆಲೆಯಲ್ಲಿ ಅಸ್ತಿತ್ವಕ್ಕೆ ಬಂದ ಹೊಸ ನಿಯಮಗಳು, ನಿಯಂತ್ರಣಕ್ಕೊಳಪಟ್ಟ ಲೈಸೆನ್ಸ್ ಮತ್ತು ಪರ್ಮಿಟ್ ವ್ಯವಸ್ಥೆ ಭ್ರಷ್ಟಾಚಾರಕ್ಕೆ ತನ್ಮೂಲಕ ಕೆಟ್ಟ ಆಡಳಿತ ನಡೆಸಲು ಹೆದ್ದಾರಿಯನ್ನೇ ನಿರ್ಮಿಸಿತು. ಸರ್ಕಾರ ಕೈಗೊಂಡ ನೀರಾವರಿ ಹಾಗೂ ರಸ್ತೆ ಕಾಮಗಾರಿ ಯೋಜನೆಗಳು, ಸಾರ್ವಜನಿಕ ಕಟ್ಟಡಗಳು ಹಾಗೂ ಪಂಚವಾರ್ಷಿಕ ಯೋಜನೆಗಳು ಹೀಗೆ ಸರ್ವಾಂಗೀಣ ಅಭಿವೃದ್ಧಿಯ ಉದ್ದೇಶದಿಂದ ಕೈಗೊಂಡ ಹಲವಾರು ಕಾರ್ಯಕ್ರಮಗಳು ಉತ್ತರದಾಯಿತ್ವ ಇಲ್ಲದ ಕಾರಣ ಹಗರಣದ ಕೇಂದ್ರ ಬಿಂದುಗಳಾಗುವ ಜೊತೆಗೆ ವಿಫಲವಾದವು.

ಸ್ವತಂತ್ರ ಭಾರತದ ಬಹುತೇಕ ಪ್ರಧಾನಮಂತ್ರಿಗಳು ಸೇರಿದಂತೆ ಸರ್ಕಾರದಲ್ಲಿರುವ ಮಂತ್ರಿ, ಜನಪ್ರತಿನಿಧಿ ಮತ್ತು ಅಧಿಕಾರಿಗಳಿಗೆ ಒಂದಿಲ್ಲೊಂದು ಹಗರಣಗಳು ಮೆತ್ತಿಕೊಂಡಿವೆ. ಪರಿಣಾಮವಾಗಿ ದೇಶದ ಜನತೆಗೆ ಸರ್ಕಾರದ ಬಗ್ಗೆಯಾಗಲೀ, ರಾಜಕಾರಣಿಗಳ ಹಾಗೂ ಆಡಳಿತಾಧಿಕಾರಿಗಳ ಬಗ್ಗೆಯಾಗಲೀ ಗೌರವ ಮತ್ತು ವಿಶ್ವಾಸ ಇಲ್ಲವಾಗಿದೆ. ಇದರಿಂದ ಭ್ರಷ್ಟಾಚಾರವು ಆಡಳಿತ ವ್ಯವಸ್ಥೆಯ ಮೇಲಿನ ವಿಶ್ವಾಸವನ್ನು ಕುಗ್ಗಿಸಿದೆಯಲ್ಲದೇ, ಉತ್ತಮ ಆಡಳಿತ ವ್ಯವಸ್ಥೆಯನ್ನು ಶಿಥಿಲಗೊಳಿಸುವ ಮೂಲಕ ಸಾಮಾಜಿಕ ಜೀವನವನ್ನು ಅಸಹನೀಯ ಗೊಳಿಸಿದೆ.

ಭ್ರಷ್ಟಾಚಾರವು ಜಾಗತಿಕ ಮಟ್ಟದ ಗಂಭೀರ ಸಮಸ್ಯೆ ಭಾರತದ ಮಟ್ಟಿಗಂತೂ ಸಹಿಸಿಕೊಳ್ಳಲಾಗದ ಬಹು ದೊಡ್ಡ ವ್ಯಾಧಿ. ಇದು ಆರ್ಥಿಕ, ರಾಜಕೀಯ ವ್ಯವಸ್ಥೆಗಳ ಮೇಲೆ ಪ್ರತಿಕೂಲಕರ

ಪರಿಣಾಮವನ್ನು ಬೀರುವುದಷ್ಟೇ ಅಲ್ಲದೇ 'ಪ್ರಜಾಪ್ರಭುತ್ವ ಸಿದ್ಧಾಂತಗಳ' ಮೇಲೆ ಅದರಲ್ಲೂ ವಿಶೇಷವಾಗಿ ಸಮಾಜದ ಮೇಲೆ ದುಷ್ಪರಿಣಾಮವನ್ನು ಬೀರುವುದರಲ್ಲಿ ಸಂದೇಹವಿಲ್ಲ. 'ಭ್ರಷ್ಟಾಚಾರ'ವು ಇಂದು ಯಾವುದೇ ಸರ್ಕಾರಗಳ ಯಶಸ್ಸು ಮತ್ತು ವಿಫಲತೆಯನ್ನು ನಿರ್ಧರಿಸುವ ಹಾಗೂ ಸರ್ಕಾರದ 'ನೈತಿಕತೆಯ ಮಟ್ಟ'ವನ್ನು ಅಳೆಯುವ ಮಾನದಂಡವಾಗಿ ಪರಿಗಣಿಸಲ್ಪಟ್ಟಿದೆ.

ಇತ್ತೀಚೆಗೆ ಭಾರತದಲ್ಲಿ ಹಗರಣಗಳು ಮತ್ತೆ ಭುಗಿಲೆದ್ದು ದೇಶವಾಸಿಗಳ ನಿದ್ದೆಗೆಡಿಸಿವೆ. ನಮ್ಮ ಜನರನ್ನು ರೋಷತಪ್ತರನ್ನಾಗಿ ಮಾಡಿವೆ. ನಮ್ಮನ್ನು ಭ್ರಮನಿರಸನಗೊಳಿಸಿವೆ. ಈ ಭ್ರಷ್ಟಾಚಾರ ಎಂಬ ಪಿಡುಗು ನಮ್ಮ ಇಡೀ ಸಮಾಜ ಮತ್ತು ದೇಶದ ನಿರಂತರ ಪ್ರಗತಿಗೆ ತಡೆಯನ್ನು ಉಂಟು ಮಾಡಿದೆ. ಎಲ್ಲರಿಗೂ ಭ್ರಷ್ಟಾಚಾರದ ಕುರಿತು ಎರಡು ರೀತಿಯ ದೃಷ್ಟಿಕೋನಗಳಿರುತ್ತವೆ. ಮೊದಲನೇಯ ದೃಷ್ಟಿಕೋನವೇನೆಂದರೆ, ಈಗ ಭಾರತದಲ್ಲಿ ಬಹುತೇಕ ಎಲ್ಲ ಕ್ಷೇತ್ರ ಮತ್ತು ರಂಗಗಳಲ್ಲಿ ಈ ಭ್ರಷ್ಟಾಚಾರ ಎಂಬ ಭೂತ ಹೊಕ್ಕಿದೆ. ಯಾವ ಕ್ಷೇತ್ರವೂ ಇದರಿಂದ ಹೊರಗುಳಿದಿಲ್ಲ. ಹೀಗಿದ್ದಾಗ ಭ್ರಷ್ಟಾಚಾರವನ್ನು ಇಷ್ಟೊಂದು ಗಂಭೀರವಾಗಿ ಏಕೆ ಪರಿಗಣಿಸಬೇಕು? ಎರಡನೆಯ ದೃಷ್ಟಿಕೋನವೇನೆಂದರೆ ಭ್ರಷ್ಟಾಚಾರ ಎಂಬುದು ಜಾಗತಿಕವಾಗಿ ಹೆಚ್ಚಾಗುತ್ತಿದೆ. ಹೀಗಾಗಿ ನಾವೇನು ಮಾಡಬಲ್ಲೇವ ಹಾಗೇ ನೋಡಿದರೆ ಇವೆರಡೂ ದೃಷ್ಟಿಕೋನಗಳು ಸಿನಿಕತನಗಳೇ. ಇನ್ನು ಜಾಗತಿಕವಾಗಿ ಇದನ್ನು ಅವಲೋಕಿಸಿದಾಗ ಚೀನಾ ಕುರಿತು ಹೇಳಬೇಕೆಂದರೆ ಅಲ್ಲಿ ಭ್ರಷ್ಟಾಚಾರ ಎಂಬುದು ವ್ಯಾಪಕವಾಗಿದೆ. ಅಲ್ಲಿನ ಬೃಹತ್ ಗೋಡೆಯಂತೆ ಅದು ಬೃಹತ್ತಾಗಿಯೇ ಚಾಚಿಕೊಂಡಿದೆ. ಇನ್ನು ಪ್ರಾನ್ಸ್, ರಶಿಯಾದಲ್ಲಂತೂ ಲಂಚರ ಮಾಫಿಯಾ ಹುಟ್ಟುಕೊಂಡಿದೆ. ಬ್ರಿಟನ್ ಸಹ ಅನೇಕ ಹಗರಣಗಳಿಂದ ತತ್ತರಿಸಿದೆ. ಅಮೇರಿಕಾ ದೇಶವು ರಾಜಕಾರಣಿಗಳ ಭ್ರಷ್ಟಾಚಾರಗಳಿಂದ ಕಂಗೆಟ್ಟಿದೆ. ಒಟ್ಟಾರೆ ಭ್ರಷ್ಟಾಚಾರವು ವಿಶ್ವವ್ಯಾಪಿಯಾಗಿದೆ.

ಭ್ರಷ್ಟಾಚಾರ ಎನ್ನುವುದು ನಾಗರಿಕ ಸಮಾಜಕ್ಕೆ ಕ್ಯಾನ್ಸರ್ ಇದ್ದಂತೆ. ಅದನ್ನು ಸರಿಯಾದ ಸಮಯದಲ್ಲಿ ಗುರುತಿಸಲು ವಿಫಲರಾಗುತ್ತೇವೆ. ಒಂದು ವೇಳೆ ಗುರ್ತಿಸಿದರೂ ಅದಕ್ಕೆ ನಿರ್ದಿಷ್ಟ ಪರಿಹಾರ ಕೂಡ ಇಲ್ಲ. ಜೊತೆಗೆ ಅದು ಹಬ್ಬುತ್ತಲೇ ಸಾಗುತ್ತದೆ. ಯಾವ ಅಡ್ಡಿಯನ್ನು ಲೆಕ್ಕಿಸದೇ ಹಬ್ಬುತ್ತಲೇ ಇರುತ್ತದೆ. ಒಂದು ಸಮೀಕ್ಷೆಯ ಪ್ರಕಾರ ವಿಶ್ವದ ೧೮೪ ದೇಶಗಳಲ್ಲಿ ಯಾವ ದೇಶವೂ ಮತ್ತು ಪ್ರದೇಶವು ಈ ಭ್ರಷ್ಟಾಚಾರ ಸೋಂಕಿನಿಂದ ಮುಕ್ತವಾಗಿಲ್ಲವಂತೆ. ಅದರ ಪ್ರಮಾಣದಲ್ಲಿ ಹೆಚ್ಚು ಕಡಿಮೆ ಇರಬಹುದಷ್ಟೇ.

ಭಾರತದ ಸರಕಾರಿ ನೌಕರರು ಲಂಚ ಪಡೆಯುವುದರಲ್ಲಿ ಬಹಳ ನಿಸ್ಸೀಮರು ಎಂಬ ವಿಷಯ ೨೦೧೨ರ 'ಟ್ರಾನ್ಸಪರೆನ್ಸಿ ಇಂಟರ್ ನ್ಯಾಷನಲ್' ವರದಿಯಲ್ಲಿ ಉಲ್ಲೇಖಗೊಂಡಿದೆ. ಸರ್ಕಾರದ ಬಹುತೇಕ ಇಲಾಖೆಗಳು ಭ್ರಷ್ಟಾಚಾರವನ್ನು ನಾನಾ ದಾರಿಗಳ ಮೂಲಕ ಅನುಸರಿಸುತ್ತಿವೆ. ಹೆಚ್ಚಿನ ಬಜೆಟ್ ಮತ್ತು ಲೆಕ್ಕಾಚಾರ ತೋರಿಸುವುದು. ತಪ್ಪು ರಸೀದಿಗಳನ್ನು ಸಿದ್ಧಪಡಿಸುವುದು.

ರಸ್ತೆಗಳು, ಕೊಳವೆ ಬಾವಿ, ಶೌಚಾಲಯ ಮುಂತಾದ ಸಣ್ಣ ಪುಟ್ಟ ಕೆಲಸಗಳು ಕೇವಲ ಹಾಳೆಯ ಮೇಲೆ ನಿರ್ಮಾಣ ಗೊಂಡಿರುತ್ತವೆ. ಜನರ ಒಳಿತಿಗಾಗಿ ನಿರ್ಮಿಸಲ್ಪಡುವ ಆಣೆಕಟ್ಟು, ಕ್ರೀಡಾಂಗಣಗಳಂತಹ ಬೃಹತ್ ಕಾಮಗಾರಿಯಲ್ಲಿ ಭ್ರಷ್ಟಾಚಾರದ ಪ್ರಮಾಣ ಇನ್ನೂ ಹೆಚ್ಚಾಗಿಯೇ ಇರುತ್ತದೆ. ಅಂದರೆ ಕೆಲಸ ಸಣ್ಣದಿರಲಿ, ದೊಡ್ಡದಿರಲಿ ಭೃಷ್ಟಾಚಾರ ತನ್ನ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತದೆ.

ವಿಶ್ವದಲ್ಲಿ ಭ್ರಷ್ಟಾಚಾರ ಪ್ರದೇಶ, ಸಮಾಜ ಮತ್ತು ದೇಶದ ಹಂಗಿಲ್ಲದೇ ನುಗ್ಗುತ್ತಿದೆ. ಭಾರತಕ್ಕೆ ಅನುಲಕ್ಷಿಸಿ ಹೇಳುವುದಾದರೆ ಇಲ್ಲಿ ಅನೇಕ ಸಂಸ್ಕೃತಿ ಮತ್ತು ಸಮುದಾಯಗಳಿವೆ. ಅನೇಕ ಬುಡುಕಟ್ಟು ಜನಾಂಗದವರು ಇದ್ದಾರೆ. ಈ ನೆಲವನ್ನು ದೇಶಿಯ ರಾಜ ಮಹಾರಾಜರು, ಮಂಗೋಲರು, ಮೊಘಲರು, ಪೋರ್ಚುಗೀಸರು, ಬ್ರಿಟಿಷರು, ಫ್ರೆಂಚರು, ಡಚ್ಚರು ಮುಂತಾದವರು ಆಳಿ ಹೋಗಿದ್ದಾರೆ. ಈ ಎಲ್ಲ ಸಮಯದಲ್ಲೂ ಸಹ ಒಂದಿಲ್ಲ ಒಂದು ರೀತಿಯಲ್ಲಿ ಭ್ರಷ್ಟಾಚಾರ ಹಾಗೂ ದುರಾಡಳಿತ ತನ್ನ ಅಸ್ತಿತ್ವವನ್ನು ಪ್ರದರ್ಶಿಸುತ್ತ ಬಂದಿದೆ. ಆಗ ಭ್ರಷ್ಟಾಚಾರ ಎಂಬುದು ಇಷ್ಟೊಂದು ಭಾರವೆನಿಸಿರಲಿಲ್ಲ ಹಾಗೂ ವ್ಯಾಪಕವಾಗಿರಲಿಲ್ಲ. ಜೊತೆಗೆ ನಾಗರಿಕರಿಗೆ ಇದೊಂದು ಹೊರೆ ಎಂದು ಕೂಡ ಅನಿಸಿರಲಿಲ್ಲ. ಇಂದಿನ ದಿನಗಳಲ್ಲಿ ಭಾರತದ ಯಾವುದೇ ಇಲಾಖೆಯು ಭ್ರಷ್ಟಾಚಾರ ಮುಕ್ತ ಎಂದು ಧೈರ್ಯದಿಂದ ಹೇಳಲಾರೆವು. ನಾವು ಸಾಮಾನ್ಯವಾಗಿ ಭ್ರಷ್ಟಾಚಾರಕ್ಕಾಗಿ ರಾಜಕಾರಣಿಗಳನ್ನು ನಿಂದಿಸುತ್ತೇವೆ. ಆದರೆ ಅವರ ಹಿಂದೆ ನಿಂತು ಕೆಲಸ ಮಾಡಿಸುವ ಬಂಡವಾಳಶಾಹಿಗಳನ್ನು, ಸೂತ್ರಧಾರಿಗಳನ್ನು ಹಾಗೂ ಒತ್ತಡ ಗುಂಪುಗಳನ್ನು ಹಾಗೂ ಅಧಿಕಾರಿಗಳನ್ನು ಜಾಣತನದಿಂದ ಮರೆಯುತ್ತೇವೆ. ಹೆಚ್ಚು ಕಡಿಮೆ ಎಲ್ಲ ದೇಶಗಳಲ್ಲಿ ಈ ಅಧಿಕಾರಿಶಾಹಿಗಳು ಮತ್ತು ಬಂಡವಾಳಶಾಹಿಗಳೇ ಸರ್ಕಾರಗಳನ್ನು ನಡೆಸುತ್ತಿರುತ್ತಾರೆ ಎನ್ನಲಾಗುತ್ತಿದೆ.

ನ್ಯಾಯಾಂಗದಲ್ಲೂ ಭೃಷ್ಟಾಚಾರ ತಾಂಡವಾಡುತ್ತಿದೆ ಎನ್ನಲು ಈ ಉದಾಹರಣೆಯನ್ನು ಗಮನಿಸಬಹುದು. ೨೦೧೨ರಲ್ಲಿ **"ಟ್ರಾನ್ಸ್‌ಪೆರೆನ್ಸಿ ಇಂಟರ್‌ನ್ಯಾಷನಲ್"** ಮತ್ತು ದೆಹಲಿಯ ಕೆಲವು ಮಾಧ್ಯಮ ಅಧ್ಯಯನ ಕೇಂದ್ರಗಳು ಭಾರತದಲ್ಲಿರುವ ನ್ಯಾಯಾಂಗದ ಭ್ರಷ್ಟಾಚಾರದ ಕುರಿತು ಅಧ್ಯಯನ ಮತ್ತು ಸಂಶೋಧನ ಸಮೀಕ್ಷೆಯನ್ನು ಕೈಗೊಂಡವು. ಈ ಅಧ್ಯಯನದಲ್ಲಿ ಬಯಲಾದ ಸತ್ಯಾಂಶ ಏನೆಂದರೆ ಶೇಕಡಾ ೫೦ರಷ್ಟು ಜನರು ಸರ್ಕಾರಿ ವಕೀಲರುಗಳಿಗೆ ಲಂಚ ನೀಡಿದ್ದರು. ಶೇಕಡಾ ೫ ಜನರು ನ್ಯಾಯಾಧೀಶರುಗಳಿಗೆ ಲಂಚ ನೀಡಿದ್ದರು. ಮತ್ತು ಶೇಕಡಾ ೩೦ ಜನರು ಕೋರ್ಟ ಅಧಿಕಾರಿಗಳಿಗೆ ಲಂಚ ನೀಡಿದ್ದರು. ತಮ್ಮ ವಿರುದ್ಧ ಇದ್ದ ಆರೋಪಗಳಿಂದ ಹೊರಬರಲು ಈ ಜನರು ನ್ಯಾಯಾಲಯವನ್ನು ಈ ರೀತಿಯಾಗಿ ದುರುಪಯೋಗ ಪಡಿಸಿಕೊಂಡಿದ್ದರು ಮತ್ತು ದುರಾಡಳಿತವನ್ನು ಅಲ್ಲಿಯವರೆಗೆ ವಿಸ್ತರಿಸಿದ್ದರು. ಆದರೆ ಈ ಸಮೀಕ್ಷೆ ಸಮಾಜದ ಮೇಲೆ ಹೆಚ್ಚೇನು ಪರಿಣಾಮ ಬೀರಲಿಲ್ಲ. ಏಕೆಂದರೆ ಪತ್ರಿಕೆಗಳಿಗೆ ಈ ವರದಿ ರೋಚಕತೆ ಉಂಟು ಮಾಡಲಿಲ್ಲ. ಇದೇ ರೀತಿ ಕರ್ನಾಟಕದ ಮಾಜಿ ಮಂತ್ರಿಯೊಬ್ಬರನ್ನು

ಗಣಿ ಹಗರಣದ ಪ್ರಕರಣವೊಂದರಲ್ಲಿ ಜಾಮೀನು ನೀಡಲು ಆಂದ್ರ ಪ್ರದೇಶದ ಮೂವರು ನ್ಯಾಯಾಧೀಶರು ಲಂಚ ಪಡೆದ ಹಿನ್ನೆಲೆಯಲ್ಲಿ ಸಿ.ಬಿ.ಐ ಬಂಧಿಸಿದ್ದು ಕೂಡ ಈ ವಾದವನ್ನು ಸಮರ್ಥಿಸಲು ಬಹು ದೊಡ್ಡ ಪುರಾವೆಯಾಗಿದೆ.

ಈ ಹಿಂದೆ ಭಾರತದಲ್ಲಿನ ಬೃಹತ್ ಉದ್ದಿಮೆಗಳು ಸರ್ಕಾರಿ ಸ್ವಾಮ್ಯದಲ್ಲಿಯೇ ಕಾರ್ಯ ನಿರ್ವಹಿಸುತ್ತಿದ್ದವು. ಇವುಗಳಿಂದ ಬರುತ್ತಿದ್ದಂಥ ದೊಡ್ಡ ಪ್ರಮಾಣದ ಆದಾಯದ ಬಹುಪಾಲು ಹಣಕಾಸು ದುರ್ಬಳಕೆ ಅಗುತ್ತಿತ್ತು. ಈ ಎಲ್ಲ ಸ್ಥಿತಿಗಳು ಬದಲಾಗುವುದಕ್ಕೆ ಶುರುವಾದದ್ದು ೧೯೯೨ರಲ್ಲಿ. ಅಂದಿನ ಭಾರತದ ಪ್ರಧಾನಿ ಪಿ.ವಿ.ನರಸಿಂಹರಾವ ಅವರ ಆರ್ಥಿಕ ನೀತಿಗಳಿಂದಾಗಿ ಬೃಹತ್ ಉದ್ದಿಮೆಗಳ ಹಣ ದುರ್ಬಳಕೆಗೆ ಕಡಿವಾಣ ಬಿತ್ತು. ಆರ್ಥಿಕತೆಯ ನಿಯಂತ್ರಣ ಉತ್ತುಂಗದ ಮೇಲೆ ಇದ್ದಂಥ ಸಾರ್ವಜನಿಕ ಅಥವಾ ಸರ್ಕಾರಿ ನಿಯಂತ್ರಣ ದುರ್ಬಲಗೊಂಡಿತು. 'ಪ್ರಭಾವಧಾರಿತ ಆರ್ಥಿಕತೆ'ಯ ಕಾಲಘಟ್ಟದಲ್ಲಿ ಅತ್ಯುತ್ತಮ ನಂಟು ಹೊಂದಿದ್ದಂಥ ಕಂಪನಿಗಳು ಕ್ಷಿಪ್ರವಾಗಿ ಬೆಳವಣಿಗೆ ಸಾಧಿಸಿದವು. ಸಹಜವಾಗಿಯೇ ಅವರು ತಮ್ಮ ವ್ಯವಹಾರಗಳಿಗೆ ಸಹಕಾರಿಯಾಗುವಂತಹ ಬದಲಾವಣೆಗಳನ್ನು ಆರ್ಥಿಕ ನೀತಿಗಳಲ್ಲಿ ತರುವುದಕ್ಕಾಗಿ ತಮ್ಮ ಪ್ರಭಾವವನ್ನು ಬಳಸಿದರು. ತತ್ಪರಿಣಾಮ ಈ ಕಂಪನಿಗಳು ಅಭಿವೃದ್ಧಿ ದಾಖಲಿಸಿದ್ದು ತಮ್ಮ ವ್ಯವಹಾರಿಕ ಸಾಮರ್ಥ್ಯದಿಂದಲ್ಲ, ತಮಗೆ ಪೂರಕವಾದಂಥ ಆರ್ಥಿಕ ನೀತಿಗಳಿಂದ ಎಂಬುದನ್ನು ಇಲ್ಲಿ ಉಲ್ಲೇಖಿಸಬಹುದು.

ಹೊಸ ಆರ್ಥಿಕ ನೀತಿಯಿಂದ ಐಟಿ ವಲಯ ಮತ್ತು ಸೇವಾ ವಲಯಗಳು ಸ್ಫೋಟದ ರೀತಿಯಲ್ಲಿ ಬೆಳೆಯತೊಡಗಿದವು ಮತ್ತು ಕ್ಷಿಪ್ರವಾಗಿ ಜಗತ್ತಿನ ಆರ್ಥಿಕತೆಯನ್ನೇ ನಿಯಂತ್ರಿಸುವಂಥ ಮಟ್ಟಕ್ಕೆ ಬೆಳೆದವು. ಇದರಿಂದಾಗಿ ಇನ್ನೊಂದು ವರ್ಗದ ಹೊಸ ಉದ್ಯಮಿಗಳು ಹುಟ್ಟಿಕೊಂಡರು. ಇವರು ಭ್ರಷ್ಟಾಚಾರವನ್ನು ಬಳಸದೇ ಬೆಳವಣಿಗೆ ಸಾಧಿಸಿದರು. ಹಳೇ ವ್ಯವಸ್ಥೆಯಲ್ಲಿ ಉದ್ದಿಮೆಗಳು ಪ್ರಭಾವ, ವಶೀಲಿ ಅಥವಾ ಭ್ರಷ್ಟಾಚಾರದಿಂದ ಬೆಳವಣಿಗೆ ಸಾಧಿಸುತ್ತಿದ್ದರೆ, ಹೊಸ ಖಾಸಗಿ ಉದ್ದಿಮೆಗಳು ಭ್ರಷ್ಟಾಚಾರವನ್ನು ಒಂದು ಕಂಟಕ ಎಂದೇ ಭಾವಿಸಿದವು. ಹೊಸದಾಗಿ ರೂಪುಗೊಂಡಿರುವಂಥ ಜಾಗತಿಕ ಔದ್ಯಮಿಕ ವಲಯಗಳು ಇಂಗ್ಲೀಷ್ ಭಾಷೆಯಲ್ಲಿ ಪಾರಮ್ಯ ಹೊಂದಿದ್ದವು ಮತ್ತು ಸಾಮಾಜಿಕ ಮಾಧ್ಯಮಗಳನ್ನು ಅವು ಅರ್ಥ ಮಾಡಿಕೊಳ್ಳುತ್ತಿದ್ದವು. ಇತರೆ ವಲಯದ ಬೆಳವಣಿಗೆಯನ್ನು ಚಿಕಿತ್ಸಕ ದೃಷ್ಟಿಯಿಂದ ಅವರು ನೋಡುತ್ತಿದರು ಮತ್ತು ಅದೇ ರೀತಿಯ ಕ್ಷಮತೆಯನ್ನು ತಮ್ಮಲ್ಲಿ ಅಳವಡಿಸಿಕೊಳ್ಳುತ್ತಿದ್ದರು. ಜೊತೆಗೆ ತಮ್ಮ ಕಂಪನಿಗಳನ್ನು ಭ್ರಷ್ಟಾಚಾರದಿಂದ ಮುಕ್ತವಾಗಿರಿಸಿಕೊಂಡರು. ಇದು ಕೇವಲ ಔದ್ಯಮಿಕ ವಲಯಕ್ಕೆ ಸೀಮಿತವಾಗಿರಲಿಲ್ಲ. ಗ್ರಾಮೀಣ ಪ್ರದೇಶಗಳಲ್ಲಿನ ಮಧ್ಯಮ ವರ್ಗದ ಜನರು ಹೆಚ್ಚು ಹೆಚ್ಚು ಶಿಕ್ಷಣವನ್ನು ಪಡೆದಿದ್ದರ ಪರಿಣಾಮವಾಗಿ ಜನರು ಬುದ್ಧಿವಂತರಾಗತೊಡಗಿದರು. ಈ ಭ್ರಷ್ಟ ವ್ಯವಸ್ಥೆ ಸಮಾಜವನ್ನೇ ಕೊಳ್ಳೆ

ಹೊಡೆಯುತ್ತಿದೆ ಮತ್ತು ತಮ್ಮ ಮಕ್ಕಳ ಭವಿಷ್ಯವನ್ನೇ ಕಿತ್ತುಕೊಳ್ಳುತ್ತಿದೆ ಎಂಬುದನ್ನು ಈ ಜನರು ಬಹುಬೇಗ ಅರ್ಥ ಮಾಡಿಕೊಳ್ಳುತ್ತಿದ್ದಾರೆ. ಆ ಪ್ರಮಾಣದ ಅರಿವು ಜನರಲ್ಲಿ ಮೂಡುವುದಕ್ಕೆ ಕಾರಣವಾದದ್ದು ಜಾಗತೀಕರಣ.

ಭಾರತದ ಮಾಜಿ ಪ್ರಧಾನಿಗಳಾದ ರಾಜೀವಗಾಂಧಿಯವರು ಭಾರತದಲ್ಲಿ ಸಾರ್ವಜನಿಕ ನಿಧಿಯ ಶೇಕಡ ೮೫ ರಷ್ಟು ಹಣ ಮದ್ಯವರ್ತಿಗಳ ಪಾಲಾಗುತ್ತದೆ. ಉಳಿದ ಹಣ ಮಾತ್ರ ಜನಸಾಮಾನ್ಯರ ಸೌಲಭ್ಯಗಳಿಗಾಗಿ ಬಳಸಲಾಗುತ್ತದೆ ಎಂದು ಅವರು ೧೯೮೫ರಷ್ಟು ಹಿಂದೆಯೇ ಹೇಳಿದ್ದರು. ಇದು ಅಕ್ಷರಶಃ ಸತ್ಯ. ಈಗಲೂ ಸಹ ಇದು ಮುಂದುವರೆದಿದೆ. ಈ ಶೇಕಡ ೮೫ ರಷ್ಟು ನಿಧಿಯು ಸುಳ್ಳು ಲೆಕ್ಕಗಳು, ಸುಳ್ಳು ಯೋಜನೆಗಳು, ಸುಳ್ಳು ನಿರ್ಮಾಣಗಳಲ್ಲಿ ಹರಿದು ಹಂಚಿ ಹೋಗುತ್ತವೆ. ತಳ ಮಟ್ಟದಿಂದ ಮೇಲ್ಮಟ್ಟದವರೆಗೂ ವ್ಯಾಪಿಸಿರುವ ಲಂಚಕೋರರು, ದಲ್ಲಾಳಿಗಳು, ಅಧಿಕಾರಿಶಾಹಿಗಳು ಈ ಹಣಕ್ಕಾಗಿ ಕೈ ಚಾಚುತ್ತಾರೆ. ಇನ್ನಷ್ಟು ಆಳವಾಗಿ ಹೇಳಬೇಕೆಂದರೆ, ಜನಸಾಮಾನ್ಯನ ಆಶಯಕ್ಕೆ ಮತ್ತು ಅನುಕೂಲಕ್ಕೆ ತಕ್ಕಂತೆ ಯಾವೊಂದು ಯೋಜನೆಗಳನ್ನು ತಯಾರಿಸಲಾಗುವುದಿಲ್ಲ. ಕೇವಲ ತಮ್ಮ ಜೇಬನ್ನು ತುಂಬಿಸುವ, ವೋಟ್‌ಬ್ಯಾಂಕ್‌ಗಳನ್ನು ರಕ್ಷಿಸುವ, ಹಾಗೂ ಪ್ರಭಾವ ಬೀರುವ ಜನರಿಗಾಗಿ ಇಂಥ ಯೋಜನೆಗಳನ್ನು ಸೃಷ್ಟಿಸಲಾಗುತ್ತದೆ. ಇದಕ್ಕೆ ತಾಜಾ ಉದಾಹರಣೆ ಎಂದರೆ ಭಾರತ ಸರ್ಕಾರದ ಕೇಂದ್ರ ರಸ್ತೆ ನಿಧಿಯು ರಾಜ್ಯದ ರಸ್ತೆಗಳನ್ನು ಅಭಿವೃದ್ಧಿಪಡಿಸಿ ಎಂದು ೧೮೦೦ ಕೋಟಿ ರೂಪಾಯಿ ನೀಡಿದರೆ ರಾಜ್ಯದ ಲೋಕೋಪಯೋಗಿ ಇಲಾಖೆ ತಮಗೆ ಬೇಕಾದ ರಸ್ತೆಗಳಿಗೆ ಪ್ಯಾಕೇಜ್ ಟೆಂಡರ್ ಕರೆದು ಸಾರ್ವಜನಿಕರ ಹಣವನ್ನು ಪೋಲು ಮಾಡಿರುವುದು. ಕೆಲವು ಸಲ ಇಂತಹ ಯೋಜನೆಗಳನ್ನು ರೂಪಿಸುವವರೇ ಈ ಯೋಜನೆಗಳ ಭ್ರಷ್ಟಾಚಾರಗಳಲ್ಲಿ ಪ್ರಮುಖ ಪಾತ್ರವನ್ನು ವಹಿಸಿರುತ್ತಾರೆ. ಈ ಹಣವನ್ನು ಅವರು ಚುನಾವಣಾ ರಾಜಕಾರಣಕ್ಕೆ ಬಳಸುತ್ತಾರೆ. ಜನರ ಮೂಲಕ ಆರಿಸಿ ಬಂದ ಜನಪ್ರತಿನಿಧಿಯೊಬ್ಬ ಕೊನೆಗೆ ಜನರ ಅಭ್ಯುದಯವನ್ನೇ ನಿರ್ಲಕ್ಷಿಸಿ ನಿರಂಕುಶ ಅಧಿಕಾರಿಯಾಗುತ್ತಾನೆ ಎನ್ನುವ ಇಂತಹ ಉದಾಹರಣೆಗಳು ಪುಷ್ಟಿ ನೀಡುತ್ತವೆ.

ಇತ್ತೀಚೆಗೆ ಸುಪ್ರಿ ಕೋರ್ಟ ಕಲ್ಲಿದ್ದಲು ಗಣಿ ಗುತ್ತಿಗೆ ಹಗರಣದ ವಿಷಯದಲ್ಲಿ ಭಾರತದಲ್ಲಿ ಭ್ರಷ್ಟಾಚಾರವು ಕ್ಯಾನ್ಸರ್ ಮತ್ತು ಏಡ್ಸ್ ರೀತಿಯ ಮಾರಣಾಂತಿಕ ರೋಗವಾಗಿ ಪರಿಣಮಿಸಿದೆ. ಉತ್ತಮ ಆಡಳಿತಕ್ಕೆ ಬಹು ದೊಡ್ಡ ಕಂಟಕವೆನಿಸಿದೆ. ಇದನ್ನು ನಿರ್ಮೂಲನೆಗೊಳಿಸದಿದ್ದರೆ ದೇಶಕ್ಕೆ ಉಳಿಗಾಲವಿಲ್ಲ. ಆದರೆ ಇದನ್ನು ನಿರ್ಮೂಲನೆಯಾಗಲೀ, ನಿಯಂತ್ರಣವಾಗಲೀ ಮಾಡುವವರು ಯಾರು? ಎಂದು ಖಾರವಾಗಿ ಪ್ರಶ್ನಿಸಿದ ತರುವಾಯ ಗಣಿ ಗುತ್ತಿಗೆಗಳನ್ನು ರದ್ದು ಪಡಿಸುವುದಾಗಿ ಕೇಂದ್ರ ಸರ್ಕಾರ ಪ್ರಮಾಣಪತ್ರ ಸಲ್ಲಿಸಿತು. ಕೇಂದ್ರದ ಮೇಲೆ ಕಣ್ಣಿಡಲು ಈಗ ಲೋಕಪಾಲ ಬಂದಿದೆ. ಆದರೆ ನಮ್ಮ ಕರ್ನಾಟಕದ ಮಟ್ಟಿಗಿನ ಭ್ರಷ್ಟಾಚಾರ ಸದೆಬಡೆಯಲು

ರಾಜ್ಯದಲ್ಲಿ ಅದಾಗಲೇ ಲೋಕಾಯುಕ್ತ ರಚಿಸಲಾಗಿದೆ. ಇದು ತನ್ನ ಕೆಲಸದಲ್ಲಿ ಯಶಸ್ವಿಯಾಗಿದೆಯೆ? ಸಮಾಜದ ಮೇಲೆ ಈ ಸಂಸ್ಥೆ ಯಾವ ರೀತಿ ಪರಿಣಾಮ ಬೀರಿದೆ ಎಂಬುದು ತಿಳಿಯುವ ಪ್ರಯತ್ನ ಇಲ್ಲಿ ಮಾಡಲಾಗಿದೆ.

ರಾಜಪ್ರಭುತ್ವ ಇಲ್ಲವೇ ಪ್ರಭುತ್ವಶಾಹಿಯ ಆಡಳಿತದ ನೆಲೆಯಲ್ಲಿಯೇ ಕರ್ನಾಟಕದ ಐತಿಹಾಸಿಕ ಸಂಕಥನಗಳು ರೂಪುಗೊಂಡಿವೆ. ಇವುಗಳು ಕರ್ನಾಟಕದ ಆರಂಭದ ಹಂತದಿಂದ ಬ್ರಿಟಿಷರ ವಸಾಹುತು ನೆಲೆಯವರೆಗೆ ವಿಸ್ತರಿಸಿವೆ. ಇಡೀ ಕರ್ನಾಟಕದ ಇತಿಹಾಸವನ್ನು ಅವಲೋಕಿಸಿದರೆ, ರಾಜಪ್ರಭುತ್ವದ ಆಡಳಿತವು ಜನತೆಯೊಂದಿಗೆ ನೇರ ಸಂಪರ್ಕದಲ್ಲಿದ್ದುದ್ದು ವಿರಳವೆಂದೇ ತೋರುತ್ತದೆ. ಅಧಿಕಾರ ವಿಕೇಂದ್ರಿಕರಣದಂತಹ ಮುತ್ಸದ್ಧಿಯ ನಡೆಗಳಲ್ಲಿಯೇ ತಮ್ಮ ನೆಲೆಗಳನ್ನು ಭದ್ರಗೊಳಿಸಿಕೊಂಡಿರುವುದನ್ನು ಇತಿಹಾಸ ದಾಖಲಿಸುತ್ತದೆ. ರಾಜ, ಒಡೆಯ, ಪ್ರಭು, ಸ್ವಾಮಿ, ಅರಸ ಮುಂತಾದ ನಾಮಸೂಚಕ ಪದಗಳೇ ನಮ್ಮ ನಾಡನ್ನು ಆಳಿರುವ ಸಂಗತಿ ಅಚ್ಚರಿ ಮೂಡಿಸುತ್ತದೆ. ಇದಕ್ಕೆ ಧರ್ಮ,ನೈತಿಕತೆ ಮುಂತಾದ ಇತ್ಯಾತ್ಮಕ ಅಂಶಗಳು ಸಹಕಾರಿಯಾಗಿವೆ. ಆಡಳಿತ ವ್ಯವಸ್ಥೆಯಲ್ಲಿ ಯಾವುದೇ ಪಕ್ಷದ ಸರಕಾರವಿದ್ದರೂ ಜನಜೀವನದ ನಿರಂತರ ಪರಿಕ್ರಮಗಳು ದಿಢೀರನೆ ಬದಲಾಗುವುದಿಲ್ಲ. ಹಾಗಾಗುವುದಕ್ಕೆ ಸಂವಿಧಾನ, ನ್ಯಾಯಾಂಗ ಹಾಗೂ ಆಡಳಿತ ಮುಂತಾದ ವ್ಯವಸ್ಥೆಗಳು ತಕ್ಷಣವೇ ಅವಕಾಶ ನೀಡುವುದಿಲ್ಲ. ಈ ಹಿನ್ನೆಲೆಯಲ್ಲಿ ಕರ್ನಾಟಕದ ರಾಜಪ್ರಭುತ್ವದ ಆಡಳಿತ ಶೈಲಿ, ಅಧಿಕಾರದ ಹಸ್ತಾಂತರ ಕದಂಬರಿಂದ ಮೈಸೂರು ಅರಸರ ಕಾಲಘಟ್ಟದವರೆಗೂ ಒಬ್ಬರಿಂದೊಬ್ಬರಿಗೆ ಬದಲಾಗುತ್ತಾ ಹೋದರೂ ಜನಜೀವನಕ್ಕೆ ಕೆಟ್ಟ ಆಡಳಿತ ನೀಡಿದರು ಎಂದು ಆರೋಪಿಸುವಂತಹ ದಾಖಲೆ ಇಲ್ಲದಿರುವುದು ಗಮನಿಸಬೇಕಾದ ಅಂಶ. ಇದಕ್ಕೆ ಶಾಹಿ, ಬಹಮನಿ ಸುಲ್ತಾನರ ಆಡಳಿತವು ಹೊರತಲ್ಲ. ಹಾಗೆಂದು ಸಾಮ್ರಾಜ್ಯಶಾಹಿಗಳು ನೀರಸವಾದ ಆಡಳಿತದ ಪ್ರಕ್ರಿಯೆಯಲ್ಲಿ ತೊಡಗದೇ ರಚನಾತ್ಮಕ ಮತ್ತು ಕ್ರಿಯಾತ್ಮಕ ಆಡಳಿತದ ಸೂತ್ರಗಳನ್ನು ರೂಪಿಸಿ ಅವುಗಳನ್ನು ಸಾಕಾರಗೊಳಿಸಿದ ಸಂಗತಿಯನ್ನು ಇತಿಹಾಸದ ದಾಖಲೆಗಳು ಸ್ಪಷ್ಟವಾಗಿ ಉಲ್ಲೇಖಿಸುತ್ತವೆ. ಮಧ್ಯಕಾಲೀನ ಕರ್ನಾಟಕದ ಕೊನೆಯ ಕಾಲಘಟ್ಟದ ಅವಧಿಯಲ್ಲಿ ವಿಜಯನಗರ ಸಾಮ್ರಾಜ್ಯದ ಪತನದ ನಂತರ ಹಲವು ಪಾಳೇಗಾರರು, ನಾಯಕರು ಅನಿವಾರ್ಯವಾದ ಕಾರಣಗಳಿಗಾಗಿ ನೈತಿಕತೆಯನ್ನು ಉಲ್ಲಂಘಿಸಿದ ಘಟನೆಗಳು ಹಾಗೂ ದುರಾಡಳಿತ ನೀಡಿದ ಘಟನೆಗಳು ನಮ್ಮ ಮುಂದಿವೆ. ಈ ಹಿನ್ನೆಲೆಯಲ್ಲಿ ಮಧ್ಯಕಾಲೀನ ಕರ್ನಾಟಕದ ಆಡಳಿತ ಮತ್ತು ಕಾನೂನು ವ್ಯವಸ್ಥೆಯನ್ನು ಪರಿಚಯಾತ್ಮಕ ಮತ್ತು ಸಾಂಪ್ರದಾಯಿಕ ಶಿಸ್ತುಗಳ ಹಿನ್ನೆಲೆಯಲ್ಲಿ ಗ್ರಹಿಸುವುದು ಸಹ ಬಹಳ ಮುಖ್ಯ

ಇಂತಹ ಪ್ರಮೇಯವೊಂದನ್ನು ನಮ್ಮ ಸಂದರ್ಭದ ಕರ್ನಾಟಕದ ರಾಜಕೀಯ ಮತ್ತು ಆಡಳಿತ ವ್ಯವಸ್ಥೆಗೆ ಅನ್ವಯಿಸಿದರೆ ವಿಸಂಗತ ಅಂಶಗಳು ನಮ್ಮ ಗಮನ ಸೆಳೆಯುತ್ತವೆ.

ಕರ್ನಾಟಕವನ್ನು ಆಳಿದ ರಾಜಮನೆತನಗಳು ಅಂದರೆ ಶಾತವಾಹನ, ಕದಂಬ, ಚಾಲುಕ್ಯ, ರಾಷ್ಟ್ರಕೂಟ, ಹೊಯ್ಸಳ, ವಿಜಯನಗರ, ಶಾಹಿ, ಬಹಮನಿಯಿಂದ ಹಿಡಿದು ಮೈಸೂರು ಅರಸರವರೆಗೆ ಪ್ರಭುತ್ವಶಾಹಿಗಳು ಅತ್ಯಂತ ಪ್ರಬಲವಾಗಿರುವುದನ್ನು ಕಾಣುತ್ತೇವೆ. ಈ ಅರಸರ ಆಡಳಿತದ ಅವಧಿಯಲ್ಲಿ ಸೈನ್ಯ, ಆರ್ಥಿಕತೆ, ವಿಶ್ವವ್ಯಾಪಾರಗಳು ಕೂಡ ಪ್ರಾಮುಖ್ಯತೆಯನ್ನು ಹೊಂದಿದ್ದವು. ಆದೇ ಸಂದರ್ಭದಲ್ಲಿ ಸಂಸ್ಕೃತಿಯ ಅಂಶಗಳು ಯಾವ ರೀತಿಯಲ್ಲೂ ಸೊರಗಿರಲಿಲ್ಲವೆನ್ನುವುದು ಗಮನಿಸಬೇಕಾದ ಅಂಶವಾಗಿದೆ. ವಿಶೇಷವಾಗಿ ಮಧ್ಯಕಾಲೀನ ಕರ್ನಾಟಕದ ಮಹತ್ವದ ರಾಜವಂಶವಾದ ವಿಜಯನಗರದ ಅರಸರ ಕಾಲದಲ್ಲಿ ಸೈನ್ಯ ಮತ್ತು ವಿಶ್ವವ್ಯಾಪಾರಗಳೆರಡೂ ಉನ್ನತ ಮಟ್ಟದಲ್ಲಿದ್ದವು. ಅದೇ ಹೊತ್ತಿನಲ್ಲಿ ಉತ್ತಮ ಆಡಳಿತದ ಮೂಲಕ ಸುಭಿಕ್ಷ ಸಂಸ್ಕೃತಿಯೊಂದು ತನ್ನ ಭದ್ರನೆಲೆಯನ್ನು ಪಡೆದುಕೊಂಡ ಸಂಗತಿ ಇತಿಹಾಸ ಪ್ರಸಿದ್ಧವಾಗಿದೆ.

ಮಧ್ಯಕಾಲೀನ ಕರ್ನಾಟಕದ ರಾಜಮನೆತನಗಳು ತಮ್ಮ ಹಿಂದಿನ ರಾಜಸತ್ತೆಯ ಆಡಳಿತ, ನ್ಯಾಯಪದ್ಧತಿಗಳನ್ನೇ ಮುಂದುವರೆಸಿಕೊಂಡು ಬಂದಿರುವುದನ್ನು ಈವರೆಗಿನ ಅಧ್ಯಯನಗಳು ವಿವರಿಸಿವೆ. ಮಧ್ಯಕಾಲೀನ ರಾಜಮನೆತನಗಳಲ್ಲಿ ಮುಖ್ಯವಾದ ಹೊಯ್ಸಳ ಮತ್ತು ವಿಜಯನಗರದ ಆಡಳಿತ ವ್ಯವಸ್ಥೆಯನ್ನು ಅವುಗಳ ಮುಂದಿನ ರಾಜಮನೆತನಗಳಾದ ಕೆಳದಿ, ಇಕ್ಕೇರಿ, ಮೈಸೂರು ರಾಜ್ಯದ ಸಂಸ್ಥಾನಿಕರು ಅಲ್ಪ ಬದಲಾವಣೆಗಳೊಂದಿಗೆ ಪಾಲಿಸಿಕೊಂಡು ಆಡಳಿತ ನಡೆಸಿದ್ದಾರೆ. ವಿಜಯನಗರದ ಅರಸರ ಅವಧಿಯಲ್ಲಿ ಭ್ರಷ್ಟಾಚಾರ ರಹಿತ ಎನಿಸುವಂತಹ ಉತ್ತಮ ಆಡಳಿತ ಹೊಂದಿರುವುದನ್ನು ಶಾಸನಗಳು ದಾಖಲಿಸುತ್ತವೆ.

೧.೩. ಅಧ್ಯಯನದ ಉದ್ದೇಶಗಳು

೧. ಕರ್ನಾಟಕ ಲೋಕಾಯುಕ್ತದ ಕಾಯ್ದೆ ನೀತಿ ನಿಯಮಗಳನ್ನು ಅಭ್ಯಸಿಸುವುದು.

೨. ಕರ್ನಾಟಕದಲ್ಲಿ ಲೋಕಾಯುಕ್ತ ಸಂಸ್ಥೆಯ ಕಾರ್ಯಶೈಲಿ ವಿಶ್ಲೇಷಿಸುವುದು ಮತ್ತು ಇತ್ತೀಚಿನ ಮೂರು ವರ್ಷಗಳ ಭ್ರಷ್ಟಾಚಾರ ಪ್ರಕರಣಗಳ ಬಗ್ಗೆ ಅಭ್ಯಸಿಸುವುದು.

೩. ಕರ್ನಾಟಕ ಲೋಕಾಯುಕ್ತದ ಬಗೆಗಿನ ಜನಸಾಮಾನ್ಯರ ಅಭಿಪ್ರಾಯಗಳನ್ನು ಅಭ್ಯಸಿಸುವುದು.

೪. ಕರ್ನಾಟಕ ಲೋಕಾಯುಕ್ತ ಸಾಮಾಜಿಕ ಪರಿಣಾಮಗಳ ವಿಶ್ಲೇಷಣೆ.

ಈ ವಿಷಯಕ್ಕೆ ಸಂಬಂಧಿಸಿದ ಹಲವಾರು ಗ್ರಂಥ ಮತ್ತು ಲೇಖನಗಳನ್ನು ಅವಲೋಕಿಸಿದಾಗ ಆ ಎಲ್ಲ ಲೇಖಕರು ತಮ್ಮ ವಿಚಾರಕ್ಕೆ ತಕ್ಕಂತೆ ಸೀಮಿತ ಉದ್ದೇಶವಿಟ್ಟುಕೊಂಡು ಬರೆದಿದ್ದು ಸ್ಪಷ್ಟವಾಗಿದೆ. ಪ್ರಖ್ಯಾತ ಸಂಶೋಧಕರೊಬ್ಬರು ಹೇಳಿದಂತೆ, ಸಂಶೋಧಕ ತನಗೆ ತಿಳಿದಿರುವುದನ್ನು ಮಾತ್ರ ಹೇಳಿರುತ್ತಾನೆ, ಆದರೆ ತನಗೆ ಅರಿವಿಗೆ ಬಾರದ ಎಷ್ಟೋ ವಿಷಯಗಳನ್ನು ಬಿಟ್ಟಿರುತ್ತಾನೆ. ಈ ಹಿನ್ನೆಲೆಯನ್ನಿಟ್ಟುಕೊಂಡು ನೋಡಿದಾಗ ಕರ್ನಾಟಕ ಲೋಕಾಯುಕ್ತ ಹಾಗೂ ಭ್ರಷ್ಟಾಚಾರ

ಕಾಯ್ದೆಯನ್ನು ವಿಮರ್ಶಕವಾಗಿ ನೋಡಿಲ್ಲ. ಅದರ ಕಾರ್ಯಶೈಲಿ ವಿಮರ್ಶಿಸಿಲ್ಲ. ಪ್ರಕರಣಗಳನ್ನು ವಿಶ್ಲೇಷಿಲ್ಲ. ಹಾಗೂ ಯಾವೆಲ್ಲ ರೀತಿಯಲ್ಲಿ ಸಾಮಾಜಿಕ ಪರಿಣಾಮಗಳನ್ನು ಬೀರಿದೆ ಎಂಬುದನ್ನು ಎಲ್ಲಿಯೂ ನಿಖರವಾಗಿ ನಿರೂಪಿಸಿಲ್ಲ. ಅಷ್ಟೇ ಅಲ್ಲ ಹಲವಾರು ಕಡೆ ದ್ವಂದ್ವ ನಿಲುವು ಇರುವುದು ಗಮನಕ್ಕೆ ಬಂದಿದೆ. ಈ ಹಿನ್ನೆಲೆಯಲ್ಲಿ ಹಲವು ಪ್ರಾಕಲ್ಪನೆಗಳನ್ನಿಟ್ಟುಕೊಂಡು ಅಧ್ಯಯನ ಮಾಡುವುದು ಅಗತ್ಯವಿದೆ.

೧.೪. ಅಧ್ಯಯನದ ವ್ಯಾಪ್ತಿ

ದೇಶದ ೧೯ ರಾಜ್ಯಗಳಲ್ಲಿ ಮಾತ್ರ ಇಂದು ದುರಾಡಳಿತ ಹಾಗೂ ಭ್ರಷ್ಟಾಚಾರ ನಿಯಂತ್ರಣಕ್ಕೆ ಲೋಕಾಯುಕ್ತ ವ್ಯವಸ್ಥೆಯಿದೆ. ಒರಿಸ್ಸಾದಲ್ಲಿ ಲೋಕಾಯುಕ್ತವನ್ನು ಅಸ್ತಿತ್ವಕ್ಕೆ ತಂದಷ್ಟೇ ವೇಗದಲ್ಲಿ ನಿಸ್ತೇಜಗೊಳಿಲಾಯಿತು. ಹರಿಯಾಣದಲ್ಲಿ ಲೋಕಾಯುಕ್ತ ಸಂಸ್ಥೆಯ ಶಕ್ತಿ ಕುಂದಿಸುವ ಸುಗ್ರೀವಾಜ್ಞೆ ರಾತ್ರೋ ರಾತ್ರಿ ಜಾರಿಗೆ ಬಂತು. ಪಂಜಾಬನಲ್ಲೂ ಸುಗ್ರೀವಾಜ್ಞೆ ಮೂಲಕ ಲೋಕಾಯುಕ್ತದ ಕತ್ತು ಹಿಚುಕಲಾಯ್ತು. ಕರ್ನಾಟಕ ರಾಜ್ಯದಲ್ಲಿ ೧೯೮೪ ರಷ್ಟು ಹಿಂದೆಯೇ ಲೋಕಾಯುಕ್ತ ಕಾಯ್ದೆ ಜಾರಿಗೆ ಬಂದರೂ ಸಹ ಅದು ಜನಪರವಾಗಿ ಕ್ರೀಯಾಶೀಲವಾಗಿದ್ದು ಇತ್ತೀಚಿನ ಕೆಲ ವರ್ಷಗಳಿಂದ ಎಂಬುದು ಎಲ್ಲರಿಗೂ ತಿಳಿದಿರುವ ಸಂಗತಿ. ಇದು ಸ್ವಾಯತ್ತ ಸಂಸ್ಥೆಯಾಗಿದ್ದು, ಸಾರ್ವಜನಿಕ ಸಿಬ್ಬಂದಿವರ್ಗದ ಕೆಲಸ ಮತ್ತು ನಿರ್ಧಾರಗಳ ಬಗೆಗೆ ಬಂದ ದೂರುಗಳನ್ನು ಸ್ವೀಕರಿಸುವುದು, ಸಂಬಂಧಪಟ್ಟ ಅಧಿಕಾರಿಯ ಕಛೇರಿ ಇಲ್ಲವೇ ಮನೆ ಮೇಲೆ ದಾಳಿ ನಡೆಸುವುದು, ತನಿಖೆ ನಡೆಸುವುದು ಇವರ ಮುಖ್ಯ ಕಾರ್ಯವಾಗಿದೆ. ಸುಪ್ರೀಂ ಕೋರ್ಟಿನ ನಿವೃತ್ತ ನ್ಯಾಯಾಧೀಶರ ಅಥವಾ ಹೈಕೋರ್ಟಿನ ನಿವೃತ್ತ ಮುಖ್ಯ ನ್ಯಾಯಾಧೀಶರನ್ನು ಲೋಕಾಯುಕ್ತರನ್ನಾಗಿ ನೇಮಿಸಲಾಗುತ್ತದೆ. ಉಪಲೋಕಾಯುಕ್ತ ಹುದ್ದೆಗೆ ಹೈಕೋರ್ಟಿನ ನಿವೃತ್ತ ನ್ಯಾಯಾಧೀಶರನ್ನು ನೇಮಕ ಮಾಡಲಾಗುತ್ತದೆ. ರಾಜ್ಯಪಾಲರು ಇವರನ್ನು ನೇಮಿಸುತ್ತಾರೆ. ಆದರೆ ಮುಖ್ಯಮಂತ್ರಿಯ ಸಲಹೆಯ ಮೇರೆಗೆ ಹಾಗೂ ಹೈಕೋರ್ಟಿನ ಮುಖ್ಯ ನ್ಯಾಯಾಧೀಶರು, ವಿರೋಧಪಕ್ಷದ ನಾಯಕರೊಂದಿಗೆ ವಿಚಾರವಿನಿಮಯ ನಡೆಸಿ ರಾಜ್ಯಪಾಲರು ಇವರನ್ನು ನೇಮಕ ಮಾಡುತ್ತಾರೆ. ಲೋಕಾಯುಕ್ತ ಹುದ್ದೆಯ ಅಧಿಕಾರವಧಿ ೫ ವರ್ಷಗಳು. ಇದೇ ನಿಯಮ ಉಪಲೋಕಾಯುಕ್ತರಿಗೂ ಅನ್ವಯಿಸುತ್ತದೆ.

ಲೋಕಾಯುಕ್ತರಿಗೆ ಭ್ರಷ್ಟಾಚಾರದ ವಿರುದ್ಧ ದೂರು ಸಲ್ಲಿಸಬಹುದು. ಭ್ರಷ್ಟಾಚಾರ ಸ್ವಜನಪಕ್ಷಪಾತ ಸರ್ಕಾರಿ ಅಧಿಕಾರವನ್ನು ಖಾಸಗಿ ಲಾಭಕ್ಕೆ ಬಳಸಿಕೊಳ್ಳುವುದು. ಇನ್ನೂ ಮುಂತಾದ ವಿಷಯಗಳಿಗೆ ಸಂಬಂಧಿಸಿದಂತೆ ಸಾರ್ವಜನಿಕರಿಂದ ಬಂದ ದೂರುಗಳನ್ನು ಸ್ವೀಕರಿಸುವುದು ಹಾಗೂ ತನಿಖೆ ನಡೆಸುವುದು ಲೋಕಾಯುಕ್ತರ ಜವಾಬ್ದಾರಿಯಾಗಿರುತ್ತದೆ ಇವರ ನೆರವಿಗೆ ಇತರೆ ಅಧಿಕಾರಿಗಳಿರುತ್ತಾರೆ. ಮುಖ್ಯಮಂತ್ರಿಗಳು, ಶಾಸಕರು ಹಾಗೂ ಸರ್ಕಾರಿ ನೌಕರರನ್ನು ಕೂಡ ತನಿಖೆಗೆ ಒಳಪಡಿಸಬಹುದು.

ಮುಖ್ಯಮಂತ್ರಿಗಳು, ಶಾಸಕರು ಹಾಗೂ ಹಿರಿಯ ಸರ್ಕಾರಿ ಅಧಿಕಾರಿಗಳು ಲೋಕಾಯುಕ್ತ ತನಿಖೆಗೆ ಒಳಪಟ್ಟರೆ, ಇತರ ಸರ್ಕಾರಿ ನೌಕರರು ಉಪಲೋಕಾಯುಕ್ತರ ವ್ಯಾಪ್ತಿಗೆ ಒಳಪಡುತ್ತಾರೆ. ಉನ್ನತ ಹಂತದ ಅಧಿಕಾರಿಗಳು ಹಾಗೂ ಮಂತ್ರಿಗಳ ವಿರುದ್ಧ ಬರುವ ದೂರುಗಳನ್ನು ಲೋಕಾಯುಕ್ತರು ಅಧಿಕಾರಿಗಳ ನೆರವಿನೊಂದಿಗೆ ತನಿಖೆ ನಡೆಸಿದರೆ ಕೆಳಹಂತದ ನೌಕರರ ವಿರುದ್ಧ ಬರುವ ದೂರುಗಳನ್ನು ಉಪ ಲೋಕಾಯುಕ್ತರು ತನಿಖೆ ಮಾಡುವ ಅಧಿಕಾರ ಹೊಂದಿರುತ್ತಾರೆ ಸಾವಿರಾರು ದೂರುಗಳು ದಾಖಲಾಗುತ್ತಿವೆ. ಆದರೆ ತಪ್ಪಿತಸ್ಥರು ಕಾನೂನಿನ ದೌರ್ಬಲ್ಯತೆಯ ಅನುಕೂಲ ಪಡೆದು ಶಿಕ್ಷೆಯಿಂದ ತಪ್ಪಿಸಿಕೊಳ್ಳುತ್ತಿದ್ದಾರೆ.

ಕರ್ನಾಟಕ ರಾಜ್ಯದಲ್ಲಿ ಲೋಕಾಯುಕ್ತ ಕ್ರಿಯಾಶೀಲವಾದಷ್ಟು ಭಾರತದ ಬೇರೆ ಯಾವ ರಾಜ್ಯದಲ್ಲೂ ಕ್ರಿಯಾಶೀಲ ಲೋಕಾಯುಕ್ತವಿಲ್ಲ. ಆದರೂ ಸಹ ಕರ್ನಾಟಕ ಲೋಕಾಯುಕ್ತದ ಅಧಿಕಾರದ ಬಗ್ಗೆ ನಕಾರಾತ್ಮಕ ಮಾತುಗಳು ಕೇಳಿ ಬರುತ್ತಲೇ ಇವೆ. ಇನ್ನು ಕರ್ನಾಟಕ ರಾಜ್ಯವು ಸಹ ಉಳಿದ ರಾಜ್ಯಗಳಂತೆ ಬ್ರಷ್ಟಾಚಾರದ ಕಾರಣದಿಂದಾಗಿ ಉತ್ತಮ ಆಡಳಿತ ನೀಡುವಲ್ಲಿ ವಿಫಲವಾಗಿದೆ. ಕರ್ನಾಟಕದ ಕೋಲಾರ ಜಿಲ್ಲೆಯ ಕೆ.ಜಿ.ಎಫ್ ಶಾಸಕ ವೈ.ಸಂಪಂಗಿ ೨೦೦೯ರಲ್ಲಿ ೫ ಲಕ್ಷ ಲಂಚ ಪಡೆಯುವಾಗ ಲೋಕಾಯುಕ್ತರಿಗೆ ಸಿಕ್ಕಿಬಿದ್ದರು. ಕರ್ನಾಟಕದಲ್ಲಿ ಇತ್ತೀಚೆಗೆ ಪ್ರಸಿದ್ದವಾಗಿರುವ ಗಣಿ ಹಗರಣ, ಅಕ್ರಮ ಅದಿರು ವಿದೇಶಗಳಿಗೆ ಸಾಗಿಸಿ ಕೋಟಿಗಟ್ಟಲೆ ಹಣ ಸಂಪಾದಿಸಿರುವುದು, ಅತಿ ಕಡಿಮೆ ಬೆಲೆಗೆ ರೈತರಿಂದ ಜಮೀನಿನ ಕ್ರಯ ಒಪ್ಪಂದ ಪತ್ರ ಮಾಡಿಕೊಂಡು ಆ ನಂತರ ಸರ್ಕಾರಕ್ಕೆ ಕೋಟಿ ಕೋಟಿ ರೂಪಾಯಿಗಳಿಗೆ ಮಾರಿ ಹಣ ಲೂಟಿ ಮಾಡಿರುವ ಕೆಐಎಡಿಬಿ ಮತ್ತು ಇಟಾಸ್ಕಾ ಕಂಪನಿ ಹಗರಣ, ಡಿ ನೋಟಿಫಿಕೇಷನ್ ಹಗರಣ, ಜಿ ಕೆಟಗೆರಿಯಲ್ಲಿ ಅಕ್ರಮವಾಗಿ ಬಿಡಿಎ ನಿವೇಶನ ಹಂಚಿಕೆ ಕೆಲವು ಕಂಪನಿಗಳಿಗೆ ಲೈಸೆನ್ಸ್ ಕೊಡಿಸಲು ಆ ಕಂಪನಿಯಿಂದ ತಮ್ಮ ಬಂಧುಗಳ ಸಂಸ್ಥೆಗಳಿಗೆ ಕೋಟ್ಯಾಂತರ ರೂ ಹಣವನ್ನು ದಾನವಾಗಿ ಪಡೆದಿರುವುದು ಹೀಗೆ ರಾಜಕೀಯ ಭ್ರಷ್ಟಾಚಾರವು ಅತ್ಯಂತ ಹೀನ ಮಟ್ಟಕ್ಕೆ ಇಳಿದು ನಾನಾ ರೂಪಗಳಲ್ಲಿ ಹರಡಿದೆ. ಇದು ಅತ್ಯಂತ ಮೇಲ್‌ಸ್ತರದಲ್ಲಿದ್ದು ಇಡೀ ನಾಗರೀಕ ಸಮಾಜ ತಲೆತಗ್ಗಿಸುವಷ್ಟು ಮಟ್ಟಿಗೆ ಹರಡಿದೆ. ಕಟ್ಟಾ ಜಗದೀಶ್, ಕಟ್ಟಾ ಸುಬ್ರಮಣ್ಯ ನಾಯ್ಡು, ಕೃಷಯ್ಯಶೆಟ್ಟಿ, ಯಡ್ಡಿಯೂರಪ್ಪ ನ್ಯಾಯಾಂಗ ಬಂಧನಕ್ಕೆ ಒಳಗಾಗಿದ್ದು ಇದಕ್ಕೆ ಸಾಕ್ಷಿಯಾಗಿದೆ. ಇಂತಹ ಹಗರಣಗಳು ಕರ್ನಾಟಕಕ್ಕೆ ಕಪ್ಪು ಮಸಿ ಮೆತ್ತಿವೆ.

ಲೋಕಾಯುಕ್ತದಲ್ಲಿ ಎರಡು ವರ್ಷಗಳ ಕಾಲ ಪೊಲೀಸ್ ವರಿಷ್ಠಾಧಿಕಾರಿಯಾಗಿ ಕೆಲಸ ಮಾಡಿದ ಮಧುಕರಶೆಟ್ಟಿ ಎಂಬ ಅಧಿಕಾರಿ ಲೋಕಾಯುಕ್ತದಲ್ಲಿಯೂ ಭ್ರಷ್ಟರಿದ್ದಾರೆ ಎಂದು ಬಹಿರಂಗ ಹೇಳಿಕೆ ನೀಡಿದ ನಂತರ ರಾಜಕಾರಣಿಗಳು ಕೂಡ ಇದೇ ಮಾತನ್ನು ಇನ್ನಷ್ಟು ಜೋರಾಗಿ ಹೇಳಿದರು. ಲೋಕಾಯುಕ್ತ ಮುಖ್ಯಸ್ಥರಾಗಿದ್ದಾಗಲೇ ನ್ಯಾ.ಸಂತೋಷ ಹೆಗ್ಡೆ ಕೂಡ

ಈ ಮಾತನ್ನು ಆಗಾಗ ಹೇಳುತ್ತಲೇ ಇದ್ದರು. ಅಷ್ಟಕ್ಕೂ ಲೋಕಾಯುಕ್ತ ಸಂಸ್ಥೆಯನ್ನು ಭ್ರಷ್ಟಗೊಳಿಸಿದ್ದು ಯಾರು? ಲೋಕಾಯುಕ್ತ ಸಂಸ್ಥೆಯ ಮುಖ್ಯಸ್ಥರಂತೂ ಅಲ್ಲ. ಆಯಾ ಕಾಲಘಟ್ಟದಲ್ಲಿ ಅಧಿಕಾರ ನಡೆಸಿದ ರಾಜಕಾರಣಿಗಳು. ಲೋಕಾಯುಕ್ತ ಪೊಲೀಸ್ ಇಲಾಖೆಗೆ ಅಧಿಕಾರಿಗಳನ್ನು ನೇಮಿಸುವ ಅಧಿಕಾರ ಇರುವುದು ಸರ್ಕಾರಕ್ಕೆ. ಇಂತಹ ಸಂಸ್ಥೆಗಳಿಗೆ ಪ್ರಾಮಾಣಿಕ ಅಧಿಕಾರಿಗಳನ್ನೇ ನೇಮಕ ಮಾಡಬೇಕು. ಅದು ಬಿಟ್ಟು ಭ್ರಷ್ಟಾಚಾರದ ನಿಗ್ರಹ ಮಾಡುವ ಸಂಸ್ಥೆ ಎಂದು ಗೊತ್ತಿದರೂ ಕಳಂಕಿತರನ್ನು ಅಲ್ಲಿಗೆ ವರ್ಗ ಮಾಡಿ ಲೋಕಾಯುಕ್ತ ಸಂಸ್ಥೆಯಲ್ಲೂ ಭ್ರಷ್ಟರಿದ್ದಾರೆ ಎಂದು ಸರ್ಕಾರದಲ್ಲಿರುವವರು ಹೇಳಿದರೆ ಹೇಗೆ?

ಆದರೆ ಕರ್ನಾಟಕ ಪ್ರಜಾತಂತ್ರದಲ್ಲಿ ದುಷ್ಟ, ಭ್ರಷ್ಟ ಜನಪ್ರತಿನಿಧಿ, ಅಧಿಕಾರಿಗಳ ಭ್ರಷ್ಟಾಚಾರದ ವಿರುದ್ಧ ಪ್ರಲಾಪಿಸಿ ಸಾಮಾನ್ಯರ ರಕ್ಷಣೆಗೆ ನಿಲ್ಲುವ ಶಕ್ತಿ ಸದ್ಯಕ್ಕೆ ಇರುವುದು ಕರ್ನಾಟಕ ಲೋಕಾಯುಕ್ತ ಸಂಸ್ಥೆಗೆ ಮಾತ್ರ, ಜನ ವಿರೋಧಿ ಆಡಳಿತ, ಜನಸೇವೆಯಲ್ಲಿ ನಿರ್ಲಕ್ಷ್ಯ, ಹಾಗೂ ನಿಧಾನತೆ, ಮೂಲ ಸೌಕರ್ಯ ಕಲ್ಪಿಸುವಲ್ಲಿ ವೈಫಲ್ಯ, ಸ್ವಜನ ಪಕ್ಷಪಾತ, ಅಕ್ರಮ ಆಸ್ತಿ ಸಂಪಾದಿಸುವ ನಾಯಕರು ಮತ್ತು ಅಧಿಕಾರಿಗಳನ್ನು ಶಿಕ್ಷಿಸುವ ಶಕ್ತಿ ಲೋಕಾಯುಕ್ತಕ್ಕೆ ಇದೆ ಎಂದು ನ್ಯಾ. ಸಂತೋಷ್ ಹೆಗಡೆ ಅವರು ತೋರಿಸಿಕೊಟ್ಟಿದ್ದಾರೆ. ಮುಖ್ಯಮಂತ್ರಿ ಸೇರಿ ಸಚಿವರನ್ನು ಕಾನೂನಿನ ಕೂಪದೊಳಗೆ ತಳ್ಳಿ, ಕಟಕಟೆ ಹತ್ತಿಸುವುದು ಕಾನೂನು ಪರಿಮಿತಿಯಲ್ಲಿ ಸಾಧ್ಯವಿದೆ ಎಂಬುದು ಈಗಾಗಲೇ ಸಾಬೀತಾಗಿದೆ. ಇಬ್ಬರು ಮಾಜಿ ಮುಖ್ಯಮಂತ್ರಿಗಳು, ಹಾಲಿ ಸಂಸದರು, ಶಾಸಕರು ಕೋರ್ಟಿನ ಕಟಕಟೆ ಏರಿ ಜಾಮೀನಿಗೆ ಪರದಾಡುವ ಸ್ಥಿತಿ ನಿರ್ಮಿಸಿದ್ದು ಕರ್ನಾಟಕ ಲೋಕಾಯುಕ್ತ ಕಾಯಿದೆ. ಹೀಗಾಗಿ ಕರ್ನಾಟಕ ಲೋಕಾಯುಕ್ತವು ರಾಷ್ಟ್ರಮಟ್ಟದಲ್ಲಿಯೂ ಪ್ರತಿಧ್ವನಿಸುವಂತಾಯಿತು. ರಾಷ್ಟ್ರಿಯ ಮಾಧ್ಯಮಗಳು ಸಹ ಕರ್ನಾಟಕ ಲೋಕಾಯುಕ್ತದ ಕಾರ್ಯವೈಖರಿ ಮತ್ತು ತನಿಖಾ ಕ್ರಮವನ್ನು ವಿಶ್ಲೇಷಿಸಿ ಬರೆದವು.

ಕರ್ನಾಟಕ ಲೋಕಾಯುಕ್ತವು ಜನಪರ ಸಂಸ್ಥೆಯಾಗಿ ಬೆಳೆದು ಭ್ರಷ್ಟಾಚಾರ ಮುಕ್ತ ಉತ್ತಮ ಆಡಳಿತ ನೀಡುವಲ್ಲಿ ತನ್ನ ಬದ್ಧತೆ ಮತ್ತು ದಕ್ಷತೆಯನ್ನು ಪ್ರದರ್ಶಿಸುವ ಪ್ರಯತ್ನ ಮಾಡಿದಲ್ಲದೇ ತನ್ನ ಕಾರ್ಯದ ಮೂಲಕ ಅದು ಅನೇಕ ಸಾಮಾಜಿಕ ಪರಿಣಾಮಗಳನ್ನು ಬೀರತೊಡಗಿತು. ಈ ಹಿನ್ನೆಲೆಯಲ್ಲಿ ಇದನ್ನು ಅಧ್ಯಯನ ವಿಷಯವನ್ನಾಗಿ ಪರಿಗಣಿಸುತ್ತ,ಇದಕ್ಕೆ ಸಂಬಂಧಿಸಿದ

ಮುಖ್ಯ ವಿಷಯಗಳನ್ನು ಅಧ್ಯಯನದ ವ್ಯಾಪ್ತಿಗೆ ಒಳಪಡಿಸಿಕೊಂಡು ಈ ವಿಷಯಗಳ ಬಗ್ಗೆ ಸಮಸ್ಯೀಕರಣ ರೂಪಿಸಿಕೊಂಡು ಸಂಶೋಧನಾ ಪ್ರಶ್ನೆಗಳನ್ನು ಸಿದ್ದಪಡಿಸಿಕೊಂಡು ಕರ್ನಾಟಕ ಲೋಕಾಯುಕ್ತವು ಭ್ರಷ್ಟಾಚಾರ ನಿಯಂತ್ರಿಸಿ ಉತ್ತಮ ಆಡಳಿತ ನೀಡುವಲ್ಲಿ ಸಫಲವಾಗುವುದರೊಂದಿಗೆ ಯಾವ ರೀತಿಯ ಸಾಮಾಜಿಕ ಪರಿಣಾಮಗಳನ್ನು ಬೀರಿದೆ ಎಂದು ತಿಳಿದುಕೊಳ್ಳುವುದಾಗಿದೆ.

೧.೫. ಅಧ್ಯಯನದ ವಿಧಾನ

ಭ್ರಷ್ಟಾಚಾರ ನಿಯಂತ್ರಣದ ಸಾಧಕ ಬಾಧಕಗಳ ಬಗ್ಗೆ ಹಾಗೂ ಕರ್ನಾಟಕ ಲೋಕಾಯುಕ್ತವನ್ನು ಬಲಪಡಿಸುವಲ್ಲಿ ಮತ್ತು ಈ ಸಂಸ್ಥೆಯು ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸುವಂತೆ ಮಾಡುವಲ್ಲಿ ಹಾಗೂ ಅದು ಬೀರಿದ ಸಾಮಾಜಿಕ ಪರಿಣಾಮ ಅಭ್ಯಸಿಸಲು ಅಗತ್ಯವಿರುವ ಅಂಶಗಳ ಬಗ್ಗೆ ಪ್ರಾಥಮಿಕ ಮೂಲಗಳಿಂದ ಮಾಹಿತಿ ಸಂಗ್ರಹಿಸಲಾಯಿತು. ಮಾಹಿತಿಯನ್ನು ಸಿದ್ಧಪಡಿಸಿ ೩ ರೀತಿಯ ಪ್ರಶ್ನಾವಳಿಗಳ ಮೂಲಕ ಪಡೆಯಲಾಯಿತು. ಅವು ಭ್ರಷ್ಟಾಚಾರ ಆರೋಪಿ ನೌಕರರಿಗೆ ರಚಿಸಿದ ಪ್ರಶ್ನಾವಳಿ, ಸಮಾಜದ ಪ್ರಮುಖರಿಗೆ ರಚಿಸಿದ ಪ್ರಶ್ನಾವಳಿ ಹಾಗೂ ಜನಸಾಮಾನ್ಯರಿಗೆ ರಚಿಸಿದ ಪ್ರಶ್ನಾವಳಿಗಳಾಗಿವೆ. ಜೊತೆಗೆ ಅಧ್ಯಯನ ಮಾಡಲು ಲೋಕಾಯುಕ್ತರನ್ನು, ಉಪ ಲೋಕಾಯುಕ್ತರನ್ನು, ಲೋಕಾಯುಕ್ತ ಪೊಲೀಸ್ ವಿಭಾಗದ ಅಡಿಷನಲ್ ಡೈರೆಕ್ಟರ್ ಜನರಲ್ ಆಫ್ ಪೊಲೀಸ್‌ರವರನ್ನು, ಪೊಲೀಸ್ ವರಿಷ್ಠರನ್ನು, ನ್ಯಾಯಾಧೀಶರನ್ನು, ಕೆಲವು ಸರ್ಕಾರಿ ಅಧಿಕಾರಿಗಳನ್ನು, ಹಿರಿಯ ಪತ್ರಕರ್ತರನ್ನು ಹಾಗೂ ಭ್ರಷ್ಟಾಚಾರ ಮತ್ತು ಲೋಕಾಯುಕ್ತಕ್ಕೆ ಸಂಬಂಧಿಸಿದಂತೆ ಅನುಭವವುಳ್ಳ ವ್ಯಕ್ತಿಗಳೊಂದಿಗೆ ಚರ್ಚಿಸಿ ಅಗತ್ಯ ಮಾಹಿತಿ ಪಡೆಯಲು 'ಸಂದರ್ಶನ' ವಿಧಾನವನ್ನು ಅನುಸರಿಸಲಾಗಿದೆ. ಕರ್ನಾಟಕ ರಾಜ್ಯದ ಬೆಳಗಾವಿ, ಗುಲಬರ್ಗಾ, ಮೈಸೂರು ಹಾಗೂ ಬೆಂಗಳೂರು ವಿಭಾಗಗಳಲ್ಲಿ ತಲಾ ನೂರು ಮಹಿಳೆಯರನ್ನು ಸೇರಿದಂತೆ ಒಟ್ಟು ಇನ್ನೂರ ಐವತ್ತು ಜನರನ್ನು ಪ್ರಶ್ನಾವಳಿಗಳ ಮೂಲಕ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಅಂದರೆ ರಾಜ್ಯಾದ್ಯಂತ ನಾಲ್ಕುನೂರು ಮಹಿಳೆಯರು ಸೇರಿದಂತೆ ಒಟ್ಟು ಒಂದು ಸಾವಿರ ಜನರನ್ನು ೨೦೧೩ ಆಗಸ್ಟ್, ಸೆಪ್ಟಂಬರ್ ತಿಂಗಳುಗಳಲ್ಲಿ ಸಂದರ್ಶಿಸಲಾಯಿತು. ರಾಜ್ಯಾದ್ಯಂತ ಲೋಕಾಯುಕ್ತದಿಂದ ಭ್ರಷ್ಟಾಚಾರ ಆರೋಪಿತರೆಂದು ಗುರುತಿಸಲ್ಪಟ್ಟ ಐವತ್ತು ಸರ್ಕಾರಿ ನೌಕರರನ್ನು ಭೇಟಿಯಾಗಿ ಅವರಿಂದ ಮಾಹಿತಿಯನ್ನು ಪಡೆಯಲಾಯಿತು. ಕರ್ನಾಟಕ ಲೋಕಾಯುಕ್ತ ಕಚೇರಿಯನ್ನು ಸಂಪರ್ಕಿಸಿ ಮಾಹಿತಿ ಹಕ್ಕು ಕಾನೂನಿನಿಂದ ಹಲವಾರು ವಿಷಯಗಳನ್ನು ಪಡೆಯಲಾಯಿತು.

ಈ ಸಂಶೋಧನೆಯಲ್ಲಿ ಆನುಷಂಗಿಕ ಮೂಲಗಳಾಗಿ, ಕರ್ನಾಟಕ ಲೋಕಾಯುಕ್ತ ಅಧಿನಿಯಮ ೧೯೮೪ ಮತ್ತು ಈ ಕಾಯ್ದೆಗೆ ಸಂಬಂಧಿಸಿದಂತೆ ಆಗಿರುವ ಕೆಲವು ಪ್ರಮುಖ ತಿದ್ದುಪಡಿಗಳು, ಕರ್ನಾಟಕ ಲೋಕಾಯುಕ್ತ ನಿಯಮಗಳು ೧೯೮೫, ಭಾರತೀಯ ಅಪರಾಧ ಪ್ರಕ್ರಿಯಾ ಸಂಹಿತೆ, ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆ ೧೯೮೮, ಕೇಂದ್ರ ಸರ್ಕಾರದ ಹಾಗೂ ಕರ್ನಾಟಕ ಸರ್ಕಾರದ ಆದೇಶಗಳು, ಸಾರ್ವಜನಿಕ ಕುಂದುಕೊರತೆಗಳನ್ನು ಮತ್ತು ಭ್ರಷ್ಟಾಚಾರವನ್ನು ನಿಯಂತ್ರಣ ಮಾಡುವಲ್ಲಿ ಸ್ಥಾಪಿತವಾದ ಸಮಿತಿಗಳ ವರದಿಗಳು, ಕರ್ನಾಟಕ ಲೋಕಾಯುಕ್ತದ ಪ್ರಕಟಣೆಗಳು, ವರದಿಗಳು, ಸರ್ಕಾರದ ವರದಿಗಳು, ಮುಂತಾದವುಗಳನ್ನು ಬಳಸಿಕೊಳ್ಳಲಾಗಿದೆ.

ಲೋಕಾಯುಕ್ತ, ಭ್ರಷ್ಟಾಚಾರ ಹಾಗೂ ಉತ್ತಮ ಆಡಳಿತದ ಮೂಲ ಧ್ವನಿಸುವ ಪುಸ್ತಕಗಳು, ವಿವಿಧ ಪತ್ರಿಕೆ, ದಿನಪತ್ರಿಕೆ ಹಾಗೂ ನಿಯತಕಾಲಿಕೆಗಳಲ್ಲಿ ಪ್ರಕಟವಾದ ಲೇಖನಗಳು, ಅಖಿಲ ಭಾರತ ಲೋಕಾಯುಕ್ತ ಸಮ್ಮೇಳನಗಳ ವಿದ್ವತ್‌ಗೋಷ್ಠಿಯ ವಿಚಾರಧಾರೆಗಳು, ಕರ್ನಾಟಕ ಲೋಕಾಯುಕ್ತ ಕಛೇರಿಯಲ್ಲಿ ಲಭ್ಯವಿರುವ ದಾಖಲೆಗಳು ಹಾಗೂ ಅಂತರ್ಜಾಲ ವ್ಯವಸ್ಥೆಯಲ್ಲಿ ದೊರಕುವ ಮಾಹಿತಿಗಳು ಮತ್ತು ಭ್ರಷ್ಟಾಚಾರ ಮತ್ತು ಲೋಕಾಯುಕ್ತಕ್ಕೆ ಸಂಬಂಧಿಸಿದಂತೆ ನನ್ನ ಸ್ವಂತ ಅನುಭವ, ಜ್ಞಾನ ಹಾಗೂ ಅವಲೋಕನಗಳು ದ್ವಿತೀಯ ಮೂಲಗಳಲ್ಲಿ ಸೇರಿಸಲಾಗಿದೆ.

೧.೬. ಅಧ್ಯಯನದ ಮಹತ್ವ

ಸುಶಿಕ್ಷಿತರು ಹಣದ ಆಸೆಯನ್ನು ಬಿಟ್ಟು ಸದೃಢ ಸಮಾಜ ಕಟ್ಟಲು ಮುಂದಾಗಬೇಕು. ಶ್ರೀಮಂತರಾಗುವುದು ಮಹತ್ವವಲ್ಲ. ಮೌಲ್ಯಗಳನ್ನು ಅರಗಿಸಿಕೊಳ್ಳುವುದು ಅವಶ್ಯಕ. ಇದರಿಂದ ಜಾಗತಿಕವಾಗಿ ಭಾರತ ಬಲಿಷ್ಠ ಗೊಳ್ಳುತ್ತದೆ ಎಂದು ಅರಿತುಕೊಳ್ಳಬೇಕು. ಎಲ್ಲರಿಗೂ ಸಮಾಜದಲ್ಲಿ ಸಾರ್ವಜನಿಕ ಸೇವೆ ಮಾಡುವ ಸದಾವಕಾಶ ಸಿಗುವುದಿಲ್ಲ. ಹುಟ್ಟಿನಿಂದ ಯಾರೂ ಅದಕ್ಕಾಗಿ ಹಂಬಲಿಸದಿದ್ದರೂ ಜೀವನ ಕ್ರಮದಲ್ಲಿ ಅವರು ಬೆಳೆದ ವಾತಾವರಣ ಮತ್ತು ಅನುಭವಗಳು ಕೆಲವರನ್ನು ಸಮಾಜದ ಸೇವಾ ಮನೋಭಾವನೆಗೆ ಪ್ರೇರೇಪಿಸುತ್ತದೆ.

ಸಾರ್ವಜನಿಕ ಸೇವೆ ಮಾಡಲು ಸರ್ಕಾರಿ ನೌಕರರಿಗೆ ದೊರಕಿದ ಭಾಗ್ಯ ಎಂದುಕೊಳ್ಳಬೇಕು. ಏಕೆಂದರೆ ಅವರು ಮಾಡುವ ಸೇವೆಗೆ ಫ್ರತಿಫಲವಾಗಿ ಪ್ರತಿ ತಿಂಗಳು ಸರ್ಕಾರ ತಪ್ಪದೇ ಸಂಬಳ ಕೊಡುತ್ತದೆ. ಆದರೂ ಸಾರ್ವಜನಿಕ ಸೇವೆಯಲ್ಲಿರುವ ಸರ್ಕಾರಿ ನೌಕರರು ಎಷ್ಟರ ಮಟ್ಟಿಗೆ ತಮ್ಮನ್ನು ಸಮಾಜ ಸೇವೆಯಲ್ಲಿ ತೊಡಗಿಸಿಕೊಳ್ಳುತ್ತಾರೆ ಎಂಬುದು ಈಗಲೂ ಯಕ್ಷಪ್ರಶ್ನೆ ಯಾಗಿಯೇ ಉಳಿದಿದೆ. ಕೇವಲ ಬೆರಳೆಣಿಕೆಯಷ್ಟು ಸರ್ಕಾರಿ ನೌಕರರನ್ನು ಮಾತ್ರ ಜನರು ಮೆಚ್ಚುವಂತಾಗಿದೆ. ಏಕೆಂದರೆ ಪ್ರಸ್ತುತ ಸಮಾಜದಲ್ಲಿ ದುಡ್ಡಿಲ್ಲದೇ ಏನೂ ನಡೆಯುವುದಿಲ್ಲ ಎಂಬ ಮಾತು ಕೇಳಿ ಬರುತ್ತದೆ. ಈ ರೀತಿ ಜನಜನಿತವಾಗಿರುವ ವಾತಾವರಣದಲ್ಲಿ ಜನ ಸೇವೆ ಎಂಬುದು ಅರ್ಥಹೀನವಾಗಿದೆ. ವಾಸ್ತವವಾಗಿ ಸೇವೆ ಎಂಬುದರ ಅರ್ಥವೇ ಬದಲಾಗಿದೆ. ಅರ್ಹರಿಗೆ, ನೊಂದವರಿಗೆ ಸೇವೆ ಮಾಡಿದ್ದೇ ಆದರೆ ಸರ್ಕಾರಿ ನೌಕರನಾಗಿದ್ದಕ್ಕೂ ಸಾರ್ಥಕತೆ ಉಂಟಾಗುತ್ತದೆ. **'ನಿನ್ನನ್ನು ಅರಸಿ ಬಂದವರು ನಿನ್ನಲ್ಲಿ ಬಂದ ದೇವರು ಎಂದು ತಿಳಿ' ಸಮಾಜದ ಕಟ್ಟ ಕಡೆಯ ಮನುಷ್ಯನಿಗೆ ಮೊಟ್ಟ ಮೊದಲನೆ ಸೌಲಭ್ಯ ನೀಡಿ** ಎನ್ನುತ್ತಾರೆ ಗಾಂಧೀಜಿಯವರು. ಇದರ ಮಹತ್ವವನ್ನು ಎತ್ತಿ ಹಿಡಿಯಲೆಂದೇ ಕೆಂಗಲ್ ಹನುಮಂತಯ್ಯ ಅವರು ವಿಧಾನ ಸೌಧದ ಮೇಲೆ **'ಸರ್ಕಾರದ ಕೆಲಸ ದೇವರ ಕೆಲಸ'**ಎಂದು ಬರೆಸಿದ್ದಾರೆ. ಇಂದಿನ ಜನಸೇವಕರು ಇದನ್ನು ಅರಿಯಬೇಕು. ಮೇಲ್ಮಟ್ಟದಲ್ಲಿರುವವರು ಉಳಿದವರಿಗೆ ಮೇಲ್ಪಂಕ್ತಿ ಹಾಕುವ ಮೂಲಕ ಆದರ್ಶವಾಗಬೇಕು. ಗಾಂಧಿ ನಮ್ಮ ದೇಶ ರಾಮ ರಾಜ್ಯವಾಗಬೇಕೆಂದು ಕನಸು ಕಂಡರು.

ಇದನ್ನು ನನಸು ಮಾಡಬೇಕೆಂದರೆ, ಅಧಿಕಾರಿಗಳಾಗಲೀ, ಜನಪ್ರತಿನಿಧಿಗಳಾಗಲೀ ಜನರಿಗೆ ನ್ಯಾಯ ಸಮ್ಮತವಾಗಿ ಸ್ಪಂದಿಸುವ ಇಚ್ಛಾಶಕ್ತಿಯನ್ನು ಹೆಚ್ಚಿಸಿಕೊಳ್ಳಬೇಕು. ಇಂದಿಗೂ ಸಮಾಜದಲ್ಲಿ ನಿರ್ಲಕ್ಷ್ಯಕ್ಕೊಳಗಾದ ಮುಗ್ಧ ಜನರಿದ್ದಾರೆ, ಇಂತಹವರ ಆಶೋತ್ತರಗಳನ್ನು ಕಡೆಗಣಿಸಿ ಶೋಷಣೆ ಮಾಡುವ ಮುಖಂಡರು ಮತ್ತು ಅಧಿಕಾರಿಗಳು ಇದ್ದಾರೆ ಎಂಬುದು ಅನೇಕ ಅಧ್ಯಯನಗಳಿಂದ ಸಾಬೀತಾಗಿದೆ.

ಈ ವ್ಯವಸ್ಥೆಯನ್ನು ನೋಡಿದಾಗ ಇದೆಲ್ಲಾ ಸರಿಹೋಗುವುದು ಯಾವಾಗ? ಯಾರು ಸರಿ ಮಾಡುವವರು? ಎಂಬ ಪ್ರಶ್ನೆಗಳು ಹುಟ್ಟುವುದು ಸಹಜ. ಉತ್ತಮ ಆಡಳಿತ ನೀಡಬೇಕೆಂದರೆ ಅನೇಕ ಪ್ರಕಾರದ ನ್ಯೂನತೆಗಳು ಆಡಳಿತ ವ್ಯವಸ್ಥೆಯಲ್ಲಿ ನುಸುಳಿಕೊಂಡಿವೆ. ೨೦೧೩ರಲ್ಲಿ ಕೈಗೊಂಡ ಅಧ್ಯಯನವೊಂದರ ಪ್ರಕಾರ ರಾಜ್ಯದ ಸುಮಾರು ಶೇಕಡ ೩೬ರಷ್ಟು ವೃದ್ಧರು, ನಿರ್ಗತಿಕಕರು, ವಿಧವೆಯರು ಮತ್ತು ವಿಕಲಚೇತನರು ತಮ್ಮದಲ್ಲದ ತಪ್ಪಿನಿಂದ ಸಾಮಾಜಿಕ ಭದ್ರತೆಯಿಂದ ವಂಚಿತರಾಗಿರುವುದು ತಿಳಿದು ಬಂದಿದೆ. ಇದನ್ನು ನಿಷ್ಕ್ರಿಯ ಸಮಾಜ ಎಸಗಿದ ಘನಘೋರ ದ್ರೋಹ ಎನ್ನಬಹುದು. ಇದನ್ನು ಮಾನವ ಹಕ್ಕಿನ ಪರಿಧಿಗೆ ಬರುವ ವಿಷಯವಾಗಿಯೂ ಸರ್ವೋಚ್ಛ ನ್ಯಾಯಾಲಯ ಪರಿಗಣಿಸಿದೆ. ಅಧಿಕಾರಿಗಳ ಸೇವಾ ಗುಣಮಟ್ಟ ಕಡಿಮೆ ಆದಂತೆಲ್ಲ ಆಡಳಿತ ಕುಸಿದು ಜನರ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ. ಸಾಮಾನ್ಯ ಜನರ ಸಮಸ್ಯೆಗಳಿಗೆ ಬದ್ಧತೆಯಿಂದ ಸ್ಪಂದಿಸುವ ಪ್ರಾಮಾಣಿಕ ಹಾಗೂ ನಿಸ್ವಾರ್ಥ ಪ್ರಯತ್ನ ಕಡಿಮೆಯಾಗುತ್ತಿವೆ ಎಂದು ಅಧ್ಯಯನಗಳಲ್ಲಿ ಸಾಬೀತಾಗಿದೆ.

ಕರ್ನಾಟಕ ಸರ್ಕಾರ ಕೆಲ ಇಲಾಖೆಗಳ ಸಮಸ್ಯೆಗಳನ್ನಾದರೂ ಸಕಾಲ ಯೋಜನೆ ಮುಖಾಂತರ ಪರಿಹರಿಸಲು ಮುಂದಾಗಿರುವುದು ಒಂದು ಉತ್ತಮ ಹೆಜ್ಜೇ ಎನ್ನಬಹುದು. ಯಾವುದೇ ಯೋಜನೆ ಫಲಕಾರಿ ಆಗಬೇಕಾದಲ್ಲಿ ಎಲ್ಲರನ್ನು ಒಳಗೊಳ್ಳುವಂತೆ ಮಾಡಬೇಕು. ಆದರೆ ಒಳಗೊಳ್ಳಿಸುವಿಕೆಯ ಕೆಲಸ ಸರ್ಕಾರದಿಂದ ಆಗುತ್ತಿಲ್ಲ. ಆದರೆ ಸಾರ್ವಜನಿಕ ಸೇವೆ ಎಂಬುದು ಬೃಹತ್ ವ್ಯಾಪ್ತಿ ಹೊಂದಿರುವುದರಿಂದ ಅದಕ್ಕೆ ಬಹುದೊಡ್ಡ ಪ್ರಮಾಣದ, ಬಹುಮುಖಿಯುಳ್ಳ ಮತ್ತು ನಿರಂತರ ಕಾರ್ಯೋಪಾಯಗಳು ಜಾರಿಗೆ ಬರಬೇಕಾಗಿದೆ. ಅದಕ್ಕಾಗಿಯೇ ಸರ್ಕಾರಿ ನೌಕರಲ್ಲಿರುವ ಅದಕ್ಷತೆ, ಭ್ರಷ್ಟರು ಮತ್ತು ನಿಧಾನ ಪ್ರವೃತ್ತಿಯನ್ನು ತೊಡೆದು ಹಾಕುವ ಉದ್ದೇಶದಿಂದಲೇ ಸರ್ಕಾರ ಆಡಳಿತದಲ್ಲಿ ಸಕಾಲದಂತಹ ನವೀನ ಯೋಚನೆಗಳನ್ನು ತರಲು ಪ್ರಯತ್ನಿಸುತ್ತಿದೆ.

ರಾಜ್ಯದಲ್ಲಿ ಇತ್ತೀಚೆಗೆ ನಡೆಯುತ್ತಿರುವ ಭ್ರಷ್ಟಾಚಾರ ವಿರೋಧಿ ಅಂದೋಲನಗಳಲ್ಲಿ ಯುವಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದು ಗಮನಾರ್ಹ. ಇಷ್ಟಕ್ಕೂ ಬಹಳ ಕಾಲದಿಂದ ರಾಜ್ಯದಲ್ಲಿ

ಇಂತಹ ಚಿಂತನೆಯುಳ್ಳ ಒಂದು ನಾಗರಿಕ ಸಮಾಜ ಎಂಬುದು ಇರಲೇ ಇಲ್ಲ ಎನ್ನಬಹುದು. ಇಷ್ಟು ದಿನ ಈ ಜನ ಸಮುದಾಯ ಪ್ರಾದೇಶಿಕವಾದ, ಭಾಷಾವಾದ ಮತ್ತು ಧರ್ಮಾಧಾರಿತ ವಾದಗಳಲ್ಲಿಯೇ ಮುಳುಗಿತ್ತು. ಸ್ವಾತಂತ್ರ್ಯದ ನಂತರ ಪ್ರಜಾಪ್ರಭುತ್ವದ ಮಾದರಿಯನ್ನು ಒಪ್ಪಿಕೊಂಡು ಅದರ ತತ್ವಗಳಿಗನುಗುಣವಾಗಿ ರೂಪುಗೊಂಡ ಸಂವಿಧಾನವನ್ನು ಅಪ್ಪಿಕೊಂಡ ರಾಜ್ಯ ನಮ್ಮದು. ಕಳೆದ ೬೬ ವರ್ಷಗಳಿಂದ ಸಂವಿಧಾನದ ಪ್ರತಿಯೊಂದು ಅಂಶವನ್ನು ನಿಸ್ವಾರ್ಥ ಮನೋಭಾವದಿಂದ ಸಾರ್ವಜನಿಕ ಸೇವಾಕ್ಷೇತ್ರದಲ್ಲಿ ರೂಢಿಸಿಕೊಂಡು ಬಂದಿದಲ್ಲಿ ಪ್ರಜಾಪ್ರಭುತ್ವ ಹೆಚ್ಚು ಪರಿಣಾಮಕಾರಿ ಯಾಗುತ್ತಿತ್ತು ಮತ್ತು ಪರಿಪೂರ್ಣ ಸಾರ್ಥಕತೆ ಪಡೆಯುತ್ತಿತ್ತು. ಸಂವಿಧಾನ ಪಾಲನೆಯು ರಾಜ್ಯದ ಆರು ಕೋಟಿಗೂ ಮೀರಿದ ಬೃಹತ್ ಜನಸಂಖ್ಯೆಯ ಪ್ರತಿಯೊಬ್ಬ ಪ್ರಜೆಗೂ ಅನ್ವಯವಾದರೂ ಸಹ ಮುಗ್ಧ, ಅನಕ್ಷರಸ್ಥ ಹಾಗೂ ಬಡಜನರಿಗೆ ಇಂದಿಗೂ ಪ್ರಜಾಪ್ರಭುತ್ವ ಹಾಗೂ ಸಂವಿಧಾನ ಎಂದರೇನು ಎಂಬುದೇ ಗೊತ್ತಿಲ್ಲದಿರುವುದು ವಾಸ್ತವ. ಇಂಥವರ ಸಂಖ್ಯೆಯೇ ರಾಜ್ಯದಲ್ಲಿ ಹೆಚ್ಚಿನ ಪ್ರಮಾಣದಲ್ಲಿದೆ. ಈ ಎಲ್ಲದರ ಹಿನ್ನೆಲೆಯಲ್ಲಿ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗಗಳು ಮುಗ್ಧರನ್ನು ಸಬಲೀಕರಣ ಮಾಡುವ ಜವಾಬ್ದಾರಿ ಹೊರಬೇಕಾದ ಅಗತ್ಯವಿದೆ.

ಈ ಮೂರು ಅಂಗಗಳ ಮೂಲಕವೇ ಜನಸಾಮಾನ್ಯನ ಅಭಿವೃದ್ಧಿ ಆಗಬೇಕಾಗಿರುವುದರಿಂದ ಅವನಿಗಾಗಿ ಕಾರ್ಯಕ್ರಮಗಳನ್ನು, ಯೋಜನೆಗಳನ್ನು ರೂಪಿಸುವ ಶಾಸಕಾಂಗ, ಇವುಗಳ ಅನುಷ್ಠಾನದ ಹೊಣೆ ಹೊತ್ತಿರುವ ಕಾರ್ಯಾಂಗ, ಈ ಉಭಯ ಅಂಗಗಳು ತಮ್ಮ ತಮ್ಮ ಹೊಣೆಗಾರಿಕೆಯಲ್ಲಿ ತಪ್ಪು ಮಾಡಿದಾಗ ಸೂಕ್ತ ಮಾರ್ಗದರ್ಶನ ನೀಡಿ ಹಿರಿಯಣ್ಣನಂತೆ ಸರಿದಾರಿಯತ್ತ ಕೈ ಹಿಡಿದು ನಡೆಸುವ ನ್ಯಾಯಾಂಗ, ಈ ಮೂರು ಅಂಗಗಳು ಸಮಾಜ ನಿರ್ಮಾಣದ ನಿಟ್ಟಿನಲ್ಲಿ ಅತ್ಯಂತ ಪ್ರಮುಖ ಪಾತ್ರವಹಿಸುತ್ತವೆ. ಹೀಗಾಗಿ ಜನಪ್ರತಿನಿಧಿಗಳು ಹಾಗೂ ಜನಸೇವಕರು ಬಹುಭಾರದ ಈ ಹೊಣೆಗಾರಿಕೆಯನ್ನು ಹೊರಬೇಕಾದ ಹೆಗಲುಗಳಾಗಿರುವುದರಿಂದ ಸ್ವಾಭಾವಿಕವಾಗಿ ಭ್ರಷ್ಟಾಚಾರ, ಸ್ವಜನಪಕ್ಷಪಾತಗಳಿಂದ ಅಕ್ಷರಶಃ ದೂರ ಉಳಿದು ಕಾಯಕದ ಹಾದಿಯಲ್ಲಿ ಪಾರದರ್ಶಕತೆಯನ್ನು ಅಳವಡಿಸಿಕೊಂಡು ಹಗಲಿರುಳು ಶ್ರಮಿಸಿದರೆ ಮಾತ್ರ ರಾಜ್ಯದ ಅಭ್ಯುದಯ ಸಾಧ್ಯವೆಂಬುದು ಇದರ ಸರಳಾರ್ಥ. ಒಂದು ವೇಳೆ ಈ ಭಾರ ಹೊರಬೇಕಾದ ಸಂವಿಧಾನದ ತ್ರಿಕೋನಗಳು ಕಾರ್ಯದಕ್ಷತೆ ಮತ್ತು ಹಸ್ತಶುದ್ಧತೆಯನ್ನು ಪಾಲಿಸುವಲ್ಲಿ ವಿಫಲವಾದರೆ ರಾಜ್ಯದ ಸಾಮಾಜಿಕ, ಆರ್ಥಿಕ, ಆಡಳಿತಾತ್ಮಕ ಹಾಗೂ ಸಾಂಸ್ಕೃತಿಕ ವ್ಯವಸ್ಥೆ ಪತನಗೊಳ್ಳುವುದು ಸತ್ಯ. ಈ ನಿಜ ಕಾರಣದಿಂದಲೇ ಬದ್ಧತೆ, ಕಾಯಕ ನಿಷ್ಠೆ, ಹಸ್ತ ಶುದ್ಧತೆಯ ಅಂಶಗಳು ಸಂವಿಧಾನದ ಅಡಿಪಾಯವಾಗಿದ್ದು ಇವುಗಳ ಬುನಾದಿಯ ಮೇಲೆ ದೇಶದ ಭವಿಷ್ಯ ನಿಂತಿದೆ ಎಂದರೆ ಕಿಂಚಿತ್ತೂ ಅತಿಶಯೋಕ್ತಿಯಾಗದು. ಇಂದು ರಾಜ್ಯಾದ್ಯಂತ

ಅತಿ ಹೆಚ್ಚು ಚರ್ಚೆಗೊಳಗಾಗುತ್ತಿರುವ ಉತ್ತಮ ಆಡಳಿತ ಪ್ರಾಮುಖ್ಯತೆ ಪಡೆದುಕೊಳ್ಳುತ್ತಿದ್ದರೂ, ನಿಜ ಅರ್ಥದಲ್ಲಿ ಅದು ಅಷ್ಟೇ ಜಟಿಲಗೊಂಡಿದೆ ಎಂಬುದನ್ನು ಕೂಡ ನಾವಿಂದು ಮನದಟ್ಟು ಮಾಡಿಕೊಳ್ಳಬೇಕಾಗಿದೆ.

ರಾಜ್ಯ ಪ್ರಗತಿಯ ಜವಾಬ್ದಾರಿ ಹೊತ್ತ ಜನಪ್ರತಿನಿಧಿಗಳು ಮತ್ತು ಜನಸೇವಕರು ಚುನಾವಣೆಯ ಮುನ್ನವೇ ಆಸ್ತಿ ಮತ್ತು ಋಣಭಾರದ ಘೋಷಣೆ ಮಾಡಿಕೊಳ್ಳಬೇಕಾದುದು ಸಂವಿಧಾನಾತ್ಮಕ ಕರ್ತವ್ಯವೂ ಹೌದು. ಇದು, ಕಾಯಕದ ಹಾದಿಯಲ್ಲಿ ತೊಡಗಿಸಿಕೊಳ್ಳುವ ಮುನ್ನವೇ ಸಾರ್ವಜನಿಕರೆದುರು ತಮಗೆ ತಾವೇ ಹಿಡಿದುಕೊಳ್ಳುವ ಕನ್ನಡಿಯಾಗಿದ್ದು ತನ್ನ ಪ್ರತಿಬಿಂಬವು ಸೇವೆಯ ಪ್ರಥಮ ದಿನದಿಂದ ಕೊನೆಯವರೆಗೂ ಹೀಗೆ ಇರುತ್ತದೆ ಎಂದು ಸಾರ್ವತ್ರಿಕವಾಗಿ ಸಾರಿಕೊಳ್ಳುವ ಪವಿತ್ರ ಪ್ರಕ್ರಿಯೆ. ಈ ಪ್ರಕ್ರಿಯೆಯ ಚೌಕಟ್ಟಿಗೆ ಇವರು ಒಳಪಡಬೇಕೆ? ಅವರು ಒಳಪಡಬೇಕೆ? ಇವರನ್ನೇಕೆ ಇಂತಹ ಚೌಕಟ್ಟಿನಿಂದ ವಿನಾಯಿತಿ ನೀಡಬಾರದು? ಅವರಿಗೇಕೆ ರಿಯಾಯಿತಿ ಕೊಡಬಾರದು? ಎಂಬ ಚರ್ಚೆ ಕೂಡ ಇಂದು ಮಹತ್ವ ಪಡೆದುಕೊಂಡಿರುವುದು ನಿಜಕ್ಕೂ ವಿಷಾದನೀಯ. 'ಹೌದು. ಇದು ಅವಶ್ಯಕ' ಎಂಬ ಸತ್ಯವನ್ನು ದಿಟ್ಟವಾಗಿ ಒಪ್ಪಿಕೊಳ್ಳದ ಯಾವುದೇ ನೆಪಗಳು ಪ್ರಜಾ ಪ್ರಭುತ್ವ ಹಾಗೂ ಸಂವಿಧಾನಕ್ಕೆ ಅಪಾಯ ಹಾಗೂ ಅಪಮಾನ ಎನ್ನಬಹುದು.

ಈ ಹಂತದಲ್ಲಿ ನಮ್ಮ ರಾಜ್ಯದ ಬಸವಣ್ಣ ನೆನಪಾಗುತ್ತಾರೆ, ನಮಗೆಲ್ಲರಿಗೂ ತಿಳಿದಿರುವಂತೆ ಬಸವಣ್ಣ ಇಂದಿಗೆ ೮೫೦ ವರ್ಷಗಳ ಹಿಂದೆ ನಮ್ಮ ದೇಶ ಕಂಡ ಮಹಾನ್ ಚೇತನ. ಇವರು ತಮ್ಮ ಹಸ್ತ ಶುದ್ಧತೆ ಮತ್ತು ಕಾಯಕ ನಿಷ್ಠೆಗಳಿಂದ ನಮ್ಮ ನಾಡಿನಲ್ಲಿ ಪಾರದರ್ಶಕ ಹೆಜ್ಜೆ ಗುರುತುಗಳನ್ನು ಬಿಟ್ಟು ಹೋಗಿದ್ದಾರೆ. ಇವರು ಇಡೀ ಭರತಖಂಡದಲ್ಲಿ ಸಾಮಾಜಿಕ ಸಮಾನತೆ ಮತ್ತು ಸಾಮಾಜಿಕ ನ್ಯಾಯಗಳನ್ನು ಎತ್ತಿ ಹಿಡಿದ ಮೊಟ್ಟ ಮೊದಲ ಹರಿಕಾರರೂ ಹೌದು. ಬಿಜ್ಜಳ ದೊರೆ, ಬಸವಣ್ಣನವರನ್ನು ತನ್ನ ಸಂಸ್ಥಾನದ ಮಹಾಮಂತ್ರಿಯ ಹುದ್ದೆಯನ್ನು ವಹಿಸಿಕೊಳ್ಳಬೇಕೆಂದು ಅಹ್ವಾನಿಸಿದಾಗ, ಧರ್ಮ ಸನ್ಯಾಸಿಯಾದ ತನಗೇಕೆ ಮಹಾಮಂತ್ರಿಯ ಸಿಂಹಾಸನ ಎಂದು ಬಸವಣ್ಣ ಬಿಜ್ಜಳ ದೊರೆಯ ಅಹ್ವಾನವನ್ನು ನಯವಾಗಿಯೇ ನಿರಾಕರಿಸುತ್ತಾರೆ. ನಿರ್ಮೋಹ, ನಿರ್ಲಿಪ್ತತೆಯ ಉತ್ತುಂಗ ಸ್ಥಿತಿಯಲ್ಲವೇ ಇದು! ಆದರೂ ದೊರೆಯ ಒತ್ತಾಯವನ್ನು ಗೌರವಿಸಿ ಮಹಾಮಂತ್ರಿ ಸ್ಥಾನವನ್ನು ಒಪ್ಪಿಕೊಂಡ ಬಸವಣ್ಣ ಆ ಪದವಿಯನ್ನು ಅಲಂಕರಿಸುವ ಮೊದಲು ಸ್ವೀಕರಿಸಿದ ಪ್ರಮಾಣ ವಚನವಾದರೂ ಎಂತಹುದು ನೋಡಿ.

ಅನ್ನದೊಳಗೊಂದಗುಳ
ಚಿನ್ನದೊಳಗೊಂದೊರೆಯ
ಸೀರೆಯೊಳಗೊಂದೆಳೆಯ ಇಂದಿಂಗೆ, ನಾಳಿಂಗೆ

ಮಡದಿ ಮಕ್ಕಳಿಗೆಂದು ಕದಿದೆನಾದೊಡೆ
ತಲೆ ದಂಡ! ತಲೆ ದಂಡ!! ತಲೆ ದಂಡ!!!

ಇದು ಬಸವಣ್ಣನ ಪರಿ, ಅವನಿಂದ ಮಾತ್ರ ಸರಿ, ಏನಿದರ ಅರ್ಥ? ಇದು, ಮಹಾಮಂತ್ರಿಯ ಸ್ಥಾನವನ್ನು ಅಲಂಕರಿಸುವ ಮುನ್ನ ಬಸವಣ್ಣ ತಾನು ಸಾರ್ವತ್ರಿಕ ಬದುಕಿನಲ್ಲಿ ನಡೆದುಕೊಳ್ಳುವ ರೀತಿಯನ್ನು ಲೋಕಕ್ಕೆ ತೋರಿಸಿಕೊಟ್ಟ ಮಹಾಪಥ. ಮಹಾಮಂತ್ರಿಯ ಸ್ಥಾನಕ್ಕೇರಿದ ಕ್ಷಣದಿಂದ ಹಿಡಿದು ಆ ಪದವಿಯಿಂದ ವಿಮುಕ್ತನಾಗುವ ತನಕ ತನ್ನ ಇಡೀ ಸೇವಾವಧಿಯಲ್ಲಿ ರಾಜ್ಯದ ಬೊಕ್ಕಸದ ಹಣದಿಂದ ಅಂದು ತನ್ನಲ್ಲಿದ್ದ ಆಸ್ತಿ ಪಾಸ್ತಿಗಳ ಪ್ರಮಾಣದಲ್ಲಿ ಇನಿತಾದರೂ ಹೆಚ್ಚಿಸಿ ಕೊಳ್ಳುವುದಿಲ್ಲವೆಂಬ ಘೋಷಣೆ. ಮಹಾಮಂತ್ರಿಯ ಸ್ಥಾನವನ್ನು ಅಲಂಕರಿಸಿದ ಜನಸೇವಕನಾಗಿ, ತಾನೇನಾದರೂ ಕಾಯಕನಿಷ್ಠೆಯನ್ನು ಮರೆತು ಭ್ರಷ್ಟಾಚಾರಕ್ಕೆ ಒಳಗಾಗಿ ಸರ್ಕಾರದ ಅಥವಾ ಸಾರ್ವಜನಿಕರ ಹಣದಿಂದ, ಉಣ್ಣುವ ಅನ್ನದಲ್ಲಿ ಒಂದು ಅಗುಳನ್ನು, ಒಡವೆಗಳಲ್ಲಿ ಒಂದು ಒರೆಯಷ್ಟನ್ನು, ವಸ್ತ್ರಗಳಲ್ಲಿ ಒಂದು ಎಳೆಯನ್ನು ಅಕ್ರಮವಾಗಿ ಹೆಚ್ಚಿಸಿಕೊಂಡ ಪಕ್ಷದಲ್ಲಿ ಆ ಕ್ಷಣ ತನ್ನ ತಲೆಯನ್ನೇ ದಂಡವನ್ನಾಗಿ ನೀಡುವೆ ಎಂದು ಬಸವಣ್ಣ ಸ್ವೀಕರಿಸಿದ ಈ ಪ್ರಮಾಣ ವಚನ ಅಂದು.. ಇಂದು.. ಮುಂದು... ಎಂದೆಂದೂ ಪ್ರಸ್ತುತ ಹಾಗೂ ಇದಲ್ಲವೇ ಸಾರ್ವಜನಿಕ ಸೇವೆಯ ಪಾರದರ್ಶಕತೆ?

ಸರ್ಕಾರದ ಹೊಣೆಹೊತ್ತ ವರ್ಗದವರು ಅವಿವಾಹಿತರಾಗಿ ಉಳಿಯುವುದು ಕಡ್ಡಾಯ; ವಿವಾಹಿತರಾದರೆ ಮಡದಿ, ಮಕ್ಕಳು, ತಾನು, ತನ್ನದೆಂಬ ವ್ಯಾಮೋಹಕ್ಕೆ ಒಳಗಾಗುತ್ತಾರೆಂದು **'ದಿ ರಿಪಬ್ಲಿಕ್'** ಎಂಬ ಮಹಾಗ್ರಂಥದಲ್ಲಿ ಕ್ರಿಪೂ ೪೨೭ರ ಅವಧಿಯಲ್ಲಿ ಆತಂಕ ವ್ಯಕ್ತಪಡಿಸಿದ ರಾಜಕೀಯ ತತ್ವಜ್ಞಾನಿ ಪ್ಲೇಟೋ ಒಂದೆಡೆಯಾದರೆ, ಕಾಯಕನಿಷ್ಠೆ ಮತ್ತು ಸೇವಾಬದ್ಧತೆಯ ಕರ್ಮ ಸಿದ್ಧಾಂತಗಳನ್ನು ಪಾಲಿಸುವವನಿಗೆ ಸಂಸಾರವಿದ್ದರೂ ಅದಾವ ತೊಡಕು ಎಂದು 'ಇಂದಿಂಗೆ, ನಾಳಿಂಗೆ ಮಡದಿ ಮಕ್ಕಳಿಗೆಂದು ಕದಿದನಾದೊಡೆ ತಲೆದಂಡ' ಎಂದು ಘೋಷಿಸುವ ಮೂಲಕ ಬಸವಣ್ಣ, ಪ್ಲೇಟೋನ ಚಿಂತನೆಗಳಿಗಿಂತಲೂ ಬಹು ಹೆಜ್ಜೆ ಮುಂದೆ ಸಾಗಿ ಸೇವಾಕ್ಷೇತ್ರದಲ್ಲಿ ಬದ್ಧತೆ ಮುಖ್ಯ ಎಂದು ತೋರಿಸಿಕೊಡುತ್ತಾರೆ.

ಭ್ರಷ್ಟಾಚಾರ ನಮ್ಮ ಸಮಾಜದಲ್ಲಿ ಯಾವ ಪರಿ ಹರಡಿಕೊಂಡಿದೆ ಎಂದರೆ ಸಮಾಜವನ್ನು ಹಾಗೂ ನಮ್ಮ ಆತ್ಮಸಾಕ್ಷಿಯನ್ನು ನಮ್ಮ ಅರಿವಿಲ್ಲದೇ ಅದು ಕಲುಷಿತಗೊಳಿಸುತ್ತಾ ಹೊರಟಿದೆ. ಹತಾಶೆ ಮತ್ತು ಅಸಹಾಯಕತೆ ಜನರಲ್ಲಿ ಹೆಚ್ಚುತ್ತಲೇ ಇದೆ. ಆದರೆ ಇದಾವುದನ್ನು ಲೆಕ್ಕಿಸದೇ ನಮ್ಮ ಆಡಳಿತ ವರ್ಗ ಹಗರಣ ಮತ್ತು ಭ್ರಷ್ಟಾಚಾರಗಳಲ್ಲಿ ತಮ್ಮನ್ನು ತೊಡಗಿಸುತ್ತ ಕಾನೂನು ಮತ್ತು ಶಿಕ್ಷೆಗೆ ಹೆದರದೆ ನಿಶ್ಚಿಂತೆಯಿಂದ ಮುನ್ನುಗ್ಗುತ್ತಿದೆ. ತಪ್ಪಿತಸ್ಥರಿಗೆ ಕ್ಲೀನ್‌ಚಿಟ್ ನೀಡುವ ಸರಕಾರ, ನಿಷ್ಠಾವಂತ ಅಧಿಕಾರಿಗಳನ್ನು ದಂಡಿಸುತ್ತಿದೆ. ಉದ್ಯಮಿ ರತನ ಟಾಟಾರ ಇತ್ತೀಚಿನ

ಈ ಹೇಳಿಕೆಯಾದ 'ಈ ದೇಶಕ್ಕೆ ನಿಯಂತ್ರಣ, ನಾಯಕತ್ವ ಮತ್ತು ನಿರ್ದೇಶನದ ತುರ್ತು ಅವಶ್ಯಕತೆ ಇದೆ. ಏಕೆಂದರೆ ನಮಗೆ ಗೊತ್ತಿದೆ. ನಾವು ಬದಲಾಗದಿದ್ದರೆ, ನಮ್ಮ ದೇಶದ ಪರಿಸ್ಥಿತಿ ಮತ್ತಷ್ಟು ಹಾಳಾಗಲಿದೆ' ಎನ್ನುವ ಮಾತು ಇದಕ್ಕೆ ಪುಷ್ಟಿಕೊಡುವಂತಿದೆ. ಭ್ರಷ್ಟಾಚಾರವನ್ನು ನಿರ್ಮೂಲನೆ ಮಾಡಲು ಮನಸ್ಸಿರುವ ಮತ್ತು ಕಾನೂನು ಸುವ್ಯವಸ್ಥೆಯನ್ನು ಕಾಪಾಡಲು ಸರಿಯಾದ ಮಾರ್ಗಸೂಚಿಗಳನ್ನು ತಯಾರಿಸಬಲ್ಲ ಆಡಳಿತ ನಮಗೆ ಬೇಕು. ತಮ್ಮ ವಿರೋಧಿಗಳನ್ನು ದೂಷಿಸುವ ಕಾರ್ಯವೊಂದನ್ನೇ ಕಾಯಕ ಮಾಡಿಕೊಳ್ಳದೇ, ಸಮಸ್ಯೆಗಳಿಗೆ ಪರಿಹಾರ ಸೂಚಿಸಬಲ್ಲ ರಾಜಕೀಯ ಪಕ್ಷಗಳು ನಮಗೆ ಬೇಕು. ತಿರಸ್ಕಾರಕ್ಕಿಂತ ಹೆಚ್ಚು ವಿಶಾಲ ದೃಷ್ಟಿಯನ್ನು ಪ್ರದರ್ಶಿಸುವ ನಾಯಕತ್ವ ನಮಗೆ ಬೇಕು. ಉತ್ತಮ ಮೂಲ ಸೌಕರ್ಯ, ಶಿಕ್ಷಣ ಮತ್ತು ಆರೋಗ್ಯ ಪೂರ್ಣ ವಾತಾವರಣ ನಿರ್ಮಿಸುವಂಥ ಸಮಾಜ ನಮ್ಮದಾಗಿರಬೇಕು. ಗುಣಾತ್ಮಕ ಪರಿಸರದಲ್ಲಿ ವ್ಯಕ್ತಿಯ ಕ್ರಿಯಾಶೀಲತೆ ಹೆಚ್ಚು ಅಭಿವ್ಯಕ್ತ ಆಗುತ್ತದೆ. ಅಂತಹ ಉತ್ತಮ ಪರಿಸರವನ್ನು ನೀಡಬಲ್ಲ, ಅಂತಹ ಕನಸುಗಳನ್ನು ಬಿತ್ತಬಲ್ಲ, ಯೋಜನೆಗಳನ್ನು ಸೃಷ್ಟಿಸಬಲ್ಲ ದೂರದೃಷ್ಟಿಯ ನಾಯಕತ್ವ ನಮ್ಮ ಸಮಾಜದಲ್ಲಿ ಹುಟ್ಟಬೇಕು. ನಮ್ಮ ವಿದ್ಯಾವಂತ ಯುವ ಸಮೂಹವು ನೈಸರ್ಗಿಕ ಸಂಪತ್ತನ್ನು ಬಳಸಿಕೊಂಡು ಹೆಚ್ಚು ಉದ್ಯೋಗ ಮತ್ತು ಬೆಳವಣಿಗೆಗೆ ಕಾರಣವಾಗುವಂತಾಗಬೇಕು.

ಇಂಗ್ಲೀಷ್ ಮತ್ತು ಇರ್‍ನೆಟ್ ಬಳಕೆಯಿಂದಾಗಿ ವಿಶ್ವ ನಾಗರಿಕ ಸಮಾಜ ಸೃಷ್ಟಿಯಾಯಿತು. ಇದರಿಂದ ಹೇಗೆ, ಎಲ್ಲಿ, ಎತ್ತ, ಯಾವಾಗ ಎಂಬ ಪ್ರಶ್ನೆಗಳನ್ನು ಕೇಳುವಂತಾಯ್ತು. ಭ್ರಷ್ಟಾಚಾರದ ವಿರುದ್ಧ ಜಾಗೃತಿ ಮೂಡಿಸುವುದಕ್ಕೆ ಇವು ಕೂಡ ಕಾರಣವಾದವು. ಭ್ರಷ್ಟಾಚಾರದ ವಿಚಾರಕ್ಕೆ ಬಂದರೆ, ಇದನ್ನೂ ಇನ್ನೂ ಮುಂದಕ್ಕೆ ಕೊಂಡೊಯ್ಯುವ ಮನಃಸ್ಥಿತಿ ನಮ್ಮಲಿಲ್ಲ. ಒಂದೇ ಏಟಿಗೆ ಹಳೆಯ ನೀತಿ, ನಿಯಮಗಳಿಂದ ಭ್ರಷ್ಟಾಚಾರ ನಿರ್ಮೂಲನೆ ಮಾಡಲು ಸಾಧ್ಯವಿಲ್ಲ ಎಂಬ ಅರಿವು ಜನರಲ್ಲಿ ಇತ್ತೀಚೆಗೆ ಮೂಡುತ್ತಿದೆ, ಈ ವಿಚಾರದ ಬಗ್ಗೆ ಚಿಂತಿಸಿ, ವಿಶ್ಲೇಷಣೆ ಗೊಳಪಡಿಸಿ ಇದನ್ನು ನಿರ್ಮೂಲನೆಗೊಳಿಸುವ ಮೂಲಕ ಉತ್ತಮ ಆಡಳಿತ ನೀಡಲು ಸ್ಪಷ್ಟ ಹೆಜ್ಜೆಗಳನ್ನಿಡಬೇಕಾದ ಅವಶ್ಯಕತೆಯಿದೆ. ಬೆಂಗಳೂರಿನ ಐಐಎಂನ ಪ್ರೊ. ವೈದ್ಯನಾಥನ್‌ರವರು ೧೯೯೦ರಿಂದ ಈ ಸಮಸ್ಯೆಗೆ ಕಾರಣಗಳು ಮತ್ತು ಸಮಸ್ಯೆ ಪಸರಿಸುವ ವ್ಯಾಪ್ತಿಯ ಕುರಿತು ಸಂಶೋಧನೆ ನಡೆಸಿದ್ದಾರೆ. ಭಾರತದಲ್ಲಿ ಭ್ರಷ್ಟಾಚಾರ ಇಷ್ಟೊಂದು ಪ್ರಮಾಣದಲ್ಲಿ ಬೇರೂರುವುದಕ್ಕೆ ಪ್ರಮುಖ ಕಾರಣಗಳನ್ನು ಅನ್ವೇಷಿಸುವುದು ಮತ್ತು ಭ್ರಷ್ಟಾಚಾರವನ್ನು ನಿರ್ಮೂಲನೆ ಮಾಡುವುದಕ್ಕೆ ಪರಿಹಾರೋಪಾಯಗಳನ್ನು ಕಂಡು ಹಿಡಿಯುವುದು ಇವರ ಮುಖ್ಯ ಉದ್ದೇಶ. ಆದರೂ ಇವರು ಸ್ಪಷ್ಟ ಕಾರಣಗಳ ಅನ್ವೇಷಣೆಯಲ್ಲಿ ಈವರೆಗೂ ಯಶಸ್ಸು ಸಾಧಿಸಿಲ್ಲ.

ಭ್ರಷ್ಟಾಚಾರದ ವಿರುದ್ಧ ಹೋರಾಡುವುದಕ್ಕೆ ಬಹಳಷ್ಟು ಜನರಿಗೆ ಅಣ್ಣಾ ಹಜಾರೆ ಅವರು ಇದೀಗ ಮಾದರಿ ವ್ಯಕ್ತಿಯಾಗಿ ಕಾಣಿಸಿಕೊಂಡಿದ್ದಾರೆ. ಭ್ರಷ್ಟಾಚಾರದ ವಿರುದ್ಧ ಬಹಳಷ್ಟು ವ್ಯಕ್ತಿಗಳು

ಈ ಹಿಂದೆ ಸದಾ ಧ್ವನಿ ಎತ್ತುತ್ತಲೇ ಬಂದಿದ್ದರೂ ಸಹ ಇತ್ತೀಚಿನ ದಿನಗಳವರೆಗೆ ಅವರ ಕೂಗು ಕೇವಲ ಅರಣ್ಯ ರೋಧನವಾಗಿತ್ತು. ಇತ್ತೀಚೆಗೆ ಭಾರತೀಯ ನಾಗರಿಕ ಸಮಾಜದಲ್ಲಿ ಈ ಬಗ್ಗೆ ಜಾಗೃತಿ ಉಂಟಾಗುತ್ತಿದೆ. ಈ ಜಾಗೃತಿ ಬಲಗೊಂಡಿದ್ದೇ ಆದಲ್ಲಿ ಭಾರತದಲ್ಲಿ ಭ್ರಷ್ಟಾಚಾರದ ಬೇರುಗಳ ಅವಸಾನ ಶುರುವಾಗಬಹುದು. ಪರಿಶುದ್ಧ ಪ್ರಜಾ ತಾಂತ್ರಿಕತೆ, ಜಾತ್ಯಾತೀತತೆ ಮತ್ತು ಅಭಿವೃದ್ಧಿಯ ಪಥದ ಧ್ಯೇಯವಿಟ್ಟುಕೊಂಡು ಸಾಗಿದರೆ ಉತ್ತಮ ಆಡಳಿತವನ್ನು ನಾವು ಕಾಣಬಹುದಾಗಿದೆ.

ರಾಜಕಾರಣಿಗಳು ಚುನಾವಣೆ ಸಮಯದಲ್ಲಿ ಪೊಳ್ಳು ಭರವಸೆಗಳ ಹೊಳೆಗಳನ್ನೇ ಹರಿಸಿ ಜನತೆಯನ್ನು ವಂಚಿಸುತ್ತಾರೆ. ಸವಲತ್ತುಗಳಿಂದ ಜನ ಸೋಮಾರಿಯಾಗಿ ದುಡಿಯುವುದನ್ನು ಮರೆತಿದ್ದಾರೆ. ದುಡಿಮೆ ಇಲ್ಲವೆಂದ ಮೇಲೆ ಯಾವ ದೇಶ ಪ್ರಗತಿ ಹೊಂದಲು ಸಾಧ್ಯ? ಬದುಕಬೇಕಾದರೆ 'ನೀ ದುಡಿ' ಎಂದು ಚೀನಾ ದೇಶ ಹೇಳಿತು. ಅನಿವಾರ್ಯವಾಗಿ ಅಲ್ಲಿಯ ಜನ ಹಗಲು ಮತ್ತು ರಾತ್ರಿ ದುಡಿಯಲಾರಂಭಿಸಿದರು. ದುಡಿತದಲ್ಲಿ ಅವರು ಅಭಿವೃದ್ಧಿ ಕಂಡರು. ಅದರ ಫಲವೇ ಇಂದು ಚೀನಾ ದೇಶ ಜಗತ್ತಿನ ಬಲಾಢ್ಯ ರಾಷ್ಟ್ರಗಳ ಸಾಲಿನಲ್ಲಿ ನಿಂತಿರುವುದು. ಎರಡನೆಯ ಮಹಾಯುದ್ದದಿಂದ ನುಚ್ಚು ನೂರಾಗಿದ್ದ ಜರ್ಮನಿ ಮತ್ತೆ ಬಲಿಷ್ಟ ರಾಷ್ಟ್ರವಾಗಲು ಕಾರಣವಾಗಿದ್ದು ಅಲ್ಲಿಯವರು ದಿನದ ಹದಿನಾರು ಗಂಟೆಗಳನ್ನು ಸಮರ್ಪಕವಾಗಿ ಬಳಸಿಕೊಂಡಿದ್ದರಿಂದ. ಆಡಳಿತ ಚುಕ್ಕಾಣಿ ಹಿಡಿದವರ ಪ್ರಾಮಾಣಿಕತೆ ಮತ್ತು ಜನಪರ ಕಾರ್ಯಕ್ರಮಗಳಿಂದ ಹಲವಾರು ರಾಷ್ಟ್ರಗಳು ಪ್ರಗತಿಯ ನಾಗಾಲೋಟ ಕಂಡವು. ಇಂತಹ ರಾಷ್ಟ್ರಗಳಲ್ಲಿ ಕಾನೂನು ಸುವ್ಯವಸ್ಥೆ ತುಂಬ ಬಿಗುವಿನದಾಗಿದ್ದು ಸಹ ಗಮನಾರ್ಹ.

ಇಸ್ರೇಲ್‌ನದ್ದು ಮತ್ತೊಂದು ರೀತಿಯ ಅದ್ಭುತ ಪವಾಡ. ೧೯೪೮ರಲ್ಲಿ ಉದಯವಾದ ಈ ಸಣ್ಣ ದೇಶ ಮರಳುಗಾಡನ್ನೇ ಫಲವತ್ತಾದ ನಾಡನ್ನಾಗಿ ಪರಿವರ್ತಿಸಿತು. ಸಮುದ್ರದ ಉಪ್ಪು ನೀರನ್ನು ಶುದ್ಧೀಕರಿಸಿ, ಹಣ್ಣಿನ ಗಿಡಗಳನ್ನು ನೆಟ್ಟು ಹನಿ ನೀರಾವರಿಯಿಂದ ತನ್ನ ನಾಡನ್ನು ನಂದನವನವನ್ನಾಗಿ ರೂಪಿಸಿತು. ಇಂದು ಇಡೀ ಯುರೋಪ ಖಂಡಕ್ಕೆ ಹಣ್ಣು ಪೂರೈಸುವ ಏಕೈಕ ರಾಷ್ಟ್ರ ಇಸ್ರೇಲ! ಇದಕ್ಕೆ ವ್ಯತಿರಿಕ್ತ ಉದಾಹರಣೆ ಎಂದರೆ ಶಾಂತಿಸಾಗರದ ಮಧ್ಯದಲ್ಲಿರುವ ಅಂಡಾಕಾರವುಳ್ಳ ಕೇವಲ ೨೧ ಚದುರ ಕಿಲೋ ಮೀಟರ್ ವಿಸ್ತಾರವಾದ ೬-೭ ಸಾವಿರ ಜನಸಂಖ್ಯೆಯ ನೌರು ದೇಶ ಈ ಹಿಂದೆ ಜಗತ್ತಿನ ಶ್ರೀಮಂತ ರಾಷ್ಟ್ರಗಳಲ್ಲಿ ಇದು ಕೂಡ ಒಂದಾಗಿತ್ತು. ಆದರೆ ಜನರ ಮಿತಿ ಮಿರಿದ ಸುಖಾಪೇಕ್ಷೆ, ಮೈಗಳ್ಳತನ, ದೂರದರ್ಶಿತ್ವವಿಲ್ಲದ ದುರ್ಬಲ ಆಡಳಿತದಿಂದ ತತ್ತರಿಸಿ ಇಂದು ದುರಂತ ರಾಷ್ಟ್ರದ ಸಾಲಿಗೆ ಸೇರಿದೆ. ಸ್ವಾರ್ಥ ರಾಜಕಾರಣಿಗಳ ವಿವೇಚನಾರಹಿತ ದುರ್ಬಲ ಆಡಳಿತ, ಮೀತಿ ಮಿರಿದ ಭ್ರಷ್ಟಾಚಾರದಿಂದ ಸಮಾಜದ ಸ್ವಾಸ್ಥ್ಯ ಹಾಳಾದ್ದರ ಫಲವಾಗಿ ನೌರು ಸೇರಿದಂತೆ ಹಲವಾರು ರಾಷ್ಟ್ರಗಳು ಇಂದು

ವಿನಾಶದ ಅಂಚಿನತ್ತ ಸಾಗುತ್ತಿವೆ. ದೇಶದ ಆಡಳಿತ ಯಂತ್ರ ಸಮರ್ಥವಾಗಿ ಹಾಗೂ ಹುರುಪಿನಿಂದ ಕೆಲಸ ಮಾಡಲು ಹರಿತ ಬುದ್ಧಿಯ ಸೂಕ್ಷ್ಮ ಪ್ರಜ್ಞೆಯ, ವಿಶಾಲ ಮನೋಭಾವದ ಯುವಕರ ಪಡೆ ಬೇಕು. ಇಂತಹವರಿಂದ ಆಡಳಿತಕ್ಕೆ ಬಿಗುವು ಬರುತ್ತದೆ ಎಂಬುದು ಬ್ರಿಟಿಷರ ಕಾಲದಿಂದಲೂ ಪ್ರಚಲಿತದಲ್ಲಿದ್ದ ನಂಬುಗೆ

ಭಾರತದಲ್ಲಿ ಸಂಭವಿಸಿರುವ ಪ್ರಮುಖ ಹಗರಣಗಳು

- ಜೀಪು ಹಗರಣ, ೧೯೪೮
- ಸೈಕಲ್ ಆಮದು ಹಗರಣ, ೧೯೫೧
- ಬನಾರಸ್ ಹಿಂದೂ ಯೂನಿವರ್ಸಿಟಿ ಹಗರಣ, ೧೯೫೬
- ಮುಂದ್ರಾ ಮೆಸ್ ಹಗರಣ, ೧೯೫೮
- ತೇಜಾ ಲೋನ್ಸ್ ಹಗರಣ, ೧೯೬೦
- ಖೈರೋನ್ ಹಗರಣ, ೧೯೬೩
- ಬಿಜು ಪಟ್ನಾಯಕ್ ಹಗರಣ, ೧೯೬೫
- ಮಾರುತಿ ಸ್ಕ್ಯಾಂಡಲ್, ೧೯೭೪
- ಇಂಡಿಯನ್ ಆಯಿಲ್ ಕಾರ್ಪೋರೇಷನ್‌ಗೆ ಸಂಬಂಧಿಸಿದ ಕುವೋ ತೈಲ ಹಗರಣ, ೧೯೭೬
- ಸಿಮೆಂಟ್ ಹಗರಣ. ೧೯೮೧
- ಹೆಚ್.ಡಿ.ಡಬ್ಲ್ಯು. ಕಮಿಷನ್ನಿನ ಹಗರಣ, ೧೯೮೭
- ಬೋಫೋರ್ಸ್ ಹಗರಣ, ೧೯೮೭
- ಸೆಂಟ್ ಕಿಟ್ಸ್ ಫೋರ್ಜರಿ ಹಗರಣ, ೧೯೮೯
- ಏರ್ ಬಸ್ ಹಗರಣ, ೧೯೯೦
- ಹರ್ಷದ್ ಮೆಹ್ತಾನ್ ಶೇರು ಹಗರಣ ೧೯೯೨
- ಜೆ.ಎಂ.ಎಂ. ಲಂಚ ಹಗರಣ, ೧೯೯೩
- ಸಕ್ಕರೆ ಆಮದಿನ ಹಗರಣ, ೧೯೯೪
- ಟೆಲಿಕಾಂ ಹಗರಣ, ೧೯೯೬
- ಮೇವು ಹಗರಣ, ೧೯೯೬
- ಹವಾಲಾ ಹಗರಣ, ೧೯೯೬
- ಯೂರಿಯಾ ಹಗರಣ, ೧೯೯೬

- ಶವ ಪೆಟ್ಟಿಗೆ ಹಗರಣ ೧೯೯೯
- ಮ್ಯಾಚ್ ಫಿಕ್ಸಿಂಗ್ ಹಗರಣ, ೨೦೦೦
- ತೆಹಲ್ಕಾ ಹಗರಣ, ೨೦೦೧
- ಸ್ಟಾಕ್ ಮಾರ್ಕೆಟ್ ಹಗರಣ, ೨೦೦೧
- ಹೋಮ್ ಟ್ರೇಡ್ ಹಗರಣ, ೨೦೦೨
- ತಾಜ್ ಕಾರಿಡಾರ್ ಹಗರಣ—೨೦೦೨
- ಛಾಪಾ ಕಾಗದ ಹಗರಣ, ೨೦೦೩
- ಅಕ್ಕಿ ರಫ್ತು ಹಗರಣ–೨೦೦೪
- ಆಹಾರಕ್ಕಾಗಿ ತೈಲ ಹಗರಣ, ೨೦೦೫.
- ಪೆಟ್ರೋಲ ಬಂಕ್ ಹಗರಣ– ೨೦೦೫
- ರೂ.೭೦,೦೦೦ ಕೋಟಿ ಕಾಮನ್‌ವೆಲ್ತ ಹಗರಣ ೨೦೧೦
- ಆಹಾರ ಧಾನ್ಯಗಳ ಹಗರಣ–೨೦೧೦
- ಕರ್ನಾಟಕ ಕಬ್ಬಿಣದ ಅದಿರು ಹಗರಣ–೨೦೧೦
- ಕೆ.ಐ.ಎ.ಡಿ.ಬಿ ಹಗರಣ–೨೦೧೦
- ರೂ.೧,೭೬,೦೦೦ ಕೋಟಿ ೨ ಜಿ ಸ್ಪೆಕ್ಟ್ರಮ ಹಗರಣ–೨೦೧೧
- ರೂ. ೨೨.೫ ಲಕ್ಷ ಕೋಟಿ ಸ್ವಿಸ್ ಬ್ಯಾಂಕ ಕಪ್ಪು ಹಣ ಹಗರಣ–೨೦೧೧
- ಎಸ್/ಬ್ಯಾಂಡ್/ದೇವಾಸ್ ಹಗರಣ–೨೦೧೧
- ರಿಲಯನ್ಸ ಎನರ್ಜಿ ಹಗರಣ–೨೦೧೧
- ಆದರ್ಶ ಹೌಸಿಂಗ್ ಸೊಸೈಟಿ ಹಗರಣ–೨೦೧೧

ಹೀಗೆ ನೂರಾರು ಹಗರಣಗಳು ದೇಶದಲ್ಲಿ ಸಂಭವಿಸಿವೆ. ಇನ್ನು ಇಪ್ಪತ್ತೊಂದನೆಯ ಶತಮಾನದ ಕುರಿತು ಹೇಳುವುದೇ ಬೇಡ. ಈ ಸಮಯದಲ್ಲಿ ಭಾರತದಲ್ಲಿ ಕಂಡು ಬಂದ ೩ ಜಿ ಸ್ಪೆಕ್ಟ್ರಮ, ಕಲ್ಲಿದ್ದಲು ಗಣಿಗಾರಿಕೆಯಂತಹ ಅನೇಕ ಬೃಹತ್ ಹಗರಣಗಳು ಇಡೀ ವಿಶ್ವದ ಎದುರಿಗೆ ಭಾರತವನ್ನು ತಲೆತಗ್ಗಿಸುವಂತೆ ಮಾಡಿವೆ. ಇತ್ತೀಚಿನ 'ಟ್ರಾನ್ಸಪೆರೆನ್ಸಿ ಇಂಟರನ್ಯಾಷನಲ್' ವರದಿಗಳ ಪ್ರಕಾರ ಭಾರತದ ಭ್ರಷ್ಟಾಚಾರವು ತಲೆತಗ್ಗಿಸಿ ನಿಂತ ಭಾರತವನ್ನು ಇನ್ನಷ್ಟು ತಲೆತಗ್ಗಿಸುವಂತೆ ಮಾಡಿದೆ. 'ಟ್ರಾನ್ಸಪೆರೆನ್ಸಿ ಇಂಟರನ್ಯಾಷನಲ್' ಸಂಸ್ಥೆ ೨೦೧೨ರಲ್ಲಿ ೧೮೪ ದೇಶಗಳ ಸಾರ್ವಜನಿಕ ರಂಗದ ಭ್ರಷ್ಟಾಚಾರದ ಕುರಿತು ಸಮೀಕ್ಷೆ ನಡೆಸಿದಾಗ ಸೂಚ್ಯಂಕ

ಪಟ್ಟಿಯಲ್ಲಿ ಭಾರತ ೩.೧ ಅಂಕ ಗಳಿಸಿ ೯೪ನೆಯ ಸ್ಥಾನಕ್ಕೇರಿ ಕುಳಿತರೆ ಕರ್ನಾಟಕವು ನಾಲ್ಕನೆಯ ಅತಿಹೆಚ್ಚು ಭ್ರಷ್ಟಾಚಾರದ ರಾಜ್ಯವೆನಿಸಿದೆ.ರಾಜ್ಯದಲ್ಲಿ ಇತ್ತೀಚೆಗೆ ಹಲವಾರು ದೊಡ್ಡ ಹಗರಣಗಳು ನಡೆದಿವೆ.ಅವುಗಳಲ್ಲಿ ಪ್ರಮುಖವಾದವುಗಳೆಂದರೆ ಕಬ್ಬಿಣದ ಅದಿರಿನ ಅಕ್ರಮ ಗಣಿಗಾರಿಕೆ, ಕೆಐಎಡಿಬಿ ಹಗರಣ, ಬಿಬಿಎಂಪಿ ಹಗರಣ, ಛಾಪಾ ಕಾಗದದ ಹಗರಣ ಮುಂತಾದವುಗಳನ್ನು ಹೆಸರಿಸಬಹುದು. ೧೯೮೬ ರಿಂದ ಈ ೨೦೧೩ರ ವರೆಗೆ ಸುಮಾರು ಒಂದೂವರೆ ಲಕ್ಷ ಕೋಟಿಯ ಹಗರಣಗಳು ರಾಜ್ಯದಲ್ಲಿ ನಡೆದಿವೆ ಎಂದು ಪ್ರೊ ವೈದ್ಯನಾಥನ್‌ರವರು ತಮ್ಮ ಅಧ್ಯಯನದಲ್ಲಿ ತಿಳಿಸಿದ್ದಾರೆ. ಹಾಗಾದರೆ ಕರ್ನಾಟಕ ಲೋಕಾಯುಕ್ತವು ಭ್ರಷ್ಟಾಚಾರ ನಿರ್ಮೂಲನೆಯಲ್ಲಿ ವಹಿಸಿದ ಪಾತ್ರವೇನು? ಉತ್ತಮ ಆಡಳಿತ ನೀಡುವಲ್ಲಿ ಅದು ಸಫಲವಾಯಿತೆ? ಕರ್ನಾಟಕ ಲೋಕಾಯುಕ್ತವು ಸಮಾಜದ ಮೇಲೆ ಯಾವ ರೀತಿ ಪರಿಣಾಮ ಬೀರಿದೆ ಎನ್ನುವುದನ್ನು ಶಾಸ್ತ್ರೀಯ ರೀತಿಯಲ್ಲಿ ಅಧ್ಯಯನ ಮಾಡುವುದು ಮಹತ್ವವೆನಿಸಿದೆ.

ಭ್ರಷ್ಟಾಚಾರವನ್ನು ನಿಯಂತ್ರಣ ಮಾಡುವ ಪ್ರಕ್ರಿಯೆಗೆ ಸಂಬಂಧಿಸಿದಂತೆ ಭಾರತ ಸರ್ಕಾರವು ಮೊದಲಿನಿಂದಲೂ ಹಲವಾರು ಕ್ರಮಗಳನ್ನು ಕೈಗೊಳ್ಳುತ್ತಾ ಬಂದಿದೆ. ಈ ನಿಟ್ಟಿನಲ್ಲಿ ಪ್ರಮುಖ ಪ್ರಯತ್ನವಾಗಿ ೧೯೬೨ರಲ್ಲಿ ಶ್ರೀ ಕೆ. ಸಂತಾನಂ ಅವರ ಅಧ್ಯಕ್ಷತೆಯಲ್ಲಿ 'ಭ್ರಷ್ಟಾಚಾರ ಪ್ರತಿಬಂಧಕ ಸಮಿತಿ'ಯನ್ನು ರಚಿಸಲಾಯಿತು. ಅಲ್ಲದೆ ಈ ಸಮಿತಿಯ ಶಿಫಾರಸ್ಸಿನ ಆಧಾರದ ಮೇಲೆ ೧೯೬೪ರಲ್ಲಿ 'ಕೇಂದ್ರ ಜಾಗೃತ ಆಯೋಗವನ್ನು' ಸ್ಥಾಪಿಸಲಾಯಿತು. ಆದರೂ ಸಹ ನಿರೀಕ್ಷಿತ ಪ್ರಮಾಣದಲ್ಲಿ ಭ್ರಷ್ಟಾಚಾರ ನಿರ್ಮೂಲನೆಯಾಗಲಿಲ್ಲ. ಹೀಗಾಗಿ ಉತ್ತಮ ಆಡಳಿತ ಕಾಣಲಾಗಲಿಲ್ಲ.

ಭ್ರಷ್ಟಾಚಾರ ನಮ್ಮನ್ನು ಮೊದಲಿನಿಂದಲೂ ಆವರಿಸಿಕೊಂಡಿದೆ. ಭಾರತಕ್ಕೆ ಸ್ವತಂತ್ರ ಬಂದ ಅವಧಿಯಲ್ಲಿಯೇ ಅಂದರೆ ೧೯೪೭ರಲ್ಲಿ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯನ್ನು ಜಾರಿಗೆ ತರಲಾಯಿತು. ತರುವಾಯ ಇದಕ್ಕೆ ೧೯೬೪, ೧೯೬೬, ೧೯೬೭ರಲ್ಲಿ ತಿದ್ದುಪಡಿ ಮಾಡಲಾಯಿತು. ಆದರೆ ಕೇವಲ ಕಾನೂನಿನಿಂದಲೇ ಭ್ರಷ್ಟಾಚಾರವನ್ನು ನಿಯಂತ್ರಿಸಲು ಆಗಲಿಲ್ಲ. ಮುಂದೆ ದಿನ ಕಳೆದಂತೆ ಭ್ರಷ್ಟಾಚಾರವು ಹೆಚ್ಚಾಗತೊಡಗಿತು. ಅದ್ದರಿಂದ ೧೯೮೮ರಲ್ಲಿ ಈ ಹಳೆಯ ಕಾನೂನಿನ ಬದಲಾಗಿ ಹೊಸ ಭ್ರಷ್ಟಾಚಾರ ನಿಯಂತ್ರಣ ಕಾನೂನನ್ನು ಜಾರಿಗೆ ತರಲಾಯಿತು. ಇದರಲ್ಲಿ ೧೯೪೭ರ ಕಾನೂನಿನ ಕೆಲ ಅಂಶಗಳನ್ನು ಉಳಿಸಿಕೊಳ್ಳಲಾಗಿತ್ತು. ಇದು ಕೂಡ ಭ್ರಷ್ಟಾಚಾರಿಗಳಿಗೆ ಅನುಕೂಲವಾಗುವಂತೆ ಇತ್ತು. ಆದ್ದರಿಂದ ೨೦೦೮ರಲ್ಲಿ ಹೊಸ ಮಸೂದೆಯನ್ನು ಸಂಸತ್‌ನಲ್ಲಿ ಮಂಡಿಸಲಾಗಿದೆ .ಆದರೆ ಅದಕ್ಕೆ ಇನ್ನೂ ಸರ್ವ ಸದಸ್ಯರ ಸಮ್ಮತಿ ದೊರೆತಿಲ್ಲ. ಈ ಕಾನೂನಿನಲ್ಲಿ ನಿವೃತ್ತಿಯಾದ ಸರಕಾರಿ ಅಧಿಕಾರಿಗಳ ಮತ್ತು ಅವರ ಸಂಪತ್ತಿನ ಕುರಿತು ಪ್ರಶ್ನಿಸಬಹುದಾಗಿದೆ.

ಇತ್ತೀಚೆಗೆ ನಮ್ಮ ನ್ಯಾಯಾಲಯ ತನ್ನ ವ್ಯವಹಾರ ಜ್ಞಾನ ಉಪಯೋಗಿಸಿ ಮತ್ತು ಸಾರ್ವಜನಿಕ ಅಭಿಪ್ರಾಯವನ್ನು ಪರಿಗಣಿಸಿ ಜನ ಪ್ರತಿನಿಧಿಯೊಬ್ಬ ಎರಡು ಅಥವಾ ಅದಕ್ಕಿಂತ ಹೆಚ್ಚು ವರ್ಷ ಶಿಕ್ಷೆಗೆ ಗುರಿಯಾದರೆ ಆತನನ್ನು ಅನರ್ಹಗೊಳಿಸಬೇಕು ಎಂಬ ತೀರ್ಪು ನೀಡಿದೆ. ಈ ತೀರ್ಪನ್ನು ಪುನಃ ಪರಿಶೀಲಿಸಬೇಕು ಎಂಬ ಸರಕಾರ ಸಲ್ಲಿಸಿದ್ದ ಅಹವಾಲನ್ನು ಕೋರ್ಟ್ ತಿರಸ್ಕರಿಸಿದ್ದನ್ನು ನೋಡಿದರೆ, ಬಹಳ ಎಚ್ಚರಿಕೆಯಿಂದಲೇ ನ್ಯಾಯಾಂಗವು ಈ ಹೆಜ್ಜೆಯನ್ನು ಇಟ್ಟಿದೆ ಎನ್ನಬಹುದು. ಸಾಂವಿಧಾನಿಕ ನಿಯಮಗಳನ್ನು ಗೌರವಿಸುವ ಸರ್ಕಾರವೊಂದು ನ್ಯಾಯಾಲಯದ ತೀರ್ಪನ್ನು ಅರ್ಥ ಮಾಡಿಕೊಂಡು ಅದಕ್ಕೆ ಗೌರವ ಕೊಡಬೇಕಿತ್ತು. ಆದರೆ ಕೇಂದ್ರ ಸರ್ಕಾರ ಕ್ರಿಮಿನಲ್ ಹಿನ್ನೆಲೆಯ ಜನಪ್ರತಿನಿಧಿಗಳನ್ನು ರಕ್ಷಿಸಲು ನ್ಯಾಯಾಂಗದ ತೀರ್ಪನ್ನೇ ತಿರುಗು ಮುರುಗು ಮಾಡಬಲ್ಲ ಶಾಸನದ ಕರಡನ್ನು ರಾಷ್ಟ್ರಪತಿಗಳ ಅಂಕಿತಕ್ಕಾಗಿ ಕಳುಹಿಸಿ ಪ್ರಾಜ್ಞರು ವಿರೋಧಿಸಿದ ಬಳಿಕ ವಾಪಸು ಪಡೆಯಿತು.

ಇತ್ತೀಚಿನ ವರ್ಷಗಳಲ್ಲಿ ರಾಜಕೀಯ ಕ್ಷೇತ್ರದಲ್ಲಿ ಕ್ರಿಮಿನಲ್ ಸಂಸ್ಕೃತಿ ಹೆಚ್ಚುತ್ತಿರುವುದನ್ನು ಸ್ಪಷ್ಟವಾಗಿ ಅಭಿವ್ಯಕ್ತಗೊಳ್ಳುತ್ತಿದೆ. ಇದು ಊಹಿಸಲಾರದಂಥ ಘಟನಾವಳಿಗಳಿಗೆ ನಮ್ಮ ಪ್ರಜಾ ಪ್ರಭುತ್ವ ಸಾಕ್ಷಿಯಾಗುತ್ತಿದೆ. ಅಪಹರಣಕಾರರು ಮತ್ತು ಕೊಲೆಗಡುಕರು ಜೈಲಿನಲ್ಲಿದ್ದುಕೊಂಡೇ ಚುನಾವಣೆಯಲ್ಲಿ ಸ್ಪರ್ಧಿಸುತ್ತಿದ್ದಾರೆ. ಜೈಲಿನಲ್ಲಿರುವ ಈ ಚುನಾಯಿತ ಪ್ರತಿನಿಧಿಗಳನ್ನು ಪ್ರಮಾಣ ವಚನ ಸ್ವೀಕರಿಸಲು ಜೈಲಿನಿಂದಲೇ ಪೊಲೀಸ್ ಭದ್ರತೆಯಲ್ಲಿ ಕರೆಸಿಕೊಂಡು ಮತ್ತೆ ವಾಪಸ್ ಕರೆದುಕೊಂಡು ಬಂದು ಜೈಲಿಗೆ ಬಿಡಲಾಗುತ್ತದೆ. ಕೇಂದ್ರ ಕ್ಯಾಬಿನೆಟ್ ಸಚಿವರು ಕೊಲೆ ಪ್ರಕರಣಗಳಲ್ಲಿ ಶಿಕ್ಷೆಗೆ ಒಳಗಾದರೆ, ರಾಜ್ಯ ಕ್ಯಾಬಿನೆಟ್ ಸಚಿವರು ಅತ್ಯಾಚಾರ ಪ್ರಕರಣಗಳಲ್ಲಿ ಬಹಿರಂಗವಾಗಿ ಭೂಗತವಾಗುತ್ತಾರೆ. ಬಹಳಷ್ಟು ರಾಜ್ಯಗಳಲ್ಲಿ ಮಂತ್ರಿಗಳು ಭೂ ಮಾಫಿಯಾ, ರಿಯಲ್ ಎಸ್ಟೇಟ್ ಮಾಫಿಯಾ, ಗಣಿ ಮಾಫಿಯಾ, ಮರಳು ಮಾಫಿಯಾ, ಲಾಟರಿ ಮಾಫಿಯಾಗಳೊಂದಿಗೆ ಕೈ ಜೋಡಿಸಿದ್ದು ಬೆಳಕಿಗೆ ಬಂದಿದೆ. ಚುನಾವಣೆಯಿಂದ ಚುನಾವಣೆಗೆ ಇಂತಹ ಜನ ಬಲಿಷ್ಟಗೊಳ್ಳುತ್ತಲೇ ಹೋಗುತ್ತಿದ್ದಾರೆ.

ಭಾರತ ದೇಶದ ಹಾಲಿ ಸಂಸತ್ ಸದಸ್ಯರಲ್ಲಿ ೧೬೧ ಸಂಸತ್ ಸದಸ್ಯರು ಅಂದರೆ ಪ್ರತಿಶತ ೩೦ರಷ್ಟು ಇಂದು ಕ್ರಿಮಿನಲ್ ಕೇಸ್‌ಗಳನ್ನು ಎದುರಿಸುತ್ತಿದ್ದಾರೆ ಎಂದು ವರದಿಯಾಗಿದೆ. ಅದರಲ್ಲಿ ೭೦ ಮಂದಿಯ ವಿರುದ್ಧ ಗಂಭೀರ ಆರೋಪಗಳಿವೆ. ಸ್ವಹಿತಾಸಕ್ತಿಯ ವಿಷಯ ಬಂದಾಗಲಂತೂ ತಮ್ಮ ರಾಜಕೀಯ ಬೇಧವನ್ನು ಮರೆತು ಒಂದೇ ಬಳ್ಳಿಯ ಹೂಗಳಂತೆ ಇವರೆಲ್ಲ ವರ್ತಿಸುತ್ತಾರೆ. 'ಸ್ಥಳೀಯ ಪ್ರದೇಶದ ಅಭಿವೃದ್ಧಿಯ' ಹೆಸರಲ್ಲಿ ಇವರುಗಳ ಹುಂಡಿಗೆ ಬಂದು ಬೀಳುವ ಹಣದ ಪ್ರಮಾಣ ೧೯೯೩ಕ್ಕೆ ಹೋಲಿಸಿದರೆ ಈಗ ಐದು ಪಟ್ಟು ಹೆಚ್ಚಾಗಿದೆ. ೨೦೧೧ರಿಂದ ಸಂಸತ್

ಸದಸ್ಯತ್ವ ನಿಧಿ ೫ ಕೋಟಿ ಆಗಿದೆ. ಹಾಗಂತ ಈ ಹಣವೆಲ್ಲ ಸದ್ಬಳಕೆ ಆಗುತ್ತಿದೆ ಎನ್ನುವುದು ಮೂರ್ಖತನವಾದೀತು. ಏಕೆಂದರೆ ಇದರಲ್ಲಿ ಬಹುಪಾಲು ಮೊತ್ತ ನಿಯಮಗಳಿಗೆ ವಿರುದ್ಧವಾಗಿ ರಾಜಕಾರಣಿಗಳ ಖಾಸಗಿ ಯೋಜನೆಗಳಿಗೆ ವಿನಿಯೋಗವಾಗುತ್ತಿದೆ. ಅದೇ ಗತಿ ಶಾಸಕರ ನಿಧಿಯದೂ ಆಗಿದೆ.

ಇಂತಹ ಆಟಗಳಲ್ಲಿ ಎಲ್ಲಾ ರಾಜಕೀಯ ಪಕ್ಷಗಳೂ ನಾಚಿಕೆ ಬಿಟ್ಟು ನುಗ್ಗಿರುವುದು ವೇದ್ಯವಾಗುತ್ತದೆ. ಹಾಗೆ ನೋಡಿದರೆ ಕ್ರಿಮಿನಲ್ ಸಂಸದರನ್ನು ಹೊಂದಿರುವ ಪಕ್ಷಗಳ ಪಟ್ಟಿಯಲ್ಲಿ ಬಿಜೆಪಿ ಪಕ್ಷವೇ ಮುಂಚೂಣಿಯಲ್ಲಿದೆ. ಬಿಜೆಪಿಯು ೪೨ ಕ್ರಿಮಿನಲ್ ಹಿನ್ನೆಲೆಯ ಸಂಸದರನ್ನು ಹೊಂದಿದ್ದರೆ, ಕಾಂಗ್ರೆಸ್ಸಿನಲ್ಲಿ ಅಂಥವರ ಸಂಖ್ಯೆ ೪೧ರಷ್ಟಿದೆ. ಅದೇ ರೀತಿ ಗುಜರಾತ ರಾಜ್ಯದ ಸಚಿವ ಸಂಪುಟದಲ್ಲಿ ೧೧ ಜನ ಕಳಂಕಿತರಿರುವುದು ಕಂಡು ಬರುತ್ತದೆ. ಅದೇ ರೀತಿ ಗುಜರಾತಿನ ಜಲಸಂಪನ್ಮೂಲ ಸಚಿವ ಬಾಬು ಭಾಯ ಭೋಖರಿಯಾರವರು ಅಕ್ರಮ ಗಣಿಗಾರಿಕೆಯಲ್ಲಿ ಶಿಕ್ಷೆಗೆ ಒಳಗಾದರೂ ತಡೆಯಾಜ್ಞೆ ಪಡೆದು ಅವರನ್ನು ಮಂತ್ರಿಯನ್ನಾಗಿ ಮುಂದುವರೆಸಿರುವುದು ವಿಪರ್ಯಾಸ. ಇನ್ನು ಉತ್ತರ ಪ್ರದೇಶದಲ್ಲಿ ಈ ಸಂಖ್ಯೆ ಇನ್ನಷ್ಟು ಹೆಚ್ಚಾಗಿರುವುದು ಕಂಡು ಬರುತ್ತದೆ. ಅಧಿಕಾರಕ್ಕೇರುವ ಪಕ್ಷಗಳು ಬದಲಾಗುತ್ತಿವೆ ಹೊರತು ವ್ಯವಸ್ಥೆಯಲ್ಲಿ ಬದಲಾವಣೆ ಆಗುತ್ತಿಲ್ಲ ಎಂಬುದನ್ನು ಈ ಅಧ್ಯಯನಗಳು ಸಾಬೀತು ಪಡಿಸುತ್ತವೆ.

ಸಾಮಾಜಿಕ ಸ್ವಾಸ್ಥ್ಯವನ್ನು ಸುಧಾರಿಸುವಲ್ಲಿ ಶಾಸಕಾಂಗದ ಪಾತ್ರ ಬಹು ಮಹತ್ವದ್ದು. ಇದು ಸಾರ್ವಜನಿಕರ ಜೀವನವನ್ನು ಸಂತುಷ್ಟರನ್ನಾಗಿಸಲು ಸಹಾಯ ಮಾಡಬೇಕು. ಇವರು ರಚಿಸುವ ಕಾನೂನುಗಳು ಭ್ರಷ್ಟಾಚಾರದ ವಿರುದ್ಧದ ಪ್ರಕರಣಗಳನ್ನು ವೇಗವಾಗಿ, ಪಾರದರ್ಶಕವಾಗಿ, ಪ್ರಾಮಾಣಿಕವಾಗಿ ತಡಮಾಡದೇ ಬೇಗನೆ ಮುಗಿಸುವಂತಿರಬೇಕು. ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯ ಕಲಂ ೨೨, ೨೪೩(೧) ಭ್ರಷ್ಟಾಚಾರದ ಪ್ರಕರಣಗಳನ್ನು ಬೇಗನೆ ಪರಿಹರಿಸಬೇಕು ಎಂದು ಹೇಳುತ್ತದೆ. ಇಂದಿಗೂ ಅನೇಕ ಕೋರ್ಟಗಳಲ್ಲಿ ಭ್ರಷ್ಟಾಚಾರ ಕುರಿತಾದ ಸಾವಿರಾರು ಪ್ರಕರಣಗಳಿವೆ. ಇವುಗಳಲ್ಲಿ ಕೆಲವು ದಶಕಗಳಷ್ಟು ಹಳೆಯದಾಗಿವೆ. ಅದರೆ ಯಾವುದೇ ರೀತಿಯ ಪರಿಹಾರ ಕಂಡಿಲ್ಲ. ಇಂತಹ ಭ್ರಷ್ಟಾಚಾರದ ಪ್ರಕರಣಗಳಲ್ಲಿ ಅನೇಕ ಕಾನೂನಿನ ತೊಡಕುಗಳಿವೆ. ಆದರೂ ನ್ಯಾಯಾಧೀಶರು ಲಭ್ಯವಿರುವ ಕಾನೂನು ಮತ್ತು ಕಾಯ್ದೆಗಳನ್ನು ಉಪಯೋಗಿಸಿ ಇಂತಹ ಪ್ರಕರಣಗಳನ್ನು ಸರಳವಾಗಿ ಪರಿಹರಿಸುವ ಮೂಲಕ ಉತ್ತಮ ಆಡಳಿತಕ್ಕೆ ಪ್ರೇರಣೆ ನೀಡಬೇಕು. ಅದೇ ರೀತಿ ಭ್ರಷ್ಟಾಚಾರಗಳ ನಿಗ್ರಹಕ್ಕೆ ಸರ್ಕಾರ ಇನ್ನಷ್ಟು ಚುರುಕಾಗಿ ಕೆಲಸ ಮಾಡಬೇಕು.

ಆದರೆ ಇಂದು ಅನೇಕ ನಾಯಕರು, ರಾಜಕಾರಣಿಗಳು ನ್ಯಾಯಾಲಯದ ಆದೇಶವನ್ನೇ ಧಿಕ್ಕರಿಸುತ್ತಿರುವುದು ಕಂಡು ಬರುತ್ತದೆ. ಸುಪ್ರೀಂಕೋರ್ಟ್‌ನ ಆದೇಶವನ್ನು ಕೂಡ ನಿರ್ಲಕ್ಷಿಸುತ್ತಿರುವ

ನಿದರ್ಶನಗಳಿವೆ. ನ್ಯಾಯಾಲಯಗಳು ಅಪರಾಧಿಗಳಿಗೆ ಹೆಚ್ಚಿನ ಕಠಿಣ ಶಿಕ್ಷೆ ವಿಧಿಸುವ ಮೂಲಕ ಬಿಸಿ ಮುಟ್ಟಿಸಬೇಕು. ಕೆಲವು ನ್ಯಾಯಾಧೀಶರು ಭ್ರಷ್ಟಾಚಾರದ ಪ್ರಕರಣಗಳಿಗೆ ತಡೆಯಾಜ್ಞೆ ನೀಡಿ ವಿಚಾರಣೆಯ ವೇಗವನ್ನು ಕುಂಠಿತಗೊಳಿಸುತ್ತಾರೆ. ಇದರಿಂದ ಇಂತಹ ಭ್ರಷ್ಟಾಚಾರದ ಪ್ರಕರಣಗಳು ಪರಿಹಾರವಾಗುವುದಿಲ್ಲ. ೨೦೧೧ರಲ್ಲಿ ರಾಜಸ್ಥಾನದ ಕೋರ್ಟವೊಂದರಲ್ಲಿ ೫೨ ಭ್ರಷ್ಟಾಚಾರದ ಪ್ರಕರಣಗಳಿಗೆ ತಡೆಯಾಜ್ಞೆ ನೀಡಲಾಗಿತ್ತು. ಇದನ್ನು ಅಡ್ವೋಕೇಟ್ ಜನರಲ್ ಮೂಲಕ ಹೈಕೋರ್ಟಿನ ಗಮನಕ್ಕೆ ತರಲಾಯಿತಾದರೂ ಏನೂ ಪ್ರಯೋಜನವಾಗಲಿಲ್ಲ. ಇಲ್ಲಿ ನಾವು ಎರಡು ಅಂಶಗಳನ್ನು ಕಾಣಬಹುದು. ಒಂದು ಕಡೆ ಭ್ರಷ್ಟಾಚಾರವನ್ನು ನಿಯಂತ್ರಿಸಲು ಕಾಯ್ದೆ ಕಾನೂನುಗಳನ್ನು ರೂಪಿಸಲಾಗುತ್ತದೆ. ಇನ್ನೊಂದು ಕಡೆಯಿಂದ ಭ್ರಷ್ಟಾಚಾರಿಗಳಿಗೆ ಪಾರಾಗಲು ಕಾನೂನು ಪಾಲಕರೇ ಕೈ ಜೋಡಿಸುತ್ತಾರೆ. ಪ್ರತಿ ನ್ಯಾಯಾಲಯ ಮತ್ತು ನ್ಯಾಯಾಧೀಶ ಇಂತಹ ಕಾನೂನುಗಳನ್ನು ತನ್ನದೇ ಪರಿಧಿಯಲ್ಲಿ ನೋಡುತ್ತಿದ್ದಾರೆ ಎಂದರೆ ತಪ್ಪಿಲ್ಲ. ಒಟ್ಟಿನಲ್ಲಿ ಭ್ರಷ್ಟಾಚಾರದ ನಿವಾರಣೆಯಲ್ಲಿ ಶಾಸಕಾಂಗ ಮತ್ತು ನ್ಯಾಯಾಂಗದ ಪಾತ್ರ ಬಹು ಮಹತ್ವದ್ದಾಗಿದ್ದರೂ ಅವರು ಸಮರ್ಪಕವೆನಿಸುವಂತೆ ಕೆಲಸ ಮಾಡುತ್ತಿಲ್ಲ. ಈ ಎರಡು ಅಂಗಗಳು ಬಲಿಷ್ಟಗೊಂಡರೆ ಮಾತ್ರ ಪ್ರಜಾಪ್ರಭುತ್ವದ ತಳಹದಿ ಹೆಚ್ಚು ಗಟ್ಟಿಯಾಗಿರಲು ಸಾಧ್ಯ ಮತ್ತು ನಾಗರಿಕ ಸಮಾಜವು ಆರೋಗ್ಯದಿಂದ ಕೂಡಿರಲು ಸಾಧ್ಯ. ಇದಕ್ಕೆ ಪುಷ್ಠಿ ನೀಡುವಂತೆ ಭ್ರಷ್ಟಾಚಾರವನ್ನು ಬುಡದಿಂದಲೇ ಕಿತ್ತೊಗೆಯಲು ಪಣತೊಟ್ಟು ಸಮಾನ ಮನಸ್ಕರು ಕೂಡಿ ಸ್ಥಾಪಿಸಿದ ರಾಜಕೀಯ ಪಕ್ಷ ಆಮ್ ಆದ್ಮಿ ಪಾರ್ಟಿ ದೆಹಲಿ ರಾಜ್ಯವನ್ನು ತನ್ನ ಕೈವಶ ಮಾಡಿಕೊಂಡು ಬೃಹತ್ ರಾಜಕೀಯ ಪಕ್ಷಗಳ ವಿಚಾರ ಸರಣಿಯನ್ನೇ ಬುಡಮೇಲು ಮಾಡಿದೆ. ಉತ್ತಮ ಆಡಳಿತಕ್ಕೆ ಪೂರಕವೆನಿಸುವ ಲೋಕಪಾಲ ಮಸೂದೆಯು ಕಾನೂನಾಗಿ ಜಾರಿಗೆ ಬಂತು. ಆದರೆ ಇನ್ನೂ ಆರು ಮಹತ್ವದ ಮಸೂದೆಗಳು ಸಂಸತ್ ಮುಂದೆ ಮಂಜೂರಾತಿಗೆ ಕಾದು ಕುಳಿತಿವೆ. ಅವುಗಳೆಂದರೆ ಮಾಹಿತಿದಾರರ ರಕ್ಷಣಾ ಮಸೂದೆ ೨೦೧೧, ನ್ಯಾಯಾಂಗ ಹೊಣೆಗಾರಿಕೆ ಮಸೂದೆ ೨೦೧೦, ದೂರು ನಿರ್ವಹಣೆ (ನಾಗರಿಕ ಸೇವೆ) ಮಸೂದೆ ೨೦೧೧, ಸಾರ್ವಜನಿಕ ಭೂ ಸ್ವಾಧೀನ ಮಸೂದೆ ೨೦೧೨, ಭ್ರಷ್ಟಾಚಾರ ತಡೆ (ತಿದ್ದುಪಡಿ) ಮಸೂದೆ ೨೦೧೩, ವಿದೇಶಿ ಲಂಚ ತಡೆ ಮಸೂದೆ ೨೦೧೧ಗಳಾಗಿವೆ.

೧.೭. ಅಧ್ಯಯನದ ವಿನ್ಯಾಸ

ಈ ಸಂಶೋಧನೆಯನ್ನು ಏಳು ಅಧ್ಯಾಯಗಳಲ್ಲಿ ವಿಂಗಡಿಸಲಾಗಿದೆ. ಅವುಗಳು ಈ ಕೆಳಗಿನಂತೆ ವಿಂಗಡಿಸಲಾಗಿದೆ.

- **ಅಧ್ಯಾಯ ಒಂದು:** ಪ್ರಸ್ತಾವನೆ, ಅಧ್ಯಯನದ ವಿಷಯದ ಸಮಸ್ಯೀಕರಣ ಮತ್ತು ಸಂಶೋಧನಾ ಪ್ರಶ್ನೆಗಳು ಅಧ್ಯಯನದ ಮಹತ್ವ, ಅಧ್ಯಯನದ ಉದ್ದೇಶಗಳು, ಅಧ್ಯಯನದ ವಿಧಾನ ಹಾಗೂ ಅಧ್ಯಯನದ ವ್ಯಾಪ್ತಿ, ಹಾಗೂ ಅಧ್ಯಾಯಗಳ ವಿನ್ಯಾಸವನ್ನು ಈ ಅಧ್ಯಾಯದಲ್ಲಿ ನೀಡಲಾಗಿದೆ.

- **ಅಧ್ಯಾಯ ಎರಡು:** ಉತ್ತಮ ಆಡಳಿತ, ಭ್ರಷ್ಟಾಚಾರ ಹಾಗೂ ಲೋಕಾಯುಕ್ತಕ್ಕೆ ಸಂಬಂಧಿಸಿದಂತೆ ಈವರೆಗೆ ನಡೆದಿರುವ ಪ್ರಮುಖ ಅಧ್ಯಯನಗಳ ಸಮೀಕ್ಷೆ ಹಾಗೂ ವಿಶ್ಲೇಷಣೆ ಮಾಡಲಾಗಿದೆ. ಭ್ರಷ್ಟಾಚಾರ ಮತ್ತು ಉತ್ತಮ ಆಡಳಿತದ ಅರ್ಥ ಹಾಗೂ ವಿವರಣೆ ಭ್ರಷ್ಟಾಚಾರಕ್ಕೆ ಪ್ರಮುಖ ಕಾರಣವಾದ ವಿಷಯಗಳ ಬಗ್ಗೆ ವಿಶ್ಲೇಷಣೆ, ಲೋಕಾಯುಕ್ತದ ಪರಿಕಲ್ಪನೆ ಹಾಗೂ ಅರ್ಥ ಕರ್ನಾಟಕ ಲೋಕಾಯುಕ್ತ ರಚನೆ ಹಾಗೂ ನಿರೂಪಣೆಯ ಬಗ್ಗೆ ಈ ಅಧ್ಯಾಯದಲ್ಲಿ ವಿಶ್ಲೇಷಣೆ ಮಾಡಲಾಗಿದೆ.

- **ಅಧ್ಯಾಯ ಮೂರು:** ಕರ್ನಾಟಕ ಲೋಕಾಯುಕ್ತ ಕಾಯ್ದೆ ವಿವರಣೆ ಮತ್ತು ವಿಶ್ಲೇಷಣೆ ಹಾಗೂ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ ವಿವರಣೆ ಹಾಗೂ ವಿಶ್ಲೇಷಣೆ, ಲೋಕಾಯುಕ್ತದ ಕಾರ್ಯ ನಿರೂಪಣೆ, ನ್ಯಾಯಾಲಯದ ತೀರ್ಪು, ಲೋಕಾಯುಕ್ತರ ಟಿಪ್ಪಣಿಗಳ ವಿಶ್ಲೇಷಣೆ.

- **ಅಧ್ಯಾಯ ನಾಲ್ಕು:** ೨೦೦೯-೧೦, ೨೦೧೦-೧೧ ಹಾಗೂ ೨೦೧೧-೧೨ನೆಯ ಸಾಲಿನ ಪ್ರಕರಣಗಳ ಸ್ಥೂಲ ವಿಶ್ಲೇಷಣೆ, ಭ್ರಷ್ಟಾಚಾರ ನಿಯಂತ್ರಣಕ್ಕೆ ಲೋಕಾಯುಕ್ತದ ಯೋಜನೆಗಳು ಮತ್ತು ಕಾರ್ಯಕ್ರಮಗಳು. ಉತ್ತಮ ಆಡಳಿತಕ್ಕೆ ಪೂರಕವೆನಿಸುವಂತೆ ಸರಕಾರ ಕೈಗೊಂಡ ಕಾರ್ಯಕ್ರಮಗಳು ಮತ್ತು ಸಕಾಲ ಯೋಜನೆಯ ವಿಶ್ಲೇಷಣೆ.

- **ಅಧ್ಯಾಯ ಐದು:** ಕರ್ನಾಟಕ ಲೋಕಾಯುಕ್ತವು ಸಾಮಾಜಿಕವಾಗಿ ಬೀರುವ ಪರಿಣಾಮಗಳ ಕುರಿತು ಅರಿತುಕೊಳ್ಳಲು ಜನಸಾಮಾನ್ಯರ, ಭ್ರಷ್ಟ ಆರೋಪಿತ ನೌಕರರ ಹಾಗೂ ಸಮಾಜದ ಪ್ರಮುಖ ಗಣ್ಯರ ಅಭಿಪ್ರಾಯಗಳ ವಿಶ್ಲೇಷಣೆ.

- **ಅಧ್ಯಾಯ ಆರು:** ಉಪ ಸಂಹಾರ, ಅಧ್ಯಯನದ ಫಲಿತಗಳು ಹಾಗೂ ಸಲಹೆ ಸೂಚನೆಗಳು

ಅಧ್ಯಾಯ ಎರಡು

ಅಧ್ಯಯನಗಳ ಸಮೀಕ್ಷೆ

ಅಧ್ಯಾಯ ಎರಡು

ಅಧ್ಯಯನಗಳ ಸಮೀಕ್ಷೆ

೨.೧ ಪ್ರಸ್ತಾವನೆ

ಲೋಕಾಯುಕ್ತ ಸಂಸ್ಥೆಯು ಸಾಮಾಜಿಕವಾಗಿ ಬೀರಿರುವ ಪರಿಣಾಮಗಳ ಕುರಿತು ನಡೆದಿರುವ ಸಂಶೋಧನ ಅಧ್ಯಯನಗಳು ತೀರಾ ವಿರಳವಾಗಿವೆ. ಭ್ರಷ್ಟಾಚಾರ, ಉತ್ತಮ ಆಡಳಿತ, ಜನ ಸರ್ಕಾರ ಮುಂತಾದ ವಿಚಾರಗಳ ಕುರಿತಾದ ಪುಸ್ತಕಗಳ, ಅಧ್ಯಯನಗಳ ಸಮೀಕ್ಷೆ ಕೈಗೊಳ್ಳಲಾಗಿದೆ. ಉತ್ತಮ ಸಮಾಜದ ನಿರ್ಮಾಣಕ್ಕಾಗಿ ಕಾರ್ಯನಿರ್ವಹಿಸುತ್ತಿರುವ ಈ ಸಂಸ್ಥೆಯ ಕಾರ್ಯವನ್ನು ಅಭ್ಯಸಿಸುವುದರ ಹಿನ್ನೆಲೆಯಲ್ಲಿ ಇದಕ್ಕೆ ಸಂಬಂಧಪಟ್ಟಂತೆ ಈಗಾಗಲೇ ನಡೆಸಿರುವ ಅಧ್ಯಯನಗಳನ್ನು ಕೂಡ ಇಲ್ಲಿ ಪರಾಮರ್ಶಿಸಲಾಗಿದೆ. ಅವುಗಳು ಈ ಕೆಳಗಿನಂತಿವೆ.

೨.೨ ಅಧ್ಯಯನಗಳ ಸಮೀಕ್ಷೆ

- ಡಾ. ಗುರುಸಿಂಗ್ (೨೦೦೩) ಬರೆದ 'ಕರಪ್ಷ್ಯನ್ ಟ್ರಾನ್ಸ್‌ಫರೆನ್ಸಿ ಆ್ಯಂಡ್ ದಿ ಗುಡ್ ಗವರ್ನನ್ಸ್ ಅಜೆಂಡ್ ಇನ್ ಇಂಡಿಯಾ' ಎಂಬ ಪುಸ್ತಕದಲ್ಲಿ ಭಾರತದಲ್ಲಿ ವರ್ಷದಿಂದ ವರ್ಷಕ್ಕೆ ಭ್ರಷ್ಟಾಚಾರ ಇಳಿಮುಖವಾಗುತ್ತಿದೆ ಎಂದು ಹೇಳಿದ್ದಾರೆ. ಅಂತರಾಷ್ಟ್ರೀಯ ಮಟ್ಟದಲ್ಲಿ ಭಾರತದ ಭ್ರಷ್ಟಾಚಾರದ ರ್‍ಯಾಂಕಿಂಗ್ ಕಡಿಮೆಯಾಗಿದ್ದರೂ ದೇಶಿಯ ಮಟ್ಟದಲ್ಲಿ ಗಣನೀಯ ಪ್ರಮಾಣದಲ್ಲಿ ಭ್ರಷ್ಟಾಚಾರ ಏರಿಕೆಯಾಗಿದ್ದನ್ನು ಅವರು ಗುರುತಿಸುವಲ್ಲಿ ವಿಫಲವಾಗಿರುವುದು ಕಂಡುಬರುತ್ತದೆ.
- ಡಾ. ವಾಲ್ಮೀಕಿ ಪ್ರಸಾದ ಸಿಂಗ್(೨೦೦೮) ಬರೆದ 'ದಿ ಚಾಲೆಂಜ್ ಆಫ್ ಗುಡ್ ಗವರ್ನನ್ಸ್ ಇನ್ ಇಂಡಿಯಾ ನೀಡ್ ಫಾರ್ ಇನ್ನೋವಟಿವ್ ಅಪ್ರೋಚಸ್' ಎಂಬ ಪುಸ್ತಕದಲ್ಲಿ ರಾಷ್ಟ್ರೀಯತೆ,

ಪ್ರಜಾಪ್ರಭುತ್ವ, ಜಾತ್ಯಾತೀತತೆ, ಅಲಿಪ್ತ ನೀತಿ, ಮಿಶ್ರ ಆರ್ಥಿಕತೆ ನಮ್ಮ ಆಡಳಿತದ ಮುಖ್ಯ ತತ್ವವಾಗದ ಹಿನ್ನೆಲೆಯಲ್ಲಿ ಭ್ರಷ್ಟಾಚಾರ ಹೆಚ್ಚಿ ಉತ್ತಮ ಆಡಳಿತ ನೀಡುವಲ್ಲಿ ನಾವು ವಿಫಲರಾಗಿದ್ದೇವೆ ಎಂದು ಪ್ರತಿಪಾದಿಸಿದ್ದಾರೆ. ಅಷ್ಟೇ ಅಲ್ಲ ಗ್ರಾಮೀಣ ಪ್ರದೇಶಗಳ ಸಾರ್ವಜನಿಕ ಹಣಕಾಸು ಪರೀಶೀಲನೆಯು ನಿಯಮಿತವಾಗಿ ನಡೆಯಬೇಕು ಎಂದು ಒತ್ತಾಯಿಸಿದ್ದಾರೆ. ಜೊತೆಗೆ ಉತ್ತಮ ಆಡಳಿತಕ್ಕೆ ರಾಜಕೀಯ ಅಪರಾಧೀಕರಣ ಹಾಗೂ ಲಂಚಗುಳಿತನ ದೊಡ್ಡ ಸವಾಲಾಗಿದೆ ಎಂದು ಗುರುತಿಸಿದ್ದಾರೆ. ವಿಧಾನಸಭೆ ಹಾಗೂ ಲೋಕಸಭೆ ಸ್ಥಾನಗಳಿಗಾಗಿ ಮಹಿಳೆಯರಿಗೆ ೧/೩ ಮೀಸಲಾತಿ ಇರಬೇಕು .ಅಪರಾಧಿ ದೋಷಾರೋಪ ಪಟ್ಟಿ ಹಾಕಲ್ಪಟ್ಟ ವ್ಯಕ್ತಿಯನ್ನು ಚುನಾವಣೆಯ ಸ್ಪರ್ಧೆಯಿಂದಲೇ ಅನರ್ಹ ಮಾಡಬೇಕು. ಭ್ರಷ್ಟಾಚಾರಕ್ಕೆ ಮೂಲವಾಗಿರುವ ಎಂ.ಪಿ.ಗಳ ಕ್ಷೇತ್ರಾಭಿವೃದ್ಧಿ ನಿಧಿ ಹಾಗೂ ಎಂಎಲ್ಎ ಕ್ಷೇತ್ರಾಭಿವೃದ್ಧಿ ನಿಧಿಗಳನ್ನು ರದ್ದುಗೊಳಿಸಬೇಕೆಂದು ಅಭಿಪ್ರಾಯ ಪಡುತ್ತಾರೆ. ಆದರೆ ಇವರ ಈ ಅಧ್ಯಯನದಲ್ಲಿ ಕೇವಲ ರಾಜಕೀಯ ಭ್ರಷ್ಟಾಚಾರದ ಬಗ್ಗೆ ಗುರುತಿಸಿದ್ದಾರೆಯೆ ಹೊರತು ಅಧಿಕಾರಿ ವರ್ಗದಲ್ಲಿರುವ ಭ್ರಷ್ಟಾಚಾರದ ಕುರಿತು ಗಂಭೀರವಾಗಿ ಪ್ರಸ್ತಾಪಿಸಿಲ್ಲ. ಅದೇ ರೀತಿ ಮಹಿಳಾ ಮೀಸಲಾತಿ ಕೊಟ್ಟ ಮಾತ್ರಕ್ಕೆ ಭ್ರಷ್ಟಾಚಾರ ನಿರ್ಮೂಲನೆಗೊಳ್ಳುತ್ತದೆ ಎಂಬ ಭಾವನೆಯನ್ನು ಇನ್ನಷ್ಟು ವಿಮರ್ಶೆಗೆ ಒಳಪಡಿಸಬೇಕಾಗಿದೆ.

- ಡಾ. ಸಂಜೀವಕುಮಾರ್ ಶರ್ಮಾ (೨೦೦೩)ಚರಣಸಿಂಗ ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾದ ಇವರು ಬರೆದ 'ಗುಡ್ ಗವರ್ನನ್ಸ ಇನ್ ಎನಿಸಿಯಂಟ್ ಇಂಡಿಯಾ' ಎಂಬ ಸಂಶೋಧನ ಗ್ರಂಥದಲ್ಲಿ ವರ್ಣ ಆಧಾರಿತ ಶಿಕ್ಷೆಗಳು ಹಾಗೂ ದಂಡನೆಗಳು ಪ್ರಾಚೀನ ಭಾರತದಲ್ಲಿ ಹಾಗೂ ಮಧ್ಯಯುಗದಲ್ಲಿ ಜಾರಿಯಲ್ಲಿದ್ದವು. ಒಂದೇ ತಪ್ಪಿಗೆ ಬ್ರಾಹ್ಮಣರಿಗೊಂದು ನ್ಯಾಯ, ಮಿಕ್ಕ ಮೂರು ವರ್ಣದವರಿಗೆ ಮತ್ತೊಂದು ನ್ಯಾಯ ನೀಡುವ ಪದ್ಧತಿಯಿಂದ ಸಮಾಜದಲ್ಲಿ ಉತ್ತಮ ಆಡಳಿತವನ್ನು ಪರಿಣಾಮಕಾರಿಯಾಗಿ ಜಾರಿಗೆ ತರುವಲ್ಲಿ ಅಂದು ವಿಫಲಗೊಂಡ ಭಾರತ ಇಂದಿನವರೆಗೂ ಉತ್ತಮ ಆಡಳಿತ ನೀಡುವಲ್ಲಿ ಸಫಲತೆ ಕಾಣಲಿಲ್ಲ ಎಂದು ಪ್ರತಿಪಾದಿಸಿದ್ದಾರೆ. ವರ್ಣ ಆಧಾರಿತ ದಂಡನೆಯ ವ್ಯವಸ್ಥೆ ಬ್ರಿಟಿಷರ ಕಾಲದಲ್ಲಿಯೇ ಕೊನೆಗೊಂಡಿತು. ಈ ಹಿಂದಿನ ಬ್ರಿಟಿಷ ಕಾಯ್ದೆ ಹಾಗೂ ಇಂದಿನ ಭಾರತದ ದಂಡ ಕಾಯ್ದೆಗಳು ವರ್ಣಾಧಾರಿತವಾಗಿಲ್ಲ. ಅಂದರೆ ಕಳೆದ ಮೂರು ಶತಮಾನಗಳ ಹಿಂದೆ ವರ್ಣಾಧಾರಿತ ದಂಡನೆ ಕೊನೆಗೊಂಡಿದ್ದನ್ನು ಲೇಖಕರು ಗಂಭೀರವಾಗಿ ಪರಿಗಣಿಸಿಲ್ಲ.

- ಡಾ. ಅಮರ್ತ್ಯಸೇನ(೨೦೧೦)ಖ್ಯಾತ ಅರ್ಥಶಾಸ್ತ್ರಜ್ಞರಾಗಿರುವ ಇವರು ಫ್ರಂಟ್‌ಲೈನ್ ಪತ್ರಿಕೆಯಲ್ಲಿ 'ರಿ ಡಿಸ್ಕೋರಿಂಗ್ ಎಂಪರ್ರೈರ್ ಅಶೋಕ' ಎಂಬ ಲೇಖನ ಬರೆಯುತ್ತಾ ವಿಶ್ವದ ಮೊಟ್ಟ ಮೊದಲನೆಯ ಪೊಲಿಟಿಕಲ್ ಎಕನಾಮಿಕ್ಸ್ ಸ್ಟೇಟ್ ಕ್ರಾಫ್ಟ್ಸಮನ್ ಎಂಬ ಹೆಗ್ಗಳಿಕೆ ಪಡೆದ

ಕೌಟಿಲ್ಯನ ಮಾರ್ಗದರ್ಶನದಲ್ಲಿ ಉತ್ತಮ ಆಡಳಿತ ನೀಡಿ, ಉಚ್ಛ್ರಾಯ ಸ್ಥಿತಿಯಲ್ಲಿದ್ದ ಮೌರ್ಯರ ಆಡಳಿತ ನಂತರದ ದಿನಗಳಲ್ಲಿ ಮತಾಂತರ ಹಾಗೂ ಯುದ್ಧಗಳಲ್ಲಿ ತೊಡಗುವ ಮೂಲಕ ಭಾರತದ ಆಡಳಿತವೇ ನಿಷ್ಕ್ರಿಯಗೊಂಡಿತು ಎಂದು ಹೇಳಿದ್ದಾರೆ. ಕೌಟಿಲ್ಯನ ಅರ್ಥಶಾಸ್ತ್ರವು ಅಧಿಕಾರ ಕೇಂದ್ರೀಕರಣದ ಬಗ್ಗೆ ಮಹತ್ವ ನೀಡಿತ್ತೇ ಹೊರತು, ಅಧಿಕಾರ ವಿಕೇಂದ್ರೀಕರಣದ ಬಗ್ಗೆ ಒಲವು ಹೊಂದಿರಲಿಲ್ಲ. ಮೌರ್ಯರ ಅಧೋಗತಿಯ ಆಡಳಿತಕ್ಕೆ ಇದು ಒಂದು ಕಾರಣ ಎಂಬುದನ್ನು ಸೇನ್‌ರು ಈ ಲೇಖನದಲ್ಲಿ ಹೇಳಿಲ್ಲ.

- ಡಾ. ಎ.ಜಿ. ನೂರಾನಿ(೨೦೧೧)ಯವರು ಫ್ರಂಟ್‌ಲೈನ್ ಪತ್ರಿಕೆಯಲ್ಲಿ ಬರೆದ 'ಡಿಸ್‌ಮಿಸ್ಸಿಂಗ್ ಚೀಫ್ ಮಿನಿಸ್ಟರ್' ಲೇಖನವನ್ನು ಉಲ್ಲೇಖಿಸುವುದಾದರೆ, ಲೋಕಾಯುಕ್ತ ಕಾನೂನಿಗೆ ಹಲ್ಲೇ ಇಲ್ಲ. ಅಧಿಕಾರದಲ್ಲಿರುವವರು ಲೋಕಾಯುಕ್ತ ಸಂಸ್ಥೆಯನ್ನು ಉದ್ದಕ್ಕೂ ಅಸ್ಥಿರ ಮಾಡುತ್ತಲೇ ಬಂದಿದ್ದಾರೆ ಎಂದು ಹೇಳುವುದರ ಜೊತೆಗೆ ಸಂವಿಧಾನದ ೭೫(೨)ನಿಯಮವನ್ನು ಉಲ್ಲೇಖಿಸಿ 'ದ ಮಿನಿಸ್ಟರ್ ಶಾಲ್ ಹೋಲ್ಡ್ ಆಫೀಸ್ ಡ್ಯುರಿಂಗ್ ಪ್ಲೆಸರ್ ಆಫ್ ದ ಪ್ರೆಸಿಡೆಂಟ್' ಎಂದಿದ್ದಾರೆ. ದಿ ಪೊಜಿಷನ್ ಆಪ್ ದ ಗವರ್ನರ್ ಇಸ್ ಎಕ್ಸ್ಯಾಕ್ಟ್‌ಲಿ ಸೇಮ್ ಆ್ಯಸ್ ಎ ಪೊಜಿಷನ ಆಪ್ ದ ಪ್ರೆಸಿಡೆಂಟ್ ಎಂದು ಅರ್ಥೈಸುವುದಾದರೆ, ಗವರ್ನರ್ ನೇರವಾಗಿ ಭ್ರಷ್ಟ ಮಂತ್ರಿಗಳನ್ನು ವಜಾ ಮಾಡುವ ಅಧಿಕಾರ ಹೊಂದಿದ್ದಾರೆ ಎಂಬುದು ಅವರ ವಾದವಾಗಿದೆ. ನೂರಾನಿಯವರು ಸಂವಿಧಾನದ ವಿಷಯದಲ್ಲಿ ಶಬ್ದಾರ್ಥವನ್ನು ತೆಗೆದುಕೊಂಡು ಹೇಳಿದ್ದಾರೆ, ಹೊರತು ಭಾವಾರ್ಥವನ್ನು ಅವರು ಅರ್ಥೈಸಿಲ್ಲ. ಹಲ್ಲಿಲ್ಲದ ಲೋಕಾಯುಕ್ತ ಕಾನೂನಿನಡಿಯಲ್ಲಿಯೇ ಪರಿಣಾಮಕಾರಿಯಾಗಿ ವರದಿ ನೀಡಿ, ಮುಖ್ಯಮಂತ್ರಿ ಹಾಗೂ ಹಲವಾರು ಮಂತ್ರಿಗಳು ರಾಜೀನಾಮೆಗೆ ಕಾರಣವಾಗಿದ್ದನ್ನು ಅವರು ಸರಿಯಾಗಿ ವಿಮರ್ಶಿಸಲಿಲ್ಲ.

- ಡಾ. ಎನ್. ಗುಪ್ತಾರವರು (೨೦೦೧) 'ಕರಪ್ಶನ್ ಇನ್ ಇಂಡಿಯಾ' ಎಂಬ ಪುಸ್ತಕದಲ್ಲಿ ಭ್ರಷ್ಟಾಚಾರದಲ್ಲಿ ಹಲವಾರು ಸ್ತರದ ಭ್ರಷ್ಟಾಚಾರಗಳಿದ್ದು, ಅವುಗಳಲ್ಲಿ ಪ್ರಮುಖವಾಗಿ ಕಾರ್ಪೋರೇಟ್ ಕರಪ್ಶನ್, ಫೇಕ್ ಪೇಪರ್ಸ್, ಜ್ಯುಡಿಶರಿ, ಆರ್ಮ್‌ಡ್ ಫೋರ್ಸ್ ಮುಂತಾದವುಗಳ ಬಗ್ಗೆ ಪ್ರಸ್ತಾಪಿಸಿದ್ದಾರೆ. ಆದರೆ ಜನಸಾಮಾನ್ಯರಿಗೆ ತುಂಬಾ ತೊಂದರೆ ಉಂಟು ಮಾಡುವಂತಹ ಸಣ್ಣ ಪುಟ್ಟ ಸರ್ಕಾರಿ ಕಛೇರಿಗಳಲ್ಲಿರುವ ಭ್ರಷ್ಟಾಚಾರದ ಬಗ್ಗೆ ಅವರು ಉಲ್ಲೇಖಿಸಿಲ್ಲ.

- ಶ್ರೀ ಎನ್. ವಿಠ್ಠಲರವರು(೨೦೦೩) 'ಕರಪ್ಶನ ಇನ್ ಇಂಡಿಯಾ: ದ ರೋಡ್ ಬ್ಲಾಕ್ ಆಫ್ ನ್ಯಾಷನಲ್ ಪ್ರಾಸ್ಪರಿಟಿ' ಎಂಬ ಗ್ರಂಥದಲ್ಲಿ ಕೇಂದ್ರ ವಿಚಕ್ಷಣ ದಳದ ಹಿಂದಿನ ಮುಖ್ಯಸ್ಥರಾಗಿ ಅಭಿಪ್ರಾಯ ಪಟ್ಟಿದ್ದೇನೆಂದರೆ, ಭಾರತದ ಸರ್ಕಾರಿ ನೌಕರರು ನಿಧಾನ ಮತ್ತು ನೋವು ನೀಡುವಂತಹ ಶೈಲಿಯನ್ನು ಅಳವಡಿಸಿಕೊಂಡಿದ್ದಾರೆ ಎನ್ನುವ ಜೊತೆಗೆ ಭ್ರಷ್ಟಾಚಾರ ಮುಕ್ತವಾದ ಸೇವೆ ಪಡೆಯುವುದು ಕೂಡ ನಮ್ಮ ದೇಶದ ನಾಗರಿಕರೆಲ್ಲರ ಮೂಲಭೂತ ಹಕ್ಕಾಗಬೇಕು.

ಅದಕ್ಕಾಗಿ ಸಂವಿಧಾನಕ್ಕೆ ತಿದ್ದುಪಡಿ ತರಬೇಕೆಂದು ಅಭಿಪ್ರಾಯ ಪಟ್ಟಿದ್ದಾರೆ. ಈಗಾಗಲೇ ಹಲವಾರು ಮೂಲಭೂತ ಹಕ್ಕುಗಳು ಸಂವಿಧಾನ ನಮಗೆ ದೊರಕಿಸಿ ಕೊಟ್ಟಾಗಲೂ ಅದರ ಪ್ರತಿಫಲ ನಾಗರಿಕರಿಗೆ ದೊರೆತಿಲ್ಲ. ಸಂವಿಧಾನಕ್ಕೆ ತಿದ್ದುಪಡಿ ಹೇಗೆ ತರಬೇಕು,ಇದಕ್ಕಾಗಿ ಒತ್ತಡದ ಗುಂಪುಗಳನ್ನು ಹೇಗೆ ನಿರ್ಮಾಣ ಮಾಡಬೇಕು ಎಂಬುದನ್ನು ಉಲ್ಲೇಖಿಸಿಲ್ಲ. ಮೂಲಭೂತ ಹಕ್ಕಾಗಿ ಪರಿವರ್ತನೆಗೊಂಡ ಮಾತ್ರಕ್ಕೆ ಭ್ರಷ್ಟಾಚಾರ ನಿರ್ಮೂಲನೆಯಾಗುತ್ತದೆ ಎಂಬುದನ್ನು ಸರಿಯಾಗಿ ಸಮರ್ಥಿಸಿಕೊಂಡಿಲ್ಲ.

- ಡಾ. ಗೌತಮ್ ನಾವಲ್ಕರವರು(೨೦೧೧) 'ಎಕನಾಮಿಕ್ ಆ್ಯಂಡ್ ಪೊಲಿಟಿಕಲ್ ವೀಕ್ಲಿಯಲ್ಲಿ' ಲೋಕಪಾಲ್ ಮೂಮೆಂಟ್ ಅನ್ ಅನ್ಸರ್ಡ್ ಕ್ವಷ್ಚನ್' ಎಂಬ ಲೇಖನದಲ್ಲಿ ಎನ್‌ಜಿಓಗಳ ಪಾತ್ರದ ಬಗ್ಗೆ ಉಲ್ಲೇಖಿಸುತ್ತ ದೇಶದಲ್ಲಿ ೪ ಲಕ್ಷ ೩೦ ಸಾವಿರದಷ್ಟು ಎನ್‌ಜಿಓಗಳಿವೆ. ಇದರಲ್ಲಿ ಶೇಕಡ ೭೦ರಷ್ಟು ಧಾರ್ಮಿಕ ಸಂಸ್ಥೆಗಳಿವೆ. ಇವುಗಳಲ್ಲಿ ಹೆಚ್ಚಿನ ಸಂಸ್ಥೆಗಳು ದೇಶದ ಜನರ ಮನಸ್ಸುಗಳಲ್ಲಿ ವಿಷ ಬಿತ್ತುವಲ್ಲಿ ನಿರತವಾಗಿವೆ. ಹಾಗೂ ಸಾರ್ವಜನಿಕರಿಂದ ಅಪಾರ ಹಣವನ್ನು ದೇಣಿಗೆ ರೂಪದಲ್ಲಿ ಪಡೆಯುತ್ತಿದ್ದಾರೆ. ಅಣ್ಣಾ ಹಜಾರೆಯವರನ್ನು ಬೆಂಬಲಿಸಿದ ಸಂಸ್ಥೆಗಳು ಕೂಡ ಸಾರ್ವಜನಿಕರಿಂದ ಯಥೇಚ್ಛ ಹಣವನ್ನು ದೇಣಿಗೆ ರೂಪದಲ್ಲಿ ಪಡೆಯುತ್ತಿವೆ ಎಂದು ಆರೋಪಿಸಿದ್ದಾರೆ. ದೇಶದ ಪ್ರಮುಖ ಸಾಮಾಜಿಕ ಚಳುವಳಿಗಳ ಹಿಂದಿನ ಶಕ್ತಿಗಳೇ ಈ ಎನ್‌ಜಿಓಗಳು. ಎನ್‌ಜಿಓ ಗಳ ಹೋರಾಟದ ಫಲವಾಗಿಯೇ ಆರ್‌ಟಿಐ ನಂತಹ ಕ್ರಾಂತಿಕಾರಿ ಕಾನೂನು ರೂಪುಗೊಂಡಿತು. ಯಾವುದಾದರು ಸಂಸ್ಥೆ ಕೆಲಸ ಕಾರ್ಯಮಾಡಬೇಕಾದರೆ, ಯಾರಾದರೂ ಹಣವನ್ನು ದೇಣಿಗೆ ರೂಪದಲ್ಲಿ ಕೊಡಲೇ ಬೇಕಾಗುತ್ತದೆ. ಹೆಚ್ಚು ಕ್ರಿಯಾಶೀಲವಾಗಿರುವ ಸಂಸ್ಥೆಗೆ ಹೆಚ್ಚು ಹಣದ ಅವಶ್ಯಕತೆ ಇರುತ್ತದೆ. ಅದೇ ರೀತಿ ಹೆಚ್ಚಿನ ಮಾನವ ಸಂಪನ್ಮೂಲ ಕೂಡ ಬೇಕಾಗುತ್ತದೆ ಎಂಬ ಅಂಶವನ್ನು ಲೇಖಕರು ಗಮನಕ್ಕೆ ತೆಗೆದುಕೊಂಡಿಲ್ಲ.

- ಡಾ. ವಿವೇಕ ರೈಯವರು (೨೦೧೦) ಸಂಪಾದಿಸಿದ 'ಪ್ರವಾಸಿ ಕಂಡ ವಿಜಯನಗರ' ಎಂಬ ಗ್ರಂಥದಲ್ಲಿ ಪ್ರವಾಸಿ ಫರ್ನಾವ್ ನೂನಿಚ್ ಹೇಳಿಕೆಯನ್ನು ಉಲ್ಲೇಖಿಸಿ ವಿಜಯನಗರ ರಾಜ್ಯದಲ್ಲಿ ವ್ಯವಹಾರ ಮಾಡಬೇಕಿದ್ದರೆ ರಾಜನಿಗೆ ಅತ್ಯುತ್ತಮ ಕುದುರೆ ಲಂಚವಾಗಿ ನೀಡಬೇಕು. ಎಲ್ಲ ಅಧಿಕಾರಿಗಳಿಗೂ ಲಂಚ ಕೊಡಬೇಕು. ತಮಗೆ ಲಂಚ ನೀಡದಿದ್ದರೆ ಅವರು ಏನನ್ನೂ ಮಾಡರು ಎಂದು ಹೇಳಲಾಗಿದೆ. ಆಶ್ಚರ್ಯವೆಂದರೆ, ವಿಶ್ವದ ಅತ್ಯಂತ ಶ್ರೀಮಂತಿಕೆಯಲ್ಲಿ ಮೆರೆಯುತ್ತಿರುವ ರಾಜನು ಕೂಡ ಲಂಚಕ್ಕೆ ಕೈಯೊಡ್ಡುತ್ತಿರುವ ಹಿನ್ನೆಲೆಯ ಬಗ್ಗೆ ವಿವರಿಸಿಲ್ಲ ಎಂಬುದನ್ನು ಇಲ್ಲಿ ಗಮನಿಸಬಹುದಾಗಿದೆ.

- ಡಾ. ಸಿ.ಜಿ ಸೋಮಯ್ಯರವರು(೨೦೧೦)'ದಿ ಹಾನೆಸ್ಟ್ ಆಲವೇಜ್ ಸ್ಟ್ಯಾಂಡ್ ಅಲೋನ್' ಎಂಬ ಗ್ರಂಥದಲ್ಲಿ ಆರ್‌ಟಿಐ, ಓಂಬುಡ್ಸಮನ್, ವಿಸ್ಲ್ ಬ್ಲೋವರ್ಸ್,ಪೋಲಿಸ್ ಮತ್ತು ಕೋರ್ಟ್‌ಗಳ ಮೂಲಕ ಭ್ರಷ್ಟಾಚಾರವನ್ನು ಮಟ್ಟ ಹಾಕಬೇಕೆಂದು ಹೇಳಿದ್ದಾರೆ. ಆಶ್ಚರ್ಯವೆಂದರೆ ನಾಗರಿಕ ಸಮಾಜದ ಸಹಭಾಗಿತ್ವ ಕುರಿತಾಗಲೀ, ಲೋಕಾಯುಕ್ತ ಎಂಬ ಸಂಸ್ಥೆಯ ಕುರಿತಾಗಲೀ, ರಾಜಕೀಯ ಇಚ್ಚಾಶಕ್ತಿಯ ಬಗ್ಗೆಯಾಗಲೀ ಅವರು ಹೇಳಲಿಲ್ಲ.
- ಡಾ. ಪ್ರಫುಲ್ಲ ಬಿಸ್ವಿಯವರು(೨೦೦೮) 'ಇಂಡಿಯಾ: ಲೀಗಲ್ ಸಿಸ್ಟಮ್ ಇನ್ ಡಾರ್ಕ' ಎಂಬ ಪುಸ್ತಕದಲ್ಲಿ ಪ್ರಕರಣ ವಿಲೇವಾರಿಯಲ್ಲಿ ನಿಧಾನಗತಿ, ನ್ಯಾಯಾಧೀಶರ ಕೊರತೆ ಹಾಗೂ ಸಂಕೀರ್ಣವಾದ ಕಾನೂನುಗಳಿಂದ ನ್ಯಾಯಾಂಗದಲ್ಲೂ ಸಾಕಷ್ಟು ಭ್ರಷ್ಟಾಚಾರ ಕಂಡು ಬರುತ್ತದೆ ಎಂದು ಹೇಳಿದ್ದಾರೆ. ವಿಚಿತ್ರವೆಂದರೆ, ಆರೋಪ ಪಟ್ಟಿ ಹಾಕುವಾಗಿನ ಲೋಪ ದೋಷಗಳ ಬಗ್ಗೆ ಕೋರ್ಟ್ ಗಮನ ಹರಿಸದೇ ಇರುವ ಕುರಿತಾಗಲೀ ಫೆವರೆಬಲ್ ಬೆಂಚ್ ಎಂಬ ವಕೀಲರ ಕಾರ್ಯತಂತ್ರಗಳಿಂದ ನ್ಯಾಯಾಂಗದಲ್ಲಿ ಭ್ರಷ್ಟಾಚಾರ ಹೆಚ್ಚುತ್ತದೆ ಎಂಬ ಬಗ್ಗೆಯಾಗಲೀ ಉಲ್ಲೇಖಿಸಿಲ್ಲ.
- ನ್ಯಾ. ವಿ.ಆರ್. ಕೃಷ್ಣ ಅಯ್ಯರ್ (೧೯೭೬)ಅವರು ತಮ್ಮ 'ಸೋಶಿಯಲ್ ಮಿಷನ್ ಆಫ್ ಸರ್ವಿಸ್ ಮ್ಯಾಟರ್ಸ್' ಎಂಬ ಗ್ರಂಥದಲ್ಲಿ ಸುಪ್ರಿಂ ಕೋರ್ಟಿನ ನಿವೃತ್ತ ನ್ಯಾಯಾಧೀಶರಾಗಿ ಬರೆದಿದ್ದೇನೆಂದರೆ, ಕಾನೂನು ಏನು ಹೇಳುತ್ತದೋ ಅದು ಕಾನೂನು ಅಲ್ಲ. ಕಾನೂನು ಏನು ಮಾಡುತ್ತದೋ ಅದು ಕಾನೂನು. ಮನುಷ್ಯನಿಗೆ ಅವಶ್ಯಕತೆ ಹಾಗೂ ಅತಿ ಆಶೆ ಎಂಬುದು ಬೆನ್ನಿಗೆ ಹತ್ತಿದ ಬೇತಾಳಗಳೇ ಸರಿ. ಅವಶ್ಯಕತೆಯನ್ನು ಪೂರೈಸಬಹುದು. ಅತ್ಯಾಶೆಯನ್ನು ಪೂರೈಸಲಾಗದು. ಮನುಷ್ಯನ ಅತ್ಯಾಶೆಯನ್ನು ನೈತಿಕ ಪಾಠದಿಂದ ಹತ್ತಿಕ್ಕಬೇಕೆಂದು ಹೇಳಿದ್ದಾರೆ. ಆದರೆ ಬಲವಾದ ಕಾನೂನಿನ ಜಾರಿಗೆ ಬಗ್ಗೆ ಅವರು ಇಲ್ಲಿ ಹೇಳಲಿಲ್ಲ. ಭ್ರಷ್ಟಾಚಾರದಲ್ಲಿ ನಿರತನಾದ ಸರ್ಕಾರಿ ನೌಕರನ ವಿರುದ್ಧವಾಗಿ ಮೇಲಾಧಿಕಾರಿಯೇ ಭ್ರಷ್ಟಾಚಾರ ಕಾಯ್ದೆ ಹಾಗೂ ನಾಗರಿಕ ಸೇವಾ ಶಿಸ್ತು ನಿಯಮಾವಳಿ ೮ರ ಪ್ರಕಾರ ೧) ಇನ್‌ಕ್ರೀಮೆಂಟ್ ಕಡಿತ ೨) ನೌಕರರ ವೇತನದಿಂದ ಹಣ ವಸೂಲಿ ೩) ಮುಂಬಡ್ತಿಗೆ ತಡೆ ೪) ಹಿಂಬಡ್ತಿ ೫) ಸೇವೆಯಿಂದ ಕಡ್ಡಾಯ ನಿವೃತ್ತಿ ೬) ಸೇವೆಯಿಂದ ವಜಾ ಮಾಡಬಹುದು ಎಂದು ಹೇಳಿದ್ದಾರೆ. ಆದರೆ ವಾಸ್ತವವಾಗಿ ಬಹಳ ಗಂಭೀರವಾದ ಅಪರಾಧ ಎಸಗಿದಾಗಲೂ ಇನಕ್ರಿಮೆಂಟ್ ತಡೆಯುವಂತಹ ಸಣ್ಣ ಶಿಕ್ಷೆ ವಿಧಿಸುವ ಆಡಳಿತಶಾಹಿಯ ಬಗ್ಗೆ ಆಕ್ಷೇಪವೇ ಎತ್ತಿಲ್ಲ.
- ಡಾ. ಚಂದ್ರಶೇಖರ್ ಟಿ.ಆರ್.(೧೯೯೯) 'ಅಮರ್ತ್ಯ ಸೇನ್ ಅಭಿವೃದ್ಧಿ ಕಥನ' ಎಂಬ ಪುಸ್ತಕದಲ್ಲಿ ಹಸಿವೆಯಿಂದ ಜನರು ಬಳಲುತ್ತಿದ್ದಾರೆ ಎಂದರೆ ಅವರಿಗೆ ಉಣ್ಣಲು ಆಹಾರ

ಇಲ್ಲವೆಂದಲ್ಲ, ಬದಲಾಗಿ ಅವರಿಗೆ ಉಗ್ರಾಣದಲ್ಲಿರುವ ಆಹಾರವನ್ನು ಸರಿಯಾಗಿ ಪೂರೈಕೆ ಮಾಡುವಲ್ಲಿ ಸರ್ಕಾರ ವಿಫಲವಾಗಿದೆ ಎಂದು ಅರ್ಥ ಎಂದು ಅಮರ್ತ್ಯ ಸೇನ್ ಹೇಳಿದ್ದನ್ನು ಉಲ್ಲೇಖಿಸಿದ್ದಾರೆ. ಆದರೆ ಸರ್ಕಾರ ಉತ್ತಮ ಆಡಳಿತ ನೀಡುವುದರ ಬಗೆ ಹೇಗೆ ಎಂಬುದು ನಮಗೆ ಪ್ರಶ್ನಾರ್ಹವಾಗಿಯೇ ಉಳಿದಿದೆ.

- ಡಾ. ಚಂದ್ರಶೇಖರ್ ಟಿ.ಆರ್(೨೦೧೦) ಸಂಪಾದಿಸಿದ 'ವಿಜಾಪೂರ ಜಿಲ್ಲಾ ಮಾನವ ಅಭಿವೃದ್ಧಿ' ಎಂಬ ಪುಸ್ತಕದಲ್ಲಿ ಯು.ಎನ್.ಡಿ.ಪಿ.ಎ ಯ ೨೦೦೨ರ ಮಾನವ ಅಭಿವೃದ್ಧಿ ವರದಿಯಲ್ಲಿ ಉತ್ತಮ ಆಡಳಿತವನ್ನು ಅಭಿವೃದ್ಧಿ ಪ್ರಕ್ರಿಯೆಯಲ್ಲಿನ ಮಹತ್ವದ ಒಂದು ಮಿಸ್ಸಿಂಗ್ ಲಿಂಕ್ ಎಂದು ಗುರುತಿಸಲಾಗಿದೆ ಎಂದು ಹೇಳಿದ್ದಾರೆ. ಅನೇಕ ಸರ್ಕಾರಿ ಕಛೇರಿಗಳಲ್ಲಿ ಕೆಲಸದ ವಾತಾವರಣ ಮಾಯವಾಗಿ, ಸಂತೆಯ ವಾತಾವರಣ ನಿರ್ಮಾಣಗೊಂಡಿರುತ್ತದೆ ಎಂದು ಉಲ್ಲೇಖಿಸಿದ್ದಾರೆ. ಆದರೆ ಈ ಸಂತೆಯ ವಾತಾವರಣವು ಆಡಳಿತದ ಮೇಲೆ ಎಂತಹ ದುಷ್ಪರಿಣಾಮ ಬೀರುತ್ತದೆ ಎಂದು ವಿವರಿಸಿಲ್ಲ.
- ಶ್ರೀ ಎಂ.ಎನ್ ವೋಹ್ರಾರವರ(೨೦೦೩) 'ರಿಪೋರ್ಟ್ ಅಫ್ ಗುಡ್ ಗವರ್ನನ್ಸ್' ನಲ್ಲಿ ಕೇಂದ್ರ ಗೃಹ ಸಚಿವಾಲಯದ ಕಾರ್ಯದರ್ಶಿಯಾದ ಇವರು ಕೇಂದ್ರಕ್ಕೆ ಕೊಟ್ಟ ವರದಿಯಲ್ಲಿ ಸರ್ಕಾರ, ಸಂಸತ್ತು, ನ್ಯಾಯಾಂಗ, ಮಾಧ್ಯಮ ಹಾಗೂ ಖಾಸಗಿ ವಲಯಗಳು ಹೆಚ್ಚೆಚ್ಚು ಸಾರ್ವಜನಿಕ ಉತ್ತರದಾಯಿತ್ವ ಮತ್ತು ಪಾರದರ್ಶಕತೆಯನ್ನು ಆಳವಡಿಸಕೊಳ್ಳಬೇಕೆಂದು ಹೇಳಿದ್ದಾರೆ. ಟೆಂಡರ್ ಪ್ರಕ್ರಿಯೆಯಲ್ಲಿ ಹಾಗೂ ಗುತ್ತಿಗೆ ನೀಡುವಿಕೆಯಲ್ಲಿ ದೊಡ್ಡ ಪ್ರಮಾಣದ ಭ್ರಷ್ಟಾಚಾರ ಅಡಗಿದೆ ಎಂದು ವಿವರಿಸಿದ್ದಾರಲ್ಲದೇ ೨೦೦೧ರ ವಿಶ್ವ ಸಂಸ್ಥೆ ದಕ್ಷಿಣ ಏಷ್ಯಾದ ಅಭಿವೃದ್ಧಿ ಯೋಜನೆಗಳ ವರದಿಯಲ್ಲಿ ಭಾರತದಲ್ಲಿ ಈಗ ಇರುವ ಭ್ರಷ್ಟಾಚಾರವನ್ನು ಕೇವಲ ಶೇಕಡ ಒಂದರಷ್ಟು ಇಳಿಸಿದರೂ ಸಾಕು ಭಾರತದ ಜಿಡಿಪಿ ಶೇಕಡ ಒಂದೂವರೆಯಷ್ಟು ಹೆಚ್ಚುತ್ತದೆ ಎಂದು ದಾಖಲಿಸಿದ್ದಾರೆ. ಆದರೆ ಕೇಂದ್ರ ಸರ್ಕಾರಿ ನೌಕರರಲ್ಲಿ ಭ್ರಷ್ಟಾಚಾರವನ್ನು ಗಣನೀಯ ಪ್ರಮಾಣದಲ್ಲಿ ಕುಗ್ಗಿಸಲು ನೆರವಾಗುವ ಲೋಕಪಾಲ ಮಸೂದೆಯ ಬಗ್ಗೆ ಉಲ್ಲೇಖಿಸಿಲ್ಲ.
- ಡಾ. ಮಾಧವ ಗೋಡಬೊಲೆಯವರ(೨೦೦೧) 'ರಿಪೋರ್ಟ್ ಆಫ್ ದ ಒನ್ ಮ್ಯಾನ್ ಆನ್ ಗುಡ್ ಗವರ್ನನ್ಸ್' ನಲ್ಲಿ ಮಹಾರಾಷ್ಟ್ರದ ಹಿರಿಯ ಐ.ಎ.ಎಸ್ ಅಧಿಕಾರಿಯಾದ ಇವರು ಸರ್ಕಾರದ ಎಲ್ಲ ಸಣ್ಣಪುಟ್ಟ ಕಾರ್ಯಕ್ರಮಗಳು ನೇರವಾಗಿ ಸಾರ್ವಜನಿಕರ ಮೇಲೆ ಪರಿಣಾಮ ಬೀರುತ್ತವೆ. ಸಾಮಾಜಿಕ ದುರ್ಬಲ ವರ್ಗದವರಿಗಾಗಿ ಇನ್ನೂ ಹೆಚ್ಚೆಚ್ಚು ಆರ್ಥಿಕ ಹಾಗೂ ಸಾಮಾಜಿಕವಾಗಿ ಸಬಲೀಕರಣಗೊಳಿಸುವ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು. ಸರ್ಕಾರಿ ಅಧಿಕಾರಿಗಳು ಪ್ರತಿವರ್ಷ ಆಸ್ತಿ ಪಾಸ್ತಿಯನ್ನು ಘೋಷಿಸಕೊಳ್ಳಬೇಕು. ಭ್ರಷ್ಟಾಚಾರ

ನಿರ್ಮೂಲನೆಗಾಗಿ ವಿಶೇಷ ಕೋರ್ಟುಗಳ ಸ್ಥಾಪನೆ ಮಾಡಬೇಕು ಎಂದು ಹೇಳಲಾಗಿದೆ. ಆದರೆ ಜನ ಪ್ರತಿನಿಧಿಗಳ ಭ್ರಷ್ಟಾಚಾರದ ಬಗ್ಗೆ ಎಲ್ಲೂ ಕೂಡ ವರದಿಯಲ್ಲಿ ಪ್ರಸ್ತಾಪಿಸಿಲ್ಲ.

- ನ್ಯಾ. ಎನ್. ವೆಂಕಟಾಚಲ(೨೦೦೫)ರವರು ನೀಡಿದ ರಾಜ್ಯ ಲೋಕಾಯುಕ್ತರ ವಾರ್ಷಿಕ ವರದಿಯಲ್ಲಿ ೨೦೦೪ರಲ್ಲಿ ನಡೆದ ೮ ನೇ ಅಖಿಲ ಭಾರತ ಲೋಕಾಯುಕ್ತ ಸಮ್ಮೇಳನವನ್ನು ಉದ್ಘಾಟಿಸಿ ಅಂದಿನ ರಾಷ್ಟ್ರಪತಿ ಡಾ.ಅಬ್ದುಲ್ ಕಲಾಂರವರು ಭ್ರಷ್ಟಾಚಾರ ನಿರ್ಮೂಲನೆ ತಮ್ಮ ತಮ್ಮ ಮನೆಯಿಂದ ಆರಂಭಿಸಬೇಕು. ಅಕ್ರಮ ಹಣದಿಂದ ತಂದೆ ಕೊಡಿಸುವ ಬೈಕ್,ಕಾರು ಏರುವುದಿಲ್ಲ. ಈ ಹಣ ಹೇಗೆ ಬಂತು ಎಂದು ಮಕ್ಕಳು ಕೇಳುವಂತಾಗಬೇಕೆಂದು ಭಾಷಣ ಮಾಡಿದ್ದಾರೆ. ಆದರೆ ಲೋಕಾಯುಕ್ತ ಹಾಗೂ ಲೋಕಪಾಲ ಬಗ್ಗೆ ಗಂಭೀರವಾಗಿ ವಿಮರ್ಶಿಸಲಿಲ್ಲ.
- ನ್ಯಾ. ಎನ್. ವೆಂಕಟಾಚಲ (೨೦೦೫)ರವರು ನೀಡಿದ ರಾಜ್ಯ ಲೋಕಾಯುಕ್ತರ ವಾರ್ಷಿಕ ವರದಿಯಲ್ಲಿ ೨೦೦೪ರಲ್ಲಿ ನಡೆದ ೮ ನೇ ಅಖಿಲ ಭಾರತ ಲೋಕಾಯುಕ್ತ ಸಮ್ಮೇಳನದಲ್ಲಿ ಪ್ರಧಾನಿ ಶ್ರೀ ಮನಮೋಹನಸಿಂಗ ಮಾತನಾಡುತ್ತಾ ತಮ್ಮ ಪರವಾಗಿ ಲೋಕಾಯುಕ್ತ ಸಂಸ್ಥೆ ಯೊಂದು ಇದೆ ಎಂಬ ನಂಬಿಕೆಯೇ ಸಾರ್ವಜನಿಕರಲ್ಲಿ ಸ್ವಚ್ಛ ಆಡಳಿತದ ಬಗ್ಗೆ ಭರವಸೆಯ ವಾತಾವರಣ ಮೂಡಿಸುತ್ತದೆ. ಕೇಂದ್ರದಲ್ಲಿ ಬಹಳ ಬೇಗ ಲೋಕಪಾಲ ಮಸೂದೆ ತರುತ್ತೇವೆ. ಇದರಿಂದ ಕೇಂದ್ರ ಸರ್ಕಾರದ ನೌಕರರಲ್ಲೂ ಭ್ರಷ್ಟತೆ ನಿರ್ಮೂಲನೆಗೊಳ್ಳಲಿದೆ ಎಂದಿದ್ದರು.ಈ ಮಾತಿಗೆ ೯ ವರ್ಷ ತುಂಬಿದ.ನಂತರ ಒಲ್ಲದ ಮನಸ್ಸಿನಿಂದ ಲೋಕಪಾಲ ಜಾರಿಗೆ ತಂದರು.
- ಶ್ರೀ ಸಂತಾನಂ ಕೆ.ಎ. (೧೯೬೪) ಭಾರತದ ಅಂದಿನ ಸಂಸತ್ ಸದಸ್ಯರೂ ಹಾಗೂ ಕೇಂದ್ರ ಸರ್ಕಾರದ ಭ್ರಷ್ಟಾಚಾರ ನಿವಾರಣಾ ಸಮಿತಿಯ ಅಧ್ಯಕ್ಷರೂ ಆಗಿದ್ದ ಇವರು ಸರ್ಕಾರಕ್ಕೆ ಕೊಟ್ಟ ತಮ್ಮ ವರದಿಯಲ್ಲಿ ಭ್ರಷ್ಟಾಚಾರವನ್ನು ಕುರಿತಂತೆ 'ಭ್ರಷ್ಟಾಚಾರವು, ಸರ್ಕಾರದ ಅಧಿಕಾರ ಸ್ಥಾನಕ್ಕೆ ಅಥವಾ ಸಾರ್ವಜನಿಕ ಜೀವನದಲ್ಲಿ ವ್ಯಕ್ತಿಯೊಬ್ಬನು ಹೊಂದಿರುವ ವಿಶೇಷ ಸ್ಥಾನಮಾನಕ್ಕೆ ಹೊಂದಿಕೊಂಡ ಅಧಿಕಾರ ಮತ್ತು ಪ್ರಭಾವದ ಅನುಚಿತ ಅಥವಾ ಸ್ವಹಿತದ ಬಳಕೆಯನ್ನು ಒಳಗೊಳ್ಳುತ್ತದೆ.' ಎಂದು ವ್ಯಾಖ್ಯಾನಿಸಿದ್ದಾರೆ,
- ನ್ಯಾ. ಎನ್. ವೆಂಕಟಾಚಲ(೨೦೦೫)ರವರು ನೀಡಿದ ರಾಜ್ಯ ಲೋಕಾಯುಕ್ತರ ವಾರ್ಷಿಕ ವರದಿಯಲ್ಲಿ ೨೦೦೪ರಲ್ಲಿ ನಡೆದ ೮ ನೇ ಅಖಿಲ ಭಾರತ ಲೋಕಾಯುಕ್ತ ಸಮ್ಮೇಳನದಲ್ಲಿ ಭ್ರಷ್ಟಾಚಾರದ ವಿಷಯದಲ್ಲಿ ಟ್ರಾನ್ಸಪೆರೆನ್ಸಿ ಇಂಟರನ್ಯಾಷನಲ್ ಸಂಸ್ಥೆ ಮಾಡಿದ ಸರ್ವೆಗಳು ಸತ್ಯದಿಂದ ಕೂಡಿಲ್ಲ. ಅಂತರಾಷ್ಟ್ರಿಯ ಮಟ್ಟದಲ್ಲಿ ಭಾರತದ ಘನತೆ ಕುಗ್ಗಿಸುವಂತಹ ಪಿತೂರಿ ಇದರಲ್ಲಿ ಅಡಗಿದೆ ಎಂದು ಅಂದಿನ ಉಪ ರಾಷ್ಟ್ರಪತಿ ಶ್ರೀ ಭೈರೂನ್ ಸಿಂಗ್ ಶೇಖಾವತ್

ಅಭಿಪ್ರಾಯಪಟ್ಟರು. ಆದರೆ ಇದರ ಬಗ್ಗೆ ಈವರೆಗೂ ಸರಿಯಾದ ಸತ್ಯ ಅರಿಯಲು ಯಾರೂ ಪ್ರಯತ್ನಿಸಿಲ್ಲ.

- ಖ್ಯಾತ ನ್ಯಾಯವಾದಿ ಶ್ರೀ ಫಾಲಿ ಎಸ್. ನಾರಿಮನ್‌ರವರು (೨೦೦೬)ರ 'ಔಟ್‌ಲುಕ್'ನಲ್ಲಿ ಬರೆದ ಲೇಖನವೊಂದರಲ್ಲಿ ಲೋಕಾಯುಕ್ತ ಸಂಸ್ಥೆಯನ್ನು 'ದಿ ಕಸ್ಟೋಡಿಯನ್ ಆಫ್ ಪಬ್ಲಿಕ್ ಕಾನ್ಸಿಯಸ್' ಎಂದು ಕರೆದಿದ್ದಾರೆ. ಆದರೆ ಆ ರೀತಿ ಅದು ಕೆಲಸ ಮಾಡುತ್ತಿದೆಯಾ ಎನ್ನುವುದರ ಬಗ್ಗೆ ವಿವರಿಸಿಲ್ಲ.

- ಶ್ರೀ ಪಾಟೀಲ ಪುಟ್ಟಪ್ಪನವರು(೧೯೯೫) 'ಪ್ರಪಂಚ' ಪತ್ರಿಕೆಯಲ್ಲಿ ಭ್ರಷ್ಟಾಚಾರಿಗಳಿಗೆ ಗಲ್ಲು ಯಾವಾಗ? ಎಂಬ ಲೇಖನದಲ್ಲಿ ಭಾರತದ ಮೊದಲನೆಯ ಪ್ರಧಾನಿ ಜವಾಹರಲಾಲ್ ನೆಹರುರವರು ತಮ್ಮ ಸ್ವಾತಂತ್ರೋತ್ಸವದ ಚೊಚ್ಚಲ ಭಾಷಣ ಮಾಡುತ್ತ ದೇಶದಲ್ಲಿ ಇನ್ನು ಮೇಲೆ ಭ್ರಷ್ಟಾಚಾರ ಇರದು. ಯಾರಾದರೂ ಭ್ರಷ್ಟಾಚಾರಿ ಎಂದು ಕಂಡುಬಂದರೆ ಅಂಥವರನ್ನು ಸಾರ್ವಜನಿಕವಾಗಿ ವಿದ್ಯುತ್ ಕಂಬಕ್ಕೆ ನೇಣು ಹಾಕಲಾಗುವುದು ಎಂದು ಹೇಳಿದ್ದರು. ಅಂದಿನಿಂದ ಇಂದಿನವರೆಗೂ ಸಾವಿರಾರು ಜನರು ಲಕ್ಷಾಂತರ ಕೋಟಿ ಹಣದ ಭ್ರಷ್ಟಾಚಾರ ಎಸಗಿದರೂ ಒಬ್ಬರನ್ನೂ ನೇಣುಗಂಬಕ್ಕೆ ಏರಿಸಲಿಲ್ಲ. ಹಲವಾರು ಪ್ರಕರಣಗಳಲ್ಲಿ ಕೋರ್ಟುಗಳೇ ಭ್ರಷ್ಟಾಚಾರ ತಡೆಯದಂತೆ ಕೈ ಕಟ್ಟುತ್ತಿವೆ ಎಂದು ಬರೆದಿದ್ದಾರೆ, ಆದರೆ ಕಾನೂನು ವಿಮರ್ಶೆ ಮಾಡಿಲ್ಲ.

- ನ್ಯಾ. ಎನ್. ವೆಂಕಟಾಚಲ(೨೦೦೫)ರವರು ನೀಡಿದ ಲೋಕಾಯುಕ್ತರ ವಾರ್ಷಿಕ ವರದಿಯಲ್ಲಿ ಶ್ರೀ ಸಿ.ರಾಜಗೋಪಾಲಾಚಾರಿಯವರು ೧೯೨೨ರಷ್ಟು ಹಿಂದೆಯೇ ಭಾರತಕ್ಕೆ ಸ್ವಾತಂತ್ರ್ಯ ದೊರಕಿದರೆ, ಭ್ರಷ್ಟಾಚಾರವು ಭಾರತದ ಜನರ ಬದುಕು ನರಕ ಮಾಡಲಿದೆ. ಮುಂದೊಂದು ದಿನ ಬ್ರಿಟಿಷರ ಆಡಳಿತ ನೆನೆಸಿಕೊಂಡು ಮರುಗುವ ಕಾಲ ಬರುತ್ತದೆ. ಒಂದೇ ಸಮಾಧಾನ ಎಂದರೆ ನಾವು ಗುಲಾಮಗಿರಿಯಿಂದ ಪಾರಾಗುತ್ತೇವೆ ಎನ್ನುವುದು. ರಾಮರಾಜ್ಯ ಎಂಬುದು ಎಂದೂ ಆಸ್ತಿತ್ವದಲ್ಲಿ ಇರಲಿಲ್ಲ. ಮುಂದೆಯೂ ಆಸ್ತಿತ್ವಕ್ಕೆ ಬರಲಾರದು. ಅದೊಂದು ಆದರ್ಶ ಕಲ್ಪನೆ ಮಾತ್ರ .ಈ ಆದರ್ಶ ಇಟ್ಟುಕೊಂಡು ಮುಂದೆ ಸಾಗಬೇಕೆಂಬ ಅವರ ಅಂದಿನ ಭಾಷಣವನ್ನು ಉಲ್ಲೇಖಿಸಿದ್ದಾರೆ. ಆದರೆ ಹಲವಾರು ಸಮರ್ಥ ಹಾಗೂ ಪ್ರಾಮಾಣಿಕ ಆಡಳಿತಗಾರರ ಬಗ್ಗೆ ಎಲ್ಲೂ ಹೇಳಿಲ್ಲ.

- ಕ್ಯಾ. ಗೋಪಿನಾಥ್ (೨೦೧೦) ಸಿಂಪ್ಲಿಫ್ಲೈ ಎ ಡೆಕ್ಕನ್ ಒಡಿಸ್ಸಿ ಎಂಬ ಪುಸ್ತಕದಲ್ಲಿ, ತನ್ನ ಒಡಲಲ್ಲಿ ಬಡತನ, ಅಧಿಕಾರಿಶಾಹಿ, ಅಜ್ಞಾನ, ಹಾಗೂ ಭ್ರಷ್ಟಾಚಾರ ಎಲ್ಲವನ್ನು ಸಲುಹಿಕೊಂಡಿರುವ ಭಾರತವು ಸಾಧ್ಯತೆಗಳ ಬೀಡು. ಹಾಗೆ ನೋಡಿದರೆ ನಾವು ಸದಾ

ಬೈದುಕೊಳ್ಳುವ ಈ ವ್ಯವಸ್ಥೆಯಲ್ಲಿ ನಾವೇ ಕೆಲವೊಮ್ಮೆ ಸಂಚುಕೋರರು, ಫಲಾನುಭವಿಗಳು, ಬಲಿಪಶುಗಳು ಎಲ್ಲ ಆಗಿದ್ದು ವ್ಯವಸ್ಥೆಯ ಬಗ್ಗೆ ಏನನ್ನೂ ಮಾತನಾಡದ ಮೂಕ ಪ್ರೇಕ್ಷಕರಾಗಿದ್ದೇವೆ. ವಿವೇಕವಿಲ್ಲದ ಆಡಳಿತ ಹಾಗೂ ಉಸಿರು ಗಟ್ಟಿಸುವಂತಹ ಭ್ರಷ್ಟಾಚಾರ ಭಾರತವನ್ನು ಅತ್ಯಂತ ಹಿಂದುಳಿದ ದೇಶವನ್ನಾಗಿಸಿದೆ. ಉತ್ತಮ ಆಡಳಿತ ಹಾಗೂ ಉತ್ತರ ದಾಯಿತ್ವವನ್ನು ಕೇಳುತ್ತಿರುವುದನ್ನೇ ತಪ್ಪಾಗಿ ಪರಿಣಮಿಸುತ್ತಲಿದೆ. ಸಮಾಜದ ಹಿತಾಸಕ್ತಿ ಕಡೆಗಣಿಸಿ ಅಥವಾ ಸರ್ಕಾರದ ಬೊಕ್ಕಸಕ್ಕೆ ನಷ್ಟವಾಗುವಂತೆ ನಾವು ವರ್ತಿಸುತ್ತೇವೆ. ಸರ್ಕಾರ ಬದಲಿಸುವುದರಿಂದ ನಾವು ಭ್ರಷ್ಟಾಚಾರವನ್ನು ತಗ್ಗಿಸಲು ಸಾಧ್ಯವಿಲ್ಲ. ಬದಲಾಗಿ ಸಶಕ್ತ ಕಾನೂನು ರಚಿಸುವ ಮೂಲಕ ಇದನ್ನು ತಡೆಗಟ್ಟಬಹುದು.ಇದನ್ನೇ ಚಿಮ್ಮುವ ಹಲಗೆ ಎಂದು ಸ್ವೀಕರಿಸಿದ ನನ್ನಂತಹ ಹಲವರು ವಿಶ್ವ ಬೆರಗಾಗುವ ಸಾಧನೆ ಮಾಡುತ್ತ ನಡೆದವು ಎಂದು ತಮ್ಮ ಖಾಸಗಿ ರಂಗದ ಸಾಧನೆಯ ಬಗ್ಗೆ ಹೇಳಿದ್ದಾರೆಯೇ ಹೊರತು ಭ್ರಷ್ಟಾಚಾರ ಹೆಚ್ಚಾಗಿರುವ ಸಾರ್ವಜನಿಕ ರಂಗದ ಸಾಧನೆಗಳ ಬಗ್ಗೆ ವಿವರಿಸಿಲ್ಲ.

- ಶ್ರೀ ಮಹಾತ್ಮಾ ಗಾಂಧಿ(೧೯೬೧)ಯವರ 'ಬಂಚ್ ಅಪ್ ಲೆಟರ್ಸ್' ಎಂಬ ಪುಸ್ತಕದಲ್ಲಿ ಪ್ರಾಮಾಣಿಕತೆಯನ್ನು ಬಲಿಕೊಟ್ಟು ಸ್ವಾತಂತ್ರ್ಯವನ್ನು ಪಡೆಯುವುದಕ್ಕಿಂತ ಭಾರತ ವಿನಾಶ ಹೊಂದುವುದು ಹೆಚ್ಚು ಲೇಸೆಂಬುವುದು ನನ್ನ ಅಭಿಮತ. ರಾಜಕೀಯ ಸಂಪರ್ಕ ಇಲ್ಲದೇ ಸಮಾಜ ಸೇವೆಯಂತಹ ಕೆಲಸವನ್ನು ನಡೆಸುವುದು ಅಸಾಧ್ಯ. ಆತ್ಮದ ಸ್ವರೂಪವೇ ಸತ್ಯ. ಬದುಕಿನ ಸಕಲ ವ್ಯವಹಾರಗಳಲ್ಲೂ ಪ್ರಾಮಾಣಿಕತೆ ಅನುಷ್ಠಾನಕ್ಕೆ ತರಬೇಕು. ಎಲ್ಲ ಕ್ಷೇತ್ರದಲ್ಲೂ ವಿಶೇಷವಾಗಿ ಆಡಳಿತಗಾರರಲ್ಲಿ ಅದನ್ನು ಅನುಷ್ಠಾನ ಮಾಡಲಾಗದಿದ್ದರೆ ಅದಕ್ಕೆ ಔಪಯೋಗಿಕ ಮೌಲ್ಯವೇ ಇಲ್ಲ. ನಾನು ನಂಬಿದ್ದು ಸತ್ಯ ಹಾಗೂ ಅಹಿಂಸೆ ಮಾತ್ರ, ಸತ್ಯ ಎಂದರೆ ಪ್ರಾಮಾಣಿಕತೆ. ಮಾನಸಿಕ ಹಾಗೂ ಭೌತಿಕ ಭ್ರಷ್ಟತನವನ್ನು ನಿವಾರಿಸಿಕೊಂಡು ಬದುಕುವುದೇ ಸತ್ಯ ಅರ್ಥಾತ್ ಪ್ರಾಮಾಣಿಕತೆ. ಇಡೀ ಜಗತ್ತನ್ನೇ ನನ್ನ ಮುಂದಿಟ್ಟರೂ ನಾನು ಇವರೆಡನ್ನು ಬಿಡಲಾರೆ. ಪ್ರಾಮಾಣಿಕತೆಯನ್ನು ಬಿಡಬಲ್ಲವನು ತನ್ನ ದೇಶವನ್ನು ಕೂಡ ಕೈ ಬಿಡಬಲ್ಲ. ನೀನು ಒಬ್ಬಂಟಿಗನಾಗಿ ನಿಲ್ಲಬೇಕಾಗಿ ಬಂದರೂ ಸರಿ. ಜಗತ್ತು ನಿನ್ನನ್ನು ತನ್ನ ಕಂಗೇಣ್ಣಿನಿಂದ ದುರದುರನೆ ನೋಡಿದರೂ ಸರಿ ಅವರ ದೃಷ್ಟಿಗೆ, ದೃಷ್ಟಿಕೊಟ್ಟು ನಿಲ್ಲಬೇಕಾಗುತ್ತದೆ. ಭೀತಿ ಬೇಡ. ಸತ್ಯ ಹಾಗೂ ಪ್ರಾಮಾಣಿಕತೆಗೆ ಮನೆ, ಮಠ, ಮಡದಿ, ಮಕ್ಕಳು ಹಾಗೂ ಸರ್ವಸ್ವವನ್ನು ಪರಿತ್ಯಜಿಸಿ ಸಾಕ್ಷಿಯಾಗಿ ಬಾಳು. ಮಹಾಜನ, ಪಂಚಿ, ರಾಷ್ಟ್ರ, ಸಮುದಾಯ, ಸಂಘ ಇವು ಎಂದಿಗೂ ಅಳಿಯವು. ಆದರೆ ಇದರ ನೇತಾರರು ಪ್ರಾಮಾಣಿಕರಿರಬೇಕು. ಭ್ರಷ್ಟರಿರಕೂಡದು ಎಂದು ವಿವರಿಸಿದ್ದಾರೆ. ಆದರೆ ಪ್ರಾಮಾಣಿಕತೆ ಉಳಿಸಿಕೊಂಡು ಹೋಗಲು ಏನು ಅನುಸರಿಸಬೇಕೆಂದು ವಿವರಿಸಿಲ್ಲ.

* ಶ್ರೀ ಜಗಮೋಹನ(೧೯೯೪) 'ಮೈ ಪ್ರೋಜನ್ ಟರ್ಬುಲೆನ್ಸ್ ಇನ್ ಕಾಶ್ಮೀರ' ಎಂಬ ಗ್ರಂಥದಲ್ಲಿ ಜಮ್ಮು ಕಾಶ್ಮೀರದ ರಾಜ್ಯಪಾಲರಾಗಿದ್ದಾಗಿನ ಘಟನೆಗಳನ್ನು ಮೆಲುಕು ಹಾಕುತ್ತ ಭಾರತದ ಈಗಿನ ರಾಜ್ಯ ವ್ಯವಸ್ಥೆಯ ದುರ್ಬಲ ಸ್ಥಿತಿ, ವಾಸ್ತವತೆಗಳನ್ನು ಎದುರಿಸುವುದಕ್ಕೆ ಬದಲಾಗಿ ಭ್ರಮೆಗಳಿಗೆ ಅಂಟಿಕೊಂಡು ಕೂಡುವ ಹವ್ಯಾಸ, ವಂಚಕತೆ ತುಂಬಿದ ಅಗ್ಗದ ರಾಜಕಾರಣ, ಆಡಳಿತ ಯಂತ್ರದ ದುರ್ಬಲ ಸ್ಥಿತಿ, ಸಾರ್ವಜನಿಕ ಭ್ರಷ್ಟಾಚಾರ, ವಿಚ್ಛಿದ್ರಕಾರಿಗಳಿಗೆ ಅವಕಾಶ ನೀಡುವಂತಹ ಸಂವಿಧಾನ ವಿನ್ಯಾಸ, ಪ್ರತಿಕೂಲ ಶಕ್ತಿಗಳ ಸಮುಚ್ಚಯದಿಂದಾಗುತ್ತಿರುವ ಹಾನಿ, ಕಾಶ್ಮೀರದ ದಯನೀಯ ಉತ್ತಮ ಆಡಳಿತದ ಸೋಲಿಗೆ ಕಾರಣ ಎಂದು ವಿಶ್ಲೇಷಿಸಿದ್ದಾರೆ. ತಮ್ಮ ಈ ಪುಸ್ತಕದಲ್ಲಿ ರಾಜಕೀಯ ವಿಚಾರ ಕೋನ ವಿವರಿಸಿದ ಹಾಗೇ ಸರಕಾರಿ ನೌಕರರ ಕಾರ್ಯಶೈಲಿಯ ಬಗ್ಗೆ ವಿವರಿಸಿಲ್ಲ.
* ಶ್ರೀ ಮಿಖಾಯಿಲ್ ಗೋರ್ಬಚೆವ್ (೧೯೮೮)ರ ಪೆರೆಸ್‌ತ್ರೊಯ್ಕ ದ ಸರ್ಕಾರಿ ವ್ಯವಸ್ಥೆಯನ್ನು ಸರಿಪಡಿಸುವುದು ಎಂಬ ಅಧ್ಯಾಯದಲ್ಲಿ ನಮ್ಮ ಸರ್ಕಾರದ ಯೋಜನಾ ವ್ಯವಸ್ಥೆಯಲ್ಲಿ, ಆರ್ಥಿಕ ನಿರ್ವಹಣೆಯಲ್ಲಿ ಹಾಗೂ ಸುಭದ್ರವಾದ ಸಮಾಜವಾದಿ ಶಿಸ್ತನ್ನು ಭರವಸೆಗೊಳಿಸುವುದಕ್ಕೆ ಸಾಧನವಾಗಿ, ವೈಯಕ್ತಿಕ ಸ್ವೇಚ್ಛಾಚಾರಗಳು ಮತ್ತು ಅಧಿಕಾರದ ದುರುಪಯೋಗದ ವಿರುದ್ಧವಾಗಿ ಕ್ರಮ ಕೈಗೊಳ್ಳಲು ಜನ ಸಮೂಹಗಳ ಮೇಲ್ವಿಚಾರಣೆಯ ಅಗತ್ಯವಾಗಿರುತ್ತದೆ. ಉತ್ತರದಾಯಿತ್ವವನ್ನು ಇನ್ನಷ್ಟು ಬಲಪಡಿಸಲು ಮೇಲ್ವಿಚಾರಣೆ ಚಟುವಟಿಕೆಗಳನ್ನು ಆಧುನಿಕ ಅವಶ್ಯಕತೆಗಳಿಗೆ ಹೊಂದಿಸಬೇಕೆಂದು ಹೇಳಿದ್ದಾರೆ. ಆದರೆ ಇದೊಂದು ಸಂಪೂರ್ಣ ವಿಫಲವಾದ ವಿಚಾರವಾಗಿದೆ.
* ಶ್ರೀ ವಿಶ್ವನಾಥ ಪ್ರತಾಪ ಸಿಂಗ (೧೯೮೮) ಮಾಜಿ ಪ್ರಧಾನಿಯವರು ಫ್ರಂಟ್‌ಲೈನ್ ಪತ್ರಿಕೆಯಲ್ಲಿ ಬರೆದ' ಬೋಫೋರ್ಸ್ ಹಗರಣ ಹಾಗೂ ಸಾಮಾಜಿಕ ಪರಿಣಾಮ' ಎಂಬ ಲೇಖನದಲ್ಲಿ ರಾಜ್ಯಯಂತ್ರಗಳು ಅಧಿಕಾರಶಾಹಿಗಳಾಗಿ ಬೆಳೆದಿವೆ, ಜಡತ್ವಕ್ಕೆ ಹಾಗೂ ಭ್ರಷ್ಟಾಚಾರಕ್ಕೆ ಅವು ಹೊಂದಿಕೊಂಡು ನಡೆಯುತ್ತಿವೆ. ಈ ಕಾರಣಕ್ಕಾಗಿ ಜನತೆಯಲ್ಲಿ ಅನಾದರಣೆ ಬೆಳೆದಿದೆ. ಆಡಳಿತವು ಜನರ ಇಚ್ಛೆಯಂತೆ ನಡೆಯುವ ಬದಲಾಗಿ ಸರ್ಕಾರಿ ನೌಕರರ ಇಚ್ಛೆಯಂತೆ ನಡೆಯತೊಡಗಿದೆ. ಬೋಫೋರ್ಸ್ ಹಗರಣದ ಜನಕರು ಸರ್ಕಾರದ ಅತ್ಯುನ್ನತ ಸ್ಥಾನದಲ್ಲಿ ಕುಳಿತಿದ್ದಾರೆ. ಕಾಯ್ದೆ ಕಾನೂನುಗಳಿಂದ, ತನಿಖಾ ವರದಿಗಳಿಂದ ಭ್ರಷ್ಟಾಚಾರ ಕೊನೆಗೊಳ್ಳುವುದಿಲ್ಲ. ಬದಲಾಗಿ ಭ್ರಷ್ಟಾಚಾರದ ಹೊಸ ಹೊಸ ದಾರಿಗಳನ್ನು ಈ ಜನರು ಹುಡುಕುತ್ತಾರೆ, ದೇಶದ ಮುಖ್ಯಸ್ಥರೇ ಜನರ ಹಣವನ್ನು ಲೂಟಿ ಮಾಡತೊಡಗಿದರೆ ದೇಶದ ಜನರ ಮೇಲೆ ಯಾವ ರೀತಿಯ ಸಾಮಾಜಿಕ ಪರಿಣಾಮ ಬೀರಬಹುದು ಎಂದು ಶಬ್ದಗಳಿಂದ ವಿವರಿಸಲಾಗದು. ಬಡ ರಾಷ್ಟ್ರವಾದ ಭಾರತಕ್ಕೆ ಭ್ರಷ್ಟಾಚಾರ ಒಂದು ದೊಡ್ಡ ಕಳಂಕ. ಸರ್ಕಾರದ

ಯೋಜನೆಗಳ ಹಣ ಅಪವ್ಯಯ ತಡೆಯುವುದನ್ನು ಸೇರಿದಂತೆ ರೈತನ ಜಮೀನಿನ ಪಹಣಿ ಪತ್ರ ನೀಡಲು ಲಂಚ ಪಡೆಯುವ ಗ್ರಾಮ ಲೆಕ್ಕಾಧಿಕಾರಿವರೆಗಿನ ನೌಕರರ ಮೇಲೆ ಕಣ್ಣಿಡಲು ಲೋಕಪಾಲ ಕಾನೂನು ತರುವುದು ಅವಶ್ಯ ಎಂದು ಅಭಿಪ್ರಾಯ ಪಟ್ಟಿದ್ದಾರೆ. ಆದರೆ ಆ ನಂತರದ ದಿನಗಳಲ್ಲಿ ತಾವೇ ಪ್ರಧಾನಿಯಾದರೂ ಲೋಕಪಾಲ ಜಾರಿಗೆ ತರಲಿಲ್ಲ.

- ಶ್ರೀ ಲಕ್ಷ್ಮೀಕಾಂತ ಎಂ.ಎಲ್.ರವರು (೨೦೧೧) 'ಉದಯವಾಣಿ' ಪತ್ರಿಕೆಯ ಅಭಿಮತ ಅಂಕಣಕ್ಕೆ ಬರೆಯುತ್ತ ಲೋಕಾಯುಕ್ತರು ಮಾಧ್ಯಮಗಳೊಂದಿಗೆ ಹೋಗಿ ದಾಳಿ ಮಾಡುವುದು. ದಾಳಿಗೊಳಪಟ್ಟವರನ್ನು ಸಮಗ್ರವಾಗಿ ವಿಚಾರಿಸದೇ ಅವರನ್ನು ಮಾಧ್ಯಮದವರ ಎದುರಿಗೆ ತಪ್ಪಿತಸ್ಥರ ಜಾಗದಲ್ಲಿ ನಿಲ್ಲಿಸಿ ವಾಚಾಮಗೋಚರವಾಗಿ ತೆಗಳುವುದು. ಅದೇ ರೀತಿ ಕೋರ್ಟ್‌ನಲ್ಲಿ ನ್ಯಾಯಾಧೀಶರುಗಳು ಕುಹಕ ಕಾಮೆಂಟ್ಸ್‌ಗಳನ್ನು ಹಾಗೂ ಪ್ರಚಲಿತ ವಿದ್ಯಮಾನಗಳ ಬಗ್ಗೆ ತಮ್ಮ ಅಭಿಪ್ರಾಯ, ಆಕ್ರೋಶಗಳನ್ನು ತೋಡಿಕೊಳ್ಳುವುದು ಸರಿಯಾದ ಕ್ರಮವಲ್ಲ ಎಂದಿದ್ದಾರೆ. ಆದರೆ ನ್ಯಾಯಾಧೀಶರುಗಳು ಪ್ರಕರಣದ ವಿಚಾರಣೆಯ ವೇಳೆಯಲ್ಲಿ ಅಭಿಪ್ರಾಯ ನೀಡಬಾರದು ಎಂಬ ಅಂಶವನ್ನು ನ್ಯಾಯಾಂಗ ಭಾದ್ಯತೆ ಮಸೂದೆಯಲ್ಲಿ ಸೇರಿಸಿ ಸಂಸತ್ತಿನಲ್ಲಿ ಮಂಡಿಸಲು ಕೇಂದ್ರ ಸರ್ಕಾರ ಹೊರಟಿರುವುದನ್ನು ಇಲ್ಲಿ ಗಮನಿಸಿಲ್ಲ.

- ಶ್ರೀ ಮೌಲಾನಾ ಸೈಯ್ಯದ್ ಅಲಾ ಮೌದೂದಿ(೧೯೩೯) 'ಪೊಲಿಟಿಕಲ್ ಥಿಯರಿ ಆಫ್ ಇಸ್ಲಾಮ್' ಎಂಬ ಪುಸ್ತಕದಲ್ಲಿ ಸರ್ವಶಕ್ತನಾದ ಪರಮಾತ್ಮನು ಮಾಡುವ ಸಂವಿಧಾನ, ಕಟ್ಟಳೆ ಹಾಗೂ ಕಾನೂನುಗಳೇ ಮನುಷ್ಯನ ಪಾಲಿಗೆ ಸರ್ವೋತ್ತಮ. ಇಸ್ಲಾಂ ಧರ್ಮದಲ್ಲಿ ದೇವರು ರಚನೆ ಮಾಡಿದ ಕಾನೂನನ್ನು ಮನುಷ್ಯ ಬದಲಾವಣೆ ಮಾಡುವ ಹಕ್ಕು ಹೊಂದಿಲ್ಲ. ಮಾನವನು ಮೂಲತಃ ಸ್ವಾರ್ಥಿ. ಅವನು ಭಾವನೆ ಹಾಗೂ ಕಾಮನೆಗಳಿಗೆ ಬಲಿ ಬೀಳುತ್ತಾನೆ. ಹೆಚ್ಚಿನ ವೇಳೆ ಅವನ ತೀರ್ಮಾನಗಳು ಪಕ್ಷಪಾತದಿಂದ ಕೂಡಿರುತ್ತವೆ. ಇದಕ್ಕೊಂದು ಉದಾಹರಣೆ ಎಂದರೆ ಅಮೇರಿಕಾದಲ್ಲಿ ಹಿಂದೊಮ್ಮೆ ಮಧ್ಯಪಾನವು ವೈಚಾರಿಕವಾಗಿ ಹಾಗೂ ವೈಜ್ಞಾನಿಕವಾಗಿ ಮನುಷ್ಯನನ್ನು ಅಧಃಪತನಕ್ಕೆ ತಳ್ಳುತ್ತದೆ ಎಂಬುದನ್ನು ಎಲ್ಲರೂ ಒಪ್ಪಿಕೊಂಡು ಅಲ್ಲಿಯ ಸಾರ್ವಜನಿಕರು ಮತ ಚಲಾಯಿಸುವ ಮೂಲಕ ಆ ದೇಶದಲ್ಲಿ ಮಧ್ಯಪಾನ ನಿಷೇದ ಕಾನೂನನ್ನು ಜಾರಿಗೆ ತಂದರು. ಈ ಕಾನೂನು ಜಾರಿಗೆಯಾದ ಕೆಲವೇ ದಿನಗಳಲ್ಲಿ ಮಧ್ಯಪಾನ ಸಿಗದೆ ಅಲ್ಲಿಯ ಜನ ಕಂಗಾಲಾದರು. ನಿಷೇಧದ ಪರವಾಗಿ ಮತ ಚಲಾಯಿಸಿದವರೇ ಸ್ವೇಚ್ಛೆಯ ಗುಲಾಮರಾಗಿ ತಮ್ಮ ವಿವೇಕವನ್ನು ಭ್ರಷ್ಟವನ್ನಾಗಿಸಿ ಅನಿಷ್ಟದ ಪರವಾಗಿ ಮತ ಚಲಾಯಿಸಿ ಮಧ್ಯಪಾನವನ್ನು ಮತ್ತೆ ಜಾರಿಗೆ ತಂದರು. ಇಂತಹ ಅನೇಕ ವಿಷಯಗಳನ್ನು ಕ್ರೋಢೀಕರಿಸಿ ಅವಲೋಕಿಸಿದಾಗ ಮನುಷ್ಯನು ತನ್ನ ನ್ಯಾಯವಾದ ಪಾಲನೆಗೆ ಅವಶ್ಯವೆನಿಸುವ

ಕಾನೂನು ರಚಿಸುವ ಸಾಮರ್ಥ್ಯ ಹೊಂದಿಲ್ಲ ಎಂದು ಅಭಿಪ್ರಾಯ ಪಟ್ಟಿದ್ದಾರೆ. ಆದರೆ ಇಸ್ಲಾಂನಲ್ಲಿರುವ ಅನೇಕ ಅನಿಷ್ಟ ಕಾನೂನುಗಳ ಬಗ್ಗೆ ವಿವರಿಸಿಲ್ಲ.

- ಶ್ರೀ ವಿಶ್ವೇಶ್ವರಯ್ಯ ಎಂ.(೧೯೫೧) ತಮ್ಮ 'ಮೆಮೊರಿಜ್ ಆಫ್ ಮೈ ಪಬ್ಲಿಕ್ ಲೈಫ್' ಎಂಬ ಕೃತಿಯಲ್ಲಿ ಭಾರತದ ಆಡಳಿತಗಾರರಲ್ಲಿ ಇರುವ ಬಹು ದೊಡ್ಡ ದೋಷ ಎಂದರೆ ಸ್ವಜನ ಪಕ್ಷಪಾತ ಹಾಗೂ ಭ್ರಷ್ಟಾಚಾರ. ಸರ್ಕಾರಿ ನೌಕರರಲ್ಲಿ ದುಡಿಯುತ್ತಿರುವರು ಕೆಲವರು. ಮಿಕ್ಕುಳಿದವರೆಲ್ಲ ನೋಟಗಾರರು. ಪ್ರತಿಯೊಬ್ಬನೂ ತನ್ನ ಭಾಗದ ಕೆಲಸ ನಿರ್ವಹಿಸದೆ ಹೇಗೆ ನುಣುಚಿಕೊಳ್ಳಲಿ ಎಂಬ ಯೋಚನೆಯಲ್ಲೇ ತೊಡಗಿರುತ್ತಾನೆ. ಪಾಶ್ಚಾತ್ಯರಿಗೆ ಇರುವಂತಹ ದುಡಿಯುವ ಪ್ರೇರಣೆ ನಮಗಿಲ್ಲ. ಹೀಗಾಗಿ ದುಡಿಯುವ ವಿಷಯದಲ್ಲಿ ನಾವು ಸೋಮಾರಿಗಳು ಹಾಗೂ ಲಂಚಪ್ರಿಯರು. ಈ ದೃಶ್ಯವನ್ನು ನಾವು ದಿನನಿತ್ಯ ಆಡಳಿತ ಕಚೇರಿಯಲ್ಲಿ ನೊಡುತ್ತೇವೆ ಎಂದು ಬರೆದಿದ್ದಾರೆ. ಆದರೆ ಉತ್ತಮ ಆಡಳಿತಕ್ಕೆ ಯಾವ ರೀತಿಯ ಕ್ರಮ ಕೈಗೊಳ್ಳಬೇಕು ಎಂಬ ಬಗ್ಗೆ ಹೇಳಿಲ್ಲ.

- ನ್ಯಾ. ಸಂತೋಷ ಹೆಗಡೆಯರು(೨೦೧೧) ಪ್ರಜಾವಾಣಿಗೆ ನೀಡಿದ ಸಂದರ್ಶನವೊಂದರಲ್ಲಿ ಈ ಭೂಮಿಯ ಮೇಲೆ ಮಾನವನು ಹುಟ್ಟಿದಾಗಿನಿಂದಲೇ ಭ್ರಷ್ಟಾಚಾರ ಹುಟ್ಟಿಕೊಂಡಿದೆ. ಬೆತ್ತಲೆ ಜಗತ್ತಿನಲ್ಲಿ ಬಟ್ಟೆ ಹಾಕಿಕೊಳ್ಳುವವನೇ ಮೂರ್ಖ ಎಂದು ಅಪಹಾಸ್ಯ ಮಾಡಿದಂತೆ ಪ್ರಾಮಾಣಿಕರನ್ನು ನೋಡುವ ಕಾಲವಿದು ಎಂದು ಹೇಳಿದ್ದಾರೆ. ಆದರೆ ಪ್ರಾಮಾಣಿಕ ಅಧಿಕಾರಿಗಳನ್ನಾಗಿ ಉಳಿಸಿಕೊಳ್ಳಲು ಸರ್ಕಾರ ಏನು ಕಾರ್ಯಕ್ರಮ ಹಾಕಿಕೊಳ್ಳಬೇಕು ಎಂದು ಮಾರ್ಗದರ್ಶನ ನೀಡಿಲ್ಲ.

- ಶ್ರೀ ವಿವೇಕಾನಂದರು (೧೯೬೭) 'ಥಾಟ್ಸ್ ಆಫ್ ಶ್ರೀ ವಿವೇಕಾನಂದ' ಎಂಬ ಕೃತಿಯಲ್ಲಿ ನಾವೀಗ ಪ್ರಾಣಿಗಳಿಗಿಂತ ಹೆಚ್ಚು ಮೇಲಲ್ಲ. ನಾವೀಗ ಕಾನೂನಿನ ಚಾವಟಿಗೆ ಅಂಜುತ್ತಿರುವೆವು. ಕಾನೂನು ನೀನು ಕದ್ದರೆ ಶಿಕ್ಷಿಸುವುದಿಲ್ಲ ಎಂದರೆ ಮತ್ತೊಬ್ಬರನ್ನು ದೋಚಲು ಮೊದಲು ಧಾವಿಸುವೆವು. ನಮ್ಮನ್ನು ನೀತಿಯ ನಿಯಂತ್ರಣಕ್ಕೊಳಪಡಿಸಿದ್ದು ಕಾನೂನು. ನಾವು ನೈತಿಕತೆಯ ನಿಯಂತ್ರಣಕ್ಕೆ ಒಳಪಡಬೇಕು. ಈ ನಿಯಂತ್ರಣಕ್ಕೆ ರಾಜನಿಂದ ಹಿಡಿದು ಪ್ರಜೆಯವರೆಗೂ ಒಳಪಡಬೇಕು. ಹಿಂದಿನ ಕಾಲದಲ್ಲಿ ಜನರು ಕಾಡಿನಲ್ಲಿ ವಾಸಿಸುತ್ತಿದ್ದರು. ಅಲ್ಲಿ ಒಬ್ಬರು ಇನ್ನೊಬ್ಬರನ್ನು ತಿನ್ನುತ್ತಿದ್ದರು. ಈಗಿನ ಕಾಲದಲ್ಲಿ ಅದರ ಬದಲಾಗಿ ಮೋಸ ಮಾಡುವವರು, ದೇಶಗಳು ಅದನ್ನು ಆಳುವ ಅಧಿಕಾರಿಗಳಿಂದ ನಾಶವಾಗುತ್ತಿವೆ ಎಂದು ವಿಶ್ಲೇಷಿಸಿದ್ದಾರೆ. ಆಳುವ ಅಧಿಕಾರಿಗಳಲ್ಲಿ ಯಾವ ರೀತಿಯ ನೈತಿಕತೆ ತರಬೇಕು ಎಂಬುದರ ಬಗ್ಗೆ ಹೇಳಿಲ್ಲ.

- ಡಾ. ಎಮ್.ಎಲ್. ತಿಂಗನ್(೧೯೭೪) 'ಎಕನಾಮಿಕ್ಸ್ ಆಫ್ ಡೆವಲೆಪ್‌ಮೆಂಟ್ ಆ್ಯಂಡ್ ಪ್ಲಾನಿಂಗ್' ಎಂಬ ಪುಸ್ತಕದಲ್ಲಿ ಭಾರತದಂತಹ ದೇಶಗಳು ಯೋಜನೆಯಲ್ಲಿ ಸಾಕಷ್ಟು ಯಶಸ್ಸು ಸಾಧಿಸದೇ ಇರಲು ಆ ದೇಶದಲ್ಲಿರುವ ಅನಕ್ಷರತೆಗಿಂತಲೂ ಆಡಳಿತದಲ್ಲಿರುವ ಭ್ರಷ್ಟಾಚಾರ ಮುಖ್ಯ ಕಾರಣ ಎಂದು ಹೇಳಿದ ಅರ್ಥರ ಲೂಯಿಸರ ವಿಚಾರಧಾರೆ ಸರಿಯಿದೆ ಎಂದು ವಾದಿಸಿದ್ದಾರೆ. ಆದರೆ ಇವರು ಕೂಡ ನೈತಿಕತೆಯ ಬಗ್ಗೆ ಒತ್ತು ಕೊಟ್ಟಿಲ್ಲ.

- ಶ್ರೀ ಎಚ್.ಆರ್. ಕೃಷ್ಣೇಗೌಡ(೧೯೮೧)ರ 'ಆರ್ಥಿಕ ಬೆಳವಣಿಗೆ' ಎಂಬ ಕೃತಿಯಲ್ಲಿ ಸರ್ಕಾರದ ಆಡಳಿತ, ಭ್ರಷ್ಟಾಚಾರ ನಿಯಂತ್ರಣ ಕಾನೂನು, ಶಿಕ್ಷಣ ಹಾಗೂ ಆರೋಗ್ಯ ಮತ್ತು ಧರ್ಮದ ಪಾತ್ರ ಈ ಎಲ್ಲವೂ ಒಂದು ದೇಶದ ಅಭಿವೃದ್ಧಿಯನ್ನು ಪ್ರಭಾವಗೊಳಿಸುತ್ತದೆ ಎಂದು ಅಭಿಪ್ರಾಯ ಪಟ್ಟಿದ್ದಾರೆ. ಆದರೆ ಹೇಗೆ ಪ್ರಭಾವಗೊಳಿಸುತ್ತದೆ ಎಂದು ವಿವರಿಸಿಲ್ಲ.

- ಶ್ರೀ ಆಚಾರ್ಯ ವಿನೋಬಾ (೧೯೬೦)ರ 'ಲೋಕನೀತಿ' ಎಂಬ ಕೃತಿಯಲ್ಲಿ ಹೇಳುವ ಸತ್ಯ ಕಥೆ ಈ ರೀತಿಯಿದೆ. ಸಿಕಂದರ ಬಾದಷಾನ ಮುಂದೆ ಒಬ್ಬ ಕಳ್ಳನನ್ನು ಹಿಡಿದು ತರಲಾಯ್ತು. ಸಿಕಂದರ ಬಾದಷಾ ಕಳ್ಳನನ್ನು ಉದ್ದೇಶಿಸಿ ಕೇಳಿದ. ನೀನು ಏನು ಮಾಡುತ್ತಿ? ಅದಕ್ಕುತ್ತರವಾಗಿ ಕಳ್ಳ ಹೇಳಿದ. ನೀವು ಮಾಡುವುದನ್ನೇ ನಾನು ಮಾಡುತ್ತಿದ್ದೇನೆ ಎಂದ. ಇದಕ್ಕೆ ಸಿಕಂದರ ಬಾದಷಾ ಹಾಗೆಂದರೇನು ಎಂದು ಮರು ಪ್ರಶ್ನಿಸಿದ. ನೀವು ನಿಮ್ಮ ಕೆಲಸದಲ್ಲಿ ಸಫಲವಾಗಿರುವಿರಿ. ನಾನು ಸಫಲನಾಗಿಲ್ಲ ಅಂತರವಿಷ್ಟೇ. ನೀವು ಸಫಲರಾದ ಕಳ್ಳ. ನಾನು ವಿಫಲನಾದ ಕಳ್ಳ. ಜನರಿಗೆ ಗೊತ್ತಾಗದಂತೆ ದೋಚುವ ನಿಮ್ಮನ್ನು ಜನ ತಲೆಯ ಮೇಲೆ ಕುಳ್ಳಿರಿಸಿಕೊಂಡಿದ್ದಾರೆ. ಜನರಿಗೆ ಗೊತ್ತಾಗುವಂತೆ ದೋಚುವ ನನ್ನನ್ನು ಸೆರೆಮನೆಗೆ ತಳ್ಳಲು ಇಲ್ಲಿ ತಂದಿರಿಸಿದ್ದಾರೆ. ನಮ್ಮ ದೇಶದ ಪರಿಸ್ಥಿತಿಯೂ ಹಾಗೆಯೇ ಇದೆ. ದೊಡ್ಡ ಸ್ಥಾನದಲ್ಲಿ ಅಧಿಕಾರದಲ್ಲಿರುವವರು ಭ್ರಷ್ಟಾಚಾರಕ್ಕೆ ಇಷ್ಟು ಬೇಗ ಇಳಿದಿದ್ದು ನಿರಾಶೆ ಹಾಗೂ ಆತಂಕ ತಂದಿದೆ ಎಂದು ಹೇಳಿದ್ದಾರೆ. ಆದರೆ ಅಧಿಕಾರಿಗಳ ಭ್ರಷ್ಟಾಚಾರದ ಬಗ್ಗೆ ಮಾತ್ರ ಅವರು ಹೇಳಿಲ್ಲ.

- ಪ್ರೊ. ಮಲ್ಲೇಪುರಂ ಜಿ. ವೆಂಕಟೇಶರವರು(೧೯೯೨) ಸಂಪಾದಿಸಿದ 'ಕನ್ನಡ ವಾರ್ಷಿಕ' ಕೃತಿಯಲ್ಲಿ ಶ್ರೀ ಸಿ.ವಿ ರಾಜಗೋಪಾಲ ಬರೆದ ರಾಜಕೀಯ ಪರಿಕಲ್ಪನೆ ಹಾಗೂ ವಾಸ್ತವ ಎಂಬ ಲೇಖನದಲ್ಲಿ ರಾಜಕೀಯ ಸೋಂಕಿನಿಂದಾಗಿ ನ್ಯಾಯ ನಿರ್ವಹಣೆಯ ವ್ಯವಸ್ಥೆಯಲ್ಲಿಯೇ ಜನರಿಗೆ ವಿಶ್ವಾಸ ಕರಗುತ್ತಿದೆ, ಜನ ಅಸಹಾಯಕರಾಗಿ ಹತಾಶೆಗೊಂಡಿದ್ದಾರೆ. ಪ್ರಮುಖ ನ್ಯಾಯಮೂರ್ತಿಯೊಬ್ಬರು ಪವಿತ್ರ ನ್ಯಾಯಾಂಗದ ಆವರಣದಲ್ಲಿಯೇ ಈಗ ಭ್ರಷ್ಟಾಚಾರ ವ್ಯಾಪಕವಾಗಿದೆ ಎಂದು ದುಃಖ ಪಟ್ಟರೆಂದರೆ ಜನ ನ್ಯಾಯಾಂಗದಲ್ಲಿ ವಿಶ್ವಾಸ ಕಳೆದುಕೊಳ್ಳುತ್ತಿದ್ದಾರೆ ಎನ್ನುವುದರಲ್ಲಿ ಆಶ್ಚರ್ಯವಿಲ್ಲ .ತಮ್ಮ ಅನಿಸಿಕೆಗೆ ಧ್ವನಿ ಕೊಡುವವರಾದರೂ

ಕ್ರಿಯಾಶೀಲರಾಗಿರಬೇಕು ಅಷ್ಟೇ. ಅನಿವಾರ್ಯವಾದ ರಾಜಕಾರಣವನು ತತ್ವನಿಷ್ಠವನ್ನಾಗಿ ಮಾಡುವುದಷ್ಟೇ ಈಗ ಆಗಬೇಕಾಗಿರುವುದು. ನೆಪೋಲಿಯನ್ ಬೋನಪಾರ್ಟೆ ಹೇಳಿದ ' ನಿಮ್ಮ ಅಭಿಪ್ರಾಯವನ್ನು ಒಪ್ಪದಿರುವವರಿಗೆ ನೀವು ಹೆದರಬೇಕಾಗಿಲ್ಲ. ನಿಮ್ಮ ಅಭಿಪ್ರಾಯವನ್ನು ಒಪ್ಪದೇ, ಒಪ್ಪುವುದಿಲ್ಲ ಅನ್ನುವುದನ್ನು ನಿಮಗೆ ಹೇಳಲಾರದ ಹೇಡಿಗಳಿಗೆ ಹೆದರಬೇಕು ಎಂದು ಹೇಳಿದ್ದಾರೆ. ಈ ಲೇಖನದಲ್ಲಿ ನ್ಯಾಯಾಂಗದ ವ್ಯವಸ್ಥೆಯಲ್ಲಿ ಜನರಿಗೆ ಯಾವ ಕಾರಣಕ್ಕಾಗಿ ವಿಶ್ವಾಸ ಕರಗುತ್ತಿದೆ ಎನ್ನುವ ಬಗ್ಗೆ ವಿವರಿಸಿಲ್ಲ.

- ಶ್ರೀ ಡೋನಾಲ್ಡ್ ಪೆರಿರಾ(೨೦೧೧) 'ಕನ್ನಡ ಪ್ರಭ' ಪತ್ರಿಕೆಯಲ್ಲಿ ಬರೆದ ಹಿಡಿತ ತಪ್ಪಿದ ಮಾಧ್ಯಮವನ್ನು ಏಕೆ ನಿಯಂತ್ರಿಸಬಾರದು ಎಂಬ ಲೇಖನವೊಂದರಲ್ಲಿ ಭ್ರಷ್ಟಾಚಾರವನ್ನು ಚಿಕ್ಕದು, ದೊಡ್ಡದು ಎಂದು ವಿಭಾಗಿಸುವುದೇ ದೊಡ್ಡ ತಪ್ಪು. ಕೇವಲ ಜನರಿಂದ ಚುನಾಯಿತರಾಗಿದ್ದಾರೆ ಎಂಬ ಕಾರಣಕ್ಕೆ ಒಬ್ಬ ಅಪರಾಧಿಯನ್ನು ಸಾಚಾ ಎಂದು ಪರಿಗಣಿಸಲಾಗದು. ಅಪರಾಧಿ ರಾಜಕಾರಣಿಗಳು ಚುನಾವಣೆಯಲ್ಲಿ ಮರು ಆಯ್ಕೆಯಾದ ಮಾತ್ರಕ್ಕೆ ನಡೆಸಿದ ಪಾತಕಗಳಿಂದ ಅವರು ಮುಕ್ತರಾಗಲು ಸಾಧ್ಯವಿಲ್ಲ ಎಂದು ಮದ್ರಾಸ್ ಹೈಕೋರ್ಟ್ ಜಯಲಲಿತರ ಭ್ರಷ್ಟಾಚಾರ ಪ್ರಕರಣವೊಂದರಲ್ಲಿ ಆದೇಶ ನೀಡಿದೆ ಎಂದು ಬರೆದಿದ್ದಾರೆ. ಆದರೆ ಇಲ್ಲಿ ನೈತಿಕ ರಾಜಕಾರಣ ಎಂದರೇನು? ಚುನಾವಣಾ ರಾಜಕಾರಣ ಎಂದರೇನೆಂದು ಸರಿಯಾಗಿ ವ್ಯಾಖ್ಯಾನಿಸಿಲ್ಲ.
- ನ್ಯಾ. ಶಿವರಾಜ ಪಾಟೀಲ್‌ರು (೨೦೧೧) 'ಉದಯವಾಣಿ' ಪತ್ರಿಕೆಗೆ ಸಂದರ್ಶನವೊಂದು ನೀಡಿ ಎಲ್ಲಿಯೇ ಆಗಲೀ ಒಳ್ಳೆ ಆಡಳಿತ ಇಲ್ಲವಾದರೆ ಭ್ರಷ್ಟಾಚಾರ ಎಲ್ಲೆ ಮೀರುತ್ತದೆ. ಇದೀಗ ಆಗುತ್ತಿರುವುದು ಅದೆ ಅಲ್ಲವೆ? ಆಡಳಿತದ ಹಿಡಿತ ಸಡಿಲ ಆದಾಗ ಮಾತ್ರ ಭ್ರಷ್ಟಾಚಾರದ ಕುಣಿತ ಹೆಚ್ಚುತ್ತದೆ ಎಂದು ಅಭಿಪ್ರಾಯ ಪಟ್ಟಿದ್ದಾರೆ. ಆಡಳಿತದ ಹಿಡಿತ ಸಡಿಲಾಗಲು ಏನು ಕಾರಣ ಎಂದು ಅವರು ವಿವರಿಸಿಲ್ಲ.
- ಹಾಂಕಾಂಗದ 'ಪೊಲಿಟಿಕಲ್ ಆಫ್ ಎಕನಾಮಿಕ್ ರಿಸ್ಕ ಕನ್ಸಲ್ಟೆನ್ಸಿ'ಯ ೨೦೧೧ರ ವರದಿಯ ಪ್ರಕಾರ ಏಷ್ಯಾ ಫೆಸಿಫಿಕ್ ವಲಯದಲ್ಲಿರುವ ೧೬ ರಾಷ್ಟ್ರಗಳ ಪೈಕಿ ಭಾರತ ೪ನೆಯ ಅತೀ ಭ್ರಷ್ಟರಾಷ್ಟ್ರವಾಗಿದೆ. ೧ನೆಯ ಸ್ಥಾನದಲ್ಲಿ ಕಾಂಬೋಡಿಯಾ .೨ನೇ ಸ್ಥಾನದಲ್ಲಿ ಇಂಡೋನೇಷ್ಯಾ. ೩ನೆಯ ಸ್ಥಾನದಲ್ಲಿ ಫಿಲಿಪೈನ್ಸ್ ಇವೆ ಎಂದು ಹೇಳಲಾಗಿದೆ. ಇಂತಹ ಸರ್ವೆಗಳು ಎಷ್ಟರ ಮಟ್ಟಿಗೆ ನಂಬಲರ್ಹ ಎನ್ನುವ ಬಗ್ಗೆ ಒಮ್ಮತವಿಲ್ಲ.
- ಪುಣೆ ಮೂಲದ 'ಇಂಡಿಯಾ ಪೊರೆನ್ಸಿಕ್' ೨೦೧೧ರ ವರದಿ ಪ್ರಕಾರ ಭಾರತದಲ್ಲಿ ಹದಿನೈದುವರೆ ಲಕ್ಷ ಕೋಟಿ ಮೊತ್ತದಷ್ಟು ಭ್ರಷ್ಟಾಚಾರ ಕಳೆದ ದಶಕದಲ್ಲಿ ನಡೆದಿದೆ. ನ್ಯಾಷನಲ್

ಕ್ರೈಂ ರೆಕಾರ್ಡ್ಸ್ ಬ್ಯುರೋದ ಅಂಕಿ ಅಂಶಗಳ ಪ್ರಕಾರ ೧೯ ಲಕ್ಷ ಕೋಟಿ ಇದೇ ವೇಳೆಯಲ್ಲಿ ವಿದೇಶಕ್ಕೆ ಸಾಗಿಸಲಾಗಿದೆ. ೨೦೦೮ರಲ್ಲಿ ಶೇಕಡ ೧೭.೬೮ರಷ್ಟಿದ್ದ ಭ್ರಷ್ಟಾಚಾರ, ೨೦೧೧ರಲ್ಲಿ ಶೇಕಡ ೨೮.೩೯ರಷ್ಟಾಗಿದೆ ಎಂದು ಹೇಳಲಾಗಿದೆ. ಇದರಲ್ಲಿ ಸರ್ಕಾರಿ ರಂಗದ ಭ್ರಷ್ಟಾಚಾರ ಎಷ್ಟು? ಖಾಸಗಿ ರಂಗದ ಭ್ರಷ್ಟಾಚಾರ ಎಷ್ಟು ಎಂಬುದರ ವಿವರವಿಲ್ಲ.

- ರಾಜ್ಯ ಲೋಕಾಯುಕ್ತ ವರದಿ(೨೦೧೧)ರ ಪ್ರಕಾರ ರಾಜ್ಯ ಲೋಕಾಯುಕ್ತದಲ್ಲಿ ೩೧-೩-೨೦೧೧ರವರೆಗೆ ಇರುವ ಅಂಕಿ ಅಂಶ ಗಳು ಈ ರೀತಿಯಾಗಿವೆ. ನೋಂದಾವಣೆಗೊಂಡ ಪ್ರಕರಣಗಳ ಸಂಖ್ಯೆ ೩೦೦೦೦, ವಿಲೇವಾರಿಯಾದ ಪ್ರಕರಣಗಳು ೯೦೦೦, ಬಾಕಿಯಿರುವ ಪ್ರಕರಣಗಳು ೨೧೦೦೦. ಅದೇ ರೀತಿ ಲೋಕಾಯುಕ್ತವು ೨೦೦೧ ರಿಂದ ೨೦೧೧ರವರೆಗೆ ಒಟ್ಟು ೩೧೧ ಪ್ರಮುಖ ದಾಳಿ ಕೈಗೊಂಡಿದೆ. ೯.೩೧ ಕೋಟಿ ರೂ ನಗದು ಸೇರಿದಂತೆ ೪೪೮ ಕೋಟಿ ರೂ ಮೌಲ್ಯದ ವಸ್ತುಗಳನ್ನು ಲೋಕಾಯುಕ್ತ ಖಜಾನೆಯಲ್ಲಿರಿಸಲಾಗಿದೆ. ಖಜಾನೆ ಸೇರದ ಮೊತ್ತ ಎಷ್ಟು ಎಂಬುದು ಅಧಿಕೃತವಾಗಿ ಲೆಕ್ಕಹಾಕುವ ಪ್ರಯತ್ನ ನಡೆದಿಲ್ಲ.
- ಶ್ರೀ ಸುರೇಶ್ ಕೋಹ್ಲಿರವರ (೧೯೭೫) 'ಕರಪ್‌ಷನ್ ಇನ್ ಇಂಡಿಯಾ', ಗ್ರಂಥವು ಭ್ರಷ್ಟಾಚಾರದ ಬಗ್ಗೆ ಅಧ್ಯಯನ ಮಾಡಲು ಇರುವ ಒಂದು ಪ್ರಮುಖ ಗ್ರಂಥವಾಗಿದ್ದು, ಭ್ರಷ್ಟಾಚಾರದ ಸ್ವರೂಪ, ವ್ಯಾಪ್ತಿ, ಭ್ರಷ್ಟಾಚಾರಕ್ಕೆ ಕಾರಣಗಳೇನು?, ಇದರಿಂದಾಗುವ ಪರಿಣಾಮಗಳೇನು? ಸಾರ್ವಜನಿಕ ಹಾಗೂ ವೈಯಕ್ತಿಕ ಜೀವನದಲ್ಲಿ ಭ್ರಷ್ಟಾಚಾರ ಯಾವ ರೀತಿ ಪ್ರಚಲಿತದಲ್ಲಿದೆ ಎಂಬಿತ್ಯಾದಿ ವಿವರಣೆಯನ್ನು ಈ ಗ್ರಂಥವು ಒಳಗೊಂಡಿದ್ದು, ಭ್ರಷ್ಟಾಚಾರಕ್ಕೆ ಸಂಬಂಧಿಸಿದ ಮನಃಶಾಸ್ತ್ರೀಯ ಅಂಶಗಳ ಬಗ್ಗೆ ಲೇಖಕರು ಈ ಗ್ರಂಥದಲ್ಲಿ ವಿವರಣೆಯನ್ನು ನೀಡಿಲ್ಲ.
- ಡಾ. ನೂರಾನಿ ಎ.ಜಿ.ರವರ (೧೯೭೫) 'ಮಿನಿಸ್ಟರ್ಸ್ ಮಿಸ್‌ಕಂಡಕ್ಟ್', ಗ್ರಂಥವು, ಭಾರತದಲ್ಲಿ ನಡೆದಿರುವ ಕೆಲವು ಪ್ರಮುಖ ಹಗರಣಗಳ ಬಗ್ಗೆ, ರಾಜಕೀಯ ವ್ಯಕ್ತಿಗಳು, ಮಂತ್ರಿಗಳು ಮಾಡಿರುವ ಭ್ರಷ್ಟಾಚಾರ ಹಾಗೂ ಅಧಿಕಾರದ ದುರುಪಯೋಗ, ಅವರ ದುರ್ನಡತೆ ಬಗ್ಗೆ ಮಾಹಿತಿಯನ್ನು ಒದಗಿಸುತ್ತದೆ. ಸ್ವಾತಂತ್ರ್ಯಾನಂತರ ೧೯೪೮ರಲ್ಲಿ ಭಾರತದಲ್ಲಿ ನಡೆದ 'ಜೀಪು ಹಗರಣ' ಸೇರಿದಂತೆ, ಅಂದಿನ ಹಲವು ಹಗರಣಗಳ ಬಗ್ಗೆ ಮಾಹಿತಿಯನ್ನು ಈ ಗ್ರಂಥವು ಒಳಗೊಂಡಿದೆ. ಆದರೆ ಇತ್ತೀಚಿನ ಹೊಸ ಹಗರಣಗಳ ಬಗ್ಗೆ ಇದು ಮಾಹಿತಿ ನೀಡಿಲ್ಲ.
- ಡಾ. ಹೈಡನ್ ಹೈಮರ್ ಎ.ಜೆ.ರವರ(೧೯೭೦) 'ಪೊಲಿಟಿಕಲ್ ಕರಪ್‌ಷನ್; ರೀಡಿಂಗ್ ಇನ್ ಕಂಪಾರಿಟೀವ್ ಅನಾಲಿಸೀಸ್', ಗ್ರಂಥವು ಭ್ರಷ್ಟಾಚಾರಕ್ಕೆ ಸಂಬಂಧಿಸಿದ ತುಲನಾತ್ಮಕ ವಿಶ್ಲೇಷಣೆಯನ್ನು ಹೊಂದಿರುವ ಹಾಗೂ ಭ್ರಷ್ಟಾಚಾರವನ್ನು ಅಧ್ಯಯನ ಮಾಡಲು ಅಂತರಶಾಸ್ತ್ರೀಯ ವಿಧಾನವನ್ನು ಬಳಸಿರುವ ಗ್ರಂಥವಾಗಿದೆ. ಭ್ರಷ್ಟಾಚಾರದ ಅರ್ಥ,

ಪರಿಕಲ್ಪನೆಗಳನ್ನು ಒಳಗೊಂಡಿದ್ದು, ವಿವಿಧ ರಾಷ್ಟ್ರಗಳಲ್ಲಿನ ಭ್ರಷ್ಟಾಚಾರ ಸ್ವರೂಪದ ಬಗ್ಗೆ ಶಾಸ್ತ್ರೀಯ ಅಧ್ಯಯನ ಮಾಡುವಲ್ಲಿ ಈ ಗ್ರಂಥ ಸಹಕಾರಿಯಾಗಿದೆ. ಆದರೆ ಇದು ವಾಸ್ತವ ಅಧ್ಯಯನ ಹೊಂದಿಲ್ಲ ಎನ್ನಬಹುದು.

- ಪ್ರೊ. ಲೆಸ್ಲಿ ಪಾಲ್ಮರ್‌ರವರ(೧೯೮೫) 'ದಿ ಕಂಟ್ರೋಲ್ ಆಫ್ ಬ್ಯೂರೋಕ್ರೆಟಿಕ್ ಕರಪ್ಷನ್; ಕೇಸ್ ಸ್ಟಡಿ ಇನ್ ಏಷ್ಯಾ', ಗ್ರಂಥವು, ವಿಶೇಷವಾಗಿ ಭಾರತ, ಹಾಂಕಾಂಗ್, ಇಂಡೋನೇಷಿಯಾ ರಾಷ್ಟ್ರಗಳನ್ನೊಳಗೊಂಡು, ಏಷ್ಯಾದ ಇತರೆ ರಾಷ್ಟ್ರಗಳಲ್ಲಿ ಭ್ರಷ್ಟಾಚಾರವನ್ನು ನಿಯಂತ್ರಣ ಮಾಡಲು ಹಾಗೂ ದುರಾಡಳಿತವನ್ನು ತಡೆಗಟ್ಟಲು ಅಳವಡಿಸಿಕೊಂಡಿರುವ ತಂತ್ರಗಳ – ಸಾಧನಗಳ ಬಗ್ಗೆ ಮಾಹಿತಿಯನ್ನು ಹೊಂದಿದ್ದು, ಭ್ರಷ್ಟಾಚಾರ ಸರ್ಕಾರಿ ಸಿಬ್ಬಂದಿಯೊಂದಿಗೆ ಹೇಗೆ ಅವಿನಾಭಾವ ಸಂಬಂಧವನ್ನು ಹೊಂದಿದೆ ಎಂಬುದರ ಬಗ್ಗೆ ವಿವರಣೆಯನ್ನು ಹೊಂದಿದೆ. ಭ್ರಷ್ಟಾಚಾರ ನಿಯಂತ್ರಣದ, ತಂತ್ರೋಪಾಯಗಳ ಬಗೆಗೆ ಲೇಖಕರು ತಮ್ಮದೇ ಆದ ಕೆಲವು ಸಲಹೆಗಳನ್ನು ನೀಡಿದ್ದಾರೆ. ಆದರೆ ಇದು ಕೇವಲ ಮಾರ್ಗಸೂಚಿಯಂತೆ ಕಾಣುತ್ತದೆ ಹೊರತು ಕಟ್ಟುನಿಟ್ಟಿನ ಕಾನೂನಿನಂತೆ ಕಾಣಿಸುತ್ತಿಲ್ಲ.

- ಡಾ. ಪೀಟರ್ ಎಂ. ವರ್ಡ್‌ರವರ(೧೯೮೯) 'ಕರಪ್ಷನ್ ಡೆವಲಪ್‌ಮೆಂಟ್ ಅಂಡ್ ಇನ್‌ಈಕ್ವಾಲಿಟಿ', ಗ್ರಂಥವು, ಬಡಜನರ ಹಿತಾಸಕ್ತಿಯನ್ನು ಕಾಪಾಡುವಲ್ಲಿ, ಭ್ರಷ್ಟಾಚಾರ ಅನಿವಾರ್ಯವಾದುದೇ, ಬಡವರೂ ಸಹ ಇತರರಂತೆ ಅಭಿವೃದ್ಧಿ ಹೊಂದಲು ಭ್ರಷ್ಟಾಚಾರ ಸಹಾಯವನ್ನು ಪಡೆಯುತ್ತಾರೆ, ಸಮಾಜದಲ್ಲಿ ಕೆಲ ವರ್ಗಗಳನ್ನು ಸಂತೃಪ್ತಿಪಡಿಸುವಲ್ಲಿ ಭ್ರಷ್ಟಾಚಾರದ ಪಾತ್ರವೇನು? ಅದರ ಪರಿಣಾಮ ಪ್ರತಿಫಲಗಳೇನು? ಹೀಗೆ ಮುಂತಾದ ಗಮನಾರ್ಹವಾದ ವಿಷಯಗಳನ್ನು ಹೊಂದಿಲ್ಲ. ಅಭಿವೃದ್ಧಿ ಹಾಗೂ ಅಸಮಾನತೆ ಇವೆರಡೂ ವಿಷಯಗಳಿಗೆ ಸಂಬಂಧಿಸಿದಂತೆ ಭ್ರಷ್ಟಾಚಾರದ ಪ್ರತಿಕ್ರಿಯೆ ಹಾಗೂ ಪರಿಣಾಮಗಳ ಬಗ್ಗೆ ಲೇಖಕರು ಸರಿಯಾಗಿ ವಿವರಣೆಯನ್ನು ನೀಡಿಲ್ಲ.

- ಡಾ. ಜಾನ್ ಬಿ. ಮಾಂಟೆರಿಯೋರವರ(೧೯೬೬) 'ಕರಪ್ಷನ್; ಕಂಟ್ರೋಲ್ ಆಫ್ ಮಾಲ್ ಅಡ್ಮಿನಿಸ್ಟ್ರೇಷನ್' ಗ್ರಂಥವು ಸಾರ್ವಜನಿಕ ಜೀವನದಲ್ಲಿ ಪ್ರಚಲಿತದಲ್ಲಿರುವ ಭ್ರಷ್ಟಾಚಾರ, ಇದಕ್ಕೆ ಕಾರಣಗಳು, ಭ್ರಷ್ಟಾಚಾರ ನಿಯಂತ್ರಣ, ತಂತ್ರ–ಸಾಧನಗಳು ಹಾಗೂ ಪ್ರಪಂಚದ ವಿವಿಧ ರಾಷ್ಟ್ರಗಳು ಭ್ರಷ್ಟಾಚಾರ ನಿಯಂತ್ರಣ ಮಾಡಲು ಅಳವಡಿಸಿಕೊಂಡಿರುವ ಸಂಸ್ಥೆಗಳ ಬಗ್ಗೆ ಮಾಹಿತಿಯನ್ನು ಒಳಗೊಂಡಿದೆ. ಸ್ಕ್ಯಾಂಡಿನೇವಿಯನ್ ರಾಷ್ಟ್ರಗಳು, ನ್ಯೂಜಿಲೆಂಡ್ ಮತ್ತು ಭಾರತದಂತಹ ರಾಷ್ಟ್ರಗಳಲ್ಲಿ ಭ್ರಷ್ಟಾಚಾರದ ನಿಗ್ರಹಕ್ಕೆ ಸ್ಥಾಪಿಸಿರುವ 'ಓಂಬುಡ್ಸ್‌ಮನ್' ಮಾದರಿ ಸಂಸ್ಥೆಗಳ ಬಗ್ಗೆ ಲೇಖಕರು ಈ ಗ್ರಂಥದಲ್ಲಿ ಮಾಹಿತಿಯನ್ನು ನೀಡಿದ್ದಾರೆ. ಆದರೆ ಭಾರತದಲ್ಲಿ ಓಂಬುಡ್ಸಮನ್ ಒಂದು ವಿಫಲ ಮಾದರಿ ಎಂಬ ಬಗ್ಗೆ ಪ್ರಸ್ತಾಪಿಸಿಲ್ಲ.

- ಪ್ರೊ. ಮೈಕೆಲ್ ಕ್ಲಾರ್ಕ್‌ರವರ(೧೯೮೩) 'ಕರಪ್ಷನ್; ಕಾಸಸ್, ಕಾನ್ಸಿಕ್ವೆನ್ಸ್ ಅಂಡ್ ಕಂಟ್ರೋಲ್', ಗ್ರಂಥದಲ್ಲಿ, ಭ್ರಷ್ಟಾಚಾರಕ್ಕೆ ಕಾರಣಗಳನ್ನು, ಇದರ ಪರಿಣಾಮಗಳನ್ನು ಹಾಗೂ ಭ್ರಷ್ಟಾಚಾರವನ್ನು ನಿಯಂತ್ರಣ ಮಾಡಲು ಇರುವ ತಂತ್ರ-ಸಾಧನಗಳ ಬಗ್ಗೆ ಲೇಖಕರು ವಿವರಣೆಯನ್ನು ನೀಡಿದ್ದಾರೆ. ಅಲ್ಲದೆ ಈ ಗ್ರಂಥವು ವಿವಿಧ ಸ್ವರೂಪದ ರಾಜಕೀಯ ಅರ್ಥಶಾಸ್ತ್ರವನ್ನು, ವಿವಿಧ ಹಂತದ ಆರ್ಥಿಕ ಪರಿಸ್ಥಿತಿ ಮತ್ತು ಅಭಿವೃದ್ಧಿಯನ್ನು ಕುರಿತಾದ ಮಾಹಿತಿಯನ್ನು ಒಳಗೊಂಡಿದೆ. ಅದರೆ ಇದರಲ್ಲಿ ಗ್ರಾಮೀಣ ಆರ್ಥಿಕ ನೀತಿಯ ಬಗ್ಗೆ ಪ್ರಸ್ತಾಪಿಸಿಲ್ಲ.
- ಡಾ. ಕೃಷ್ಣಸಿಂಗ್ ಪಥೀರ(೧೯೮೬) 'ಕರಪ್ಷನ್ ಇನ್ ಪಾಲಿಟಿಕ್ಸ್; ಎ ಕೇಸ್ ಸ್ಟಡಿ' ಗ್ರಂಥದಲ್ಲಿ ಭ್ರಷ್ಟಾಚಾರದ ಅರ್ಥ, ಸ್ವರೂಪಗಳ ವಿವರವನ್ನು ಹೊಂದಿದ್ದು, ಭ್ರಷ್ಟಾಚಾರವನ್ನು 'ಐತಿಹಾಸಿಕ ವಿಧಾನ'ದಿಂದ ಅಧ್ಯಯನ ಮಾಡಲಾಗಿದೆ. ಭಾರತದಲ್ಲಿ ನಡೆದಿರುವ ಕೆಲವು ಹಗರಣಗಳ ಬಗ್ಗೆ ಹಾಗೂ ಈ ಹಗರಣಗಳ ಕುರಿತು ತನಿಖೆ ನಡೆಸಲು ಸರ್ಕಾರ ರಚಿಸಿದಂತಹ ಸಮಿತಿಗಳು ಮತ್ತು ಆ ಸಮಿತಿಗಳು ತಯಾರಿಸಿದ ವರದಿಗಳ ಬಗ್ಗೆ ಈ ಗ್ರಂಥವು ಮಾಹಿತಿಯನ್ನು ಹೊಂದಿದೆ. ಆದರೆ ಇದು ಸರ್ಕಾರಿ ಅಂಕಿ ಸಂಖ್ಯೆಗಳಿಗೆ ಮಾತ್ರ ಸೀಮಿತಗೊಂಡಿದ್ದು ಪರಿಣಾಮದ ಬಗ್ಗೆ ಎಲ್ಲೂ ಹೇಳಿಲ್ಲ.
- ಡಾ. ಸುರೇಂದ್ರನಾಥ ದ್ವಿವೇದಿ ಹಾಗೂ ಶ್ರೀ ಭಾರ್ಗವ ಜಿ.ಎಸ್. ಅವರ(೧೯೬೭) 'ಪೊಲಿಟಿಕಲ್ ಕರಪ್ಷನ್' ಗ್ರಂಥವು ವಿಶೇಷವಾಗಿ ರಾಜಕೀಯ ಭ್ರಷ್ಟಾಚಾರ ಎಂದರೇನು? ಎಂಬುದರ ಬಗ್ಗೆ ಅರ್ಥವಿವರಣೆಯನ್ನು ಹೊಂದಿದ್ದು, ಭಾರತದಲ್ಲಿ ನಡೆದ ಕೆಲವು ಪ್ರಮುಖ ಹಗರಣಗಳ ಬಗ್ಗೆ ಮಾಹಿತಿಯನ್ನು ಹೊಂದಿದೆ. ಭ್ರಷ್ಟಾಚಾರದಿಂದ ಆಗುವ ಸಮಸ್ಯೆ, ಅಪಾಯಗಳ ಬಗ್ಗೆ ಅದರಲ್ಲೂ ರಾಜಕೀಯ ಭ್ರಷ್ಟಾಚಾರದ ಬಗ್ಗೆ ಜನರಲ್ಲಿ ಅರಿವು ಮೂಡಿಸುವಲ್ಲಿ ಅಗತ್ಯವಾದ ಮಾಹಿತಿ ಮತ್ತು ವಿವರಣೆಯನ್ನು ಲೇಖಕರು ನೀಡಿದ್ದಾರೆ.
- ಪ್ರೊ.ಸುಭಾಷ್‌ಚಂದರ್ ಗುಪ್ತರವರ(೧೯೬೭) 'ಓಂಬುಡ್ಸ್‌ಮನ್, ಆನ್ ಇಂಡಿಯನ್ ಪರ್ಸ್ಪೆಕ್ಟೀವ್' ಗ್ರಂಥವು ಓಂಬುಡ್ಸ್‌ಮನ್ ಸಂಸ್ಥೆಯ ಬಗ್ಗೆ ವಿವರವನ್ನು ಹೊಂದಿದ್ದು, ತುಲನಾತ್ಮಕ ಅಧ್ಯಯನ ವಿಧಾನವನ್ನು ಲೇಖಕರು ಅಳವಡಿಕೊಂಡಿದ್ದಾರೆ. ಸ್ವೀಡನ್, ನೆದರ್‌ಲ್ಯಾಂಡ್, ಇಂಗ್ಲೆಂಡ್ ಮತ್ತು ಭಾರತದಲ್ಲಿ ಅಸ್ತಿತ್ವದಲ್ಲಿರುವ 'ಓಂಬುಡ್ಸ್‌ಮನ್' ಮಾದರಿ ಸಂಸ್ಥೆಗಳ ಬಗ್ಗೆ ಮಾಹಿತಿ ಹೊಂದಿದೆ. ಭಾರತದಲ್ಲಿ ಅದೇ ತಾನೇ ಚರ್ಚೆಗೆ ಒಳಪಡುತ್ತಿರುವ ಲೋಕಾಯುಕ್ತ ಹಾಗೂ ಲೋಕಪಾಲ್ ಕಾಯ್ದೆಯ ಬಗ್ಗೆ ಹಾಗೂ ವಿವಿಧ ರಾಜ್ಯಗಳಲ್ಲಿ ಅಸ್ತಿತ್ವದಲ್ಲಿರುವ ಲೋಕಾಯುಕ್ತ ಸಂಸ್ಥೆಗಳ ಬಗ್ಗೆ ಮಾಹಿತಿಯನ್ನು ಈ ಗ್ರಂಥವು ಒಳಗೊಂಡಿಲ್ಲ.
- ಶ್ರೀ ಹೊಳ್ಳ ಎ.ಎಸ್.ರವರ(೧೯೯೭) 'ಹ್ಯಾಂಡ್‌ಬುಕ್ ಆನ್ ಡಿಸಿಪ್ಲೀನರಿ ಪ್ರೊಸೀಡಿಂಗ್ಸ್

ಎಗೈನೆಸ್ಟ್ ಗೌರ್ನಮೆಂಟ್ ಸರ್ವೆಂಟ್ಸ್ ಇನ್ ಕರ್ನಾಟಕ', ಗ್ರಂಥವು ಸಾರ್ವಜನಿಕ ನೌಕರರ ವಿರುದ್ಧ ಶಿಸ್ತುಕ್ರಮ ವಿಧಿಸುವ ಕೆಲವು ಸಂಸ್ಥೆಗಳ ಬಗ್ಗೆ, ಕರ್ನಾಟಕ ಸಿವಿಲ್ ಸರ್ವೀಸ್ ರೂಲ್ಸ್ ೧೯೬೬, ಕರ್ನಾಟಕ ಲೋಕಾಯುಕ್ತ ಕಾಯ್ದೆ ೧೯೮೪, ಕರ್ನಾಟಕ ಲೋಕಾಯುಕ್ತ ನಿಯಮ ೧೯೮೫, ಪ್ರಿವೆನ್ಷನ್ ಆಫ್ ಕರಪ್ಷನ್ ಆಕ್ಟ್ ೧೯೮೮, ವಿಷಯಗಳಿಗೆ ಸಂಬಂಧಿಸಿದ ವಿವರಗಳನ್ನು ಹೊಂದಿದೆ.ಅದರೆ ಇನ್ನಷ್ಟು ಪ್ರಕರಣಗಳ ಮಾಹಿತಿ ನೀಡಬಹುದಿತ್ತು.

- ಪ್ರೊ. ಕಪೂರ್ ಹೆಚ್.ಎಲ್. ಅವರ(೧೯೯೩) 'ಪ್ರಿವೆನ್ಷನ್ ಆಫ್ ಕರಪ್ಷನ್ ಆ್ಯಕ್ಟ್' ಗ್ರಂಥವು ಭ್ರಷ್ಟಾಚಾರದ ನಿಯಂತ್ರಣಕ್ಕಾಗಿ ಅಸ್ಥಿತ್ವದಲ್ಲಿರುವ ಕಾಯ್ದೆಗಳು, ಕಾನೂನುಗಳು ಮತ್ತು ನಿಯಮಗಳ ಬಗ್ಗೆ ಸೂಕ್ತ ಮಾಹಿತಿಯನ್ನು ಹೊಂದಿದ್ದು, ಲೇಖಕರು ಇನ್ನಷ್ಟು ವಿಶ್ಲೇಷಣಾತ್ಮಕ ಅಧ್ಯಯನ ವಿಧಾನವನ್ನು ಅಳವಡಿಸಿಕೊಳ್ಳಬಹುದಿತ್ತು.

- ಡಾ. ಚೌಹಾಣ್ ಆರ್.ಜಿ. ಅವರ(೧೯೯೭) 'ದ ಕರ್ನಾಟಕ ಲೋಕಾಯುಕ್ತ ಆಕ್ಟ್, ೧೯೮೪' ಗ್ರಂಥವು ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಬಗ್ಗೆ, ಅದರ ಸ್ವರೂಪ, ಕಾರ್ಯವ್ಯಾಪ್ತಿ, ಅಧಿಕಾರ, ಲೋಕಾಯುಕ್ತರ ಹಾಗೂ ಉಪಲೋಕಾಯುಕ್ತರ ನೇಮಕಾತಿ, ಲೋಕಾಯುಕ್ತದ ಸಿಬ್ಬಂದಿಯ ಬಗ್ಗೆ ಮಾಹಿತಿಯನ್ನು ಒಳಗೊಂಡಿದೆ. ಭ್ರಷ್ಟಾಚಾರದ ಪ್ರಕರಣಗಳಿಗೆ ಸಂಬಂಧಿಸಿದಂತೆ ವಿಚಾರಣೆ ನಡೆಸಲು ಇರುವ 'ಅಪೆಕ್ಸ್ ಕೋರ್ಟ್' ಬಗ್ಗೆ ಹಾಗೂ ಪ್ರಿವೆನ್ಷನ್ ಆಫ್ ಕರಪ್ಷನ್ ಆಕ್ಟ್ ೧೯೮೮, 'ದ ಡೆಲ್ಲಿ ಸ್ಪೆಷಲ್ ಪೊಲೀಸ್ ಎಸ್ಟಾಬ್ಲಿಷ್‌ಮೆಂಟ್ ಆ್ಯಕ್ಟ್-೧೯೪೬' ಬಗ್ಗೆಯು ಸಹ ಮಾಹಿತಿಯನ್ನು ಒಳಗೊಂಡಿದೆ. ಆದರೆ ಇದರಲ್ಲಿ ಬೆಂಚ್ ಮಾರ್ಕವೆನಿಸುವ ತೀರ್ಪುಗಳ ಬಗ್ಗೆ ಉಲ್ಲೇಖಿಸಿಲ್ಲ.

- ಡಾ. ಪುರಿ ಜಿ.ಜಿ. ಮತ್ತು ಡಾ. ಜೋಷಿ ವಿ.ಟಿ.ರವರ(೧೯೯೦) 'ಇಂಡಿಯಾ ಅಟ್ ದ ಕ್ರಾಸ್-ರೋಡ್ಸ್' ಗ್ರಂಥದಲ್ಲಿನ ೧೨ನೇ ಅಧ್ಯಾಯವು 'ಕರಪ್ಷನ್ ಅಂಡ್ ಇಟ್ ಫ್ಯಾಂಗ್ಸ್' ಶೀರ್ಷಿಕೆಯನ್ನು ಹೊಂದಿದ್ದು, ಭ್ರಷ್ಟಾಚಾರ ಹೇಗೆ ಅಪಾಯಕಾರಕ ಎಂಬುದನ್ನು ಲೇಖಕರು ವಿವರಿಸಿದ್ದಾರೆ. ಭ್ರಷ್ಟಾಚಾರ ಬೆಳೆಯಲು ರಾಜಕಾರಣಿಗಳು, ಅಧಿಕಾರಿಗಳು ಹಾಗೂ ಸಮಾಜದ ಸಾಮಾನ್ಯ ಮನುಷ್ಯನು ಸಹ ಕಾರಣನಾಗುತ್ತಾನೆ ಹಾಗೂ ಭ್ರಷ್ಟಾಚಾರದ ಹಾವಳಿಯಿಂದ ಪ್ರಜಾಪ್ರಭುತ್ವ ಪದ್ಧತಿ ಅಧೋಗತಿಗೆ ಬಂದು, ಗಾಂಧಿ ಕನಸು ಕಂಡ ರಾಮರಾಜ್ಯದ ಬದಲಿಗೆ 'ಗೂಂಡಾರಾಜ್ಯ' ಅಸ್ತಿತ್ವಕ್ಕೆ ಬರುತ್ತದೆ ಎಂಬುದನ್ನು ಲೇಖಕರು ವಿವರಿಸಿದ್ದಾರೆ. ಆದರೆ ಗೂಂಡಾ ರಾಜ್ಯದ ಸ್ವರೂಪ ಹೇಗಿರುತ್ತದೆ ಎಂಬುದರ ಬಗ್ಗೆ ವಿವರಿಸಿಲ್ಲ.

- ಪ್ರೊ. ಶರ್ಮ ಎಂ.ಪಿ. ಹಾಗೂ ಪ್ರೊ. ಸದನ ಬಿ.ಎಲ್.ರವರ(೧೯೯೭) 'ಪಬ್ಲಿಕ್ ಅಡ್ಮಿನಿಸ್ಟ್ರೇಷನ್ ಇನ್ ಥಿಯರಿ ಅಂಡ್ ಪ್ರಾಕ್ಟೀಸ್' ಗ್ರಂಥದಲ್ಲಿನ ೨೫ನೇ ಅಧ್ಯಾಯವು ಭ್ರಷ್ಟಾಚಾರದ ಬಗ್ಗೆ

ಮಾಹಿತಿ ಹೊಂದಿದ್ದು, ಭ್ರಷ್ಟಾಚಾರ ನಿಯಂತ್ರಣದಲ್ಲಿ 'ಓಂಬುಡ್ಸ್‌ಮನ್'ನ ಅಗತ್ಯತೆ ಬಗ್ಗೆ ಹಾಗೂ ಲೋಕಾಯುಕ್ತ, ಲೋಕಪಾಲ್ ಸಂಸ್ಥೆಗಳ ಬಗ್ಗೆಯು ಸಹ ಮಾಹಿತಿಯನ್ನು ಹೊಂದಿದೆ.ಆದರೆ ಇದನ್ನು ಸ್ಥಾಪಿಸಲು ಅನುಸರಿಸಬೇಕಾದ ಬದ್ದತೆಯ ಬಗ್ಗೆ ವಿವರಿಸಿಲ್ಲ.

- ಡಾ. ಗುನ್ನಾರ್ ಮಿರ್‌ಡಾಲ್‌ರವರ(೧೯೮೭) 'ಏಷ್ಯನ್ ಡ್ರಾಮ; ಆನ್ ಇನ್‌ಕ್ವೈಯರಿ ಇನ್ ಟು ದ ಪಾವರ್ಟಿ ಆಫ್ ನೇಷನ್ಸ್' ಗ್ರಂಥದ ೨೦ನೇ ಅಧ್ಯಾಯವು ಭ್ರಷ್ಟಾಚಾರಕ್ಕೆ ಕಾರಣಗಳು, ಅದರ ಪರಿಣಾಮಗಳು ಮುಂತಾದವುಗಳ ಬಗ್ಗೆ ವಿವರಣೆ ಹೊಂದಿದೆ. ರಾಷ್ಟ್ರಗಳು ಮೃದು ಧೋರಣೆಯನ್ನು ಅನುಸರಿಸುವುದು ಭ್ರಷ್ಟಾಚಾರಕ್ಕೆ ಹೇಗೆ ಕಾರಣವಾಗುತ್ತದೆ ಹಾಗೂ ಸರ್ಕಾರಗಳು ತೀರ್ಮಾನ ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಮತ್ತು ಯೋಜನೆಗಳನ್ನು ಸಾಕಾರಗೊಳಿಸುವಲ್ಲಿ ಭ್ರಷ್ಟಾಚಾರ ಹೇಗೆ ಕೆಟ್ಟ ಪರಿಣಾಮ ಬೀರುತ್ತದೆ ಎಂಬುದರ ಬಗ್ಗೆ ಲೇಖಕರು ವಿವರಣೆಯನ್ನು ನೀಡಿದ್ದಾರೆ. ಆದರೆ ಸರ್ಕಾರಗಳು ಪರಿಣಾಮಕಾರಿಯಾಗಿ ಭ್ರಷ್ಟಾಚಾರವನ್ನು ಹೇಗೆ ನಿಯಂತ್ರಿಸಬೇಕು ಎಂಬುದರ ಬಗ್ಗೆ ವಿವರಿಸಿಲ್ಲ.

- ಡಾ ರಾಮಕೃಷ್ಣ ಪಿ.ವಿ.ರವರ(೧೯೮೮) 'ಎ ಟ್ರೀಟೈಸ್ ಆನ್ ಆಂಟಿ ಕರಪ್ಷನ್ ಲಾಸ್ ಇನ್ ಇಂಡಿಯಾ' ಗ್ರಂಥವು ಭ್ರಷ್ಟಾಚಾರದ ವಿರುದ್ಧ ಕ್ರಮ ಕೈಗೊಳ್ಳುವಲ್ಲಿ ಇರುವ ಕಾನೂನುಗಳ ಬಗ್ಗೆ ಸವಿವರವಾದ ಮಾಹಿತಿಯನ್ನು ಹೊಂದಿದ್ದು, ಭ್ರಷ್ಟಾಚಾರ ನಿಯಂತ್ರಣದಲ್ಲಿ ಇರುವ ಕಾಯ್ದೆಗಳ ಬಗ್ಗೆ ವಿವರಣೆಯನ್ನು ಹೊಂದಿದೆ. ಕಾಯ್ದೆಯನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಲು ಆಗಿರುವ ತೊಂದರೆ ಏನು ಎಂಬುದರ ಬಗ್ಗೆ ಹೇಳಿಲ್ಲ.

- ಡಾ ವಿರೇಂದ್ರ ಗ್ರೋವರ್(೧೯೯೫) ಸಂಪಾದಕತ್ವದ 'ಪೊಲಿಟಿಕಲ್ ಸಿಸ್ಟಮ್ ಇನ್ ಇಂಡಿಯಾ' ಪುಸ್ತಕದಲ್ಲಿ ಪಿ.ಎಸ್. ಮಹರ್‌ರವರು 'ಕರಪ್ಷನ್ ಇನ್ ದ ಪಬ್ಲಿಕ್ ಸರ್ವೀಸಸ್' ಶೀರ್ಷಿಕೆಯಡಿಯಲ್ಲಿ ಬರೆದಿರುವ ಅಧ್ಯಾಯದಲ್ಲಿ ಸಾರ್ವಜನಿಕ ಕಛೇರಿಯಲ್ಲಿ ಹಾಗೂ ನೌಕರರಲ್ಲಿ ಭ್ರಷ್ಟಾಚಾರವೆಂಬ ಪಿಡುಗು ಯಾವ ಮಟ್ಟದಲ್ಲಿ ನೆಲೆಸಿದೆ ಎಂಬ ಬಗ್ಗೆ ಲೇಖಕರು ಮಾಹಿತಿ ನೀಡಿದ್ದಾರೆ. ಭ್ರಷ್ಟಾಚಾರದ ನಿಯಂತ್ರಣಕ್ಕಾಗಿ ಏನು ಮಾಡಬೇಕೆಂಬ ಬಗ್ಗೆ ವಿವರಣೆ ನೀಡಿಲ್ಲ.

- ಶ್ರೀಮತಿ ಸಂಗೀತ ಎಸ್.ಎನ್.ರವರ(೧೯೯೮) 'ಆಂಟಿ ಕರಪ್ಷನ್ ಸ್ಟ್ರಾಟೆಜೀಸ್; ಎ ಪೊಲಿಟಿಕಲ್ ಪರ್‌ಸ್ಪೆಕ್ಟೀವ್' ಲೇಖನವು ಭ್ರಷ್ಟಾಚಾರ ಹಾಗೂ ಇದರ ನಿಯಂತ್ರಣ ಕುರಿತಂತೆ ರಾಜಕೀಯ ಶಾಸ್ತ್ರಜ್ಞರುಗಳ ದೃಷ್ಟಿಕೋನ ಹಾಗೂ ಅವರ ಅಭಿಪ್ರಾಯಗಳೇನು? ಎಂಬ

ವಿಷಯದ ಬಗ್ಗೆ ಮಾಹಿತಿಯನ್ನು ಒಳಗೊಂಡಿದೆ. ನಿಯಂತ್ರಣಕ್ಕೆ ಯಾವ ರೀತಿಯ ಬದ್ಧತೆ ತೋರಿಸಬೇಕು ಎಂಬುದರ ಬಗ್ಗೆ ಪ್ರಸ್ತಾಪಿಸಿಲ್ಲ.

- ಡಾ. ಮೊಹಮ್ಮದ್ ಮೊಹಬ್ಬತ್ ಖಾನ್‌ರವರ(೨೦೦೯) 'ಪೊಲಿಟಿಕಲ್ ಅಂಡ್ ಅಡ್ಮಿನಿಸ್ಟ್ರೇಟಿವ್ ಕರಪ್ಷನ್; ಕಾನ್ಸೆಪ್ಟ್ಸ್, ಕಂಪಾರಿಟೀವ್ ಎಕ್ಸ್‌ಪೀರಿಯನ್ಸ್ ಅಂಡ್ ಬಾಂಗ್ಲಾದೇಶ್ ಕೇಸ್' ಲೇಖನವು ಭ್ರಷ್ಟಾಚಾರದ ಅರ್ಥ, ಸ್ವರೂಪ, ಅದರ ವಿವಿಧ ಮುಖಗಳ ಬಗ್ಗೆ ಮಾಹಿತಿಯನ್ನು ಹೊಂದಿದ್ದು, ಭ್ರಷ್ಟಾಚಾರಕ್ಕೆ ಸಂಬಂಧಿಸಿದ ಕೆಲವು ಐತಿಹಾಸಿಕ ವಿವರಗಳನ್ನು ಹೊಂದಿದೆ.ಆದರೆ ಇಲ್ಲಿ ಭ್ರಷ್ಟಾಚಾರದ ಹೊಸಮುಖಗಳ ಬಗ್ಗೆ ಪ್ರಸ್ತಾಪ ಮಾಡಿಲ್ಲ.
- ಶ್ರೀಮತಿ ಸಂಗೀತ ಎಸ್.ಎನ್.ರವರ(೨೦೦೫) 'ದ ಲೋಕಾಯುಕ್ತ ಇನ್ಸ್‌ಸ್ಟಿಟ್ಯೂಷನ್ ಇನ್ ಕರ್ನಾಟಕ; ಎ ಟ್ರೆಂಡ್ ಸೆಟ್ಟರ್ ಫಾರ್ ದ ತ್ರಿ ಟೈರ್ ಸ್ಟ್ರಕ್ಚರ್ ಓಂಬುಡ್ಸ್‌ಮನ್ ಇನ್ ಇಂಡಿಯಾ' ಲೇಖನವು ಕರ್ನಾಟಕ ಲೋಕಾಯುಕ್ತದ ಅಗತ್ಯತೆ ಬಗ್ಗೆ ಹಾಗೂ ಅದರ ಹುಟ್ಟು, ಬೆಳವಣಿಗೆಯ ಬಗ್ಗೆ ಸಂಕ್ಷಿಪ್ತ ಇತಿಹಾಸವನ್ನು ಹೇಳುತ್ತದೆ, ಆದರೆ ಇದು ಕರ್ನಾಟಕ ಲೋಕಾಯುಕ್ತದ ನಿಶಕ್ತ ಕಾನೂನುಗಳ ಬಗ್ಗೆ ವಿವರಿಸಿಲ್ಲ.
- ಡಾ. ರಾಜ್‌ಕುಮಾರ್ ಸಿ.ರವರ(೨೦೦೯) 'ಕರಪ್ಷನ್ ಅಂಡ್ ಹ್ಯೂಮನ್ ರೈಟ್ಸ್' ಲೇಖನವು, ಮಾನವ ಹಕ್ಕುಗಳನ್ನು ಪ್ರಭಾವಯುತವಾಗಿ ಜಾರಿಗೆ ತರುವಲ್ಲಿ ಭ್ರಷ್ಟಾಚಾರದ ತೊಡಕುಗಳೇನು? ಹಾಗೂ ಭ್ರಷ್ಟಾಚಾರ ಮಾನವ ಹಕ್ಕುಗಳನ್ನು ಹೇಗೆ ಮೂಲೆ ಗುಂಪು ಮಾಡುತ್ತದೆ ಎಂಬ ವಿಚಾರಗಳನ್ನು ಹೊಂದಿದ್ದು, ಪ್ರಜಾಪ್ರಭುತ್ವದ ಸರ್ಕಾರಕ್ಕೆ, ಸಾಮಾಜಿಕ ಘನತೆಗೆ, ನಾಗರೀಕ ಹಕ್ಕುಗಳಿಗೆ ಭ್ರಷ್ಟಾಚಾರ ಹೇಗೆ ಮಾರಕವಾಗಿದೆ ಎಂಬುದನ್ನು ಲೇಖಕರು ತಮ್ಮ ಬರಹದಲ್ಲಿ ವಿವರಿಸಿದ್ದಾರೆ. ಆದರೆ ಉತ್ತಮ ಆಡಳಿತಕ್ಕೆ ಹೇಗೆ ಮಾರಕವಾಗಲಿದೆ ಎಂಬ ಬಗ್ಗೆ ವಿವರಿಸಿಲ್ಲ.
- ಡಾ. ಚಕ್ರವರ್ತಿ ಕೆ.ಕೆ.ರವರ(೨೦೦೭) 'ಕರಪ್ಷನ್; ಮಿಸ್‌ಕಾನ್ಸ್‌ಸೆಪ್ಷನ್ ಎಬೌಟ್‌ದ ಡಿಸೀಜ್ ಅಂಡ್ ದ ಮೆಡಿಸನ್' ಲೇಖನವು ಭ್ರಷ್ಟಾಚಾರವು ಸಮಾಜದಲ್ಲಿ ಹೇಗೆ ಒಂದು ದೊಡ್ಡ ಪಿಡುಗಾಗಿ ಪರಿಣಮಿಸಿದೆ ಎಂಬುದರ ಬಗ್ಗೆ ಸಂಕ್ಷಿಪ್ತ ಮಾಹಿತಿಯನ್ನು ಹೊಂದಿದೆ. ಈ ಲೇಖನದಲ್ಲಿ ಲೇಖಕರು ಭ್ರಷ್ಟಾಚಾರದ ಬಗ್ಗೆ ತಮ್ಮ ಅನುಭವಗಳನ್ನು ಹಾಗೂ ಅಭಿಪ್ರಾಯಗಳನ್ನು ಬಿಂಬಿಸಿದ್ದಾರೆ. ಅದಕ್ಕೆ ಮದ್ದೇನು ಎಂಬುದರ ಬಗ್ಗೆ ಗಂಭೀರವಾಗಿ ಪ್ರಸ್ತಾಪಿಸಿಲ್ಲ.
- ಡಾ. ಜನಾರ್ದನ (೨೦೧೦)ರವರ 'ಕರ್ನಾಟಕದಲ್ಲಿ ಗ್ರಾಮೀಣ ಆರೋಗ್ಯ' ಎಂಬ ಅಪ್ರಕಟಿತ ಸಂಶೋಧನಾ ಮಹಾ ಪ್ರಬಂಧದಲ್ಲಿ ಇಂದು ನಾವು ಯೂಸರ್ ಪೇಮೆಂಟ್ ಸಿಸ್ಟಮ್‌ನಲ್ಲಿದ್ದೇವೆ. ಹಣಕ್ಕೆ ತಕ್ಕಂತೆ ಇಂದು ಔಷದೋಪಚಾರ ಸಿಗುತ್ತದೆ. ಹಣವಿಲ್ಲದವರು ಸರಿಯಾದ

ಔಷದೋಪಚಾರದಿಂದ ವಂಚಿತರಾಗುತ್ತಿದ್ದಾರೆ. ಆರೋಗ್ಯ ನೀತಿಗೆ ವಿರುದ್ಧವಾದ ಕಾರ್ಯ ಚಟುವಟಿಕೆಗಳು ನಡೆಯುತ್ತಿರುವುದು ಕಂಡುಬಂದಿದೆ. ವೈದ್ಯರು ಸೇವೆಗೆ ಲಭ್ಯವಿಲ್ಲ. ಔಷಧಿಗಳು ಹಾಗೂ ಪರೀಕ್ಷಾ ಉಪಕರಣಗಳು ಪೂರೈಕೆಯಾಗುತ್ತಿಲ್ಲ. ಈ ಎಲ್ಲ ಸಮಸ್ಯೆಗಳು ಉತ್ತಮ ಆಡಳಿತಕ್ಕೆ ವ್ಯತಿರಿಕ್ತವಾಗಿವೆ ಎಂದು ಪ್ರಸ್ತಾಪಿಸಿದ್ದಾರೆ. ಆರೋಗ್ಯ ಎಲ್ಲರ ಮೂಲಭೂತ ಹಕ್ಕಾಗಬೇಕೆಂಬುದರ ಬಗ್ಗೆ ಪ್ರತಿಪಾದಿಸಿಲ್ಲ.

- ಶ್ರೀ ಪ್ರಕಾಶ ಎಮ್.ಜಿ.(೨೦೧೧)ರವರು ರಚಿಸಿದ 'ಲೋಕಾಯುಕ್ತ ವರದಿ ಶ್ರೀ ಬಿ.ಎಸ್. ಯಡಿಯೂರಪ್ಪ ಬಲಿಪಶು ಆದರೆ?' ಎಂಬ ಪುಸ್ತಕದಲ್ಲಿ ನ್ಯಾಯಶಾಸ್ತ್ರದ ಮೂಲಭೂತ ತತ್ವವೆಂದರೆ, ಪ್ರತಿಕೂಲ ಕ್ರಮ ಕೈಗೊಳ್ಳಬೇಕಾದರೆ ನಿಮ್ಮ ವಿರುದ್ಧ ಏಕೆ ಅಂಥ ಅಭಿಪ್ರಾಯ ನೀಡಬಾರದು ಎಂದು ಸಂಬಂಧಿಸಿದವರಿಗೆ ನೋಟಿಸ್ ನೀಡಿ ಆ ವ್ಯಕ್ತಿಗೆ ವಿವರಣೆ ನೀಡಲು ಅವಕಾಶ ನೀಡಬೇಕಾದುದು ಕನಿಷ್ಠ ಅಗತ್ಯವಾಗುತ್ತದೆ. ಆದರೆ ಶ್ರೀ ಯಡಿಯೂರಪ್ಪನವರ ವಿಷಯದಲ್ಲಿ ಲೋಕಾಯುಕ್ತ ಇದನ್ನು ಪಾಲಿಸಿಲ್ಲ ಎಂದು ಪ್ರತಿಪಾದಿಸಿದ್ದಾರೆ. ಇಲ್ಲಿ ಕಾನೂನಿನ ಮಜಲುಗಳ ಬಗ್ಗೆ ಸಮರ್ಥಿಸಿಕೊಂಡಿದ್ದಾರೆ ಹೊರತು ನೈತಿಕತೆಯ ಬಗ್ಗೆ ಪ್ರಸ್ತಾಪಿಸಿಲ್ಲ.
- ಡಾ. ಎಲ್. ಬಸವರಾಜು(೧೯೮೯)ರವರು ರಚಿಸಿದ 'ಬಸವ ವಚನಾಮೃತ' ಎಂಬ ಪುಸ್ತಕದಲ್ಲಿ ವಿಷಕ್ಕಿಂತ ಆಮಿಷ ಕೆಟ್ಟದ್ದು. ಬೇಡಿ ತಿನ್ನುವವ ಹಾಗೂ ಆಶೆಪಟ್ಟು ತಿನ್ನುವವ ಶರಣನಲ್ಲ. ಛಲಬೇಕು ಶರಣನಿಗೆ ಪರಧನ ಒಲ್ಲೆ ಹಾಗೂ ಪರಸತಿ ಒಲ್ಲೆ ಎಂಬ ಬಸವಣ್ಣನವರ ವಚನ ವಿಚಾರಗಳನ್ನು ಉಲ್ಲೇಖಿಸಿದ್ದಾರೆ. ಆದರೆ ಆಮಿಷ, ಆಶೆಗಳನ್ನು ಹೇಗೆ ಮೆಟ್ಟನಿಲ್ಲಬೇಕು ಎಂಬುದರ ಬಗ್ಗೆ ಮಾರ್ಗದರ್ಶನವಿಲ್ಲ.
- ನ್ಯಾ ರಾಮಾಜೋಯಿಸ್(೨೦೧೧)ರವರು ಕನ್ನಡ ವಿಶ್ವವಿದ್ಯಾಲಯ ಹಂಪಿ ಇದರ ೨೦ನೇ ಘಟಿಕೋತ್ಸವ ಭಾಷಣದಲ್ಲಿ ಸಂಸ್ಕಾರರಹಿತ ಶಿಕ್ಷಣದಿಂದ ಲಂಚಗುಳಿತನ, ಭ್ರಷ್ಟಾಚಾರ ಹಾಗೂ ಅನೈತಿಕತೆ ಹೆಚ್ಚಿದೆ. ವಿದ್ಯಾವಂತರೇ ಲಂಚ ಪಡೆಯುತ್ತಿದ್ದಾರೆ. ಅವರಿಂದಲೇ ದೇಶದಲ್ಲಿ ಅತೀ ಹೆಚ್ಚು ಕಾನೂನು ಉಲ್ಲಂಘನೆಯಾಗುತ್ತಿದೆ. ಕಾನೂನು ಅಪರಾಧ ಮಾಡಿದ ನಂತರ ಶಿಕ್ಷಿಸುತ್ತದೆ. ಆದರೆ ಧರ್ಮ ಅಪರಾಧ ಮಾಡುವುದನ್ನೇ ತಪ್ಪಿಸುತ್ತದೆ. ಮನುಷ್ಯನು ಚಾರಿತ್ರ್ಯವಾನನಾಗಿರಬೇಕಾದರೆ ಧರ್ಮಪಾಲನೆ ಮಾಡುವುದು ಮುಖ್ಯ. ನಾವೆಲ್ಲ ಧರ್ಮ ಪಾಲನೆ ಮಾಡಿದ್ದೇ ಆದರೆ ಲೋಕಪಾಲವೇ ಬೇಕಿಲ್ಲ ಎಂದು ಹೇಳಿದರು. ಧರ್ಮಪಾಲನೆ ಜನರನ್ನು ಹೇಗೆ ಅಣಿಮಾಡಬೇಕು ಎಂಬುದರ ಬಗ್ಗೆ ಹೇಳಲಿಲ್ಲ.
- ಶ್ರೀ ಒಮೆನ್ ಟಿ.ಕೆ.(೨೦೦೪) 'ಡೆವಲಪ್‌ಮೆಂಟ್ ಡಿಸ್ ಕೋರ್ಸ್ ಇಸ್ಸ್ಯೂಜ್ ಆಂಡ್ ಕನ್ಸರ್ನ' ಎಂಬ ಗ್ರಂಥದಲ್ಲಿ ಎಲ್ಲ ಭ್ರಷ್ಟಾಚಾರಗಳಿಗಿಂತ ರಾಜಕೀಯ ಭ್ರಷ್ಟಾಚಾರ ಅತ್ಯಂತ

ಹೀನವಾದುದು. 'ರಾಜ್ಯಾಡಳಿತದ ಜವಾಬ್ದಾರಿ ಹೊಂದಿರುವವರು ಹಾಗೂ ವಿಶಿಷ್ಟ ಅಧಿಕಾರ, ಸ್ಥಾನಮಾನಗಳನ್ನು ಹೊಂದಿರುವವರು ತಮ್ಮ ಸ್ವಾರ್ಥಕ್ಕಾಗಿ ಅಧಿಕಾರವನ್ನು ದುರ್ವಿನಿಯೋಗ ಮಾಡಿಕೊಳ್ಳುವುದು ಹಾಗೂ ವ್ಯಕ್ತಿಗತ ಲಾಭಗಳಿಸುವುದಕ್ಕಾಗಿ ನಿರ್ದಿಷ್ಟ ಕರ್ತವ್ಯವನ್ನು ಉದ್ದೇಶಪೂರ್ವಕವಾಗಿ ನೆರವೇರಿಸದೇ ಇರುವುದು ಅಥವಾ ಮುಂದೂಡುವುದೇ ರಾಜಕೀಯ ಭ್ರಷ್ಟಾಚಾರ' ಎಂದು ವ್ಯಾಖ್ಯಾನಿಸಿದ್ದಾರೆ. ಆದರೆ ಇಂತಹ ನಡತೆಯಿಂದ ಸಮಾಜದ ಮೇಲೆ ಯಾವ ತರಹದ ಪರಿಣಾಮ ಬೀರಬಹುದು ಎಂಬುದರ ಬಗ್ಗೆ ವಿವರಿಸಿಲ್ಲ.

- ಶ್ರೀ ಮಾಥೂರ. ಬಿ.ಪಿ (೨೦೦೫)ರವರ 'ಗವರ್ನನ್ಸ್ ರೀಫಾರ್ಮ್ ಪಾರ್ ವಿಜನ್ ಇಂಡಿಯಾ' ಎಂಬ ಪುಸ್ತಕದಲ್ಲಿ ರಾಜಕೀಯ ಭ್ರಷ್ಟಾಚಾರಕ್ಕೂ ಮತ್ತು ಸಂಘಟಿತ ಅಪರಾಧಕ್ಕೂ ನಿಕಟ ಸಂಬಂಧವಿರುತ್ತದೆ, ಒಂದಿಲ್ಲದೆ ಇನ್ನೊಂದಿರಲು ಸಾಧ್ಯವಿಲ್ಲ. ನಡವಳಿಕೆಯ ಲೋಪಗಳು ಕೂಡ ಭ್ರಷ್ಟಾಚಾರವಾಗುತ್ತದೆ. ಮಾಮೂಲಿ ಅಪರಾಧಗಳಿಗಿಂತ ಗಣ್ಯ ಹಾಗೂ ಬುದ್ಧಿಜೀವಿ ಅಪರಾಧಿಗಳು ಹೆಚ್ಚು ಅಪಾಯಕಾರಿ'. ಮೊದಲನೆಯವರು ಅಂದರೆ ಜನ ಸಾಮಾನ್ಯನು ಮಾಡಿದ ಅಪರಾಧವು ಗೋಚರವಾದರೆ ಅಂದರೆ ಬಹುಬೇಗ ಬೆಳಕಿಗೆ ಬಂದರೆ, ಇವರ ಅಪರಾಧಗಳು ಗೋಚರವಾಗುವುದೇ ಇಲ್ಲ ಎಂದು ಪ್ರತಿಪಾದಿಸಿದ್ದಾರೆ. ಆದರೆ ಇಂತಹ ಕಾನೂನುಬಾಹಿರ ನಂಟು ಬೀರುವ ಸಾಮಾಜಿಕ ಪರಿಣಾಮಗಳ ಬಗ್ಗೆ ವಿಶ್ಲೇಷಿಲ್ಲ.

- ಡಾ. ಬೈಬೆಕ್ ದಿಬ್ರೂರವರ(೧೯೯೬) 'ಅಜೆಂಡಾ ಪಾರ್ ಇಂಪ್ರೂವಿಂಗ್ ಗವರ್ನನ್ಸ್' ಎಂಬ ಪುಸ್ತಕದಲ್ಲಿ ಹಣಕಾಸಿನ ಅಥವಾ ಸ್ಥಾನಮಾನದ ವೈಯಕ್ತಿಕ ಲಾಭಕ್ಕಾಗಿ ಅಧಿಕೃತ ಕರ್ತವ್ಯದಿಂದ ವಿಮುಖವಾಗುವುದೇ ಭ್ರಷ್ಟಾಚಾರವಾಗಿದೆ. ಸಾಮಾನ್ಯ ಅರ್ಥದಲ್ಲಿ ಭ್ರಷ್ಟಾಚಾರವೆಂದರೆ, ಸರ್ಕಾರಿ ನೌಕರರು ತಮ್ಮ ಅಧಿಕಾರ ಹಾಗೂ ಸ್ಥಾನಮಾನವನ್ನು ಸ್ವಾರ್ಥಕ್ಕಾಗಿ, ಸ್ವಜನ ಪಕ್ಷಪಾತದ ಉದ್ದೇಶಕ್ಕೋಸ್ಕರ ದುರ್ಬಳಕೆ ಮಾಡುವುದು, ಕಾನೂನು ಬಾಹಿರ ಕೃತ್ಯಗಳಿಗೆ ಪ್ರೋತ್ಸಾಹ ನೀಡುವುದು ಹಾಗೂ ಇಂತಹ ಕೃತ್ಯಗಳಿಗೆ ಇತರರಿಂದ ಬೆಂಬಲ ಪಡೆಯುವುದು, ಸಾರ್ವಜನಿಕ ಸಂಪತ್ತನ್ನು ಲಪಟಾಯಿಸುವುದು, ವಂಚನೆ ಮಾಡುವುದು, ಸಾರ್ವಜನಿಕ ಹಿತಾಸಕ್ತಿ ಕಾರ್ಯದಲ್ಲಿ ವಿವಾದ ಸೃಷ್ಟಿಸುವುದು, ವಿಧೇಯತೆ ಇಲ್ಲದಿರುವುದು, ಅನ್ಯಾಯ ಮಾರ್ಗದಿಂದ ಲಾಭ ಪಡೆಯುವುದು, ಸುಳ್ಳು ದಾಖಲೆಗಳ ಸೃಷ್ಟಿ ಮುಂತಾದ ಕಾನೂನುಬಾಹಿರ ಹಾಗೂ ಅನೈತಿಕ ಕೃತ್ಯಗಳನ್ನು ಮಾಡುವುದೇ ಭ್ರಷ್ಟಾಚಾರ ಎಂದು ವಿವರಿಸಿದ್ದಾರೆ. ಇದೆಲ್ಲವೂ ದೂರಗಾಮಿಯಾಗಿ ಸಮಾಜದ ಮೇಲೆ ಬೀಳುವ ಪರಿಣಾಮಗಳ ಬಗ್ಗೆ ಪ್ರಸ್ತಾಪಿಸಿಲ್ಲ.

- ಡಾ. ಭಟ್ನಾಗರ್. ಪಿ.ಎಸ್.(೨೦೦೩)ರವರ 'ಇಂಡಿಯನ್ ಎಡ್ಮಿನಿಸ್ಟ್ರೇಶನ್: ಇಶ್ಯೂಜ್ ಆಂಡ್ ಆಪ್‌ಶನ್ಸ್' ಗ್ರಂಥದಲ್ಲಿ ಭ್ರಷ್ಟಾಚಾರವೆಂದರೆ, ಸ್ವಂತ ಲಾಭಕ್ಕಾಗಿ ಅಧಿಕಾರವನ್ನು ದುರುಪಯೋಗ

ಪಡಿಸಿಕೊಳ್ಳುವುದು ಅಥವಾ ಕರ್ತವ್ಯ ವಿಮುಖನಾಗುವುದು. ಹಣದ ರೂಪ ಮಾತ್ರವಲ್ಲದೇ ಇನ್ಯಾವುದೇ ರೀತಿಯ ಸ್ವಂತ ಲಾಭಕ್ಕಾಗಿ ಅಧಿಕಾರವನ್ನು ದುರುಪಯೋಗಪಡಿಸಿಕೊಳ್ಳುವುದು ಭ್ರಷ್ಟಾಚಾರವೆನಿಸಿಕೊಳ್ಳುತ್ತದೆ. ಕೆಲವು ಔಪಚಾರಿಕ ಕಾನೂನು ಅಥವಾ ನಿಯಮಗಳನ್ನು ಉಲ್ಲಂಘಿಸುವ ರೂಪದಲ್ಲಿ ಖಾಸಗಿ ಅನುಕೂಲಕ್ಕಾಗಿ ಸಾರ್ವಜನಿಕ ಅಧಿಕಾರವನ್ನು ದುರುಪಯೋಗಪಡಿಸಿಕೊಳ್ಳುವುದು ಭ್ರಷ್ಟಾಚಾರವೆನಿಸುತ್ತದೆ' ಎಂದಿದ್ದಾರೆ. ಹಾಗಾದರೆ ಅಂತಹ ಖಾಸಗಿ ಅನುಕೂಲತೆ ಯಾವುವು? ಎಂಬುದರ ಬಗ್ಗೆ ವಿವರಿಸಿಲ್ಲ.

- ಡಾ. ಅಶೋಕ ಚಕ್ರವರ್ತಿ(೨೦೦೫)ರವರ 'ಏಡ್, ಇನ್ಸಿಟ್ಯೂಶನ್ಸ್ ಆಂಡ್ ಡೆವೆಲಪಮೆಂಟ್' ಎಂಬ ಪುಸ್ತಕದಲ್ಲಿ 'ಭ್ರಷ್ಟಾಚಾರವೆಂದರೆ, ಸ್ನೇಹಿತರಿಗಾಗಿ, ಕುಟುಂಬಕ್ಕಾಗಿ ಅಥವಾ ಸ್ವಂತಕ್ಕಾಗಿ ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ಹಣ ಅಥವಾ ವಸ್ತುವಿನ ಅನುಕೂಲ ಪಡೆಯಲು ಒಬ್ಬ ಸಾರ್ವಜನಿಕ ಸೇವಕನು ಒಂದು ಕ್ರಿಯೆಯನ್ನು ಮಾಡುವುದು' ಎಂದು ಅರ್ಥೈಸಿದ್ದಾರೆ. ಅಂತಹ ಕ್ರಿಯೆಯಿಂದ ಸಮಾಜದ ಮೇಲುಂಟಾಗುವ ದುಷ್ಪರಿಣಾಮಗಳಾವುವು ಎಂಬುದರ ಬಗ್ಗೆ ಪ್ರಸ್ತಾಪಿಸಿಲ್ಲ.
- ಡಾ. ಅಫ್ತಾಬ್ ಆಲ್ಂ(೨೦೦೩)ರವರ 'ಕ್ರೈಸಿಸ್ ಆಫ್ ಗವರ್ನಮೆಂಟ್' ಎಂಬ ಪುಸ್ತಕದಲ್ಲಿ ಭ್ರಷ್ಟಾಚಾರವು ಇತಿಹಾಸದ ವಿವಿಧ ಕಾಲಘಟ್ಟಗಳಿಂದ ಪ್ರಸ್ತುತವರೆಗೂ ಆಧುನಿಕ ಸಮಾಜದ ಗಂಭೀರ ಸಮಸ್ಯೆಯಾಗಿದೆ. ದಿನ ಕಳೆದಂತೆ ಇದರ ರೂಪಗಳು ಹೊಸತನಗಳನ್ನು ಪಡೆದುಕೊಳ್ಳುತ್ತಿವೆ. ಇಂದು ಭ್ರಷ್ಟ ವ್ಯಕ್ತಿಗಳ ಲೆಕ್ಕಕ್ಕಿಂತ ಭ್ರಷ್ಟರಲ್ಲದ ಅಂದರೆ ಭ್ರಷ್ಟಾಚಾರರಹಿತ ವ್ಯಕ್ತಿಗಳ ಎಣಿಕೆಯನ್ನು ಸುಲಭವಾಗಿ ಮಾಡಬಹುದು. ಭಾರತದಲ್ಲಿ ಪ್ರಾಮಾಣಿಕನು ಜೀವಿಸುವುದು ಹಾಗೂ ನ್ಯಾಯ, ನಿಷ್ಠೆಗಳಿಗನುಗುಣವಾಗಿ ಕಾರ್ಯ ನಿರ್ವಹಿಸುವುದು ಕಷ್ಟವಾಗಿದೆ ಎಂದು ವ್ಯಾಖ್ಯಾನಿಸಿದ್ದಾರೆ. ಇಂತಹ ಪರಿಸ್ಥಿತಿಗೆ ಕಾರಣರಾರು ಎಂಬುದರ ಬಗ್ಗೆ ವಿವರಿಸಿಲ್ಲ.
- ಡಾ.ಕುಲದೀಪ್ ಮಾಥೂರ್(೧೯೯೬)ರವರ 'ಡೆವಲಪಮೆಂಟ್ ಪಾಲಿಸಿ ಅಂಡ್ ಎಡ್ಮಿನಿಸ್ಟ್ರೇಶನ್' ಎಂಬ ಪುಸ್ತಕದಲ್ಲಿ ಅಭಿವೃದ್ಧಿಪರ ದೇಶದಲ್ಲಿ ಭ್ರಷ್ಟಾಚಾರವು ಒಂದು ಸಂಕೀರ್ಣಮಯವಾದ ಹಾಗೂ ಬೃಹತ್ ಸಮಸ್ಯೆಯಾಗಿದೆ. ಇದು ಮೇಲಿನ ಹಂತದಿಂದ ಪ್ರಾರಂಭವಾಗಿ ಕೆಳ ಹಂತದ ಎಲ್ಲಾ ಕ್ಷೇತ್ರಗಳಿಗೂ ಹರಡಿ, ಇಡೀ ಸಮಾಜವನ್ನೇ ಆವರಿಸುತ್ತದೆ. ಇದು ದೈನಂದಿನ ಜೀವನವನ್ನು ವ್ಯಾಪಿಸಿ ನೈತಿಕ ವ್ಯವಸ್ಥೆಯನ್ನು ನಾಶಗೊಳಿಸುತ್ತದೆ. ಇದು ಸಮಾಜವನ್ನು ವಿವಿಧ ರೀತಿಯಲ್ಲಿ ಬಾಧಿಸುತ್ತದೆ ಎಂದು ಅರ್ಥೈಸಿದ್ದಾರೆ. ಆದರೆ ಇದನ್ನು ತಡೆಗಟ್ಟಲು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಪ್ರಸ್ತಾಪಿಸಿಲ್ಲ.

* ಡಾ. ಶೆಫಾಲಿ ಕಾಲಿಯಾ(೨೦೦೪)ರವರ 'ಗುಡ್ ಗವರ್ನನ್ಸ್ ಅಂಡ್ ಡೆವಲಪ್‌ಮೆಂಟ್' ಎಂಬ ಗ್ರಂಥದಲ್ಲಿ ಪ್ರತಿಯೊಬ್ಬ ವ್ಯಕ್ತಿಯು ಮನಸ್ಸಾಕ್ಷಿಯ ಆಜ್ಞಾಪನೆಗಳಿಗೆ ಬದ್ಧರಾಗಿರಬೇಕೆಂಬ ಬಯಕೆ ಮತ್ತು ತನ್ನ ನಿರಾಸೆಗಳಿಂದ ಉದ್ಭವಿಸುವ ಆಕ್ರಮಣಕಾರಕ ವರ್ತನೆಯ ನಡುವಿನ ಘರ್ಷಣೆ ಇವೆರಡರ ಸಂದಿಗ್ಧತೆಗೊಳಗಾಗಿ ತೊಳಲಾಡುತ್ತಾನೆಂದು ಹೇಳಿದ್ದಾರೆ. ಒಂದು ಕಡೆ ಸಮುದಾಯದ ಕಲ್ಯಾಣ, ಇನ್ನೊಂದು ಕಡೆ ಸ್ವಾರ್ಥತೆ ನಡುವಿನ ಹೋರಾಟ ವ್ಯಕ್ತಿಗಳಲ್ಲಿ ವ್ಯಕ್ತವಾಗುತ್ತದೆ. ಭ್ರಷ್ಟಾಚಾರವು ಈ ರೀತಿಯ ಘರ್ಷಣೆಯ ಪ್ರತಿಫಲ. ಹೀಗಾಗಿ ಭ್ರಷ್ಟಾಚಾರವು ಇಡೀ ವಿಶ್ವವನ್ನೇ ಆವರಿಸಿ ಸಮುದಾಯವನ್ನು ಅಸ್ತವ್ಯಸ್ತಗೊಳಿಸುತ್ತದೆ ಎಂದು ಹೇಳಿದ್ದಾರೆ. ಭ್ರಷ್ಟಾಚಾರ ತಡೆಗಟ್ಟಲು ಹಾಕಿಕೊಳ್ಳಬೇಕಾದ ಕಾರ್ಯಕ್ರಮಗಳ ಬಗ್ಗೆ ಹೇಳಿಲ್ಲ.
* ಪ್ರೊ. ಅಮಿತಾ ಸಿಂಗ(೨೦೦೫)ರವರ 'ಎಡ್ಮಿನ್ಸ್ಟ್ರೇಟಿವ್ ರೀಫಾರ್ಮ್ಸ್' ಎಂಬ ಪುಸ್ತಕದಲ್ಲಿ ಈ ರೀತಿ ವ್ಯಾಖ್ಯಾನಿಸಿದ್ದಾರೆ. ಭ್ರಷ್ಟಾಚಾರವು ಸಾರ್ವಜನಿಕ ಹಾಗೂ ಖಾಸಗಿ ವಲಯದಲ್ಲಿ ಪ್ರಚಲಿತದಲ್ಲಿರುವ ಒಂದು ಭಾಗವಾಗಿದ್ದು, ವ್ಯಕ್ತಿಯು ತನ್ನ ಅಧಿಕಾರ ಸ್ಥಾನಮಾನವನ್ನು ದುರುಪಯೋಗ ಮಾಡಿಕೊಳ್ಳುವಂತೆ ಮಾಡುವುದರ ಮೂಲಕ ಅನೈತಿಕ ಹಾಗೂ ಕಾನೂನುಬಾಹಿರವಾಗಿ, ಶೀಘ್ರವಾಗಿ ಹಣಸಂಪಾದನೆ ಮಾಡಲು ಪ್ರೇರಣೆ ನೀಡುವ ಅಂಶವೇ ಭ್ರಷ್ಟಾಚಾರ ಎಂದಿದ್ದಾರೆ. ಆದರೆ, ತಡೆಗಟ್ಟುವ ವಿಧಾನ ಪ್ರಸ್ತಾಪಿಸಲಿಲ್ಲ.
* ಡಾ. ಅರವಿಂದ ಶರ್ಮಾರವರ(೨೦೦೪) 'ಬ್ಯುರಾಕ್ರಸಿ ಅಂಡ್ ಡಿಸೆಂಟ್ರಲೈಜೇಶನ್' ಎಂಬ ಪುಸ್ತಕದಲ್ಲಿ ಅಧಿಕಾರ ಕೇಂದ್ರಿಕರಣ ವ್ಯವಸ್ಥೆಯಲ್ಲಿ ವೈಯಕ್ತಿಕ ಗುರಿಯನ್ನು, ಉದ್ದೇಶಗಳನ್ನು ಹೊಂದಿ ಅವುಗಳನ್ನು ಸಾಧಿಸಿಕೊಳ್ಳುವ ಉದ್ದೇಶದಿಂದ ಸರ್ಕಾರಿ ನೌಕರರು ತಮ್ಮ ಜವಾಬ್ದಾರಿಯಿಂದ ನುಣುಚಿಕೊಳ್ಳುವ ಅಥವಾ ತಮ್ಮ ಅಧಿಕಾರವನ್ನು ಅಡ್ಡಮಾರ್ಗಕ್ಕೆ ಎಂದರೆ ಕಾನೂನು ಬಾಹಿರವಾಗಿ ಬಳಸಿಕೊಳ್ಳುವ ನಡವಳಿಕೆಯೇ ಭ್ರಷ್ಟಾಚಾರ ಎಂದು ವಿವರಿಸಿದ್ದಾರೆ. ಆದರೆ ಆಡಳಿತ ವಿಕೇಂದ್ರಿಕರಣ ವ್ಯವಸ್ಥೆಯಲ್ಲೂ ಭ್ರಷ್ಟಾಚಾರ ತಗ್ಗದಿರುವುದನ್ನು ಹೇಳಲಿಲ್ಲ.
* ಪ್ರೊ. ಬಿಜು ಪೌಲ್‌ರವರ(೨೦೦೪) 'ಗುಡ್ ಗವರ್ನನ್ಸ್, ಡೆಮಾಕ್ರಟಿಕ್ ಸೊಸೈಟಿಜ್ ಆಂಡ್ ಗ್ಲೋಬ್‌ಲೈಜೇಶನ್' ಎಂಬ ಗ್ರಂಥದಲ್ಲಿ ಬುದ್ದಿಜೀವಿ ಸೋಗಿನಲ್ಲಿರುವ ಭ್ರಷ್ಟಾಚಾರಿಗಳು ತಮ್ಮ ಅನುಕೂಲಕ್ಕೆ ತಕ್ಕಂತೆ ಕಾನೂನನ್ನು ವ್ಯಾಖ್ಯಾನಿಸುತ್ತಾರೆ. ಕಳ್ಳ ಮರೆವಿನ ಸೋಗು ಹಾಕುತ್ತಾರೆ. ಸಿಕ್ಕಿಬಿದ್ದಾಗ ಲೋಪವಾಯ್ತು, ತಪ್ಪಾಯ್ತು. ಕ್ಷಮಿಸಿ ಬಿಡಿ ಎಂಬ ಜಾಣ ಹೇಳಿಕೆ ನೀಡಿ ಪಾರಾಗಲು ಪ್ರಯತ್ನಿಸುತ್ತಾರೆ. ಇವರಿಗೆ ತಾವು ಮಾಡುತ್ತಿರುವ ಕಾನೂನುಬಾಹಿರ ಕೆಲಸದ ಪರಿಣಾಮದ ಅರಿವು ಇದ್ದೇ ಇರುತ್ತದೆ. ತಮ್ಮನ್ನು ಸಮರ್ಥಿಸಿಕೊಳ್ಳಲು ಹಿಂಬಾಲಕರನ್ನು, ಜಾತೀಯ ಜನರನ್ನು ಹಾಗೂ ಸರ್ಕಾರವನ್ನು ದುರುಪಯೋಗಿಸಿಕೊಳ್ಳುತ್ತಾರೆ. ಇಂತಹ

ಗಣ್ಯ ವ್ಯಕ್ತಿಗಳಿಗೆ ಸಮಾಜದಲ್ಲಿ ಜಾತಿ ಬಲ, ಹಣ ಬಲ, ಜನ ಬಲ, ಉನ್ನತ ಸ್ಥಾನಮಾನಗಳಿದ್ದು, ಅನೇಕ ವೇಳೆ ಇವರೇ ಸರ್ಕಾರಕ್ಕೆ ನಿರ್ದೇಶನ ಮಾಡುತ್ತಾರೆ. ಇವುಗಳೆಲ್ಲವುದರ ಪರಿಣಾಮವಾಗಿ 'ಸರ್ವರಿಗೂ ಒಂದೇ ಕಾನೂನು' ಎಂಬ ಪರಿಕಲ್ಪನೆ ಕಣ್ಮರೆಯಾಗುತ್ತಿದೆ. ಗಣ್ಯರ ಪ್ರಭಾವದಿಂದಾಗಿ ಶ್ರೀಮಂತರಿಗೆ ಒಂದು ಕಾನೂನು ಮತ್ತು ಬಡವರಿಗೆ ಒಂದು ಕಾನೂನು ಎಂಬ ತಾರತಮ್ಯ ಸಮಾಜದಲ್ಲಿ ಕಂಡು ಬರುತ್ತಲಿದೆ ಎಂದು ಪ್ರತಿಪಾದಿಸಿದ್ದಾರೆ. ಕಾನೂನು ಪ್ರಕ್ರಿಯೆಯಲ್ಲಿ ಸ್ಥಾನಮಾನ ಪರಿಗಣನೆಗೆ ಬರುವುದಿಲ್ಲ ಎಂಬ ಸತ್ಯವನ್ನು ಲೇಖಕರು ಮರೆತಂತಿದೆ.

ಉತ್ತಮ ಆಡಳಿತ ಅರ್ಥ

ಇತ್ತೀಚಿನ ದಿನಗಳಲ್ಲಿ ಆಡಳಿತ ಮತ್ತು ಉತ್ತಮ ಆಡಳಿತ ಎಂಬ ಪದವನ್ನು ಅಭಿವೃದ್ಧಿ ವಿಷಯದಲ್ಲಿ ಹೆಚ್ಚಿಗೆ ಬಳಸುತ್ತಿದ್ದಾರೆ. ಉತ್ತಮ ಆಡಳಿತ ಎಂಬುದು ನಿರ್ಧಾರ ತೆಗೆದುಕೊಳ್ಳುವಿಕೆ ಮತ್ತು ಅದನ್ನು ಜಾರಿಗೊಳಿಸುವ ಅನೇಕ ಪ್ರಕ್ರಿಯೆಗಳನ್ನು ಒಳಗೊಂಡಿರುತ್ತದೆ. ಬಹುತೇಕ ಸಾರ್ವಜನಿಕ ಸಂಸ್ಥೆಗಳು ಅಗಾಧ ಪ್ರಮಾಣದಲ್ಲಿ ಸಾರ್ವಜನಿಕ ವ್ಯವಹಾರಗಳನ್ನು ನೆರವೇರಿಸುವುದಲ್ಲದೇ ಸಾರ್ವಜನಿಕ ಸಂಪನ್ಮೂಲವನ್ನು ನಿಭಾಯಿಸುತ್ತವೆ. ಈ ಎಲ್ಲ ಚಟುವಟಿಕೆಗಳು ಭ್ರಷ್ಟತೆಯಿಂದ ಮುಕ್ತವಾಗಿರಬೇಕಾಗಿರುವುದು ಅವಶ್ಯ. ಉತ್ತಮ ಆಡಳಿತದ ಉದ್ದೇಶವು ಇದೇ ಆಗಿದೆ. ಅದು ಕಾನೂನು ವ್ಯಾಪ್ತಿಯಲ್ಲಿ ಆಡಳಿತವನ್ನು ಉತ್ತಮವಾಗಿರುವಂತೆ ನೋಡಿಕೊಳ್ಳುತ್ತದೆ. ಮಾನವ ಅಭಿವೃದ್ಧಿಗೂ ಮತ್ತು ಉತ್ತಮ ಆಡಳಿತಕ್ಕೂ ನೇರವಾದ ಸಂಬಂಧವಿದೆ. ಇತ್ತಿಚೆಗೆ ಐಎಮ್‌ಎಫ್ ಮತ್ತು ವಿಶ್ವಬ್ಯಾಂಕ್ ಸಹ ಉತ್ತಮ ಆಡಳಿತದತ್ತ ಹೆಚ್ಚು ಗಮನ ಹರಿಸುತ್ತಿವೆ. ವಿಶ್ವಸಂಸ್ಥೆಯ ಪ್ರಕಾರ ಉತ್ತಮ ಆಡಳಿತವು ಒಟ್ಟು ೮ ಮುಖ್ಯ ಲಕ್ಷಣಗಳನ್ನು ಹೊಂದಿದೆ. ಅದೇ ರೀತಿ ನೈಯಫ್ ಅಲ್ ರೋಧಾನ್ (೨೦೦೯) ತಮ್ಮ ಪ್ರಸಿದ್ಧ 'Sustainable History and the Dignity of Man: A Philosophy of History and Civilisational Triumph,' ಎಂಬ ಪುಸ್ತಕದಲ್ಲಿ ಈ ಅಂಶಗಳ ಕುರಿತು ಪ್ರಸ್ತಾಪಿಸಿದ್ದಾರೆ. ಜೊತೆಗೆ ಅವರು ಉತ್ತಮ ಆಡಳಿತಕ್ಕೆ ಸ್ವಾತಂತ್ರ್ಯ ಮತ್ತು ಮಾಧ್ಯಮಗಳು ಹೇಗೆ ಜವಾಬ್ದಾರಿ ಆಗಬಲ್ಲವು ಎಂಬ ಅಂಶಗಳ ಕುರಿತು ಸಹ ಉಲ್ಲೇಖಿಸಿದ್ದಾರೆ. ಉತ್ತಮ ಆಡಳಿತದ ಕಾರಣದಿಂದಾಗಿ ಒಂದು ದೇಶದ ಉತ್ತಮ ಇತಿಹಾಸ ನಿರ್ಮಾಣಗೊಳ್ಳುತ್ತದೆ. ಮಾನವ ಜನಾಂಗದ ಸುಸ್ಥಿರ ಅಭಿವೃದ್ಧಿಗೆ ಎಂಟು ಅಂಶಗಳು ಕಾರಣವಾಗುತ್ತದೆ ಎಂದು ಅವರು ತಮ್ಮ ಪುಸ್ತಕದಲ್ಲಿ ಹೇಳಿದ್ದಾರೆ. ಅವುಗಳೆಂದರೆ ೧) ಭಾಗವಹಿಸುವಿಕೆ ೨) ಕಾನೂನು ಪಾಲನೆ ೩) ಪಾರದರ್ಶಕತೆ ೪) ಜವಾಬ್ದಾರಿ ೫) ಒಮ್ಮತದ ನಿರ್ಧಾರ ೬) ಒಳಗೊಳ್ಳುವಿಕೆ ೭) ದಕ್ಷತೆ ಮತ್ತು ಪ್ರಾಮಾಣಿಕತೆ ೮) ಬದ್ಧತೆ ಇವೇ ಆ ಎಂಟು ಲಕ್ಷಣಗಳಾಗಿವೆ. ಈ ಅಂಶಗಳು ಉತ್ತಮ ಆಡಳಿತಕ್ಕೆ ಪೂರಕವೆನಿಸುವಂತಹ ಭ್ರಷ್ಟಾಚಾರವನ್ನು ನಿಯಂತ್ರಿಸಲು ಅಥವಾ ಕಡಿಮೆ ಮಾಡಲು ಸಹಾಯ ಮಾಡುತ್ತವೆ. ಮತ್ತು ಉತ್ತಮ ನಿರ್ಧಾರ ಪ್ರಕ್ರಿಯೆಗೆ ಸಹಾಯ ಮಾಡುತ್ತವೆ ಎನುವುದರಲ್ಲಿ ಸಂಶಯವಿಲ್ಲ.

ಉತ್ತಮ ಆಡಳಿತದ ವಿವರಣೆ

ಪ್ರಜಾಪ್ರಭುತ್ವದಲ್ಲಿ ಉತ್ತಮ ಆಡಳಿತ ಯಶಸ್ವಿಯಾಗಬೇಕಾದರೆ ಸಮರ್ಥ ನಾಯಕತ್ವವು ಅವಶ್ಯವಾಗಿರುತ್ತದೆ. ಬ್ರಿಟನ್ ಮತ್ತು ಅಮೇರಿಕಾ ಸಂಯುಕ್ತ ಸಂಸ್ಥಾನಗಳು ಜ್ಞಾನಿ, ಸಮರ್ಥ ಮತ್ತು ಮುಂದಾಲೋಚನೆಯುಳ್ಳ ನಾಯಕತ್ವವನ್ನು ಹೊಂದಿರುವುದರಿಂದ ಅಲ್ಲಿನ ಆಡಳಿತ ನಿರ್ವಹಣೆ ಯಶಸ್ವಿಯಾಗಿವೆ. ಆದರೆ ಹಿಂದುಳಿದ ರಾಷ್ಟ್ರಗಳಲ್ಲಿ ನಾಯಕತ್ವ ಇನ್ನಷ್ಟು ಔನ್ನತ್ಯಕ್ಕೇರಬೇಕಾಗಿದೆ. ನಾಯಕರು ತಾವು ಆಯ್ಕೆಯಾದ ಕ್ಷೇತ್ರದ ಜನತೆ, ರಾಷ್ಟ್ರದ ಪ್ರಜೆಗಳ ಕುರಿತು ಚಿಂತಿಸಬೇಕೆ ಹೊರತು ಸ್ವಜನ ಪಕ್ಷಪಾತ, ಭ್ರಷ್ಟಾಚಾರಕ್ಕೆ ಅವಕಾಶ ಕೊಡಬಾರದು. ಉತ್ತಮ ನಾಯಕರು ಮಾತ್ರ ದೇಶಕ್ಕೆ ಉತ್ತಮ ಆಡಳಿತ ನೀಡಬಲ್ಲರು. ಉತ್ತಮ ಆಡಳಿತದ ಬೆನ್ನೆಲುಬಿನಂತಿರುವ ಮಂತ್ರಿಮಂಡಲದ ಸಾಮೂಹಿಕ ಹೊಣೆಗಾರಿಕೆಯ ತತ್ವವೂ ಸಹ ಹಲವು ಬಾರಿ ಉಲ್ಲಂಘಿಸಲ್ಪಟ್ಟಿದೆ. ಸರ್ಕಾರದ ನೀತಿಯ ವೈಫಲ್ಯತೆಗೆ ಇಡೀ ಮಂತ್ರಿಮಂಡಲ ರಾಜೀನಾಮೆ ನೀಡುವ ಬದಲು, ಸಂಬಂಧಿಸಿದ ಇಲಾಖಾ ಮಂತ್ರಿಯನ್ನು ಬಲಿಪಶುವನ್ನಾಗಿ ಮಾಡಿ ರಾಜೀನಾಮೆ ಕೊಡಿಸಿದಂತಹ ಅನೇಕ ಪ್ರಕರಣಗಳಿವೆ. ಉದಾ: ೧೯೬೨ರಲ್ಲಿ ಚೀನಿಯರು ಭಾರತದ ಮೇಲೆ ದಾಳಿ ಮಾಡಿದಾಗ ಆಗ ರಕ್ಷಣಾ ನೀತಿಯ ವೈಫಲ್ಯತೆಗೆ ಇಡೀ ಮಂತ್ರಿಮಂಡಲ ರಾಜೀನಾಮೆ ನೀಡದೇ ಕೇವಲ ಆಗಿನ ರಕ್ಷಣಾ ಮಂತ್ರಿಯಾಗಿದ್ದ ಶ್ರೀ ವಿ.ಕೆ ಕೃಷ್ಣ ಮೆನನರು ಮಾತ್ರ ರಾಜೀನಾಮೆ ನೀಡುವಂತೆ ಮಾಡಲಾಯ್ತು. ಹಾಗೇಯೇ ೧೯೬೩ರಲ್ಲಿ ಮುಂಗಡಪತ್ರದಲ್ಲಿ ಅಳವಡಿಸಿದ ಕಡ್ಡಾಯ ಠೇವಣೆ ವಿಷಯದ ಕುರಿತು ತೀವ್ರ ಕೋಲಾಹಲ ಉಂಟಾದಾಗ ಆಗಲೂ ಇಡೀ ಸರ್ಕಾರ ರಾಜೀನಾಮೆ ನೀಡದೆ ಅಂದಿನ ಹಣಕಾಸಿನ ಸಚಿವರಾಗಿದ್ದ ಶ್ರೀ ಮೊರಾರ್ಜಿ ದೇಸಾಯಿಯವರನ್ನು ಮಂತ್ರಿ ಮಂಡಲದಿಂದ ಕೈಬಿಡಲಾಯಿತು. ಯು.ಪಿ.ಎ. ಸರ್ಕಾರದಲ್ಲಿ ಕಲ್ಲಿದ್ದಲಿನ ಗುತ್ತಿಗೆ ಹಗರಣದಲ್ಲಿ, ೨ಜಿ ಹಗರಣದಲ್ಲಿ ಸಂಬಂಧಿಸಿದ ಮಂತ್ರಿಗಳು ಮಾತ್ರ ರಾಜೀನಾಮೆ ನೀಡಬೇಕಾಯ್ತು. ವಾಸ್ತವವಾಗಿ ಇವೆಲ್ಲ ನಿರ್ಧಾರಗಳು ಸಂಪುಟದ ಸಭೆಯಲ್ಲಿ ತೆಗೆದುಕೊಳ್ಳಲಾಗಿತ್ತು. ಹೀಗೆ ಸಾಮೂಹಿಕ ಹೊಣೆಗಾರಿಕೆಯ ತತ್ವದ ಬಗ್ಗೆ ಇರುವ ನಮ್ಮ ರಾಜಕಾರಣಿಗಳ ಅಸಡ್ಡೆ ಹಾಗೂ ಬೇಜವಾಬ್ದಾರಿತನದಿಂದ ಉತ್ತಮ ಆಡಳಿತದ ಉದ್ದೇಶವೇ ವಿಫಲವಾಗಿದೆ. ಉತ್ತಮ ಆಡಳಿತದ ಬಗ್ಗೆ ಸಾರ್ವಜನಿಕರ ಅನಾಸಕ್ತಿ, ರಾಜಕೀಯ ಜಾಗೃತಿಯ ಕೊರತೆ, ಭ್ರಷ್ಟಾಚಾರ, ಸ್ವಜನ ಪಕ್ಷಪಾತ, ಅದಕ್ಷತೆ, ಜಾತೀಯತೆ, ಕಾನೂನು ಉಲ್ಲಂಘನೆ, ಶಿಕ್ಷಣದ ಕೊರತೆ, ಜಾತಿ ಆಧಾರಿತ ಮತದಾನ, ಪ್ರಾದೇಶಿಕ ಭಾವನೆ ಇವೆ ಮುಂತಾದವುಗಳು ಉತ್ತಮ ಆಡಳಿತದ ಯಶಸ್ಸಿಗೆ ಅಡಚಣೆಗಳಾಗಿವೆ.

ಉತ್ತಮ ಆಡಳಿತ ನೀಡದ ಜನಪ್ರತಿನಿಧಿಗಳನ್ನು ವಾಪಸು ಕರೆಸುವ ಕಾನೂನನ್ನು ಲೋಕಸಭೆ ಅಂಗೀಕರಿಸಬೇಕೆಂಬ ಕೂಗು ಈಗ ಎಲ್ಲೆಡೆ ಕೇಳಿ ಬರುತ್ತಲಿದೆ. ಸರಿಯಾಗಿ ಕಾರ್ಯನಿರ್ವಹಿಸದ ಜನಪ್ರತಿನಿಧಿಗಳನ್ನು ಜನತೆಯೇ ತಮ್ಮ ಹಕ್ಕನ್ನು ಪ್ರಯೋಗಿಸಿ ವಾಪಸ್ಸು ಕರೆಯಿಸಿಕೊಳ್ಳುವ ಹಕ್ಕು ಇದಾಗಿದೆ. ಸಮಾಜವಾದಿ ಚಿಂತನೆಯಲ್ಲಿ ಹುಟ್ಟಿಕೊಂಡ ಈ ವಿಚಾರವೇ ಅತ್ಯಂತ ಪ್ರಗತಿಪರವಾಗಿದೆ.

ಯಾವುದೇ ಚುನಾಯಿತ ಸಂಸ್ಥೆ ಉತ್ತಮ ಆಡಳಿತ ನೀಡಬೇಕಾದರೆ ಪ್ರತಿನಿಧಿಗಳನ್ನು ವಾಪಾಸು ಕರೆಯಿಸಿಕೊಳ್ಳುವ ಹಕ್ಕನ್ನು ಹೊಂದಬೇಕೆಂದು ಲೆನಿನ್ ರಷ್ಯಾದಲ್ಲಿ ಇಂತಹ ಮಸೂದೆಯನ್ನು ಮಂಡಿಸುವ ಸಂದರ್ಭದಲ್ಲಿ ಹೇಳಿದ್ದು ಇಲ್ಲಿ ಉಲ್ಲೇಖನೀಯ. ಈಗಾಗಲೇ ಕೆನಡಾ ದೇಶ ಇಂತಹ ಹಕ್ಕನ್ನು ತನ್ನ ನಾಗರಿಕರಿಗೆ ಕೊಟ್ಟಿದೆ. ಇದುವರೆಗೆ ಅಲ್ಲಿ ೨೨ ಸಲ ಈ ಹಕ್ಕಿನ ಮೂಲಕ ತಮ್ಮ ಪ್ರತಿನಿಧಿಗಳನ್ನು ವಾಪಸ್ಸು ಕರೆಯಿಸಿಕೊಳ್ಳಲಾಗಿದೆ. ಅಲ್ಲದೇ ವೆನಿಜುವೆಲಾ, ಉಗಾಂಡ ದೇಶಗಳಲ್ಲೂ ಈ ಕಾನೂನು ಜಾರಿಯಲ್ಲಿದೆ. ಗಯಾನ, ನ್ಯೂಜಿಲ್ಯಾಂಡ್, ಜರ್ಮನಿ ದೇಶಗಳಲ್ಲಿ ಈ ಹಕ್ಕನ್ನು ರಾಜಕೀಯ ಪಕ್ಷಗಳಲ್ಲಿ ಮಾತ್ರ ಚಲಾವಣೆಯಲ್ಲಿದೆ. ಅದನ್ನು ಜನಪ್ರತಿನಿಧಿಗಳಿಗೂ ಅನ್ವಯಿಸುವ ಪ್ರಯತ್ನಗಳು ನಡೆದಿವೆ. ಅಮೇರಿಕಾದ ೧೮ ರಾಜ್ಯಗಳಲ್ಲಿ ಈ ಹಕ್ಕನ್ನು ಕೆಳಮಟ್ಟದ ಪ್ರತಿನಿಧಿಗಳಿಗೆ ಮಾತ್ರ ಬಳಸಲಾಗುತ್ತದೆ.

ಭಾರತದಲ್ಲಿ ಮಾನವೇಂದ್ರನಾಥ್ ರಾಯ್ ಅವರು ೧೯೪೪ರಲ್ಲಿ ಜನಪ್ರತಿನಿಧಿಗಳನ್ನು ವಾಪಸು ಕರೆಸಿಕೊಳ್ಳುವ ವಿಚಾರವನ್ನು ಪ್ರತಿಪಾದಿಸಿದ್ದರು. ನವ ಮಾನವತಾವಾದದ ಸಿದ್ಧಾಂತವನ್ನು ಮಂಡಿಸುವ ಸಂದರ್ಭದಲ್ಲಿ ಅವರು ಈ ವಿಚಾರವನ್ನು ಚರ್ಚಿಸಿದ್ದಾರೆ. ಸಂವಿಧಾನದ ೭೩ ಮತ್ತು ೭೪ನೆಯ ತಿದ್ದುಪಡಿಯ ನಂತರ ಸ್ಥಳೀಯ ಸರ್ಕಾರಗಳ ಚುನಾಯಿತ ಪ್ರತಿನಿಧಿಗಳನ್ನು ವಾಪಸ್ಸು ಕರೆಯಿಸುವ ಯತ್ನಗಳು ನಡೆದಿವೆ. ಛತ್ತೀಸಗಢ ರಾಜ್ಯದ ನಗರ ಪಾಲಿಕೆಯ ಕಾಯ್ದೆಯಲ್ಲಿ ಇದನ್ನು ಅಳವಡಿಸಲಾಗಿದೆ. ಈ ಕಾಯ್ದೆಯನ್ವಯ ಮೂರು ನಗರ ಪಾಲಿಕೆಗಳು ಅಧಿಕಾರ ಕಳೆದುಕೊಂಡಿವೆ. ಈ ಹಕ್ಕನ್ನು ದೇಶದ ಎಲ್ಲಾ ನಾಗರಿಕರಿಗೂ ಕೊಟ್ಟು ನಮ್ಮ ಪ್ರತಿನಿಧಿಗಳು ಪಕ್ಷಾಂತರ ಮಾಡಿದರೆ, ಸೋಮಾರಿಗಳಾದರೆ, ಭ್ರಷ್ಟರಾದರೆ ಉತ್ತಮ ಆಡಳಿತ ನೀಡುವಲ್ಲಿ ವಿಫಲರಾದರೆ ಈ ಹಕ್ಕನ್ನು ಚಲಾಯಿಸುವಂತೆ ಮಾಡಬೇಕು ಎನ್ನುವ ಕೂಗಿಗೆ ಈಗ ಬಲ ಬರತೊಡಗಿದೆ.

ಅದೇ ರೀತಿ ಅಯೋಗ್ಯ ಜನಪ್ರತಿನಿಧಿಗಳನ್ನು ಚುನಾವಣೆಯ ಹಂತದಲ್ಲಿಯೇ ತಿರಸ್ಕರಿಸುವ ವಿಚಾರಕ್ಕೆ ಸುಪ್ರೀಂ ಕೋರ್ಟ್ ತೀರ್ಪಿನಿಂದ ಬಲ ಬಂದಿದೆ. ಇದು ಕೂಡ ಉತ್ತಮ ಆಡಳಿತಕ್ಕೆ ಪೂರಕವಾಗಿದೆ. ಇಂದು ಜಗತ್ತಿನ ಮೂವತ್ತೊಂದಕ್ಕೂ ಅಧಿಕ ರಾಷ್ಟ್ರಗಳು ಒಂದಲ್ಲ ಒಂದು ರೀತಿಯಲ್ಲಿ ಕಡ್ಡಾಯ ಮತದಾನದ ಕಾನೂನುಗಳನ್ನು ಹೊಂದಿವೆ. ಆದರೆ ಯಾವುದೇ ಸಕರಾಣವಿಲ್ಲದೇ ಮತ ಚಲಾಯಿಸದ ಪ್ರಜೆಗಳಿಗೆ ತಡೆ ನಿಯಮ (deterrent provision) ಇಲ್ಲದಿರುವುದರಿಂದ ವಾಸ್ತವದಲ್ಲಿ ಕೇವಲ ಒಂದು ಡಜನ್ ದೇಶಗಳು ಕಡ್ಡಾಯ ಮತದಾನವನ್ನು ಜಾರಿಗೊಳಿಸಿವೆ ಎಂಬುದು ಈ ದೇಶಗಳ ಕಾನೂನುಗಳನ್ನು ಅಧ್ಯಯನಕ್ಕೊಳಪಡಿಸಿದಾಗ ಅರಿತ ಸಂಗತಿ. ನಮ್ಮ ದೇಶದಲ್ಲಿ ಕಡ್ಡಾಯ ಮತದಾನದ ಕಾನೂನು ಇಲ್ಲ. ಆದರೆ ಚುನಾವಣೆಯಲ್ಲಿ ಸ್ಪರ್ಧಿಸಿದ ಅಭ್ಯರ್ಥಿಗಳು ಅಯೋಗ್ಯರಿದ್ದರೆ, ಅಂತಹವರನ್ನು ಚುನಾವಣೆಯ ಹಂತದಲ್ಲಿಯೇ ತಿರಸ್ಕರಿಸುವ ಹಕ್ಕನ್ನು ಸುಪ್ರೀಮ್ ಕೋರ್ಟ್

ನೀಡಿದೆ. ನಾಗರಿಕರ ಸ್ವಾತಂತ್ರ್ಯಕ್ಕಾಗಿ ಪ್ರಜಾ ಒಕ್ಕೂಟ (ಪಿಯುಸಿಎಲ್) ೨೦೦೪ರಲ್ಲಿ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆಯನ್ನು ಕೈಗೊಂಡ ಸುಪ್ರೀಂ ಕೋರ್ಟಿನ ಮುಖ್ಯ ನ್ಯಾಯಮೂರ್ತಿ ಪಿ.ಸದಾಶಿವಂ, ನ್ಯಾಯಮೂರ್ತಿಗಳಾದ ರಂಜನ ಪ್ರಕಾಶ ದೇಸಾಯಿ ಹಾಗೂ ರಂಜನ ಗೋಗಯ್ ಅವರನ್ನು ಒಳಗೊಂಡ ಪೀಠವು ಈ ಆದೇಶ ನೀಡಿದೆ. ರಾಜಕೀಯ ಕ್ಷೇತ್ರವು ಕಳಂಕಿತರಿಂದ ತುಂಬಿದ್ದು, ಭ್ರಷ್ಟಾಚಾರಿಗಳು, ಅಪರಾಧಿಗಳು ಹಾಗೂ ಅನರ್ಹರನ್ನು ಚುನಾವಣಾ ಕಣಕ್ಕೆ ಇಳಿಸಲಾಗುತ್ತಿದೆ. ರಾಜಕೀಯ ಪಕ್ಷಗಳನ್ನು ವ್ಯವಸ್ಥಿತವಾಗಿ ಸುಧಾರಿಸುವ ಅಗತ್ಯವಿದ್ದು ಮತದಾರರಿಗೆ ಅವರ ಹಕ್ಕುಗಳು ದೊರೆತಾಗ ಇದು ಸಾಧ್ಯವಾಗುತ್ತದೆ. ಈ ಹಿನ್ನೆಲೆಯಲ್ಲಿ ಅಭ್ಯರ್ಥಿಗಳನ್ನು ತಿರಸ್ಕರಿಸುವ ಅವಕಾಶವನ್ನು ಮತದಾರರಿಗೆ ನೀಡಲಾಗಿದೆ. ಪ್ರಜೆಗಳಿಂದ ಬರುವ ಪ್ರತಿಕ್ರಿಯೆಯಿಂದ ಅವಮಾನ ಹೊಂದುವ ಪಕ್ಷಗಳು ಜನರನ್ನು ಲಘುವಾಗಿ ಪರಿಗಣಿಸುವುದು ತಪ್ಪುತ್ತದೆ ಮತ್ತು ಕಾಲ ಸರಿದಂತೆ ತಮ್ಮಲ್ಲಿ ಬದಲಾವಣೆ ತಂದುಕೊಳ್ಳುತ್ತವೆ ಎಂದು ನ್ಯಾಯಾಧೀಶರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಸುಪ್ರೀಂ ಕೋರ್ಟ್ ಆದೇಶವನ್ನು ಕಾಂಗ್ರೆಸ್ ಹಾಗೂ ಬಿಜೆಪಿ ಸೇರಿದಂತೆ ಬಹುತೇಕ ರಾಜಕೀಯ ಪಕ್ಷಗಳು ಸ್ವಾಗತಿಸಿವೆ.

ಸುಪ್ರೀಂ ಕೋರ್ಟಿನ ಆದೇಶದಂತೆ ಇನ್ನು ಮುಂದೆ ಮತ ಯಂತ್ರದಲ್ಲಿ ಅಭ್ಯರ್ಥಿಗಳ ಪಟ್ಟಿಯ ಕೊನೆಯಲ್ಲಿ ಹೆಚ್ಚುವರಿಯಾಗಿ ಇನ್ನೊಂದು ಬಟನ್ ಸೇರಿಸಲಾಗುತ್ತದೆ. ಅದರಲ್ಲಿ **'ನನ್ ಆಫ್ ದ ಅಬೋವ್'** ಅಥವಾ 'ಮೇಲಿನ ಯಾರು ಬೇಡ' ಎಂಬ ಅಂಶವನ್ನು ಮತದಾರರು ದಾಖಲಿಸಬಹುದಾಗಿದೆ. ಯಾವುದೇ ಅಭ್ಯರ್ಥಿ ಇಷ್ಟವಾಗದಿದ್ದಲ್ಲಿ ಮತದಾರ ಈ ಬಟನ್ ಒತ್ತಬಹುದು. ಈಗಿರುವ ಮತ ಯಂತ್ರದಲ್ಲಿಯೇ ತಾಂತ್ರಿಕ ಬದಲಾವಣೆಯನ್ನು ಮಾಡದೇ ಹಾಗೂ ಹೆಚ್ಚಿನ ವೆಚ್ಚವಿಲ್ಲದೇ ಈ ನೂತನ ವಿಧಾನವನ್ನು ಅಳವಡಿಸಿಕೊಳ್ಳಬಹುದು. ಇಂತಹ ನಕಾರಾತ್ಮಕ ಮತದಾನ ಈಗಾಗಲೇ ೧೩ ರಾಷ್ಟ್ರಗಳಲ್ಲಿ ಆಸ್ತಿತ್ವದಲ್ಲಿದೆ. ನಮ್ಮ ದೇಶದ ಶಾಸನಸಭೆಗಳ ಸದಸ್ಯರುಗಳಿಗೆ ಕಲಾಪಗಳಲ್ಲಿ ನಡೆಯುವ ಮತದಾನದ ವೇಳೆ ತಟಸ್ಥವಾಗಿರುವ ಅವಕಾಶವನ್ನು ನೀಡಲಾಗಿದೆ. ಅಭ್ಯರ್ಥಿಗಳನ್ನು ತಿರಸ್ಕರಿಸಿ ಮತದಾನ ಮಾಡುವ ಆಯ್ಕೆ ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದಡಿಯಲ್ಲಿ ಬರುತ್ತದೆ. ಹಾಗಾಗಿ ಇದು ಪ್ರಜೆಗಳ ಮೂಲಭೂತ ಹಕ್ಕಾಗಿದ್ದು, ಪ್ರತಿಯೊಬ್ಬರಿಗೂ ಸಿಗಬೇಕಿದೆ. ಇದನ್ನು ಮತದಾನ ತಿರಸ್ಕಾರ ಎಂದು ತಪ್ಪಾಗಿ ಅರ್ಥೈಸದೇ, ಅಭ್ಯರ್ಥಿಗಳನ್ನು ತಿರಸ್ಕರಿಸುವ ಹಕ್ಕು ಎಂಬಂತೆ ಮನಗಾಣಬೇಕು. ಇದರಿಂದ ರಾಜಕಾರಣದಲ್ಲಿ ಜನತೆಯ ಪರಿಣಾಮಕಾರಿ ಪಾಲ್ಗೊಳ್ಳುವಿಕೆ ಹೆಚ್ಚುತ್ತದೆ. ರಾಜಕಾರಣವನ್ನು ಶುದ್ಧಿಕರಿಸುವ ಹಾಗೂ ಪ್ರಜಾ ಪ್ರಭುತ್ವವನ್ನು ಬಲಪಡಿಸುವ ಅಂಗವಾಗಿ ಇದಕ್ಕೆ ಬೇಕಿರುವ ಅಗತ್ಯ ಕ್ರಮವನ್ನು ಚುನಾವಣಾ ಆಯೋಗ ಮತ್ತು ಸಂಸತ್ತು ಕೈಗೊಳ್ಳಬೇಕು ಎಂದು ನ್ಯಾ ಪಿ.ಸದಾಶಿವಂ ತಿಳಿಸಿದ್ದಾರೆ. ಅಭ್ಯರ್ಥಿ ತಿರಸ್ಕರಿಸುವ ಅವಕಾಶದಂತೆ ಕ್ಷೇತ್ರವೊಂದರಲ್ಲಿ ಅಭ್ಯರ್ಥಿ ಪಡೆದುಕೊಂಡಿರುವುದಕ್ಕಿಂತ ಹೆಚ್ಚಿನ ಮತಗಳು ತಿರಸ್ಕೃತಗೊಂಡರೆ ಮತ್ತೊಮ್ಮೆ ಮತದಾನಕ್ಕೆ ಅವಕಾಶ

ನೀಡಲಾಗುತ್ತದೆಯೇ ಅಥವಾ ಹೆಚ್ಚಿನ ಮತ ಗಳಿಸಿರುವ ಅಭ್ಯರ್ಥಿಯನ್ನೇ ವಿಜಯಿ ಎಂದು ಘೋಷಿಸಲಾಗುತ್ತದೆಯೇ ಎಂಬ ಬಗ್ಗೆ ಕೋರ್ಟ್ ನೀಡಿರುವ ೫೦ ಪುಟಗಳ ಆದೇಶದಲ್ಲಿ ಸ್ಪಷ್ಟನೆ ನೀಡಿಲ್ಲ. ಹಾಗಾಗಿ ಈ ಬಗ್ಗೆ ಕಾನೂನಿಗೆ ತಿದ್ದುಪಡಿ ತರಲಾಗುತ್ತದೆಯೇ ಅಥವಾ ಈಗಿರುವ ನಿಯಮದ ಅನ್ವಯವೇ ಕ್ರಮ ಕೈಗೊಳ್ಳಲಾಗುತ್ತದೆಯೇ ಎಂಬುದು ಇನ್ನಷ್ಟೇ ಸ್ಪಷ್ಟವಾಗಬೇಕಿದೆ. ಆದರೆ, ಚುನಾವಣಾ ಆಯೋಗದ ಮೂಲಗಳ ಪ್ರಕಾರ ನಕಾರಾತ್ಮಕ ಮತಗಳು ಗಣನೆಗೆ ಬರುವುದಿಲ್ಲವಾದ್ದರಿಂದ ಅತಿ ಹೆಚ್ಚು ಮತ ಪಡೆದ ಅಭ್ಯರ್ಥಿಯೇ ಗೆದ್ದಂತಾಗುತ್ತದೆ.

ಈ ವಿಷಯದಲ್ಲಿ ಇತ್ತೀಚೆಗೆ ಸುಪ್ರೀಂ ಕೋರ್ಟ್ ನೀಡಿದ ತೀರ್ಪಿನಲ್ಲಿ ಫ್ರಾನ್ಸ್, ಬೆಲ್ಜಿಯಂ, ಬ್ರೆಜಿಲ್, ಗ್ರೀಸ್, ಚಿಲಿ, ಬಾಂಗ್ಲಾದೇಶ ಮತ್ತು ಉಕ್ರೇನ್ ಒಳಗೊಂಡಂತೆ ಏಳು ದೇಶಗಳು ಮತ್ತು ಅಮೇರಿಕದ ನೆವಡ್ ರಾಜ್ಯದ ಚುನಾವಣಾ ವ್ಯವಸ್ಥೆಯನ್ನು ಉಲ್ಲೇಖಿಸಲಾಗಿದೆ. ಅಲ್ಲಿ ಮತದಾರರಿಗೆ ನೀಡುವ ಮತಪತ್ರ ಅಥವಾ ವಿದ್ಯುನ್ಮಾನ ಮತಯಂತ್ರಗಳಲ್ಲಿ NOTA(none of the above) ಆಯ್ಕೆ ಒದಗಿಸಲಾಗಿದೆ. ಅದೇ ರೀತಿ ಮೇಲೆ ಉಲ್ಲೇಖಿಸಿದ ಮೊದಲ ಐದು ರಾಷ್ಟ್ರಗಳಲ್ಲಿ ಕಡ್ಡಾಯ ಮತದಾನ ಕೂಡ ಅನುಷ್ಠಾನದಲ್ಲಿದೆ. ಕಡ್ಡಾಯ ಮತದಾನ ಅನುಷ್ಠಾನಕ್ಕೆ ತಂದಿರುವ ಇತರ ರಾಷ್ಟ್ರಗಳೆಂದರೆ, ಆಸ್ಟ್ರೀಯಾ, ಅರ್ಜೆಂಟಿನಾ, ಆಸ್ಟ್ರೇಲಿಯಾ, ಬೊಲಿವಿಯಾ, ಕೋಸ್ಟರಿಕಾ, ಸೈಪ್ರಸ್, ಡೊಮೊನಿಕನ್ ರಿಪಬ್ಲಿಕ್, ಈಕ್ವಡರಾ, ಈಜಿಪ್ತ, ಫಿಜಿ, ಗಬೊನ್. ಗ್ವಾಟೆಮಾಲ್, ಹೊಂಡುರಸ್,ಇಟಲಿ, ಲಿಚ್ಚೈನ್ ಸ್ಟೈನ್, ಲಕ್ಸಂಬರ್ಗ, ಮೆಕ್ಸಿಕೊ, ನೌರು, ಪರುಗ್ವೆ, ಪೆರು, ಫಿಲಿಪೈನ್ಸ್, ಸಿಂಗಾಪೂರ, ಸ್ವಿಟ್ಜರಲೆಂಡ್, ಥಾಯ್ಲೆಂಡ್, ಟರ್ಕಿ ಹಾಗೂ ಉರುಗ್ವೆ ರಾಷ್ಟ್ರಗಳು. ಭಾರತದಲ್ಲಿ ಕಡ್ಡಾಯ ಮತದಾನಕ್ಕಿನ್ನೂ ಕಾಲ ಪಕ್ವವಾಗಿಲ್ಲ. ಅನಕ್ಷರತೆ ಇದಕ್ಕೆ ಬಹು ದೊಡ್ಡ ಕಂಟಕವಾಗಿದೆ.

ಉತ್ತಮ ಆಡಳಿತವು ಮುಖ್ಯವಾಗಿ ಮೌಲ್ಯಗಳ ಮೇಲೆ ನಿಂತಿದೆ ಇಂದು ಮೌಲ್ಯಗಳ ಕುಸಿತ ನಮ್ಮ ಸಮಾಜದಲ್ಲಿ ಎದ್ದು ಕಾಣುತ್ತಿದೆ. ಇದಕ್ಕೆ ಕಾರಣ ಮಿತಿ ಮೀರಿದ ದುರಾಸೆ ಮತ್ತು ಅಧಿಕಾರದ ದುರಂಹಕಾರ. ಇವೆರಡರಿಂದ ಅಧಿಕಾರದಲ್ಲಿರುವ ಸರಕಾರಿ ನೌಕರರು ಮತ್ತು ರಾಜಕಾರಣಿಗಳಿಗೆ ಸಂಬಂಧಿಸಿದಂತೆ ಆಡಳಿತದಲ್ಲಿ ಕುಸಿತ ಕಂಡುಬರುತ್ತಿದೆ. ಸಂವಿಧಾನದ ಪ್ರಕಾರ ಚುನಾಯಿತ ಪ್ರತಿನಿಧಿಗಳ ಕೆಲಸ ಎಂದರೆ ಸಂಸದೀಯ ಕಲಾಪಗಳಲ್ಲಿ ಭಾಗವಹಿಸಿ ಶಾಸನಗಳನ್ನು ರಚಿಸುವುದು ಮಾತ್ರ, ಇದನ್ನು ಬಿಟ್ಟರೆ ಚುನಾಯಿತ ಪ್ರತಿನಿಧಿಗಳಿಗೆ ಬೇರೆ ಅಧಿಕಾರ ಇಲ್ಲ. ಈ ಹಿಂದೆ ಬ್ರಿಟಿಷರ ಆಡಳಿತದ ಕಾಲದಲ್ಲಿ ಕಾರ್ಯಾಂಗದಲ್ಲಿರುವ ವ್ಯಕ್ತಿಗಳು ಬ್ರಿಟಿಷರ ಆದೇಶಗಳನ್ನು ಮಾತ್ರ ಪಾಲಿಸುತ್ತಿದ್ದರು. ನಮ್ಮ ಕಾರ್ಯಾಂಗ ಜಾರಿಗೆ ಬಂದಾಗ ಈ ಜನ ನಿಜವಾಗಿಯೂ ಭಾರತ ಜನತೆಯ ಸೇವೆ ಮಾಡಬಹುದೇ ಎಂಬ ಸಂಶಯ ನಮ್ಮ ಸಂವಿಧಾನ ರಚನಾ ಸಮಿತಿ ಸದಸ್ಯರಲ್ಲಿತ್ತು. ಆದ್ದರಿಂದ ಅವರು **'ಕ್ಯಾಬಿನೆಟ್ ಆಫ್ ಗವರ್ನನ್ಸ್'** ಎಂಬಂತಹ ರಾಜನೀತಿಯನ್ನು ರೂಪಿಸಿದರು. ಈ ವ್ಯವಸ್ಥೆಯಲ್ಲಿ ಕೆಲವು ಚುನಾಯಿತ ಪ್ರತಿನಿಧಿಗಳು ಕ್ಯಾಬಿನೆಟ್ ಸದಸ್ಯರಾಗಿ ಕಾರ್ಯಾಂಗದ

ಮೇಲ್ವಿಚಾರಣೆ ಮಾಡುತ್ತಿದ್ದರು.ಇದ್ದನ್ನು ಬಿಟ್ಟರೆ ಇವರಿಗೆ ಆಡಳಿತದಲ್ಲಿ ಹಸ್ತಕ್ಷೇಪ ಮಾಡುವ ಹಕ್ಕು ಇರಲಿಲ್ಲ. ಆಡಳಿತದಲ್ಲಿ ಏನಾದರೂ ತಪ್ಪು ಕಂಡುಬಂದರೆ ಅದಕ್ಕೆ ಹೊಣೆ ಕಾರ್ಯಾಂಗ ಹೊರುತ್ತಿತ್ತು. ಆದರೆ ದಶಕಗಳು ಕಳೆದಂತೆ ಚುನಾಯಿತ ಪ್ರತಿನಿಧಿಗಳು ಸಂಸದೀಯ ಕಲಾಪಗಳಲ್ಲಿ ಗಂಭೀರವಾಗಿ ಪಾಲ್ಗೊಳ್ಳುವ ಆಸಕ್ತಿ ಕಡಿಮೆಯಾಗತೊಡಗಿತು. ಬಳಿಕ ಅವರು ತಮ್ಮ ಕುಟುಂಬದವರಿಗೋ, ಬೆಂಬಲಿಗರಿಗೋ ಸಹಾಯ ಮಾಡಬೇಕು ಎಂಬ ಉದ್ದೇಶದಿಂದ ಕಾರ್ಯಾಂಗದ ಚಟುವಟಿಕೆಗಳಲ್ಲಿ ಹಸ್ತಕ್ಷೇಪ ಮಾಡತೊಡಗಿದರು. ಇದಕ್ಕೆ ಪಂಚಾಯಿತಿಯಿಂದ ಪಾರ್ಲಿಮೆಂಟ್‌ವರೆಗಿನ ಯಾವೊಬ್ಬ ಚುನಾಯಿತ ಪ್ರತಿನಿಧಿಗಳು ಹೊರತಾಗಿಲ್ಲ.

ಚುನಾಯಿತ ಪ್ರತಿನಿಧಿಗಳು ಜನರಿಗೋಸ್ಕರ ಕಾನೂನು ರೂಪಿಸುವ ಅಧಿಕಾರ ಹೊಂದಿರುತ್ತಾರೆ. ಇವರನ್ನು ಜನರ ಕಷ್ಟ ಸುಖಗಳನ್ನು ಅರ್ಥ ಮಾಡಿಕೊಂಡವರು ಎಂದು ನಾವು ಭಾವಿಸಿದ್ದೇವೆ. ಇವರು ಮಾಡುವ ಕಾನೂನು ಮತ್ತು ನಿಯಮಗಳನ್ನು ಜಾರಿಗೆ ತರುವ ಜವಾಬ್ದಾರಿ ಕಾರ್ಯಾಂಗ ಹೊತ್ತಿರುತ್ತದೆ. ಈ ಕಾರ್ಯಾಂಗದ ಸೇವೆಗೆ ಸೇರುವವರಿಗೆ ವಿದ್ಯಾರ್ಹತೆ ನಿಗದಿ ಮಾಡಲಾಗಿರುತ್ತದೆ. ಸ್ಪರ್ಧಾತ್ಮಕ ಪರೀಕ್ಷೆ ಮೂಲಕ ಇವರನ್ನು ಸೇವೆಗೆ ನೇಮಕ ಮಾಡಿಕೊಳ್ಳಲಾಗುತ್ತದೆ. ಆಡಳಿತದ ತರಬೇತಿ ನೀಡಲಾಗಿರುತ್ತದೆ. ಇವರನ್ನು ಕಾಲಕಾಲಕ್ಕೆ ಓರಿಯಂಟೇಷನ್‌ಗೂ ಒಳಪಡಿಸಲಾಗಿರುತ್ತದೆ. ಇಂದಿನ ವ್ಯವಸ್ಥೆಯಲ್ಲಿ ಕಾರ್ಯಾಂಗ ಮತ್ತು ರಾಜ್ಯಾಂಗ ಅವಳಿ ಮತ್ತು ಜವಳಿ ಎನಿಸಿದ್ದಾರೆ. ಒಬ್ಬರು, ಇನ್ನೊಬ್ಬರ ಜೊತೆ ಶಾಮೀಲು ಆಗದೇ ಯಾರೊಬ್ಬರಿಗೂ ಅನ್ಯಾಯ ಮಾಡಲಿಕ್ಕೆ ಸಾಧ್ಯ ಇಲ್ಲ. ಏಕೆಂದರೆ ಕಾರ್ಯಾಂಗದಲ್ಲಿರುವವರು ತಪ್ಪು ಮಾಡಿದರೆ ಶಾಸಕಾಂಗದವರು ಎಚ್ಚರಿಸಬಹುದು. ಆದರೆ ಇವರು ವರ್ಗಾವಣೆ ಎಂಬ ಆಯುಧವನ್ನು ತಮ್ಮ ಬಳಿ ಇಟ್ಟುಕೊಂಡು ಕಾರ್ಯಾಂಗ ದವರನ್ನು ಕುಣಿಸುತ್ತಾರೆ. ಅಷ್ಟೇ ಅಲ್ಲ ಇವರು ಕಾರ್ಯಾಂಗದಿಂದ ಹಾಗೂ ಜನಸಾಮಾನ್ಯರಿಂದ ಲಂಚ ತೆಗೆದುಕೊಳ್ಳುತ್ತಾರೆ. ಹಲವಾರು ಸಲ ಜನಕ್ಕೆ, ಸರಕಾರಕ್ಕೆ ಮೋಸ ಮಾಡಿ ಅಕ್ರಮ ಮಾರ್ಗದ ಮೂಲಕ ದುಡ್ಡು ಮಾಡುತ್ತಾರೆ. ಇದರಿಂದ ಆಡಳಿತ ಸಂಪೂರ್ಣವಾಗಿ ಕುಸಿದು ಬಿದ್ದಿದೆ. ಈ ಸಮಸ್ಯೆಯ ಪರಿಹಾರಕ್ಕಾಗಿ ಇರುವ ಒಂದೇ ಒಂದು ದಾರಿ ಎಂದರೆ ಯುವಕರಲ್ಲಿ, ವಿದ್ಯಾರ್ಥಿಗಳಲ್ಲಿ ಇಂತಹ ಅನಿಷ್ಟದ ಕುರಿತು ಜಾಗೃತಿಯುಂಟು ಮಾಡುವುದು ಎನ್ನುತ್ತಾರೆ ನ್ಯಾಯಮೂರ್ತಿ ಸಂತೋಷ ಹೆಗಡೆಯವರು.

ಶಿಕ್ಷಣವಿದ್ದ ತಕ್ಷಣವೇ ಆ ವ್ಯಕ್ತಿಗೆ ಸಂಸ್ಕೃತಿ ಹಾಗೂ ಸಂಸ್ಕಾರ ಬರುವುದಿಲ್ಲ. ಸಂಸ್ಕಾರವಂತರ ಸಮಾಜ ನಿರ್ಮಾಣ ಆಗಬೇಕು. ಬಡವರಂತೂ ಸರಕಾರವನ್ನೇ ಹೆಚ್ಚು ನಂಬಿಕೊಂಡಿದ್ದಾರೆ. ಉತ್ತಮ ಆಡಳಿತವಿರದಿದ್ದರೆ ಸಮಾಜದಲ್ಲಿ ಅನ್ಯಾಯಗಳು ಜಾಸ್ತಿ ಆಗುತ್ತವೆ. ಸಮಾಜದಲ್ಲಿ ಕಾನೂನು ವ್ಯವಸ್ಥೆಗೆ ಏನೂ ಬೆಲೆ ಇರಲ್ಲ. ಇಂತಹ ಸಮಾಜದಲ್ಲಿ ಜನರು ಸುಖವಾಗಿರಲು ಸಾಧ್ಯವಿಲ್ಲ. ಕೊನೆಗೆ ಜನರು ದಂಗೆ ಏಳಬಹುದು. ಸೌಲಭ್ಯ ವಂಚಿತರಾಗಿ ಆಕ್ರೋಶಕ್ಕೆ ಒಳಗಾಗಬಹುದು. ಆಗ ಸಮಾಜದಲ್ಲಿ

ಅಶಾಂತಿ ಮತ್ತು ಅಸ್ಥಿರತೆ ಉಂಟಾಗುತ್ತದೆ. ಸಮಾಜ ಕೂಡ ಹಣ ಮತ್ತು ಅಧಿಕಾರ ಇವೆರಡನ್ನೇ ಆರಾಧಿಸುತ್ತಿರುವುದು ದುರ್ದೈವ. ಇವೆರಡನ್ನೂ ಅವರು ಯಾವ ಮಾರ್ಗದಲ್ಲಾದರೂ ಪಡೆದುಕೊಂಡಿರಲಿ ಸಮಾಜ ಅವರನ್ನು ಗೌರವಿಸುತ್ತದೆ. ಮೊದಲು ಸಮಾಜದ ಈ ಮನೋಭಾವನೆಯನ್ನು ಬದಲಾಯಿಸಬೇಕು. ಸಮಾಜವು ಭ್ರಷ್ಟರನ್ನು ಬಹಿಷ್ಕರಿಸಬೇಕು. ಆಗ ಮಾತ್ರವೇ ಸಮಾಜ ಸುಖದಿಂದಿರಲು ಸಾಧ್ಯ. ಸಮೃದ್ಧಿಯತ್ತ ಮುಖಮಾಡಲು ಸಾಧ್ಯ. ನಮಗಿಂತ ಮುಂಚೆ ಆಡಳಿತ ನಡೆಸಿದ ಬ್ರಿಟಿಷರು ಕಾರ್ಯಾಂಗದ ವಿಷಯದಲ್ಲಿ ಸಹಜವಾಗಿ ಸಿದ್ಧಹಸ್ತರಾಗಿದ್ದರು. ನಾವು ರಾಜಾಡಳಿತವನ್ನು ಕಂಡವರು. ರಾಜರು ಹೇರಿದ ಕಟ್ಟಳೆಗಳನ್ನು ಪಾಲಿಸಿಕೊಂಡು ಬಂದವರು. ಈ ಹಿಂದೆ ನಮಗೆ ಕಾನೂನು ಮತ್ತು ಆಡಳಿತ ಪ್ರಕ್ರಿಯೆಯಲ್ಲಿ ಭಾಗವಹಿಸಲು ಯಾವುದೇ ಒತ್ತಾಸೆ ಇರಲಿಲ್ಲ. ನಾವು ಸ್ವಾತಂತ್ರ್ಯ ಪಡೆದಾಗ ಹೊಸ ವ್ಯವಸ್ಥೆಯ ಅಧಿಕಾರ ನಮ್ಮ ಕೈಗೆ ಬಂತು. ಆಗ ನಾವು ಸಾರ್ವಜನಿಕ ಆಡಳಿತದ ಕುರಿತು ಬೇರೆಯವರಿಂದ ಕಲಿಯಬೇಕಾಗಿತ್ತು. ನಮ್ಮನ್ನು ಆಳುತ್ತಿದ್ದ ಬ್ರಿಟಿಷರು ಅದಾಗಲೇ ಒಂದು ಆಡಳಿತ ವ್ಯವಸ್ಥೆ ತಂದಿದ್ದರು. ಅದನ್ನು ನಾವು ಮುಂದುವರಿಸಿಕೊಂಡು ಬಂದೆವಷ್ಟೇ. ರಾಣಿಯ ಆಡಳಿತದಿಂದ ಜನತೆಯ ಆಡಳಿತಕ್ಕೆ ಬಂದಾಗ ಅನೇಕ ಬದಲಾವಣೆಗಳಾದವು. ಅಂತಹ ವ್ಯವಸ್ಥೆಗೆ ಒಗ್ಗಲು ಹಲವು ವರ್ಷಗಳೇ ಹಿಡಿದವು

ಭ್ರಷ್ಟಾಚಾರ ಎಂಬುದು ಅಭಿವೃದ್ಧಿಯ ಮತ್ತು ಉತ್ತಮ ಆಡಳಿತದ ಶತ್ರು ಇದ್ದಂತೆ. ಇದನ್ನು ಉಚ್ಚಾಟಿಸಲೇಬೇಕು. ಈ ಸಾಮಾಜಿಕ ಉದ್ದೇಶವನ್ನು ಸಾಧಿಸಲು ಸರಕಾರ ಮತ್ತು ಸಾರ್ವಜನಿಕರು ಒಗ್ಗೂಡಿ ಶ್ರಮಿಸಬೇಕು. ಅಂತರಾಷ್ಟ್ರೀಯ ವ್ಯವಹಾರಗಳ ಅಧ್ಯಯನದ ಪ್ರಕಾರ ಉತ್ತಮ ಆಡಳಿತದ ಸಂಬಂಧಗಳು ಈ ರೀತಿಯಾಗಿರುತ್ತವೆ.

- ಸರಕಾರ ಮತ್ತು ಸಾರ್ವಜನಿಕರ ನಡುವೆ
- ಸರಕಾರ ಮತ್ತು ಖಾಸಗಿ ವಲಯದ ನಡುವೆ
- ಚುನಾಯಿತ ಪ್ರತಿನಿಧಿಗಳು ಮತ್ತು ಅಧಿಕಾರಿಗಳ ನಡುವೆ
- ಸ್ಥಳೀಯ ಸಂಸ್ಥೆಗಳು ಮತ್ತು ಜನಸಾಮಾನ್ಯರ ನಡುವೆ
- ನ್ಯಾಯಾಂಗ, ಕಾರ್ಯಾಂಗ ಮತ್ತು ಶಾಸಕಾಂಗಗಳ ನಡುವೆ
- ಕೇಂದ್ರ ಮತ್ತು ರಾಜ್ಯಗಳ ನಡುವೆ

ಇತ್ತೀಚಿನ ದಿನಗಳಲ್ಲಿ ಸರಕಾರಿ ವಲಯ ಮತ್ತು ಖಾಸಗಿ ವಲಯದಲ್ಲಿ ಉತ್ತಮ ಆಡಳಿತಕ್ಕೆ ಹೆಚ್ಚಿನ ಮಹತ್ವ ಬರತೊಡಗಿದೆ. ಇದಕ್ಕಾಗಿ ಪ್ರಮುಖ ಅಂತರಾಷ್ಟ್ರೀಯ ಸಂಸ್ಥೆಗಳಾದ ವಿಶ್ವಬ್ಯಾಂಕ್, ವಿಶ್ವಸಂಸ್ಥೆ, ಅಂತರಾಷ್ಟ್ರೀಯ ಹಣಕಾಸು ನಿಧಿ ಅಪಾರ ಪ್ರಮಾಣದ ಹಣವನ್ನು ಅನುದಾನವಾಗಿಯೂ ಮತ್ತು ದೇಣಿಗೆಯಾಗಿಯೂ ನೀಡತೊಡಗಿವೆ. ಆರ್ಥಿಕ ಮತ್ತು ಸಾಮಾಜಿಕ ಸಂಪನ್ಮೂಲಗಳನ್ನು

ಸರಿಯಾದ ರೀತಿಯಲ್ಲಿ ಬಳಸಿಕೊಂಡು ಭ್ರಷ್ಟಾಚಾರ ರಹಿತವಾದ ಉತ್ತಮ ಆಡಳಿತವನ್ನು ನೀಡುವುದು ಇದರ ಉದ್ದೇಶವಾಗಿದೆ. ಶಾಸನಗಳನ್ನು ಸರಿಯಾದ ರೀತಿಯಲ್ಲಿ ಜಾರಿಗೆ ತರುವುದು, ಮತ್ತು ಕಾಯ್ದೆಗಳ ಲಾಭಗಳು ಸರಿಯಾದ ವ್ಯಕ್ತಿಯನ್ನು ನೇರವಾಗಿ ತಲುಪುವಂತೆ ಮಾಡುವುದು. ಉತ್ತಮ ಆಡಳಿತದ ಪ್ರಮುಖ ಧ್ಯೇಯವಾಗಿದೆ. ಉತ್ತಮ ಆಡಳಿತಕ್ಕೂ ಮತ್ತು ಪ್ರಜಾಪ್ರಭುತ್ವಕ್ಕೂ ನೇರವಾದ ಸಂಬಂಧವಿದೆ.

ಭ್ರಷ್ಟಾಚಾರದ ಅರ್ಥ

ಭ್ರಷ್ಟಾಚಾರದ ಪರಿಕಲ್ಪನೆಯು ಬಹು ವಿಶಿಷ್ಟ ಹಾಗೂ ವಿಶಾಲವಾದ ವ್ಯಾಪ್ತಿ ಹಾಗೂ ಹಲವಾರು ಮಜಲುಗಳನ್ನು ಹೊಂದಿರುವುದರಿಂದ ಇದರ ಅರ್ಥವನ್ನು ನಿರ್ದಿಷ್ಟ ಪದಗಳಿಂದಾಗಲೀ ಅಥವಾ ವ್ಯಾಖ್ಯೆಗಳಿಂದಾಗಲೀ ಅರ್ಥೈಸುವುದು ಕಷ್ಟಕರ. ಆದರೂ ಸಹ ಭ್ರಷ್ಟಾಚಾರಕ್ಕೆ ವ್ಯಾಖ್ಯೆ ನೀಡುವುದರಲ್ಲಿ ಕೆಲವೇ ಕೆಲವು ಪ್ರಯತ್ನಗಳು ನಡೆದಿರುವುದನ್ನು ಇಲ್ಲಿ ಪರಾಮರ್ಶಿಸಬಹುದು. ಭ್ರಷ್ಟಾಚಾರ ಎಂದರೆ 'ಭ್ರಷ್ಟ ಆಚಾರ' ಎಂದರ್ಥ. ಇದು ಕೇವಲ ಹಣದ ಲಂಚಗುಳಿತನಕ್ಕೆ ಸೀಮಿತಗೊಂಡಿದ್ದಲ್ಲ. ನಮ್ಮ ದೈನಂದಿನ ಜೀವನದಲ್ಲಿ ನಡೆಯುವ ಎಲ್ಲ ವ್ಯವಹಾರಗಳು ಶುದ್ಧ ಆಚಾರದಿಂದ ಕೂಡಿರಬೇಕೆಂಬುದೆ ಇದರ ತಾತ್ಪರ್ಯ. Corruptionಎಂಬ ಪದದ ಹಿನ್ನೆಲೆಯನ್ನು ಗಮನಿಸಿದಾಗ Corruption ಎಂಬ ಪದವು ಲ್ಯಾಟಿನ್ ಭಾಷೆಯ 'Corrupts'ಎಂಬ ಪದ ಮೂಲದಿಂದ ಬಂದಿದೆ. 'Corruptus' ಎಂದರೆ ಮುರಿಯುವುದು ಅಥವಾ ಒಡೆಯುವುದು To Break ಎಂದರ್ಥ. ಸಾಹಿತ್ಯಿಕವಾಗಿ ಮತ್ತು ವ್ಯಾಕರಣಬದ್ಧವಾಗಿ 'Break' ಎನ್ನುವುದು ಒಂದು ಕ್ರಿಯಾಪದ. ಪ್ರಸ್ತುತ ಪರಿಕಲ್ಪನೆಯಲ್ಲಿ ಭ್ರಷ್ಟಾಚಾರ ಎನ್ನುವುದು ಮನುಷ್ಯನ ನಡವಳಿಕೆಗೆ ಸಂಬಂಧಿಸಿದ್ದಾಗಿದ್ದು, ನೈತಿಕತೆ, ಆದರ್ಶ, ಸಂಪ್ರದಾಯ, ಕಾನೂನು ಮತ್ತು ನಾಗರೀಕತೆಯ ಶೀಲದಿಂದ ಹೊರಗುಳಿದಿರುವುದಾಗಿದೆ. ಅಂದರೆ ಅಪ್ರಾಮಾಣಿಕತೆ, ಅಧಿಕಾರದ ದುರುಪಯೋಗ, ಸ್ವಜನ ಪಕ್ಷಪಾತ ಹಾಗೂ ಅನೈತಿಕತೆಯಿಂದ ಕೂಡಿರುವುದೇ ಭ್ರಷ್ಟಾಚಾರ.

ಭಾರತೀಯ ದಂಡಸಂಹಿತೆ ೧೬೧ನೆಯ ಸೆಕ್ಷನ್‌ನಲ್ಲಿ ಸಾರ್ವಜನಿಕ ಸೇವಕನ ಯಾವೆಲ್ಲ ನಡವಳಿಕೆಯು ಭ್ರಷ್ಟಾಚಾರ ಎನಿಸುವುದು ಎಂಬುದನ್ನು ವಿವರಿಸಲಾಗಿದೆ. ಅದರ ಪ್ರಕಾರ 'ಯಾವುದೇ ಸರ್ಕಾರಿ ನೌಕರರು ಕಾನೂನುಬದ್ಧ ವೇತನವನ್ನು ಹೊರತುಪಡಿಸಿ, ಸರ್ಕಾರದ ಕಾರ್ಯನಿರ್ವಹಿಸಲು ತನಗಾಗಲೀ ಅಥವಾ ಬೇರೆಯವರಿಗಾಗಲೀ ಯಾವುದೇ ರೂಪದ ಲಾಭ ಸ್ವೀಕರಿಸಿದರೆ ಅದು ಭ್ರಷ್ಟಾಚಾರವಾಗುವುದು'. ಅಂಥವನಿಗೆ ೩ ವರ್ಷ ಜೈಲು ಅಥವಾ ದಂಡ ಅಥವಾ ಎರಡನ್ನೂ ವಿಧಿಸಬಹುದಾಗಿದೆ.

ಆಕ್ಸ್‌ಫರ್ಡ್ ಇಂಗ್ಲೀಷ್ ಡಿಕ್ಷನರಿಯ ಪ್ರಕಾರ 'ಲಂಚಗುಳಿತನ, ವೃತ್ತಿಯಲ್ಲಿ ಪ್ರಾಮಾಣಿಕತೆ ಇಲ್ಲದಿರುವುದು, ನೌಕರರಲ್ಲಿನ ಗುಣಪತನ ಅಂದರೆ, ಮೌಲ್ಯರಹಿತ ನಡವಳಿಕೆ, ಸರ್ಕಾರಿ ಹಣದ

ದುರುಪಯೋಗ, ವೃತ್ತಿಧರ್ಮಕ್ಕೆ ಧಕ್ಕೆ ತರುವಂತೆ ನಡೆದುಕೊಳ್ಳುವುದು, ನೀಚತನ, ಸರ್ಕಾರಿ ಕಛೇರಿಯಲ್ಲಿ ದುಷ್ಟ ಕೃತ್ಯಗಳನ್ನು ಎಸಗುವುದು, ವಿಶೇಷವಾಗಿ ಸರ್ಕಾರಿ ನೌಕರರು ಸ್ವಹಿತಾಸಕ್ತಿ ಹಾಗೂ ಸ್ವಜನಪಕ್ಷಪಾತ ಮುಂತಾದ ಅಂಶಗಳಿಂದ ಪ್ರೇರಿತರಾಗಿ ತಮ್ಮ ಸ್ಥಾನಮಾನಗಳಿಗೆ, ಸತ್ಯಕ್ಕೆ, ನ್ಯಾಯಕ್ಕೆ ಗೌರವ ಕೊಡದೇ ಅಪಕೃತ್ಯಗಳನ್ನು ಮಾಡುವುದೇ ಭ್ರಷ್ಟಾಚಾರ'.

ವೆಬ್‌ಸ್ಟರ್ ಡಿಕ್ಷನರಿಯ ಪ್ರಕಾರ 'ಸರ್ಕಾರಿ ಅಧಿಕಾರಿ ಅಥವಾ ನೌಕರ ತನ್ನ ಅಧಿಕಾರದ ಸ್ಥಾನಮಾನಗಳನ್ನು ದುರುಪಯೋಗಪಡಿಸಿಕೊಳ್ಳುವುದರ ಮೂಲಕ ಸಾರ್ವಜನಿಕ ಸಂಪತ್ತನ್ನು ತನ್ನ ವೈಯಕ್ತಿಕ ಕೆಲಸಕಾರ್ಯಗಳಿಗೆ ಬಳಸಿಕೊಳ್ಳುವುದೇ ಭ್ರಷ್ಟಾಚಾರ'. ಭ್ರಷ್ಟಾಚಾರದ ಬಗ್ಗೆ ಅಧ್ಯಯನ ನಡೆಸುತ್ತಿರುವ ಅಂತರರಾಷ್ಟ್ರೀಯ ಮಟ್ಟದ ಸಂಸ್ಥೆಯಾದ 'ಟ್ರಾನ್ಸ್‌ಫೆರೆನ್ಸಿ ಇಂಟರ್‌ನ್ಯಾಷನಲ್' ಅಭಿಪ್ರಾಯದಂತೆ, 'ಸಾರ್ವಜನಿಕ ಹಿತಾಸಕ್ತಿಯನ್ನು ಬದಿಗೊತ್ತಿ ವೈಯಕ್ತಿಕ ಹಿತಾಸಕ್ತಿಗೋಸ್ಕರ ಅಧಿಕಾರವನ್ನು ದುರುಪಯೋಗಪಡಿಸಿಕೊಳ್ಳುವುದೇ ಭ್ರಷ್ಟಾಚಾರ. ಭ್ರಷ್ಟಾಚಾರವು ಸಾರ್ವಜನಿಕ ಹಾಗೂ ಖಾಸಗಿ ವಲಯಗಳ ನಡುವೆ ಅನೈತಿಕ ಅಥವಾ ಅಕ್ರಮ ಸಂಬಂಧವನ್ನು ಹೊಂದುವಂತೆ ಮಾಡುತ್ತದೆ. ವಾಸ್ತವವಾಗಿ ಹೇಳಬೇಕೆಂದರೆ ಭ್ರಷ್ಟಾಚಾರವು ಸರ್ಕಾರಿ ನೌಕರರನ್ನು ಸಾರ್ವಜನಿಕ ಹಿತಾಸಕ್ತಿಗಿಂತಲೂ ತನ್ನ ವೈಯಕ್ತಿಕ ಕಳಕಳಿ ಅಥವಾ ಹಿತಾಸಕ್ತಿಯ ಕಡೆಗೆ ಹೆಚ್ಚಿನ ಆಸಕ್ತಿ ಹುಟ್ಟುವಂತೆ ಮಾಡುತ್ತದೆ.

ಪ್ರಾಚೀನ ಕಾಲದ ಭಾರತದ ಪ್ರಖ್ಯಾತ ಅರ್ಥಶಾಸ್ತ್ರಜ್ಞ, ರಾಜನೀತಿಜ್ಞ ಹಾಗೂ ಚಿಂತಕನಾದ ಕೌಟಿಲ್ಯನು ಭ್ರಷ್ಟಾಚಾರದ ಬಗ್ಗೆ ಸಾಕಷ್ಟು ಮಾಹಿತಿಯನ್ನು ತನ್ನ ಪ್ರಖ್ಯಾತ ಗ್ರಂಥವಾದ 'ಅರ್ಥಶಾಸ್ತ್ರ'ದ ೮ನೇ ಅಧ್ಯಾಯದಲ್ಲಿ ಒದಗಿಸಿದ್ದಾನೆ. ಭ್ರಷ್ಟಾಚಾರದ ಪ್ರಮುಖ ಅಂಗವಾದ ಅಧಿಕಾರದ ಅಥವಾ ಹಣದ ದುರುಪಯೋಗದ ಬಗ್ಗೆ ಈ ಅಧ್ಯಾಯದಲ್ಲಿ ಪ್ರಸ್ತಾಪಿಸಲಾಗಿದೆ. ಸರ್ಕಾರಿ ಅಧಿಕಾರಿ ಅಥವಾ ನೌಕರ ಹೇಗೆ ತನ್ನ ಅಧಿಕಾರವನ್ನು ಹಾಗೂ ಸರ್ಕಾರಿ ಹಣವನ್ನು ದುರುಪಯೋಗಪಡಿಸಿಕೊಳ್ಳಲು ಸಾಧ್ಯ ಎಂಬುದರ ಬಗ್ಗೆ ಕೌಟಿಲ್ಯ ವಿವರಣೆಯನ್ನು ನೀಡುತ್ತಾ, ದುರುಪಯೋಗಕ್ಕೆ ಸಂಬಂಧಿಸಿದಂತೆ ಸುಮಾರು ೪೦ ಮಾರ್ಗಗಳು ಇವೆ ಎಂಬುದಾಗಿ ಮಾಹಿತಿ ನೀಡಿದ್ದಾನೆ. ಅದೇ ರೀತಿ ಕೇಂದ್ರ ಜಾಗೃತ ಆಯೋಗವು ಎಂದರೆ Central Vigilance Commission ಕೂಡ ಭ್ರಷ್ಟಾಚಾರದ ೨೭ ಬಗೆಗಳನ್ನು ಗುರುತಿಸಿದೆ.

ಭ್ರಷ್ಟಾಚಾರದ ಕಾರಣದ ವಿವರಣೆ

೧. ಕೆಲ ಹಿತಾಸಕ್ತಿಗಳ ಕಾರಣದಿಂದ ವ್ಯಕ್ತಿಗಳ, ಕೆಲವು ಸಂಸ್ಥೆಗಳ ಅಭಿವೃದ್ಧಿಗಾಗಿ ಬೃಹತ್ ಯೋಜನೆಗಳನ್ನು ರೂಪಿಸಲಾಗುತ್ತದೆ. ಇಲ್ಲಿ ರಾಷ್ಟ್ರದ, ಪ್ರಜೆಗಳ ಹಿತಾಸಕ್ತಿ ಕೆಲಸ ಮಾಡಿರುವುದಿಲ್ಲ. ಇದು ಭ್ರಷ್ಟಾಚಾರಕ್ಕೆ ಕಾರಣವಾಗುತ್ತದೆ.

೨. ಕೆಲವು ವ್ಯಕ್ತಿಗಳು ಕೃತಕ ಕೊರತೆಯನ್ನು ಸೃಷ್ಟಿ ಮಾಡಿ ಅನಾವಶ್ಯಕವಾಗಿ ಆರ್ಥಿಕತೆಗೆ ತೊಂದರೆಯನ್ನು ಮಾಡಿ ಭ್ರಷ್ಟಾಚಾರಕ್ಕೆ ಕಾರಣವಾಗುತ್ತಾರೆ.

೩. ರಾಜಕಾರಣಿಗಳ, ಅಧಿಕಾರಿಗಳ ಬದಲಾಗುತ್ತಿರುವ ದೃಷ್ಟಿಕೋನ. ಸೇವೆ ಮತ್ತು ಪ್ರಾಮಾಣಿಕತೆಯಲ್ಲಿ ಆಗುತ್ತಿರುವ ಮನೋಬದಲಾವಣೆ ಭ್ರಷ್ಟಾಚಾರಕ್ಕೆ ಕಾರಣವಾಗುತ್ತದೆ.

೪. ಭ್ರಷ್ಟಾಚಾರವನ್ನು ಜನಸಾಮಾನ್ಯರು ಸಹಿಸುವಿಕೆ. ಭ್ರಷ್ಟಾಚಾರ ನಿಯಂತ್ರಣಕ್ಕೆ ಅವರು ಆಸಕ್ತಿಯನ್ನು ತೋರಿಸದೇ ಇರುವುದು ಕೂಡ ಭ್ರಷ್ಟಾಚಾರಕ್ಕೆ ಕಾರಣವಾಗುತ್ತದೆ.

೫. ಭ್ರಷ್ಟಾಚಾರಕ್ಕೆ ಸಂಬಂಧಿಸಿದ ಕಾರ್ಯಾಗಾರ, ಸಭೆ ಸಮಾರಂಭಗಳಲ್ಲಿ ಭಾಗವಹಿಸದೇ ನಿರಾಸಕ್ತಿ ತೋರುವುದರಿಂದ ಭ್ರಷ್ಟಾಚಾರ ಹೆಚ್ಚಳವಾಗುತ್ತದೆ.

೬. ಜನಸಾಮಾನ್ಯರ ಅನಕ್ಷರತೆ ಮತ್ತು ಅಜ್ಞಾನ. ದುರ್ಬಲ ಆರ್ಥಿಕತೆ, ಸಾಮಾಜಿಕ, ಅಸಮಾನತೆಗಳು ಸಹ ಭ್ರಷ್ಟಾಚಾರಕ್ಕೆ ಕಾರಣವಾಗಬಹುದು.

೭. ಸರಕಾರಿ ಅಧಿಕಾರಿಗಳಿಗಿರುವ ಕಡಿಮೆ ಸಂಬಳ. ಖಾಸಗಿ ಸಾಫ್ಟ್‌ವೇರ್ ಕಂಪನಿಗಳಲ್ಲಿ ಕೆಲಸ ಮಾಡುವವರು ಸರಕಾರಿ ಕಾರ್ಯದರ್ಶಿಗಳಿಗಿಂತ ಹೆಚ್ಚು ವೇತನವನ್ನು ಪಡೆಯುತ್ತಿರುವುದರಿಂದ ಸರ್ಕಾರಿ ನೌಕರರಲ್ಲಿ ಲಂಚಗುಳಿತನಕ್ಕೆ ಕಾರಣವಾಗಿದೆ.

೮. ಸಂಕೀರ್ಣ ಕಾಯ್ದೆ ಕಾನೂನುಗಳು ಜನಸಾಮಾನ್ಯರನ್ನು ಸರಕಾರದ ಪಾಲ್ಗೊಳ್ಳುವಿಕೆಯಿಂದ ದೂರ ಮಾಡಿದ್ದು ಕೂಡ ಭ್ರಷ್ಟಾಚಾರಕ್ಕೆ ಕಾರಣವಾಗುತ್ತವೆ.

ಚುನಾವಣೆಯ ಸಮಯದಲ್ಲಿ ಭ್ರಷ್ಟಾಚಾರವು ಮಿತಿ ಮೀರುತ್ತದೆ. ದೊಡ್ಡ ಉದ್ಯಮಿಗಳು ತಮ್ಮ ಸ್ವಹಿತಾಸಕ್ತಿಗಾಗಿ ಪಕ್ಷಗಳಿಗೆ ಅಪಾರ ಮೊತ್ತದ ಹಣಕಾಸಿನ ನೆರವು ನೀಡುತ್ತಾರೆ. ರಾಜಕಾರಣಿಗಳು ಚುನಾವಣೆಯನ್ನು ಗೆಲ್ಲಲು ಈ ಹಣವನ್ನೇ ಉಪಯೋಗಿಸುತ್ತಾರೆ. ಗೆದ್ದ ನಂತರ ಅನೇಕ ವಿಧಗಳಲ್ಲಿ ಈ ಜನ ಸರ್ಕಾರದ ನೆರವು ಪಡೆಯುತ್ತಾರೆ. ಇಷ್ಟೇ ಅಲ್ಲ. ಭ್ರಷ್ಟಾಚಾರಕ್ಕೆ ಇನ್ನೂ ಹಲವಾರು ಕಾರಣಗಳಿವೆ. ಅವುಗಳಲ್ಲಿ ಪ್ರಮುಖ ಕಾರಣಗಳನ್ನು ಈ ಕೆಳಗೆ ಉಲ್ಲೇಖಿಸಲಾಗಿದೆ.

೧. **ಐತಿಹಾಸಿಕ ಕಾರಣಗಳು**: ಸ್ವಾತಂತ್ರ್ಯಪೂರ್ವ ಭಾರತೀಯರಲ್ಲಿ ಭ್ರಷ್ಟಾಚಾರ ಮಿತಿಮೀರಲು ಪ್ರಮುಖ ಕಾರಣವೆಂದರೆ, ವಸಾಹತು ಆಳ್ವಿಕೆಯ ಪ್ರಭಾವ. ಬ್ರಿಟೀಷ್ ಆಳ್ವಿಕೆಯ ಸಮಯದಲ್ಲಿ ಬ್ರಿಟೀಷ್ ವ್ಯಕ್ತಿಗಳು ಆಡಳಿತ ಸೇವಾವರ್ಗದಲ್ಲಿ ಉನ್ನತ ಹುದ್ದೆಗಳನ್ನು ಹೊಂದಿ ಹೆಚ್ಚಿನ ಸಂಬಳ ಪಡೆದು, ಐಷಾರಾಮಿ ಜೀವನ ನಡೆಸುತ್ತಿದ್ದರು. ಆದರೆ ಭಾರತೀಯ ನೌಕರರಿಗೆ ಅತ್ಯಂತ ಕಡಿಮೆ ವೇತನ ಲಭ್ಯವಾಗುವ ಕೆಳದರ್ಜೆಯ ಹುದ್ದೆಗಳನ್ನು ನೀಡುತ್ತಿದ್ದರು. ಭಾರತೀಯರಿಗೆ ನೀಡುತ್ತಿದ್ದ

ಅಂದಿನ ವೇತನ ದೈನಂದಿನ ವೆಚ್ಚಕ್ಕೂ ಸಾಲುತ್ತಿರಲಿಲ್ಲ. ಪರಿಣಾಮವಾಗಿ ತಾವೂ ಸಹ ಜನರಿಂದ ತಮ್ಮ ಕರ್ತವ್ಯ ನಿರ್ವಹಣೆಗಾಗಿ ಕಾನೂನುಬಾಹಿರವಾಗಿ ವಸ್ತು ಅಥವಾ ಹಣದ ರೂಪದಲ್ಲಿ ಕಾಣಿಕೆಗಳನ್ನು ಪಡೆಯತೊಡಗಿದರು, ಅಂದಿನ ಚಾಳಿ ನಮ್ಮ ಸರ್ಕಾರಿ ನೌಕರರಲ್ಲಿ ಇಂದಿಗೂ ಸಹ ಮುಂದುವರೆದಿದೆ.

೨. ಆರ್ಥಿಕ ಕಾರಣಗಳು: ಭ್ರಷ್ಟಾಚಾರಕ್ಕೆ ಇನ್ನೊಂದು ಪ್ರಮುಖ ಕಾರಣವೆಂದರೆ, ಆರ್ಥಿಕ ಸ್ಥಿತಿಗತಿಗಳು. ಸರ್ಕಾರವು ತನ್ನ ಕೆಲ ಇಲಾಖೆಯ ನೌಕರರಿಗೆ ನೀಡುವ ವೇತನ ಹಾಗೂ ತುಟ್ಟಿಭತ್ಯೆಗಳು ಇಂದಿನ ಬದಲಾಗುತ್ತಿರುವ ಹಾಗೂ ಏರುತ್ತಿರುವ ಬೆಲೆಗಳಿಗೆ ಅನುಗುಣವಾಗಿರುವುದಿಲ್ಲ. ಅವರ ಕುಟುಂಬಗಳಲ್ಲಿಯೇ ಇವರೊಂದಿಗೆ ಓದಿದವರು ಸಾಪ್ಟ್‌ವೇರ್ ಕಂಪನಿಗಳಲ್ಲೋ ಅಥವಾ ಇತರೆ ಖಾಸಗಿ ಕಂಪನಿಗಳಲ್ಲೋ ಕೆಲಸ ಮಾಡುತ್ತ ಪ್ರತಿ ತಿಂಗಳಿಗೆ ಐವತ್ತು ಸಾವಿರ ರೂಪಾಯಿಕ್ಕಿಂತಲೂ ಅಧಿಕ ಸಂಬಳ ಪಡೆಯುತ್ತಾರೆ. ಅವರ ಐಷಾರಾಮಿ ಜೀವನದ ಮುಂದೆ ಈ ಸರ್ಕಾರಿ ನೌಕರರ ಜೀವನ ಏನೇನೂ ಅಲ್ಲ. ಜೊತೆಗೆ ಹಣದುಬ್ಬರದ ಪರಿಣಾಮದಿಂದಾಗಿ ಸರ್ಕಾರಿ ನೌಕರರಿಗೆ ಬರುವ ತಿಂಗಳ ಸಂಬಳ ತಮ್ಮ ಕುಟುಂಬ ನಿರ್ವಹಣೆಗೆ ಸಾಕಾಗುವುದಿಲ್ಲ. ಅಭಿವೃದ್ಧಿ ಹೊಂದುತ್ತಿರುವ ಭಾರತದಂತಹ ರಾಷ್ಟ್ರಗಳಲ್ಲಿ 'ಕುಟುಂಬ ಯೋಜನೆ'ಗಳು ಇನ್ನೂ ಯಶಸ್ವಿಯಾಗಿಲ್ಲ. ಕುಟುಂಬದಲ್ಲಿ ಉಣ್ಣುವ ಬಾಯಿಗಳು ಹೆಚ್ಚಾಗಿ ದುಡಿಯುವ ಕೈಗಳು ಕಡಿಮೆ ಇದ್ದಾಗ ಆರ್ಥಿಕ ಸಂಕಷ್ಟಗಳು ಉದ್ಭವವಾಗುತ್ತವೆ. ಇಂತಹ ಸಂದರ್ಭದಲ್ಲಿ ಉದ್ಯೋಗಿಯು ತನ್ನ ಕೌಟುಂಬಿಕ ಕೊರತೆಗಳನ್ನು ನೀಗಿಸಲು ಸಹಜವಾಗಿಯೇ ಕಾನೂನು ಬಾಹಿರವಾಗಿ ಹಣಗಳಿಸಲು ಪ್ರಯತ್ನಪಡುತ್ತಾನೆ. ಹೀಗೆ ಆರ್ಥಿಕ ಅಭದ್ರತೆ, ಬಡತನ, ಕಡಿಮೆ ಸಂಬಳ ಈ ಅಂಶಗಳ ಜೊತೆಗೆ ಆರ್ಥಿಕ ನೀತಿಗಳು, ಕಪ್ಪು ಹಣ, ಅಧಿಕ ತೆರಿಗೆ, ಹಣ ವಿನಿಮಯ ಪದ್ಧತಿ ಮುಂತಾದ ಆರ್ಥಿಕ ಅಂಶಗಳು ಭ್ರಷ್ಟಾಚಾರಕ್ಕೆ ಪ್ರಚೋದನೆಯಾಗಿದ್ದು, ತನ್ಮೂಲಕ ಉತ್ತಮ ಆಡಳಿತಕ್ಕೆ ಕಂಟಕಪ್ರಾಯವಾಗಿವೆ.

೩. ಪರಮಾಧಿಕಾರ ಕಾರಣಗಳು: ಏಕಮುಖ ನಿರ್ಧಾರ ತೆಗೆದುಕೊಳ್ಳುವ ಅಧಿಕಾರ ಭ್ರಷ್ಟಾಚಾರದ ಪ್ರಮುಖ ಮೂಲವಾಗಿದೆ. ಸರ್ಕಾರಿ ಇಲಾಖೆ ಅಥವಾ ಕಛೇರಿಗಳ ಕಾರ್ಯನಿರ್ವಹಣೆಯ ವಿಧಾನ ಮತ್ತು ಪ್ರಕ್ರಿಯೆ ಭ್ರಷ್ಟಾಚಾರಕ್ಕೆ ಹೇಳಿ ಮಾಡಿಸಿದ ಭೂಮಿಕೆಯಂತಿದೆ. ಇಲಾಖೆಯ ವಿಳಂಬ ನೀತಿ ಎಂದರೆ ಕೆಂಪುಪಟ್ಟಿ Red Tapism ನಿಯಮಾವಳಿಗಳಿಂದಾಗಿ ಕಾರ್ಯ ನಿರ್ವಹಣೆಯಲ್ಲಿ ವಿಳಂಬ ಉಂಟಾಗುತ್ತದೆ. ವಿಳಂಬ ನೀತಿ ಮತ್ತು ಹೊಣೆಗಾರಿಕೆಯಿಂದ ನುಣುಚಿಕೊಳ್ಳುವುದು ನಮ್ಮ ಸರ್ಕಾರಿ ಕಛೇರಿಗಳ ಪ್ರಮುಖ ಲಕ್ಷಣವಾಗಿದೆ. ಲಂಚದ ಆಮಿಷದಿಂದ ಕಛೇರಿಗಳಲ್ಲಿ ಕಾಗದ ಪತ್ರಗಳ ವಿಲೇವಾರಿಗೆ ವಿಳಂಬ ಮಾಡುವುದು ಹಾಗೂ ಶೀಘ್ರವಾಗಿ ತಮ್ಮ ಕಾಗದ ಪತ್ರ ಅಥವಾ ಕಡತಗಳು ವಿಲೇವಾರಿ ಆಗಲೆಂದು Speed Money ನೀಡುವ ಅನಿಷ್ಟಪದ್ಧತಿ ಸರ್ಕಾರಿ ಕಚೇರಿಗಳಲ್ಲಿ ಕಂಡು ಬರುತ್ತಲಿದೆ.

೪. **ರಾಜಕೀಯ ಕಾರಣಗಳು:** ಆಡಳಿತ ವ್ಯವಸ್ಥೆಯಲ್ಲಿ ಭ್ರಷ್ಟಾಚಾರ ಹೆಚ್ಚಾಗಲು ರಾಜಕೀಯ ಹಸ್ತಕ್ಷೇಪವು ಕೂಡ ಪ್ರಮುಖ ಕಾರಣ. ರಾಜಕಾರಣಿಗಳು ಸರ್ಕಾರಿ ನೌಕರರ ವರ್ಗಾವಣೆ, ಬಡ್ತಿ, ನೇಮಕಾತಿ ಮುಂತಾದ ಸಿಬ್ಬಂದಿ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಅತೀ ಎನ್ನುವಷ್ಟು ಹಸ್ತಕ್ಷೇಪ ಮಾಡುತ್ತಾರೆ. ತಮಗೆ ಲಾಭದಾಯಕ ಕೆಲಸಗಳು ಶೀಘ್ರವಾಗಿ ಆಗುವಂತೆ ಅಧಿಕಾರಿಗಳ ಮೇಲೆ ಒತ್ತಡ ತರುವುದು, ತಪ್ಪಿತಸ್ಥ ಅಧಿಕಾರಿಗಳಿಗೆ ಆಶ್ರಯ ನೀಡುವುದು, ಸರ್ಕಾರಿ ನಿಯಮಗಳನ್ನು ಗಾಳಿಗೆ ತೂರಿ ಕಾರ್ಯನಿರ್ವಹಿಸುವಂತೆ ಅಧಿಕಾರಿಗಳ ಮೇಲೆ ಒತ್ತಡ ತಂದು ನ್ಯಾಯಕ್ಕೆ ವಿರೋಧವಾದ, ಕಾನೂನುಬಾಹಿರ ಕಾರ್ಯಗಳನ್ನು ತಮ್ಮ ಸ್ವಹಿತ ಸಾಧನೆಗಾಗಿ ಮಾಡಿಸಿಕೊಳ್ಳುತ್ತಾರೆ. ದುರಂತವೆಂದರೆ ನ್ಯಾಯ ನೀತಿಗೆ ಮಾದರಿ ಅಥವಾ ಆದರ್ಶವಾಗಿರಬೇಕಾದ ನ್ಯಾಯಾಂಗ ವ್ಯವಸ್ಥೆಯೂ ಸಹ ಇಂದು ರಾಜಕೀಯ ಪ್ರಭಾವದಿಂದ ಹೊರತಾಗಿಲ್ಲ. ಕೆಳಸ್ತರದ ನ್ಯಾಯಾಲಯದ ನ್ಯಾಯಾಧೀಶರಿಂದ ಹಿಡಿದು, ಉಚ್ಚ ಮತ್ತು ಸರ್ವೋಚ್ಚ ನ್ಯಾಯಾಲಯದ ಕೆಲವು ನ್ಯಾಯಾಧೀಶರೂ ಸಹ ಜಾತೀಯ, ಪ್ರಾಂತೀಯ ಹಾಗೂ ಲಂಚದ ಸುಳಿಗೆ ಸಿಲುಕಿದ್ದನ್ನು ಕಾಣಬಹುದಾಗಿದೆ.

೫. **ನಾಗರೀಕ ಪ್ರಜ್ಞೆಯ ಕೊರತೆ:** ಸಾಮಾನ್ಯ ಜನರಿಗೆ ಉತ್ತಮ ಆಡಳಿತ ದೊರಕದಿರಲು ಮೂಲ ಕಾರಣ ಸರ್ಕಾರಿ ನೌಕರನಲ್ಲಿರುವ ನೈತಿಕತೆಯ ಕೊರತೆ. ಹೀಗಾಗಿ ಅಂತಹ ನೌಕರನಲ್ಲಿ ಪ್ರಾಮಾಣಿಕತೆ, ದಕ್ಷತೆ, ಆದರ್ಶಗಳು ಮೂಲೆಗುಂಪಾಗಿ, ದೇಶಭಕ್ತಿ, ದೇಶಪ್ರೇಮ, ಸಾಮಾಜಿಕ ಕಳಕಳಿ ಕಣ್ಮರೆಯಾಗಿ, ಸ್ವಾರ್ಥತೆ, ಪಕ್ಷಪಾತತೆ, ಸ್ವಜನ ಹಿತಾಸಕ್ತಿ ಮುಂತಾದ ಅಂಶಗಳು ಉದ್ಭವಗೊಂಡು ಸಹಜವಾಗಿಯೇ ಭ್ರಷ್ಟಾಚಾರ ಚಿಗುರೊಡೆಯುತ್ತದೆ. ಅದೇ ರೀತಿ ಸಾಮಾನ್ಯ ಜನರಲ್ಲಿರುವ ಅನಕ್ಷರತೆ, ಕಾನೂನು ಜ್ಞಾನದ ಅಭಾವ ಮತ್ತು ನಾಗರೀಕ ಪ್ರಜ್ಞೆಯ ಕೊರತೆ ಭ್ರಷ್ಟಾಚಾರದ ವಿಪುಲ ಬೆಳವಣಿಗೆಗೆ ಪ್ರೋತ್ಸಾಹ ನೀಡುತ್ತದೆ. ಜನರು ಭ್ರಷ್ಟಾಚಾರದ ವಿರುದ್ಧ ಚಕಾರ ಎತ್ತುವುದಿಲ್ಲ. ಏಕೆಂದರೆ ಬಹುತೇಕ ಸಾಮಾನ್ಯ ಜನರು ಅನಕ್ಷರಸ್ಥರಾಗಿದ್ದಾರೆ, ಹೀಗಾಗಿ ಅವರಲ್ಲಿ ರಾಜಕೀಯ ಪ್ರಜ್ಞೆಯಾಗಲಿ, ಕಾನೂನಿನ ಬಗ್ಗೆ ಜ್ಞಾನವಾಗಲಿ ಅಥವಾ ನಾಗರೀಕ ಪ್ರಜ್ಞೆಯಾಗಲಿ ಇಲ್ಲ. ಅನಕ್ಷರಸ್ಥರು ಅನ್ಯಾಯದ ವಿರುದ್ಧ ಅಥವಾ ತಮ್ಮ ಕುಂದುಕೊರತೆಗಳ ಪರಿಹಾರಕ್ಕಾಗಿ ಹೋರಾಡುವ ಪ್ರಯತ್ನ ಮಾಡುವುದಿಲ್ಲ. ಅಧಿಕಾರಿಗಳು ಹಾಗೂ ರಾಜಕಾರಣಿಗಳು ಜನರ ಈ ಮುಗ್ಧತೆ ಮತ್ತು ಅನಕ್ಷರತೆಯನ್ನು ದುರುಪಯೋಗಪಡಿಸಿಕೊಳ್ಳುತ್ತಾರೆ. ಪರಿಣಾಮವಾಗಿ ಅಧಿಕಾರಿಗಳಿಗೆ ಜನರ ಭಯವೇ ಇಲ್ಲದಂತಾಗಿ ಅಧಿಕಾರವನ್ನು ದುರುಪಯೋಗಪಡಿಸಿಕೊಳ್ಳುವ ಹಾಗೂ ದುರ್ವರ್ತನೆಯಿಂದ ಕೂಡಿದ ಮನೋವೃತ್ತಿ ಪ್ರದರ್ಶಿಸುತ್ತಾರೆ. ಇದರಿಂದಾಗಿ ಉತ್ತಮ ಆಡಳಿತ ವಿಫಲವಾಗಿದೆ.

೬. **ಅತಿಯಾದ ಸೇವಾಭದ್ರತೆ:** ಸರ್ಕಾರಿ ನೌಕರದಾರರಿಗೆ ಸರ್ಕಾರವು ಹಲವು 'ಅಧಿನಿಯಮ'ಗಳ ಮೂಲಕ ಅತಿಯಾದ ರಕ್ಷಣೆಯನ್ನು ಒದಗಿಸುತ್ತಿದೆ. ಅಲ್ಲದೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು

ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಗೆ ಆಗಾಗ ತಿದ್ದುಪಡಿ ಮಾಡಿ, ಲೋಕಾಯುಕ್ತಗಳಂತಹ ಭ್ರಷ್ಟಾಚಾರ ನಿಯಂತ್ರಣ ಸಂಸ್ಥೆಗಳ ಕೈ ಕಟ್ಟಿಹಾಕುತ್ತಿದೆ. ಇವೆಲ್ಲವೂ ಉತ್ತಮ ಆಡಳಿತಕ್ಕೆ ಕೊಡಲಿ ಪೆಟ್ಟಾಗಿದೆ. ಭ್ರಷ್ಟ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳವುದು ಸುಲಭವಾದ ಅಥವಾ ಸರಳವಾದ ಕಾರ್ಯವಲ್ಲ. ಭ್ರಷ್ಟ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕಾದರೆ ಸಾಕಷ್ಟು ಮಾಹಿತಿಗಳು, ದಾಖಲೆಗಳು, ವಿವರಗಳು ಬೇಕಾಗುತ್ತವೆ. ಇವೆಲ್ಲವನ್ನು ಸಂಗ್ರಹಿಸುವ ವೇಳೆಗೆ ಭ್ರಷ್ಟರಿಗೆ ಭ್ರಷ್ಟಾಚಾರದ ಆರೋಪವನ್ನು ಮುಚ್ಚಿಹಾಕಲು ಸಾಕಷ್ಟು ಅವಕಾಶಗಳು ಹಾಗೂ ಸಮಯ ಲಭ್ಯವಾಗಿ ಸುಲಭವಾಗಿ ಆರೋಪದಿಂದ ಮುಕ್ತಿ ಹೊಂದುತ್ತಾರೆ. ಎಷ್ಟೋ ವೇಳೆ ಅಂತಹ ಭ್ರಷ್ಟರ ಮೇಲೂ ಶಿಸ್ತುಕ್ರಮ ಕೈಗೊಳ್ಳಲು ಸರ್ಕಾರ ಮೀನ ಮೇಷ ಎಣಿಸುತ್ತದೆ. ಭ್ರಷ್ಟ ಅಧಿಕಾರಿ ಒಂದು ವೇಳೆ ಅಕ್ರಮ ಆಸ್ತಿಯೊಂದಿಗೆ ಸಿಕ್ಕಿಬಿದ್ದರೂ ಸಹ, ಅತಿ ಹೆಚ್ಚೆಂದರೆ ಅವರನ್ನು ತಾತ್ಕಾಲಿಕವಾಗಿ ಅಮಾನತ್ತಿನಲ್ಲಿಡಲು ಪ್ರಯತ್ನಗಳು ನಡೆಯುತ್ತವೆ. ನಂತರ ಮತ್ತೆ ಅವರು ತಮ್ಮ ಕೆಲಸಕ್ಕೆ ಹಾಜರಾಗಿ ಪ್ರಾಮಾಣಿಕರನ್ನೇ ಹಂಗಿಸುವಂತಾಗುತ್ತದೆ.

೭. ಪ್ರಜಾಪ್ರಭುತ್ವ ವ್ಯವಸ್ಥೆ: ಪ್ರಪಂಚದಲ್ಲಿ ಅಸ್ತಿತ್ವದಲ್ಲಿರುವ ಎಲ್ಲ ಮಾದರಿಯ ಸರ್ಕಾರಗಳಲ್ಲಿ 'ಪ್ರಜಾಪ್ರಭುತ್ವ' ವ್ಯವಸ್ಥೆ ಉತ್ತಮವಾದುದಾಗಿದೆ. ಈ ವ್ಯವಸ್ಥೆಯ ಬೆನ್ನೆಲುಬು ಮಾನವೀಯತೆ, ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವ ಹಾಗೂ ಜಾತ್ಯಾತೀತತೆ ಮೊದಲಾದವುಗಳು ಎನ್ನಬಹುದು. ಈ ಸಿದ್ಧಾಂತದ ಪ್ರಕಾರ ಪ್ರಜೆಗಳೇ ಪ್ರಭುಗಳು. ಆದರೆ ವಾಸ್ತವದಲ್ಲಿ ಸಿದ್ಧಾಂತಕ್ಕೂ ಆಚರಣೆಗೂ ಅಜಗಜಾಂತರ ವ್ಯತ್ಯಾಸವಿದೆ. ಪ್ರಜಾಪ್ರಭುತ್ವದಲ್ಲಿ ರಾಜಕಾರಣಿಗಳು ಮತ್ತು ಅಧಿಕಾರಿಗಳೇ ರಾಜರಾಗಿದ್ದಾರೆ. ವಿಚಿತ್ರವೆಂದರೆ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಹೊಂದಿರುವ ರಾಷ್ಟ್ರಗಳೇ ಇಂದು ಹೆಚ್ಚಿನ ಭ್ರಷ್ಟಾಚಾರವನ್ನು ಹೊಂದಿದ ರಾಷ್ಟ್ರಗಳೆನಿಸಿವೆ. ಇದಕ್ಕೆ ಪ್ರಮುಖ ಕಾರಣ ವ್ಯಕ್ತಿಗೆ ನೀಡಿರುವ ಯಥೇಚ್ಛ ಸ್ವಾತಂತ್ರ್ಯ. ಈ ಸ್ವಾತಂತ್ರ್ಯ ದೇಶದ ಪ್ರಗತಿಗೆ ಬಳಕೆಯಾಗದೇ ಕಾನೂನುಬಾಹಿರ ಕೃತ್ಯಗಳಿಗೆ, ಶೋಷಣೆಗೆ, ಹಗರಣಗಳಿಗೆ, ಪಕ್ಷಪಾತತೆಗೆ ಉಪಯೋಗವಾಗುತ್ತಿದೆ. ಇಂದು ಚುನಾವಣೆಗಳು ಭ್ರಷ್ಟತೆಯನ್ನು ಹೆಚ್ಚಿಸಿವೆ. ಅಭಿವೃದ್ಧಿಯ ದೃಷ್ಟಿಯಿಂದ ಸರ್ಕಾರ ಹಮ್ಮಿಕೊಳ್ಳುವ ಕಾರ್ಯಗಳು ಹೆಚ್ಚಿದಷ್ಟೂ ಭ್ರಷ್ಟಾಚಾರ ಹೆಚ್ಚುತ್ತದೆ. ಅಧಿಕಾರ ಮತ್ತು ನಿರ್ಧಾರ ತೆಗೆದುಕೊಳ್ಳುವ ಅವಕಾಶಗಳು ಎಲ್ಲಿ ಹೆಚ್ಚಾಗಿರುತ್ತವೋ ಅಲ್ಲಿ ಅಧಿಕಾರದ ದುರುಪಯೋಗ ಮತ್ತು ಅವ್ಯವಹಾರಗಳು ಅಧಿಕವಾಗಿರುತ್ತವೆ. ಇದರ ಪರಿಣಾಮವಾಗಿಯೇ ಭಾರತದಲ್ಲಿ ಹಗರಣಗಳ ಸರಮಾಲೆಗಳೇ ಸೃಷ್ಟಿಯಾಗಿವೆ. ಲಂಚವು ಸಾರ್ವಜನಿಕ ವ್ಯವಹಾರದ ಅವಿಭಾಜ್ಯ ಭಾಗವೆನಿಸಿದೆ. ಲಂಚ ಕೊಡುವವರು ಮತ್ತು ಸ್ವೀಕರಿಸುವವರು ಇಬ್ಬರಲ್ಲಿಯೂ ಭ್ರಷ್ಟಾಚಾರದ ಬಗ್ಗೆ ಪಾಪಪ್ರಜ್ಞೆ ಇಲ್ಲ. ಇಂದು ಭ್ರಷ್ಟಾಚಾರವು ಶಿಷ್ಟಾಚಾರವೇನೋ ಎಂಬಂತೆ ಪರಿಗಣಿತವಾಗಿದೆ. ಈ ಪಿಡುಗನ್ನು ನಿಗ್ರಹಿಸಲು ಹಲವು ಕಾನೂನುಗಳಿದ್ದರೂ ಅವುಗಳು ಪರಿಣಾಮಕಾರಿಯಾಗಿ ಅನುಸರಣೆಯಾಗುತ್ತಿಲ್ಲ. ಭ್ರಷ್ಟಾಚಾರವನ್ನು ಹಾಗೂ ಸಾರ್ವಜನಿಕ ಕುಂದುಕೊರತೆಗಳನ್ನು ಬಗೆಹರಿಸಲು

ರಾಜ್ಯಮಟ್ಟದಲ್ಲಿ ಲೋಕಾಯುಕ್ತ ಸಂಸ್ಥೆಗಳು ಅಸ್ತಿತ್ವದಲ್ಲಿದ್ದರೂ, ಅವುಗಳು ಹಲ್ಲಿಲ್ಲದ ಹಾವುಗಳಂತಾಗಿವೆ. ಅಲ್ಲದೆ ಕೇಂದ್ರೀಯ ಜಾಗೃತದಳ, ಕೇಂದ್ರೀಯ ತನಿಖಾದಳ, ಸಿಓಡಿ ಮುಂತಾದ ಸಂಸ್ಥೆಗಳಿದ್ದರೂ ಏನೂ ಪ್ರಯೋಜನವಿಲ್ಲದಂತಾಗಿದೆ. ಇವು ದೊಡ್ಡ ದೊಡ್ಡ ಭ್ರಷ್ಟ ತಿಮಿಂಗಿಲಗಳನ್ನು ಬಿಟ್ಟು, ಸಣ್ಣಪುಟ್ಟ ಮೀನುಗಳನ್ನು ಹಿಡಿಯುವ ಪ್ರಯತ್ನ ಮಾಡುತ್ತಿವೆ. ಭ್ರಷ್ಟಾಚಾರವನ್ನು ನಿಯಂತ್ರಿಸಿ, ನಿರ್ಮೂಲನಗೊಳಿಸಲು ಆಡಳಿತಾಂಗಕ್ಕೂ ಪ್ರಾಮಾಣಿಕ ಮನಸ್ಸಿಲ್ಲ, ಹಾಗೆಯೇ ರಾಜಕೀಯ ಇಚ್ಛಾಶಕ್ತಿಯು ತುಂಬಾ ಕಡಿಮೆಯಿದೆ.

ಕೇಂದ್ರ ಸರ್ಕಾರ ನೇಮಿಸಿದ್ದ ಶ್ರೀ ಸಂತಾನಂ ಸಮಿತಿಯ ಪ್ರಕಾರ ಆಡಳಿತ ನಿಧಾನತ್ವ, ಅಧಿಕಾರ ಮತ್ತು ನಿರ್ಧಾರ ತೆಗೆದುಕೊಳ್ಳುವ ಕೇಂದ್ರೀಕರಣ, ಮಿತಿ ಮೀರಿದ ಸರ್ಕಾರಿ ಕಾರ್ಯಗಳು, ಸರ್ಕಾರಿ ಕೆಲಸದ ಪ್ರತಿಬಂಧಕ ಪ್ರಕ್ರಿಯೆಗಳು, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿನ ದೋಷಗಳು ಮುಂತಾದವು ಭ್ರಷ್ಟಾಚಾರದ ಹೆಚ್ಚಳಕ್ಕೆ ಕಾರಣ ಎನಿಸಿದೆ. ಭ್ರಷ್ಟಾಚಾರದ ವಿಪುಲ ಬೆಳವಣಿಗೆಗೆ ಪ್ರತಿಯೊಂದು ಅಂಶವೂ ಸಹ ಕಾರಣವಾಗಿ ಪರಿಣಮಿಸುತ್ತಿದೆ. ಈ ಹಿನ್ನೆಲೆಯಲ್ಲಿ ಭ್ರಷ್ಟಾಚಾರ ದೈತ್ಯಾಕಾರವಾಗಿ ಬೆಳೆಯುತ್ತಿರುವುದಕ್ಕೆ ಕುರುಡು ಸಮಾಜ ಹಾಗೂ ಅಸ್ತಿತ್ವದಲ್ಲಿರುವ ಸರ್ಕಾರಗಳ ನೈತಿಕತೆಯ ಮತ್ತು ಆತ್ಮಸಾಕ್ಷಿಯ ಅಧಃಪತನ ಕಾರಣವೆಂದು ಗುರ್ತಿಸಲಾಗಿದೆ

ಇತ್ತೀಚಿನ ದಿನಗಳಲ್ಲಂತೂ ರಾಜಕೀಯ ಕ್ಷೇತ್ರದಲ್ಲಿ ಭ್ರಷ್ಟಾಚಾರವು ತುಂಬಿ ತುಳುಕುತ್ತಿದೆ. ೨ಜಿ ಹಗರಣದಲ್ಲಿ ಕೇಂದ್ರದ ಸಂಪರ್ಕ ಖಾತೆ ಸಚಿವರೊಬ್ಬರು ತಮ್ಮ ಹುದ್ದೆಗೆ ರಾಜೀನಾಮೆ ನೀಡಿ ಜೈಲಿಗೆ ಹೋಗಬೇಕಾಯ್ತು. ಇವರೊಂದಿಗೆ ಹತ್ತಾರು ಪ್ರಮುಖರು ಜೈಲು ಪಾಲಾದರು. ದೆಹಲಿ ಕಾಮನ್‌ವೆಲ್ತ್ ಕ್ರೀಡಾಕೂಟ ಹಗರಣದ ರಾಷ್ಟ್ರೀಯ ಒಲಂಪಿಕ್ ಸಂಸ್ಥೆಯ ಅಧ್ಯಕ್ಷರು ಜೈಲು ಕಂಡು ಬಂದರು. ಅದೇ ರೀತಿ ಬಿಹಾರದ ಮಾಜಿ ಮುಖ್ಯಮಂತ್ರಿಗಳಿಬ್ಬರಿಗೆ ಹಾಗೂ ಹಿಂದಿನ ಸಂಪರ್ಕ ಖಾತೆಯ ಸಚಿವರಾಗಿದ್ದ ಸುಖಾರಾಂ ಲಂಚ ಪಡೆದ ಆರೋಪ ಸಾಬೀತಾಗಿ ನ್ಯಾಯಾಲಯ ಇವರಿಗೆ ಜೈಲು ಶಿಕ್ಷೆ ವಿಧಿಸಿತು.

ಇದೇ ರೀತಿ ರಾಜ್ಯದ ಪ್ರಮುಖ ರಾಜಕಾರಣಿಗಳು ಜೈಲಿಗೆ ಹೋಗಿದ್ದನ್ನು ಇಲ್ಲಿ ಗುರ್ತಿಸಬಹುದಾಗಿದೆ. ಗಣಿ ಹಗರಣದಲ್ಲಿ ಬಳ್ಳಾರಿಯ ಪ್ರಮುಖ ರಾಜಕಾರಣಿಯೊಬ್ಬರು ಸೇರಿದಂತೆ ಹಲವು ಪ್ರಮುಖ ಅಧಿಕಾರಿಗಳು ಹಾಗೂ ಮೂರು ಶಾಸಕರು ಜೈಲುಪಾಲಾದರು. ಅಧಿಕಾರ ದುರುಪಯೋಗ ಹಾಗೂ ಭ್ರಷ್ಟಾಚಾರ ಪ್ರಕರಣದಲ್ಲಿ ಕರ್ನಾಟಕದ ಮುಖ್ಯಮಂತ್ರಿಯೊಬ್ಬರು ತಮ್ಮ ಹುದ್ದೆಗೆ ರಾಜೀನಾಮೆ ನೀಡಿದ್ದಲ್ಲದೇ, ಜೈಲಿಗೂ ಹೋಗಿ ಬರಬೇಕಾಯ್ತು. ಇದೇ ಪ್ರಕರಣದಲ್ಲಿ ಮಾಜಿ ಸಚಿವ ಹಾಗೂ ಅವರ ಪುತ್ರ ಸೇರಿದಂತೆ ಹಲವಾರು ಜನ ಜೈಲು ಸೇರಿ ಇದೀಗ ಜಾಮೀನಿನ ಮೇಲೆ ಹೊರಬಂದಿದ್ದಾರೆ, ಈಗಲೂ ರಾಜ್ಯದ ಹಲವಾರು ಮಾಜಿ ಮುಖ್ಯಮಂತ್ರಿಗಳು, ಮಂತ್ರಿಗಳು

ಹಾಗೂ ಶಾಸಕರು ಇಂತಹದೇ ಪ್ರಕರಣದಲ್ಲಿ ಸಿಲುಕಿ ನ್ಯಾಯಾಲಯಕ್ಕೆ ಅಲೆದಾಡುತ್ತಿರುವುದನ್ನು ಗುರ್ತಿಸಬಹುದಾಗಿದೆ. ಒಟ್ಟಾರೆ ಹೇಳಬೇಕೆಂದರೆ, ಬಹುತೇಕ ರಾಜಕಾರಣಿಗಳು ಭ್ರಷ್ಟರಾಗಿದ್ದಾರೆ. ಇಂದಿನ ರಾಜಕಾರಣಿಗಳಿಗೆ ದೇಶದ ಪ್ರಗತಿ ಮತ್ತು ಸಾರ್ವಜನಿಕ ಹಿತಾಸಕ್ತಿಗಿಂತ ಸ್ವ ಹಿತಾಸಕ್ತಿ, ಕೌಟುಂಬಿಕ ಹಿತಾಸಕ್ತಿ, ಜಾತಿ ಧರ್ಮದ ಹಿತಾಸಕ್ತಿಗಳೇ ಮುಖ್ಯವಾಗಿವೆ. ಹೀಗಾಗಿ ರಾಜಕಾರಣಿಗಳು ಹಾಗೂ ಇಲಾಖಾ ನೌಕರರು ಭ್ರಷ್ಟಾಚಾರದ ಕೂಪಗಳಾಗಿದ್ದಾರೆ. ಈ ಎಲ್ಲ ಕಾರಣಗಳಿಂದ ಉತ್ತಮ ಆಡಳಿತ ಸಾಮಾನ್ಯ ಜನರಿಗೆ ದೊರಕುತ್ತಿಲ್ಲ.

ವಿಶ್ವವ್ಯಾಪಿಯಾಗಿ ಹರಡಿರುವ ಭ್ರಷ್ಟಾಚಾರದ ಪಿಡುಗನ್ನು ನಿವಾರಿಸುವುದು ಇಂದು ಪ್ರತಿಯೊಂದು ರಾಷ್ಟ್ರದ ಕಾರ್ಯಸೂಚಿಯಾಗಿದೆ. ವಿಶ್ವಸಂಸ್ಥೆಯು ತನ್ನ ಸಾಮಾನ್ಯ ಸಭೆಯಲ್ಲಿ ನಿರ್ಣಯ ಸಂಖ್ಯೆ ೫೮/೪ ದಿನಾಂಕ ೩೧.೩.೨೦೦೩ರ ಪ್ರಕಾರ ಡಿಸೆಂಬರ್ ೯ನ್ನು **ಅಂತಾರಾಷ್ಟ್ರೀಯ ಭ್ರಷ್ಟಾಚಾರ ನಿರ್ಮೂಲನಾ ದಿನವನ್ನಾಗಿ** ಘೋಷಿಸಿದೆ. ಈ ನಿಟ್ಟಿನಲ್ಲಿ ಆಯಾ ರಾಷ್ಟ್ರಗಳು ತಮ್ಮಲ್ಲಿನ ಭ್ರಷ್ಟಾಚಾರವನ್ನು ನಿಗ್ರಹಿಸಲು ತಮ್ಮದೇಯಾದ ಮಾದರಿಯ ತಂತ್ರೋಪಾಯಗಳನ್ನು, ಭ್ರಷ್ಟಾಚಾರ ನಿರೋಧಕ ಸಂಸ್ಥೆಗಳನ್ನು ಸ್ಥಾಪಿಸಿಕೊಂಡಿವೆ. ಭಾರತವು ಕೂಡ ಈ ಅನಿಷ್ಟ ನಿವಾರಣೆಗಾಗಿ ಹಲವು ಕಾನೂನು ಕಾಯ್ದೆಗಳನ್ನು ರೂಪಿಸಿದೆ. ಅದನ್ನು ಈ ಕೆಳಗೆ ವಿಮರ್ಶಿಸಲಾಗಿದೆ.

ಭಾರತ ದಂಡ ಸಂಹಿತೆ ೧೯೪೭, ಭಾರತೀಯ ಅಪರಾಧ ಪ್ರಕ್ರಿಯಾ ಸಂಹಿತೆ ೧೯೫೨, ಅಪರಾಧ ಕಾನೂನು ಕಾಯ್ದೆ ೧೯೬೭ ಮತ್ತು ೧೯೮೮ರ ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆಗಳಲ್ಲಿ ಭ್ರಷ್ಟಾಚಾರ ನಿವಾರಿಸುವ ಬಗ್ಗೆ ದಂಡೋಪಾಯಗಳನ್ನು ಹೇಳಲಾಗಿದೆ. ಅಪರಾಧ ಪ್ರಕ್ರಿಯಾ ಸಂಹಿತೆಯ ಪ್ರಕಾರ 'ಸಾರ್ವಜನಿಕ ಸೇವಕರಿಗೆ ಸಂಬಂಧಿಸಿದ ಅಪರಾಧಗಳು ಗಮನಿಸಬಹುದಾದುವಲ್ಲ ಎಂದು ಪರಿಗಣಿಸಿತ್ತು. ೧೯೪೭ರ ಕಾಯಿದೆಯು ಅಪರಾಧಿಯ ಮೇಲಿನ ಆಪಾದನೆಗಳನ್ನು ನ್ಯಾಯಾಲಯಗಳು ಪರಾಮರ್ಶಿಸುವುದು ಕಡ್ಡಾಯವಾಯಿತು. ೧೯೮೮ರ ಕಾಯ್ದೆಯು ಲಂಚ, ಹಣದ ದುರುಪಯೋಗ, ಧನಾನುಕೂಲ ಪಡೆಯುವುದು, ಆದಾಯಕ್ಕಿಂತ ಅಧಿಕ ಆಸ್ತಿ, ಸಂಪತ್ತನ್ನು ಹೊಂದಿರುವುದು ಮತ್ತು ಅಧಿಕಾರ ಸ್ಥಾನದ ದುರುಪಯೋಗ, ಇವುಗಳನ್ನು ಭ್ರಷ್ಟ ಕ್ರಿಯೆಗಳೆಂದು ಪ್ರಕಟಿಸಿದೆ. ತಪ್ಪಿತಸ್ಥ ಸಾರ್ವಜನಿಕ ನೌಕರರ ವಿರುದ್ಧ ಖಟ್ಲೆ ಹೂಡುವ ಅಧಿಕಾರವನ್ನು ಇಲಾಖಾಧಿಕಾರಿಗಳಿಗೆ ವಹಿಸಿದೆ.

೧೯೮೮ರ ಭ್ರಷ್ಟಾಚಾರ ನಿರ್ಮೂಲನ ಕಾಯ್ದೆ ಎಂದರೆ Prevention of Corruption Act ಹಿಂದಿನ ಭ್ರಷ್ಟಾಚಾರ ನಿವಾರಕ ಕಾಯ್ದೆಗಳಿಗೆ ಅನೇಕ ತಿದ್ದುಪಡಿಗಳನ್ನು ತಂದಿತು. ಇದು 'ಸಾರ್ವಜನಿಕ ಸೇವಕರು' ಎಂಬ ಪರಿಕಲ್ಪನೆಗೆ ವಿಶಾಲವಾದ ಅರ್ಥ ನೀಡಿ, ಕೇಂದ್ರ ಸರ್ಕಾರ ಮತ್ತು ಕೇಂದ್ರಾಡಳಿತ ಪ್ರದೇಶಗಳ ಸರ್ಕಾರಿ ನೌಕರರನ್ನೊಳಗೊಂಡು, ಸಾರ್ವಜನಿಕ ಉದ್ಯಮಗಳ, ರಾಷ್ಟ್ರೀಕೃತ ಬ್ಯಾಂಕುಗಳ, ಅನುದಾನ ಪಡೆಯುವ ಸಂಸ್ಥೆ ಅಥವಾ ಇಲಾಖೆಗಳ ನೌಕರರು ಮತ್ತು ಸಹಕಾರಿ ಸಂಘದ

ಪದಾಧಿಕಾರಿಗಳನ್ನು ಸೇರಿಸಿದೆ. ವಿಶ್ವ ವಿದ್ಯಾನಿಲಯಗಳ ಕುಲಪತಿಗಳು, ಪ್ರಾಧ್ಯಾಪಕರು, ವಿಜ್ಞಾನಿಗಳನ್ನು ಕೂಡ ಇದರಲ್ಲಿ ಒಳಪಡಿಸಲಾಗಿದೆ.

೧೯೮೮ರ ಭ್ರಷ್ಟಾಚಾರ ನಿರ್ಮೂಲನ ಕಾಯ್ದೆಯು ಜಮ್ಮು ಕಾಶ್ಮೀರ ರಾಜ್ಯವನ್ನುಳಿದು ಉಳಿದ ಎಲ್ಲಾ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೂ, ಭಾರತೀಯರು ಹಾಗೂ ಅನಿವಾಸಿ ಭಾರತೀಯರಿಗೂ ಅನ್ವಯವಾಗುತ್ತದೆ. ಭ್ರಷ್ಟಾಚಾರ ಆರೋಪ ಸಾಭೀತಾದ ತಪ್ಪಿತಸ್ಥ ಸಾರ್ವಜನಿಕ ಸೇವಕರಿಗೆ ಕನಿಷ್ಠ ೬ ತಿಂಗಳಿನಿಂದ ೨ ವರ್ಷ ಸಜೆ ಅಥವಾ ದಂಡ ಅಥವಾ ಸಜೆ ಮತ್ತು ದಂಡ ಎರಡು ಶಿಕ್ಷೆಯನ್ನು ವಿಧಿಸಲು ಅವಕಾಶವಿದೆ. ಭ್ರಷ್ಟಾಚಾರವನ್ನು ಪದೇ ಪದೇ ಎಸಗಿದ ಅಪರಾಧಿಗಳಿಗೆ ಕನಿಷ್ಠ ೨ ವರ್ಷದಿಂದ ಗರಿಷ್ಠ ೭ ವರ್ಷ ಸಜೆ ಮತ್ತು ದಂಡವನ್ನು ವಿಧಿಸಲಾಗುವುದು. ಈ ಕಾಯ್ದೆಯು ಈ ಕೆಳಕಂಡ ಕ್ರಿಯೆಗಳಿಗೊಳಗಾದ ಸಾರ್ವಜನಿಕ ಸೇವಕರನ್ನು ಭ್ರಷ್ಟ ಎಂದು ಪರಿಗಣಿಸುತ್ತದೆ. ಭಾರತ ದಂಡ ಸಂಹಿತೆಯ ೧೬೧ನೆಯ ವಿಧಿ ಪ್ರಕಾರ

೧. ಸಾರ್ವಜನಿಕ ನೌಕರನು ತಾನಾಗಲಿ ಅಥವಾ ತನ್ನವರ ಮೂಲಕವಾಗಲಿ ಯಾವುದೇ ರೀತಿಯಲ್ಲಿ ಲಂಚವನ್ನು ಪಡೆದಲ್ಲಿ ಅಥವಾ ಪಡೆಯಲು ಒಪ್ಪಿದಲ್ಲಿ,

೨. ಸಾರ್ವಜನಿಕ ನೌಕರನು ತಾನಾಗಲಿ ಅಥವಾ ತನ್ನವರ ಮೂಲಕವಾಗಲಿ ಸಕಾರಣವಿಲ್ಲದೆ ಬೆಲೆ ಬಾಳುವ ವಸ್ತುಗಳನ್ನು ಪಡೆದಲ್ಲಿ,

೩. ಸಾರ್ವಜನಿಕ ಸೇವಕನು ತನ್ನ ವಶಕ್ಕೆ ವಹಿಸಿರುವ ಅಥವಾ ತನ್ನ ಅಧೀನದಲ್ಲಿರುವ ಸಾರ್ವಜನಿಕ ಆಸ್ತಿ ಅಥವಾ ಹಣವನ್ನು ಅಪ್ರಾಮಾಣಿಕವಾಗಿ ಅಥವಾ ಅನೀತಿಯುತವಾಗಿ ದುರುಪಯೋಗಪಡಿಸಿಕೊಂಡಲ್ಲಿ,

೪. ಸಾರ್ವಜನಿಕ ಸೇವಕನು ಕಾನೂನು ಬಾಹಿರವಾಗಿ ಅಥವಾ ಭ್ರಷ್ಟ ಮಾರ್ಗದಲ್ಲಿ ತಾನಾಗಲೀ ಅಥವಾ ತನ್ನವರ ಮೂಲಕವಾಗಲೀ ಯಾವುದೇ ಬೆಲೆ ಬಾಳುವ ವಸ್ತು ಅಥವಾ ಧನಲಾಭವನ್ನು ಪಡೆದಾಗ,

೫. ಸಾರ್ವಜನಿಕ ಸೇವಕನು ತನ್ನ ಆದಾಯಕ್ಕಿಂತ ಹೆಚ್ಚಿನ ಆಸ್ತಿ ಅಥವಾ ಸಂಪತ್ತನ್ನು ಹೊಂದಿದ್ದರೆ. ಅಂತಹವನನ್ನು ಭ್ರಷ್ಟ ಎಂದು ಪರಿಗಣಿಸಲಾಗುತ್ತದೆ.

ಭ್ರಷ್ಟಾಚಾರದಿಂದಾಗಿ ಭಾರತದಲ್ಲಿ ಉತ್ತಮ ಆಡಳಿತ ಕೊಡಲಾಗುತ್ತಿಲ್ಲ ಎಂದು ಭಾವಿಸಿ ೧೯೬೨ರಲ್ಲಿ ಶ್ರೀ ಕೆ. ಸಂತಾನಂ ಅವರ ಅಧ್ಯಕ್ಷತೆಯಲ್ಲಿ 'ಭ್ರಷ್ಟಾಚಾರ ಪ್ರತಿಬಂಧಕ ಸಮಿತಿಯನ್ನು' ನೇಮಿಸಲಾಯಿತು. ಈ ಸಮಿತಿಯು ತನ್ನ ವರದಿಯನ್ನು ೧೯೬೪ರಲ್ಲಿ ಸರ್ಕಾರಕ್ಕೆ ಸಲ್ಲಿಸಿತು. ಈ ಸಮಿತಿ ಮಾಡಿದ ಪ್ರಮುಖ ಶಿಫಾರಸ್ಸುಗಳಿಂತಿವೆ. ಪ್ರತಿ ಸಚಿವಾಲಯ, ಉದ್ಯಮ ಅಥವಾ ಇಲಾಖೆಗೆ

ಸಂಬಂಧಿಸಿದಂತೆ ಭ್ರಷ್ಟಾಚಾರದ ಪ್ರಮಾಣ, ವ್ಯಾಪ್ತಿ ಮತ್ತು ಅದರ ಅನುಸಾರ ಮಾರ್ಗಗಳು, ಪ್ರತಿಬಂಧಕ ಕ್ರಮಗಳ ಬಗ್ಗೆ ಕೂಲಂಕುಷ ಅಧ್ಯಯನ ನಡೆಸುವುದಲ್ಲದೇ ಭ್ರಷ್ಟಾಚಾರಕ್ಕೆ ಮೂಲ ಕಾರಣವಾದ ಆಡಳಿತ ನಿಧಾನಗತಿಯನ್ನು ತೊಡೆದುಹಾಕಿ ಉತ್ತಮ ಆಡಳಿತ ಕಲ್ಪಿಸಲು ಈ ಕೆಳಗಿನ ಕ್ರಮಗಳನ್ನು ಸೂಚಿಸಿತು,

೧. ಆಡಳಿತ ಕೆಲಸ ನಿಧಾನವಾಗಲು ಕಾರಣವಾದ ಇಲಾಖಾ ವಿಧಿ ವಿಧಾನ ಮತ್ತು ಪ್ರಕ್ರಿಯೆಗಳ ಪುನರ್ ಪರಿಶೀಲನೆ,

೨. ಪಡೆದ ಪ್ರಸ್ತಾವನೆ, ಮನವಿ, ಅಹವಾಲುಗಳ ವಿತರಣೆಗೆ ಕಾಲಮಿತಿ ನಿಗದಿಪಡಿಸುವುದು,

೩. ಕೆಳಮಟ್ಟದ ಟಿಪ್ಪಣಿಗಳ ಅವಶ್ಯಕತೆಯನ್ನು ನಿವಾರಿಸುವುದು,

೪. ನಿರ್ಧಾರ ತೆಗೆದುಕೊಳ್ಳುವ ಹಂತಗಳನ್ನು ಮತ್ತು ನಿಧಾನಗತಿಯನ್ನು ಕಡಿಮೆ ಗೊಳಿಸುವುದು,

೫. ಸಾರ್ವಜನಿಕರಿಗೆ ಅವರ ಹಕ್ಕು ಬಾಧ್ಯತೆಗಳ, ಸರ್ಕಾರಿ ಕೆಲಸದ ವಿಧಿ ವಿಧಾನಗಳ ಬಗ್ಗೆ ಅರಿವನ್ನುಂಟುಮಾಡುವ ಮತ್ತು ಕಛೇರಿಗಳಿಗೆ ಮುಕ್ತ ಪ್ರವೇಶ ಹಾಗೂ ಕಡತಗಳ ವೀಕ್ಷಣೆಗೆ ಹಾಗೂ ಮಾಹಿತಿ ಪಡೆಯುವ ವ್ಯವಸ್ಥೆಯನ್ನು ಮಾಡುವುದು.

೬. ಸಾರ್ವಜನಿಕ ಸೇವಕರ ವೇತನ, ಸಾರಿಗೆ, ವಸತಿ ಮತ್ತಿತರೆ ಸವಲತ್ತುಗಳ ವಿಸ್ತರಣೆ.

೭. ಆರ್ಥಿಕ ವ್ಯವಹಾರ, ಅನುದಾನ ನೀಡಿಕೆ, ಇಲಾಖೆಗಳ ಸಿಬ್ಬಂದಿಗಳಿಗೆ ನೀತಿ ಸಂಹಿತೆಯನ್ನು ರೂಪಿಸಿ ಪ್ರಾಮಾಣಿಕವಾಗಿ ಜನಕಲ್ಯಾಣ ಕೆಲಸಗಳ ಅನುಷ್ಠಾನದ ಕಡೆ ಗಮನಹರಿಸುವಂತೆ ಮಾಡುವುದು,

೮. ಕಂಪನಿಗಳು ಮತ್ತು ವ್ಯಾಪಾರೋದ್ಯಮಿಗಳು ತಮ್ಮ ಹಣಕಾಸಿನ, ಉತ್ಪಾದನೆ ವಿತರಣೆಯ ಬಗ್ಗೆ ಕರಾರುವಕ್ಕಾದ ಲೆಕ್ಕವಿಡುವಂತಾಗುವುದು,

೯. ಆಡಳಿತಾಧಿಕಾರಿ ಹುದ್ದೆಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ಜಾತಿ, ಧರ್ಮ, ಹಣ, ಶಿಫಾರಸ್ಸುಗಳಿಗೆ ಅವಕಾಶ ಕೊಡದಂತೆ, ಕೇವಲ ಅರ್ಹತೆ, ಸಾಮರ್ಥ್ಯ ಮತ್ತು ಪ್ರಾಮಾಣಿಕತೆಯ ಆಧಾರದ ಮೇಲೆ ನೇಮಕಾತಿ ನಡೆಸುವುದು.

೧೦. ಸಾರ್ವಜನಿಕ ಸೇವಕರು ತಮ್ಮ ಅಧಿಕಾರ ಸ್ಥಾನ ದುರುಪಯೋಗಗೊಳ್ಳುವ ಸಂಭವವಿರುವ ಸಭೆ ಸಮಾರಂಭಗಳಲ್ಲಿ, ಔತಣಕೂಟಗಳಲ್ಲಿ ಭಾಗವಹಿಸದೇ ಇರುವುದು.

ಮೇಲ್ಕಂಡಂತೆ ಭ್ರಷ್ಟಾಚಾರ ಪ್ರತಿಬಂಧಕ ಸಮಿತಿಯು ಭ್ರಷ್ಟಾಚಾರ ನಿಯಂತ್ರಣಕ್ಕೆ ಸಂಬಂಧಿಸಿದಂತೆ ಪ್ರಮುಖ ಶಿಫಾರಸ್ಸುಗಳನ್ನು ನೀಡಿದೆ. ಅಲ್ಲದೆ ಈ ಸಮಿತಿಯ ಶಿಫಾರಸ್ಸಿನ ಆಧಾರದ ಮೇಲೆ

೧೯೬೪ರಲ್ಲಿ 'ಕೇಂದ್ರ ಜಾಗೃತ ಆಯೋಗವನ್ನು' ಸ್ಥಾಪಿಸಲಾಯಿತು. ಇಷ್ಟಾದರೂ ಸಾರ್ವಜನಿಕರಂಗದ ಭ್ರಷ್ಟಾಚಾರ ಸಮಾಜಕ್ಕಂಟಿರುವ ಬಲು ದೊಡ್ಡ ಅನಿಷ್ಟ. ಈ ಅನಿಷ್ಟ ವಿಶ್ವವ್ಯಾಪಿಯೂ ಹೌದು. ೨೦೧೨ರಲ್ಲಿ ೧೮೮ ದೇಶಗಳ ಸಾರ್ವಜನಿಕ ರಂಗದ ಭ್ರಷ್ಟಾಚಾರದ ಕುರಿತು 'ಟ್ರಾನ್ಸ್‌ಫರೆನ್ಸಿ ಇಂಟರ್‌ನ್ಯಾಷನಲ್' ಸಂಸ್ಥೆ ಸಮೀಕ್ಷೆ ನಡೆಸಿದಾಗ ಸೂಚ್ಯಂಕ ಪಟ್ಟಿಯಲ್ಲಿ ಭಾರತ ೩.೧ ಅಂಕ ಗಳಿಸಿ ೯೪ನೆಯ ಸ್ಥಾನಕ್ಕೇರಿ ಕುಳಿತಿದೆ. ಕಳೆದ ಬಾರಿ ಭಾರತದ ಸ್ಥಾನ ೮೭ ಇತ್ತು. ಅಂದರೆ ೨ಜಿ ಹಗರಣ ಹಾಗೂ ಕಾಮನವೆಲ್ತ್ ಕ್ರೀಡಾಕೂಟದ ಹಗರಣದಿಂದ ಭಾರತ ಭ್ರಷ್ಟಾಚಾರದಲ್ಲಿ ೮ ಸ್ಥಾನ ಮೇಲೇರಿ ಕುಳಿತಿರುವುದು ಅಂತಾರಾಷ್ಟ್ರೀಯ ಮಟ್ಟದಲ್ಲಿ ತಲೆತಗ್ಗಿಸುವಂತಾಗಿದೆ. ಈ ರೀತಿ ಮೇಲಿಂದ ಕೆಳಮುಖವಾಗಿ ೧೮೪ರಿಂದ ೧೭೪ರವರೆಗಿನ ಪಟ್ಟಿಯಲ್ಲಿ ಸ್ಥಾನ ಪಡೆಯುವುದು ತೀರಾ ಅವಮಾನಕರ ಎಂದೇ ಭಾವಿಸಲಾಗುತ್ತಿದೆ. ಭಾರತದಲ್ಲಿ ಶೇಕಡ ೪೫ರಷ್ಟು ಜನ ತಮ್ಮ ಕೆಲಸ ಕಾರ್ಯಗಳಿಗೆ ಲಂಚ ನೀಡುತ್ತಾರೆ ಎಂಬ ಆಘಾತಕಾರಿ ವಿಷಯವನ್ನು ಮೇಲೆ ಉಲ್ಲೇಖಿಸಿದ 'ಟ್ರಾನ್ಸ್‌ಪೆರೆನ್ಸಿ ಇಂಟರ್ ನ್ಯಾಷನಲ್ ಸಂಸ್ಥೆ' ತನ್ನ ವರದಿಯಲ್ಲಿ ಪ್ರಕಟಿಸಿದೆ.

ಲೋಕಾಯುಕ್ತದ ಪರಿಕಲ್ಪನೆ

ವೈಜ್ಞಾನಿಕ ದೃಷ್ಟಿಕೋನದಿಂದ ಹೇಳುವುದಾದರೆ ರಾಜ್ಯ ಮಟ್ಟದ ಲೋಕಾಯುಕ್ತಕ್ಕೆ ಹಾಗೂ ಕೇಂದ್ರಮಟ್ಟದ ಲೋಕಪಾಲ್‌ಗೆ ಮೂಲಪ್ರೇರಣೆ ಎಂದರೆ ೧೮೮೯ರಲ್ಲಿ ಸ್ವೀಡನ್ ರಾಷ್ಟ್ರ ಪರಿಚಯಿಸಿದ ಓಂಬುಡ್ಸ್‌ಮನ್! ಓಂಬುಡ್ಸ್‌ಮನ್ ಸಂಸ್ಥೆಯು ಜಾಗತಿಕ ಮಟ್ಟದಲ್ಲಿ ವಿಖ್ಯಾತವಾಗಿದ್ದರಿಂದ ಪ್ರಪಂಚದ ಬಹುತೇಕ ರಾಷ್ಟ್ರಗಳು ಸ್ವೀಡನ್ ಮಾದರಿಯ ಸಂಸ್ಥೆಯನ್ನು ತಮ್ಮಲ್ಲಿ ಅಳವಡಿಸಿಕೊಳ್ಳುವ ಪ್ರಯತ್ನವನ್ನು ಮಾಡಿವೆ. ಓಂಬುಡ್ಸ್‌ಮನ್ ಜನರ ಕುಂದುಕೊರತೆಗಳನ್ನು ನಿವಾರಿಸುವಲ್ಲಿ ಹಾಗೂ ಭ್ರಷ್ಟಾಚಾರವನ್ನು ನಿಯಂತ್ರಣ ಮಾಡುವಲ್ಲಿ ಪ್ರಮುಖ ಪಾತ್ರವಹಿಸುತ್ತಿರುವ ಸಂಸ್ಥೆಯಾಗಿದೆ. ಜಾನ್ ವ್ಯಾಟ್‌ರವರ ವರದಿ ೧೯೬೧ರಲ್ಲಿ ಪ್ರಕಟಗೊಂಡ ನಂತರ ಭಾರತದಲ್ಲಿ ಓಂಬುಡ್ಸ್‌ಮನ್ ಮಾದರಿಯ ಸಂಸ್ಥೆಯ ಸ್ಥಾಪನೆಯ ಅಗತ್ಯತೆ ಕುರಿತು ಜಾಗೃತಿ ಮೂಡಲು ಪ್ರಾರಂಭವಾಯಿತು. ೧೯೬೨ರಲ್ಲಿ ಜರುಗಿದ ೩ನೆಯ ಅಖಿಲ ಭಾರತ ವಕೀಲರ ಸಮ್ಮೇಳನದಲ್ಲಿ ಪ್ರಖ್ಯಾತ ನ್ಯಾಯಶಾಸ್ತ್ರಜ್ಞ ಹಾಗೂ ಭಾರತದ ಮಾಜಿ ಅಟಾರ್ನಿ ಜನರಲ್ ಎಂ.ಸಿ. ಸೆತಲ್ವಾಡ್‌ರವರು ಮಾಡಿದ ಉದ್ಘಾಟನಾ ಭಾಷಣವು ಭಾರತದಲ್ಲಿ ಓಂಬುಡ್ಸ್‌ಮನ್ ಅಗತ್ಯತೆ ಬಗ್ಗೆ ಹಾಗೂ ಇದರ ಸ್ಥಾಪನೆ ಬಗ್ಗೆ ಸರ್ಕಾರಕ್ಕೆ ಪ್ರೇರಣೆ ನೀಡಿತು. ಜುಲೈ ೧೧, ೧೯೫೯ರಲ್ಲಿ ಮದ್ರಾಸಿನಲ್ಲಿ ಜರುಗಿದ ಸಮ್ಮೇಳನದಲ್ಲಿ, ಯು.ಜಿ.ಸಿ. ಯ ಛೇರ್‌ಮನ್ ಹಾಗೂ ಮಾಜಿ ಹಣಕಾಸು ಸಚಿವರಾದ ಶ್ರೀ ಸಿ.ಬಿ. ದೇಶಮುಖ್‌ರವರು ತಮ್ಮ ಭಾಷಣದಲ್ಲಿ ಭ್ರಷ್ಟಾಚಾರ ನಿಯಂತ್ರಣದ ಅಗತ್ಯತೆ, ಅನಿವಾರ್ಯತೆ ಹಾಗೂ ಈ ನಿಟ್ಟಿನಲ್ಲಿ ಓಂಬುಡ್ಸ್‌ಮನ್ ಮಾದರಿಯ ಸಂಸ್ಥೆಯನ್ನು ಸ್ಥಾಪಿಸಬೇಕೆಂಬ ತಮ್ಮ ನಿಲುವನ್ನು ವ್ಯಕ್ತಪಡಿಸಿದರು.

ಓಂಬುಡ್ಸ್‌ಮನ್ ಮಾದರಿಯ ಸಂಸ್ಥೆಯ ಸ್ಥಾಪನೆ ಬಗ್ಗೆ ಅರಿವು ಹಾಗೂ ಬೇಡಿಕೆ ಮಂಡಿಸಿದ ಮತ್ತೊಂದು ಪ್ರಮುಖ ಸಂದರ್ಭ ೧೫ ಜುಲೈ, ೧೯೬೫ರಲ್ಲಿ ನವದೆಹಲಿಯಲ್ಲಿ ನಡೆದ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಪಬ್ಲಿಕ್ ಅಡ್ಮಿನಿಸ್ಟ್ರೇಷನ್‌ನ ಘಟಿಕೋತ್ಸವ ಸಮಾರಂಭ, ಈ ಸಂದರ್ಭದಲ್ಲಿ ಸುಪ್ರೀಂ ಕೋರ್ಟಿನ ಮುಖ್ಯ ನ್ಯಾಯಮೂರ್ತಿಗಳಾಗಿದ್ದ ಪಿ.ಬಿ. ಗಜೇಂದ್ರಗಡ್ಕರ್‌ರವರು ಜನರಲ್ಲಿ ತಮ್ಮ ಕುಂದುಕೊರತೆಗಳನ್ನು ಆಲಿಸುವ ಹಾಗೂ ಅವುಗಳನ್ನು ಬಗೆಹರಿಸುವ, ಸರ್ಕಾರಿ ಆಡಳಿತವು ಸರಿಯಾದ ಮಾರ್ಗದಲ್ಲಿ ನಡೆಯುವಂತೆ ಮಾಡುವ ಹಾಗೂ ಆಡಳಿತ ಯಂತ್ರದ ಮೇಲೆ ನಿಗಾ ಇಡುವ ಓಂಬುಡ್ಸ್‌ಮನ್ ಮಾದರಿಯ ಒಂದು ಸ್ವತಂತ್ರ ಸಂಸ್ಥೆಯ ಅಗತ್ಯತೆ ಭಾರತಕ್ಕಿದೆ ಎಂಬುದಾಗಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿ ಇಂತಹ ಒಂದು ಸಂಸ್ಥೆಯನ್ನು ಜಾರಿಗೊಳಿಸಬೇಕೆಂದು ಆಗ್ರಹಿಸಿದರು. ಭಾರತದ ಸಂಸತ್ತಿನಲ್ಲಿ ಓಂಬುಡ್ಸ್‌ಮನ್ ಮಾದರಿ ಸಂಸ್ಥೆಯ ಸ್ಥಾಪನೆ ಬಗ್ಗೆ ಪ್ರಥಮ ಬಾರಿಗೆ ಪ್ರಶ್ನೆ ಅಥವಾ ಬೇಡಿಕೆ ಉದ್ಭವಿಸಿದ್ದು ೦೩ ಏಪ್ರಿಲ್, ೧೯೬೩ರಲ್ಲಿ. ಭಾರತದ ಪ್ರಖ್ಯಾತ ನ್ಯಾಯಶಾಸ್ತ್ರಜ್ಞರಾದ ಎಲ್.ಎಂ. ಸಿಂಘ್ವಿರವರು ಕಾನೂನು ಇಲಾಖೆಗೆ ಸಂಬಂಧಿಸಿದ ಅನುದಾನಗಳ ವಿಷಯದ ಬಗ್ಗೆ ಚರ್ಚೆ ನಡೆಸುವ ಸಂದರ್ಭದಲ್ಲಿ, ನಿರ್ದಿಷ್ಟ ಆಡಳಿತಾತ್ಮಕ ವಿಷಯಗಳಲ್ಲಿ ಸಂಭವಿಸುವ ಕಾನೂನು ಬಾಹಿರ ಹಾಗೂ ಅನ್ಯಾಯದ ಕೃತ್ಯಗಳ ಬಗ್ಗೆ ತನಿಖೆ ನಡೆಸಲು ಒಂದು ಸ್ವತಂತ್ರ ಸಂಸ್ಥೆಯ ಅಗತ್ಯತೆ ಇದೆ. ಈ ನಿಟ್ಟಿನಲ್ಲಿ ಸರ್ಕಾರ ಪ್ರಯತ್ನ ನಡೆಸಬೇಕು ಎಂಬ ಬೇಡಿಕೆಯನ್ನು ಸಂಸತ್ತಿನಲ್ಲಿ ಅವರು ಮಂಡಿಸಿದರು. ಈ ವಿಷಯಕ್ಕೆ ಪ್ರತ್ಯುತ್ತರವಾಗಿ ಅಂದಿನ ಕಾನೂನು ಸಚಿವರಾಗಿದ್ದ ಶ್ರೀ ಎ.ಕೆ. ಸೇನ್‌ರವರು, ಓಂಬುಡ್ಸ್‌ಮನ್ ಮಾದರಿಯ ಸಂಸ್ಥೆಯ ಸ್ಥಾಪನೆ ಬಗ್ಗೆ ಸೂಕ್ತ ಅಧ್ಯಯನ ನಡೆಸಲಾಗುವುದು ಎಂಬ ಭರವಸೆಯನ್ನು ನೀಡಿದರು.

ಓಂಬುಡ್ಸ್‌ಮನ್ ಮಾದರಿಯ ಸಂಸ್ಥೆಯ ಸ್ಥಾಪನೆಗಾಗಿ ಹಲವಾರು ರಾಜ್ಯಗಳೂ ಸಹ ತಮ್ಮಲ್ಲಿ ಪ್ರಯತ್ನ ನಡೆಸಿರುವುದನ್ನು ಕಾಣಬಹುದು, ಅವುಗಳಲ್ಲಿ ಪ್ರಮುಖವಾದ ರಾಜ್ಯವೆಂದರೆ ರಾಜಸ್ಥಾನ. ಸೆಪ್ಟಂಬರ್ ೧೯೬೩ರಲ್ಲಿ ಆಡಳಿತ ಸುಧಾರಣೆಗಾಗಿ ಸಲಹೆ ನೀಡಲು ಹಾಗೂ ಅಧ್ಯಯನ ನಡೆಸಲು ಶ್ರೀ ಹೆಚ್.ಸಿ. ಮಾಥುರ್‌ರವರ ನೇತೃತ್ವದಲ್ಲಿ ೮ ಜನ ಸದಸ್ಯರನ್ನೊಳಗೊಂಡ ಒಂದು ಆಡಳಿತ ಸುಧಾರಣಾ ಸಮಿತಿಯನ್ನು ನೇಮಿಸಿತು. ಈ ಸಮಿತಿಯು ತನ್ನ ವರದಿಯಲ್ಲಿ ರಾಜ್ಯದ ಮಂತ್ರಿಗಳನ್ನೊಳಗೊಂಡಂತೆ ಹಾಗೂ ಉನ್ನತ ಮಟ್ಟದ ಅಧಿಕಾರಿಗಳ ವಿರುದ್ಧ ಬರುವ ದೂರುಗಳನ್ನು ಸ್ವೀಕರಿಸಿ ವಿಚಾರಣೆ ಮಾಡಲು ಓಂಬುಡ್ಸ್‌ಮನ್ ಸಂಸ್ಥೆಯನ್ನು ಸ್ಥಾಪಿಸಬೇಕು ಅಥವಾ ದೂರುಗಳನ್ನು ಪರಿಶೀಲಿಸಿ ತನಿಖೆ ನಡೆಸಲು ಒಂದು 'ಕಮಿಷನರ್' ಹುದ್ದೆಯನ್ನು ರಚಿಸಬೇಕೆಂಬ ಶಿಫಾರಸ್ಸುಗಳನ್ನು ಮಾಡಿತು. ಇದೇ ಸಂದರ್ಭದಲ್ಲಿ ಕೆಲ ದಿನಗಳ ನಂತರ ೩, ನವೆಂಬರ್ ೧೯೬೩ರಲ್ಲಿ ಜೈಪುರದಲ್ಲಿ ನಡೆದ ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಸಮ್ಮೇಳನದಲ್ಲಿ ಭಾಗವಹಿಸಿದ್ದ ಭಾರತದ ಅಂದಿನ

ಪ್ರಧಾನ ಮಂತ್ರಿ ಪಂಡಿತ್ ಜವಾಹರಲಾಲ್ ನೆಹರೂರವರು ಓಂಬುಡ್ಸ್‌ಮನ್ ಸಂಸ್ಥೆಯ ಬಗ್ಗೆ ಆಕರ್ಷಿತಗೊಂಡು ಆಡಳಿತದಲ್ಲಿ ಭ್ರಷ್ಟಾಚಾರವನ್ನು ನಿಯಂತ್ರಣ ಮಾಡಲು ವ್ಯವಸ್ಥೆಯೊಂದನ್ನು ರೂಪಿಸಲು ಸೂಕ್ತ ಕ್ರಮಗಳನ್ನು ಕೈಗೊಳ್ಳುವುದಾಗಿ ತಮ್ಮ ಭಾಷಣದಲ್ಲಿ ಭರವಸೆ ನೀಡಿದರು.

೧೯೬೬ರಲ್ಲಿ ಪಂಜಾಬ ಸರ್ಕಾರವು ತನ್ನ ರಾಜ್ಯದ ಆಡಳಿತಾತ್ಮಕ ಭ್ರಷ್ಟಾಚಾರವನ್ನು, ಪ್ರಜೆಗಳ ಕುಂದುಕೊರತೆಗಳನ್ನು ನಿವಾರಣೆ ಮಾಡುವ ಉದ್ದೇಶದಿಂದ ಆಡಳಿತ ಸುಧಾರಣಾ ಆಯೋಗವನ್ನು ಸ್ಥಾಪಿಸಿತು. ೧೯೬೬ರಲ್ಲಿ ರಾಷ್ಟ್ರೀಯ ಮಟ್ಟದಲ್ಲೂ ಕೂಡ ಶ್ರೀ ಮುರಾರ್ಜಿ ದೇಸಾಯಿ ನೇತೃತ್ವದ ಆಡಳಿತ ಸುಧಾರಣಾ ಸಮಿತಿಯು, ನಾಗರಿಕರು ಸರ್ಕಾರಿ ಆಡಳಿತದಲ್ಲಿ ಎದುರಿಸುತ್ತಿರುವ ಸಮಸ್ಯೆ ಹಾಗೂ ಅದಕ್ಕೆ ಪರಿಹಾರ ಏನು ಎಂಬುದರ ಬಗ್ಗೆ ಅಧ್ಯಯನ ಮಾಡಿ ವರದಿ ನೀಡಿತು. ಈ ವರದಿಯಲ್ಲಿ ಕೇಂದ್ರದಲ್ಲಿ ಲೋಕಪಾಲ ಸಂಸ್ಥೆ ಹಾಗೂ ರಾಜ್ಯಗಳಲ್ಲಿ ಲೋಕಾಯುಕ್ತ ಸಂಸ್ಥೆಯ ರಚನೆಯ ಬಗ್ಗೆ ಉಲ್ಲೇಖಿಸಲಾಯ್ತು. ಇದರ ಮುಖ್ಯ ಉದ್ದೇಶ ಸಾರ್ವಜನಿಕ ಆಡಳಿತವು ಉತ್ತಮ ಹಾಗೂ ಭ್ರಷ್ಟಾಚಾರ ರಹಿತವಾಗಿರಬೇಕೆಂಬುದಾಗಿತ್ತು ಹಾಗೂ ಸರ್ಕಾರಿ ನೌಕರರಲ್ಲಿರುವ ಭ್ರಷ್ಟಾಚಾರ ನಿರ್ಮೂಲನೆ ಮಾಡಬೇಕೆಂಬ ಮಹಾದಾಸೆ ಹೊಂದಿತ್ತು. ಶ್ರೀ ಮುರಾರ್ಜಿ ದೇಸಾಯಿಯವರು ತಮ್ಮ ಮೊದಲನೆಯ ಆಡಳಿತ ಸುಧಾರಣಾ ಆಯೋಗದ ವರದಿಯಲ್ಲಿ ಸಾರ್ವಜನಿಕ ಕುಂದು ಕೊರತೆಗಳ ಹಾಗೂ ಸಮಸ್ಯೆಗಳ ನಿವಾರಣೆ ಎಂಬ ಶೀರ್ಷಿಕೆಯಲ್ಲಿ ಜನರ ಗೋಳು ನಿವಾರಣೆಗಾಗಿ ಲೋಕಪಾಲ ಹಾಗೂ ಲೋಕಾಯುಕ್ತ ಎಂಬ ಎರಡು ವಿಶೇಷ ಪ್ರಾಧಿಕಾರಗಳನ್ನು ಸ್ಥಾಪಿಸಲು ಶಿಫಾರಸ್ಸು ಮಾಡಿದರು.

ಕೇಂದ್ರ ಮಟ್ಟದಲ್ಲಿ ಲೋಕಪಾಲ ಸಂಸ್ಥೆ ರಚಿಸುವ ಉಲ್ಲೇಖವಿರುವ ಮಸೂದೆಯನ್ನು ಮೊದಲನೆಯ ಬಾರಿ ೧೯೬೮ರಲ್ಲಿಯ ಲೋಕಸಭೆಯಲ್ಲಿ ಮಂಡಿಸಲಾಯಿತು. ಬಳಿಕ ೧೯೭೧, ೧೯೭೭, ೧೯೮೫, ೧೯೮೯, ೧೯೯೬ ,೧೯೯೮, ೨೦೦೫, ೨೦೦೮ ಮತ್ತು ೨೦೧೧ರಲ್ಲಿ ಹೀಗೆ ಒಟ್ಟು ಹತ್ತು ಬಾರಿ ಲೋಕಸಭೆಯಲ್ಲಿ ಮಂಡನೆಯಾದರೂ ಒಂದಿಲ್ಲ ಒಂದು ಸದನವು ಒಂದಿಲ್ಲ ಒಂದು ಕಾರಣವೊಡ್ಡಿ ಈ ಮಸೂದೆಗೆ ಒಪ್ಪಿಗೆ ನೀಡಿರಲಿಲ್ಲ. ಕೊನೆಗೆ ಅಣ್ಣಾ ಹಜಾರೆಯವರ ಚಳವಳಿಯ ಹಿನ್ನೆಲೆಯಲ್ಲಿ ಅಂತಿಮವಾಗಿ ೨೦೧೩ರ ಡಿಸೆಂಬರ್‌ನಲ್ಲಿ ಲೋಕಪಾಲ ಮಸೂದೆಗೆ ಕೇಂದ್ರದ ಎರಡು ಸದನಗಳು ಒಪ್ಪಿಗೆ ನೀಡಿದವು. ಇದೀಗ ಲೋಕಪಾಲ ಕಾನೂನು ಅನುಷ್ಠಾನಗೊಳ್ಳುತ್ತಿದೆ.

ಲೋಕಾಯುಕ್ತದ ಅರ್ಥ

೧೯೬೩ರಲ್ಲಿ ಲೋಕಸಭೆಯಲ್ಲಿ ಗೊತ್ತುವಳಿ ನಿರ್ಣಯಕ್ಕೆ ಸಂಬಂಧಿಸಿದಂತೆ ಚರ್ಚೆ ನಡೆಸುವಾಗ 'ಲೋಕಾಯುಕ್ತ' ಎಂಬ ಪದವನ್ನು ಪ್ರಪ್ರಥಮವಾಗಿ ಡಾ. ಎಲ್.ಎಂ. ಸಿಂಘ್ವಿಯವರು 'ಪೀಪಲ್ಸ್

ಪ್ರಾಕ್ಯುರೇಟರ್' (People's Procurator) ಎಂಬ ಪದಕ್ಕೆ ಬದಲಾಗಿ ಭಾರತದ ವ್ಯವಸ್ಥೆಗೆ ಹೋಲಿಕೆಯಾಗುವಂತೆ 'ಲೋಕಾಯುಕ್ತ' ಎಂಬ ಪದವನ್ನು ಬಳಸಬೇಕು ಎಂದು ಹೇಳಿದರು. ಹೀಗಾಗಿ ಡಾ. ಎಲ್.ಎಂ. ಸಿಂಘ್ವಿಯವರಿಗೆ 'ಲೋಕಾಯುಕ್ತ' ಎಂಬ ಪದವನ್ನು ಹುಟ್ಟುಹಾಕಿದ ಕೀರ್ತಿ ಸಲ್ಲುತ್ತದೆ. ಲೋಕಾಯುಕ್ತ ಸೂಕ್ತವಾಗಿ ಬಳಕೆಯಾದರೆ ಭ್ರಷ್ಟಾಚಾರದ ವಿರುದ್ಧ ಸಮರ್ಥ ಆಯುಧ. ಆಡಳಿತ ಸುಧಾರಣೆ, ಕಲ್ಯಾಣ ಯೋಜನೆಗಳ ಫಲವನ್ನು ಜನರಿಗೆ ತಲುಪಿಸಲು ಈ ತೆರನ ಸಂಸ್ಥೆಯು ಕಾಲದ ಅಗತ್ಯವಿತ್ತು.

ಲೋಕಪಾಲ ವಿಧೇಯಕಕ್ಕೆ ವಿಘ್ನಗಳು ಬಂದೊದಿಗಿದಂತೆ ಲೋಕಾಯುಕ್ತ ರಚನೆಯ ವಿಷಯದಲ್ಲಿ ಕಂಟಕಗಳು ಬರದೇ ಇರುವುದೇ ಒಂದು ದೊಡ್ಡ ಸಮಾಧಾನ. ಭಾರತದ ಸಂವಿಧಾನಕ್ಕೆ ತಿದ್ದುಪಡಿ ತರುವ ಮೂಲಕ ಪ್ರತಿ ರಾಜ್ಯದಲ್ಲೂ ಲೋಕಾಯುಕ್ತ ಸಂಸ್ಥೆಗಳನ್ನು ಸ್ಥಾಪಿಸಲು ೧೯೬೬ರಲ್ಲಿಯೇ ಚಾಲನೆ ನೀಡಲಾಯ್ತು. ಈವರೆಗೆ ಹತ್ತೊಂಬತ್ತು ರಾಜ್ಯಗಳಲ್ಲಿ ಲೋಕಾಯುಕ್ತ ಕಾನೂನನ್ನು ಅಂಗೀಕರಿಸಲಾಗಿದೆ. ಇನ್ನೂ ಹತ್ತು ರಾಜ್ಯಗಳು ಈವರೆಗೂ ಕಾನೂನು ಜಾರಿಗೆ ತರುವ ಗೋಜಿಗೆ ಹೋಗಿಲ್ಲ. ಕಾನೂನು ಸ್ವೀಕರಿಸಿದ ಹತ್ತು ರಾಜ್ಯಗಳಲ್ಲಿ ಲೋಕಾಯುಕ್ತ ಪೂರ್ಣ ಪ್ರಮಾಣದಲ್ಲಿ ಕೆಲಸ ಮಾಡುತ್ತಿದೆ. ಅವುಗಳು ಯಾವುವು ಎಂದರೆ ಕರ್ನಾಟಕ, ದಿಲ್ಲಿ, ಗುಜರಾತ, ಹಿಮಾಚಲಪ್ರದೇಶ, ಬಿಹಾರ. ಉತ್ತರಪ್ರದೇಶ, ಉತ್ತರಾಖಂಡ, ಕೇರಳ, ಮಹಾರಾಷ್ಟ್ರ ಮತ್ತು ಆಂಧ್ರಪ್ರದೇಶ. ವಿಚಿತ್ರವೆಂದರೆ, ಆಸ್ಸಾಂ, ಜಾರ್ಖಂಡ, ಗೋವಾ, ಮಧ್ಯಪ್ರದೇಶ, ಒರಿಸ್ಸಾ, ಪಂಜಾಬ. ರಾಜಸ್ಥಾನ. ಛತ್ತೀಸಗಢ್, ಹರಿಯಾಣ ರಾಜ್ಯಗಳಲ್ಲಿ ಕಾಯ್ದೆ ಜಾರಿಯಲ್ಲಿದ್ದಾಗ್ಯೂ ಕೂಡ ಲೋಕಾಯುಕ್ತ ಪರಿಣಾಮಕಾರಿಯಾಗಿಲ್ಲ. ಅಷ್ಟೇ ಅಲ್ಲ ಆ ರಾಜ್ಯಗಳಲ್ಲಿ ಪ್ರತ್ಯೇಕ ಕಛೇರಿ ಕೂಡ ಒದಗಿಸಿಲ್ಲ. ದಿಲ್ಲಿಯಲ್ಲಿ ಲೋಕಾಯುಕ್ತವಿದ್ದರೂ ಪ್ರಭಾವಿ ಸಂಸ್ಥೆಯಾಗಿಲ್ಲ. ಕೇರಳದಲ್ಲಿ ದೂರುಗಳು ತುಂಬಾ ಸಣ್ಣ ಪ್ರಮಾಣದ್ದು. ಉತ್ತರಪ್ರದೇಶ, ಆಂಧ್ರಪ್ರದೇಶ, ಉತ್ತರಾಖಂಡ, ಹಿಮಾಚಲಪ್ರದೇಶದಲ್ಲಿ ಲೋಕಾಯುಕ್ತವಿದ್ದರೂ ಅದು ನಿಮಿತ್ತ್ಯ ಮಾತ್ರ, ಮಹಾರಾಷ್ಟ್ರದಲ್ಲಿರುವ ಲೋಕಾಯುಕ್ತಕ್ಕೆ ಮೂಲ ಸೌಕರ್ಯಗಳೇ ಕೊಟ್ಟಿಲ್ಲ. ಅಲ್ಲಿ ಸಣ್ಣ ಕೊಠಡಿಯಲ್ಲಿ ಲೋಕಾಯುಕ್ತ ಸಂಸ್ಥೆ ಕಾರ್ಯನಿರ್ವಹಿಸುತ್ತಿದ್ದು ತನಿಖಾ ವಿಭಾಗ, ಪೊಲೀಸ್ ವಿಭಾಗ ಯಾವುದೂ ಸಕ್ರಿಯವಾಗಿಲ್ಲ ಇಷ್ಟಾಗಿಯೂ ತಮಿಳುನಾಡು, ಪಶ್ಚಿಮ ಬಂಗಾಳ ಸೇರಿದಂತೆ ಭಾರತದ ಹತ್ತು ರಾಜ್ಯಗಳಲ್ಲಿ ಲೋಕಾಯುಕ್ತ ಕಾನೂನನ್ನು ಸ್ವೀಕರಿಸುವ ಗೋಜಿಗೆ ಹೋಗಿಲ್ಲ. ಅವುಗಳು ಯಾವುವೆಂದರೆ, ಜಮ್ಮು ಕಾಶ್ಮೀರ್, ಅರುಣಾಚಲಪ್ರದೇಶ, ಮಣಿಪುರ, ಮೇಘಾಲಯ, ಮಿಜೋರಾಂ, ನಾಗಾಲ್ಯಾಂಡ್, ಸಿಕ್ಕಿಂ ಹಾಗೂ ತ್ರಿಪುರಾ ರಾಜ್ಯಗಳು.

ಒರಿಸ್ಸಾ ೧೯೭೦ರಲ್ಲಿ ಲೋಕಾಯುಕ್ತ ವಿಧೇಯಕ ಮಂಡಿಸಿದ ಮೊದಲ ರಾಜ್ಯವೆನಿಸಿಕೊಂಡಿತು. ಮಹಾರಾಷ್ಟ್ರವು ೧೯೭೨ರಲ್ಲಿ ಲೋಕಾಯುಕ್ತ ಸಂಸ್ಥೆಯನ್ನು ಸ್ಥಾಪಿಸಿದ ಮೊದಲನೆಯ ರಾಜ್ಯ

ಎಂಬ ಕೀರ್ತಿಗೆ ಭಾಜನವಾಯ್ತು. ಆ ನಂತರ ೧೯೭೩ರಲ್ಲಿ ರಾಜಸ್ತಾನ್, ೧೯೭೪ರಲ್ಲಿ ಬಿಹಾರ್ ೧೯೭೭ರಲ್ಲಿ ಉತ್ತರ ಪ್ರದೇಶ, ೧೯೮೧ರಲ್ಲಿ ಮಧ್ಯ ಪ್ರದೇಶ, ೧೯೮೩ರಲ್ಲಿ ಹಿಮಾಚಲ ಪ್ರದೇಶ ಹಾಗೂ ಆಂಧ್ರಪ್ರದೇಶ, ೧೯೮೪ರಲ್ಲಿ ಕರ್ನಾಟಕ, ೧೯೮೬ರಲ್ಲಿ ಆಸ್ಸಾಮ್, ೧೯೮೮ರಲ್ಲಿ ಗುಜರಾತ, ೧೯೯೫ರಲ್ಲಿ ದೆಹಲಿ. ೧೯೯೬ರಲ್ಲಿ ಪಂಜಾಬ್, ೧೯೯೮ರಲ್ಲಿ ಕೇರಳ, ೨೦೦೧ರಲ್ಲಿ ಜಾರ್ಖಂಡ, ೨೦೦೨ರಲ್ಲಿ ಉತ್ತರಾಖಂಡ ಹಾಗೂ ಛತ್ತೀಸಗಡ, ೨೦೦೪ರಲ್ಲಿ ಹರಿಯಾಣ ಹಾಗೂ ೨೦೧೧ರಲ್ಲಿ ಗೋವಾಗಳಲ್ಲಿ ಕ್ರಮವಾಗಿ ಲೋಕಾಯುಕ್ತ ವಿಧೇಯಕಗಳನ್ನು ಮಂಡಿಸಲಾಯ್ತು.

ಕರ್ನಾಟಕ ಲೋಕಾಯುಕ್ತ ಇತಿಹಾಸ, ರಚನೆ ಹಾಗೂ ನಿರೂಪಣೆ

ಭ್ರಷ್ಟಾಚಾರವನ್ನು ನಿಯಂತ್ರಣ ಮಾಡುವ ನಿಟ್ಟಿನಲ್ಲಿ ಕರ್ನಾಟಕವು ತನ್ನದೇ ಆದ ಇತಿಹಾಸವನ್ನು ಹೊಂದಿದೆ. ಸ್ವಾತಂತ್ರ್ಯ ಪೂರ್ವದಲ್ಲಿಯೇ ಕರ್ನಾಟಕವು ಸಾರ್ವಜನಿಕ ಜೀವನದಲ್ಲಿ ಭ್ರಷ್ಟಾಚಾರವನ್ನು ನಿರ್ಮೂಲನೆ ಮಾಡಬೇಕೆಂಬ ಉದ್ದೇಶದಿಂದ ಸರ್ಕಾರಿ ಆದೇಶವೊಂದರ ಮೂಲಕ ೧೯೪೫ರಲ್ಲಿ ಭ್ರಷ್ಟಾಚಾರ ನಿಯಂತ್ರಣ ಸಮಿತಿ (Committee on Prevention of Corruption)ಯನ್ನು ಸ್ಥಾಪಿಸಿತು. ಇದರಿಂದಾಗಿ ಕರ್ನಾಟಕವು ಭ್ರಷ್ಟಾಚಾರ ನಿಯಂತ್ರಣ ಮಾಡುವ ಉದ್ದೇಶದಿಂದ ಸ್ಥಾಪಿಸಿದ ಈ ಸಮಿತಿ ರಾಷ್ಟ್ರದಲ್ಲೇ ಪ್ರಥಮ ಪ್ರಯತ್ನ ಎನ್ನಲಾಗಿದೆ. ಈ ಸಮಿತಿಯ ಶಿಫಾರಸ್ಸಿನ ಆಧಾರದ ಮೇಲೆ ಭ್ರಷ್ಟಾಚಾರವನ್ನು ನಿಯಂತ್ರಣ ಮಾಡಲು ಎರಡು ಪ್ರತ್ಯೇಕ ವಿಭಾಗಗಳನ್ನು ೧೯೪೬ರಲ್ಲಿ ಸ್ಥಾಪಿಸಲಾಯಿತು. ಅವುಗಳೆಂದರೆ,

೧) ದಕ್ಷತ ಲೆಕ್ಕಪರಿಶೋಧನಾ ವಿಭಾಗ (Efficiency Audit Cell)

೨) ಭ್ರಷ್ಟಾಚಾರ ನಿರೋಧ ದಳ (Anti-Corruption Bureau)

ಇದರಿಂದ ಸರ್ಕಾರಿ ನೌಕರರಲ್ಲಿರುವ ಭ್ರಷ್ಟಾಚಾರ ಕೊನೆಗೊಳ್ಳಲಿಲ್ಲ. ಇದು ಕರ್ನಾಟಕದಲ್ಲಿ ಭ್ರಷ್ಟಾಚಾರ ಒಂದು ಗಂಭೀರ ಸಮಸ್ಯೆಯಾಗಿಯೇ ಬೆಳೆಯತೊಡಗಿತು, ಇದನ್ನು ನಿಯಂತ್ರಣ ಮಾಡಲು ೧೯೬೫ರಲ್ಲಿ ಕರ್ನಾಟಕ ಜಾಗೃತ ಆಯೋಗ (Karnataka Vigilance Comission)ವನ್ನು ರಚಿಸಲಾಯ್ತು. ಆದರೆ ಈ ಆಯೋಗವು ಕೂಡ ಕರ್ನಾಟಕದಲ್ಲಿ ಹೆಚ್ಚುತ್ತಿರುವ ಭ್ರಷ್ಟಾಚಾರವನ್ನು ನಿಯಂತ್ರಣ ಮಾಡುವಲ್ಲಿ ಪರಿಣಾಮಕಾರಿಯಾದ ಪಾತ್ರ ನಿರ್ವಹಿಸದೇ ಹೋಯಿತು. 'ಕರ್ನಾಟಕ ಜಾಗೃತ ಆಯೋಗ'ದ ಬದಲಾಗಿ ಶ್ರೀ ದೇವರಾಜ್ ಅರಸುರವರು ಮುಖ್ಯಮಂತ್ರಿಯಾಗಿದ್ದಾಗ, ಜುಲೈ ೩೦, ೧೯೭೪ರಂದು ಸರ್ಕಾರದ ಆದೇಶದ ಮೂಲಕ 'ಲೋಕಾಯುಕ್ತ' ಸಂಸ್ಥೆಯು ತಾತ್ಕಾಲಿಕವಾಗಿ ಅಸ್ತಿತ್ವಕ್ಕೆ ತರಲಾಯ್ತು. ನ್ಯಾಯಮೂರ್ತಿ ಸಿ. ಹೊನ್ನಯ್ಯರವರು ಅಕ್ಟೋಬರ್ ೩, ೧೯೭೪ರಂದು ಕರ್ನಾಟಕ ಲೋಕಾಯುಕ್ತರಾಗಿ ಅಧಿಕಾರ ವಹಿಸಿಕೊಂಡರು. ಆದರೆ ಈ ಸಂಸ್ಥೆಯು ರಾಜಕಾರಣಿಗಳ ಬೆಂಬಲದ ಕೊರತೆ ಹಾಗೂ ಸರ್ಕಾರದ ವಿಫಲತೆಯ ಪರಿಣಾಮದಿಂದ ಬಹಳ

ದಿನಗಳ ಕಾಲ ಕಾರ್ಯನಿರ್ವಹಿಸದೇ ತನ್ನ ಅಸ್ತಿತ್ವವನ್ನು ಕಳೆದುಕೊಂಡಿತು. ನಂತರ ೧೯೮೦ರಲ್ಲಿ ಅಧಿಕಾರಕ್ಕೆ ಬಂದ ಶ್ರೀ ಗುಂಡೂರಾವ್‌ರವರು ನ್ಯಾಯಮೂರ್ತಿ ಆರ್.ಜೆ. ದೇಸಾಯಿಯವರ ಅಧ್ಯಕ್ಷತೆಯಲ್ಲಿ ಫೆಬ್ರುವರಿ ೧೯೮೦ರಲ್ಲಿ ಜಾಗೃತ ಆಯೋಗವನ್ನು ಮತ್ತೆ ಪುನರ್ ಜಾರಿಗೆ ಮಾಡುವ ಕೆಲಸ ಮಾಡಿದರೇ ಹೊರತು 'ಲೋಕಾಯುಕ್ತಕ್ಕೆ ಕಾಯ್ದೆ ರೂಪ ಕೊಡಲಿಲ್ಲ.

ಆಡಳಿತ ಸುಧಾರಣೆ, ಜನ ಸಾಮಾನ್ಯನ ಸಮಸ್ಯೆಗಳ ಅಹವಾಲು ಸ್ವೀಕಾರ, ಜನರಿಗೆ ಮೂಲ ಸೌಕರ್ಯ ಕಲ್ಪಿಸುವಲ್ಲಿ ಸರಕಾರದ ನಿರ್ಲಕ್ಷ್ಯವನ್ನು ಕಿತ್ತೊಗೆಯುವುದು, ಉತ್ತಮ ಆಡಳಿತ ನೀಡುವಂತೆ ಸರಕಾರದ ಕಿವಿ ಹಿಂಡುವುದು ಲೋಕಾಯುಕ್ತದ ಪ್ರಧಾನ ಆಶಯ. ಕೇಂದ್ರದ ಶಾಸನ ಆಧರಿಸಿ ಬಹುತೇಕ ರಾಜ್ಯಗಳಲ್ಲಿ ಲೋಕಾಯುಕ್ತ ಕಾಯಿದೆ ಮಂಡನೆಯಾಯಿತು. ಸುಪ್ರೀಂಕೋರ್ಟ್‌ನ ನಿವೃತ್ತ ನ್ಯಾಯಾಧೀಶ ಅಥವಾ ಹೈಕೋರ್ಟಿನ ನಿವೃತ್ತ ಮುಖ್ಯ ನ್ಯಾಯಾಧೀಶರ ನೇತೃತ್ವದಲ್ಲಿ ರಾಜ್ಯ ಲೋಕಾಯುಕ್ತ ಸಂಸ್ಥೆ ರಚಿಸಬೇಕೆಂದು ಕಾನೂನಿನಲ್ಲಿ ಹೇಳಲಾಯ್ತು. ಮುಂದೆ ಬಂದಂತಹ ಮುಖ್ಯಮಂತ್ರಿ ಶ್ರೀ ರಾಮಕೃಷ್ಣ ಹೆಗಡೆಯವರ ಒತ್ತಾಸೆಯಿಂದ ಲೋಕಾಯುಕ್ತ ಕಾನೂನು ಮೂಲಕ ೧೯೮೪ರಲ್ಲಿ ರಾಜ್ಯದಲ್ಲಿ ರಚನೆಯಾಯ್ತು. ಲೋಕಾಯುಕ್ತ ಸಂಸ್ಥೆ ಕೆಲಸ ಆರಂಭಿಸಿದ್ದು ೧೫.೧.೧೯೮೬ರಿಂದ. ಅಂದು ಮುಖ್ಯಮಂತ್ರಿ ಸೇರಿದಂತೆ ಯಾರನ್ನು ಬೇಕಾದರೂ ಲೋಕಾಯುಕ್ತ ಕಾನೂನಿನ ಪ್ರಕಾರ ಸ್ವಯಂ ಪ್ರೇರಿತರಾಗಿ ತನಿಖೆಗೆ ಒಳಪಡಿಸಬಹುದಿತ್ತು. ಆದರೆ ಈ ಕಾನೂನು ೩೦.೬.೧೯೮೬ಕ್ಕೆ ರದ್ದುಗೊಳಿಸಿ ರಾಜ್ಯಪಾಲರ ಅನುಮತಿಯ ಮೇರೆಗೆ ಮುಖ್ಯಮಂತ್ರಿ ಸೇರಿದಂತೆ ಯಾರನ್ನು ಬೇಕಾದರೂ ತನಿಖೆಗೆ ಒಳಪಡಿಸಬಹುದು ಎಂದು ತಿದ್ದುಪಡಿ ತರಲಾಯ್ತು. ೧೯೮೬ರಿಂದ ಇಂದಿನವರೆಗೂ ಏಳು ಜನ ಲೋಕಾಯುಕ್ತರು ನೇಮಕಗೊಂಡಿದ್ದಾರೆ. ಮೊದಲನೆಯ ಲೋಕಾಯುಕ್ತರಾಗಿ ಪಂಜಾಬದ ನ್ಯಾಯಮೂರ್ತಿ ಎ.ಡಿ. ಘೋಷಾಲ್ ಕಾರ್ಯನಿರ್ವಹಿಸಿದರೆ, ಎರಡನೆಯ ಲೋಕಾಯುಕ್ತರಾಗಿ ಪಶ್ಚಿಮ ಬಂಗಾಳದ ನ್ಯಾಯಮೂರ್ತಿ ರವೀದ್ರನಾಥ ಪೈನೆ ಹಾಗೂ ಮೂರನೆಯ ಲೋಕಾಯುಕ್ತರಾಗಿ ನಮ್ಮ ರಾಜ್ಯದವರೆಯಾದ ನ್ಯಾಯಮೂರ್ತಿ ಎಸ್.ಎ. ಹಕೀಂ ಕೆಲಸ ನಿರ್ವಹಿಸಿದರು. ನಾಲ್ಕನೆಯ ಲೋಕಾಯುಕ್ತರಾಗಿ ನ್ಯಾಯಮೂರ್ತಿ ಎನ್. ವೆಂಕಟಾಚಲ ಹಾಗೂ ಐದನೆಯ ಲೋಕಾಯುಕ್ತರಾಗಿ ನ್ಯಾಯಮೂರ್ತಿ ಸಂತೋಷ್ ಹೆಗ್ಡೆಯವರು, ಅದಾದ ನಂತರ ನಿವೇಶನ ವಿವಾದದಲ್ಲಿ ಸಿಲುಕಿ ರಾಜೀನಾಮೆ ನೀಡಿದ ನ್ಯಾಯಮೂರ್ತಿ ಶಿವರಾಜ ಪಾಟೀಲ ಆರನೆಯ ಲೋಕಾಯುಕ್ತರು. ಇದೀಗ ಏಳನೆಯವರಾಗಿ ನ್ಯಾಯಮೂರ್ತಿ ವೈ. ಭಾಸ್ಕರರಾವ್ ನೇಮಕಗೊಂಡಿದ್ದಾರೆ. ಲೋಕಾಯುಕ್ತರನ್ನು ನೇಮಕ ಮಾಡುವ ವಿಷಯದಲ್ಲಿ ಮುಖ್ಯಮಂತ್ರಿಯವರು, ಉಭಯ ಸದನಗಳ ವಿರೋಧ ಪಕ್ಷದ ನಾಯಕರೊಂದಿಗೆ ಹಾಗೂ ಉಭಯ ಸದನಗಳ ಅಧ್ಯಕ್ಷರೊಂದಿಗೆ ಸಮಾಲೋಚನೆ ಮಾಡುತ್ತಾರೆ. ಅಂದರೆ ಸಮಾಲೋಚನೆ ಮಾಡುವ ಈ ಐದು ಜನ ರಾಜಕಾರಣಿಗಳು

ಎಂಬುದು ಇಲ್ಲಿ ಗಮನಾರ್ಹ. ರಾಜ್ಯ ಹೈಕೋರ್ಟಿನ ನ್ಯಾಯಾಧೀಶರೊಂದಿಗೆ ಕೂಡ ಸಮಾಲೋಚಿಸಿದರೂ ಅದು ನಾಮಕಾವಾಸ್ಥೆ. ಅಂದರೆ ಬಹುತೇಕ ರಾಜಕಾರಣಿಗಳನ್ನೊಳ್ಳಗೊಂಡ ಸಮಾಲೋಚನ ಮಂಡಳಿಯಿಂದ ನೇಮಕಗೊಳ್ಳುವ ಲೋಕಾಯುಕ್ತರಿಂದ ಸಹಜ ನ್ಯಾಯ ನಿರೀಕ್ಷಿಸುವುದಾದರೂ ಹೇಗೆ? ನ್ಯಾಯಮೂರ್ತಿ ಸಂತೋಷ ಹೆಗ್ಡೆ ಪ್ರಕರಣದಿಂದ ಈ ರಾಜಕಾರಣಿಗಳು ತಮಗೆ ಹಿತ ಬಯಸದೆ ಹೋದರೂ ಚಿಂತೆಯಿಲ್ಲ. ಅಹಿತ ಬಯಸುವ ಲೋಕಾಯುಕ್ತರನ್ನು ನೇಮಕ ಮಾಡುವ ಸಾಹಸ ಮಾಡಲಾರರು. ಈ ಹಿನ್ನಲೆಯಲ್ಲಿ ಸುಪ್ರೀಂಕೋರ್ಟ್ ಮುಖ್ಯ ನ್ಯಾಯಾಧೀಶರು ಮಾತ್ರ ಲೋಕಾಯುಕ್ತರನ್ನು ನೇಮಿಸುವ ಅಧಿಕಾರ ಕಾಯ್ದೆಯಲ್ಲಿ ನೀಡಬೇಕು. ಹುದ್ದೆಯನ್ನು ಖಾಲಿ ಇಡದಂತೆ ಕಾಯ್ದೆ ಬದಲಾಯಿಸಬೇಕು ಎಂಬ ಮಾತು ಕೇಳಿ ಬರುತ್ತಿದೆ.

ಕರ್ನಾಟಕದ ಹಿಂದಿನ ಲೋಕಾಯುಕ್ತರು

ಪ್ರಾರಂಭಿಕ ಮೂರು ಲೋಕಾಯುಕ್ತರ ಪರಿಚಯ ಹೆಚ್ಚಿನ ಜನತೆಗಿರಲಿಲ್ಲ. ಇವರು ತಮ್ಮ ಕಾರ್ಯಕ್ಷೇತ್ರವನ್ನು ಬೆಂಗಳೂರಿನ ತಮ್ಮ ಕಚೇರಿಗೆ ಮಾತ್ರ ಸೀಮಿತಗೊಳಿಸಿದ್ದರು. ಇವರು ಕಾಯಿದೆಯಲ್ಲಿರುವ ಅವಕಾಶಗಳ ಪುಟ ತೆರೆಯುವ ಗೋಜಿಗೆ ಸಹ ಹೋಗಲಿಲ್ಲ. ಮತ್ತೊಂದೆಡೆ ದೂರುಗಳ ಪ್ರಮಾಣವೂ ಕಡಿಮೆಯಾಗಿತ್ತು. ಸಾಮಾನ್ಯ ಮನುಷ್ಯನಿಗೆ ಕಂಟಕವಾಗಿದ್ದ ರೂ.೧೦೦ರಿಂದ ೧೦೦೦ ರೂ.ಗಳ ವರೆಗಿನ ಲಂಚಕ್ಕೆ ಅಲ್ಪ ಪ್ರಮಾಣದ ಕಡಿವಾಣ ಹಾಕಿದ್ದು ಆ ನಂತರ ಬಂದ ನ್ಯಾ.ವೆಂಕಟಾಚಲ. ಆದರೆ ನ್ಯಾ. ಸಂತೋಷ್ ಹೆಗ್ಡೆ ಅವರು ದೊಡ್ಡ ಅಕ್ರಮಕಾರರಿಗೆ ಬಲೆ ಬೀಸಿದರು. ಐಎಎಸ್ ಅಧಿಕಾರಿಗಳಿಂದ ಹಿಡಿದು ಮುಖ್ಯಮಂತ್ರಿಗಳ ವರೆಗಿನ ಎಲ್ಲರಿಗೂ ಕಾನೂನಿನ ಮುಗಿದಾಣ ತೊಡಿಸಿದರು. ಸಿಕ್ಕ ಕಳಂಕರನ್ನು ಹಾಗೂ ಭ್ರಷ್ಟರನ್ನು ನಡುಬೀದಿಯಲ್ಲಿ ಹರಾಜು ಹಾಕಿದರು. ದುರ್ದೈವದ ಸಂಗತಿ ಏನೆಂದರೆ, ಲಂಚ ಪಡೆದ ನೌಕರನ ವಿರುದ್ಧ ವಿಚಾರಣೆಗೆ ಸರ್ಕಾರದಿಂದ ಅನುಮತಿ ಪಡೆದುಕೊಳ್ಳಬೇಕಾದ ಅನಿವಾರ್ಯತೆ. ಅದರ ಬದಲಾಗಿ ಭ್ರಷ್ಟರ ವಿರುದ್ಧ ವಿಚಾರಣ ನಡೆಸಲು ಅಧಿಕಾರ ನೀಡುವ ಜವಾಬ್ದಾರಿಯನ್ನು ನ್ಯಾಯಾಲಯಗಳಿಗೆ ವಹಿಸಿದರೆ ಉತ್ತಮ. ಲೋಕಾಯುಕ್ತರನ್ನು ಶಿಫಾರಸ್ಸುಗಳಿಗೆ ಮಾತ್ರ ಸೀಮಿತಗೊಳಿಸಿದರೆ ಈ ಸಂಸ್ಥೆಯ ಮಹತ್ವ ಏನು ಉಳಿಯುತ್ತದೆ ಎಂಬ ಚರ್ಚೆ ಇದೀಗ ನಡೆಯುತ್ತಿದೆ.

ಗೌರವಾನ್ವಿತ ಲೋಕಾಯುಕ್ತರ ಅಧಿಕಾರವಧಿ

ಹೆಸರು	ಇಂದ	ವರೆಗೆ
೧. ಗೌರವಾನ್ವಿತ ನ್ಯಾಯಮೂರ್ತಿ ಎ. ಡಿ. ಕೋಷಾಲ್	೧೫/೦೧/೧೯೮೬	೧೪.೦೧/೧೯೯೧
೨. ಗೌರವಾನ್ವಿತ ನ್ಯಾಯಮೂರ್ತಿ ರಬೀಂದ್ರನಾಥ ಪೈನೆ	೨೫/೦೧/೧೯೯೧	೨೪/೦೧/೧೯೯೬
೩. ಗೌರವಾನ್ವಿತ ನ್ಯಾಯಮೂರ್ತಿ ಎಸ್. ಎ. ಹಕೀಂ	೦೨/೦೬/೧೯೯೬	೦೧/೦೬/೨೦೦೧
೪. ಗೌರವಾನ್ವಿತ ನ್ಯಾಯಮೂರ್ತಿ ಎನ್. ವೆಂಕಟಾಚಲ	೦೩/೦೭/೨೦೦೧	೦೨/೦೭/೨೦೦೬
೫. ಗೌರವಾನ್ವಿತ ನ್ಯಾಯಮೂರ್ತಿ ಎನ್. ಸಂತೋಷ ಹೆಗ್ಡೆ	೦೩/೦೮/೨೦೦೬	೦೨/೦೮/೨೦೧೧
೬. ಗೌರವಾನ್ವಿತ ನ್ಯಾಯಮೂರ್ತಿ ಶಿವರಾಜ ಪಾಟೀಲ	೦೩/೦೮/೨೦೧೧	೨೦/೦೯/೨೦೧೧
೭. ಗೌರವಾನ್ವಿತ ನ್ಯಾಯಮೂರ್ತಿ ವೈ.ಭಾಸ್ಕರ ರಾವ್	೧೪/೦೨/೨೦೧೩	ಇಲ್ಲಿಯವರೆಗೆ

ಗೌರವಾನ್ವಿತ ಉಪಲೋಕಾಯುಕ್ತರ ಅಧಿಕಾರವಧಿ

ಹೆಸರು	ಇಂದ	ವರೆಗೆ
೧. ಗೌರವಾನ್ವಿತ ನ್ಯಾಯಮೂರ್ತಿ ಎಸ್. ಸಿ. ಮಿತ್ತಲ್	೨೨/೦೧/೧೯೮೬	೨೧/೦೧/೧೯೯೧
೨. ಗೌರವಾನ್ವಿತ ನ್ಯಾಯಮೂರ್ತಿ ಕಮಲೇಶ್ವರ ನಾಥ್	೧೩/೦೨/೧೯೯೨	೧೨/೦೨/೧೯೯೭
೩. ಗೌರವಾನ್ವಿತ ನ್ಯಾಯಮೂರ್ತಿ ಜಿ.ಪಿ. ಶಿವಪ್ರಕಾಶ್	೦೨/೦೪/೧೯೯೭	೦೧/೦೪/೨೦೦೨
೪. ಗೌರವಾನ್ವಿತ ನ್ಯಾಯಮೂರ್ತಿ ಜಿ. ಪತ್ರಿ ಬಸವನಗೌಡ್	೨೯/೧೨/೨೦೦೪	೨೮/೧೨/೨೦೦೯
೫. ಗೌರವಾನ್ವಿತ ನ್ಯಾಯಮೂರ್ತಿ ಎಸ್. ಬಿ. ಮಜಗೆ	೧೯/೦೭/೨೦೧೦	ಇಲ್ಲಿಯವರೆಗೆ
೬. ಗೌರವಾನ್ವಿತ ನ್ಯಾಯಮೂರ್ತಿ ಸುಭಾಷ. ಬಿ.ಆಡಿ	೦೨/೦೩/೨೦೧೩	ಇಲ್ಲಿಯವರೆಗೆ

ಅಧಿಕಾರ ಏನುಂಟು?

ಸಾರ್ವಜನಿಕ ಸೇವೆಯಲ್ಲಿನ ಪ್ರತಿಯೊಬ್ಬ ವ್ಯಕ್ತಿಯ ಆಡಳಿತಾತ್ಮಕ ನಡತೆಗಳನ್ನು ಪ್ರಶ್ನಿಸುವ ಸಂವಿಧಾನತ್ಮಕ ಹಕ್ಕನ್ನು ಲೋಕಾಯುಕ್ತರು ಮತ್ತು ಉಪಲೋಕಾಯುಕ್ತರಿಗೆ ನೀಡಲಾಗಿದೆ. ಭ್ರಷ್ಟಾಚಾರ ನಿಯಂತ್ರಣ, ಆಡಳಿತ ಸುಧಾರಣೆ ಹಾಗೂ ಪಾರದರ್ಶಕತೆಯನ್ನು ತರುವ ನಿಟ್ಟಿನಲ್ಲಿ ಕರ್ನಾಟಕ ಲೋಕಾಯುಕ್ತ ಮಹತ್ವದ ಪಾತ್ರ ವಹಿಸುತ್ತದೆ.

ಲೋಕಾಯುಕ್ತ/ಉಪ ಲೋಕಾಯುಕ್ತರ ಕಾರ್ಯ

೧. ಸರಕಾರದಡಿಯಲ್ಲಿ ಆಡಳಿತಾತ್ಮಕ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುವ ಪ್ರತಿ ನೌಕರರು ಲೋಕಾಯುಕ್ತ ವ್ಯಾಪ್ತಿಯಲ್ಲಿ ಬರುತ್ತಾರೆ.

೨. ಮುಖ್ಯಮಂತ್ರಿ, ಸಚಿವರು, ಹಿರಿಯ ಅಧಿಕಾರಿಗಳಿಂದ ಹಿಡಿದು ಗುಮಾಸ್ತನವರೆಗೂ ತನಿಖೆ ನಡೆಸುವ ಅಧಿಕಾರ ನೀಡಲಾಗಿದೆ.

೩. ಅತಿ ಸಾಮಾನ್ಯ ಪ್ರಜೆ ಕೂಡ ಮುಖ್ಯಮಂತ್ರಿಯಿಂದ ಹಿಡಿದು ಸರಕಾರಿ ಅಥವಾ ಸಾರ್ವಜನಿಕ ಪ್ರತಿನಿಧಿ ವಿರುದ್ಧ ಲೋಕಾಯುಕ್ತರಿಗೆ ದೂರು ನೀಡಬಹುದು.

೪. ಸಾರ್ವಜನಿಕ ಪ್ರತಿನಿಧಿ ಹಾಗೂ ಅಧಿಕಾರಿ ವಿರುದ್ಧದ ತನಿಖೆಗೆ ಸರಕಾರದ ಅನುಮತಿ ಬೇಕಿಲ್ಲ. ಆದರೆ ಅದರ ತನಿಖೆ ನಡೆಸಿ, ವರದಿಯನ್ನಾದರಿಸಿ ಸರಕಾರ ಅಥವಾ ಸಂಬಂಧಪಟ್ಟ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಬಹುದು. ಆದರೆ ಕ್ರಮ ತೆಗೆದುಕೊಳ್ಳುವ ಅಧಿಕಾರವಿಲ್ಲ.

೫. ಶಿಸ್ತುಕ್ರಮ, ಇನ್ನಾವುದೇ ಶಿಫಾರಸ್ಸುಗಳನ್ನು ಲೋಕಾಯುಕ್ತರೇ ಮಾಡಬೇಕಾಗುತ್ತದೆ.

೬. ಕಾಯಿದೆ ಪ್ರಕಾರ ಭ್ರಷ್ಟಾಚಾರ ನಡೆಸುತ್ತಿರುವ ಅಧಿಕಾರಿಗಳನ್ನು ಟ್ರ್ಯಾಪ್ ಮಾಡುವುದು ಅಥವಾ ದಾಳಿ ಮಾಡುವ ಅಧಿಕಾರ ಉಪಲೋಕಾಯುಕ್ತರಿಗೆ ನೀಡಲಾಗಿದೆ.

೭. ಲೋಕಾಯುಕ್ತರೇ ಸ್ವತಃ ದಾಳಿ ನಡೆಸುವಂತಿಲ್ಲ.

೮. ಪ್ರತಿವರ್ಷ ರಾಜ್ಯದ ಜನಪ್ರತಿನಿಧಿಗಳು ಲೋಕಾಯುಕ್ತ ಸಂಸ್ಥೆಗೆ ತಮ್ಮ ಆಸ್ತಿ ವಿವರ ನೀಡಬೇಕು. ತಪ್ಪಿದಲ್ಲಿ ಶಿಸ್ತು ಕ್ರಮಕ್ಕೆ ಶಿಫಾರಸ್ಸು ಮಾಡಬಹುದು.

೯. ದೂರು ಆಧರಿಸಿ ಸ್ವತಃ ಲೋಕಾಯುಕ್ತರೇ ತನಿಖೆಗೆ ಮುಂದಾಗಬಹುದು. ಅಥವಾ ವಿಶೇಷ ತಂಡ ರಚನೆಗೆ ಸಹಾಯ ಮಾಡಬಹುದು.


೧೦. ತನಿಖೆಗೆ ನೆರವಾಗಲು ಹಾಗೂ ಲೋಕಾಯುಕ್ತ ಸಂಸ್ಥೆಯ ಪ್ರತ್ಯೇಕ ನಿರ್ವಹಣೆಗೆ ಲೋಕಾಯುಕ್ತ ಪೊಲೀಸ್ ಎಂಬ ಪ್ರತ್ಯೇಕ ವಿಭಾಗವನ್ನು ನೀಡಲಾಗಿದೆ.

೧೧. ಅವ್ಯವಹಾರ ನಡೆದ ೫ ವರ್ಷದೊಳಗೆ ದೂರು ದಾಖಲಿಸಿಕೊಳ್ಳಬಹುದು.

೧೨. ಕಾರಣಾಂತರಗಳಿಂದ ಕೆಲ ಪ್ರಮುಖ ಹಗರಣಗಳಲ್ಲಿ ದೂರು ಕೊಡಲು ಸಾರ್ವಜನಿಕರು ಹಿಂಜರಿದರೆ ಸ್ವತಃ ಲೋಕಾಯುಕ್ತರು ತಮ್ಮ 'ಸ್ವಯಂಪ್ರೇರಿತ' ಅಧಿಕಾರ ಬಳಸಿ ದೂರು ದಾಖಲಿಸಿಕೊಳ್ಳಬಹುದು. ಆದರೆ ರಾಜಕಾರಣಿಗಳ ವಿರುದ್ಧ 'ಸ್ವಯಂಪ್ರೇರಿತ' ಅಧಿಕಾರವನ್ನು ಬಳಸಿಕೊಳ್ಳುವ ಅಧಿಕಾರವಿಲ್ಲ.

ಈ ಹಿಂದೆ ಜನರಿಗೆ ಮಾಹಿತಿಯೇ ದೊರಕುತ್ತಿರಲಿಲ್ಲ. ಸರ್ಕಾರದಲ್ಲಿರುವ ಅನ್ಯಾಯ, ಅಕ್ರಮಗಳು ಬಯಲಿಗೆ ಬರುತ್ತಿರಲಿಲ್ಲ. ಮುಂದೆ ದೇಶದಲ್ಲಿ ೨೦೦೫ಕ್ಕೆ ಮಾಹಿತಿ ಹಕ್ಕು ಜಾರಿಗೆ ಬಂತು ಇದರಿಂದ ಜನರಿಗೆ ಸರಕಾರಿ ಅವ್ಯವಹಾರಗಳ ಬಗ್ಗೆ ಮಾಹತಿ ದೊರಕಲು ಆರಂಭವಾಯಿತು. ಈ ಹಿನ್ನಲೆಯಲ್ಲಿಯೇ ಲೋಕಾಯುಕ್ತರಿಗೆ ಹೆಚ್ಚಿನ ಸಂಖ್ಯೆಯಲ್ಲಿ ದೂರುಗಳು ಬರುವುದು ಆರಂಭವಾಯಿತು.

ಕರ್ನಾಟಕ ಲೋಕಾಯುಕ್ತ ಸಾಂಸ್ಥಿಕ ರಚನೆ



ಅಧ್ಯಾಯ ಮೂರು

ಕಾಯ್ದೆಗಳ ವಿಶ್ಲೇಷಣೆ

ಅಧ್ಯಾಯ ಮೂರು

ಕಾಯ್ದೆಗಳ ವಿಶ್ಲೇಷಣೆ

೩. ೧. ಪ್ರಸ್ತಾವನೆ

ಲೋಕಾಯುಕ್ತ ಕಾಯ್ದೆಯ ಪ್ರಕಾರ ಲೋಕಾಯುಕ್ತವು ತೀರ್ಪು ನೀಡುವ ಸಂಸ್ಥೆಯಲ್ಲ, ಬದಲಾಗಿ ದೂರುಗಳನ್ನು ವಿಚಾರಣೆ ನಡೆಸಿ ಸರ್ಕಾರಕ್ಕೆ ವರದಿ ನೀಡುವ ಕೆಲಸ ಮಾತ್ರ ಮಾಡುವ ಅಧಿಕಾರ ಹೊಂದಿದೆ. ಲೋಕಾಯುಕ್ತ ಸಲ್ಲಿಸುವ ವರದಿಗಳನ್ನು ಪರೀಶೀಲಿಸುವುದಲ್ಲದೇ ವಿಚಾರಣೆ ನಡೆಸಿ ಕ್ರಮ ಕೈಗೊಳ್ಳುವ ಅಧಿಕಾರ ಸರ್ಕಾರ ಹೊಂದಿದೆ. ಭ್ರಷ್ಟಾಚಾರ ಆರೋಪಕ್ಕೆ ಸಂಬಂಧಿಸಿದಂತೆ ಪ್ರಥಮ ಮಾಹಿತಿ ವರದಿ ದಾಖಲಿಸಿದ ನಂತರವೇ ಸರ್ಕಾರಿ ನೌಕರರ ವಿರುದ್ದ ಕಾರ್ಯಾಚರಣೆ ನಡೆಸಬೇಕು ಎಂಬ ನ್ಯಾಯಾಲಯದ ಇತ್ತೀಚಿನ ಆದೇಶದಿಂದ ಲೋಕಾಯುಕ್ತ ಪೋಲಿಸರ ಕೈಕಟ್ಟಿ ಹಾಕಿದಂತಾಗಿದೆ. ಇದರಿಂದ ತಕ್ಷಣ ದೊರೆತ ಮಾಹಿತಿ ಆಧರಿಸಿ ದೀಢೀರ್ ಕಾರ್ಯಾಚರಣೆ ನಡೆಸಲು ಸಾಧ್ಯವಾಗುತ್ತಿಲ್ಲ . ಈ ಹಿನ್ನೆಲೆಯಲ್ಲಿ ಲೋಕಾಯುಕ್ತ ಕಾಯ್ದೆ, ಭ್ರಷ್ಟಾಚಾರ ತಡೆ ಕಾಯ್ದೆ ಹಾಗೂ ಇವೆರಡು ಕಾಯ್ದೆಯಡಿಗಳಲ್ಲಿ ದೇಶದ ವಿವಿಧ ನ್ಯಾಯಾಲಯಗಳು ನೀಡಿದ ತೀರ್ಪುಗಳನ್ನು ಇಲ್ಲಿ ವಿಶ್ಲೇಷಣೆ ಮಾಡಲಾಗಿದೆ.

೩. ೨. ಕರ್ನಾಟಕ ಲೋಕಾಯುಕ್ತ ಕಾಯ್ದೆ ವಿಶ್ಲೇಷಣೆ

ಭ್ರಷ್ಟಾಚಾರ ನಿಯಂತ್ರಣಕ್ಕಾಗಿ ಸರ್ಕಾರ ರಚಿಸಿರುವ ಲೋಕಾಯುಕ್ತ ಕಾಯ್ದೆಯಲ್ಲಿ ಲೋಕಾಯುಕ್ತರಿಗೆ, ಉಪ ಲೋಕಾಯುಕ್ತರಿಗೆ ನಿಗದಿಪಡಿಸಿರುವ ಅಧಿಕಾರ ವ್ಯಾಪ್ತಿಯಲ್ಲಿನ ಲೋಪದಿಂದಾಗಿ ಕೆಲವು ಸಂದರ್ಭದಲ್ಲಿ ಇಬ್ಬರಿಗೂ ಭ್ರಷ್ಟ ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸಲು ಸಾಧ್ಯವಾಗದಂತಹ ಪರಿಸ್ಥಿತಿಯನ್ನು ನಾವು ಲೋಕಾಯುಕ್ತ ಕಾಯ್ದೆಯಲ್ಲಿ ಗಮನಿಸಬಹುದು.

'ಲೋಕಾಯುಕ್ತ ಕಾಯ್ದೆಯ ೭(೧)ರ ಪ್ರಕಾರ 'ಮುಖ್ಯಮಂತ್ರಿ', ಸಚಿವರು, ಶಾಸಕರು, ಸರ್ಕಾರದ ಕಾರ್ಯದರ್ಶಿಗಳು, ಹೆಚ್ಚುವರಿ ಕಾರ್ಯದರ್ಶಿಗಳು, ಜಂಟಿ ಕಾರ್ಯದರ್ಶಿಗಳು, ಲೋಕಾಯುಕ್ತರ ವ್ಯಾಪ್ತಿಗೆ ಒಳಪಡುತ್ತಾರೆ. ಮೊದಲ ಮೂರು ವರ್ಗಗಳಿಗೆ ಸೇರಿದವರ ವಿರುದ್ಧ ಸ್ವಯಂ ಪ್ರೇರಿತರಾಗಿ ಕ್ರಮ ಜರುಗಿಸಲು ಸರ್ಕಾರ ಅವಕಾಶ ನೀಡಿಲ್ಲ. ಇತ್ತೀಚಿನ ದಿನಗಳಲ್ಲಿ ಭ್ರಷ್ಟಾಚಾರದ ಮೂಲಗಳೇ ಇವರು ಎಂಬುದು ಹಲವಾರು ಹಗರಣದಿಂದ ಸಾಬೀತಾಗಿದೆ. ಹೀಗಾಗಿ ಲೋಕಾಯುಕ್ತರಿಗೆ ಇವರ ಮೇಲೆ ಸ್ವಯಂ ಪ್ರೇರಿತರಾಗಿ ಕ್ರಮ ಜರುಗಿಸಲು ಅವಕಾಶ ಕೊಡದೇಯಿರುವುದು ಲೋಕಾಯುಕ್ತ ಕಾಯ್ದೆಯ ದೌರ್ಬಲ್ಯವಾಗಿದೆ.

ಅದೇ ರೀತಿ ಸರ್ಕಾರದ ಕಾರ್ಯದರ್ಶಿಗಳು, ಹೆಚ್ಚುವರಿ ಕಾರ್ಯದರ್ಶಿಗಳು, ಜಂಟಿ ಕಾರ್ಯದರ್ಶಿಗಳು ಇವರನ್ನಾದರೂ ವಿಚಾರಣೆ ಮಾಡುವಂತಹ ಅಥವಾ ಇವರ ವಿರುದ್ಧ ಆರೋಪಗಳು, ದೂರುಗಳು ಬಂದಂತಹ ಸಂದರ್ಭದಲ್ಲಿ ಕ್ರಮ ಕೈಗೊಳ್ಳುವ ಅಥವಾ ಸ್ವಯಂ ಪ್ರೇರಿತರಾಗಿ ಕ್ರಮ ಜರುಗಿಸಲು ಅವಕಾಶ ನೀಡಿದರೆ ನಿಜಕ್ಕೂ ಭ್ರಷ್ಟಾಚಾರ ತಡೆಗಟ್ಟಿ ಉತ್ತಮ ಆಡಳಿತ ನೀಡಲು ಸಾಧ್ಯವಾಗುತ್ತದೆ. ಈ ಕಾಯ್ದೆಯ ಪ್ರಕಾರ (ಕಲಂ ೭(೧)) ಈ ಮೇಲಿನ ನಾಲ್ಕು ಸ್ತರದ ಹುದ್ದೆಗಳಿಗೆ ಸೇರಿದವರ ವಿರುದ್ಧ ಲೋಕಾಯುಕ್ತರು ಯಾವುದೇ ಕ್ರಮ ಜರುಗಿಸಬೇಕಾದರೂ ಜವಾಬ್ದಾರಿಯುತ ವ್ಯಕ್ತಿಯೊಬ್ಬರು ಗಂಭೀರ ಸ್ವರೂಪದ ಆರೋಪ ಮಾಡಿರಬೇಕು. ಅಂತಹ ದೂರನ್ನು ಪ್ರಮಾಣ ಪತ್ರದ ರೂಪದಲ್ಲಿ ಸಲ್ಲಿಸಬೇಕು. ಇದು ಸರಿಯಾದ ಕ್ರಮವೇ ಆಗಿದ್ದರೂ ಲೋಕಾಯುಕ್ತ ಕಾಯ್ದೆಯ ಕಲಂ ೭(೧)(೪) ಸಂಬಂಧ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಹೊರಡಿಸಿರುವ ಅಧಿಸೂಚನೆಯ ವ್ಯಾಪ್ತಿಯ ಅಧಿಕಾರಿಗಳ (೫ನೇ ವರ್ಗ) ವಿರುದ್ಧ ಸ್ವಯಂ ಪ್ರೇರಣೆಯಿಂದ ಕ್ರಮ ಜರುಗಿಸಲು ಲೋಕಾಯುಕ್ತರಿಗೆ ಅಧಿಕಾರ ಇಲ್ಲವಾದ್ದರಿಂದ ಇದು ಪರೋಕ್ಷವಾಗಿ ಭ್ರಷ್ಟಾಚಾರ ಬೃಹತ್ ಪ್ರಮಾಣದಲ್ಲಿ ಬೆಳೆಯುವ ಮೂಲಕ ದುರಾಡಳಿತಕ್ಕೂ ಕಾರಣವಾಗಿದೆ ಹಾಗೂ ಸಾರ್ವಜನಿಕರಿಗೂ ಇದರಿಂದ ಗಂಭೀರ ಸ್ವರೂಪದಲ್ಲಿ ತೊಂದರೆಯಾಗುತ್ತಿದೆ. ಹೀಗಾಗಿ ಒಟ್ಟಾರೆ ಉತ್ತಮ ಆಡಳಿತ ನೀಡುವಲ್ಲಿ ಈ ಕಾಯ್ದೆ ಸಹಕಾರಿಯಾಗಿಲ್ಲ.

ಲೋಕಾಯುಕ್ತ ಕಾಯ್ದೆಯಲ್ಲಿನ ಲೋಪಕ್ಕೆ ಕನ್ನಡಿಯಂತಿರುವ ಒಂದು ಉದಾಹರಣೆ; ಲೋಕಾಯುಕ್ತರಿಗೆ ಸ್ವಯಂ ಪ್ರೇರಿತ ಅಧಿಕಾರ ಇಲ್ಲದಿರುವುದರಿಂದ, ಆಗುವ ತೊಂದರೆಗಳ ಬಗ್ಗೆ ಇತ್ತೀಚೆಗೆ ಉಪಲೋಕಾಯುಕ್ತರ ನೀಡಿದ ಹೇಳಿಕೆಯ ಉದಾಹರಣೆಯನ್ನು ಗಮನಿಸಬಹುದು. ಒಮ್ಮೆ ಪತ್ರಿಕೆಯೊಂದರಲ್ಲಿ ಸರ್ಕಾರಿ ಆಸ್ಪತ್ರೆಯ ಸುಸ್ಥಿತಿ ಬಗ್ಗೆ ವರದಿಯೊಂದು ಪ್ರಕಟವಾಯಿತು. ಪತ್ರಿಕೆಯಲ್ಲಿ ಪ್ರಕಟವಾದ ಆಸ್ಪತ್ರೆಯ ಅಧೀಕ್ಷಕ ಅವರು ಕಾಯ್ದೆ ಪ್ರಕಾರ ಉಪ ಲೋಕಾಯುಕ್ತರ ವ್ಯಾಪ್ತಿಗೆ ಒಳಪಡುತ್ತಿದ್ದರು. ಈ ಪತ್ರಿಕಾ ವರದಿಯನ್ನು ಓದಿದ ಲೋಕಾಯುಕ್ತರೂ ಕಳವಳಗೊಂಡು

ತಕ್ಷಣವೆ ಉಪ ಲೋಕಾಯುಕ್ತರಿಗೆ ಸ್ವಯಂ ಪ್ರೇರಿತರಾಗಿ ಕ್ರಮ ಜರುಗಿಸುವಂತೆ ಹೆಚ್ಚುವರಿ ರಿಜಿಸ್ಟ್ರಾರ್ ಮೂಲಕ ಸೂಚಿಸಿದರು. ಆದರೆ ಇದು ಸಾಧ್ಯವಿಲ್ಲ ಎಂಬುದನ್ನು ಉಪ ಲೋಕಾಯುಕ್ತರು ಲೋಕಾಯುಕ್ತರಿಗೆ ಮನವರಿಕೆ ಮಾಡಬೇಕಾಯ್ತು. ಏಕೆಂದರೆ ಪ್ರಮಾಣಪತ್ರದ ಮೂಲಕ ದೂರು ಸಲ್ಲಿಕೆಯಾಗದಿದ್ದರೆ, ಉಪ ಲೋಕಾಯುಕ್ತರು ಕ್ರಮ ಜರುಗಿಸಲು ಸಾಧ್ಯವಾಗುವುದಿಲ್ಲ. ಲೋಕಾಯುಕ್ತರಿಗೆ ಅಧಿಕಾರವಿದ್ದರೂ ಸಹ ಅಧೀಕ್ಷಕ ಹಂತದ ಅಧಿಕಾರಿ ವ್ಯಾಪ್ತಿಗೆ ಬಾರದ ಕಾರಣ ಅಧಿಕಾರ ಚಲಾಯಿಸಲು ಆಗಲಿಲ್ಲ.

ಅಂದರೆ, ಸರ್ಕಾರಿ ಆಸ್ಪತ್ರೆಗೆ ದಾಖಲಾಗುವ ವೇಳೆಗೆ ಅರ್ಧ ಪ್ರಾಣ ಕಳೆದುಕೊಂಡು ಸೊರಗುತ್ತಿರುವ ವ್ಯಕ್ತಿಗಳು ಪ್ರಮಾಣ ಪತ್ರಗಳ ಮೂಲಕ ದೂರು ಸಲ್ಲಿಸುವುದು ಸಾಧ್ಯವೆ? ಇಂತಹ ಅನೇಕ ಪ್ರಕರಣಗಳಲ್ಲಿ ರೋಗಿಗೆ ಚಿಕಿತ್ಸೆಯೆ ದೊರೆಯುವುದಿಲ್ಲ. ಈ ಸಂಬಂಧ ಕಾಯ್ದೆಗೆ ತಿದ್ದುಪಡಿ ತರುವುದು ಅನಿವಾರ್ಯ. ಲೋಕಾಯುಕ್ತದಿಂದ ದಾಳಿಗೊಳಗಾದ ಹಾಗೂ ಅಪಾರ ಹಣ ಗಳಿಸಿದ್ದ ಅಂದರೆ ಆದಾಯಕ್ಕಿಂಲೂ ಹೆಚ್ಚಿನ ಆಸ್ತಿ ಗಳಿಸಿದ್ದ ನೂರಾರು ಅಧಿಕಾರಿಗಳು, ಸಾರ್ವಜನಿಕ ನೌಕರರು ಇಂದು ಮತ್ತೆ ತಮ್ಮ ಕೆಲಸಗಳಿಗೆ ವಾಪಸ್ಸು ಹೋಗಿ ಮತ್ತೆ ಭ್ರಷ್ಟಾಚಾರದಲ್ಲಿ ತೊಡಗುತ್ತಿದ್ದಾರೆ. ಆದರೆ ಭ್ರಷ್ಟ ಅಧಿಕಾರಿಗಳನ್ನು ಹಿಡಿದ ಮೇಲೂ ಅವರ ಮೇಲೆ ಯಾವುದೇ ಕ್ರಮ ಜರುಗಿಸಲು ನಮ್ಮ ಲೋಕಾಯುಕ್ತ ಕಾಯ್ದೆಯಲ್ಲಿ ಅವಕಾಶಗಳಿಲ್ಲ. ಏಕೆಂದರೆ ಕ್ರಮ ತೆಗೆದುಕೊಳ್ಳಲು ಸರ್ಕಾರದ ಕ್ರಮ ಅತ್ಯಗತ್ಯ. ಆದುದರಿಂದ ಸರ್ಕಾರ ಈ ನಿಟ್ಟಿನಲ್ಲಿ ಲೋಕಾಯುಕ್ತಕ್ಕೆ ಸ್ವಯಂ ಪ್ರೇರಿತ ತನಿಖೆ ನಡೆಸುವ ಅಧಿಕಾರವನ್ನು ಕೊಡುವುದು ಸೂಕ್ತ.

ಸರ್ಕಾರವು ಲೋಕಾಯುಕ್ತ ಕಾಯ್ದೆಗೆ ತಿದ್ದುಪಡಿಯನ್ನು ತರಬೇಕು. ತಿದ್ದುಪಡಿಯನ್ನು ತರದೆ ಲೋಕಾಯುಕ್ತದ ಸರಾಗ ಕಾರ್ಯನಿರ್ವಹಣೆ ಅಸಾಧ್ಯ. ಸರ್ಕಾರ ಲೋಕಾಯುಕ್ತ ನೀಡುವ ಸಲಹೆಗೆ ಸ್ಪಂದಿಸಬೇಕು. ಇಲ್ಲವಾದಲ್ಲಿ ಲೋಕಾಯುಕ್ತ ಕಷ್ಟಪಟ್ಟು ನಿರ್ವಹಿಸಿದ ತನಿಖೆಗಳು ನಿಷ್ಪ್ರಯೋಜಕವಾಗುತ್ತವೆ. ೨೦೦೨ರಲ್ಲಿ ಸರ್ಕಾರಿ ನೌಕರರ 'ಸೇವಾ ನಿಯಮಕ್ಕೆ' ಸಂಬಂಧಿಸಿದಂತೆ ಮಾಡಿರುವ ತಿದ್ದುಪಡಿ ಪರೋಕ್ಷವಾಗಿ ಭ್ರಷ್ಟ ಅಧಿಕಾರಿಗಳ ರಕ್ಷಣೆಗೆ ಸಹಾಯಕಾರಿಯಾಗಿದೆ. ಈ ಸೇವಾ ನಿಯಮಗಳು ಸರ್ಕಾರಿ ನೌಕರರ ರಕ್ಷಕನಂತೆ ಕಾರ್ಯ ನಿರ್ವಹಿಸುತ್ತವೆ. ಇಂತಹ ಸೇವಾ ನಿಯಮಗಳ ತಿದ್ದುಪಡಿಯನ್ನು ಸರ್ಕಾರ ರದ್ದುಮಾಡುವುದು ಸೂಕ್ತ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ 'ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ'ಗೆ ಆಗಿಂದಾಗ್ಗೆ ತಿದ್ದುಪಡಿ ಮಾಡಿ, ಭ್ರಷ್ಟಾಚಾರ ನಿಯಂತ್ರಣಕ್ಕೆ ಪಣತೊಟ್ಟ ನಿಷ್ಠ ಅಧಿಕಾರಿಗಳ ಕೈಕಟ್ಟಿ ಹಾಕುತ್ತಿವೆ. ಇಂತಹ ತಿದ್ದುಪಡಿಗಳು ಯಾವಾಗಲೂ ಭ್ರಷ್ಟಾಚಾರ ನಿಯಂತ್ರಣ ಕಾರ್ಯಕ್ಕೆ ಪೂರಕವಾಗಿರಬೇಕೇ ಹೊರತು ಬಾಧಕವಾಗಿರಬಾರದು. ಈ ನಿಟ್ಟಿನಲ್ಲಿ ಸರ್ಕಾರಗಳು ಲೋಕಾಯುಕ್ತ

ಸಂಸ್ಥೆಯನ್ನು ಬಲಪಡಿಸುವತ್ತ ಕಾರ್ಯ ಪ್ರವೃತ್ತವಾಗಬೇಕು ಮತ್ತು ಕೆಳಕಂಡ ಬದಲಾವಣೆಯನ್ನು ಸದರಿ ಕಾಯ್ದೆಯಲ್ಲಿ ತರಬೇಕು.

- ಜನ ಪ್ರತಿನಿಧಿಗಳ ವಿರುದ್ಧ ಸ್ವಯಂ ಪ್ರೇರಿತ ದೂರು ದಾಖಲಿಸಲು ಅನುಮತಿ ಬೇಕು.
- ಜನಪ್ರತಿನಿಧಿ, ಅಧಿಕಾರಿಗಳ ವಿರುದ್ಧದ ಕ್ರಿಮಿನಲ್ ವಿಚಾರಣೆಗೆ ಸಂಬಂಧಿಸಿದ ಪ್ರಾಧಿಕಾರ ಅನುಮತಿ ರದ್ದುಗೊಳಿಸಬೇಕು.
- ಲೋಕಾಯುಕ್ತ ಹಾಗೂ ಉಪಲೋಕಾಯುಕ್ತರ ಮುಂದೆ ಶಪಥ ಪತ್ರ ಸಹಿತ ನೀಡಲಾದ ದೂರುದಾರರ ಗೌಪ್ಯತೆ ಹಾಗೂ ಭದ್ರತೆಯ ದೃಷ್ಟಿಯಿಂದ ದೂರುದಾರರ ಮಾಹಿತಿಯನ್ನು ಮಾಹಿತಿ ಹಕ್ಕು ಕಾಯಿದೆ ಅಡಿ ತರಬಾರದು.
- ಲೋಕಾಯುಕ್ತ ಸಂಸ್ಥೆಯನ್ನು ಸಂವಿಧಾನದ ಅಡಿ ತರಬೇಕೆ ಹೊರತು, ಕಾಯ್ದೆಯಡಿ ತರಬಾರದು.
- ಲೋಕಾಯುಕ್ತ ಸಂಸ್ಥೆಯನ್ನು ಸ್ವತಂತ್ರ, ಸ್ವಾಯತ್ತ ತನಿಖಾ ಸಂಸ್ಥೆಯನ್ನಾಗಿಸಬೇಕು.
- ಎಷ್ಟೇ ಗಂಭೀರ ಆರೋಪಗಳು ಕೇಳಿ ಬಂದರೂ ಈ ಕೆಳಗಿನವರ ವಿರುದ್ಧದ ಕ್ರಿಮಿನಲ್ ವಿಚಾರಣೆಗೆ ಕರ್ನಾಟಕ ಲೋಕಾಯುಕ್ತ ಕಾಯಿದೆ ಸೆಕ್ಷನ್ ೪ರ ಪ್ರಕಾರ ಸಂಬಂಧಪಟ್ಟ ಪ್ರಾಧಿಕಾರಗಳ ಅನುಮತಿ ಕಡ್ಡಾಯ.

೧. ಮುಖ್ಯಮಂತ್ರಿಗಳ ವಿಷಯದಲ್ಲಿ ರಾಜ್ಯಪಾಲ

೨. ಸಚಿವರುಗಳ ವಿಷಯದಲ್ಲಿ ಮುಖ್ಯಮಂತ್ರಿ

೩. ಶಾಸಕರುಗಳ ವಿಷಯದಲ್ಲಿ ಸ್ಪೀಕರ್–ಸಭಾಪತಿ

೪. ರಾಜ್ಯ ಸರ್ಕಾರದ ನೌಕರರ ವಿಷಯದಲ್ಲಿ ರಾಜ್ಯ ಸರಕಾರ

ಈ ರೀತಿ ಮೇಲ್ಮಟ್ಟದ ಪ್ರಾಧಿಕಾರದ ಅವಶ್ಯ ನುಮತಿ ಪಡೆಯುದನ್ನು ರದ್ದುಗೊಳಿಸಬೇಕಾಗಿದೆ.

ಲೋಕಾಯುಕ್ತ ಸಂಸ್ಥೆಗೆ ಅಧಿಕಾರವಿದೆ ಎಂದು ತೋರಿಸಿಕೊಟ್ಟ ನ್ಯಾ. ವೆಂಕಟಾಚಲ ಹಾಗೂ ನ್ಯಾ. ಸಂತೋಷ ಹೆಗ್ಡೆ ಅವರ ಅಧಿಕಾರವಧಿ ಬಳಿಕವೇ ಹೆಚ್ಚಿನ ಅಧಿಕಾರದ ಪ್ರಶ್ನೆ ಉದ್ಭವಿಸಿದೆ. ಇದಕ್ಕೂ ಹಿಂದಿನ ಮೂವರು ಲೋಕಾಯುಕ್ತರು ಅಧಿಕಾರವನ್ನೇ ಚಲಾಯಿಸದ ಹಿನ್ನೆಲೆಯಲ್ಲಿ ಹೆಚ್ಚಿನ ಅಧಿಕಾರ ಕೊಡುವ ಪ್ರಶ್ನೆಯೇ ಮೂಡಲಿಲ್ಲ. ರಾಜಕಾರಣಿಗಳು ಹಾಗೂ ಅಧಿಕಾರಿಗಳು ಲೋಕಾಯುಕ್ತರಿಗೆ ಹೆಚ್ಚಿನ ಅಧಿಕಾರ ನೀಡುವ ವಿಷಯದಲ್ಲಿ ವಿರುದ್ಧ ನಲುವು ಹೊಂದಿದ್ದಾರೆ.

ಲೋಕಾಯುಕ್ತರು ಪರಮಾಧಿಕಾರ ಕೇಳುತ್ತಿದ್ದಾರೆ. ಇಂತಹ ಪರಮಾಧಿಕಾರ ಪ್ರಜಾಪ್ರಭುತ್ವದಲ್ಲಿ ಯಾರಿಗೂ ಕೊಡಲಾಗದು ಎಂದು ಲೋಕಾಯುಕ್ತರನ್ನು ಜನರ ಕಣ್ಣಲ್ಲಿ ದಾರಿ ತಪ್ಪಿಸಲಾಗುತ್ತಿದೆ. ಅಧಿಕಾರಕ್ಕೆ ಬರುವ ಮುನ್ನ ಎಲ್ಲ ಮುಖ್ಯಮಂತ್ರಿಗಳು ಲೋಕಾಯುಕ್ತಕ್ಕೆ ಹೆಚ್ಚಿನ ಅಧಿಕಾರ ನೀಡುವುದಾಗಿ ಬಾಯಿಮಾತಿನಲ್ಲಿ ಹೇಳುತ್ತಾರೆ. ವಾಸ್ತವದಲ್ಲಿ ಇದನ್ನು ಕಾರ್ಯರೂಪಕ್ಕೆ ತರುವುದಿಲ್ಲ ಇದಕ್ಕೆ ಉದಾಹರಣೆ ಎಂದರೆ ಲೋಕಾಯುಕ್ತಕ್ಕೆ ಹೆಚ್ಚಿನ ಅಧಿಕಾರ ನೀಡುವ ಕುರಿತು ಚುನಾವಣೆ ಪ್ರಣಾಳಿಕೆಯಲ್ಲಿ ಪ್ರಕಟಿಸಿದ್ದ ಕಾಂಗ್ರೆಸ್ ಈವರೆಗೂ ಇದನ್ನು ಈಡೇರಿಸಿಲ್ಲ.

ರಾಜ್ಯ ಸರಕಾರದ ಅಧಿಕಾರಿಗಳು ಅಥವಾ ಜನಪ್ರತಿನಿಧಿಗಳ ವಿರುದ್ಧ ಕ್ರಿಮಿನಲ್ ವಿಚಾರಣೆ ನಡೆಸುವ ಅಧಿಕಾರ ಲೋಕಾಯುಕ್ತ ಸಂಸ್ಥೆಗೆ ಇಲ್ಲ. ಈ ಅಂಶಗಳನ್ನು ಸೇರಿದಂತೆ ಕೆಲವು ತಿದ್ದುಪಡಿ ಕೋರಿ ನ್ಯಾ ಸಂತೋಷ ಹೆಗ್ಡೆ ಆ ನಂತರ ಬಂದ ನ್ಯಾ. ಭಾಸ್ಕರರಾವ್ ಅವರು ರಾಜ್ಯ ಸರಕಾರಕ್ಕೆ ಅನೇಕ ಪತ್ರಗಳನ್ನು ಬರೆದರು. ಈ ಪತ್ರಗಳು ಸರಕಾರದ ಕಡತದಲ್ಲಿ ಭದ್ರವಾಗಿಯೇ ಉಳಿದಿವೆ. ಸಂವಿಧಾನದ ಪ್ರಕಾರ ಸರ್ವರಿಗೂ ಒಂದೆ ನ್ಯಾಯ ಸಿಗಬೇಕು. ಭ್ರಷ್ಟರ ವಿರುದ್ಧ ಕ್ರಮಕ್ಕೆ ಸರಕಾರ ಅಥವಾ ಮತ್ತೊಂದು ಪ್ರಾಧಿಕಾರದ ಅನುಮತಿ ಬೇಕು ಎಂದಾದರೆ ಹೆಚ್ಚಿನ ಸಂದರ್ಭದಲ್ಲಿ ಅನುಮತಿ ಸಿಗುವುದು ವಿರಳ. ಇದೇ ಕಾರಣದಿಂದ ಗಣಿ ಅಕ್ರಮದಿಂದ ಅಂದಿನ ಮುಖ್ಯಮಂತ್ರಿ ಧರಂಸಿಂಗ್ ನುಣುಚಿಕೊಂಡರು. ಸಂದರ್ಭ ಬದಲಾಗಿದ್ದರೆ ಯಡಿಯೂರಪ್ಪ ಕೂಡ ಸಿ. ಎಂ ಕುರ್ಚಿಯಲ್ಲಿ ಮುಂದುವರೆಯುತ್ತಿದ್ದರು.

ಲೋಕಾಯುಕ್ತ ಕಾಯ್ದೆಯ ಈ ಋಣಾತ್ಮಕ ಅಂಶವನ್ನು ರಾಜ್ಯ ಸರಕಾರ ದುರುಪಯೋಗ ಪಡಿಸಿಕೊಳ್ಳುವ ಸಾಧ್ಯತೆಯೇ ಹೆಚ್ಚು. ಕೋಟ್ಯಂತರ ರೂಗಳನ್ನು ವ್ಯಯಿಸಿ, ಗಣಿ ಅಕ್ರಮದ ಕುರಿತು ಸಮಗ್ರ ವರದಿ ನೀಡಲಾಗಿದೆ. ಆದರೆ ಹಿಂದಿನ ಸರಕಾರ ನೆಪಕ್ಕೆ ಮಾತ್ರ ಒಂದು ಸಮಿತಿ ರಚಿಸಿ ಮೂರು ತಿಂಗಳ ನಂತರ ವರದಿ ತಿರಸ್ಕರಿಸಿದರೆ ಲೋಕಾಯುಕ್ತದ ಪರಿಶ್ರಮಕ್ಕೆ ಏನು ಬೆಲೆ ನೀಡಿದಂತಾಯ್ತು.

ಲೋಕಾಯುಕ್ತದ ಮೂಲ ಉದ್ದೇಶ ಒಳ್ಳೆಯ ಆಡಳಿತ ನೀಡುವುದು, ಆಡಳಿತದ ನ್ಯೂನತೆಗಳನ್ನು ಸರಿಪಡಿಸುವುದು. ಭ್ರಷ್ಟಾಚಾರವನ್ನು ನಿಯಂತ್ರಿಸುವುದಾಗಿದೆ. ನಾವು ಲೋಕಾಯುಕ್ತದ ಮೂಲಕ ಉತ್ತಮ ಆಡಳಿತಕ್ಕೆ ಒತ್ತು ಕೊಡಬೇಕು. ಭ್ರಷ್ಟಾಚಾರದಿಂದ ಉತ್ತಮ ಆಡಳಿತ ಕೊಡಲು ಸಾಧ್ಯವಿಲ್ಲ. ಉತ್ತಮ ಆಡಳಿತ ಕೊಟ್ಟರೆ ಭ್ರಷ್ಟಾಚಾರ ತನ್ನಿಂದತಾನೇ ನಿಯಂತ್ರಣಕ್ಕೆ ಬರುತ್ತದೆ. ಲೋಕಾಯುಕ್ತ ಸಂಸ್ಥೆಯು ಇಂದು ಜನರ ಕಲ್ಪನೆಯಲ್ಲಿ ಭ್ರಷ್ಟಾಚಾರ ವಿರೋಧಿ ಸಂಸ್ಥೆಯಾಗಿದೆಯೇ ಹೊರತು

ಉತ್ತಮ ಆಡಳಿತ ಕೊಡುವುದು ಸಹ ಅದರ ಪ್ರಮುಖ ಜವಾಬ್ದಾರಿ ಎಂದು ಬಹುತೇಕರಿಗೆ ಗೊತ್ತಿಲ್ಲ. ಅಂದರೆ ಲೋಕಾಯುಕ್ತ ಸಂಸ್ಥೆಗೆ ದೂರು ನೀಡಿದರೆ ನಮಗೆ ಉತ್ತಮ ರಸ್ತೆ, ನೀರಿನ ಸೌಕರ್ಯ ಮುಂತಾದ ಉತ್ತಮ ಸೌಕರ್ಯಗಳು ಸಿಗಬಹುದು ಅಂತ ಜನರಿಗೆ ಗೊತ್ತಿಲ್ಲ. ಭ್ರಷ್ಟಾಚಾರ ನಿಯಂತ್ರಣವನ್ನು ಲೋಕಾಯುಕ್ತ ಪೋಲಿಸ್ ವಿಭಾಗ ನಿಯಂತ್ರಿಸುತ್ತದೆ. ಆದರೆ ಮಾಧ್ಯಮಗಳಲ್ಲಿ ಇದಕ್ಕೆ ಹೆಚ್ಚಿನ ಪ್ರಚಾರ ಸಿಗುತ್ತಿದೆ. ಭ್ರಷ್ಟಾಚಾರ ನಿಯಂತ್ರಣದಲ್ಲಿ ಲೋಕಾಯುಕ್ತ ಕೆಲಸ ಮಾಡಿರುವುದು ಕೇವಲ ಶೇಕಡ ೧೦ ಮಾತ್ರ. ಉಳಿದ ಶೇಕಡ ೯೦ ಭಾಗ ಅದು ಜನರ ಕಷ್ಟ ನೋವುಗಳಿಗೆ ಸ್ಪಂದಿಸುವ ಮೂಲಕ ಉತ್ತಮ ಆಡಳಿತ ಸ್ಥಾಪಿಸಲು ಕೆಲಸ ಮಾಡಿರುವುದನ್ನು ಇತ್ತೀಚಿನ ದೂರುಗಳ ವಿಶ್ಲೇಷಣೆ ಮಾಡಿದಾಗ ತಿಳಿದು ಬರುತ್ತದೆ. ನ್ಯಾಯಮೂರ್ತಿ ಸಂತೋಷ ಹೆಗ್ಡೆಯವರ ಕಾಲದಲ್ಲಿ ಸರಕಾರಕ್ಕೆ ಭ್ರಷ್ಟ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಲು ಆಗ್ರಹಿಸಿ ಪತ್ರ ಬರೆದರೆ ಶೇಕಡ ೧೫ರಿಂದ ೨೦ರಷ್ಟು ಜನರ ವಿರುದ್ಧ ಮಾತ್ರ ಸರ್ಕಾರ ತಪ್ಪಿತಸ್ಥರ ವಿರುದ್ದ ಕ್ರಮ ತೆಗೆದುಕೊಳ್ಳುತ್ತಿತ್ತು. ಮತ್ತೆ ಪತ್ರದ ಮೂಲಕ, ದೂರವಾಣಿ ಮೂಲಕ ಮರು ನೆನಪಿಸಿದಾಗಲೂ ಸಹ ಅದು ಕೇವಲ ಶೇಕಡ ೫ ಹೆಚ್ಚುತ್ತಿತ್ತೇ ಹೊರತು ಲೋಕಾಯುಕ್ತದ ಅಗ್ರಹಕ್ಕೆ ಪ್ರತಿಫಲ ದೊರೆತಿಲ್ಲ ಎಂಬುದು ಪೂರ್ವ ಅಧ್ಯಯನದಿಂದ ತಿಳಿದುಬರುತ್ತದೆ.

ಲೋಕಾಯುಕ್ತ ಸೇರಿದಂತೆ ಪ್ರಜಾಪ್ರಭುತ್ವದಲ್ಲಿ ಪರಮಾಧಿಕಾರ ಯಾರಿಗೂ ಇರಬಾರದು ಎನ್ನುವುದಷ್ಟೇಯಲ್ಲ, ಸರ್ಕಾರ ಇದನ್ನು ದುರ್ಬಲ ಮಾಡುತ್ತಿದೆ ಎಂಬ ಸಂದೇಹ ಜನರಲ್ಲಿದೆ. ನ್ಯಾಯಮೂರ್ತಿ ಸಂತೋಷ ಹೆಗ್ಡೆಯವರು ಲೋಕಾಯುಕ್ತರಾಗಿ ನೇಮಕವಾಗುವ ಮುಂಚೆ ಸರಕಾರದ ಕಾರ್ಯದರ್ಶಿಯಿಂದ ಹಿಡಿದು ಸಿಪಾಯಿವರೆಗೂ, ಕ್ರಮ ತೆಗೆದುಕೊಳ್ಳಬಹುದಾಗಿತ್ತು. ಆದರೆ ಸಂತೋಷ್ ಹೆಗಡೆಯವರು ಲೋಕಾಯುಕ್ತರಾದ ನಂತರ ಈ ಅಧಿಕಾರವನ್ನು ಮೊಟಕುಗೊಳಿಸಿ ಕೇವಲ ದ್ವಿತೀಯ ದರ್ಜೆಯ ಅಧಿಕಾರಿಯವರೆಗೆ ಸೀಮಿತಗೊಳಿಸಲಾಯಿತು. ಮುಖ್ಯಮಂತ್ರಿ, ಮಂತ್ರಿಗಳು, ಶಾಸಕರು, ರಾಜ್ಯ ಕಾರ್ಯದರ್ಶಿ ಸೇರಿದಂತೆ ಒಟ್ಟಾರೆ ಮೊದಲನೆಯ ದರ್ಜೆ ಅಧಿಕಾರಿಗಳಿಂದ ಹಿಡಿದು ಎಲ್ಲರೂ ಲೋಕಾಯುಕ್ತ ವ್ಯಾಪ್ತಿಗೆ ಬಂದರೆ, ದ್ವಿತಿಯ ದರ್ಜೆಯ ಅದಿಕಾರಿ ಹಿಡಿದು ಕೆಳಗಡೆ ಇರುವ ನೌಕರರು ಉಪ ಲೋಕಾಯುಕ್ತರ ವ್ಯಾಪ್ತಿಗೆ ಬರುತ್ತಾರೆ. ಇದನ್ನು ಕಾಯ್ದೆಯಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ. ಹಲವಾರು ವಾದ ವಿವಾದಗಳ ನಂತರ ಮತ್ತೆ ಈ ಅಧಿಕಾರ ಲೋಕಾಯುಕ್ತರಿಗೆ ಕೊಡಲಾಯಿತು. ಲೋಕಾಯುಕ್ತ ಪೊಲೀಸರು ಕೈಗೊಳ್ಳುವ ತನಿಖೆಯಲ್ಲಿ ಹುರುಳಿಲ್ಲ, ಪುರಾವೆ ಇಲ್ಲದರ ಹಿನ್ನೆಲೆಯಲ್ಲಿ ಶಿಕ್ಷೆ ಆಗುತ್ತಿಲ್ಲ ಎಂಬ ಮಾತು ಇತ್ತೀಚೆಗೆ ಸಾರ್ವತ್ರಿಕವಾಗಿ ಕೇಳಿಬರುತ್ತಿದೆ. ನ್ಯಾಯಾಲಯದಲ್ಲಿ ಒಂದು ಪ್ರಕರಣ ಪೂರ್ಣಗೊಳ್ಳಬೇಕೆಂದರೆ ಸರಾಸರಿ ಸುಮಾರು ೧೦ರಿಂದ

೧೫ ವರ್ಷಗಳು ಬೇಕು. ಇದಕ್ಕೆ ಬೇರೆ ಬೇರೆ ಕಾರಣಗಳಿವೆ. ಆ ಸಮಯಕ್ಕೆ ಹೆಚ್ಚು ಕಡಿಮೆ ಅಪಾದಿತ ವ್ಯಕ್ತಿಯು ನಿವೃತ್ತಿ ಆಗುವ ಹಂತ ತಲುಪಿರುತ್ತಾನೆ. ಅಥವಾ ಅವನಿಗೆ ವಯಸ್ಸಾಗಿರುತ್ತದೆ. ಕೆಲ ಸಾಂಸಾರಿಕ ಜವಾಬ್ದಾರಿಗಳು ಹೆಚ್ಚುತ್ತವೆ. ಅಂತಹುದರಲ್ಲಿ ಇಂಥವರ ಕುರಿತು ಇತರ ಸಂಬಂಧಪಟ್ಟ ವ್ಯಕ್ತಿಗಳಿಗೆ ಅಷ್ಟೇ ಏಕೆ, ನ್ಯಾಯಾಧೀಶರಿಗೂ ಸಹ ಒಂದು ರೀತಿಯ ಮರುಕ, ಕನಿಕರ ಬರುತ್ತದೆ. ಆಗ ಸಹಜವಾಗಿ ಇಂಥ ಪ್ರಕರಣಗಳು ಬಿದ್ದು ಹೋಗುತ್ತವೆ. ಇಂಥ ಪ್ರಕರಣಗಳು ಆರು ತಿಂಗಳಲ್ಲಿಯೇ ವಿಚಾರಣೆ ಮುಗಿಯುವಂತೆ ಕಾಯ್ದೆಗೆ ತಿದ್ದುಪಡಿ ತಂದರೆ ಶಿಕ್ಷೆಗೆ ಒಳಪಡುವವರ ಪ್ರಮಾಣ ಹೆಚ್ಚಬಹುದು.

ಇದಕ್ಕಾಗಿ 'ಕ್ರಿಮಿನಲ್ ಪ್ರೊಸಿಜರ್ ಲಾ'ನಲ್ಲಿ ಬದಲಾವಣೆ ತರಬೇಕು. ಪ್ರಾಸಿಕ್ಯೂಷನ್ ಮೇಲಿರುವ ಒತ್ತಡ ಕಡಿಮೆ ಮಾಡಬೇಕು. ಕೋರ್ಟ್‌ಗಳು ಜಾಸ್ತಿ ಆಗಬೇಕು. ಇಷ್ಟೇ ಅಡ್ಜರ್ನಮೆಂಟು ತಗೋಬೇಕು ಎಂದು ಲಾಯರಗಳ ಮೇಲೆ ನಿರ್ಬಂಧನೆ ಹೇರಬೇಕು. ಒಂದು ಪ್ರಕರಣದಲ್ಲಿ ಕೇವಲ ಹತ್ತು ಅಡ್ಜರ್ನಮೆಂಟುಗಳನ್ನು ಲಾಯರ್ ಪಡೆಯುವಂತೆ ಕಾಯ್ದೆಯಲ್ಲಿ ಬದಲಾವಣೆ ಆಗಬೇಕು. ಈ ಕುರಿತು ಸಾಕಷ್ಟು ಚರ್ಚೆಗಳು ಆಗಬೇಕು. ಈಗ ಕೆಲವೊಂದು ಕೇಸಿನಲ್ಲಿ ಸರಾಸರಿ ೧೦೦ರಿಂದ ೨೦೦ ಅಡ್ಜರ್ನಮೆಂಟುಗಳು ಆಗುತ್ತಿವೆ. ಇವುಗಳಿಂದ ಪ್ರಕರಣ ಬಗೆಹರಿಯುವುದು ವಿಳಂಬವಾಗುತ್ತದೆ. ಒಂದು ಪಕ್ಷದವರಿಗೆ ಹೆಚ್ಚಿನ ಲಾಭವಾಗುತ್ತದೆ. ಅಪರಾಧಿಗೆ ಶಿಕ್ಷೆ ಆಗದಿದ್ದರೂ ಚಿಂತೆ ಇಲ್ಲ. ಒಬ್ಬ ನಿರಪರಾಧಿಗೆ ಶಿಕ್ಷೆಯಾಗಬಾರದು ಎಂಬ ಪರಿಕಲ್ಪನೆ ಕೂಡ ಹೋಗಬೇಕು. ಈ ನಿಟ್ಟಿನಲ್ಲಿ ನ್ಯಾಯಾಂಗ ಸುಧಾರಣೆ ಆಗಬೇಕು. ಹಾಲಿ ಇರುವ ಕಾನೂನಿನಲ್ಲಿ ಸಾಕಷ್ಟು ಗೊಂದಲ ಇರುವುದರಿಂದ ಅಪರಾಧಿಗಳಿಗೆ ಸಾಕಷ್ಟು ಸಹಾಯ ಆಗುತ್ತಿದೆ. ಭ್ರಷ್ಟಾಚಾರದ ಆಪಾದನೆ ಹೊರೆಸಿ ನಿವೃತ್ತಿಯಾದವರ ಮೇಲೂ ಕೂಡ ಪ್ರಕರಣ ದಾಖಲಿಸಬಹುದು. ಆದರೆ ಇಂತಹ ಪ್ರಕರಣವನ್ನು ಲೋಕಾಯುಕ್ತ ಪೋಲಿಸ್‌ರು ದಾಖಲಿಸಿಕೊಳ್ಳುವ ಹಾಗಿಲ್ಲ. ಸಾಮಾನ್ಯ ಪೊಲೀಸರು ದಾಖಲಿಸಿಕೊಳ್ಳಬಹುದು. ಇಂತಹ ಪ್ರಕರಣಗಳನ್ನು ಚೀಟಿಂಗ್ ಕೇಸ್ ಅಂತ ಪರಿಗಣಿಸಲಾಗುತ್ತದೆ. ಇವುಗಳಿಗೆ ಕೋರ್ಟಿನಲ್ಲಿ ಶಿಕ್ಷೆಯ ಪ್ರಮಾಣ ಕೂಡ ಕಡಿಮೆ ಎನ್ನಬಹುದು.

ತಾವು ಸುಪ್ರಿಂಕೋರ್ಟ್ ನ್ಯಾಯಾಧೀಶರಾಗಿದ್ದಾಗ ಜನ ಸಾಮಾನ್ಯರು ಇಷ್ಟೊಂದು ಕಷ್ಟ ಕಾರ್ಪಣ್ಯ ಪಡುತ್ತಿದ್ದಾರೆಂದು ತಮಗೆ ಗೊತ್ತಿರಲಿಲ್ಲ ಎಂದು ಹೇಳುವ ನ್ಯಾಯಮೂರ್ತಿ ಸಂತೋಷ ಹೆಗ್ಡೆಯವರು ತಾವು ಲೋಕಾಯುಕ್ತರಾದ ಮೇಲೆಯೆ ಜನ ಸಾಮಾನ್ಯರ ವಿಷಯಗಳು ತಿಳಿಯತೊಡಗಿದವು. ಲೋಕಾಯುಕ್ತ ನೇಮಕಾತಿಗಳು ರಾಜಕೀಯ ಪ್ರೇರಿತ ಆಗುತ್ತವೆ ಎಂಬ ಮಾತಿನಲ್ಲಿ ಹುರುಳಿಲ್ಲದೆ ಇರಲಾರದು. ಆದರೆ ಈ ಹುದ್ದೆಗೆ ಬರುವವರಿಗೆ ಜನ ಸೇವೆ ಮಾಡಬೇಕು

ಎಂಬ ಕಾಳಜಿ ಮತ್ತು ಮನಸ್ಸಿರಬೇಕು. ಆಗ ಮಾತ್ರ ಈ ಹುದ್ದೆಗೆ ನ್ಯಾಯ ದೊರಕಿಸಿಕೊಡಲು ಸಾಧ್ಯ ಎನ್ನುತ್ತಾರೆ.

ಲೋಕಾಯುಕ್ತ ಸಂಸ್ಥೆಯಲ್ಲಿ ಭ್ರಷ್ಟರಿದ್ದಾರೆ. ಆದರೆ ಲೋಕಾಯುಕ್ತದಲ್ಲಿರುವ ಪೊಲೀಸ್ ಅಧಿಕಾರಿ ಆಗಿರಬಹುದು, ನ್ಯಾಯಾಧೀಶರಾಗಿರಬಹುದು, ಅಥವಾ ಬೇರೆ ಯಾರೆ ಅಧಿಕಾರಿ ಆಗಿರಬಹುದು. ಅವನು ತಪ್ಪು ಮಾಡಿದ್ದಾನೆ ಅಂತ ಕಂಡುಬಂದಲ್ಲಿ ಅವನನ್ನು ತತಕ್ಷಣವೇ ಮಾತೃ ಸಂಸ್ಥೆಗೆ ವರ್ಗಾವಣೆ ಮಾಡಬಹುದು. ಇದು ಹಾಲಿ ಕಾನೂನಿನಲ್ಲಿರುವ ಅನುಕೂಲಕರ ಅಂಶ. ಏಕೆಂದರೆ ಈ ಸಂಸ್ಥೆಯಲ್ಲಿ ಎಲ್ಲ ಅಧಿಕಾರಿಗಳನ್ನು ಎರವಲು ಸೇವೆ ಮೇಲೆ ಪಡೆದುಕೊಳ್ಳಲಾಗುತ್ತದೆ. ಲೋಕಾಯುಕ್ತರಾಗಿ ನೇಮಕಗೊಳ್ಳುವವರು ಹೊರ ರಾಜ್ಯದವರೇ ಇರಬೇಕೆನ್ನುವ ವಾದದಲ್ಲಿ ಹುರುಳಿಲ್ಲ. ಹೊರ ರಾಜ್ಯದಿಂದ ಬಂದವರಿಗೆ ಭಾಷೆಯ ಸಮಸ್ಯೆ ಆಗುತ್ತದೆ. ಅವರಿಗೆ ಸ್ಥಳಿಯ ಭಾಷೆ ಗೊತ್ತಿರುವುದಿಲ್ಲ. ಸ್ಥಳೀಯ ಜನರ, ಹಳ್ಳಿ ಜನರ ಸಮಸ್ಯೆಯನ್ನು ಅರ್ಥಮಾಡಿಕೊಳ್ಳಲು ಹೊರ ರಾಜ್ಯದಿಂದ ಬಂದವರಿಗೆ ತೊಂದರೆಯಾಗುತ್ತದೆ. ಸಾಮಾನ್ಯವಾಗಿ ಜನಸಾಮಾನ್ಯರು ಕನ್ನಡದಲ್ಲಿಯೇ ಮನವಿ, ದೂರುಗಳನ್ನು ಕೊಡುತ್ತಾರೆ. ಇಂತಹ ಮನವಿ, ದೂರುಗಳಿಗೆ ನೇರವಾಗಿ ಸ್ಪಂದಿಸಲು ಹೊರ ರಾಜ್ಯದಿಂದ ಬಂದ ಲೋಕಾಯುಕ್ತರಿಗೆ ಕಷ್ಟ ಇದಕ್ಕೆ ಒಳ್ಳೆಯ ಉದಾಹರಣೆ ಎಂದರೆ ಹಾಲಿ ಲೋಕಾಯುಕ್ತ ನ್ಯಾಯಮೂರ್ತಿ ವೈ. ಭಾಸ್ಕರರಾವ್. ಇವರು ಮೂಲತಃ ಆಂಧ್ರ ಪ್ರದೇಶದವರಾದ ಕಾರಣ ಕನ್ನಡ ಭಾಷೆ ತಿಳಿಯುವುದಿಲ್ಲ. ಹೀಗಾಗಿ ಅಧಿಕಾರ ವಹಿಸಿಕೊಂಡು ಒಂದು ವರ್ಷವಾದರೂ ಸಮಗ್ರ ರಾಜ್ಯ ಪ್ರವಾಸ ಕೈಗೊಂಡಿಲ್ಲ. ಜನಸಾಮಾನ್ಯರೊಂದಿಗೆ ಬೆರೆಯಲಾಗುತ್ತಿಲ್ಲ. ತೆಲುಗು ಭಾಷೆ ಮಾತನಾಡುವ ಪ್ರದೇಶಗಳಾದ ಕೋಲಾರ. ಚಿಕ್ಕ ಬಳ್ಳಾಪುರ ಜಿಲ್ಲೆಗೆ ಮಾತ್ರ ಪ್ರವಾಸಕ್ಕೆ ಹೋಗಿಬಂದಿದ್ದಾರೆ ಎಂಬುದು ಗಮನಿಸಬೇಕಾದ ಅಂಶ. ಇನ್ನೊಂದು ಪ್ರಮುಖ ಅಂಶವೆಂದರೆ ಲೋಕಾಯುಕ್ತ ಹಾಗೂ ಉಪಲೋಕಾಯುಕ್ತರಾಗಿ ನೇಮಕಮಾಡುವ ಮುಂಚೆ ದೈಹಿಕ ಸದೃಢತೆ, ಪ್ರವಾಸದ ಕಾರ್ಯಕ್ಷಮತೆ ಕೆಲಸದ ಬದ್ಧತೆಯನ್ನು ಮಾನದಂಡವನ್ನಾಗಿ ರೂಪಿಸಿಕೊಳ್ಳಬೇಕು. ಇದು ನಿವೃತ್ತರ ಅಥವಾ ನಿರಾಶ್ರಿತರ ತಾಣವಾಗದಂತೆ ನಿಯಮಗಳಲ್ಲಿ ಮಾರ್ಪಾಡು ಮಾಡುವುದು ಕೂಡ ಅವಶ್ಯವಿದೆ.

೩. ೩. ಭ್ರಷ್ಟಾಚಾರ ಕಾಯ್ದೆಗಳ ವಿಶ್ಲೇಷಣೆ

೧. ಸರ್ಕಾರಿ ನೌಕರನು ತನ್ನ ಆದಾಯದ ಮಿತಿಗಿಂತ ಹೆಚ್ಚಿನ ಆದಾಯವನ್ನು ಹೊಂದಿದಾಗ ಮತ್ತು ಅದಕ್ಕೆ ಸಂಬಂಧಪಟ್ಟಂತೆ ಮಾಹಿತಿ ದೊರೆತಾಗ ಅಥವಾ ಈ ಸಂಬಂಧವಾಗಿ ದೂರು ದಾಖಲಾದಾಗ, ಕರ್ನಾಟಕ ಲೋಕಾಯುಕ್ತದ ಪೊಲೀಸರು ಪರಾಮರ್ಶಿಸಿ ನಿಗದಿತ ಮೂಲ ಮಾಹಿತಿಗಳನ್ನು ಸಂಗ್ರಹಿಸಿ, ಭ್ರಷ್ಟಾಚಾರ ಅಧಿನಿಯಮದ ಕಲಂ ೧೩(೧)(ಇ),

ಸಹ ಕಲಂ ೧೩(೨)ರ ಅಡಿಯಲ್ಲಿ ಪ್ರಕರಣವನ್ನು ದಾಖಲಿಸಿ, ಬೆಲೆ ಬಾಳುವ ಆಸ್ತಿಗಳನ್ನು ಮತ್ತು ಮೌಲಿಕವಾದ ಚಿನ್ನ, ನಗದು ಮತ್ತು ಇತರೆ ಚರ ಮತು ಸ್ಥಿರ ಆಸ್ತಿಗಳನ್ನು ಬಹಿರಂಗಗೊಳಿಸುವಂತಹ ದಾಳಿಗಳನ್ನು ನಡೆಸುತ್ತಾರೆ.

೨. ಯಾವಾಗ ಒಬ್ಬ ಸರ್ಕಾರಿ ನೌಕರನು ಯಾವುದೇ ಸಾರ್ವಜನಿಕ ಹಿತಾಸಕ್ತಿಯಿಲ್ಲದೆ ಒಬ್ಬ ಸರ್ಕಾರಿ ನೌಕರನಾಗಿ ತನ್ನ ಅಧಿಕಾರದ ದುರುಪಯೋಗಪಡಿಸಿಕೊಂಡು, ಸರ್ಕಾರದ ಕೆಲಸ ಮಾಡಿಕೊಡಲು ತನಗಾಗಿ ಅಥವಾ ಇತರೆಯವರಿಗಾಗಿ ಯಾವುದೇ ಬೆಲೆ ಬಾಳುವ ವಸ್ತುಗಳನ್ನು ಅಥವಾ ಹಣದ ರೂಪದ ಪ್ರತಿಫಲವನ್ನು ಬಯಸುತ್ತಾನೋ ಮತ್ತು ಈ ಸಂಬಂಧವಾಗಿ ಫಿರ್ಯಾದಿ (Complainant) ಯು ಪೊಲೀಸರೆದುರು ಔಪಚಾರಿಕವಾಗಿ ದೂರನ್ನು ಸಲ್ಲಿಸಿದಾಗ ಭ್ರಷ್ಟಾಚಾರ ಅಧಿನಿಯಮದ ಕಲಂ ೭, ಕಲಂ ೧೩(೧)(ಡಿ) ಮತ್ತು ಕಲಂ ೧೩(೨) ಅಡಿಯಲ್ಲಿ ಪ್ರಕರಣವನ್ನು ದಾಖಲಿಸುತ್ತಾರೆ. ಸಂಶಯಕ್ಕೆ ಒಳಪಟ್ಟ ಸರ್ಕಾರಿ ನೌಕರನು ಹಣದ ನೋಟುಗಳನ್ನು ಲಂಚದ ಸ್ವರೂಪದಲ್ಲಿ ತೆಗೆದುಕೊಂಡಲ್ಲಿ ಆಗ ಅವನನ್ನು ಮಾಲು ಸಮೇತ ಹಿಡಿಯಲಾಗುವುದು.

೩. ಭ್ರಷ್ಟಾಚಾರ ಅಧಿನಿಯಮ, ೧೯೮೮ರ ಅಡಿಯಲ್ಲಿ ದಾಖಲಿಸುವ ದಾಳಿ ಮತ್ತು ಲಂಚ ಪ್ರಕರಣಗಳಲ್ಲದೆ, ಲೋಕಾಯುಕ್ತ ಕಾಯಿದೆಯ ಅಡಿಯಲ್ಲಿ ಪೊಲೀಸರಿಗೆ ಪೂರ್ವಭಾವಿ ತನಿಖೆಗಾಗಿ ಇತರೆ ಪ್ರಕರಣಗಳನ್ನು ಒಪ್ಪಿಸಲಾಗುವುದು.

ಭ್ರಷ್ಟಾಚಾರ ಅಧಿನಿಯಮದ ಅಡಿಯಲ್ಲಿ ಪ್ರಕರಣಗಳನ್ನು ದಾಖಲಿಸಿದ ನಂತರ ಲಂಚದ ಬೇಡಿಕೆ ಮತ್ತು ಸ್ವೀಕಾರದ ಸಂದರ್ಭದಲ್ಲಿ ಸರ್ಕಾರಿ ನೌಕರರನ್ನು ಮಾಲು ಸಮೇತ ಹಿಡಿದ ಪ್ರಸಂಗಗಳಲ್ಲಿ, ಸರ್ಕಾರಿ ನೌಕರನು ಅಕ್ರಮ ಆಸ್ತಿಯನ್ನು ಸಂಪಾದಿಸಿದಂತಹ ವಿಷಯ ಮೇಲ್ನೋಟಕ್ಕೆ ಕಂಡು ಬರುವಂತಹ ಪ್ರಕರಣವಾಗಿದ್ದಲ್ಲಿ, ಸಂಬಂಧಪಟ್ಟ ಶಿಸ್ತು ಪ್ರಾಧಿಕಾರಕ್ಕೆ ಅಂತಹ ಸರ್ಕಾರಿ ನೌಕರರ ಮುಕ್ತ ತನಿಖೆಯನ್ನು ನಡೆಸುವ ಹಿನ್ನೆಲೆಯಲ್ಲಿ ಹಾಗೂ ಸಾಕ್ಷ್ಯಾಧಾರಗಳನ್ನು ಹಾಳು ಮಾಡುವಂತಹ ಪ್ರಸಂಗಗಳನ್ನು ತಪ್ಪಿಸುವ ಸಲುವಾಗಿ ಅಮಾನತ್ತಿನಲ್ಲಿಡುವಂತೆ ಕೋರಲಾಗುವುದು. ಭ್ರಷ್ಟಾಚಾರ ನಿರ್ಮೂಲನ ಅಧಿನಿಯಮ ಕಾಯ್ದೆ ಅಡಿಯಲ್ಲಿ ಪ್ರಕರಣಗಳನ್ನು ದಾಖಲಿಸಿದ ನಂತರ, ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ದಾಖಲಾದ ಪ್ರಕರಣ ಮೇಲ್ನೋಟಕ್ಕೆ ಸಾಬೀತಾದಲ್ಲಿ, ಅವರನ್ನು ನ್ಯಾಯಾಲಯದ ಅಭಿಯೋಜನೆಗೆ ಒಳಪಡಿಸಬೇಕಾಗುತ್ತದೆ. ಈ ಕಾಯ್ದೆಯ ಕಲಂ ೧೯ರ ಪ್ರಕಾರ ಶಿಸ್ತು ಪ್ರಾಧಿಕಾರವು ಸಂಬಂಧಪಟ್ಟ ವಿಷಯಗಳ ಹಾಗೂ ಸಂದರ್ಭಗಳ ಬಗ್ಗೆ ಪರಿಶೀಲಿಸಿದ ನಂತರ, ಅಂತಹ ಸರ್ಕಾರಿ ನೌಕರರನ್ನು ಅಭಿಯೋಜಿಸಲು ಮಂಜೂರಾತಿಯನ್ನು ನೀಡಬೇಕಾಗುತ್ತದೆ. ಆದುದರಿಂದ ಪೊಲೀಸರು ತನಿಖೆಯ ನಂತರ ಸಂಬಂಧಪಟ್ಟ ಎಲ್ಲಾ ದಾಖಲಾತಿಗಳೊಡನೆ ಶಿಸ್ತು

ಪ್ರಾಧಿಕಾರಕ್ಕೆ ತಮ್ಮ ವರದಿಗಳನ್ನು ಸಲ್ಲಿಸಿ ಅಭಿಯೋಜನಾ ಮಂಜೂರಾತಿಯನ್ನು ಕೋರುತ್ತಾರೆ. ಅಭಿಯೋಜನಾ ಮಂಜೂರಾತಿಯ ನಂತರ ಸಂಬಂಧಪಟ್ಟ ಸರ್ಕಾರಿ ನೌಕರರನ್ನು ಅಭಿಯೋಜನೆಗೆ ಒಳಪಡಿಸಲು ಕೋರಿ ಆಪಾದನಾ ಪಟ್ಟಿಯನ್ನು ನ್ಯಾಯಾಲಯದ ಎದುರು ಮಂಡಿಸಲಾಗುವುದು. ತನಿಖೆ ನಂತರ ಆಪಾದಿತ ಸರ್ಕಾರಿ ನೌಕರನ ವಿರುದ್ಧ ಯಾವುದೇ ಪ್ರಕರಣ ಕಂಡುಬರದಿದ್ದಲ್ಲಿ, ಈಗಾಗಲೇ ನ್ಯಾಯಾಲಯಕ್ಕೆ ಸಲ್ಲಿಸಲಾದ ಪ್ರಥಮ ವರ್ತಮಾನ ವರದಿ (First Information Report-FIR)ಯನ್ನು ಮುಕ್ತಾಯಗೊಳಿಸುವಂತೆ ವರದಿಯನ್ನು ಸಲ್ಲಿಸಲಾಗುವುದು.

೩.೪. ನ್ಯಾಯಾಲಯದ ತೀರ್ಪುಗಳು

ಭ್ರಷ್ಟಾಚಾರ ತಡೆ ಕಾಯ್ದೆಯಡಿಯಲ್ಲಿ ಈ ಕೆಳಕಂಡ ವಿವಿಧ ನ್ಯಾಯಾಲಯಗಳ ತೀರ್ಪುಗಳನ್ನು ಇಲ್ಲಿ ವಿಶ್ಲೇಷಿಸಲಾಗಿದೆ. ಈ ನ್ಯಾಯಾಲಯದ ತೀರ್ಪಿನಲ್ಲಿ ಬಹಳ ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ, ಸಂಸತ್ ಸದಸ್ಯರು ಮತ್ತು ಶಾಸಕರು ಹಾಗೂ ಮಂತ್ರಿ ಮುಖ್ಯಮಂತ್ರಿಯಾದವರು ಕೂಡ ಸಾರ್ವಜನಿಕ ನೌಕರರೆಂದು ಸ್ಪಷ್ಟವಾಗಿ ಹೇಳಲಾಗಿದೆ. ಅಧಿಕಾರವಂತ ರಾಜಕಾರಣಿಗಳು ತಾವು ಸಾರ್ವಜನಿಕ ನೌಕರರಲ್ಲ ಎಂದು ಈ ತೀರ್ಪಿಗಿಂತ ಮುಂಚೆ ವಾದಿಸುತ್ತಿದ್ದರು. ಯಾರು ತಮ್ಮ ಸಾರ್ವಜನಿಕ ಸೇವೆಗಾಗಿ ಸಂಬಳ ಪಡೆಯುತ್ತಾರೋ, ಅಂತವರು ಸಾರ್ವಜನಿಕ ನೌಕರರು ಎಂಬುದನ್ನು ಭ್ರಷ್ಟಾಚಾರ ತಡೆ ಕಾಯ್ದೆ ಕಲಂ ೨ ರಡಿಯಲ್ಲಿ ಹಲವಾರು ನ್ಯಾಯಾಲಯಗಳು ತೀರ್ಪು ನೀಡಿದನ್ನು ಇಲ್ಲಿ ಗಮನಿಸಬಹುದಾಗಿದೆ.

ಕಲಂ ೩ರ ಪ್ರಕಾರ ಶಾಸನಾತ್ಮಕ ಹೊಣೆಗಾರಿಕೆಯು ಕೇವಲ ಸರ್ಕಾರದಷ್ಟೇ ಅಲ್ಲ. ವಿರೋಧ ಪಕ್ಷಗಳ ಮೇಲೂ ಇದೆ ಎಂಬುದನ್ನು ಮೈಸೂರು ವಿಶ್ವವಿದ್ಯಾಲಯದ ಹಿಂದಿನ ಕುಲಪತಿಗಳಾದ ಎಸ್. ಎನ್. ಹೆಗಡೆಯವರ ಪ್ರಕರಣದಲ್ಲಿ ಲೋಕಾಯುಕ್ತ ಮತ್ತು ಉಪಲೋಕಾಯುಕ್ತರ ನೇಮಕಾತಿ ವಿಳಂಬದ ವಿಷಯದಲ್ಲಿ ತೀರ್ಪು ನೀಡಿರುವುದನ್ನು ಇಲ್ಲಿ ಗಮನಿಸಬಹುದು. ಆಂದರೆ ಲೋಕಾಯುಕ್ತರ ನೇಮಕಾತಿ ಮಂಡಳಿಯಲ್ಲಿ ವಿರೋಧ ಪಕ್ಷದ ಉಭಯ ಸದನಗಳ ನಾಯಕರು ಇರುವುದರಿಂದ ಅವರ ಹೊಣೆಗಾರಿಕೆಯಿಂದ ನುಣುಚಿಕೊಳ್ಳಲು ಸಾಧ್ಯವಿಲ್ಲ ಎಂಬುದನ್ನು ತೀರ್ಪಿನಲ್ಲಿ ವಿವರಿಸಲಾಗಿದೆ.

ಸಂಶಯದ ಲಾಭ ಆರೋಪಿಗೆ ನೀಡಬೇಕು ಎಂಬ ವಿಷಯ ಕಾನೂನಿನಲ್ಲಡಗಿದ ಪ್ರಮುಖ ಬತ್ತಳಿಕೆ. ಅದೇ ರೀತಿ ಲಂಚದ ಆರೋಪಿಗಳಿಗೂ ಇದರ ಆಸರೆ ಸಿಗುವಂತಹ ತೀರ್ಪು ಬಂದಿರುವುದು ಆರೋಪಿಗಳ ಪಾಲಿಗೆ ವರದಾನವೇ ಸರಿ. ಡಾ. ವಿ. ಕೆ. ರಾಜನ್ ಪ್ರಕರಣದಲ್ಲಿ ಲಂಚಕ್ಕಾಗಿ ಬೇಡಿಕೆಯಿಟ್ಟಿದ್ದು ಹಾಗೂ ಲಂಚವನ್ನು ಪಡೆದಿದ್ದು ಈ ಎರಡು ಅಂಶಗಳನ್ನು ಸಾಬೀತು ಪಡಿಸುವುದು ಎದುರಾಳಿಯ ಕರ್ತವ್ಯವಾಗಿರುತ್ತದೆ. ಅಕಸ್ಮಾತ್ ಸಾಬೀತುಪಡಿಸಲಾಗದಿದ್ದರೆ, ಸಂಶಯದ ಲಾಭ

ಪಡೆದು ಆರೋಪಿ ಮುಕ್ತನಾಗುವುದನ್ನು ಈ ತೀರ್ಪಿನಲ್ಲಿ ಗಮನಿಸಬಹುದಾಗಿದೆ. ಅದೇ ರೀತಿ ಸಾರ್ವಜನಿಕ ನೌಕರನೊಬ್ಬನ ಕೈಗೆ ಹಲವು ನೋಟುಗಳನ್ನು ತುರುಕಿ ಅದು ಲಂಚದ ಹಣ ಎಂದು ಹೇಳಲಾಗುವುದಿಲ್ಲ ಎಂದು ಬಲವಂತ ಹೆಮ್ಮೆ ಪ್ರಕರಣದಲ್ಲಿ ಉಲ್ಲೇಖಿಸಲಾಗಿದೆ. ಎಷ್ಟೋ ಕಡೆ ಸರ್ಕಾರಿ ಕಚೇರಿಗಳಲ್ಲಿ ಕೆಲಸ ಮಾಡುವ ಸರ್ಕಾರಿ ನೌಕರರಲ್ಲಿರುವ ಹಣವೆಲ್ಲ ಲಂಚದ ಹಣ ಎಂದು ಪೋಲೀಸರು ಆಪಾದಿಸುತ್ತಿರುವುದನ್ನು ಕಾಣಬಹುದಾಗಿದೆ. ಕೆಲಸದ ಮೇಲಿರುವ ಬಸ್ ಕಂಡಕ್ಟರ್ ತನ್ನ ಜೇಬಿನಲ್ಲಿ ನೂರು ರೂಪಾಯಿಗಿಂತ ಹೆಚ್ಚಿನ ಹಣ ಇಡುವಂತಿಲ್ಲ ಎಂಬ ನಿಯಮ ಈ ತೀರ್ಪಿಗೆ ವ್ಯತಿರಿಕ್ತವಾಗಿದ್ದನ್ನು ಇಲ್ಲಿ ಗಮನಿಸಬಹುದು.

ಕಲಂ ೮ರ ಪ್ರಕಾರ ಸಾರ್ವಜನಿಕ ನೌಕರರಲ್ಲದಿದ್ದರೂ ಸಹ ಸಾರ್ವಜನಿಕ ನೌಕರನಿಗೆ ಲಂಚ ಕೊಡುವಂತೆ ಇನ್ನೊಬ್ಬರನ್ನು ಪ್ರೇರಿಪಿಸಿದರೆ ಅಥವಾ ಅವನ ಪರವಾಗಿ ಲಂಚ ಸ್ವೀಕರಿಸಿದರೆ ಅಂತಹ ವ್ಯಕ್ತಿಯ ನಡಾವಳಿಯನ್ನು ಕಾನೂನು ಬಾಹಿರ ಎಂದು ಸಿ. ಎಂ. ಗಿರೀಶ್ ಪ್ರಕರಣದಲ್ಲಿ ಹೇಳಲಾಗಿದೆ. ಸರ್ಕಾರಿ ಕಚೇರಿಯ ಸುತ್ತ ಮುತ್ತ ಸ್ಥಳಗಳನ್ನು ನಿರುದ್ಯೋಗಿ ಯುವಕರು ನೌಕರರ ಪರವಾಗಿ ಲಂಚ ಪಡೆಯುವ ಅಡ್ಡೆಯನ್ನಾಗಿ ಮಾಡಿರುವುದನ್ನು ಇಂದು ನಾವು ಕಾಣಬಹುದಾಗಿದೆ. ಸರ್ಕಾರಿ ಕಚೇರಿಯ ಸುತ್ತ ಮುತ್ತವಿರುವ ಜೆರಾಕ್ಸ್ ಅಂಗಡಿ, ಚಹಾ ಅಂಗಡಿ ಮುಂತಾದ ಸ್ಥಳಗಳಲ್ಲಿ ನೌಕರನ ಪರವಾಗಿ ಲಂಚ ಸ್ವೀಕರಿಸಲಾಗುತ್ತದೆ. ನಾವು ಸರ್ಕಾರಿ ನೌಕರನಲ್ಲದ ಕಾರಣ ನಾವು ಭ್ರಷ್ಟಾಚಾರ ತಡೆ ಕಾನೂನಿನಡಿಯಲ್ಲಿ ಬರುವುದಿಲ್ಲ ಎಂಬ ಕೆಲ ಖಾಸಗಿ ವ್ಯಕ್ತಿಗಳ ತಿಳುವಳಿಕೆಗೆ ಈ ತೀರ್ಪು ವ್ಯತಿರಿಕ್ತವಾಗಿದೆ. ಇಂತಹ ಅನೇಕ ತೀರ್ಪುಗಳನ್ನು ನಾವು ಈ ಕೆಳಗೆ ಗಮನಿಸಬಹುದಾಗಿದೆ.

- **ಕಲಂ ೧: ಶಾಸನಾತ್ಮಕ ಕಾನೂನನ್ನು ಅನ್ವಯಿಸುವಾಗ ಅನುಕಂಪ ಅಥವಾ ಸಹಾನುಭೂತಿಯಂತಹ ಸಂಗತಿಗಳು ಸ್ಥಾನ ಪಡೆಯಬಾರದು.**

ಸಂವಿಧಾನ ಪೀಠದ ಉಲ್ಲೇಖಾರ್ಹ ತೀರ್ಪುಗಳನ್ನು ಕಡೆಗಣಿಸಿ ಸರ್ವೋಚ್ಛ ನ್ಯಾಯಾಲಯವು ಕೇವಲ ಅನುಕಂಪವನ್ನು ಆಧಾರವಾಗಿ ಪರಿಗಣಿಸಿ ಸದರಿ ಅಧಿನಿಯಮದ ಉಪಬಂಧಗಳನ್ನು ವಿಶ್ಲೇಷಿಸಲಾಗುವುದಿಲ್ಲ.

ಮಾರುತಿ ಉದ್ಯೋಗ ಲಿಮಿಟೆಡ್. ವಿರುದ್ಧ ರಾಮಲಾಲ್ ಎಐಆರ್ ೨೦೦೫ ಎಸ್‌ಸಿ ೮೫೧:೨೦೦೫(೨) ಎಸ್‌ಸಿಸಿ ೬೩೮: ೨೦೦೫ ಎಸ್‌ಸಿಸಿ(ಎಲ್&ಎಸ್) ೩೦೮:

- **ಕಲಂ ೨: ಪರಿಭಾಷೆ, ಸದರಿ ಅಧಿನಿಯಮದ ಉದ್ದೇಶದಂತೆ ಲೋಕಸಭಾ ಸದಸ್ಯ ಅಥವಾ ವಿಧಾನಸಭಾ ಸದಸ್ಯನು ಸಹ ಸಾರ್ವಜನಿಕ ನೌಕರನೆಂದೇ ಪರಿಗಣಿಸಲ್ಪಡುತ್ತಾನೆ. ಪಿ.ವಿ. ನರಸಿಂಹರಾವ್ ವಿರುದ್ಧ ಕೇಂದ್ರ ಸರ್ಕಾರ ಸಿಬಿಐ/ಎಸ್‌ಪಿಇ ೧೯೯೮(೪) ಎಸ್‌ಸಿಸಿ ೬೨೬ ೧೯೯೮ ಎಸ್‌ಸಿಸಿ (ಸಿ ಆರ್ ಐ) ೧೧೦೮**

- **ಕಲಂ ೨: ಲೋಕಾಯುಕ್ತದ ಅಧಿಕಾರ ವ್ಯಾಪ್ತಿ**

  ಕೇಂದ್ರ ಸರ್ಕಾರದ ನೌಕರರು ಕರ್ನಾಟಕ ಲೋಕಾಯುಕ್ತದ ಅಧಿಕಾರವ್ಯಾಪ್ತಿಗೆ ಬರುವುದಿಲ್ಲ.

  ಎಫ್. ಮೊಯ್ಲಿ ವಿರುದ್ಧ ಕರ್ನಾಟಕ ಲೋಕಾಯುಕ್ತ ೨೦೧೦ (೫) ಕೆಎಲ್‌ಜೆ ೧೨೭; ಐಎಲ್‌ಆರ್ ೨೦೧೦ (೨) ಕೆಎಆರ್ ೨೯೦೪; ೨೦೧೦ (೨)ಕೆಸಿಸಿಆರ್ ೧೦೦೧

- **ಕಲಂ ೨: 'ಸಚಿವ' ಸಾರ್ವಜನಿಕ ನೌಕರನೆ?**

  ತಮಿಳುನಾಡಿನ ಮುಖ್ಯಮಂತ್ರಿಯು ಸಹ ಸಾರ್ವಜನಿಕ ನೌಕರರು ಎಂಬುದನ್ನು ಸರ್ವೋಚ್ಚ ನ್ಯಾಯಾಲಯ ತನ್ನ ತೀರ್ಪಿನಲ್ಲಿ ದೃಢಪಡಿಸಿದೆ.

  ಎಂ ಕರುಣಾನಿಧಿ ವಿರುದ್ಧ ಭಾರತ ಗಣರಾಜ್ಯ ಎಐಆರ್ ೧೯೭೯ ಎಸ್‌ಸಿ ೮೯೮: ೧೯೭೯ ಸಿಆರ್‌ಐ ಎಲ್‌ಜೆ ೭೭೩ (ಎಸ್‌ಸಿ)

- **ಕಲಂ ೩ ಮತ್ತು ೭ ಶಾಸನಾತ್ಮಕ ಕರ್ತವ್ಯದ ಹೊಣೆ:**

  ಲೋಕಾಯುಕ್ತ ಮತ್ತು ಉಪಲೋಕಾಯುಕ್ತರ ಸ್ಥಾನಗಳಿಗೆ ಸೂಕ್ತ ವ್ಯಕ್ತಿಗಳನ್ನು ನೇಮಿಸಬೇಕಾದದ್ದು ಸರ್ಕಾರದ ಹೊಣೆಯಾಗಿರುತ್ತದೆ ಮತ್ತು ಅಂತಹ ನೇಮಕ ಸರ್ಕಾರದಿಂದ ಆಗದಿದ್ದಲ್ಲಿ ಅಂತಹ ಕರ್ತವ್ಯ ಚ್ಯುತಿಗೆ ಸರ್ಕಾರದಷ್ಟೇ ವಿರೋಧ ಪಕ್ಷವೂ ಹೊಣೆಗಾರನಾಗಬೇಕಾಗುತ್ತದೆ. ಅಂತಹ ಸಂದರ್ಭದಲ್ಲಿ ಸರ್ಕಾರವು ತನ್ನ ಶಾಸನಾತ್ಮಕ ಕರ್ತವ್ಯಗಳನ್ನು ನೇರವೇರಿಸುವಂತೆ ಒತ್ತಾಯಪಡಿಸುವುದು ಅನಿವಾರ್ಯವಾಗುತ್ತದೆ.

ಮೈಸೂರು ವಿಶ್ವವಿದ್ಯಾಲಯದ ಕುಲಪತಿಗಳಾಗಿದ್ದ ಪ್ರೊಫೆಸರ್. ಎಸ್. ಎನ್ ಹೆಗ್ಡೆ ಮತ್ತು ಇತರರ ವಿರುದ್ಧ ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಮತ್ತಿತರರು ೨೦೦೪ ಎಐಅರ್ ಕೆಎಅರ್ ೮೨; ಕೆಎಲ್‌ಜೆ ೨೦೦೪(೩) ೫೦೫

- ಕಲಂ ೪: ಜಿಲ್ಲಾ ನ್ಯಾಯಾಧೀಶರು ವಿಶೇಷ ನ್ಯಾಯಾಧೀಶರಾಗಿ ಹಳೆಯ ಅಧಿನಿಯಮ ೧೯೪೭ರ ಹಿಡಿತದಲ್ಲಿರುವ ಮೊಕದ್ದಮೆಗಳ ವಿಚಾರಣೆಯನ್ನು ಹೊಸ ಅಧಿನಿಯಮ, ೧೯೮೮ರಡಿ ಅಧಿವಿಚಾರಣೆಗೊಳಪಡಿಸಲು ಅಧಿಕಾರವನ್ನು ಹೊಂದಿರುತ್ತಾರೆ.

ಎಲ್ ಸಿ ಹುಸೇನ ವಿರುದ್ಧ ಕರ್ನಾಟಕ ರಾಜ್ಯ ೨೦೧೦ ಸಿಆರ್‌ಐ, ಎಲ್‌ಜೆ ೧೦೩೬(ಕೆಎಎನ್‌ಟಿ)

- ಕಲಂ ೫: ಯಾವನೇ ಒಬ್ಬ ಅರೋಪಿಗೆ ಕ್ಷಮಾದಾನ ನೀಡುವುದನ್ನು ಸಹ ಅರೋಪಿಯು ವಿರೋಧಿಸಬಹುದೆ?

ಇಲ್ಲ, ಆರೋಪಿಯು ಕ್ಷಮಾದಾನವನ್ನು ಯಾಚಿಸಿದ್ದು, ಮತ್ತು ವಿಶೇಷ ನ್ಯಾಯಾಧೀಶರು ಕ್ಷಮದಾನವನ್ನು ಕರುಣಿಸುವುದು ಪ್ರತ್ಯೇಕ ಸಂಗತಿ. ಆದರೆ ಅದರಲ್ಲಿ ಸಹ ಅರೋಪಿಗೆ ಮಧ್ಯ ಪ್ರವೇಶಿಸಿ ಪ್ರಶ್ನಿಸುವ ಅಧಿಕಾರವಿರುವುದಿಲ್ಲ.

ಅಶೋಕ ಕುಮಾರ ಅಗರವಾಲ್ ವಿರುದ್ಧ ಸಿಬಿಐ ೨೦೦೧ ಸಿಆರ್‌ಐ, ಎಲ್‌ಜೆ ೩೭೧೦ (ಡಿಇಎಲ್); ಉತ್ತರ ಪ್ರದೇಶ ರಾಜ್ಯ ವಿರುದ್ಧ ಕೈಲಾಶನಾಥ ಅಗರವಾಲ್ ಎಐಆರ್ ೧೯೭೩ ಎಸ್‌ಸಿ ೨೨೧೦: ೧೯೭೩ ಸಿಆರ್‌ಐ,ಎಲ್‌ಜೆ ೧೧೯೬ (ಎಸ್‌ಸಿ)

- **ಭ್ರಷ್ಟಾಚಾರ ಪ್ರತಿಬಂಧ ಅಧಿನಿಯಮ, ೧೯೮೮, ಕಲಂ ೫ (೨) ದಂಡ ಪ್ರಕ್ರಿಯೆ ಸಂಹಿತೆ, ೧೯೭೩, ಕಲಂ ೩೦೬ ಮತ್ತು ೩೦೭ ಕ್ಷಮಾದಾನ**

ಭ್ರಷ್ಟಾಚಾರ ಪ್ರತಿಬಂಧ ಅಧಿನಿಯಮದ ಕಲಂ ೫ (೨)ರ ಅನ್ವಯದಂತೆ ವಿಶೇಷ ನ್ಯಾಯಾಧೀಶರಿಗೆ ಕಲಂ ೫(೨)ರ ಷರತ್ತುಗಳಿಗೊಳಪಟ್ಟು ಕ್ಷಮಾದಾನ ನೀಡುವ ಅಧಿಕಾರವಿರುತ್ತದೆ. ಆದರೆ ವಿಚಾರಣೆಯ ಹಂತದಲ್ಲಿ ತಮ್ಮ ಅಧಿಕಾರವನ್ನು ಚಲಾಯಿಸುವಲ್ಲಿ ಅಂತಹ ಯಾವದೇ ಷರತ್ತುಗಳು ಅನ್ವಯಿಸುವುದಿಲ್ಲ.

ಬಂಗಾರು ಲಕ್ಷ್ಮಣ ವಿರುದ್ಧ ರಾಜ್ಯ ಮತ್ತಿತರರು (ಸಿಬಿಐ ಮುಖಾಂತರ) ೨೦೧೨ ಎಸಿಆರ್ ೧೫೩ ಮತ್ತು ಉಲ್ಲೇಖಗಳು, ಹಷ್ಮದ್ ಎಸ್. ಮೆಹ್ತಾ ಮತ್ತಿತರರ ವಿರುದ್ಧ ಮಹಾರಾಷ್ಟ್ರ ರಾಜ್ಯ ೨೦೦೧ (೮) ಎಸ್‌ಸಿಸಿ ೨೫೭

ಎ. ಆರ್. ಅಂತುಳೆ ವಿರುದ್ಧ ರಾಮದಾಸ್ ಶ್ರೀನಿವಾಸನಾಯಕ್ ಮತ್ತಿತರರು ೧೯೮೪ (೨) ಎಸ್‌ಸಿಸಿ ೫೦೦

- **ಭ್ರಷ್ಟಾಚಾರ ಪ್ರತಿಬಂಧ ಅಧಿನಿಯಮ ೧೯೮೮, ಕಲಂ ೫ (೬) ಅಪರಾಧಿ ಕಾನೂನು (ತಿದ್ದುಪಡಿ) ಸುಗ್ರಿವಾಜ್ಞೆ ೧೯೪೪ರ ಕಲಂ ೩ ಮತ್ತು ೪, ಸ್ವತ್ತಿನ ಮುಟ್ಟುಗೋಲು:**

ಭ್ರಷ್ಟಾಚಾರ ಪ್ರತಿಬಂಧ ಅಧಿನಿಯಮದಡಿ ವಿಶೇಷ ನ್ಯಾಯಾಧೀಶರಿಂದ ಅಧಿವಿಚಾರಣೆ ಶುರುವಾಗುವ ಮುನ್ನ ಸ್ವತ್ತು ಮುಟ್ಟುಗೋಲಿಗಾಗಿ ಅರ್ಜಿ ಸಲ್ಲಿಸಬಹುದು ಹಾಗೂ ಜಿಲ್ಲಾ ನ್ಯಾಯಾಧೀಶರು ಮತ್ತು ವಿಶೇಷ ನ್ಯಾಯಾಧೀಶರು ಇಬ್ಬರೂ ಏಕಕಾಲದಲ್ಲಿ ಈ ವಿಷಯದ ಬಗ್ಗೆ ಒಂದೇ ತೆರನಾದ ಅಧಿಕಾರ ಹೊಂದಿರುತ್ತಾರೆ.

ಹೆಚ್. ಸಿ. ಸತ್ಯನ್ ಮತ್ತಿತರರ ವಿರುದ್ಧ ರಾಜ್ಯ ಪೊಲೀಸ್ ಅಧೀಕ್ಷಕರು.

ಕರ್ನಾಟಕ ಲೋಕಾಯುಕ್ತ ಮೈಸೂರು, ೨೦೧೨ ಸಿಆರ್‌ಐ ೧೧೪(ಕೆಎಎಸ್‌ಟಿ) ಮತ್ತು ಅನ್ವಯಿಸಬಹುದಾದ ಉಲ್ಲೇಖಗಳು: ಡಾಕ್ಟರ್,ಎ. ಕೆ ರಾಜನ್ ವಿರುದ್ಧ ಕೇರಳ ರಾಜ್ಯ ೨೦೦೮ ಸಿಆರೈ,ಎಲ್ ಜೆ ೯೦೯

➢ **ಕಲಂ: ೭ ಲಂಚಕ್ಕಾಗಿ ಬೇಡಿಕೆಯಿಟ್ಟದ್ದು ಮತ್ತು ಪಡೆದದ್ದು ಎರಡೂ ಸಾಬೀತಾಗದೆ ಇರುವಾಗ, ಅರೋಪಿಯು ನಿಶ್ಚಯವಾಗಿಯೂ ಸಂಶಯದ ಲಾಭಕ್ಕೆ ಅರ್ಹನಾಗುತ್ತಾನೆ.**

ಜಿ. ಡಿ ಮರಿಸ್ವಾಮಿ ವಿರುದ್ಧ ಕರ್ನಾಟಕ ರಾಜ್ಯ ೨೦೦೪ ಸಿಆರ್‌ಐ, ಎಲ್‌ಜೆ ೩೫೮೪ (ಕೆಎಎನ್‌ಟಿ)

➢ **ಕಲಂ ೭: ಭ್ರಷ್ಟಾಚಾರ ಪ್ರತಿಬಂಧ ಅಧಿನಿಯಮ, ೧೯೮೮. ೭, ೧೩(೧)(ಡಿ) ಆರ್/ಡಬ್ಲ್ಯೂ ೧೩ (೨) ಮತ್ತು ದಂಡ ಪ್ರಕ್ರಿಯ ಸಂಹಿತೆ, ೧೯೭೩ರ ಕಲಂ ೩೭೮, ಕಾನೂನು ಬಾಹಿರ ಪರಿತೋಷ –**

ಸರ್ಕಾರಿ ಆಸ್ಪತ್ರೆಯ ವೈದ್ಯನಿಂದ ಶಸ್ತ್ರಚಿಕಿತ್ಸೆ ನೆರವೇರಿಸುವುದಕ್ಕಾಗಿ ಲಂಚದ ಬೇಡಿಕೆ, ಲಂಚವನ್ನು ಬೇಡಿದ್ದು ಮತ್ತು ಪಡೆದಿದ್ದು ಸಾಬೀತಾಗಿದೆ. ವಿಚಾರಣಾ ನ್ಯಾಯಾಲಯ ಅರೋಪಿಯನ್ನು ಖುಲಾಸೆಗೊಳಿಸಿ ತಪ್ಪೆಸಗಿದೆ. ಇದು ಸರಿಯಲ್ಲ, ಆರೋಪಿಯು ಶಿಕ್ಷಾರ್ಹನು.

ಲೋಕಾಯುಕ್ತ ಪೊಲೀಸರು, ಹಾಸನ, ಕರ್ನಾಟಕ, ವಿರುದ್ಧ ಡಾಕ್ಟರ್ ಎ. ಶೇಖರನ್ ಮತ್ತಿತರರು ೨೦೧೧ ಸಿಆರ್‌ಆರ್ ೮೩೮ (ಕೆಎಎನ್‌ಟಿ)

➢ **ಭ್ರಷ್ಟಾಚಾರ ಪ್ರತಿಬಂಧ ಅಧಿನಿಯಮ, ೧೯೮೮, ಕಲಂ ೭, ೧೩ ಮತ್ತು ೨೦**

ಕೇವಲ ಪ್ರಾಸಿಕ್ಯೂಷನ್ ಪರ ಸಾಕ್ಷಿದಾರರು ತಿರುಗಿಬಿದ್ದ ಕಾರಣಕ್ಕೆ ಅಥವಾ ಪ್ರತಿಕೂಲ ಸಾಕ್ಷಿದಾರನಾದ ಮಾತ್ರಕ್ಕೆ ದಂಡ ಪ್ರಕ್ರಿಯೆ ಸಂಹಿತೆ, ೧೯೭೩ರ ಕಲಂ ೩೭೮ರ ಅಡಿ ವಿಧಿಸಲ್ಪಟ್ಟ ಶಿಕ್ಷೆಯನ್ನು ಮೇಲ್ಮನವಿಯಲ್ಲಿ ರದ್ದುಗೊಳಿಸಲು ಬರುವುದಿಲ್ಲ. ಹಾಗಾಗಿ ಮನವಿ ತಿರಸ್ಕೃತಗೊಂಡಿದೆ.

ನಾರಾಯಣ ವಿರುದ್ಧ ಕರ್ನಾಟಕ ರಾಜ್ಯ ೨೦೧೧ (೧) ಕೆಸಿಸಿಆರ್ ೬೮೫ (ಎಸ್‌ಸಿ)

➢ **ಕಲಂ ೭: ಉಪಾಯ ಸಾಕ್ಷ್ಯ**

ಮೇಜಿನ ಮೇಲೆ ಬಿದ್ದಿದ್ದ ಅಥವಾ ಇಟ್ಟಿದ್ದ ಇಪ್ಪತ್ತು ರೂಪಾಯಿಗಳ ನೋಟೊಂದನ್ನು ವಶಪಡಿಸಿಕೊಂಡ ಮಾತ್ರಕ್ಕೆ ಅದನ್ನು ಅರೋಪಿಯು ಪರಿತೋಷವಾಗಿ ಸ್ವೀಕರಿಸಿದ್ದಂತೆ ಸಾಬೀತುಪಡಿಸಲು ಯೋಗ್ಯ ಸಾಕ್ಷ್ಯವಾಗಲಾರದು.

ಶ್ರೀಮತಿ ಮೀನಾ ಬಲವಂತ ಹೆಮ್ಕೆ ವಿರುದ್ಧ ಮಹಾರಾಷ್ಟ್ರ ರಾಜ್ಯ ಎಐಆರ್ ೨೦೦೦ ಎಸ್‌ಸಿ ೩೩೭೭; ೨೦೦೦ (೫) ಎಸ್ ಸಿ ಸಿ ೨೧ ; ೨೦೦೦ ಸಿಆರ್‌ಐ, ಎಲ್‌ಜೆ ೨೨೭೩

➢ **ಕಲಂ ೭: ಕೇವಲ ಆರೋಪಿಯಿಂದ ಹಣ ವಶಪಡಿಸಿಕೊಂಡ ಮಾತ್ರಕ್ಕೆ ದೋಷಿಯೆಂದು ತೀರ್ಮಾನಿಸಿ ಶಿಕ್ಷೆಗೆ ಒಳಪಡಿಸುವುದು ಸಮರ್ಥನಿಯವೆ?**

ಸಾರ್ವಜನಿಕ ನೌಕರನೊಬ್ಬನ ಕೈಗೆ ಕೆಲವು ನೋಟುಗಳನ್ನು ತುರುಕಿ ಲಂಚವೆಂಬಂತೆ ಬಿಂಬಿಸಲು ಸಾಧ್ಯವಿಲ್ಲ. ಸಂದಾಯವನ್ನು 'ಲಂಚವಾಗಿಯೇ' ಸಂದಾಯಿಸಿದ್ದೆಂದು ಸಾಬೀತುಪಡಿಸುವ ಹೊಣೆಯು ಪ್ರಾಸಿಕ್ಯೂಷನ್ ಅವರದಾಗಿರುತ್ತದೆ.

ಎಂ ನರಸಿಂಗರಾವ್ ವಿರುದ್ಧ ಆಂಧ್ರಪ್ರದೇಶ ರಾಜ್ಯ ೨೦೦೧ ಎಸ್‌ಸಿಸಿ (೧) ೬೯೧; ೨೦೦೧ ಎಸ್‌ಸಿಸಿ (ಸಿಆರ್‌ಐ) ೨೫೮

- **ಕಲಂ ೭: ಲಂಚದ ಹಣವನ್ನು ಪಡೆದು ತಲುಪಿಸುವಾತ (ಮಧ್ಯವರ್ತಿ) ಅಪರಾಧಿಯೆ?**

ಅಲ್ಲ, ಆದರೆ ಲಂಚದ ಹಣವನ್ನು ಸಂಗ್ರಹಿಸಿ ತಲುಪಿಸುವಂತಹ ಕೃತ್ಯವು ದಂಡನಾರ್ಹವಾದದ್ದು.

ಎಂ.ಓ ಷಂಸುದ್ದೀನ್ ವಿರುದ್ಧ ಕೇರಳ ರಾಜ್ಯ ೧೯೯೫ ಎಸ್‌ಸಿಸಿ (ಸಿಆರ್‌ಐ) ೫೦೯; ೧೯೯೫ ಎಐಆರ್ ಎಸ್‌ಸಿಡಬ್ಲ್ಯೂ ೨೭೧೭

- **ಕಲಂ ೭: ದಂಡ ಪ್ರಕ್ರಿಯ ಸಂಹಿತೆಯ ಕಲಂ ೧೯೭ ಅಡಿ ಅಭಿಯೋಜನೆಗೆ ಒಳಪಡಿಸುವಲ್ಲಿ ಮಂಜೂರಾತಿಯ ಅವಶ್ಯಕತೆ:**

ದಂಡ ಪ್ರಕ್ರಿಯ ಸಂಹಿತೆಯ ಕಲಂ ೧೯೭ರಡಿ ಸಾರ್ವಜನಿಕ ನೌಕರನಿಂದ ಎಸಗಲ್ಪಟ್ಟ ಪ್ರತಿಯೊಂದು ಅಪರಾಧಕ್ಕೂ ಅಭಿಯೋಜನೆಗಾಗಿ ಮಂಜೂರಾತಿಯ ಅವಶ್ಯಕತೆ ಇರುವುದಿಲ್ಲ.

ಕೇರಳ ರಾಜ್ಯ ವಿರುದ್ಧ ಪದ್ಮನಾಭನ್ ೧೯೯೯ ಸಿಆರ್‌ಐ. ಎಲ್‌ಜೆ ೩೯೯೬ (ಎಸ್. ಸಿ); ೧೯೯೯(೫) ಎಸ್‌ಸಿಸಿ ೬೯೦; ಎಐಆರ್ ೧೯೯೯ ಎಸ್.ಸಿ ೨೪೦೫; ೧೯೯೯ ಎಸ್‌ಸಿಸಿ (ಸಿಆರ್‌ಐ) ೧೦೩೧

- **ಕಲಂ ೭: ಇಬ್ಬಗೆಯ ಸಾಧ್ಯತೆಗಳಿರುವ ಸಂದರ್ಭದಲ್ಲಿ ಅನುಸರಿಸಬೇಕಾದ ಕ್ರಮ:**

ಆರೋಪಿಯು ಅರೋಪವನ್ನು ಸಾಬೀತುಪಡಿಸುವಲ್ಲಿ, ಸಾಕ್ಷ್ಯಾಧಾರಗಳು ಸಮರ್ಥವಿದ್ದು, ಅದೇ ಸಮಯಕ್ಕೆ ಅವೇ ಸಾಕ್ಷ್ಯಾಧಾರಗಳು ಅರೋಪಿಯ ಖುಲಾಸೆಯನ್ನು ಸಹ ಪುಷ್ಟೀಕರಿಸುವಂತಿದ್ದರೆ, ಎರಡನೇ ಸಾಧ್ಯತೆಯನ್ನೇ ಅಂಗೀಕರಿಸುವುದು ಸಮಂಜಸವಾಗಿರುತ್ತದೆ.

ಸಂಭಾಜಿ ಹರಿಬಾಯಿ ಪಾಟೀಲ ವಿರುದ್ಧ ಕರ್ನಾಟಕ ರಾಜ್ಯ ೨೦೦೬ ಎಐಆರ್ ಎಸ್‌ಸಿಡಬ್ಲ್ಯೂ ೫೩೭೧;

ಉಮ್ರಾವ ವಿರುದ್ಧ ಹರಿಯಾಣ ರಾಜ್ಯ ಎಐಅರ್ ೨೦೦೬ ಎಸ್‌ಸಿ ೨೧೫೨; ೨೦೦೬ ಎಐಅರ್ ಎಸ್‌ಸಿಡಬ್ಲ್ಯೂ ೨೬೫೭;

ವಿ. ವೆಂಕಟಸುಬ್ಬರಾವ್ ವಿರುದ್ಧ ಆಂಧ್ರಪ್ರದೇಶ ಸರ್ಕಾರ ೨೦೦೭ ಸಿಆರ್‌ಐ, ಎಲ್‌ಜೆ ೭೫೮ (ಎಸ್.ಸಿ)

➢ **ಕಲಂ ೭ ಮತ್ತು ೧೩ (೨) ಆರ್/ಡಬ್ಲ್ಯೂ ಎಸ್‌ಸಿ ೧೩ (೧) (ಡಿ) ಲಂಚಕ್ಕಾಗಿ ಒತ್ತಾಯ:**

ಉಚ್ಚ ನ್ಯಾಯಾಲಯದಿಂದ ಖುಲಾಸೆಯ ವಿರುದ್ಧ ಮೇಲ್ಮನವಿ–ಪ್ರಾಸಿಕ್ಯೂಷನವರಿಂದ ಫಿರ್ಯಾದುದಾರನ ವಿಚಾರಣೆಯನ್ನು ನಡೆಸಲಾಗಿರಲಿಲ್ಲ. ಫಿರ್ಯಾದುರಾರನ ಹೇಳಿಕೆಯಿಂದ ಅಥವಾ ಸಾಕ್ಷ್ಯದಿಂದ ಅರೋಪಿಯು ಲಂಚಕ್ಕಾಗಿ ಬೇಡಿಕೆಯಿಟ್ಟ ಬಗ್ಗೆ ಸಮರ್ಥನೆ ಸಿಗುತ್ತಿಲ್ಲವಾದ್ದರಿಂದ ಲಂಚವನ್ನು ಸ್ವೀಕರಿಸಿದ ಬಗ್ಗೆ ನಂಬಲರ್ಹ ಸಾಕ್ಷ್ಯಗಳಿಲ್ಲದೇ, ಅಥವಾ ಆರೋಪಿಯು ತಾನು ಪಡೆಯುತ್ತಿರುವುದು ಲಂಚವೆಂದು ತಿಳಿದೂ ಅದನ್ನು ಪಡೆದಿರುವ ಬಗ್ಗೆ ಸಾಬೀತಾಗದಿರುವಾಗ, ಕೇವಲ ಆರೋಪಿಯಿಂದ ವಶಪಡಿಸಿಕೊಳ್ಳಲಾದ ಹಣದಿಂದ ಆರೋಪವನ್ನು ಸಾಬೀತುಪಡಿಸಲಾಗುವುದಿಲ್ಲದ ಹಿನ್ನೆಲೆಯಲ್ಲಿ ಖುಲಾಸೆ.

ಕೇರಳ ರಾಜ್ಯ ಮತ್ತಿತರರು ವಿರುದ್ಧ ಸಿ.ಪಿ. ರಾವ್ ೨೦೧೧ ಎಸಿಆರ್ ೭೧೪: ಮತ್ತು ಸಿ. ಎಂ ಗೀರಿಶ ಬಾಬು ವಿರುದ್ಧ ಸಿಬಿಐ ಕೊಚ್ಚಿನ್, ಕೇರಳ ಉಚ್ಚ ನ್ಯಾಯಾಲಯ ೨೦೦೯ (೩) ಎಸ್‌ಸಿಸಿ ೭೭೯: ಎ. ಜುಬೇರ ವಿರುದ್ಧ ಕೇರಳ ರಾಜ್ಯ ೨೦೦೯ (೬) ಎಸ್‌ಸಿಸಿ ೫೮೭

➢ **ಕಲಂ ೭: ಲಂಚವನ್ನು ಕೇಳಿದ ಆರೋಪದಲ್ಲಿ ಯಾವಾಗ ಆರೋಪಿಯು ಆರೋಪಮುಕ್ತನಾಗಬಹುದು–**

ಸಾಂದರ್ಭಿಕ ಸಂಗತಿಗಳು ಒಂದಕ್ಕೊಂದು ತಾಳೆಯಾಗದಿದ್ದಾಗ, ಅಥವಾ ಸಂದರ್ಭಗಳನ್ನು ಸೃಷ್ಟಿಸಲಾಗಿದೆ ಎಂಬುದು ಅರಿವಿಗೆ ಬಂದಾಗ, ಅರೋಪಿಯ ಖುಲಾಸೆ ಯೋಗ್ಯವಾದುದಾಗಿರುತ್ತದೆ.

ರಾಜ್ಯ ಸರ್ಕಾರ ವಿರುದ್ಧ ಕೆ. ನರಸಿಂಹಚಾರಿ ಎಐಆರ್ ೨೦೦೬ ಎಸ್‌ಸಿ ೬೨೮; ೨೦೦೫ (೮) ಎಸ್‌ಸಿಸಿ ೩೬೪: ೨೦೦೬ ಸಿಆರ್‌ಐ ಎಲ್ಜೆ ೫೧೮ (ಎಸ್‌ಸಿ)

➢ **ಭ್ರಷ್ಟಾಚಾರ ಪ್ರತಿಬಂಧ ಅಧಿನಿಯಮ, ೧೯೮೮, ಕಲಂ ೭ ಮತ್ತು ೧೩ (೨) ಅರ್‌ಡಬ್ಲ್ಯೂ ಕಲಂ ೧೩ (೧) (ಡಿ) ಖುಲಾಸೆಯ ವಿರುದ್ಧದ ಮೇಲ್ಮನವಿ**

ಲಂಚ ಅಥವಾ ರುಷುವತ್ತುಗಳ ಮೊಕದ್ದಮೆಯಲ್ಲಿ ಫಿರ್ಯಾದುದಾರನ ಉಪಸ್ಥಿತಿ ಅವಶ್ಯ, ಮತ್ತು ಫಿರ್ಯಾದುದಾರನನ್ನು ವಿಚಾರಣೆಗೊಳಪಡಿಸದೆ ದೂರಿನ ಸತ್ಯಾಸತ್ಯತೆಯನ್ನು ನಿರ್ಧರಿಸಲಾಗುವುದಿಲ್ಲ. ಹಾಗಾಗಿ ಪ್ರಶ್ನಿತ ತೀರ್ಪಿನಲ್ಲಿ ಮಧ್ಯ ಪ್ರವೇಶಿಸುವ ಯಾವುದೇ ಕಾರಣಗಳಿಲ್ಲ. ಮನವಿ ತಿರಸ್ಕೃತಗೊಂಡಿದೆ.

ಕೇರಳ ರಾಜ್ಯ ಮತ್ತಿತರರ ವಿರುದ್ಧ ಸಿ.ಪಿ. ರಾವ್ ೨೦೧೧ (೨) ಕ್ರೈಮ್ಸ್ ೨೪೯ (ಎಸ್‌ಸಿ) ಮತ್ತು ಉಲ್ಲೇಖಿಸಬಹುದಾದ ತೀರ್ಪುಗಳು:

ಸಿ.ಎಂ. ಗಿರೀಶಬಾಬು ವಿರುದ್ಧ ಸಿಬಿಐ, ಕೊಚ್ಚಿನ್ ೨೦೦೯ (೩) ಎಸ್‌ಸಿಸಿ ೭೭೯; ಎ. ಜುಬೇರ ವಿರುದ್ಧ ಕೇರಳ ರಾಜ್ಯ ೨೦೦೯ (೬) ಎಸ್‌ಸಿಸಿ ೫೮೭.

➢ **ಕಲಂ ೮: ಸಾರ್ವಜನಿಕ ನೌಕರರಲ್ಲದವರನ್ನು ಸಹ ಈ ಅಧಿನಿಯಮದಡಿ ಅಭಿಯೋಜನೆಗೊಳಪಡಿಸಬಹುದು. ಸಾರ್ವಜನಿಕ ನೌಕರರನ್ನು ಕಾನೂನು ಬಾಹಿರ ಕೃತ್ಯಗಳಲ್ಲಿ ತೊಡಗುವಂತೆ ಪ್ರೇರೆಪಿಸುವ ಯಾವುದೇ ವ್ಯಕ್ತಿಯನ್ನು ಅವನು ಸಾರ್ವಜನಿಕ ನೌಕರನಲ್ಲದಿದ್ದರೂ, ಭ್ರಷ್ಟಾಚಾರ ಪ್ರತಿಬಂಧ ಅಧಿನಿಯಮ, ೧೯೮೮ರ ಕಲಂ ೪ ರಡಿ ವಿಚಾರಣೆಗೊಳಪಡಿಸಬಹುದು.**

ಕುಮಾರ ಸುಮನಸಿಂಗ್ ವಿರುದ್ಧ ಬಿಹಾರ ರಾಜ್ಯ ೨೦೦೬ ಸಿಆರ್ಐ, ಎಲ್‌ಜೆ ೧೫೫೯ (ಪಿಎಟಿ)

➢ **ಕಲಂ ೧೨: ಕಲಂ ೧೨ರ ವ್ಯಾಪ್ತಿ**

ಕೇವಲ ಲಂಚದ ಆಮಿಷ ಒಡ್ಡುವುದೂ ಸಹ ಕಲಂ ೧೨ರ ಪ್ರಕಾರ ಅಪರಾಧವೇ ಆಗುತ್ತದೆ ಮತ್ತು ಅಂತಹ ಆಮಿಷ ಒಡ್ಡಿದ ಅಪರಾಧಕ್ಕಾಗಿ ಕಲಂ ೧೨ರಡಿ ಅಭಿಯೋಜನೆಗೊಳಪಡಿಸಬೇಕೆ ವಿನಃ ಭಾರತೀಯ ದಂಡ ಸಂಹಿತೆಯ ಕಲಂ ೧೬೧ರಡಿಯಲ್ಲ.

ಸಾರ್ವಜನಿಕ ನೌಕರನೊಬ್ಬನು ಲಂಚದ ಹಣವನ್ನು ತನ್ನ ಮಡದಿಯ ಕೈಗೆ ತಲುಪಿಸಬೇಕೆಂದು ಇಚ್ಚಿಸಿದಾಗ ಮತ್ತು ಹಾಗೆಯೇ ಮಡದಿಯ ಮೂಲಕ ಸ್ವೀಕರಿಸುವುದು ಸಂಶಯಕ್ಕೆಡೆಯಿಲ್ಲದಂತೆ ಸಾಬೀತಾದ ಪಕ್ಷದಲ್ಲಿ ಕಲಂ ೧೨ರ ಪ್ರಕಾರ ಅಂತಹ ಮಡದಿಯು ಸಹ ಶಿಕ್ಷಾರ್ಹಳೇ ಸರಿ.

ದಾದಾ ಮಿಯ್ಯಾಂ ವಿರುದ್ಧ ರಾಜ್ಯ ೧೯೭೯ (೪) ಎಸ್‌ಸಿಸಿ ೫೪೯: ೧೯೮೦ ಸಿಆರ್ಐ, ಎಲ್‌ಜೆ ೧೨೫೬

➢ **ಕಲಂ ೧೩: ಲಂಚದ ಬೇಡಿಕೆ ಮತ್ತು ಪೂರೈಕೆ**

ಕೆಲವು ಯುಕ್ತ ಸಂದರ್ಭಗಳಲ್ಲಿ ಅಥವಾ ಕೆಲವು ನಿರ್ದಿಷ್ಟ ಮೊಕದ್ದಮೆಗಳಲ್ಲಿ ಕೇವಲ ಸಾಂದರ್ಭಿಕ ಸಾಕ್ಷ್ಯ ಮಾತ್ರದಿಂದಲೇ ಆರೋಪವನ್ನು ಸಾಬೀತುಪಡಿಸಬಹುದು.

ಜಿ. ಮೋಹನ ವಿರುದ್ಧ ರಾಜ್ಯ ಸರ್ಕಾರ ೨೦೦೪ (೭) ಎಸ್‌ಸಿಸಿ ೭೦೦

➢ **ಕಲಂ ೧೩: ಆದಾಯವನ್ನು ಮೀರಿದ ಆಸ್ತಿ ಪಾಸ್ತಿ ಗಳಿಕೆ**

ಆದಾಯವನ್ನು ಮೀರಿದ ಆಸ್ತಿ ಗಳಿಸಿರುವ ಆರೋಪವನ್ನು ಎದುರಿಸುತ್ತಿರುವ ಆರೋಪಿಯು ತನ್ನ ಸ್ವತ್ತನ್ನು ಬಲ್ಲ ಆದಾಯ ಮೂಲಗಳಿಂದಲೇ ಕಾನೂನು ಸಮ್ಮತವಾದ ರೀತಿಯಲ್ಲೇ ಗಳಿಸಿರುವುದೆಂಬುದನ್ನು ಸಾಬೀತು ಪಡಿಸುವ ಹೊಣೆಯು ಆರೋಪಿತ ವ್ಯಕ್ತಿಯದ್ದಾಗಿರುತ್ತದೆ.

ಹಿಂದುಸ್ಥಾನ್ ಪೆಟ್ರೋಲಿಯಂ ಕಾರ್ಪೋರೇಷನ್ ಲಿ. ವಿರುದ್ಧ ಸರ್ವೇಶ ಚಿತ್ರಿ ೨೦೦೫ (೧೦) ಎಸ್‌ಸಿಸಿ ೪೭೧: ಎಐಆರ್ ೨೦೦೫ ಎಸ್‌ಸಿ ೧೪೦೬

➢ **ಕಲಂ ೧೩: ಕನಿಷ್ಟ ಅವಧಿಯ ಜೈಲು ಶಿಕ್ಷೆ**

ಕಾಯ್ದೆಯಡಿ ನಿಗದಿಪಡಿಸಿರುವ ಜೈಲು ಶಿಕ್ಷೆಯ ಪ್ರಮಾಣ ಕನಿಷ್ಠವಾಗಿದೆಯೇ ಎಂಬುದನ್ನು ಅವಶ್ಯವಾಗಿ ಪಾಲಿಸಬೇಕು. ಒಂದು ವೇಳೆ ನಿಗದಿ ಪಡಿಸಿದ ಕನಿಷ್ಠ ಅವಧಿಗಿಂತ ಕಡಿಮೆ ಅವಧಿಯ ಶಿಕ್ಷೆಯನ್ನು ಪ್ರಕಟಿಸಿದ್ದರೆ, ಅಂತಹ ತೀರ್ಮಾನವನ್ನು ಕೆಳಕಂಡ ಕಾರಣಗಳಿಗಾಗಿ ಮರು ವಿಂಗಡಣೆ ಸಾಧ್ಯವಿಲ್ಲ.

೧. **ದಂಡ ಪ್ರಕ್ರಿಯ ಸಂಹಿತೆಯ ಕಲಂ ೩೬೦ ರಡಿ ಪರಿವೀಕ್ಷಣೆಯ ಪ್ರಯೋಜನ ರಾಜ್ಯ ಸರ್ಕಾರದ ವಿರುದ್ಧ ರತನಲಾಲ್ ಅರೋರಾ ೨೦೦೪ (೪) ಎಸ್‌ಸಿಸಿ ೫೯೦ ಎಐಆರ್ ೨೦೦೪ ಎಸ್‌ಸಿ ೨೩೬೪: ೨೦೦೪ ಸಿಆರ್‌ಐ, ಎಲ್‌ಜೆ ೨೧೦೫**

೨. ದಾಖಲೆಗಳ ಅನುಸಾರ ಸಾಕ್ಷ್ಯವು ಖುಲಾಸೆಯನ್ನು ಪುಷ್ಟೀಕರಿಸದೇ ಇರುವಲ್ಲಿ ಕಡೇ ಪಕ್ಷ ಕನಿಷ್ಠ ಅವಧಿಯ ಶಿಕ್ಷೆಯನ್ನಾದರೂ ವಿಧಿಸಬೇಕು.

ಆಂಧ್ರ ಪ್ರದೇಶ ರಾಜ್ಯ ವಿರುದ್ಧ ಸಿ. ಉಮಾ ಮಹೇಶ್ವರರಾವ್ ೨೦೦೪ (೬) ಎಸ್‌ಸಿಸಿ ೫೯; ಎಐಆರ್ ೨೦೦೪ ಎಸ್‌ಸಿ ೨೦೪೨; ೨೦೦೪ ಸಿಆರ್‌ಐ. ಎಲ್.ಜೆ ೨೦೪೦: ಆಂಧ್ರ ಪ್ರದೇಶ ರಾಜ್ಯ ವಿರುದ್ಧ ಆರ್. ಜೀವರತ್ನಮ ೨೦೦೪ (೬) ಎಸ್‌ಸಿಸಿ ೪೮೮

➤ **ಭ್ರಷ್ಟಾಚಾರ ಪ್ರತಿಬಂಧ ಅಧಿನಿಯಮ, ೧೯೮೮, ಕಲಂ ೧೩ ಮತ್ತು ೭**

ಲೋಕಾಯುಕ್ತಕ್ಕೆ ಪ್ರತಿನಿಯೋಜಿತಗೊಂಡ ಪೊಲೀಸ್ ಅಧಿಕಾರಿಯು ತನ್ನಿಂತಾನೇ ಪ್ರದತ್ತವಾದ ಅಧಿಕಾರವನ್ನು ಪ್ರಯೋಗಿಸುವುದು ಕಾನೂನಿನ ಕ್ರಮವನ್ನು ದುರುಪಯೋಗಪಡಿಸಿಕೊಂಡಂತಾಗುವುದಿಲ್ಲ ಅಥವಾ ಕಾನೂನಿನ ಉಲ್ಲಂಘನೆಯಲ್ಲ,

ಮಹದೇವಪ್ಪ ವಿರುದ್ಧ ಕರ್ನಾಟಕ ಲೋಕಾಯುಕ್ತ ಮತ್ತಿತರರು ೨೦೧೧ (೪)ಕೆಸಿಸಿಆರ್೩೩೦೬

ಮತ್ತು ಉಲ್ಲೇಖಗಳು

ಕರ್ನಾಟಕ ರಾಜ್ಯ ಮತ್ತಿತರರು ವಿರುದ್ಧ ಬಸವರಾಜ ಗುಡ್ಡಪ್ಪ ಮಳಿಗೇರ ಐಎಲ್‌ಆರ್ ೨೦೦೩ ಕೆಎಆರ್ ೩೫೮೯: ಗೋವಿಂದರಾಜು ವಿರುದ್ಧ ಕರ್ನಾಟಕ ರಾಜ್ಯ ೨೦೦೮(೬)

ಕೆಎಲ್‌ಜೆ ೭೧೮; ಮೊಹಮ್ಮದ ಸಲೀಮ ವಿರುದ್ಧ ರಾಜ್ಯ ಲೋಕಾಯುಕ್ತ ಪೋಲೀಸರು, ಬೆಂಗಳೂರು, ೨೦೦೫ (೧) ಕೆಎಲ್‌ಜೆ ೧೧೦; ಹೆಚ್ ನಾಗರಾಜ ವಿರುದ್ಧ ರಾಜ್ಯ ಲೋಕಾಯುಕ್ತ ಪೊಲೀಸರು, ಬೆಳಗಾಂ, ೨೦೦೨ (೨) ಕೆಎಲ್‌ಜೆ ೧೪೪

➤ **ಕಲಂ ೧೩: ೧೯ ವರ್ಷಗಳಷ್ಟು ದೀರ್ಘ ಅವಧಿಯ ನಂತರ ಅಭಿಯೋಜನೆ ಯೋಗ್ಯವೆ?**

ಸಾರ್ವಜನಿಕ ಸೇವೆಯಲ್ಲಿ ವ್ಯಾಪಿಸಿರುವ ಭ್ರಷ್ಟಾಚಾರದಂಥ ಗಂಭೀರ ವಿಷಯವನ್ನು ಸರ್ವೋಚ್ಚ ನ್ಯಾಯಾಲಯವು ಅವಲೋಕಿಸುತ್ತಿದೆ. ಆರೋಪಿಗೆ ಸಲಿಗೆಯ ಅವಕಾಶವನ್ನು ನೀಡದಿದ್ದಲ್ಲಿ ಅಭಿಯೋಜನೆಯಲ್ಲಾಗುವ ವಿಳಂಬವು ಯಾವುದೇ ಪರಿಣಾವುವನ್ನು ಬೀರುವುದಿಲ್ಲ.

ಸಿ.ಎಸ್. ಕೃಷ್ಣಮೂರ್ತಿ ವಿರುದ್ಧ ಕರ್ನಾಟಕ ರಾಜ್ಯ ಎಐಆರ್ ೨೦೦೫ ಎಸ್‌ಸಿ ೨೬೯೦: ೨೦೦೫ ಸಿಆರ್‌ಐ, ಎಲ್‌ಜೆ ೨೧೪೫: ೨೦೦೫ (೪) ಎಸ್‌ಸಿಸಿ ೮೧

- **ಭ್ರಷ್ಟಾಚಾರ ಪ್ರತಿಬಂಧ ಅಧಿನಿಯಮ, ೧೯೮೮ರ ಕಲಂ ೧೩ (ಹೆಚ್)(ಇ) ಆರ್/ಡಬ್ಲ್ಯು ಕಲಂ ೧೩ (೨) ತನಿಖೆ ನಡೆಸುವ ಅಧಿಕೃತ ವ್ಯಕ್ತಿ ಅಥವಾ ಅಧಿಕಾರಿ :**

ಭ್ರಷ್ಟಾಚಾರ ಪ್ರತಿಬಂಧ ಅಧಿನಿಯಮ, ೧೯೮೮ರ ಮೇಲ್ಕಂಡ ಕಲಂಗಳಡಿ ಯಾವುದೇ ಅಪರಾಧವನ್ನು ಕುರಿತಂತೆ ತನಿಖೆ ನಡೆಸಲು ಸರ್ಕಾರದಿಂದ ನಿಯೋಜಿತಗೊಂಡ ಅಧಿಕಾರಿಯು, ಆರಕ್ಷಕ ಅಧೀಕ್ಷಕನಿಗಿಂತ ಕೆಳದರ್ಜೆಯ ಅಧಿಕಾರಿಯಾಗಿದ್ದರೂ ಅಧಿಕೃತ ವ್ಯಕ್ತಿಯೇ.

ಪಾಂಡುರಂಗ ವಿರುದ್ಧ ಕರ್ನಾಟಕ ರಾಜ್ಯ ೨೦೦೮ ಸಿಆರ್‌ಐ, ಎಲ್‌ಜೆ ೨೫೦೭ (ಕೆಎಎನ್‌ಟಿ)

- **ಕಲಂ ೧೩: ಭ್ರಷ್ಟಾಚಾರ ಪ್ರತಿಬಂಧ ಅಧಿನಿಯಮ ೧೯೮೮ (ಕಲಂ ೧೩)**

ಸರ್ಕಾರಿ ವೈದ್ಯನು ಖಾಸಗಿಯಾಗಿ ವೈದ್ಯವೃತ್ತಿಯನ್ನು ನಡೆಸುತ್ತಿರುವ ಸಂದರ್ಭದಲ್ಲಿ ತನ್ನ ಸೇವೆಗೆ ರೋಗಿಯಿಂದ ಬಯಸುವ ಅಥವಾ ಪಡೆಯುವ ಪ್ರತಿಫಲವನ್ನು ಕಾನೂನು ಬಾಹಿರ ಪರಿತೋಷ ಎಂದು ಪರಿಗಣಿಸಲಾಗದು ಮತ್ತು ಸದರಿ ಅಧಿನಿಯಮದ ಕಲಂ ೧೩ರನ್ನು ಅನ್ವಯಿಸಲಾಗದು.

ಕನ್ವರಜೀತ್ ಸಿಂಗ ಕಕ್ಕರ್ ವಿರುದ್ಧ ಪಂಜಾಬ್ ರಾಜ್ಯ ಮತ್ತಿತರರು. ೨೦೧೧ (೨) ಕ್ರೈಮ್ಸ್ ೨೩೫ (ಎಸ್‌ಸಿ) ಮತ್ತು ಉಲ್ಲೇಖಗಳು,

ರಾಜರಾಜೇಂದರ ಸಿಂಗ್ ಸೇಠ್ ಅಲಿಯಾಸ್ ಆರ್‌ಆರ್‌ಎಸ್ ಸೇಠ್ ವಿರುದ್ಧ ಜಾರ್ಖಂಡ್ ರಾಜ್ಯ ೨೦೦೮ (೧೧) ಎಸ್‌ಸಿಸಿ ೬೮೧: ಬಿ. ನೋಹಾ ವಿರುದ್ಧ ಕೇರಳ ರಾಜ್ಯ ೨೦೦೬ (೧೨) ಎಸ್‌ಸಿಸಿ ೨೭೭: ಎಂ. ನರಸಿಂಗ್ ರಾವ್ ವಿರುದ್ಧ ಆಂಧ್ರಪ್ರದೇಶ ರಾಜ್ಯ ೨೦೦೧ (೧) ಎಸ್‌ಸಿಸಿ ೬೯೧

- **ಕಲಂ ೧೩: ಕಾನೂನು ಬಾಹಿರ ಪರಿತೋಷ–ಸಾಕ್ಷ್ಯದ ಗುಣಾವಗುಣಗಳ ವಿಶ್ಲೇಷಣೆ:**

ಮೊಕದ್ದಮೆಯೊಂದರಲ್ಲಿ ಆರೋಪಿಯನ್ನು ಖುಲಾಸೆಗೊಳಿಸುವ ತೀರ್ಮಾನ ಪ್ರಕಟಿಸುವುದಾಗಿ ಅಶ್ವಾಸನೆಯಿತ್ತು. ಸೆಷನ್ಸ್ ನ್ಯಾಯಾಧೀಶನಿಂದ ಪರಿತೋಷ ಅಥವಾ ಲಂಚಕ್ಕಾಗಿ ಬೇಡಿಕೆ ಮತ್ತು ಸ್ವೀಕಾರದ ಆರೋಪವಿದ್ದು, ಸಾಕ್ಷಿಯಾಗಿ ಲಂಚದ ಹಣವನ್ನು ಸೀಕರಿಸಿದ ನ್ಯಾಯಾಧೀಶರ ಪತ್ನಿಯನ್ನೆ ಪರಿಗಣಿಸಲಾಗಿ ಅಲ್ಲದೇ, ಸದರಿ ನ್ಯಾಯಾಧೀಶರು ರಾತ್ರಿಯ ವೇಳೆಯಲ್ಲಿ ಆರೋಪಿಯನ್ನು ಮನೆಗೆ ಬರಮಾಡಿಕೊಂಡದ್ದು ಸೇರಿದಂತೆ ಆರೋಪ ಸಾಬೀತಾಗಿದೆ.

ಆಂಧ್ರಪ್ರದೇಶ ರಾಜ್ಯ ವಿರುದ್ಧ ಎಸ್. ಜನಾರ್ದನರಾವ್ ಎಐಆರ್ ೨೦೦೫ ಎಸ್‌ಸಿ ೧೨೨೦; ೨೦೦೫ (೧) ಎಸ್‌ಸಿಸಿ ೩೬೦

➢ **ಕಲಂ ೧೩: ಅಧಿವಿಚಾರಣೆಯ ಪೂರ್ವಹಂತದಲ್ಲೇ ಆರೋಪವನ್ನು ರದ್ದುಗೊಳಿಸುವುದು ಯೋಗ್ಯವಲ್ಲ.**

ಒಬ್ಬ ಆರೋಪಿತ ಸಾರ್ವಜನಿಕ ನೌಕರರು ತನ್ನ ಮೇಲಿನ ಆರೋಪವನ್ನು ಅಲ್ಲಗೆಳೆಯಲು ತನ್ನ ಮೂಲಕ ಅರೋಪ ನಿರಾಧಾರವೆಂದು ಅಧಿವಿಚಾರಣೆಯ ಸಂದರ್ಭದಲ್ಲಿ ಸಾಬೀತುಪಡಿಸಲು ಸ್ವತಂತ್ರನಾಗಿರುತ್ತಾನೆ.

ಮಹಾರಾಷ್ಟ್ರ ರಾಜ್ಯದ ವಿರುದ್ಧ ಕೆ.ಕೆ.ಎಸ್. ರಾಮಸ್ವಾಮಿ ೧೯೭೭ (ಸಿಆರ್‌ಐ). ಎಲ್‌ಜೆ ೧೭೪೦; ೧೯೭೭ ಎಐಆರ್ ೨೯೧ ಎಸ್‌ಸಿ ಮತ್ತು ಜೆ. ಜಯಲಲಿತ ವಿರುದ್ಧ ರಾಜ್ಯ ಸರ್ಕಾರ ೨೦೦೨ ಸಿಆರ್‌ಐ, ಎಲ್‌ಜೆ ೩೦೨೬ (ಎಮ್‌ಎಡಿ)

ಕಲಂ ೧೭: ತಿದ್ದುಪಡಿ ತರುವ ಮೂಲಕ ರಾಜ್ಯ ಸರ್ಕಾರವು ತನಿಖೆಯ ಹೊಣೆಯನ್ನು ಅನ್ಯ ಏಜೆನ್ಸಿಗಳಿಗೆ ವಹಿಸಿದಾಗ, ಅಂತಹ ಸಂದರ್ಭಗಳಲ್ಲಿ ರಾಜ್ಯ ಪೊಲೀಸರ ಪಾತ್ರ–

ಸಿಬಿಐನಿಂದ ತನಿಖೆಯನ್ನು ಕೈಗೊಳ್ಳಲಾಗಿದ್ದು, ದರ್ಜೆಯಲ್ಲಿ ಡಿಎಸ್‌ಪಿಗಿಂತ ಕಡಿಮೆಯಿಲ್ಲದ ಅಧಿಕಾರಿಯಿಂದಲೇ ತನಿಖೆಯಾಗಬೇಕೆಂಬ ಆಗ್ರಹವು ಶಾಸಕಾಂಗದಿಂದ ವ್ಯಕ್ತವಾದಾಗ ಕೆಳಕಂಡ ಮೊಕದ್ದಮೆಯಲ್ಲಿ ವಿನಾಯ್ತಿಯನ್ನು ನೀಡಲಾಗಿತ್ತು.

ಸಿಬಿಐ ಮೂಲಕ ರಾಜ್ಯ ಸರ್ಕಾರ ವಿರುದ್ಧ ಎಸ್. ಬಂಗಾರಪ್ಪ. ೨೦೦೧ ಸಿಆರ್‌ಐ, ಎಲ್‌ಜೆ ೧೧೧ (ಎಸ್‌ಸಿ)

೨೦೦೧(೧) ಎಸ್‌ಸಿಸಿ ೩೬೯: ೨೦೦೧ ಎಸ್‌ಸಿಸಿ(ಸಿಆರ್‌ಐ) ೧೫೨; ಎಐಅರ್ ೨೦೦೧ ಎಸ್‌ಸಿ ೨೨೨; ಹಾಗೂ ಸದರಿ ತೀರ್ಪು ಈ ಹಿಂದಿನ ತೀರ್ಪನ್ನು ವಿಪರ್ಯಗೊಳಿಸಿದೆ, ಎಸ್. ಬಂಗಾರಪ್ಪ ವಿರುದ್ಧ ಸಿಬಿಐ ಮೂಲಕ ಕರ್ನಾಟಕ ರಾಜ್ಯ ೨೦೦೦ (೩) ಕೆಎಲ್‌ಜೆ ४೫೨

➢ **ಕಲಂ ೧೯: ಕ್ರಮ ಜರುಗಿಸಲು ಮಂಜೂರಾತಿಯ ಅಗತ್ಯತೆ:**

ನಿವೃತ್ತ ಅಧಿಕಾರಿಯ ವಿರುದ್ಧ ಮೋಸ/ವಂಚನೆಯ ಆರೋಪದಡಿ ಕ್ರಮ ಜರುಗಿಸಲು ಮಂಜೂರಾತಿ ಆದೇಶದ ಅವಶ್ಯಕತೆಯಿರುವುದಿಲ್ಲ. ಅದಾಗ್ಯೂ ಮಂಜೂರಾತಿ ಅಥವಾ ಮಂಜೂರಾತಿಯ ಸಿಂಧುತ್ವವು ಮೊಕದ್ದಮೆಯ ಅಂತಿಮ ನಿರ್ಣಯದ ವೇಳೆ ಪರಿಗಣಿಸಲ್ಪಡುವುದು.

ಕೆ. ಶಿವರಾಮಶೆಟ್ಟಿ ವಿರುದ್ಧ ರಾಜ್ಯ ಸರ್ಕಾರ ೨೦೦೮ ಸಿಆರ್‌ಐ, ಎಲ್‌ಜೆ ೩೩೦೭(ಕೆಎಎನ್‌ಟಿ)

➢ **ಕಲಂ ೧೯: ಮಂಜೂರಾತಿಯ ಮಾನ್ಯತೆ,**

ಅಧೀನ ಕಾರ್ಯದರ್ಶಿಯಿಂದ ರಾಜ್ಯಪಾಲರ ಹೆಸರಿನಲ್ಲಿ ಜಾರಿಯಾದ ಮಂಜೂರಾತಿಯ ಕಾನೂನಿನ ದೃಷ್ಟಿಯಲ್ಲಿ ಮಾನ್ಯತೆಯುಳ್ಳದ್ದಾಗಿರುತ್ತದೆ. ಅಧಿಕಾರಷಾಹಿಯ ಅಂಥ ವರ್ತನೆಯು ತಮ್ಮ ದೈನಂದಿನ ನಿಯಮಿತ ಕಾರ್ಯಭಾರದ ಭಾಗವೆಂದು ಪೂರ್ವ ಭಾವನೆ ಮಾಡಬಹುದು.

ಟಿ.ಎ. ರಾಮಬಾಬು ವಿರುದ್ಧ ಕರ್ನಾಟಕ ರಾಜ್ಯ ೨೦೦೯, ಸಿಆರ್‌ಐ, ಎಲ್‌ಜೆ ೭೨೯(ಕೆಎಎನ್‌ಟಿ)

➢ **ಭ್ರಷ್ಟಾಚಾರ ಪ್ರತಿಬಂಧ ಅಧಿನಿಯಮ, ೧೯೮೮ರ ಕಲಂ ೧೯ ಆರ್‌ಡಬ್ಲ್ಯೂ ೧೩(೨)೧೩(೧) (ಡಿ) ಮತ್ತು ೧೩(೧) (ಎ) ಕಾನೂನುಬಾಹಿರ ಪರಿತೋಷ–ಅಭಿಯೋಜನೆಯ ಮಂಜೂರಾತಿ– ತಕರಾರರನ್ನು ತಳ್ಳಿ ಹಾಕಿದ ಉಚ್ಚನ್ಯಾಯಾಲಯ**

ಮಂಜೂರಾತಿ ಆಜ್ಞೆ ಆಸ್ತಿತ್ವದಲ್ಲಿದ್ದು, ಅದರ ಕಾನೂನು ಬದ್ಧತೆ ಮತ್ತು ಸಿಂಧುತ್ವವು ಪ್ರಶ್ನಿಸಲ್ಪಟ್ಟಾಗ, ಅಂತಹ ವಿಷಯವು ಅಧಿವಿಚಾರಣೆಯ ಹಂತದಲ್ಲಿ ಪ್ರಸ್ತಾಪಿಸತಕ್ಕದ್ದು.

ದಿನೇಶ ಕುಮಾರ್ ವಿರುದ್ಧ ಅಧ್ಯಕ್ಷರು, ವಿಮಾನ ನಿಲ್ದಾಣ ಪ್ರಾಧಿಕಾರ, ಭಾರತ ಮತ್ತಿತರರು ೨೦೧೨ ಎಸಿಆರ್ ೧೨೩ ಮತ್ತು ಉಲ್ಲೇಖಿಸಬಹುದಾದ ತೀರ್ಪುಗಳು:

ಕರ್ನಾಟಕ ರಾಜ್ಯ ವಿರುದ್ಧ ಅಮೀರಜಾನ ೨೦೦೭ (೧) ಎಸ್‌ಸಿಸಿ ೨೭೩;

ಅಶೋಕ ತ್ಷೆರಿಂಗ ಭುಟಿಯಾ ವಿರುದ್ಧ ಸಿಕ್ಕಿಂ ರಾಜ್ಯ ೨೦೧೧ (೪) ಎಸ್‌ಸಿಸಿ ೪೦೨;

➢ **ಭ್ರಷ್ಟಾಚಾರ ಪ್ರಬಂಧಕ ಅಧಿನಿಯಮ, ೧೯೮೮, ಕಲಂ ೧೯, ಅಧಿವಿಚಾರಣೆಗಾಗಿ ಮಂಜೂರಾತಿ**

ಸಾರ್ವಜನಿಕ ನೌಕರನೊಬ್ಬನು ತನ್ನ ಪದನಿಮಿತ್ತ ಅಧಿಕಾರವನ್ನು ದುರುಪಯೋಗಪಡಿಸಿಕೊಂಡಿದ್ದು, ಮತ್ತು ಅಂತಹ ದುರುಪಯೋಗ ನಡೆದಾಗ ಸದರಿ ಸಾರ್ವಜನಿಕ ನೌಕರನು ತನ್ನ ಹುದ್ದೆ/ಪದವಿ/ ಅಥವಾ ಅಧಿಕಾರ ಹೊಂದಿರಲಿಲ್ಲವೆಂಬುದು ದೃಢಪಟ್ಟಾಗ ಅಂತಹ ಸಂದರ್ಭದಲ್ಲಿ ಮಂಜೂರಾತಿ ಪಡೆಯಬೇಕಾದ ಅಗತ್ಯವಿರುವುದಿಲ್ಲ.

ಅಭಯ ಸಿಂಗ್ ಚೌತಾಲಾ ವಿರುದ್ಧ ಸಿಬಿಐ. ೨೦೧೧ ಎಸಿಅರ್ ೬೪೭ ಮತ್ತು ಬಾಲಕೃಷ್ಣನ್ ರವಿ ಮೆನನ್ ವಿರುದ್ಧ ಭಾರತ ಗಣರಾಜ್ಯ ೨೦೦೭ (೧) ಎಸ್‌ಸಿಸಿ ೪೫; ವಿಭಾಗೀಯ ನಿಯಂತ್ರಕರು, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ವಿರುದ್ಧ ಮಹಾದೇವಿ ಶೆಟ್ಟಿ ಮತ್ತಿತರರು, ೨೦೦೩(೭) ಎಸ್‌ಸಿಸಿ೧೯೭; ಕೆ. ಕರುಣಾಕರನ್ ವಿರುದ್ಧ ಕೇರಳ ರಾಜ್ಯ ೨೦೦೭ (೧) ಎಸ್‌ಸಿಸಿ ೫೯; ಪ್ರಕಾಶ ಸಿಂಗ್ ಬಾದಲ್ ವಿರುದ್ಧ ಪಂಜಾಬ್ ರಾಜ್ಯ ೨೦೦೭ (೧) ಎಸ್‌ಸಿಸಿ ೧; ಶಂಕರರಾಜು ವಿರುದ್ಧ ಭಾರತ ಗಣರಾಜ್ಯ ೨೦೧೧ (೨) ಎಸ್‌ಸಿಸಿ ೧೩೨

➤ **ಕಲಂ ೨೦, ಅಕ್ರಮ ಪರಿತೋಷ–ಭ್ರಷ್ಟಾಚಾರ ಪ್ರತಿಬಂಧ ಅಧಿನಿಯಮದ ಕಲಂ ೨೦ರಡಿ ಕೇವಲ ಅಪರಾಧವನ್ನು ತೀರ್ಮಾನಿಸಬಹುದೇ ವಿನಃ ಆರೋಪಿಯ ಮುಗ್ಧತೆಯನ್ನಲ್ಲ.**

ಲೋಕಾಯುಕ್ತ ಪೊಲೀಸ್ ಹಾಸನ, ಕರ್ನಾಟಕ ವಿರುದ್ಧ ಡಾಕ್ಟರ್ ಎ. ಶೇಖರನ್ ಮತ್ತಿತರರು. ೨೦೧೧ ಸಿಆರ್‌ಆರ್ ೮೩೬(ಕೆಎಎನ್‌ಟಿ) ಮತ್ತು ರಾಜಸ್ಥಾನ ರಾಜ್ಯ ವಿರುದ್ಧ ಮೋಹನಲಾಲ ೨೦೧೦(೧) ಎಸ್‌ಸಿಸಿ(ಸಿಆರ್‌ಐ) ೬೦೭.

➤ **ಕಲಂ ೩೦: (೨) ಆರ್/ಡಬ್ಲ್ಯೂ ಕಲಂ ೨೬, ೧೯೪೭ರ ಅಧಿನಿಯಮದಿಂದ ಪ್ರದತ್ತವಾದ ಅಧಿಕಾರ ವ್ಯಾಪ್ತಿಯು ೧೯೮೮ರ ಅಧಿನಿಯಮಕ್ಕು ಅನ್ವಯಿಸುತ್ತದೆ.**

ಭ್ರಷ್ಟಾಚಾರ ಪ್ರತಿಬಂಧ ಅಧಿನಿಯಮ, ೧೯೪೭ರಡಿ ನೇಮಕಗೊಂಡಿದ್ದು ವಿಶೇಷ ನ್ಯಾಯಾಧೀಶರು, ೧೯೮೮ರ ಅಧಿನಿಯಮದಡಿ ತಮ್ಮ ಅಧಿಕಾರವ್ಯಾಪ್ತಿಯನ್ನು ಪ್ರಯೋಗಿಸಲು ಸಕ್ಷಮರಾಗಿರುತ್ತಾರೆ. ನೋಡಿ: ಕಲಂ ೩೦ (೨) ಆರ್/ಡಬ್ಲ್ಯೂ ಕಲಂ ೨೬

ವಸಂತ ಅರ್ಜುನರಾವ್ ಬಂಡಕ್ ವಿರುದ್ಧ ಕರ್ನಾಟಕ ರಾಜ್ಯ

ಎಐಅರ್ ೨೦೦೩ ಎಸ್‌ಸಿ ೧೬೧: ೨೦೦೩ (೧) ಎಸ್‌ಸಿಸಿ ೪೪೮; ೨೦೦೩ ಸಿಆರ್‌ಐ, ಎಲ್‌ಜೆ ೩೯೪

೩. ೫ ಲೋಕಾಯುಕ್ತದ ಟಿಪ್ಪಣಿಗಳು

ಹಾಲಿ ಸಚಿವ ಅಂಬರೀಷ, ವಿರೋಧ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಸೇರಿದಂತೆ ವಿಧಾನಸಭೆಯ ೨೯ ಮತ್ತು ವಿಧಾನ ಪರಿಷತ್‌ನ ಮೂವರು ಸದಸ್ಯರು ೨೦೧೨–೧೩ ನೆಯ ಸಾಲಿನ ಆಸ್ತಿ ವಿವರವನ್ನು ಲೋಕಾಯುಕ್ತರಿಗೆ ಸಲ್ಲಿಸಲು ವಿಫಲರಾಗಿದ್ದಾರೆ. ಈ ಸಂಬಂಧ ಲೋಕಾಯುಕ್ತರು ರಾಜ್ಯಪಾಲರಿಗೆ ವರದಿ ಸಲ್ಲಿಸಿದ್ದಾರೆ. ಆಸ್ತಿ ವಿವರ ಸಲ್ಲಿಸಲು ನಿಗದಿಯಾಗಿದ್ದ ಮೊದಲ ಗಡುವು ೨೦೧೩ ಜುಲೈ ೧ಕ್ಕೆ ಅಂತ್ಯಗೊಂಡಿತ್ತು. ಆ ಬಳಿಕ ಲೋಕಾಯುಕ್ತ ನ್ಯಾಯಮೂರ್ತಿ ವೈ. ಭಾಸ್ಕರರಾವ್ ಅವರು ರಾಜ್ಯಪಾಲರಿಗೆ ಮೊದಲ ವರದಿ ಸಲ್ಲಿಸಿದ್ದರು. ಲೋಕಾಯುಕ್ತ ಕಾಯ್ದೆಯ ಪ್ರಕಾರ ಮೊದಲ ಗಡುವಿನೊಳಗೆ ಆಸ್ತಿ ವಿವರ ಸಲ್ಲಿಸದ ಶಾಸಕರು ನಂತರದ ೬೦ ದಿನದೊಳಗೆ ಅಂದರೆ ಸೆಪ್ಟಂಬರ್ ೧, ೨೦೧೩ರೊಳಗೆ ವಿಳಂಬಕ್ಕೆ ಕಾರಣ ಸಹಿತವಾಗಿ ಪ್ರಮಾಣ ಪತ್ರ ಸಲ್ಲಿಸಬೇಕಿತ್ತು. ಕಾಂಗ್ರೆಸ್ ಮತ್ತು ಜೆಡಿಎಸ್‌ನ ತಲಾ ೧೨, ಬಿಜೆಪಿ, ಕೆಜೆಪಿ ಸಮಾಜವಾದಿ ಪಕ್ಷ, ಸರ್ವೋದಯ ಕರ್ನಾಟಕ ಪಕ್ಷ ಮತ್ತು ಕರ್ನಾಟಕ ಮಕ್ಕಳ ಪಕ್ಷದ ತಲಾ ಒಬ್ಬ ಶಾಸಕರು. ಲೋಕಾಯುಕ್ತರಿಗೆ ಆಸ್ತಿ ವಿವರ ಸಲ್ಲಿಸದೇ ಇರುವ ವಿಧಾನ ಪರಿಷತ್ ಸದಸ್ಯರಲ್ಲಿ ಇಬ್ಬರು ಬಿಜೆಪಿಯವರು. ಒಬ್ಬ ಸದಸ್ಯ ಜೆಡಿಎಸ್‌ನವರು.

ಅಂತಿಮ ಗಡುವಿನವರೆಗೂ ಆಸ್ತಿ ವಿವರ ಸಲ್ಲಿಸದ ಕೆಲ ಶಾಸಕರ ವಿರುದ್ಧ ಭಾರತೀಯ ದಂಡ ಸಂಹಿತೆಯ ಕಲಂ ೧೭೬ರ ಅಡಿಯಲ್ಲಿ ಹಿಂದಿನ ಲೋಕಾಯುಕ್ತ ನ್ಯಾಯಮೂರ್ತಿ ಸಂತೋಷ ಹೆಗ್ಡೆ ಅವರು ಕ್ರಿಮಿನಲ್ ಮೊಕದ್ದಮೆ ದಾಖಲಿಸಿದ್ದರು. ಆ ನಂತರದ ದಿನಗಳಲ್ಲಿ ಆಸ್ತಿ ವಿವರ ಸಲ್ಲಿಸದ ಶಾಸಕರ ಸಂಖ್ಯೆಯಲ್ಲಿ ಇಳಿಮುಖವಾಗಿತ್ತು. ಈ ಕಲಂನ ಪ್ರಕಾರ ಯಾವುದೆ ಸಾರ್ವಜನಿಕ ನೌಕರ ಕಡ್ಡಾಯವಾಗಿ ಸಲ್ಲಿಸಲೇಬೇಕಾದ ಮಾಹಿತಿಯನ್ನು ಸಲ್ಲಿಸುವಲ್ಲಿ ಲೋಪ ಎಸಗುವುದು ದಂಡನಾರ್ಹ ಅಪರಾಧ. ಸಚಿವರಾಗಿದ್ದರೂ ಆಸ್ತಿ ವಿವರ ಸಲ್ಲಿಸುವಲ್ಲಿ ವಿಫಲರಾಗಿರುವ ಎಂ. ಎಚ್ ಅಂಬರಿಷ್ ವಿರುದ್ದ ಸಾರ್ವಜನಿಕರು ಲೋಕಾಯುಕ್ತಕ್ಕೆ ದೂರು ನೀಡಿದಲ್ಲಿ ಅವರ ವಿರುದ್ಧ ವಿಚಾರಣೆ ಕೈಗೆತ್ತಿಕೊಳ್ಳುವ ಸಾಧ್ಯತೆ ಇದೆ.

ಈ ಹಿಂದಿದ್ದ ಜೆ.ಎಚ್. ಪಟೇಲ್ ಸರ್ಕಾರದಲ್ಲಿ ಸಚಿವರಾಗಿದ್ದ ನಾಗಪ್ಪ ಸಾಲೋನಿ ಮತ್ತು ಅಶ್ವತ್ಥ್‌ನಾರಾಯಣ ರೆಡ್ಡಿ ನಿಗದಿತ ಗಡುವಿನೊಳಗೆ ಲೋಕಾಯುಕ್ತರಿಗೆ ಆಸ್ತಿ ವಿವರ ಸಲ್ಲಸಿರಲಿಲ್ಲ. ಆಗ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ ೧೩(೧) ಮತ್ತು ೨೨ರ ಅಡಿಯಲ್ಲಿ ವಿಚಾರಣೆ ನಡೆಸಿದ್ದ ಆಗಿನ ಲೋಕಾಯುಕ್ತರು, ಇಬ್ಬರನ್ನು ಸಂಪುಟದಿಂದ ಕೈ ಬಿಡುವಂತೆ ಮುಖ್ಯಮಂತ್ರಿಗೆ ಶಿಪಾರಸ್ಸು ಮಾಡಿದ್ದರು. ಲೋಕಾಯುಕ್ತರ ಈ ಕ್ರಮವನ್ನು ಹೈಕೋರ್ಟ ಎತ್ತಿ ಹಿಡಿದಿತ್ತು. ಜೆಡಿಎಸ್, ಬಿಜೆಪಿ ಸಮ್ಮಿಶ್ರ ಸರ್ಕಾರದ ಅವಧಿಯಲ್ಲಿ ಇದೇ ರೀತಿಯ ಪ್ರಕರಣ ನಡೆದಿತ್ತು. ಕುಮಾರಸ್ವಾಮಿ ಸಂಪುಟದ ಸದಸ್ಯರಾಗಿದ್ದ ಅಲ್ಕೋಡ್ ಹನುಮಂತಪ್ಪ, ಹಾಗೂ ಶರಣ ಬಸಪ್ಪ ದರ್ಶನಾಪುರ ಅವರು ನಿಗದಿತ ಗಡುವಿನೊಳಗೆ ಆಸ್ತಿ ವಿವರ ಸಲ್ಲಿಸಿರಲಿಲ್ಲ. ಈ ಸಂಬಂಧ ವಿಚಾರಣೆ ನಡೆಸಿ, ಇಬ್ಬರನ್ನು ಸಂಪುಟದಿಂದ ಕೈ ಬಿಡುವಂತೆ ಮಾಜಿ ಸಚಿವ ಎಸ್.ಕೆ. ಕಾಂತಾರವರು ಆಗಿನ ಲೋಕಾಯುಕ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ ಅವರಿಗೆ ದೂರು ಸಲ್ಲಿಸಿದ್ದರು. ತನಿಖೆ ನಡೆಸಿದ ಲೋಕಾಯುಕ್ತರು ಕುಮಾರಸ್ವಾಮಿಯವರಿಗೆ ಈ ಸಚಿವರನ್ನು ಸಂಪುಟದಿಂದ ಕೈ ಬಿಡುವಂತೆ ಶಿಫಾರಸ್ಸು ಮಾಡಿದ್ದರು. ಆದರೆ ಆ ವರದಿಯನ್ನು ಕುಮಾರಸ್ವಾಮಿಯವರು ತಿರಸ್ಕರಿಸಿದ್ದರು. ಲೋಕಾಯುಕ್ತರು ಸಲ್ಲಿಸುವ ವರದಿ ಬಗ್ಗೆ ಸಕ್ಷಮ ಪ್ರಾಧಿಕಾರ ಎಂದರೆ ಸಚಿವರ ವಿಷಯದಲ್ಲಿ ಮುಖ್ಯಮಂತ್ರಿ, ಶಾಸಕರ ವಿಷಯದಲ್ಲಿ ಸ್ಪೀಕರ ಅಥವಾ ಸಭಾಪತಿ ಮೂರು ತಿಂಗಳೊಳಗೆ ಕ್ರಮ ಕೈಗೊಳ್ಳಬೇಕಾಗುತ್ತದೆ. ವರದಿಯನ್ನು ಒಪ್ಪಿಕೊಳ್ಳುವ ಅಥವಾ ತಿರಸ್ಕರಿಸುವ ಅಧಿಕಾರ ಸಕ್ಷಮ ಪ್ರಾಧಿಕಾರಕ್ಕಿದೆ. ಮೂರು ತಿಂಗಳ ಬಳಿಕವೂ ಅದು ಯಾವುದೇ ನಿರ್ಧಾರವನ್ನು ಕೈಗೊಳ್ಳದಿದ್ದರೆ, ವರದಿಯನ್ನು ಒಪ್ಪಿಕೊಂಡಂತೆ ಆಗುತ್ತದೆ ಎಂದು ವರದಿ ಹೇಳುತ್ತದೆ.

ಪ್ರಕರಣದ ತನಿಖೆ ಆರಂಭಗೊಂಡು ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಕೆಯಾದ ಸಂದರ್ಭದಲ್ಲಿ, ವಶಪಡಿಸಿಕೊಂಡ ಆಸ್ತಿಯನ್ನು ನ್ಯಾಯಾಲಯಕ್ಕೆ ಒಪ್ಪಿಸಲಾಗುತ್ತದೆ. ಇನ್ನು ತೀರ್ಪಿನಲ್ಲಿ ಆಸ್ತಿ ಅಕ್ರಮವಾಗಿ ಸಂಪಾದನೆಯಾಗಿದ್ದು ಎಂಬ ಅಂಶ ಸಾಬೀತಾದರೆ, ಅದನ್ನು ಸರಕಾರದ ವಶಕ್ಕೆ

ನೀಡಲಾಗುತ್ತದೆ. ಕೆಲವು ಪ್ರಕರಣಗಳಲ್ಲಿ ಆಸ್ತಿಯನ್ನು ಅಪರಾಧಿಗೆ ವಾಪಸ್ ಮಾಡಿ ಅಕ್ರಮವಾಗಿ ಗಳಿಸಿರುವ ಹಣವನ್ನು ದಂಡದ ರೂಪದಲ್ಲಿ ಸರಕಾರಕ್ಕೆ ಪಾವತಿಸುವಂತೆಯೂ ನ್ಯಾಯಾಲಯ ಆದೇಶ ಹೊರಡಿಸಿದ್ದು ಉಂಟು. ಒಂದು ವೇಳೆ ತನಿಖೆಯಲ್ಲಿ ಅಕ್ರಮ ಆಸ್ತಿ ಅಲ್ಲ ಎಂದು ಸಾಬೀತಾದರೆ ವಶಪಡಿಸಿಕೊಂಡ ಎಲ್ಲ ಚರಾಸ್ತಿ ಮತ್ತು ಸ್ಥಿರಾಸ್ತಿಗಳನ್ನು ಆರೋಪಿಗಳಿಗೆ ಅಥವಾ ಅವರ ವಾರಸುದಾರರಿಗೆ ವಾಪಸ್ ಮಾಡಲಾಗುತ್ತದೆ. ವಶಪಡಿಸಿಕೊಳ್ಳುವ ಅಕ್ರಮ ಸಂಪತ್ತಿನ ಸಂಗ್ರಹಣೆಗೆ ಬೆಂಗಳೂರಿನ ಅಂಬೇಡ್ಕರ್ ಬೀದಿಯಲ್ಲಿರುವ ಕರ್ನಾಟಕ ಲೋಕಾಯುಕ್ತ ಕಚೇರಿಯಲ್ಲಿಯೇ ದೊಡ್ಡ ಕೋಣೆ ಇದೆ. ಇಲ್ಲಿ ಲಾಕರ್, ಸಿಸಿ ಕ್ಯಾಮೆರಾ, ಸೈರನ್, ವಿದ್ಯುತ್ ಶಾಕ್, ಪೊಲೀಸರ ಭದ್ರತೆ ಮತ್ತು ರಕ್ಷಣೆ ಇದೆ. ಎಸ್‌ಪಿ ಮಟ್ಟದ ಅಧಿಕಾರಿಗಳನ್ನು ಹೊರತುಪಡಿಸಿ, ದಾಳಿಯಲ್ಲಿ ಭಾಗವಹಿಸಿ 'ಖಜಾನೆ ತುಂಬಿಸುವ' ಲೋಕಾಯುಕ್ತ ಸಿಬ್ಬಂದಿಗೂ ಈ ಕೋಣೆಗೆ ಪ್ರವೇಶವಿಲ್ಲ. ಲೋಕಾಯುಕ್ತ ಇತಿಹಾಸದಲ್ಲಿ ಅತಿ ಹೆಚ್ಚು ನಗದು, ಆಸ್ತಿ ಸಮೇತ ೮ ಮಂದಿ ಸಿಕ್ಕಿ ಬಿದ್ದ ದೊಡ್ಡ ದಾಳಿ ನಡೆದಿದ್ದು ೨೦೧೧ ಜುಲೈ ೨೨ ರಂದು. ಅಂದಾಜು ೧೦ ಕೋಟಿ ರೂ ಮೌಲ್ಯದ ಆಸ್ತಿ ವಶಪಡಿಸಿಕೊಳ್ಳಲಾಗಿತ್ತು. ಇದರಲ್ಲಿ ಶ್ರೀಗಂಧ, ಚಿನ್ನಾಭರಣ. ೬೦ ಲಕ್ಷ ರೂ ನಗದು ಸಮೇತ ೫ ಕೋಟಿ ಅಕ್ರಮ ಆಸ್ತಿಯೊಂದಿಗೆ ಸಿಕ್ಕಿಬಿದ್ದವರೆಂದರೆ ಸರಕಾರದ ಕಾರ್ಯದರ್ಶಿ ಹುದ್ದೆಯಲ್ಲಿರುವ ಮೃತ್ಯುಂಜಯ ಸ್ವಾಮಿ.

ಲೋಕಾಯುಕ್ತ ದಾಳಿಗೆ ಒಳಗಾದ ಅಧಿಕಾರಿಯಿಂದ ಕೋಟ್ಯಂತರ ಹಣ ಅಕ್ರಮ ಸಂಪತ್ತು ವಶಪಡಿಸಿಕೊಂಡು, ಪ್ರಕರಣ ವಿಚಾರಣೆ ಹಂತದಲ್ಲಿದ್ದಾಗಲೇ ಆರೋಪಿ ಸಾವನ್ನಪಿದರೆ ಪ್ರಕರಣ ಬಿದ್ದು ಹೋಗುತ್ತದೆ. ಆಸ್ತಿ ಅಕ್ರಮವೇ ಆಗಿರಲಿ, ಸಕ್ರಮ ಇರಲಿ, ಇವು ನೇರವಾಗಿ ವಾರಸುದಾರರಿಗೆ ಎಂದರೆ ಹೆಂಡತಿ, ಮಕ್ಕಳ ಪಾಲಾಗುತ್ತದೆ. ಇಂತಹ ಪ್ರಕರಣಗಳು ಕರ್ನಾಟಕ ಲೋಕಾಯುಕ್ತದಲ್ಲಿ ೩೦ಕ್ಕೂ ಹೆಚ್ಚು ಸಿಗುತ್ತವೆ. ಲೋಕೋಪಯೋಗಿ ಇಲಾಖೆಯ ಇ. ಡಿ ಪ್ರಸಾದ್ ೨೦೦೩ರಲ್ಲಿ ಲೋಕಾಯುಕ್ತ ದಾಳಿಗೆ ಒಳಗಾಗಿದ್ದರು. ಆರೋಪಿಗೆ ೩ ವರ್ಷ ಜೈಲು, ೪೦ ಲಕ್ಷ ರೂ ದಂಡ ವಿಧಿಸಿ ಮೈಸೂರು ನ್ಯಾಯಾಲಯ ಮಹತ್ವದ ತೀರ್ಪು ಪ್ರಕಟಿಸಿತ್ತು. ಇದು ಲೋಕಾಯುಕ್ತ ಇತಿಹಾಸದಲ್ಲಿಯೇ ಅತೀ ಹೆಚ್ಚು ದಂಡ ವಿಧಿಸಿದ ಪ್ರಕರಣವೆನಿಸಿದೆ.

ಅಧ್ಯಾಯ ನಾಲ್ಕು

ಪ್ರಕರಣಗಳ ವಿಶ್ಲೇಷಣೆ (೨೦೦೯-೨೦೧೨)

ಅಧ್ಯಾಯ ನಾಲ್ಕು

ಪ್ರಕರಣಗಳ ವಿಶ್ಲೇಷಣೆ (೨೦೦೯-೨೦೧೨)

೪.೧. ಪ್ರಸ್ತಾವನೆ

ಕರ್ನಾಟಕ ಲೋಕಾಯುಕ್ತ ಕಾಯ್ದೆ ೧೯೮೪ರ ಪ್ರಕಾರ ಪ್ರತಿಯೊಂದು ದೂರು ಸಹ ನಮೂನೆ ಸಂಖ್ಯೆ ೧, ಫಿರ್ಯಾದುದಾರರ ದೂರು ಮತ್ತು ನಮೂನೆ ಸಂಖ್ಯೆ ೨, ಫಿರ್ಯಾದುದಾರರ ಶಪಥಪತ್ರದಿಂದ ಕೂಡಿರತಕ್ಕದ್ದೆಂದು ಕಡ್ಡಾಯಗೊಳಿಸಲಾಗಿರುತ್ತದೆ. ನಮೂನೆ ಸಂಖ್ಯೆ ೧ ಮತ್ತು ೨ ರಿಂದ ಕೂಡಿಲ್ಲದಿದ್ದರೆ, ಫಿರ್ಯಾದುದಾರರ ವಿಳಾಸ ಲಭ್ಯವಿದ್ದಲ್ಲಿ, ನಮೂನೆ ಸಂಖ್ಯೆ ೧ ಮತ್ತು ೨ನ್ನು ಫಿರ್ಯಾದುದಾರರ ಅನುಸರಣೆಗಾಗಿ ಅವರ ವಿಳಾಸಕ್ಕೆ ಕಳುಹಿಸಲಾಗುವುದು. ದೂರಿನಲ್ಲಿರುವ ಆಪಾದನೆಗಳು ಭ್ರಷ್ಟಾಚಾರ ನಿರ್ಮೂಲನಾ ಅಧಿನಿಯಮ, ೧೯೮೮ಕ್ಕೆ ವಿರುದ್ಧವಾಗಿದ್ದಲ್ಲಿ, ಸದರಿ ಅಧಿನಿಯಮದ ನಿಬಂಧನೆಗಳ ಅಡಿಯಲ್ಲಿ ಅವರು ಕ್ರಮಕೈಗೊಳ್ಳಲು ಮೂಲ ಮಾಹಿತಿಯ ಆಧಾರವಾಗಿ ಕಂಡು ಬಂದಲ್ಲಿ ಅವುಗಳನ್ನು ಪೊಲೀಸ್ ವಿಭಾಗಕ್ಕೆ ಉಲ್ಲೇಖಿಸಲಾಗುವುದು. ಅನಾಮಧೇಯ ಅಥವಾ ಹುಸಿ ಅನಾಮಧೇಯ ದೂರುಗಳನ್ನೂ ಸಹ ಸೂಕ್ತ ಸಂದರ್ಭಗಳಲ್ಲಿ ಸ್ವಯಂ ಪ್ರೇರಿತ ತನಿಖೆಯನ್ನು ಕೈಗೊಳ್ಳಲು ಪರಿಗಣಿಸಲಾಗುವುದು. ಇತರೆ ಪ್ರಕರಣಗಳಲ್ಲಿ, ಸೂಕ್ತ ಸಂದರ್ಭಗಳಲ್ಲಿ ಫಿರ್ಯಾದುದಾರರಿಗೆ ನಮೂನೆ ೧ ಮತ್ತು ೨ನ್ನು ಕಳುಹಿಸಲಾಗುವುದು ಹಾಗು ಫಿರ್ಯಾದುದಾರರು ನಮೂನೆ ೧ ಮತ್ತು ೨ರಲ್ಲಿ ಸಲ್ಲಿಸುವ ಅಂತಹ ದೂರುಗಳನ್ನು ದೂರುಗಳೆಂದು ಪರಿಗಣಿಸಿ ದಾಖಲಿಸಿಕೊಳ್ಳಲಾಗುವುದು.

ನಮೂನೆ ೧ ಮತ್ತು ೨ರಲ್ಲಿ ದಾಖಲಾದ ದೂರುಗಳು

೧. ಲೋಕಾಯುಕ್ತ ಕಾಯಿದೆ ಮತ್ತು ನಿಯಮಾವಳಿಗಳ ಪ್ರಕಾರ ಭರ್ತಿ ಮಾಡಿದ ನಿಗದಿತ ನಮೂನೆ ಸಂಖ್ಯೆ ೧ರಲ್ಲಿ ದಾಖಲಿಸಲಾದ ದೂರುಗಳು ನಮೂನೆ ೨ರ ಶಪಥಪತ್ರದೊಡನೆ ಕೂಡಿದ್ದಲ್ಲಿ ಅಂತಹ ದೂರುಗಳನ್ನು ದಾಖಲು ಮಾಡಿಕೊಂಡು ಪ್ರತಿಯೊಂದು ದೂರಿಗೂ ಗಣಕ ಯಂತ್ರದ ಮುಖಾಂತರ ಒಂದು ವಿಶೇಷ ಸಂಖ್ಯೆಯನ್ನು ನೀಡಲಾಗುವುದು. ಅಂತಹ ಪ್ರತಿಯೊಂದು ದೂರು ಸಹ ಪರಿಶೀಲನಾಧಿಕಾರಿಗಳಾದ ಹೆಚ್ಚುವರಿ ನಿಬಂಧಕರು (ವಿಚಾರಣೆಗಳು), ಉಪ ನಿಬಂಧಕರು (ವಿಚಾರಣೆಗಳು), ಸಹಾಯಕ ನಿಬಂಧಕರು (ಕಾನೂನು ಸಲಹೆ) ಹಾಗೂ ಸಾರ್ವಜನಿಕ ಅಭಿಯೋಜಕರು ಇವರಿಗೆ ಸಂದರ್ಭಾನುಸಾರವಾಗಿ ಜಿಲ್ಲಾವಾರು ಪರಿಶೀಲನೆಗಾಗಿ ಹಂಚಿಕೆ ಮಾಡಲಾಗುವುದು. ಲೋಕಾಯುಕ್ತ ಕಾಯಿದೆಯ ಕಲಂ ೯ರ ಅಡಿಯಲ್ಲಿ ಈ ಅಧಿಕಾರಿಗಳು ಈ ದೂರುಗಳ ತನಿಖೆಯಲ್ಲಿ ಮಾನ್ಯ ಲೋಕಾಯುಕ್ತ/ಉಪ ಲೋಕಾಯುಕ್ತರಿಗೆ ಸಹಕರಿಸುವರು. ಲೋಕಾಯುಕ್ತ/ಉಪ ಲೋಕಾಯುಕ್ತರು ದೂರುಗಳ ತನಿಖೆಯನ್ನು ತಾಂತ್ರಿಕ ಹಾಗೂ ಪೊಲೀಸ್ ವಿಭಾಗದ ಮೂಲಕವೂ ಕೈಗೊಳ್ಳುತ್ತಾರೆ. ಲೋಕಾಯುಕ್ತ ಕಾಯಿದೆಯ ೧೫(೩)ನೆಯ ಕಲಂನ ಅಡಿಯಲ್ಲಿ ಗೌರವಾನ್ವಿತ ಲೋಕಾಯುಕ್ತ/ಉಪ ಲೋಕಾಯುಕ್ತರು ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರದ ಅಧಿಕಾರಿಗಳ ಸೇವೆಯನ್ನೂ ಸಹ ಆಯಾ ಸರ್ಕಾರಗಳ ಸಹಮತದೊಂದಿಗೆ ಉಪಯೋಗಿಸಿಕೊಂಡು ಹಾಗೂ ಯಾವುದೇ ವ್ಯಕ್ತಿ ಅಥವಾ ಸಂಸ್ಥೆಯ ಮೂಲಕವೂ ಸಹ ತನಿಖೆಯನ್ನು ಕೈಗೊಳ್ಳಬಹುದು.

೨. ಅಂತಹ ಪೂರ್ವಭಾವಿ ವಿಚಾರಣೆಯನ್ನು ನಡೆಸಿದ ನಂತರ, ಲೋಕಾಯುಕ್ತ/ಉಪ ಲೋಕಾಯುಕ್ತರು ಲೋಕಾಯುಕ್ತ ಕಾಯಿದೆಯ ಅಡಿಯಲ್ಲಿ ಯಾವುದೇ ತನಿಖೆಯನ್ನು ನಡೆಸುವುದು ಯುಕ್ತವೆಂದು ಪರಿಭಾವಿಸಿದಲ್ಲಿ ಸಂಬಂಧಪಟ್ಟ ಸಾರ್ವಜನಿಕ ನೌಕರನಿಗೆ ಹಾಗೂ ಸಕ್ಷಮ ಪ್ರಾಧಿಕಾರಕ್ಕೆ ದೂರಿನ ಪ್ರತಿಯನ್ನು ಕಳುಹಿಸಿ ಅಂತಹ ದೂರಿಗೆ ಸಂಬಂಧಿಸಿ ಆ ಸಾರ್ವಜನಿಕ ನೌಕರನಿಗೆ ತನ್ನ ಅಭಿಪ್ರಾಯಗಳನ್ನು ತಿಳಿಸುವ ಅವಕಾಶವನ್ನು ಕಲ್ಪಿಸಲಾಗುವುದು.

೩. ದೂರು ನಿಷ್ಪ್ರಯೋಜಕ ಅಥವಾ ಕೆರಳಿಸುವ ಸ್ವರೂಪವಾಗಿದ್ದಲ್ಲಿ ಅಥವಾ ಉತ್ತಮ ಉದ್ದೇಶದಿಂದ ದೂರು ಸಲ್ಲಿಸದಿದ್ದಲ್ಲಿ ಅಥವಾ ತನಿಖೆಯನ್ನು ಕೈಗೊಳ್ಳಲು ಅಥವಾ ತನಿಖೆಯನ್ನು ಮುಂದುವರಿಸಲು ಸಾಕಷ್ಟು ಆಧಾರಗಳು ಇಲ್ಲವಾದಲ್ಲಿ ಅಥವಾ ಫಿರ್ಯಾದುದಾರರಿಗೆ ಇತರೆ ಸೂಕ್ತ ಪರಿಹಾರಗಳು ಲಭ್ಯವಿದ್ದಲ್ಲಿ ಲೋಕಾಯುಕ್ತ/ಉಪ ಲೋಕಾಯುಕ್ತರು ಕಾರಣಗಳನ್ನು ದಾಖಲಿಸಿದ ನಂತರ ಅಂತಹ ದೂರಿನ ತನಿಖೆಯನ್ನು ನಿರಾಕರಿಸಬಹುದು ಅಥವಾ ತನಿಖೆಯನ್ನು ನಿಲ್ಲಿಸಬಹುದು ಹಾಗೂ ಅದನ್ನು ಸಂಬಂಧಪಟ್ಟ ಫಿರ್ಯಾದುದಾರರಿಗೆ ಮತ್ತು ಸಾರ್ವಜನಿಕ ನೌಕರರಿಗೆ ತಿಳಿಸುತ್ತಾರೆ.

೪. ಮುಂದುವರೆದು, ಷೆಡ್ಯೂಲ್ IIರಲ್ಲಿ ನಿರ್ದಿಷ್ಟಗೊಳಿಸಿರುವ ಈ ಕೆಳಕಂಡ ಯಾವುದೇ ಕ್ರಮಕ್ಕೆ ಸಂಬಂಧಿಸಿದ ಕುಂದುಕೊರತೆಗಳನ್ನುಳ್ಳ ದೂರುಗಳ ಹಿನ್ನೆಲೆಯಲ್ಲಿ ಲೋಕಾಯುಕ್ತ/ಉಪ ಲೋಕಾಯುಕ್ತರು ಲೋಕಾಯುಕ್ತ ಕಾಯಿದೆಯ ಅಡಿಯಲ್ಲಿ ಯಾವುದೇ ತನಿಖೆಯನ್ನು ಕೈಗೊಳ್ಳುವುದು ಅಸಾಧ್ಯವಾಗಿರುತ್ತದೆ.

ಅ. ರಾಜ್ಯದ ಭದ್ರತೆಗೆ ಸಂಬಂಧಿಸಿದ ಅಪರಾಧಗಳ ತನಿಖೆಯನ್ನು ಉದ್ದೇಶಿಸಿ ಕೈಕೊಂಡ ಕ್ರಮ.

ಆ. ಒಂದು ವಿಷಯ ನ್ಯಾಯಾಲಯಕ್ಕೆ ಹೋಗಬೇಕೊ ಬೇಡವೊ ಎನ್ನುವುದನ್ನು ತೀರ್ಮಾನಿಸಲು ಸಂಬಂಧಿಸಿ ಅಧಿಕಾರ ಚಲಾಯಿಸಲು ಕೈಗೊಂಡ ಕ್ರಮ.

ಇ. ಒಪ್ಪಂದದ ಅಡಿಯಲ್ಲಿನ ಕಟ್ಟುಪಾಡುಗಳನ್ನು ಪೂರೈಸುವಲ್ಲಿ ಫಿರ್ಯಾದುದಾರರು ಕಿರುಕುಳ ಅಥವಾ ಸಮಗ್ರ ವಿಳಂಬವನ್ನು ಆರೋಪಿಸಿದಂತಹ ದೂರುಗಳನ್ನು ಹೊರತುಪಡಿಸಿ ಪೂರ್ಣವಾಗಿ ವ್ಯಾಪಾರ ದೃಷ್ಟಿಯಿಂದ ಕೂಡಿದಂತಹ ಒಪ್ಪಂದದ ನಿಯಮಗಳಿಂದ ತಲೆದೋರುವ ಗ್ರಾಹಕರು ಅಥವಾ ಸರಬರಾಜುದಾರರ ನಡುವಣ ಆಡಳಿತ ವಿಷಯಗಳಲ್ಲಿ ಕೈಗೊಂಡ ಕ್ರಮ.

ಈ. ನಿವೃತ್ತಿ ವೇತನ, ಉಪದಾನ (ಗ್ರಾಚ್ಯುಟಿ), ಭವಿಷ್ಯನಿಧಿ ಅಥವಾ ನಿವೃತ್ತಿ, ಸೇವೆಯಿಂದ ವಜಾ ಅಥವಾ ಸೇವಾಂತ್ಯದ ಇನ್ನಿತರೆ ಸೌಲಭ್ಯಗಳಿಗೆ ಸಂಬಂಧಪಟ್ಟಂತೆ ತೆಗೆದುಕೊಂಡ ಕ್ರಮಗಳನ್ನು ಹೊರತುಪಡಿಸಿ ನೇಮಕಾತಿ, ಸೇವೆಯಿಂದ ವಜಾಮಾಡುವುದು, ವೇತನ, ಶಿಸ್ತು, ವಯೋನಿವೃತ್ತಿ ಅಥವಾ ಇನ್ನಿತರೆ ಸಾರ್ವಜನಿಕ ನೌಕರರ ಸೇವೆಗಳಿಗೆ ಸಂಬಂಧಪಟ್ಟ ಷರತ್ತುಗಳ ಬಗ್ಗೆ ತೆಗೆದುಕೊಂಡ ಕ್ರಮಗಳು ಮತ್ತು

ಉ. ಪ್ರಶಸ್ತಿಗಳು ಮತ್ತು ಪಾರಿತೋಷಕಗಳು.

ಮುಂದುವರೆದು, ಫಿರ್ಯಾದುದಾರರು ಮೇಲ್ಮನವಿ, ಪರಿಷ್ಕರಣೆ, ಪುನರಾವೃತ್ತಿ ಅಥವಾ ಇತರೆ ವಿಧಾನಗಳ ಮೂಲಕ ನ್ಯಾಯಮಂಡಳಿ, ನ್ಯಾಯಾಲಯ ಅಥವಾ ಇತರೆ ಪ್ರಾಧಿಕಾರದ ಮೂಲಕ ಪರಿಹಾರವನ್ನು ಪಡೆಯಬಹುದಾದ ಅಥವಾ ಪಡೆಯದಿರುವ ಕುಂದುಕೊರತೆಗಳನ್ನುಳ್ಳ ಯಾವುದೇ ದೂರನ್ನೂ ಸಹ ಲೋಕಾಯುಕ್ತ/ಉಪ ಲೋಕಾಯುಕ್ತರು ತನಿಖೆಗೆ ಒಳಪಡಿಸಲಾಗುವುದಿಲ್ಲ.

೫. ಲೋಕಾಯುಕ್ತ ಕಾಯ್ದೆ ಅಡಿಯಲ್ಲಿ ಯಾವುದೇ ತನಿಖೆ(ಅಂತಹ ತನಿಖೆಗೆ ಮುಂಚಿತವಾಗಿ ಕೈಗೊಳ್ಳುವ ಪೂರ್ವಭಾವಿ ವಿಚಾರಣೆಯ ಒಳಗೊಂಡಂತೆ)ಯನ್ನು ಕೈಗೊಳ್ಳುವ ಉದ್ದೇಶದಿಂದ ಲೋಕಾಯುಕ್ತ/ಉಪ ಲೋಕಾಯುಕ್ತರು ಸಂಬಂಧಪಟ್ಟ ದಾಖಲಾತಿಗಳನ್ನು ತರಿಸಿಕೊಳ್ಳುವ ಮತ್ತು ಸಾಕ್ಷಿಗಳನ್ನು ಕರೆಸಿಕೊಳ್ಳುವ ಹಾಗೂ ಸಾಕ್ಷ್ಯವನ್ನು ದಾಖಲಿಸುವ ಅಧಿಕಾರವನ್ನು ಪಡೆದಿರುತ್ತಾರೆ.

೬. ಫಿರ್ಯಾದುದಾರರಿಗೆ ಅಥವಾ ಇನ್ನಿತರೆ ಯಾವುದೇ ವ್ಯಕ್ತಿಗೆ ಅನ್ಯಾಯ ಅಥವಾ ವಿನಾಕಾರಣ ತೊಂದರೆಯಾಗುವ ರೀತಿಯಲ್ಲಿ ಸಾರ್ವಜನಿಕ ನೌಕರ ಕ್ರಮ ಕೈಗೊಂಡಿರುವುದು ಲೋಕಾಯುಕ್ತ/ಉಪ ಲೋಕಾಯುಕ್ತರಿಗೆ ಮನವರಿಕೆಯಾದಲ್ಲಿ ಲೋಕಾಯುಕ್ತ ಕಾಯ್ದೆ ೧೨(೧)ರ ಅಡಿಯಲ್ಲಿ ಸಕ್ಷಮ ಪ್ರಾಧಿಕಾರಕ್ಕೆ ವರದಿಯನ್ನು ಕಳುಹಿಸಲಾಗುವುದು. ಆ ವರದಿಯಲ್ಲಿ ನಿರ್ದಿಷ್ಟಪಡಿಸಿದ ರೀತಿ ಹಾಗೂ ಸಮಯಾವಧಿಯಲ್ಲಿ ಅಂತಹ ಅನ್ಯಾಯ ಅಥವಾ ತೊಂದರೆಯನ್ನು ನಿವಾರಿಸಲು ಶಿಫಾರಸ್ಸು ಮಾಡಲಾಗುವುದು. ಸಕ್ಷಮ ಪ್ರಾಧಿಕಾರವು ವರದಿಯಲ್ಲಿ ನಿಗದಿಪಡಿಸಿದ ಅವಧಿಯು ಮುಕ್ತಾಯವಾಗುವುದಕ್ಕೆ ಒಂದು ತಿಂಗಳು ಮುಂಚಿತವಾಗಿ ಲೋಕಾಯುಕ್ತ ಅಥವಾ ಉಪಲೋಕಾಯುಕ್ತರಿಗೆ ತಾನು ತೆಗೆದುಕೊಂಡ ಕ್ರಮದ ಬಗ್ಗೆ ಲೋಕಾಯುಕ್ತ ಕಾಯ್ದೆ ೧೨(೨)ರ ಅಡಿಯಲ್ಲಿ ವರದಿ ಮಾಡತಕ್ಕದ್ದು.

೭. ಫಿರ್ಯಾದುದಾರರು ಮಾಡಿರುವ ಆಪಾದನೆಯು ಸಂಪೂರ್ಣವಾಗಿ ಅಥವಾ ಭಾಗಶಃ ಸಮರ್ಥನೀಯವೆಂದು ಲೋಕಾಯುಕ್ತ/ಉಪಲೋಕಾಯುಕ್ತರಿಗೆ ಕಂಡುಬಂದಲ್ಲಿ, ಲೋಕಾಯುಕ್ತ ಕಾಯ್ದೆ ೧೨(೩)ರ ಅಡಿಯಲ್ಲಿ ಸೂಕ್ತ ಕ್ರಮವನ್ನು ಶಿಫಾರಸ್ಸು ಮಾಡಿ ಸಕ್ಷಮ ಪ್ರಾಧಿಕಾರಕ್ಕೆ ವರದಿಯನ್ನು ಕಳುಹಿಸಲಾಗುವುದು. ಅಂತಹ ಸಕ್ಷಮ ಪ್ರಾಧಿಕಾರವು ಲೋಕಾಯುಕ್ತ ಕಾಯ್ದೆ ೧೨(೪)ರ ಅಡಿಯಲ್ಲಿ ವರದಿಯನ್ನು ಆಧರಿಸಿ ವರದಿಯನ್ನು ಸ್ವೀಕರಿಸಿದ ಮೂರು ತಿಂಗಳ ಒಳಗಾಗಿ ತಾನು ಕೈಗೊಂಡ ಅಥವಾ ತೆಗೆದುಕೊಳ್ಳಲು ಉದ್ದೇಶಿಸಿರುವ ಕ್ರಮದ ಕುರಿತು ಲೋಕಾಯುಕ್ತ/ಉಪ ಲೋಕಾಯುಕ್ತರಿಗೆ ತಿಳಿಸತಕ್ಕದ್ದು.

೮. ಕಾಯ್ದೆ ೧೨(೧) ಅಥವಾ ೧೨(೩)ರ ಅಡಿಯಲ್ಲಿ ಮಾಡಲಾದ ಶಿಫಾರಸ್ಸು ಅಥವಾ ಶೋಧನೆಗಳನ್ನು ಆಧರಿಸಿ ಕೈಗೊಂಡ ಅಥವಾ ಕೈಗೊಳ್ಳಲು ತೀರ್ಮಾನಿಸಲಾದ ಕ್ರಮಗಳ ಬಗ್ಗೆ ಲೋಕಾಯುಕ್ತ/ಉಪ ಲೋಕಾಯುಕ್ತರು ತೃಪ್ತರಾದಲ್ಲಿ ಕಾಯ್ದೆ ೧೨(೫) ರ ಅಡಿಯಲ್ಲಿ ಪ್ರಕರಣವನ್ನು ಮುಕ್ತಾಯ ಮಾಡಲಾಗುವುದು ಹಾಗೂ ಸಂಬಂಧಪಟ್ಟ ಫಿರ್ಯಾದುದಾರರಿಗೆ, ಸಾರ್ವಜನಿಕ ನೌಕರನಿಗೆ ಮತ್ತು ಸಕ್ಷಮ ಪ್ರಾಧಿಕಾರಕ್ಕೆ ಈ ವಿಷಯವನ್ನು ತಿಳಿಸಲಾಗುವುದು. ಆದರೆ, ಅವರಿಗೆ ಕೈಗೊಂಡ ಕ್ರಮದ ಬಗ್ಗೆ ಸಂತೃಪ್ತಿ ಇಲ್ಲವಾದಲ್ಲಿ ಹಾಗೂ ಅವರು ಪ್ರಕರಣವನ್ನು ಯುಕ್ತವೆಂದು ಪರಿಗಣಿಸಿದಲ್ಲಿ ಲೋಕಾಯುಕ್ತ ಕಾಯ್ದೆ ೧೨(೫)ರ ಅಡಿಯಲ್ಲಿ ಕರ್ನಾಟಕದ ಗೌರವಾನ್ವಿತ ರಾಜ್ಯಪಾಲರಿಗೆ ಅವರು ವಿಶೇಷ ವರದಿಯನ್ನು ಸಲ್ಲಿಸಬಹುದು ಮತ್ತು ಈ ವಿಷಯವನ್ನು ಸಂಬಂಧಪಟ್ಟ ಫಿರ್ಯಾದುದಾರರಿಗೆ ಮತ್ತು ಸಕ್ಷಮ ಪ್ರಾಧಿಕಾರಕ್ಕೆ ತಿಳಿಸಬಹುದು.

ಕೋಷ್ಟಕ ೧

ಲೋಕಾಯುಕ್ತ ಕಚೇರಿಯಲ್ಲಿ ೦೧/೦೪/೨೦೦೯ರಿಂದ ೩೧/೦೩/೨೦೧೦ರವರೆಗೆ ನಡಸಿರುವ ಪ್ರಕರಣಗಳ ವಿವರಗಳು

ನ್ಯಾಯಾಧಿಕಾರ	೩೧/೦೩/೨೦೦೯ಕ್ಕೆ ಬಾಕಿ ಇರುವ ಪ್ರಕರಣಗಳು	೦೧/೦೪/೨೦೦೯ ರಿಂದ ೩೧/೦೩/ ೨೦೧೦ರವರೆಗೆ ಸ್ವೀಕರಿಸಿದ ಪ್ರಕರಣಗಳು	ಒಟ್ಟು	೧/೪/೨೦೦೯ ರಿಂದ ೩೧/೦೩/೨೦೧೦ ರವರೆಗೆ ವಿಲೇವಾರಿ ಮಾಡಿದ ಪ್ರಕರಣಗಳು	೩೧/೦೩/೨೦೧೦ಕ್ಕೆ ಬಾಕಿ ಇರುವ ಕಡತಗಳು
ಗೌ.ಲೋಕಾಯುಕ್ತ	೦೩೮೮೯	೦೮೧೨	೦೪೭೦೧	೧೩೫೦	೦೩೩೫೧
ಗೌ.ಉಪ ಲೋಕಾಯುಕ್ತ	೧೪೪೧೦	೨೮೧೫	೧೭೨೨೫	೪೦೭೮	೧೩೧೪೭
ಒಟ್ಟು	೧೮೨೯೯	೩೬೨೭	೨೧೯೨೬	೫೪೨೮	೧೬೪೯೮

ಕೋಷ್ಟಕ ೨

ದೂರುಗಳನ್ನು ವಿಲೇವಾರಿ ಮಾಡಿರುವ ವಿಧಾನ

ನ್ಯಾಯಾಧಿಕಾರ	೧೨(೩) ಕಾಯ್ದೆ ಅಡಿಯಲ್ಲಿ ವಿಲೇವಾರಿ ಮಾಡಿದ ಪ್ರಕರಣಗಳು	೧೨(೧) ಕಾಯ್ದೆ ಅಡಿಯಲ್ಲಿ ವಿಲೇವಾರಿ ಮಾಡಿದ ಪ್ರಕರಣಗಳು	ಕುಂದುಕೊರತೆ ವಿಭಾಗ ಸಮಾಲೋಚಿಸಿ ವಿಲೇವಾರಿ ಮಾಡಿದ ಪ್ರಕರಣಗಳು	ಕಲಂ ೮ರ ಅಡಿಯಲ್ಲಿ ವಿಲೇವಾರಿ ಮಾಡಿದ ಪ್ರಕರಣಗಳು	ಕಲಂ ೯ರ ಅಡಿಯಲ್ಲಿ ವಿಲೇವಾರಿ ಮಾಡಿದ ಪ್ರಕರಣಗಳು	ಫಿರ್ಯಾದುದಾರರು ದೂರುಗಳನ್ನು ಹಿಂದಕ್ಕೆ ಪಡೆದ ಪ್ರಕರಣಗಳು
ಗೌ ಲೋಕಾಯುಕ್ತ	೭	೧೨	೩೦೮	೫೮೧	೪೧೭	೨೫
ಗೌ ಉಪ ಲೋಕಾಯುಕ್ತ	೧೦೯	೧೨	೮೦೮	೧೩೭೬	೧೭೦೦	೭೩
ಒಟ್ಟು	೧೧೬	೨೪	೧೧೧೬	೧೯೫೭	೨೧೧೭	೯೮

ಕೋಷ್ಟಕ ೩

ಸರಕಾರ ಸೂಚಿಸಿದ ಪ್ರಕರಣಗಳು

ನ್ಯಾಯಾಧಿಕಾರ	೩೧/೦೩/೨೦೦೯ಕ್ಕೆ ಬಾಕಿ ಇರುವ ಪ್ರಕರಣಗಳು	೦೧/೦೪/೨೦೦೯ ರಿಂದ ೩೧/೦೩/೨೦೧೦ ರವರೆಗೆ ಸ್ವೀಕರಿಸಿದ ಪ್ರಕರಣಗಳು	ಒಟ್ಟು	೧/೪/೨೦೦೯ ರಿಂದ ೩೧/೦೩/೨೦೧೦ ರವರೆಗೆ ವಿಲೇವಾರಿ ಮಾಡಿದ ಪ್ರಕರಣಗಳು	೧೨(೩) ಕಾಯ್ದೆಯ ಅಡಿಯಲ್ಲಿ ಕ್ರಮಗಳನ್ನು ಕೈಗೊಂಡ ಪ್ರಕರಣಗಳು	ಒಟ್ಟು ಪ್ರಕರಣಗಳ ಸಂಖ್ಯೆ ೩೧/೦೩/೨೦೧೦ಕ್ಕೆ ಬಾಕಿ ಇರುವ ಕಡತಗಳು
ಗೌ. ಲೋಕಾಯುಕ್ತ	೨೭	೧	೨೮	೪	೧	೨೩
ಗೌ. ಉಪ ಲೋಕಾಯುಕ್ತ	೧೬	೨	೧೮	೫	-	೧೩
ಒಟ್ಟು	೪೩	೩	೪೬	೯	೧	೩೬

ಕೋಷ್ಟಕ ೪

ಪ್ರಸಕ್ತ ವರ್ಷದಲ್ಲಿ ಲೋಕಾಯುಕ್ತ ಕಾಯ್ದೆ ೧೨(೧) , ೧೨(೨), ೧೨(೩) ಮತ್ತು ೧೨(೫) ರ ಕಾಯಿದೆಗಳ ಅಡಿಯಲ್ಲಿ ದಾಖಲಾದ ವರದಿಯ ಹೇಳಿಕೆಗಳು

ಕ್ರ.ಸಂ.	ವಿವರಗಳು	ಗೌರವಾನ್ವಿತ ಲೋಕಾಯುಕ್ತ	ಗೌರವಾನ್ವಿತ ಉಪ ಲೋಕಾಯುಕ್ತ	ಒಟ್ಟು
೧	ಲೋಕಾಯುಕ್ತಕಾಯ್ದೆ ೧೨(೧) ರಡಿಯಲ್ಲಿ ಇರುವ ವರದಿಗಳ ಸಂಖ್ಯೆ	೧೨	೧೨	೨೪
೨	ಲೋಕಾಯುಕ್ತಕಾಯ್ದೆ ೧೨(೩) ರಡಿಯಲ್ಲಿ ಇರುವ ವರದಿಗಳ ಸಂಖ್ಯೆ	೮	೧೦೯	೧೧೭
೩	ಲೋಕಾಯುಕ್ತಕಾಯ್ದೆ ೧೨(೫) ರಡಿಯಲ್ಲಿ ಇರುವ ವರದಿಗಳ ಸಂಖ್ಯೆ	೩	–	೩

ಕೋಷ್ಟಕ ೫

ಸಕ್ಷಮ ಪ್ರಾಧಿಕಾರಕ್ಕೆ ಕಲಂ ೧೨ (೧) ರಡಿಯಲ್ಲಿ ಕಳುಹಿಸಿದ ವರದಿಗಳ ಸಂಖ್ಯೆ ಮತ್ತು ಸಕ್ಷಮ ಪ್ರಾಧಿಕಾರವು ಈ ವರದಿಗಳ ಮೇಲೆ ತೆಗೆದುಕೊಂಡ ಕ್ರಮಗಳು ಪ್ರಸಕ್ತ ವರ್ಷ ಮತ್ತು ವರ್ಷದ ಕೊನೆಯಲ್ಲಿ (೩೧/೩/೨೦೧೦) ಬಾಕಿ ಇರುವ ವರದಿಗಳು

ನ್ಯಾಯಾಧಿಕಾರ	ಕಲಂ ೧೨(೧) ರಡಿಯಲ್ಲಿ ಸಕ್ಷಮ ಪ್ರಾಧಿಕಾರದಲ್ಲಿ ೩೧/೩/೨೦೦೯ರಂತೆ ಬಾಕಿ ಇರುವ ವರದಿಗಳು ರಿಂದ ೩೦/೩/೨೦೧೦	ಕಲಂ ೧೨(೧)ರ ಅಡಿಯಲಿ ಸಕ್ಷಮ ಪ್ರಾಧಿಕಾರಕ್ಕೆ ಕಳುಹಿಸಿದ ರಂತೆ ಬಾಕಿ ಇರುವ ವರದಿಗಳು ೧/೪/೨೦೦೯	ಒಟ್ಟು	ಕಲಂ ೧೨(೧) ಮತ್ತು ೧೨(೨) ರಅಡಿಯಲ್ಲಿ ಅಂಗೀಕೃತವಾದ ವರದಿಗಳು	ಕಲಂ ೧೨(೧) ರಅಡಿಯಲಿ ಸಕ್ಷಮ ಪ್ರಾಧಿಕಾರದಲ್ಲಿ ೩೧/೩/೨೦೧೦ರಂತೆ ಬಾಕಿ ಇರುವ ವರದಿಗಳು
ಗೌ. ಲೋಕಾಯುಕ್ತ	೧೩	೧೨	೨೫	೩	೨೨
ಗೌ.ಉಪ ಲೋಕಾಯುಕ್ತ	೧೧	೧೨	೨೩	೪	೧೯
ಒಟ್ಟು	೨೪	೨೪	೪೮	೭	೪೧

ಕೋಷ್ಟಕ ೬

ಸಕ್ಷಮ ಪ್ರಾಧಿಕಾರಕ್ಕೆ ಕಲಂ ೧೨ (೩) ರಡಿಯಲ್ಲಿ ಕಳುಹಿಸಿದ ವರದಿಗಳ ಸಂಖ್ಯೆ ಮತ್ತು ಸಕ್ಷಮ ಪ್ರಾಧಿಕಾರವು ಈ ವರದಿಗಳ ಮೇಲೆ ತೆಗೆದುಕೊಂಡ ಕ್ರಮಗಳು. ಪ್ರಸಕ್ತ ವರ್ಷ ಮತ್ತು ವರ್ಷದ ಕೊನೆಯಲ್ಲಿ (೩೧/೩/೨೦೧೦) ಬಾಕಿ ಇರುವ ವರದಿಗಳು

ನ್ಯಾಯಾಧಿಕಾರ	ಕಲಂ ೧೨(೩) ರಡಿಯಲ್ಲಿ ಸಕ್ಷಮ ಪ್ರಾಧಿಕಾರದಲ್ಲಿ ೩೧/೩/೨೦೦೯ರಂತೆ ಬಾಕಿ ಇರುವ ವರದಿಗಳು	ಕಲಂ ೧೨(೩) ರಡಿಯಲ್ಲಿ ಸಕ್ಷಮ ಪ್ರಾಧಿಕಾರಕ್ಕೆ ಕಳುಹಿಸಿದ ವರದಿಗಳು ೧/೪/೨೦೦೯ ರಿಂದ ೩೦/೩/೨೦೧೦	ಒಟ್ಟು	ಕಲಂ ೧೨(೩) ಮತ್ತು ೧೨(೪) ರಡಿಯಲ್ಲಿ ಅಂಗೀಕೃತವಾದ ವರದಿಗಳು	ಕಲಂ ೧೨(೩) ರಡಿಯಲ್ಲಿ ಸಕ್ಷಮ ಪ್ರಾಧಿಕಾರದಲ್ಲಿ ೩೧/೩/೨೦೧೦ರಂತೆ ಬಾಕಿ ಇರುವ ವರದಿಗಳು
ಗೌ.ಲೋಕಾಯುಕ್ತ	೧೩	೮	೨೧	೩	೧೮
ಗೌ. ಉಪಲೋಕಾಯುಕ್ತ	೮೩	೧೦೯	೧೯೨	೧೧೯	೭೩
ಒಟ್ಟು	೯೬	೧೧೭	೨೧೩	೧೨೨	೯೧

ಕೋಷ್ಟಕ ೭

ಘನತವೆತ್ತ ರಾಜ್ಯಪಾಲರಿಗೆ ಕಲಂ ೧೨ (೫) ರಡಿಯಲ್ಲಿ ಕಳುಹಿಸಿದ ವರದಿಗಳ ಸಂಖ್ಯೆ ಮತ್ತು ಈ ವರದಿಗಳ ಮೇಲೆ ತೆಗೆದುಕೊಂಡ ಕ್ರಮಗಳು. ವರ್ಷದಕೊನೆಯಲ್ಲಿ (೩೧/೩/೨೦೧೦) ಬಾಕಿ ಇರುವ ವರದಿಗಳು

ನ್ಯಾಯಾಧಿಕಾರ	ಕಲಂ ೧೨(೫) ರಡಿಯಲ್ಲಿ ರಾಜ್ಯಪಾಲರ ಹತ್ತಿರ ಬಾಕಿ ಇರುವ ವರದಿಗಳು ೩೧/೩/೨೦೦೯ರಂತೆ	ಕಲಂ ೧೨(೫) ರಡಿಯಲ್ಲಿ ರಾಜ್ಯಪಾಲರು ಕಳುಹಿಸಿದ ವರದಿಗಳು ೧/೪/೨೦೦೯ರಿಂದ ೩೦/೩/೨೦೧೦ ವರೆಗೆ	ಒಟ್ಟು	ಕಲಂ ೧೨(೫) ಮತ್ತು ೧೨(೪) ರಡಿಯಲ್ಲಿ ಕ್ರಮಗಳನ್ನು ಕೈಗೊಂಡ ವರದಿಗಳು	ಕಲಂ ೧೨(೫) ರಡಿಯಲ್ಲಿ ೩೧/೩/೨೦೧೦ಕ್ಕೆ ಬಾಕಿ ಇರುವ ವರದಿಗಳು
ಗೌ. ಲೋಕಾಯುಕ್ತ	೦೫	೦೩	೦೮	೦೩	೦೫
ಗೌ.ಉಪ ಲೋಕಾಯುಕ್ತ	೦೭	೦೦	೦೭	೦೦	೦೭
ಒಟ್ಟು	೧೨	೦೩	೧೫	೦೩	೧೨

ಕೋಷ್ಟಕ ೮

ತನಿಖೆಗಳು

ವರ್ಷದ ಆರಂಭದಲ್ಲಿ ಕಂಡುಬಂದ ಇಲಾಖಾ ತನಿಖಾ ವರದಿಗಳ ಹೇಳಿಕೆ, ಮತ್ತು ಪ್ರಸಕ್ತ ವರ್ಷದಲ್ಲಿ ಪಡೆದಿರುವ ಮತ್ತು ವಿಲೇವಾರಿ ಮಾಡಿರುವ ಕಡತಗಳು ಮತ್ತು ವರ್ಷದ ಕೊನೆಯಲ್ಲಿ ಬಾಕಿ ಇರುವ ಕಡತಗಳು

ಕ್ರಸಂ.	ವಿವರಗಳು	೪-ಎ ಕಾಯ್ದೆಯ ಅಡಿಯಲ್ಲಿ	೧೧(೨) ಕಾಯ್ದೆಯ ಅಡಿಯಲ್ಲಿ	ಇತರ ಕಾಯ್ದೆಗಳು	ಒಟ್ಟು
೧	೩೧/೦೩/೨೦೦೯ ಕ್ಕೆ ಬಾಕಿ ಇರುವ ಪ್ರಕರಣಗಳು	೧೯೨	೭	-	೧೯೪
೨	೧/೦೪/೨೦೦೯ ರಿಂದ ೩೧/೦೩/೨೦೧೦ ರವರೆಗೆ ಸ್ವೀಕರಿಸಿದ ಪ್ರಕರಣಗಳು	೮೩	೧	-	೮೪
	ಒಟ್ಟು	೨೭೫	೦೩	-	೨೭೮
೩	೧/೦೪/೨೦೦೯ ರಿಂದ ೩೧/೦೩/೨೦೧೦ ರವರೆಗೆ ವಿಲೇವಾರಿಯಾದ ಪ್ರಕರಣಗಳು	೨೩	೦೦	-	೨೩
೪	೩೧/೦೩/೨೦೧೦ ರಂತೆ ಬಾಕಿ ಇರುವ ಪ್ರಕರಣಗಳು	೨೫೨	೩	-	೨೫೫

ಕೋಷ್ಟಕ ೯

ತನಿಖಾ ಪ್ರಕರಣಗಳನ್ನು ವಿಲೇವಾರಿ ಮಾಡಿರುವ ವಿಧಾನ

ಪ್ರಕರಣದ ವಿಧಗಳು	ಸಾಬೀತಾದ ಆರೋಪಗಳು ಮತ್ತು ಸರಕಾರ ದಂಡ ವಿಧಿಸಿದ ಪ್ರಕರಣಗಳು	ಸಾಬೀತಾಗದ ಆರೋಪಗಳ ಸಂಖ್ಯೆ	ಇತರೆ	ಒಟ್ಟು
೧೪-ಎ ಕಾಯ್ದೆಯ ಅಡಿಯಲ್ಲಿ	೧೪	೯	೧	೨೪
೧೧(೨) ಕಾಯ್ದೆಯ ಅಡಿಯಲ್ಲಿ	-	-	-	-
ಇತರ ಕಾಯ್ದೆಗಳು	-	-	-	-
ಒಟ್ಟು	೧೪	೯	೧	೨೪

ಕೋಷ್ಟಕ ೧೦

ಭ್ರಷ್ಟಾಚಾರ ತಡೆ ಕಾಯ್ದೆಯಡಿಯ ಪ್ರಕರಣಗಳು

ಭ್ರಷ್ಟಾಚಾರ ತಡೆಕಾಯ್ದೆ ಅಡಿಯ ಪ್ರಕರಣಗಳ ಹೇಳಿಕೆಯ ಪಟ್ಟಿ.ವರ್ಷದ ಆರಂಭದಲ್ಲಿ ಇರುವ ಬಾಕಿ ಪ್ರಕರಣಗಳು, ಪ್ರಸಕ್ತ ವರ್ಷದಲ್ಲಿ ದಾಖಲಾದ ಪ್ರಕರಣಗಳು, ಪ್ರಸಕ್ತ ವರ್ಷದಲ್ಲಿ ವಿಲೇವಾರಿ ಮಾಡಿದ ಪ್ರಕರಣಗಳು ಮತ್ತು ವರ್ಷದ ಕೊನೆಯಲ್ಲಿ ಬಾಕಿ ಇರುವ ಪ್ರಕರಣಗಳು.

ಪ್ರಕರಣದ ಸ್ವರೂಪ	೩೧/೦೩/೨೦೦೯ ಕ್ಕೆ ಬಾಕಿ ಇರುವ ಪ್ರಕರಣಗಳು	೧/೦೪/೨೦೦೯ ರಿಂದ ೩೧/೦೩/೨೦೧೦ ರವರೆಗೆ ಸ್ವೀಕರಿಸಿದ ಪ್ರಕರಣಗಳು	ಒಟ್ಟು	೧/೦೪/೨೦೦೯ ರಿಂದ ೩೧/೦೩/೨೦೧೦ ರವರೆಗೆ ವಿಲೇವಾರಿಯಾದ	೩೧/೦೩/೨೦೧೦ ರಂತೆ ಬಾಕಿ ಇರುವ ಪ್ರಕರಣಗಳು
ದಾಳಿ ಮಾಡಲಾದ ಪ್ರಕರಣಗಳು	೧೭೫	೫೪	೨೨೯	೩೨	೧೯೭
ಟ್ರ್ಯಾಪ ಮಾಡಲಾದ ಪ್ರಕರಣಗಳು	೩೯೦	೨೯೦	೬೮೦	೨೯೧	೩೮೯
ಇತರೆ	೩೮	೧೧	೪೯	೦೭	೪೨
ಒಟ್ಟು	೬೦೩	೩೫೫	೯೫೮	೩೩೦	೬೨೮

ಕೋಷ್ಟಕ ೧೧

೧೯೮೮ ರ ಭ್ರಷ್ಟಾಚಾರ ತಡೆ ಕಾಯ್ದೆಯಡಿಯಲ್ಲಿ ದಾಖಲಾದ ಪ್ರಕರಣಗಳ ವಿಲೇವಾರಿ ಮಾಡಿರುವ ವಿಧಾನ

ಪ್ರಕರಣದ ಸ್ವರೂಪ	ಡಿ.ಇ ಮತ್ತು ಪ್ರಾಸಿಕ್ಯೂಷನ ಎರಡಕ್ಕೂ ಶಿಫಾರಸ್ಸಾದ ಪ್ರಕರಣಗಳ ಸಂಖ್ಯೆ	ಡಿ.ಇ ಗೆ ಮಾತ್ರ ಶಿಫಾರಸ್ಸಾದ ಪ್ರಕರಣಗಳ ಸಂಖ್ಯೆ	ಪ್ರಾಸಿಕ್ಯೂಷನಗೆ ಶಿಫಾರಸ್ಸಾದ ಪ್ರಕರಣಗಳ ಸಂಖ್ಯೆ	ಬಿ ವರದಿಯಾದ / ಮುಚ್ಚಿದ ಪ್ರಕರಣಗಳ ಸಂಖ್ಯೆ	ಪೋಲಿಸರಿಂದ ವಿಲೇವಾರಿಯಾದ ಪ್ರಕರಣಗಳ ಸಂಖ್ಯೆ
ದಾಳಿ ಮಾಡಲಾದ ಪ್ರಕರಣಗಳು	–	–	೩೩	೬	೩೨
ಟ್ರ್ಯಾಪ ಮಾಡಲಾದ ಪ್ರಕರಣಗಳು	–	–	೨೩೦	೨೪	೨೯೧
ಇತರೆ	–	–	೦೪	೦೩	೦೭
ಒಟ್ಟು	–	–	೨೬೭	೩೩	೩೩೦

ಕೋಷ್ಟಕ ೧೨

ನ್ಯಾಯಾಲಯ ಪ್ರಕರಣಗಳನ್ನು ವಿಲೇವಾರಿ ಮಾಡಿರುವ ವಿಧಾನ

ಪ್ರಕರಣದ ಸ್ವರೂಪ	ಖುಲಾಸೆಗೊಂಡ ಪ್ರಕರಣಗಳ ಸಂಖ್ಯೆ	ಶಿಕ್ಷೆಗೆ ಒಳಗಾದ ಪ್ರಕರಣಗಳ ಸಂಖ್ಯೆ	ಬಿಡುಗಡೆಯಾದ ಪ್ರಕರಣಗಳ ಸಂಖ್ಯೆ ಇತ್ಯಾದಿ	ಒಟ್ಟು
ದಾಳಿ ಮಾಡಲಾದ ಪ್ರಕರಣಗಳು	೬	೨	೪	೧೨
ಟ್ರ್ಯಾಪ ಮಾಡಲಾದ ಪ್ರಕರಣಗಳು	೧೩೦	೩೬	೭	೧೯೨
ಇತರೆ	೮	೧	–	೯
ಒಟ್ಟು	೧೩೬	೩೯	೩೦	೨೦೫

೪.೨. ೨೦೦೯–೧೦ರ ಪ್ರಕರಣಗಳ ವಿಶ್ಲೇಷಣೆ

ಪ್ರಮಾಣ ಪತ್ರಗಳೊಂದಿಗೆ ೩೧–೦೩–೨೦೦೯ಕ್ಕೆ ೧೮೨೯೯ ಪ್ರಕರಣಗಳು ಬಾಕಿ ಉಳಿದಿದ್ದವು. ಆ ನಂತರದ ೧–೪–೨೦೦೯ ರಿಂದ ೩೧–೦೩–೨೦೧೦ರ ವರೆಗಿನ ಅವಧಿಗೆ ಹೊಸದಾಗಿ ಸ್ವೀಕರಿಸಿದ ಪ್ರಕರಣಗಳು ೩೬೨೭ ಅಂದರೆ ೧–೪–೨೦೧೦ರ ವರೆಗೆ ವಿಲೇವಾರಿಗೆ ಕಾದ ಪ್ರಕರಣಗಳ ಒಟ್ಟು ಸಂಖ್ಯೆ ೨೧೯೨೬ ಆದಂತಾಯ್ತು. ಇವುಗಳಲ್ಲಿ ೧೧೧೬ ಪ್ರಕರಣಗಳನ್ನು ಕುಂದು ಕೊರತೆ ವಿಭಾಗದಿಂದ ಸಮಾಲೋಚಿಸಿ ಇತ್ಯರ್ಥ ಪಡಿಸಿದರೆ, ೯೮ ಪ್ರಕರಣಗಳನ್ನು ಫಿರ್ಯಾದುದಾರರು ತಮ್ಮ ಫಿರ್ಯಾದನ್ನು ಹಿಂದಕ್ಕೆ ಪಡೆದಿದ್ದಾರೆ, ಅಲ್ಲಿಗೆ ವಾಸ್ತವ ನೆಲೆಗಟ್ಟಿನಲ್ಲಿ ಹೇಳುವುದಾದರೆ ಈ ಅವಧಿಯಲ್ಲಿ ವಿಲೇವಾರಿಯಾಗಿದ್ದು ೫೪೨೮ ಪ್ರಕರಣಗಳು ಮಾತ್ರ. ಅಂದರೆ ಈ ವರ್ಷ ಕೇವಲ ಶೇಕಡಾ ೨೫ ರಷ್ಟು ಪ್ರಕರಣಗಳು ವಿಲೇವಾರಿಯಾದಂತಾಯ್ತು. ಪ್ರಕರಣಗಳ ವಿಲೇವಾರಿಗೆ ಬಹಳ ದೊಡ್ಡ ಅಡಚಣೆ ಎಂದರೆ ಪ್ರಕರಣಗಳ ವಿಚಾರಣಾ ದಿನವನ್ನು ಮುಂದೂಡುವುದು. ಲೋಕಾಯುಕ್ತ ಸಿಬ್ಬಂದಿಯ ಕೊರತೆ ಹಾಗೂ ಸಿಬ್ಬಂದಿಯಲ್ಲಿರುವ ಬದ್ಧತೆಯ ಕೊರತೆಯನ್ನು ಕೂಡ ಗಮನಿಸಬಹುದು.

ಇದೇ ಅವಧಿಯಲ್ಲಿ ಸರ್ಕಾರದ ಸಕ್ಷಮ ಪ್ರಾಧಿಕಾರಕ್ಕೆ ಕಲಂ ೧೨(೩)ರಂತೆ ಕ್ರಮ ತೆಗೆದುಕೊಳ್ಳಲು ಅನುಮತಿ ಕೋರಿ ೨೧೩ ಪ್ರಕರಣಗಳನ್ನು ವರದಿ ಮಾಡಲಾಯ್ತು. ಅವುಗಳಲ್ಲಿ ಕೇವಲ ೯೧ ಪ್ರಕರಣಗಳಿಗೆ ಮಾತ್ರ ಸರ್ಕಾರ ಅನುಮತಿ ನೀಡುವ ಮೂಲಕ ಲೋಕಾಯುಕ್ತ ತನಿಖೆಗೆ ತಣ್ಣೀರು ಎರಚಿತು. ಕಲಂ ೧೨(೧)ರಂತೆ ಕಳುಹಿಸಿದ ೪೮ ಪ್ರಕರಣಗಳಲ್ಲಿ ೭ ಪ್ರಕರಣಗಳಿಗೆ ಮಾತ್ರ ಅನುಮತಿ ನೀಡಲಾಯ್ತು. ನ್ಯಾಯಾಲಯದಿಂದ ತಪ್ಪಿತಸ್ಥರೆಂದು ಘೋಷಣೆಯಾದ ಸರ್ಕಾರಿ ನೌಕರನನ್ನು ಕೆಲಸದಿಂದ ವಜಾ ಮಾಡುವಂತೆ ಲೋಕಾಯುಕ್ತ ಸಂಸ್ಥೆಯು ರಾಜ್ಯಪಾಲರಿಗೆ ೧೫ ಪ್ರಕರಣಗಳ

ವರದಿ ಕಳುಹಿಸಿದರೆ, ಅಲ್ಲಿಂದ ವಜಾ ಮಾಡಿ ಆದೇಶ ಹೊರಡಿಸಿದ್ದು ೧೨ ಪ್ರಕರಣಗಳಿಗೆ ಮಾತ್ರ ಇನ್ನೂ ಮೂರು ಪ್ರಕರಣಗಳು ರಾಜಭವನದಲ್ಲಿಯೇ ತಡೆಹಿಡಿಯಲ್ಪಟ್ಟವು. ೨೦೦೯-೧೦ರಲ್ಲಿ ಭ್ರಷ್ಟಾಚಾರ ತಡೆ ಕಾಯ್ದೆಯಡಿಯಲ್ಲಿ ೩೫೫ ಪ್ರಕರಣಗಳು ದಾಖಲುಗೊಂಡವು. ಇವುಗಳಲ್ಲಿ ೫೪ ದಾಳಿ ಮಾಡಿದ ಪ್ರಕರಣಗಳು, ೨೯೦ ಟ್ರ್ಯಾಪ್ ಮಾಡಲಾದ ಪ್ರಕರಣಗಳು, ಇತರೆ ೧೧ ಪ್ರಕರಣಗಳು ಇದ್ದವು. ೨೦೦೮-೦೯ರ ಅಂತ್ಯಕ್ಕೆ ಇಂತಹ ೬೦೩ ಪ್ರಕರಣಗಳು ಬಾಕಿ ಉಳಿದಿದದ್ದನ್ನು ಕೂಡ ಲೆಕ್ಕ ಹಾಕಿದರೆ ೨೦೦೯-೧೦ಕ್ಕೆ ವಿಲೇವಾರಿಗೆ ಉಳಿದ ಒಟ್ಟು ಪ್ರಕರಣಗಳು ೯೫೮, ಇದರಲ್ಲಿ ೫೩ ಪ್ರಕರಣಗಳಲ್ಲಿ 'ಬಿ' ರಿಪೋರ್ಟ್ ಹಾಕಿ ಪ್ರಕರಣ ಮುಚ್ಚಿಹಾಕಿದ್ದು ಸೇರಿದಂತೆ ೩೩೦ ಪ್ರಕರಣಗಳು ವಿಲೇವಾರಿಯಾದ ನಂತರವೂ ೩೧-೩-೧೦ಕ್ಕೆ ಬಾಕಿ ಉಳಿದ ಪ್ರಕರಣಗಳ ಸಂಖ್ಯೆ ೬೨೮. ಅಂದರೆ ವರ್ಷವೊಂದರಲ್ಲಿ ಬಾಕಿ ಉಳಿದ ಪ್ರಕರಣದ ಅರ್ಧದಷ್ಟು ಮಾತ್ರ ವಿಲೇವಾರಿಯಾಗಿದ್ದು ಕಂಡು ಬರುತ್ತದೆ.

ನ್ಯಾಯಾಲಯದಲ್ಲಿರುವ ೨೦೫ ಪ್ರಕರಣಗಳ ಪೈಕಿ ಈ ವರ್ಷ ನ್ಯಾಯಾಲಯವು ಕೇವಲ ೩೯ ಪ್ರಕರಣಗಳಲ್ಲಿ ಮಾತ್ರ ಶಿಕ್ಷೆ ವಿಧಿಸಿ ಆದೇಶಿಸಿತು.

೦೧/೦೪/೨೦೧೦ ರಿಂದ ೩೧/೦೩/೨೦೧೧ ರವರೆಗೆ

ಕೋಷ್ಟಕ ೧೩

ವರ್ಷದ ಆರಂಭದಲ್ಲಿ ಪ್ರಮಾಣ ಪತ್ರದೊಂದಿಗೆ ದಾಖಲಿಸಿದ ಆರೋಪಗಳ ಹೇಳಿಕೆ ಮತ್ತು ಪ್ರಸಕ್ತ ವರ್ಷದಲ್ಲಿ ಪಡೆದಿರುವ ಮತ್ತು ವಿಲೇವಾರಿ ಮಾಡಿರುವ ಕಡತಗಳು ಮತ್ತು ವರ್ಷದ ಕೊನೆಯಲ್ಲಿ ಬಾಕಿ ಇರುವ ಕಡತಗಳು ಈ ರೀತಿ ಇವೆ.

ನ್ಯಾಯಾಧಿಕಾರ	೩೧/೦೩/೨೦೧೦ಕ್ಕೆ ಬಾಕಿ ಇರುವ ಪ್ರಕರಣಗಳು ಪ್ರಕರಣಗಳು	೦೧/೦೪/೨೦೧೦ ರಿಂದ ೩೧/೦೩/ ೨೦೧೧ ರವರೆಗೆ ಸ್ವೀಕರಿಸಿದ	ಒಟ್ಟು	೧/೪/೨೦೧೦ ರಿಂದ ೩೧/೦೩/೨೦೧೧ ರವರೆಗೆ ವಿಲೇವಾರಿ ಮಾಡಿದ ಪ್ರಕರಣಗಳು	೩೧/೦೩/೨೦೧೧ಕ್ಕೆ ಬಾಕಿ ಇರುವ ಕಡತಗಳು
ಗೌ.ಲೋಕಾಯುಕ್ತ	೦೩೩೫೧	೧೨೫೬	೦೪೬೦೭	೧೪೬೫	೩೧೪೨
ಗೌ. ಉಪಲೋಕಾಯುಕ್ತ	೧೩೧೪೭	೨೮೪೮	೧೫೯೯೫	೪೧೫೩	೧೧೮೪೨
ಒಟ್ಟು	೧೬೪೯೮	೪೧೦೪	೨೦೬೦೨	೫೬೧೮	೧೪೯೮೪

ಕೋಷ್ಟಕ ೧೪

ದೂರುಗಳನ್ನು ವಿಲೇವಾರಿ ಮಾಡಿರುವ ವಿಧಾನ

ನ್ಯಾಯಾಧಿಕಾರ	೧೨(೩) ಕಾಯ್ದೆಯಡಿ ವಿಲೇವಾರಿ ಮಾಡಿದ ಪ್ರಕರಣಗಳು	೧೨(೨) ಕಾಯ್ದೆಯಲ್ಲಿ ವಿಲೇವಾರಿ ಮಾಡಿದ ಪ್ರಕರಣಗಳು	ಕುಂದುಕೊರತೆ ವಿಭಾಗದ ಮೂಲಕ ಸಮಾಲೋಚಿಸಿ ವಿಲೇವಾರಿ ಮಾಡಿದ ಪ್ರಕರಣಗಳು	ಕಲಂ ೮ರ ಅಡಿಯಲ್ಲಿ ವಿಲೇವಾರಿ ಮಾಡಿದ ಪ್ರಕರಣಗಳು	ಕಲಂ ೯ರ ಅಡಿಯಲ್ಲಿ ವಿಲೇವಾರಿ ಮಾಡಿದ ಪ್ರಕರಣಗಳು	ಫಿರ್ಯಾದುದಾರರು ದೂರುಗಳನ್ನು ಹಿಂದಕ್ಕೆ ಪಡೆದ ಪ್ರಕರಣಗಳು
ಗೌ ಲೋಕಾಯುಕ್ತ	೧೫	೨೬	೩೦೮	೫೯೭	೪೯೭	೨೫
ಗೌ ಉಪಲೋಕಾಯುಕ್ತ	೧೫೫	೫	೮೨೬	೧೬೨೩	೧೪೫೮	೮೬
ಒಟ್ಟು	೧೭೦	೩೧	೧೧೩೪	೨೨೧೯	೧೯೫೫	೧೧೧

ಕೋಷ್ಟಕ ೧೫

ಸರಕಾರ ಸೂಚಿಸಿದ ಪ್ರಕರಣಗಳು

ನ್ಯಾಯಾಧಿಕಾರ	೩೧/೦೩/೨೦೧೦ಕ್ಕೆ ಬಾಕಿ ಇರುವ ಪ್ರಕರಣಗಳು	೦೧/೦೪/೨೦೧೦ ರಿಂದ ೩೧/೦೩/೨೦೧೧ ವರೆಗೆ ಸ್ವೀಕರಿಸಿದ ಪ್ರಕರಣಗಳು	ಒಟ್ಟು	೧/೪/೨೦೧೦ರಿಂದ ೩೧/೦೩/೨೦೧೧ ರವರೆಗೆ ವಿಲೇವಾರಿ ಮಾಡಿದ ಪ್ರಕರಣಗಳು	೧೨(೩) ಕಾಯ್ದೆ ಅಡಿಯಲ್ಲಿ ಕ್ರಮಗಳನ್ನು ಕೈಗೊಂಡ ಪ್ರಕರಣಗಳು	ಒಟ್ಟು ಪ್ರಕರಣಗಳ ಸಂಖ್ಯೆ ೩೧/೦೩/೨೦೧೧ಕ್ಕೆ ಬಾಕಿ ಇರುವ ಕಡತಗಳು
ಗೌ.ಲೋಕಾಯುಕ್ತ	೨೩	೭	೩೦	೧	೨	೨೭
ಗೌ.ಉಪ ಲೋಕಾಯುಕ	೧೩	೬	೧೯	೧	೦	೧೮
ಒಟ್ಟು	೩೬	೧೩	೪೯	೨	೨	೪೫

ಕೋಷ್ಟಕ ೧೬

ಪ್ರಸಕ್ತ ವರ್ಷದಲ್ಲಿ ಲೋಕಾಯುಕ್ತ ಕಾಯ್ದೆ ೧೨(೧) , ೧೨(೨), ೧೨(೩) ಮತ್ತು ೧೨(೪) ರ ಕಾಯಿದೆಗಳ ಅಡಿಯಲ್ಲಿ ದಾಖಲಾದ ವರದಿಯ ಹೇಳಿಕೆಗಳು

ಕ್ರಸಂ.	ವಿವರಗಳು	ಗೌರವಾನ್ವಿತ ಲೋಕಾಯುಕ್ತ	ಗೌರವಾನ್ವಿತ ಉಪ ಲೋಕಾಯುಕ್ತ	ಒಟ್ಟು
೧	ಲೋಕಾಯುಕ್ತ ಕಾಯ್ದೆ ೧೨(೧) ರಡಿಯಲ್ಲಿ ಇರುವ ವರದಿಗಳ ಸಂಖ್ಯೆ	೨೬	೫	೩೧
೨	ಲೋಕಾಯುಕ್ತ ಕಾಯ್ದೆ ೧೨(೩) ರಡಿಯಲ್ಲಿ ಇರುವ ವರದಿಗಳ ಸಂಖ್ಯೆ	೧೫	೧೫೫	೧೭೦
೩	ಲೋಕಾಯುಕ್ತ ಕಾಯ್ದೆ ೧೨(೪) ರಡಿಯಲ್ಲಿ ಇರುವ ವರದಿಗಳ ಸಂಖ್ಯೆ	–	–	–

ಕೋಷ್ಟಕ ೧೭

ಸಕ್ಷಮ ಪ್ರಾಧಿಕಾರಕ್ಕೆ ಕಲಂ ೧೨ (೧) ರಡಿಯಲ್ಲಿ ಕಳುಹಿಸಿದ ವರದಿಗಳ ಸಂಖ್ಯೆ ಮತ್ತು ಸಕ್ಷಮ ಪ್ರಾಧಿಕಾರವು ಈ ವರದಿಗಳ ಮೇಲೆ ತೆಗೆದುಕೊಂಡ ಕ್ರಮಗಳು ಪ್ರಸಕ್ತ ವರ್ಷ ಮತ್ತು ವರ್ಷದ ಕೊನೆಯಲ್ಲಿ (೩೧/೩/೨೦೧೦) ಬಾಕಿ ಇರುವ ವರದಿಗಳು

ನ್ಯಾಯಾಧಿಕಾರ	ಕಲಂ ೧೨(೧)ರ ಅಡಿಯಲ್ಲಿ ಸಕ್ಷಮ ಪ್ರಾಧಿಕಾರದಲ್ಲಿ ೩೧/೩/೨೦೧೦ ರಂತೆ ಬಾಕಿ ಇರುವ ವರದಿಗಳು	ಕಲಂ ೧೨(೧)ರ ಅಡಿಯಲಿ ಸಕ್ಷಮ ಪ್ರಾಧಿಕಾರಕ್ಕೆ ಕಳುಹಿಸಿದ ಬಾಕಿ ಇರುವ ವರದಿಗಳು ೧/೪/೨೦೧೦ ರಿಂದ ೩೦/೩/೨೦೧೧	ಒಟ್ಟು	ಕಲಂ ೧೨(೧) ಮತ್ತು ೧೨(೨)ರ ಅಡಿಯಲ್ಲಿ ಅಂಗೀಕೃತವಾದ ವರದಿಗಳು	ಕಲಂ ೧೨(೧)ರ ಅಡಿಯಲಿ ಸಕ್ಷಮ ಪ್ರಾಧಿಕಾರದಲ್ಲಿ ೩೧/೩/೨೦೧೧ರಂತೆ ಬಾಕಿ ಇರುವ ವರದಿಗಳ
ಗೌ. ಲೋಕಾಯುಕ್ತ	೨೨	೨೬	೪೮	೧೨	೩೬
ಗೌ.ಉಪ ಲೋಕಾಯುಕ್ತ	೧೯	೦೫	೨೪	೬	೧೭
ಒಟ್ಟು	೪೧	೩೧	೭೨	೧೮	೫೩

ಕೋಷ್ಟಕ ೧೮

ಸಕ್ಷಮ ಪ್ರಾಧಿಕಾರಕ್ಕೆ ಕಲಂ ೧೨ (೩) ರಡಿಯಲ್ಲಿ ಕಳುಹಿಸಿದ ವರದಿಗಳ ಸಂಖ್ಯೆ ಮತ್ತು ಸಕ್ಷಮ ಪ್ರಾಧಿಕಾರವು ಈ ವರದಿಗಳ ಮೇಲೆ ತೆಗೆದುಕೊಂಡ ಕ್ರಮಗಳು. ಪ್ರಸಕ್ತ ವರ್ಷ ಮತ್ತು ವರ್ಷದ ಕೊನೆಯಲ್ಲಿ (೩೧/೩/೨೦೧೧) ಬಾಕಿ ಇರುವ ವರದಿಗಳು

ನ್ಯಾಯಾಧಿಕಾರ	ಕಲಂ ೧೨(೩) ರಡಿಯಲ್ಲಿ ಸಕ್ಷಮ ಪ್ರಾಧಿಕಾರದಲ್ಲಿ ೩೧/೩/೨೦೧೦ ರಂತೆ ಬಾಕಿ ಇರುವ ವರದಿಗಳು	ಕಲಂ ೧೨(೩) ರಡಿಯಲ್ಲಿ ಸಕ್ಷಮ ಪ್ರಾಧಿಕಾರಕ್ಕೆ ಕಳುಹಿಸಿದ ವರದಿಗಳು ೧/೪/೨೦೧೦ ರಿಂದ ೩೦/೩/೨೦೧೧	ಒಟ್ಟು	ಕಲಂ ೧೨(೩) ಮತ್ತು೧೨(೪)ರ ಅಡಿಯಲ್ಲಿ ಅಂಗೀಕೃತವಾದ ವರದಿಗಳು	ಕಲಂ ೧೨(೩)ರ ಅಡಿಯಲ್ಲಿ ಸಕ್ಷಮ ಪ್ರಾಧಿಕಾರದಲ್ಲಿ ೩೧/೩/೨೦೧೧ರಂತೆ ಬಾಕಿ ಇರುವ ವರದಿಗಳು
ಗೌ.ಲೋಕಾಯುಕ್ತ	೧೮	೧೫	೩೩	೧೧	೨೨
ಗೌ.ಉಪ ಲೋಕಾಯುಕ್ತ	೭೩	೧೫೫	೨೨೮	೮೫	೧೪೩
ಒಟ್ಟು	೯೧	೧೭೦	೨೬೧	೧೦೧	೧೬೫

ಕೋಷ್ಟಕ ೧೯

ಘನತವೆತ್ತ ರಾಜ್ಯಪಾಲರಿಗೆ ಕಲಂ ೧೨ (೫) ರಡಿಯಲ್ಲಿ ಕಳುಹಿಸಿದ ವರದಿಗಳ ಸಂಖ್ಯೆ ಮತ್ತು ಈ ವರದಿಗಳ ಮೇಲೆ ತೆಗೆದುಕೊಂಡ ಕ್ರಮಗಳು. ವರ್ಷದ ಕೊನೆಯಲ್ಲಿ (೩೧/೩/೨೦೧೦) ಬಾಕಿ ಇರುವ ವರದಿಗಳು

ನ್ಯಾಯಾಧಿಕಾರ	ಕಲಂ ೧೨(೫)ರ ಅಡಿಯಲ್ಲಿ ರಾಜ್ಯಪಾಲರ ಹತ್ತಿರ ಬಾಕಿ ಇರುವ ವರದಿಗಳು ೩೧/೩/೨೦೧೦ ರಂತೆ	ಕಲಂ ೧೨(೫)ರ ಡಿಯಲ್ಲಿ ರಾಜ್ಯಪಾಲರು ಕಳುಹಿಸಿದ ವರದಿಗಳು ೧/೪/೨೦೧೦ ರಿಂದ ೩೦/೩/೨೦೧೧	ಒಟ್ಟು	ಕಲಂ ೧೨(೫) ಮತ್ತು ೧೨(೪) ರಡಿಯಲ್ಲಿ ಕ್ರಮಗಳನ್ನು ಕೈಗೊಂಡ ವರದಿಗಳು	ಕಲಂ ೧೨(೫)ರ ಅಡಿಯಲ್ಲಿ ೩೧/೩/೨೦೧೧ ರಂತೆ ಬಾಕಿ ಇರುವ ವರದಿಗಳು
ಗೌ. ಲೋಕಾಯುಕ್ತ	೦೫	೦೦	೦೦	೦೦	೦೫
ಗೌರವಾನ್ವಿತ ಉಪ ಲೋಕಾಯುಕ್ತ	೦೭	೦೦	೦೦	೦೦	೦೭
ಒಟ್ಟು	೧೨	೦೦	೦೦	೦೦	೧೨

ಕೋಷ್ಟಕ ೨೦

ತನಿಖೆಗಳು

ವರ್ಷದ ಆರಂಭದಲ್ಲಿ ಕಂಡು ಬಂದ ಇಲಾಖಾ ತನಿಖಾ ವರದಿಗಳ ಹೇಳಿಕೆ, ಮತ್ತು ಪ್ರಸಕ್ತ ವರ್ಷದಲ್ಲಿ ಪಡೆದಿರುವ ಮತ್ತು ವಿಲೇವಾರಿ ಮಾಡಿರುವ ಕಡತಗಳು ಮತ್ತು ವರ್ಷದ ಕೊನೆಯಲ್ಲಿ ಬಾಕಿ ಇರುವ ಕಡತಗಳು

ಕ್ರಸಂ.	ವಿವರಗಳು	೪-ಎ ಕಾಯ್ದೆಯ ಅಡಿಯಲ್ಲಿ	೧೧(೨) ಕಾಯ್ದೆಯ ಅಡಿಯಲ್ಲಿ	ಇತರ	ಕಾಯ್ದೆಗಳು	ಒಟ್ಟು
೧	೩೧/೦೩/೨೦೧೦ ಕ್ಕೆ ಬಾಕಿ ಇರುವ ಪ್ರಕರಣಗಳು	೨೫೨	೦೩	-	-	೨೫೫
೨	೧/೦೪/೨೦೧೦ ರಿಂದ ೩೧/೦೩/೨೦೧೧ ರವರೆಗೆ ಸ್ವೀಕರಿಸಿದ ಪ್ರಕರಣಗಳು	೧೦೮	-	-	-	೧೦೮
	ಒಟ್ಟು	೩೬೦	೦೩	-	-	೩೬೩
೩	೧/೦೪/೨೦೧೦ ರಿಂದ ೩೧/೦೩/೨೦೧೧ ರವರೆಗೆ ವಿಲೇವಾರಿಯಾದ ಪ್ರಕರಣಗಳು	೬೧	೦೦	-	-	೬೧
೪	೩೧/೦೩/೨೦೧೧ ರಂತೆ ಬಾಕಿ ಇರುವ ಪ್ರಕರಣಗಳು	೨೯೯	೩	-	-	೩೦೨

ಕೋಷ್ಟಕ ೨೧

ಭ್ರಷ್ಟಾಚಾರ ತಡೆ ಕಾಯ್ದೆಯಡಿಯ ಪ್ರಕರಣಗಳು

ಭ್ರಷ್ಟಾಚಾರ ತಡೆ ಕಾಯ್ದೆ ಅಡಿಯ ಪ್ರಕರಣಗಳ ಹೇಳಿಕೆಯ ಪಟ್ಟಿ. ವರ್ಷದ ಆರಂಭದಲ್ಲಿ ಇರುವ ಬಾಕಿ ಪ್ರಕರಣಗಳು, ಪ್ರಸಕ್ತ ವರ್ಷದಲ್ಲಿ ದಾಖಲಾದ ಪ್ರಕರಣಗಳು, ಪ್ರಸಕ್ತ ವರ್ಷದಲ್ಲಿ ವಿಲೇವಾರಿ ಮಾಡಿದ ಪ್ರಕರಣಗಳು ಮತ್ತು ವರ್ಷದ ಕೊನೆಯಲ್ಲಿ ಬಾಕಿ ಇರುವ ಪ್ರಕರಣಗಳು.

ಪ್ರಕರಣದ ಸ್ವರೂಪ	೩೧.೩.೨೦೧೦ಕ್ಕೆ ಬಾಕಿ ಇರುವ ಪ್ರಕರಣಗಳು	೧.೪.೨೦೧೦ ರಿಂದ ೩೧.೩.೨೦೧೧ ರವರೆಗೆ ಸ್ವೀಕರಿಸಿದ ಪ್ರಕರಣಗಳು	ಒಟ್ಟು	೧.೪.೨೦೧೦ ರಿಂದ ೩೧.೩.೨೦೧೧ ರವರೆಗೆ ವಿಲೇವಾರಿಯಾದ ಪ್ರಕರಣಗಳು	೩೧.೩.೨೦೧೧ರಂತೆ ಬಾಕಿ ಇರುವ ಪ್ರಕರಣಗಳು
ದಾಳಿ ಮಾಡಲಾದ ಪ್ರಕರಣಗಳು	೧೯೦	೩೧	೨೨೧	೨೭	೧೯೪
ಟ್ರ್ಯಾಪ ಮಾಡಲಾದ ಪ್ರಕರಣಗಳು	೩೯೬	೪೧೫	೮೧೧	೨೯೨	೫೧೯
ಇತರೆ	೪೨	೦೮	೫೦	೧೧	೩೯
ಒಟ್ಟು	೬೨೮	೪೫೪	೧೦೮೨	೩೩೦	೭೫೨

ಕೋಷ್ಟಕ ೨೨

೧೯೮೮ ರ ಭ್ರಷ್ಟಾಚಾರ ತಡೆ ಕಾಯ್ದೆಯಡಿಯಲ್ಲಿ ದಾಖಲಾದ ಪ್ರಕರಣಗಳ ವಿಲೇವಾರಿ ಮಾಡಿರುವ ವಿಧಾನ

ಪ್ರಕರಣದ ಸ್ವರೂಪ	ಡಿ.ಇ ಮತ್ತು ಪ್ರಾಸಿಕ್ಯೂಷನ ಎರಡಕ್ಕೂ ಶಿಫಾರಸ್ಸಾದ ಪ್ರಕರಣಗಳ ಸಂಖ್ಯೆ	ಡಿ.ಇ ಗೆ ಮಾತ್ರ ಶಿಫಾರಸ್ಸಾದ ಪ್ರಕರಣಗಳ ಸಂಖ್ಯೆ	ಪ್ರಾಸಿಕ್ಯೂಷನಗೆ ಶಿಫಾರಸ್ಸಾದ ಪ್ರಕರಣಗಳ ಸಂಖ್ಯೆ	ಬಿ ವರದಿಯಾದ / ಮುಚ್ಚಿದ ಪ್ರಕರಣಗಳ ಸಂಖ್ಯೆ	ಪೋಲಿಸರಿಂದ ವಿಲೇವಾರಿ ಯಾದ ಪ್ರಕರಣಗಳ ಸಂಖ್ಯೆ
ದಾಳಿ ಮಾಡಲಾದ ಪ್ರಕರಣಗಳು	೦೬	-	೨೫	೦೨	೨೭
ಟ್ರ್ಯಾಪ ಮಾಡಲಾದ ಪ್ರಕರಣಗಳು	೩೨	೦೬	೨೫೪	೩೮	೨೯೨
ಇತರೆ	-	-	೦೬	೦೫	೧೧
ಒಟ್ಟು	೩೮	-	೨೮೫	೪೫	೩೩೦

ಕೋಷ್ಟಕ ೨೩

ನ್ಯಾಯಾಲಯ ಪ್ರಕರಣಗಳನ್ನು ವಿಲೇವಾರಿ ಮಾಡಿರುವ ವಿಧಾನ

ಪ್ರಕರಣದ ಸ್ವರೂಪ	ಖುಲಾಸೆಗೊಂಡ ಪ್ರಕರಣಗಳ ಸಂಖ್ಯೆ	ಶಿಕ್ಷೆಗೆ ಒಳಗಾದ ಪ್ರಕರಣಗಳ ಸಂಖ್ಯೆ	ಬಿಡುಗಡೆಯಾದ ಪ್ರಕರಣಗಳ ಸಂಖ್ಯೆ, ಇತ್ಯಾದಿ	ಒಟ್ಟು
ದಾಳಿ ಮಾಡಲಾದ ಪ್ರಕರಣಗಳು	೦೫	೯	೦೩	೦೧೭
ಟ್ರ್ಯಾಪ ಮಾಡಲಾದ ಪ್ರಕರಣಗಳು	೧೦೦	೬೧	೯	೧೭೦
ಇತರೆ	೦೧	೦೩	-	೦೪
ಒಟ್ಟು	೧೦೬	೧೩	೧೨	೧೯೧

೪.೩. ೨೦೧೦-೧೧ರ ಪ್ರಕರಣಗಳ ವಿಶ್ಲೇಷಣೆ

ಪ್ರಮಾಣ ಪತ್ರದೊಂದಿಗೆ ಲೋಕಾಯುಕ್ತ ಕಾಯ್ದೆಯಡಿಯಲ್ಲಿ ೩೧-೩-೨೦೧೦ಕ್ಕೆ ವಿಲೇವಾರಿಗೆ ಬಾಕಿ ಉಳಿದ ಪ್ರಕರಣಗಳ ಸಂಖ್ಯೆ ೧೬೪೯೮. ಆದರೆ ೧-೪-೨೦೧೦ ರಿಂದ ೩೧-೩-೨೦೧೧ರ ವರೆಗಿನ ಅವಧಿಗೆ ಹೊಸದಾಗಿ ಸ್ವೀಕರಿಸಿದ ಪ್ರಕರಣಗಳು ೪೧೦೪. ಅಂದರೆ ಕಳೆದ ವರ್ಷಕ್ಕಿಂತ ಈ ವರ್ಷ ೫೧೭ ಪ್ರಕರಣಗಳು ಹೆಚ್ಚಿಗೆ ದಾಖಲಾದವು. ೩೧-೩-೨೦೧೧ರ ಅಂತ್ಯಕ್ಕೆ ಒಟ್ಟು ೨೦೬೦೨ ಪ್ರಕರಣಗಳ ಪೈಕಿ ೫೬೧೮ ಪ್ರಕರಣಗಳನ್ನು ಮಾತ್ರ ವಿಲೇವಾರಿ ಮಾಡಿದರೂ ಸಹ ವಿಲೇವಾರಿಯಾಗದೇ ಬಾಕಿ ಉಳಿದ ಪ್ರಕರಣಗಳ ಸಂಖ್ಯೆ ೧೪೯೮೪.

ಇವುಗಳಲ್ಲಿ ಕುಂದು ಕೊರತೆ ವಿಭಾಗದ ಮೂಲಕ ಸಮಾಲೋಚಿಸಿ ೧೧೩೪ ಪ್ರಕರಣಗಳನ್ನು ಇತ್ಯರ್ಥಪಡಿಸಿದರೆ, ೧೧೧ ಫಿರ್ಯಾದುದಾರರು ತಮ್ಮ ದೂರನ್ನು ಹಿಂದಕ್ಕೆ ಪಡೆದರು. ಕಲಂ ೧೨(೧)ರ ಪ್ರಕಾರ ತನಿಖೆ ಹಾಗೂ ವಿಚಾರಣೆಗೆ ೭೨ ಪ್ರಕರಣಗಳನ್ನು ಸರ್ಕಾರಕ್ಕೆ ಅನುಮತಿ ಕೋರಿ ವರದಿ ಕಳುಹಿಸಿತು. ಸರ್ಕಾರದಿಂದ ಕೇವಲ ೧೮ ಪ್ರಕರಣಗಳಲ್ಲಿ ಮಾತ್ರ ಅನುಮತಿ ನೀಡಲಾಯ್ತು. ಇನ್ನುಳಿದ ೫೩ ಪ್ರಕರಣಗಳು ಸರ್ಕಾರದ ಹಂತದಲ್ಲಿಯೇ ಬಾಕಿ ಉಳಿದವು.

ಕಲಂ ೧೨ (೩)ರ ಅಡಿಯಲ್ಲಿ ಸರ್ಕಾರಕ್ಕೆ ತನಿಖೆ ಹಾಗೂ ವಿಚಾರಣೆಗೆ ಕೋರಿ ಕಳುಹಿಸಿದ ಪ್ರಕರಣಗಳ ಸಂಖ್ಯೆ ೨೬೧, ಇದರಲ್ಲಿ ೧೦೧ ಪ್ರಕರಣಗಳಿಗೆ ಮಾತ್ರ ಕ್ರಮ ಕೈಗೊಳ್ಳಲು ಅನುಮತಿಸಲಾಯ್ತು. ಉಳಿದವು ಏನೊಂದು ಕಾರಣ ನೀಡದೇ ಸರ್ಕಾರದ ಹಂತದಲ್ಲಿ ತಡೆ ಹಿಡಿಯಲಾಯ್ತು. ಶಿಕ್ಷೆ ಜಾರಿಗಾಗಿ ರಾಜ್ಯಪಾಲರಿಗೆ ಈ ವರ್ಷ ೧೨ ಪ್ರಕರಣಗಳನ್ನು ಕಳುಹಿಸಿದರೆ ಯಾವೊಂದು ಪ್ರಕರಣಕ್ಕೂ ರಾಜಭವನ ಶಿಕ್ಷೆ ಜಾರಿಗೆ ಅನುಮತಿಸಲಿಲ್ಲ. ಇದು ನಿಜಕ್ಕೂ ಆಶ್ಚರ್ಯದ ಸಂಗತಿ.

೨೦೧೧-೧೧ನೆಯ ಸಾಲಿನಲ್ಲಿ ಭ್ರಷ್ಟಾಚಾರ ತಡೆ ಕಾಯ್ದೆಯಡಿ ೪೫೪ ಹೊಸದಾಗಿ ಪ್ರಕರಣಗಳನ್ನು ದಾಖಲಿಸಿಕೊಳ್ಳಲಾಯ್ತು. ಇವುಗಳಲ್ಲಿ ೩೧ ದಾಳಿಯ ಪ್ರಕರಣಗಳಾಗಿದ್ದರೆ, ೪೧೫ ಟ್ರ್ಯಾಪ್ ಮಾಡಿದ ಪ್ರಕರಣಗಳು ಹಾಗೂ ೮ ಇತರೆ ಪ್ರಕರಣಗಳು ದಾಖಲಾದವು. ೩೧.೩.೨೦೧೦ಕ್ಕೆ ಬಾಕಿ ಉಳಿದ ೬೨೮ ಪ್ರಕರಣಗಳನ್ನು ಸೇರಿಸಿದರೆ ಒಟ್ಟು ೧೦೮೨ ಪ್ರಕರಣಗಳು ಇತ್ಯರ್ಥಕ್ಕೆ ಉಳಿದಂತಾಯ್ತು. ಇವುಗಳಲ್ಲಿ ೩೩೦ ಪ್ರಕರಣಗಳನ್ನು ಮಾತ್ರ ವಿಲೇವಾರಿ ಮಾಡಿದರೆ ೭೫೨ ಪ್ರಕರಣಗಳು ಈ ವರ್ಷ ವಿಲೇವಾರಿಯಾಗದೇ ಉಳಿದವು. ಇವುಗಳಲ್ಲಿ ೪೫ ಪ್ರಕರಣಗಳನ್ನು 'ಬಿ' ರಿಪೋರ್ಟ್ ಸಲ್ಲಿಸಿ ಮುಚ್ಚಲಾಗಿತ್ತು. ೧೯೧ ಪ್ರಕರಣಗಳು ನ್ಯಾಯಾಲಯದಲ್ಲಿದ್ದವು. ಅವುಗಳಲ್ಲಿ ನ್ಯಾಯಾಲಯದಿಂದ ಶಿಕ್ಷೆಗೊಳಗಾದ ಪ್ರಕರಣಗಳ ಸಂಖ್ಯೆ ಕೇವಲ ೧೩.

ಕೋಷ್ಟಕ ೨೪

೦೧.೦೪.೨೦೧೧ ರಿಂದ ೩೧.೦೩.೨೦೧೨ರ ವರೆಗೆ

ನ್ಯಾಯಾಧಿಕಾರ	೩೧/೦೩/೨೦೧೧ಕ್ಕೆ ಬಾಕಿ ಇರುವ ಪ್ರಕರಣಗಳು	೦೧/೦೪/೨೦೧೧ ರಿಂದ ೩೧/೦೩/೨೦೧೨ ರವರೆಗೆ ಸ್ವೀಕರಿಸಿದ ಪ್ರಕರಣಗಳು	ಒಟ್ಟು	೧/೪/೨೦೧೧ರಿಂದ ೩೧/೦೩/೨೦೧೨ರವರೆಗೆ ವಿಲೇವಾರಿ ಮಾಡಿದ ಪ್ರಕರಣಗಳು	೩೧/೦೩/೨೦೧೨ಕ್ಕೆ ಬಾಕಿ ಇರುವ ಕಡತಗಳು
ಗೌ.ಲೋಕಾಯುಕ್ತ	೩೧೪೫	೧೩೧೮	೪೪೬೦	೪೭೭	೩೯೮೩
ಗೌ. ಉಪಲೋಕಾಯುಕ್ತ	೧೧೮೪೨	೩೫೦೧	೧೫೩೪೩	೫೦೭೮	೧೦೨೬೫
ಒಟ್ಟು	೧೪೯೮೪	೪೮೧೯	೧೯೮೦೩	೫೫೫೫	೧೪೨೪೮

ಕೋಷ್ಟಕ ೨೫

ದೂರುಗಳನ್ನು ವಿಲೇವಾರಿ ಮಾಡಿರುವ ವಿಧಾನ

ನ್ಯಾಯಾಧಿಕಾರ	೧೨(೩)ಕಾಯ್ದೆ ಅಡಿಯಡಿ ವಿಲೇವಾರಿ ಮಾಡಿದ ಪ್ರಕರಣಗಳು	೧೨(೧)ಕಾಯ್ದೆ ಅಡಿಯಡಿ ವಿಲೇವಾರಿ ಮಾಡಿದ ಪ್ರಕರಣಗಳು	ಕುಂದುಕೊರತೆ ವಿಭಾಗದ ಮೂಲಕ ಸಮಾಲೋಚಿಸಿ ವಿಲೇವಾರಿ ಮಾಡಿದ ಪ್ರಕರಣಗಳು	ಕಲಂ ೮ರ ಅಡಿಯಲ್ಲಿ ವಿಲೇವಾರಿ ಮಾಡಿದ ಪ್ರಕರಣಗಳು	ಕಲಂ ೯ರ ಅಡಿಯಲ್ಲಿ ವಿಲೇವಾರಿ ಮಾಡಿದ ಪ್ರಕರಣಗಳು	ಫಿರ್ಯಾದುದಾರರು ದೂರುಗಳನ್ನು ಹಿಂದಕ್ಕೆ ಪಡೆದ ಪ್ರಕರಣಗಳು
ಗೌ ಲೋಕಾಯುಕ್ತ	೧೦	೪	೭೧	೧೨೮	೨೫೪	೯
ಗೌ. ಉಪ ಲೋಕಾಯುಕ್ತ	೬೭೬	೪	೪೬೬	೨೪೯೧	೧೩೬೦	೫೭
ಒಟ್ಟು	೬೮೬	೮	೫೩೭	೨೬೧೯	೧೬೪೪	೬೬

ಕೋಷ್ಟಕ ೨೬

ಸರಕಾರ ಸೂಚಿಸಿದ ಪ್ರಕರಣಗಳು

ನ್ಯಾಯಾಧಿಕಾರ	೩೧/೦೩/೨೦೧೧ಕ್ಕೆ ಬಾಕಿ ಇರುವ ಪ್ರಕರಣಗಳು	೦೧/೦೪/೨೦೧೧ ರಿಂದ ೩೧/೦೩/೨೦೧೨ ರವರೆಗೆ ಸ್ವೀಕರಿಸಿದ ಪ್ರಕರಣಗಳು	ಒಟ್ಟು	೧/೪/೨೦೧೧ರಿಂದ ೩೧/೦೩/೨೦೧೨ ರವರೆಗೆ ವಿಲೇವಾರಿ ಮಾಡಿದ ಪ್ರಕರಣಗಳು	೧೨(೩)ಕಾಯ್ದೆ ಅಡಿಯಲ್ಲಿ ಕ್ರಮಗಳನ್ನು ಕೈಗೊಂಡ ಪ್ರಕರಣಗಳು	ಒಟ್ಟು ಪ್ರಕರಣಗಳ ಸಂಖ್ಯೆ ೩೧/೦೩/೨೦೧೨ ಕ್ಕೆ ಬಾಕಿ ಇರುವ ಕಡತಗಳು
ಗೌರವಾನ್ವಿತ ಲೋಕಾಯುಕ್ತ	೨೭	೧೩	೪೦	೧	–	೩೯
ಗೌರವಾನ್ವಿತ ಉಪ ಲೋಕಾಯುಕ್ತ	೧೮	೪	೨೨	೪	–	೧೮
ಒಟ್ಟು	೪೫	೧೭	೬೨	೫	–	೫೭

ಕೋಷ್ಟಕ ೨೭

ಪ್ರಸಕ್ತ ವರ್ಷದಲ್ಲಿ ಲೋಕಾಯುಕ್ತ ಕಾಯ್ದೆ ೧೨(೧) , ೧೨(೨), ೧೨(೩) ಮತ್ತು ೧೨(೫) ರ ಕಾಯಿದೆಗಳ ಅಡಿಯಲ್ಲಿ ದಾಖಲಾದ ವರದಿಯ ಹೇಳಿಕೆಗಳು

ಕ್ರಸಂ.	ವಿವರಗಳು	ಗೌ. ಲೋಕಾಯುಕ್ತ	ಗೌ. ಉಪಲೋಕಾಯುಕ್ತ	ಒಟ್ಟು
೧	ಲೋಕಾಯುಕ್ತ ಕಾಯ್ದೆ ೧೨(೧)ರಡಿಯಲ್ಲಿ ಇರುವ ವರದಿಗಳ ಸಂಖ್ಯೆ	೪	೪	೮
೨	ಲೋಕಾಯುಕ್ತ ಕಾಯ್ದೆ ೧೨(೩) ರಡಿಯಲ್ಲಿ ಇರುವ ವರದಿಗಳ ಸಂಖ್ಯೆ	೧೦	೬೭೬	೬೮೬
೩	ಲೋಕಾಯುಕ್ತ ಕಾಯ್ದೆ ೧೨(೫) ರಡಿಯಲ್ಲಿ ಇರುವ ವರದಿಗಳ ಸಂಖ್ಯೆ	–	–	–

ಕೋಷ್ಟಕ ೨೮

ಸಕ್ಷಮ ಪ್ರಾಧಿಕಾರಕ್ಕೆ ಕಲಂ ೧೨ (೧) ರಡಿಯಲ್ಲಿ ಕಳುಹಿಸಿದ ವರದಿಗಳ ಸಂಖ್ಯೆ ಮತ್ತು ಸಕ್ಷಮ ಪ್ರಾಧಿಕಾರವು ಈ ವರದಿಗಳ ಮೇಲೆ ತೆಗೆದುಕೊಂಡ ಕ್ರಮಗಳು ಪ್ರಸಕ್ತ ವರ್ಷ ಮತ್ತು ವರ್ಷದ ಕೊನೆಯಲ್ಲಿ (೩೧.೩.೨೦೧೨) ಬಾಕಿ ಇರುವ ವರದಿಗಳು

ನ್ಯಾಯಾಧಿಕಾರ	ಕಲಂ ೧೨(೧) ರಡಿಯಲ್ಲಿ ಸಕ್ಷಮ ಪ್ರಾಧಿಕಾರದಲ್ಲಿ ೩೧/೩/೨೦೧೧ ರಂತೆ ಬಾಕಿ ಇರುವ ವರದಿಗಳು	ಕಲಂ ೧೨(೧) ರಅಡಿಯಲಿ ಸಕ್ಷಮ ಪ್ರಾಧಿಕಾರಕ್ಕೆ ಕಳುಹಿಸಿದ ದಂತೆ ಬಾಕಿ ಇರುವ ವರದಿಗಳು ೧/೪/೨೦೧೧ ರಿಂದ ೩೦/೩/೨೦೧೨	ಒಟ್ಟು	ಕಲಂ ೧೨(೧) ಮತ್ತು ೧೨(೨) ರಅಡಿಯಲ್ಲಿ ಅಂಗೀಕೃತವಾದ ವರದಿಗಳು	ಕಲಂ ೧೨(೧) ರಅಡಿಯಲಿ ಸಕ್ಷಮ ಪ್ರಾಧಿಕಾರದಲ್ಲಿ ೩೧/೩/೨೦೧೨ ರಂತೆ ಬಾಕಿ ಇರುವ ವರದಿಗಳು
ಗೌ. ಲೋಕಾಯುಕ್ತ	೩೬	೪	೪೦	೫	೩೫
ಗೌ.ಉಪ ಲೋಕಾಯುಕ್ತ	೧೮	೪	೨೨	೭	೧೫
ಒಟ್ಟು	೫೪	೮	೬೨	೧೨	೫೦

ಕೋಷ್ಟಕ ೨೯

ಸಕ್ಷಮ ಪ್ರಾಧಿಕಾರಕ್ಕೆ ಕಲಂ ೧೨ (೩) ರಡಿಯಲ್ಲಿ ಕಳುಹಿಸಿದ ವರದಿಗಳ ಸಂಖ್ಯೆ ಮತ್ತು ಸಕ್ಷಮ ಪ್ರಾಧಿಕಾರವು ಈ ವರದಿಗಳ ಮೇಲೆ ತೆಗೆದುಕೊಂಡ ಕ್ರಮಗಳು.ಪ್ರಸಕ್ತ ವರ್ಷ ಮತ್ತು ವರ್ಷದ ಕೊನೆಯಲ್ಲಿ (೩೧/೩/೨೦೧೦) ಬಾಕಿ ಇರುವ ವರದಿಗಳು

ನ್ಯಾಯಾಧಿಕಾರ	ಕಲಂ ೧೨(೩) ರಡಿಯಲ್ಲಿ ಸಕ್ಷಮ ಪ್ರಾಧಿಕಾರದಲ್ಲಿ ೩೧/೩/೨೦೧೧ ರಂತೆ ಬಾಕಿ ಇರುವ ವರದಿಗಳು	ಕಲಂ ೧೨(೩) ರಡಿಯಲ್ಲಿ ಸಕ್ಷಮ ಪ್ರಾಧಿಕಾರಕ್ಕೆ ಕಳುಹಿಸಿದ ವರದಿಗಳು ೧/೪/೨೦೧೧ರಿಂದ ೩೦/೩/೨೦೧೨	ಒಟ್ಟು	ಕಲಂ ೧೨(೩) ಮತ್ತು ೧೨(೪)ರಡಿಯಲ್ಲಿ ಅಂಗೀಕೃತವಾದ ವರದಿಗಳು	ಕಲಂ ೧೨(೩)ರ ಅಡಿಯಲ್ಲಿ ಸಕ್ಷಮ ಪ್ರಾಧಿಕಾರದಲ್ಲಿ ೩೧/೩/೨೦೧೨ ರಂತೆ ಬಾಕಿ ಇರುವ ವರದಿಗಳು
ಗೌ.ಲೋಕಾಯುಕ್ತ	೨೨	೧೦	೩೨	೬	೨೬
ಗೌ. ಉಪಲೋಕಾಯುಕ್ತ	೧೪೩	೬೭೬	೮೧೯	೬೦೯	೨೧೦
ಒಟ್ಟು	೧೬೫	೬೮೬	೮೫೧	೬೧೫	೨೩೬

ಕೋಷ್ಟಕ ೩೦

ಘನತವೆತ್ತ ರಾಜ್ಯಪಾಲರು ಕರ್ನಾಟಕ ಕಲಂ ೧೨ (೫) ರಡಿಯಲ್ಲಿ ಕಳುಹಿಸಿದ ವರದಿಗಳ ಸಂಖ್ಯೆ ಮತ್ತು ಈ ವರದಿಗಳ ಮೇಲೆ ತೆಗೆದುಕೊಂಡ ಕ್ರಮಗಳು. ವರ್ಷದ ಕೊನೆಯಲ್ಲಿ (೩೧/೩/೨೦೧೨) ಬಾಕಿ ಇರುವ ವರದಿಗಳು

ನ್ಯಾಯಾಧಿಕಾರ	ಕಲಂ ೧೨(೫)ರ ಅಡಿಯಲ್ಲಿ . ರಾಜ್ಯಪಾಲರ ಹತ್ತಿರ ಬಾಕಿ ಇರುವ ವರದಿಗಳು ೩೧/೩/೨೦೧೧ರಂತೆ	ಕಲಂ ೧೨(೫)ರ ಅಡಿಯಲ್ಲಿ . ರಾಜ್ಯಪಾಲರು ಕಳುಹಿಸಿದ ವರದಿಗಳು ೧/೪/೨೦೧೧ ರಿಂದ ೩೦/೩/೨೦೧೨	ಒಟ್ಟು	ಕಲಂ ೧೨(೫) ಮತ್ತು ೧೨(೪)ರ ಅಡಿಯಲ್ಲಿ ಕ್ರಮಗಳನ್ನು ಕೈಗೊಂಡ ವರದಿಗಳು	ಕಲಂ ೧೨(೫)ರ ಅರಡಿಯಲ್ಲಿ ೩೧/೩/೨೦೧೨ ರಂತೆ ಬಾಕಿ ಇರುವ ವರದಿಗಳು
ಗೌ. ಲೋಕಾಯುಕ್ತ	೦೫	೦೦	೦೫	೦೦	೦೫
ಗೌ.ಉಪ ಲೋಕಾಯುಕ್ತ	೦೭	೦೦	೦೭	೦೧	೦೬
ಒಟ್ಟು	೧೨	೦೦	೧೨	೦೧	೧೧

ಕೋಷ್ಟಕ ೩೧

ತನಿಖೆಗಳು

ವರ್ಷದ ಆರಂಭದಲ್ಲಿ ಕಂಡು ಬಂದ ಇಲಾಖಾ ತನಿಖಾ ವರದಿಗಳ ಹೇಳಿಕೆ, ಮತ್ತು ಪ್ರಸಕ್ತ ವರ್ಷದಲ್ಲಿ ಪಡೆದಿರುವ ಮತ್ತು ವಿಲೇವಾರಿ ಮಾಡಿರುವ ಕಡತಗಳು ಮತ್ತು ವರ್ಷದ ಕೊನೆಯಲ್ಲಿ ಬಾಕಿ ಇರುವ ಕಡತಗಳು

ಕ್ರಸಂ.	ವಿವರಗಳು	೪-ಎ ಕಾಯ್ದೆಯ ಅಡಿಯಲ್ಲಿ	೧೧(೨) ಕಾಯ್ದೆಯ ಅಡಿಯಲ್ಲಿ	ಇತರ ಕಾಯ್ದೆಗಳು	ಒಟ್ಟು
೧	೩೧/೦೩/೨೦೧೧ ಕ್ಕೆ ಬಾಕಿ ಇರುವ ಪ್ರಕರಣಗಳು	೨೯೯	೦೩	–	೩೦೨
೨	೧/೦೪/೨೦೧೧ ರಿಂದ ೩೧/೦೩/೨೦೧೨ ರವರೆಗೆ ಸ್ವೀಕರಿಸಿದ ಪ್ರಕರಣಗಳು	೫೯೧	–	–	೫೯೧
	ಒಟ್ಟು	೮೯೦	೦೩	–	೮೯೩
೩	೧/೦೪/೨೦೧೧ ರಿಂದ ೩೧/೦೩/೨೦೧೨ ರವರೆಗೆ ವಿಲೇವಾರಿಯಾದ ಪ್ರಕರಣಗಳು	೩೮	೦೧	–	೩೯
೪	೩೧/೦೩/೨೦೧೨ ರಂತೆ ಬಾಕಿ ಇರುವ ಪ್ರಕರಣಗಳು	೮೫೨	೨	–	೮೫೪

ಕೋಷ್ಟಕ ೩೨

ತನಿಖಾ ಪ್ರಕರಣಗಳನ್ನು ವಿಲೇವಾರಿ ಮಾಡಿರುವ ವಿಧಾನ

ಪ್ರಕರಣದ ವಿಧಗಳು ಮತ್ತು ಸರಕಾರ ದಂಡ ವಿಧಿಸಿದ ಪ್ರಕರಣಗಳು	ಸಾಬೀತಾದ ಆರೋಪಗಳು ಆರೋಪಗಳ ಸಂಖ್ಯೆ	ಸಾಬೀತಾಗದ	ಇತರೆ	ಒಟ್ಟು
೧೪-ಎ ಕಾಯ್ದೆಯ ಅಡಿಯಲ್ಲಿ	೨	೧	೧೦	೩೮
೧೧(೨) ಕಾಯ್ದೆಯ ಅಡಿಯಲ್ಲಿ	–	೧	–	೧
ಇತರ ಕಾಯ್ದೆಗಳು	–	–	–	–
ಒಟ್ಟು	೨	೨	೧೦	೩೯

ಕೋಷ್ಟಕ ೩೩

ಭ್ರಷ್ಟಾಚಾರ ತಡೆ ಕಾಯ್ದೆಯಡಿಯ ಪ್ರಕರಣಗಳು

ಭ್ರಷ್ಟಾಚಾರ ತಡೆ ಕಾಯ್ದೆ ಅಡಿಯ ಪ್ರಕರಣಗಳ ಹೇಳಿಕೆಯ ಪಟ್ಟಿ.ವರ್ಷದ ಆರಂಭದಲ್ಲಿ ಇರುವ ಬಾಕಿ ಪ್ರಕರಣಗಳು, ಪ್ರಸಕ್ತ ವರ್ಷದಲ್ಲಿ ದಾಖಲಾದ ಪ್ರಕರಣಗಳು, ಪ್ರಸಕ್ತ ವರ್ಷದಲ್ಲಿ ವಿಲೇವಾರಿ ಮಾಡಿದ ಪ್ರಕರಣಗಳು ಮತ್ತು ವರ್ಷದ ಕೊನೆಯಲ್ಲಿ ಬಾಕಿ ಇರುವ ಪ್ರಕರಣಗಳು.

ಪ್ರಕರಣದ ಸ್ವರೂಪ	೩೧/೦೩/೨೦೧೧ಕ್ಕೆ ಬಾಕಿ ಇರುವ ಪ್ರಕರಣಗಳು	೧/೦೪/೨೦೧೧ರಿಂದ ೩೧/೦೩/೨೦೧೨ ರವರೆಗೆ ಸ್ವೀಕರಿಸಿದ ಪ್ರಕರಣಗಳು	ಒಟ್ಟು	೧/೦೪/೨೦೧೧ರಿಂದ ೩೧/೦೩/೨೦೧೨ ರವರೆಗೆ ವಿಲೇವಾರಿಯಾದ ಪ್ರಕರಣಗಳು	೩೧/೦೩/೨೦೧೨ ರಂತೆ ಬಾಕಿ ಇರುವ ಪ್ರಕರಣಗಳು
ದಾಳಿ ಮಾಡಲಾದ ಪ್ರಕರಣಗಳು	೧೮೯	೨೭	೨೧೬	೫೮	೧೫೮
ಟ್ರ್ಯಾಪ ಮಾಡಲಾದ ಪ್ರಕರಣಗಳು	೫೫೪	೩೭೩	೯೨೭	೪೨೮	೪೯೯
ಇತರೆ	೪೨	೪೫	೮೭	೧೬	೭೧
ಒಟ್ಟು	೭೮೫	೪೪೫	೧೨೩೦	೫೦೨	೭೨೮

ಕೋಷ್ಟಕ ೩೪

೧೯೮೮ ರ ಭ್ರಷ್ಟಾಚಾರ ತಡೆ ಕಾಯ್ದೆಯಡಿಯಲ್ಲಿ ದಾಖಲಾದ ಪ್ರಕರಣಗಳ ವಿಲೇವಾರಿ ಮಾಡಿರುವ ವಿಧಾನ

ಪ್ರಕರಣದ ಸ್ವರೂಪ	ಡಿ.ಇ. ಮತ್ತು ಪ್ರಾಸಿಕ್ಯೂಷನ್ ಎರಡಕ್ಕೂ ಶಿಫಾರಸ್ಸಾದ ಪ್ರಕರಣಗಳು	ಡಿ.ಇ.ಗೆ ಮಾತ್ರ ಶಿಫಾರಸ್ಸಾದ ಪ್ರಕರಣಗಳು	ಪ್ರಾಸಿಕ್ಯೂಷನ್‌ಗೆ ಶಿಫಾರಸ್ಸಾದ ಪ್ರಕರಣಗಳು	ಬಿ ವರದಿಯಾದ / ಮುಚ್ಚಿದ ಪ್ರಕರಣಗಳು	ಪೋಲಿಸರಿಂದ ವಿಲೇವಾರಿಯಾದ ಪ್ರಕರಣಗಳು
ದಾಳಿ ಮಾಡಲಾದ ಪ್ರಕರಣಗಳು	–	–	೫೧	೦೭	೫೮
ಟ್ರ್ಯಾಪ ಮಾಡಲಾದ ಪ್ರಕರಣಗಳು	–	–	೩೯೯	೨೯	೪೨೮
ಇತರೆ	–	–	೧೩	೦೩	೧೬
ಒಟ್ಟು	–	–	೪೬೩	೩೯	೫೦೨

ಕೋಷ್ಟಕ ೩೫

ನ್ಯಾಯಾಲಯ ಪ್ರಕರಣಗಳನ್ನು ವಿಲೇವಾರಿ ಮಾಡಿರುವ ವಿಧಾನ

ಪ್ರಕರಣದ ಸ್ವರೂಪ	ಖುಲಾಸೆಗೊಂಡ ಪ್ರಕರಣಗಳ ಸಂಖ್ಯೆ	ಶಿಕ್ಷೆಗೆ ಒಳಗಾದ ಪ್ರಕರಣಗಳ ಸಂಖ್ಯೆ	ಬಿಡುಗಡೆಯಾದ ಪ್ರಕರಣಗಳ ಸಂಖ್ಯೆ, ಇತ್ಯಾದಿ	ಒಟ್ಟು
ದಾಳಿ ಮಾಡಲಾದ ಪ್ರಕರಣಗಳು	೧೦	೦೪	೦೬	೨೦
ಟ್ರ್ಯಾಪ ಮಾಡಲಾದ ಪ್ರಕರಣಗಳು	೩೯	೬	೭	೭೧
ಇತರೆ	೦೧	೦೦	–	೧
ಒಟ್ಟು	೧೫೦	೮೦	೩೨	೭೨

೪.೪. ೨೦೧೧-೧೨ರ ಪ್ರಕರಣಗಳ ವಿಶ್ಲೇಷಣೆ

ಲೋಕಾಯುಕ್ತ ದಾಖಲೆಗಳ ಪ್ರಕಾರ ಲೋಕಾಯುಕ್ತ ಪ್ರಮಾಣ ಪತ್ರದೊಂದಿಗೆ ೧.೪.೨೦೧೧ ರಿಂದ ೩೧.೩.೨೦೧೨ರವರೆಗೆ ೪೮೧೯ ಪ್ರಕರಣಗಳು ದಾಖಲಾಗಿರುತ್ತವೆ. ೩೧.೩.೨೦೧೧ ಕ್ಕೆ ಬಾಕಿ ಉಳಿದ ಪ್ರಕರಣಗಳು ೧೪೯೮೪. ಇವೆರಡು ಪ್ರಕರಣಗಳನ್ನು ಒಟ್ಟು ಸೇರಿಸಿದರೆ ೧೯೮೦೩ ಪ್ರಕರಣಗಳು ಇತ್ಯರ್ಥಕ್ಕಾಗಿ ಕಾದು ಕುಳಿತಿದ್ದವು. ಇವುಗಳಲ್ಲಿ ಈ ವರ್ಷ (೨೦೧೧-೧೨)ಕುಂದು ಕೊರತೆ ವಿಭಾಗದ ಮೂಲಕ ೫೩೭ ಪ್ರಕರಣಗಳು ಇತ್ಯರ್ಥಪಡಿಸಲಾಗಿದ್ದು ಹಾಗೂ ಫಿರ್ಯಾದುದಾರರು ತಮ್ಮ ದೂರನ್ನು ಹಿಂಪಡೆದ ಪ್ರಕರಣಗಳ ಸಂಖ್ಯೆ ೬೬ ಸೇರಿದಂತೆ ವಿಲೇವಾರಿಯಾಗಿದ್ದು ೫೫೫೫. ಅಲ್ಲಿಗೆ ವಿಲೇವಾರಿಯಾಗದೇ ಉಳಿದ ಪ್ರಕರಣಗಳ ಸಂಖ್ಯೆ ೧೪೨೪೮ ಆಗಿರುತ್ತವೆ.

ಈ ವರ್ಷ ಕಲಂ ೧೨(೧)ರಡಿಯಲ್ಲಿ ತನಿಖೆ ಹಾಗೂ ವಿಚಾರಣೆಗೆ ಅನುಮತಿ ಕೋರಿ ಸರ್ಕಾರಕ್ಕೆ ಕಳುಹಿಸಿದ ಪ್ರಕರಣಗಳ ಸಂಖ್ಯೆ ೬೨, ಅವುಗಳಲ್ಲಿ ಸರ್ಕಾರ ಅನುಮತಿ ಕೊಟ್ಟ ಪ್ರಕರಣಗಳ ಸಂಖ್ಯೆ ೧೨ ಮಾತ್ರ, ಅಂದರೆ ಇನ್ನು ೫೦ ಪ್ರಕರಣಗಳಿಗೆ ಸರ್ಕಾರ ಅನುಮತಿ ನೀಡಲಿಲ್ಲ. ಅದೇ ರೀತಿ ಕಲಂ ೧೨(೩)ರಂತೆ ಸರ್ಕಾರಕ್ಕೆ ಕಳುಹಿಸಿದ ಪ್ರಕರಣ ೮೫೧ ಇವುಗಳಲ್ಲಿ ಸರ್ಕಾರ ಅನುಮತಿಸಿದ್ದು ೬೧೫ ಪ್ರಕರಣಗಳಿಗೆ ಮಾತ್ರ, ಇನ್ನೂ ೨೩೬ ಪ್ರಕರಣಗಳನ್ನು ಸರ್ಕಾರವೇ ಬಾಕಿ ಉಳಿಸಿಕೊಂಡಿತು.

ಇದೇ ಅವಧಿಯಲ್ಲಿ ತಪ್ಪಿತಸ್ಥರಿಗೆ ಶಿಕ್ಷೆ ಜಾರಿ ಮಾಡುವಂತೆ ಅನುಮತಿ ಕೋರಿ ರಾಜ್ಯಪಾಲರಿಗೆ ೧೨ ಪ್ರಕರಣಗಳನ್ನು ಕಳುಹಿಸಿದರೆ ಅವರು ಶಿಕ್ಷೆ ಜಾರಿ ಮಾಡುವಂತೆ ಆದೇಶ ಹೊರಡಿಸಿದ್ದು ಒಂದು ಪ್ರಕರಣಕ್ಕೆ ಮಾತ್ರ, ಇನ್ನು ಹನ್ನೊಂದು ಪ್ರಕರಣಗಳು ರಾಜಭವನದ ಕಡತಗಳಲ್ಲಿಯೇ

ಹಾಗೇ ಉಳಿದು ಹೋದವು. ಭ್ರಷ್ಟಾಚಾರ ತಡೆ ಕಾಯ್ದೆಯಡಿಯಲ್ಲಿ ೧.೪.೨೦೧೧ ರಿಂದ ೩೧.೩.೨೦೧೨ರವರೆಗೆ ೨೭ ದಾಳಿ ಮಾಡಿದ ಹಾಗೂ ೩೭೩ ಟ್ರ್ಯಾಪ್ ಪ್ರಕರಣ ಮಾಡಿದ ಪ್ರಕರಣಗಳು ಸೇರಿದಂತೆ ಒಟ್ಟು ೪೪೫ ಪ್ರಕರಣಗಳು ದಾಖಲಾಗಿದ್ದವು. ೩೧.೩.೨೦೧೨ಕ್ಕೆ ಬಾಕಿ ಉಳಿದ ೭೮೫ ಪ್ರಕರಣಗಳನ್ನು ಸೇರಿಸಿದರೆ ಆ ವರ್ಷ ೧೨೩೦ ಪ್ರಕರಣಗಳು ವಿಲೇವಾರಿಗೆ ಕಾದು ಕುಳಿತಿದ್ದವು. ಇವುಗಳಲ್ಲಿ ೫೦೨ ಪ್ರಕರಣಗಳು ವಿಲೇವಾರಿಯಾಗಿ, ೭೨೮ ಪ್ರಕರಣಗಳು ಬಾಕಿ ಉಳಿದವು, ಇವುಗಳಲ್ಲಿ ೩೯ ಪ್ರಕರಣಗಳಲ್ಲಿ ಫಿರ್ಯಾದುದಾರರು ದೂರನ್ನು ವಾಪಸು ಪಡೆದಿರುತ್ತಾರೆ. ಈ ವರ್ಷ ನ್ಯಾಯಾಲಯದಲ್ಲಿದ್ದ ೨೬೨ ಪ್ರಕರಣಗಳ ಪೈಕಿ ೮೦ ಪ್ರಕರಣಗಳಲ್ಲಿ ಮಾತ್ರ ನ್ಯಾಯಾಲಯ ಶಿಕ್ಷೆ ಘೋಷಿಸಿತು.

೪.೫. ಭ್ರಷ್ಟಾಚಾರ ನಿಯಂತ್ರಣಕ್ಕೆ ಲೋಕಾಯುಕ್ತ ಕೈಗೊಂಡ ಕ್ರಮಗಳು

ಭ್ರಷ್ಟಾಚಾರ ನಿಯಂತ್ರಣಕ್ಕೆ ಲೋಕಾಯುಕ್ತವು ಸರ್ಕಾರಿ ಕಚೇರಿಗಳಿಗೆ ದಿಢೀರ್ ದಾಳಿ ನಡೆಸಿ ಹಾಜರಾತಿ ಪರೀಶೀಲನೆ, ಬಾಕಿ ಉಳಿಸಿಕೊಂಡ ಕಡತಗಳ ಬಗ್ಗೆ ತಪಾಸಣೆ ಮಾಡಬಹುದಾಗಿದೆ. ಅಕ್ರಮವಾಗಿ ವಿಲೇವಾರಿಯಾದ ಕಡತಗಳ ಬಗ್ಗೆ ತನಿಖೆ, ಲಂಚ ಪಡೆಯುತ್ತಿರುವ ನೌಕರರ ಬಂಧನಕ್ಕೂ ಕೂಡ ಕಾನೂನಿನಲ್ಲಿ ಅವಕಾಶವಿದೆ , ಅಕ್ರಮ ಗಳಿಕೆ ಮಾಡಿದ ನೌಕರರ ಮನೆಯ ಮೇಲೆ ದಾಳಿ ಮಾಡಿ ಆಸ್ತಿ-ಪಾಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳುವುದು ಹಾಗೂ ಇನ್ನಿತರ ಕೆಲಸದಲ್ಲಿ ನಿರತವಾಗಿ ಭ್ರಷ್ಟಾಚಾರ ನಿಯಂತ್ರಿಸಲು ಪ್ರಯತ್ನಿಸುತ್ತಿದೆ.

ಅದೇ ರೀತಿ ಉತ್ತಮ ಆಡಳಿತಕ್ಕೆ ಸಹಕಾರಿಯಾಗುವಂತೆ ಲೋಕಾಯುಕ್ತವು ಸರ್ಕಾರಕ್ಕೆ ಕಾಲಕಾಲಕ್ಕೆ ಸೂಚನೆ ನೀಡುತ್ತಿದೆ. ಉದಾಹರಣೆಗೆ ಸರ್ಕಾರಿ ಕಾಲೇಜುಗಳ ಸಿಬ್ಬಂದಿಯ ಹಾಜರಾತಿಗೆ ಬಯೋಮೆಟ್ರಿಕ್ ಅಳವಡಿಕೆ ಹಾಗೂ ಹಾಜರಾತಿ ಸೇರಿದಂತೆ ಆಯಾ ದಿನದ ಕಾಲೇಜಿನ ಚಟುವಟಿಕೆಗಳನ್ನು ಪರೀಶೀಲಿಸಲು ವೆಬ್‌ಸೈಟ್ ಆರಂಭಕ್ಕೆ ಲೋಕಾಯುಕ್ತ ಸೂಚಿಸಿದ ಸಲಹೆಯನ್ನು ಉನ್ನತ ಶಿಕ್ಷಣ ಇಲಾಖೆಯಿಂದ ಪಾಲನೆ ಆಗಿದೆ. ಸಮಾಜ ಕಲ್ಯಾಣ ಇಲಾಖೆ ವ್ಯಾಪ್ತಿಯ ಸರ್ಕಾರಿ ವಿದ್ಯಾರ್ಥಿ ನಿಲಯಗಳ ಸುಧಾರಣೆಗೆ ಲೋಕಾಯುಕ್ತ ನೀಡಿದ್ದ ನಿರ್ದೇಶನದ ಪ್ರಕಾರ ಒಂದು ಸಾವಿರ ಹಾಸ್ಟೆಲ್ ಕಟ್ಟಡಗಳ ನಿರ್ಮಾಣ ಹಾಗೂ ೩೫೪ ಸ್ನಾನ ಗೃಹ ಹಾಗೂ ಶೌಚಾಲಯಗಳ ನಿರ್ಮಾಣ ಕಾಮಗಾರಿ ಆರಂಭವಾಗಿದೆ. ಬೆಂಗಳೂರಿನ ಕೆ.ಆರ್.ಮಾರುಕಟ್ಟೆ ಸ್ವಚ್ಛತೆ, ಸರ್ಕಾರಿ ಆಸ್ಪತ್ರೆಗಳ ಸುಧಾರಣೆ, ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ಗುಣಮಟ್ಟ ಸುಧಾರಿಸಲು ಕೊಟ್ಟ ಸೂಚನೆಯ ಪಾಲನೆ, ಆರ್.ಟಿ.ಇ ಕಾಯ್ದೆಯನ್ನು ಖಾಸಗಿ ಶಾಲೆಗಳಲ್ಲಿ ಕಡ್ಡಾಯ ಜಾರಿಗೆ

ತರುವಲ್ಲಿ ನಿಗಾವಹಿಸುವಿಕೆ, ರಾಜ್ಯದ ೨.೨೦ ಲಕ್ಷ ಕುಟುಂಬಗಳಿಗೆ ಆಶ್ರಯ ಹಕ್ಕು ಪತ್ರ ವಿತರಣೆಗೆ ಕ್ರಮ ವಹಿಸಿದ್ದು ಲೋಕಾಯುಕ್ತದ ಹೆಗ್ಗಳಿಕೆ ಎಂದೇ ಹೇಳಬಹುದು.

ಲೋಕಾಯುಕ್ತ ಸಂಸ್ಥೆಯ ಕಚೇರಿ ಪ್ರತಿ ಜಿಲ್ಲಾ ಕೇಂದ್ರದಲ್ಲಿವೆ. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹಂತದ ಅಧಿಕಾರಿ ಈ ಕಚೇರಿಯ ಮುಖ್ಯಸ್ಥರಾಗಿರುತ್ತಾರೆ. ಇವರು ಟ್ರ್ಯಾಪ್ ಮಾಡುವ ಹಾಗೂ ದಾಳಿ ಮಾಡುವ ಅಧಿಕಾರ ಹೊಂದಿರುತ್ತಾರೆ, ಪ್ರತಿ ತಾಲೂಕು ಮಟ್ಟದ ಸರ್ಕಾರಿ ಕಚೇರಿಗಳ ಆವರಣದಲ್ಲಿ ಲಂಚ ನೀಡದಂತೆ ಸಾರ್ವಜನಿಕರನ್ನುದ್ದೇಶಿಸಿ ಪೋಸ್ಟರ್ ಹಾಗೂ ಬ್ಯಾನರ್‌ಗಳನ್ನು ಹಾಕಿ ಜನ ಜಾಗೃತಿ ಮಾಡಲಾಗುತ್ತದೆ. ಲೋಕಾಯುಕ್ತದಲ್ಲಿ ದೂರುಗಳಿಗೆ ಸಂಬಂಧಪಟ್ಟ ಇಲಾಖೆಗಳು, ಕಾರ್ಯದರ್ಶಿಗಳು, ನಿರ್ದೇಶಕರು, ಹಿರಿಯ ಅಧಿಕಾರಿಗಳು ನಿರ್ಧಾರಿತ ಸಮಯದಲ್ಲಿ ಕ್ರಮ ಕೈಗೊಳ್ಳುವ ಭರವಸೆ ನೀಡುವ ಪದ್ಧತಿಯನ್ನು ಮೊದಲ ಬಾರಿಗೆ ಲೋಕಾಯುಕ್ತದಲ್ಲಿ ಜಾರಿಗೆ ತರಲಾಗಿದೆ. ಉಪ ಆಯುಕ್ತರು, ಪೊಲೀಸ್ ಅಧೀಕ್ಷಕರು, ಕಾರ್ಯನಿರ್ವಾಹಕ ಅಧಿಕಾರಿಗಳ ವಿರುದ್ಧ ಅವರ ಎದುರೇ ಲೋಕಾಯುಕ್ತರ ದೂರುಗಳನ್ನು ಹೇಳಿಕೊಳ್ಳುವ ಅವಕಾಶವನ್ನು ನೀಡಲಾಗಿದೆ.

೪.೬. ಉತ್ತಮ ಆಡಳಿತಕ್ಕೆ ಸರ್ಕಾರ ಕೈಗೊಂಡಿರುವ ಕಾರ್ಯಕ್ರಮಗಳು

ಪ್ರಗತಿ ಪರೀಶೀಲನಾ ಸಭೆ

ಇಲಾಖೆಗೆ ಸಂಬಂಧಿಸಿದ ವಿಚಾರಗಳ ಬಗೆ ಪ್ರಗತಿ ಸಾಧಿಸಲು ಕಾಲಕಾಲಕ್ಕೆ ಸಭೆಗಳನ್ನು ಕರೆಯಲಾಗುತ್ತದೆ. ಹಿಂದಿನ ಸಭೆಯ ಪ್ರಗತಿಯನ್ನು ಪರೀಶಿಲಿಸುವುದಲ್ಲದೇ ನಿಗದಿತ ಗುರಿ ಸಾಧಿಸದಿರುವ ಬಗ್ಗೆ ಉಂಟಾಗಿರುವ ತೊಡಕುಗಳ ಬಗ್ಗೆ ಚರ್ಚಿಸಿ ಅಗತ್ಯವಾದ ನೆರವನ್ನು ಮತ್ತು ಸಲಹೆಯನ್ನು ನೀಡಲಾಗುತ್ತದೆ. ಹಾಗೂ ಮುಂದಿನ ಸಭೆಯ ದಿನಾಂಕದೊಳಗೆ ಪ್ರಗತಿಯ ಮಾಹಿತಿಯನ್ನು ಸಲ್ಲಿಸಲು ಸಂಬಂಧಿಸಿದ ಅಧಿಕಾರಿಗಳಿಗೆ ತಿಳಿಸಲಾಗುತ್ತದೆ.

ಸಾರ್ವಜನಿಕರ ಕುಂದುಕೊರತೆ ಆಲಿಕೆ

ಪ್ರತಿ ಮಾಹೆಯ ಒಂದನೆಯ ಹಾಗೂ ಮೂರನೆಯ ಶನಿವಾರ ಸಾರ್ವಜನಿಕರ ಕುಂದು ಕೊರತೆ ಆಲಿಸಲು ಸಾರ್ವಜನಿಕರಿಗೆ ಮುಕ್ತ ಪ್ರವೇಶ ಕಲ್ಪಿಸಲಾಗಿದೆ. ಸದರಿ ದಿನದಂದು ಎಲ್ಲಾ ಇಲಾಖಾಧಿಕಾರಿಗಳು ಸಭೆಯಲ್ಲಿ ಹಾಜರಿರುತ್ತಾರೆ. ಸ್ಥಳದಲ್ಲಿಯೆ ಅರ್ಜಿದಾರರಿಂದ ಮನವಿ ಸ್ವೀಕರಿಸಿ, ನಿಯಮಾನುಸಾರ ಪರಿಶೀಲಿಸಿ ಶೇಕಡ ೬೦ರಷ್ಟು ಪರಿಹಾರವನ್ನು ಸ್ಥಳದಲ್ಲಿಯೇ ಕೈಗೊಳ್ಳಲಾಗುತ್ತದೆ. ಉಳಿದ ಪ್ರಕರಣಗಳಲ್ಲಿ ಕ್ರಮ ಜರುಗಿಸಲು ಸಂಬಂಧಿಸಿ ಅಧಿಕಾರಿಗಳಿಗೆ ಸೂಚಿಸಿ ಮುಂದಿನ ಸಭೆಯಲ್ಲಿ ತೆಗೆದುಕೊಂಡ ಕ್ರಮವನ್ನು ಅರ್ಜಿದಾರರಿಗೆ ತಿಳಿಸುವ ವ್ಯವಸ್ಥೆ ಮಾಡಲಾಗಿದೆ.

ಪಾರದರ್ಶಕ ಕಾಯ್ದೆ

ಟೆಂಡರ್‌ಗಳನ್ನು ಆಹ್ವಾನಿಸುವ ಪ್ರಕ್ರಿಯೆಗೊಳಪಡಿಸುವ ಮತ್ತು ಅಂಗೀಕರಿಸುವ ಕಾರ್ಯ ವಿಧಾನವನ್ನು ಸರಳಗೊಳಿಸುವ ಮೂಲಕ ಸಂಗ್ರಹಣಾ ಸಂಸ್ಥೆಗಳ ಸರಕುಗಳ ಹಾಗೂ ಸೇವೆಗಳ ಸಂಗ್ರಹಣ ಪ್ರಕ್ರಿಯೆಯನ್ನು ಪಾರದರ್ಶಕಗೊಳಿಸುವ ಉದ್ದೇಶದಿಂದ ಸದರಿ ನಿಯಮಗಳನ್ನು ಮತ್ತು ಅಧಿನಿಯಮವನ್ನು ಸರ್ಕಾರವು ಜಾರಿಗೆ ತಂದಿರುತ್ತದೆ

ನೌಕರರಿಗೆ ಸೌಲಭ್ಯ

ನೌಕರರಿಗೆ ಯಥೇಚ್ಚ ರಜೆಗಳ ಸೌಲಭ್ಯ, ವೇತನ ಆಯೋಗದ ಶಿಫಾರಸ್ಸಿನಂತೆ ಮಾಸಿಕ ಸಂಬಳದಲಿ ಕಾಲ ಕಾಲಕ್ಕೆ ಹೆಚ್ಚಳ, ಸರಳ ಹಾಗೂ ಪಾರದರ್ಶಕತೆಗಾಗಿ ಗಣಕೀಕೃತ ವ್ಯವಸ್ಥೆ ಹಾಗೂ ಆನ್ ಲೈನ್ ಮೂಲಕ ಕಡತಗಳ ಪರೀವೀಕ್ಷಣೆ ಹಾಗೂ ವಿಲೇವಾರಿ, ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ನೇಮಕಾತಿ ಹಾಗೂ ಓರಿಯೇಂಟೇಶನ್ ಶಿಬಿರ ಏರ್ಪಡಿಸಿ ನೌಕರರಲ್ಲಿ ದಕ್ಷತೆ ಹೆಚ್ಚಿಸಲು ಪ್ರಯತ್ನಿಸಲಾಗುತ್ತದೆ.

ಸಕಾಲ ಯೋಜನೆ

ಬಿಹಾರದ ಮುಖ್ಯಮಂತ್ರಿ ನಿತೀಶಕುಮಾರರಿಂದ ಪ್ರೇರಿತರಾಗಿ ನಮ್ಮ ರಾಜ್ಯ ಸರ್ಕಾರವು ಕೂಡ ಕರ್ನಾಟಕ ನಾಗರೀಕ ಸೇವಾ ಖಾತರಿ ಕಾಯಿದೆ ೨೦೧೧ ನ್ನು ರೂಪಿಸಿದೆ. ಈ ಕಾಯ್ದೆಯು ಸಾರ್ವಜನಿಕ ಸೇವೆಯಲ್ಲಿ 'ಬದ್ಧತೆ' ಹೆಚ್ಚಿಸಲು ಬಹುದೊಡ್ಡ ಕೊಡುಗೆ ನೀಡುತ್ತಿದೆ. ರಾಜ್ಯ ಸರ್ಕಾರ ಇದಕ್ಕಿಟ್ಟ ಹೆಸರು'ಸಕಾಲ' ಇದು ಆಡಳಿತದಲ್ಲಿ ಭ್ರಷ್ಟಾಚಾರ ರಹಿತ ಸಮಯ ಬದ್ಧ ಸೇವೆಯನ್ನು ಜಾರಿಗೆ ತಂದಿದೆ. ಈ ಯೋಜನೆಯು ನಲ್ವತ್ತೆರಡು ಸರ್ಕಾರಿ ಇಲಾಖೆಯಡಿ ಬರುವ ಮೂನ್ನೂರಾ ಎಪ್ಪತ್ತೈದು ನಾಗರೀಕ ಸೇವೆಗಳನ್ನು ಸಕಾಲಕ್ಕೆ ನೀಡುವ ಬಗ್ಗೆ ಜನ ಸಾಮಾನ್ಯರೊಂದಿಗೆ ವಾಗ್ದಾನ ಮಾಡಿಕೊಳ್ಳುತ್ತದೆ. ಈ ಸೇವೆಯಡಿ ಉಲ್ಲೇಖಿಸಲಾದ ಸೌಲಭ್ಯಗಳು ಇಷ್ಟು ದಿನಗಳ ಕಾಲ ಜನ ಸಾಮಾನ್ಯನ ಜೀವಕ್ಕೆ ಹತ್ತಿಕೊಂಡ ಸಮಸ್ಯಾತ್ಮಕ ವಿಷಯಗಳಾಗಿದ್ದವು. ಇದೇ ಮಾದರಿಯ ಸೇವೆಗಳು ನಮ್ಮ ದೇಶದ ಮಧ್ಯ ಪ್ರದೇಶ, ದೆಹಲಿ ಹಾಗೂ ಇನ್ನಿತರ ರಾಜ್ಯಗಳಲ್ಲಿದ್ದರೂ ಸಹ ಅದರ ವ್ಯಾಪ್ತಿಗೆ ಬರುವ ಸೇವೆಗಳು ನಮ್ಮ ರಾಜ್ಯದ ಒಂದು ಮೂರಂಶದಷ್ಟು ಮಾತ್ರ

ಈ ಕಾಯ್ದೆಯಲ್ಲಿ ಎಲ್ಲಕ್ಕಿಂತ ಬಹು ಮುಖ್ಯವಾಗಿರುವುದು 'ಸಕಾಲ' ಸೇವೆಗೆ ನಿಯುಕ್ತನಾದ ಸರ್ಕಾರಿ ನೌಕರನು ಜನಸಾಮಾನ್ಯನೊಂದಿಗೆ ವಾಗ್ದಾನ ಮಾಡಿದಂತೆ ಸಕಾಲಕ್ಕೆ ಸೇವೆ ಒದಗಿಸದಿದ್ದರೆ ಪ್ರತಿ ದಿನದ ಸೇವಾ ವಿಳಂಬಕ್ಕೆ ೨೦ ರೂಪಾಯಿಯಂತೆ ಗರಿಷ್ಠ ೫೦೦ ರೂಪಾಯಿಯಷ್ಟು ಹಣವನ್ನು

ತನ್ನ ಸಂಬಳದಿಂದ ಸದರಿ ಸೇವಾವಿಳಂಬಿತ ನಾಗರಿಕನಿಗೆ ಪರಿಹಾರ ಧನವಾಗಿ ನೀಡಬೇಕಾಗುತ್ತದೆ. ಹೀಗಾಗಿ ಈ ಸೇವೆಯಲ್ಲಿ ಇನ್ನು ಮುಂದೆ ವಿಳಂಬವಾಗಲಾರದು ಎಂಬ ವಾದಕ್ಕೆ ಇದೀಗ ಹೆಚ್ಚು ಪುಷ್ಠಿ ದೊರಕುತ್ತಿದೆ. **ಇಂದು ... ನಾಳೆ... ಇನ್ನಿಲ್ಲ. ಎಂಬುದು ಸಕಾಲದ ಘೋಷವಾಕ್ಯ**

ಮಾಹಿತಿ ಹಕ್ಕು ಕಾಯ್ದೆ

ರಕ್ಷಣೆ ಹಾಗೂ ಇನ್ನಿತರ ಮಹತ್ವದ ಹಾಗೂ ವೈಯಕ್ತಿಕ ವಿವರಗಳನ್ನು ಹೊರತಾದ ಎಲ್ಲ ರೀತಿಯ ಮಾಹಿತಿಯನ್ನು ಪಡೆಯುವ ಹಕ್ಕು ಪ್ರತಿಯೊಬ್ಬರಿಗೂ ನೀಡಲಾಗಿದೆ. ಈ ಕಾನೂನಿನಿಂದ ಸರ್ಕಾರದ ಕಡತಗಳಲ್ಲಿರುವ ಮಹತ್ವದ ವಿವರಗಳನ್ನು ಹಾಗೂ ದಾಖಲೆಗಳನ್ನು ಪಡೆಯಬಹುದಾಗಿದೆ. ಈ ಕಾನೂನಿನಿಂದ ಕಾನೂನು ಬಾಹಿರ ಕೃತ್ಯಗಳಿಗೆ ಸಾಕಷ್ಟು ತಡೆಯಾಗಿದ್ದು ನಿಜ. ಭ್ರಷ್ಟಾಚಾರ ನಿರ್ಮೂಲನೆಯಲ್ಲಿ ನಾಗರಿಕ ಸಮಾಜದ ಪಾತ್ರ ಬಹು ಮಹತ್ವದ್ದು. ಮಾಹಿತಿ ಹಕ್ಕು ಕಾನೂನು ಸಾರ್ವತ್ರಿಕಗೊಂಡ ಮೇಲಂತೂ ಸಾಮಾನ್ಯ ಪ್ರಜೆ ಇನ್ನು ಹೆಚ್ಚು ಜಾಗೃತನಾಗಿದ್ದಾನೆ. ಸರಕಾರಿ ಅಧಿಕಾರಿಗಳನ್ನು, ಸಂಸ್ಥೆಗಳನ್ನು ಆತ ಪ್ರಶ್ನಿಸುವ ಮಟ್ಟಕ್ಕೆ ಬೆಳೆದಿದ್ದಾನೆ. ತಂತ್ರಜ್ಞಾನವು ಇದಕ್ಕೆ ಸಹಾಯವನ್ನು ಒದಗಿಸುತ್ತಿದೆ. ಈಗ ಭ್ರಷ್ಟಾಚಾರದ ವಿರುದ್ಧ ಧ್ವನಿ ಎತ್ತಲು ಮುಂಚಿನಷ್ಟು ಆತಂಕ ಪಡಬೇಕಿಲ್ಲ. ಇತ್ತೀಚಿನ ದಿನಗಳಲ್ಲಿ ಪಾರದರ್ಶಕತೆ ಸರಕಾರಿ ಕಚೇರಿಯಲ್ಲಿ ಪ್ರವೇಶಿಸಿದೆ. ಅವರು ಸಿವಿಲಿಯನ್ಸ್ ಕ್ಯಾಮೆರಾ, ಎಲೆಕ್ಟ್ರಾನಿಕ್ ಮಾನಿಟರ್ ಅಡಿಯಲ್ಲಿ ಕೆಲಸ ನಿರ್ವಹಿಸಬೇಕಾಗಿದೆ. ಇಂಥ ಪಾರದರ್ಶಕ ವ್ಯವಸ್ಥೆಯಷ್ಟೇ ಭ್ರಷ್ಟಾಚಾರವನ್ನು ಸಂಪೂರ್ಣವಾಗಿ ನಿಯಂತ್ರಿಸಲಾರದು. ಆದರೂ ಸ್ವಲ್ಪ ಮಟ್ಟಿಗೆಯಾದರೂ ನಿಯಂತ್ರಿಸಬಹುದೆಂದು ನಿರೀಕ್ಷೆಯಿಟ್ಟುಕೊಳ್ಳಬಹುದು.

ರಾಜ್ಯ ಜಾಗೃತ ಆಯೋಗ

ಭಾರತವು ಸ್ವತಂತ್ರಗೊಂಡು ರಾಜ್ಯಗಳ ಪುನರ್ ವಿಂಗಡಣೆ ಪ್ರಕ್ರಿಯೆ ಮುಕ್ತಾಯಗೊಂಡ ತರುವಾಯ ಕೇಂದ್ರ ಹಾಗೂ ರಾಜ್ಯಮಟ್ಟಗಳಲ್ಲಿ ಆಯಾ ಸರ್ಕಾರಗಳು ಭ್ರಷ್ಟಾಚಾರ ನಿರ್ಮೂಲನಾ ಕಾರ್ಯಕ್ರಮವನ್ನು ಒಂದು ಮುಖ್ಯ ಅಂಶವನ್ನಾಗಿ ಪರಿಗಣಿಸಿದವು. ಈ ನಿಟ್ಟಿನಲ್ಲಿ ಕೇಂದ್ರ ಮಟ್ಟದಲ್ಲಿ ೧೯೬೨ರಲ್ಲಿ ರಚಿತವಾದ 'ಸಂತಾನಂ ಕಮಿಟಿ'ಯ ಶಿಫಾರಸ್ಸಿನ ಪ್ರತಿಫಲವಾಗಿ ೧೯೬೪ರಲ್ಲಿ ಸ್ಥಾಪನೆಯಾದ ಕೇಂದ್ರಿಯ ಜಾಗೃತ ಆಯೋಗ (Central Vigilance Commission) ದ ಮಾದರಿಯಲ್ಲಿಯೇ ಕರ್ನಾಟಕದಲ್ಲೂ ಸಹ ಭ್ರಷ್ಟಾಚಾರವನ್ನು ನಿಯಂತ್ರಿಸಲು ಮೊದಲನೆಯ ಹಂತದಲ್ಲಿ ಅಸ್ಥಿತ್ವದಲ್ಲಿದ್ದ ದಕ್ಷತ ಪರಿಶೋಧನಾ ಮತ್ತು ಭ್ರಷ್ಟಾಚಾರ ನಿರೋಧ ಕಛೇರಿಯನ್ನು ಸ್ಥಾಪಿಸಲಾಯಿತು. ಇದು ಅಷ್ಟೊಂದು ಪರಿಣಾಮಕಾರಿಯಾಗಿ ಕೆಲಸ ಮಾಡದ ಹಿನ್ನೆಲೆಯಲ್ಲಿ ಅದರ ಬದಲಾಗಿ

ಎರಡನೆಯ ಹಂತವಾಗಿ ರಾಜ್ಯ ಜಾಗೃತ ಆಯೋಗ (State Vigilance Commission) ವನ್ನು ರಚಿಸಲಾಯಿತು.

ಈ ಆಯೋಗವು ಒಬ್ಬ ಜಾಗೃತ ಆಯುಕ್ತರನ್ನು ಮುಖ್ಯಸ್ಥರನ್ನಾಗಿ ಹೊಂದಿತ್ತು. ಇವರನ್ನು ರಾಜ್ಯದ ರಾಜ್ಯಪಾಲರು ರಾಜ್ಯದ ಮುಖ್ಯ ನ್ಯಾಯಾಧೀಶರೊಡನೆ ಸಮಾಲೋಚನೆ ನಡೆಸಿ ನೇಮಕ ಮಾಡಲಾಗುತ್ತಿತ್ತು. ಜಾಗೃತ ಆಯೋಗದ ಕಮೀಷನರ್‌ರವರು ೫ ವರ್ಷಗಳ ಅಧಿಕಾರವಧಿಯನ್ನು ಅಥವಾ ೬೫ ವರ್ಷ ವಯಸ್ಸಿನ ಅವಧಿಯವರೆಗೆ ಇದರಲ್ಲಿ ಯಾವುದು ಮೊದಲೋ ಅಲ್ಲಿಯವರೆಗಿನ ಅಧಿಕಾರವನ್ನು ಹೊಂದಿದ್ದರು. ರಾಜ್ಯದ ಆಡಳಿತದಲ್ಲಿ ಸಮಗ್ರತೆ ಮತ್ತು ದಕ್ಷತೆಯನ್ನು ಕಾಪಾಡಲು ಅಗತ್ಯವಿರುವ ನಿರ್ದೇಶನಗಳನ್ನು ಮತ್ತು ಸಹಕಾರ–ಸಮನ್ವಯತೆಗಳನ್ನು ಒದಗಿಸುವ ಕಾರ್ಯಗಳನ್ನು ಮಾಡುತ್ತಿದ್ದರು. ಜಾಗೃತ ಆಯೋಗದ ಮುಖ್ಯಸ್ಥರು ಆಯೋಗದ ಪ್ರಮುಖ ೩ ವಿಭಾಗಗಳಾದ ಜಾಗೃತ ನಿರ್ದೇಶನಾಲಯ (Vigilance Directorate), ತನಿಖಾ ವಿಭಾಗ (Investigation Wing), ತಾಂತ್ರಿಕ ವಿಭಾಗ (Technical Wing) ಗಳ ಮೂಲಕ ತಮ್ಮ ಅಧಿಕಾರ ಮತ್ತು ಜವಾಬ್ದಾರಿಯನ್ನು ನಿರ್ವಹಿಸುತ್ತಿದ್ದರು.

ಇವರ ಪದಚ್ಯುತಿಯು ದೃಢ ಆಪಾದನೆಯ ಮೇರೆಗೆ ರಾಜ್ಯ ಉಚ್ಚ ನ್ಯಾಯಾಲಯದ ನ್ಯಾಯಾಧೀಶರಿಂದ ತನಿಖೆ ನಡೆಯಲ್ಪಟ್ಟು ತನಿಖಾ ವರದಿಯ ಆಧಾರದ ಮೇಲೆ ಆರೋಪ ಸಾಬೀತಾದಲ್ಲಿ ರಾಜ್ಯಪಾಲರು ಜಾಗೃತ ಆಯುಕ್ತರನ್ನು ಪದಚ್ಯುತಿಗೊಳಿಸಬಹುದಿತ್ತು. ಜಾಗೃತ ಆಯುಕ್ತರಾಗಿ ಒಮ್ಮೆ ನಿವೃತ್ತಿಗೊಂಡ ನಂತರ ಪುನಃ ಯಾವುದೇ ಸರ್ಕಾರಿ ಸೇವೆ ಸಲ್ಲಿಸಲು ಇವರಿಗೆ ಅರ್ಹತೆ ಅಥವಾ ಅವಕಾಶ ಇರುತ್ತಿರಲಿಲ್ಲ.

ಜಾಗೃತ ಆಯೋಗದ ಪ್ರಮುಖ ಕರ್ತವ್ಯಗಳೆಂದರೆ,

೧. ರಾಜ್ಯ ಜಾಗೃತ ಆಯೋಗವು ಮುಖ್ಯವಾಗಿ ಸರ್ಕಾರಿ ನೌಕರರ (ಸಾರ್ವಜನಿಕ ವಲಯದ ಉದ್ಯಮದ ನೌಕರರನ್ನು ಹಾಗೂ ಸ್ಥಳೀಯ ಸಂಸ್ಥೆಗಳ ನೌಕರರನ್ನೊಳಗೊಂಡಂತೆ) ವಿರುದ್ಧ ಬರುವ ಆಪಾದನೆಗಳನ್ನು ವಿಚಾರಣೆ ಮಾಡುವ ಮತ್ತು ತನಿಖೆ ನಡೆಸುವ ಕಾರ್ಯಗಳನ್ನು ನಿರ್ವಹಿಸುತ್ತಿತ್ತು.

೨. ಭ್ರಷ್ಟಾಚಾರಕ್ಕೆ ಸಂಬಂಧಿಸಿದ, ಸರ್ಕಾರಿ ನೌಕರರ ಅಪ್ರಾಮಾಣಿಕತೆ, ದುರ್ವರ್ತನೆ ಹಾಗೂ ದುರಾಡಳಿತಕ್ಕೆ ಸಂಬಂಧಿಸಿದ ಎಲ್ಲಾ ವಿಷಯಗಳನ್ನೊಳಗೊಂಡಂತೆ ತನಿಖೆಯನ್ನು ಮಾಡುತ್ತಿತ್ತು.

೩. ಯಾವುದೇ ಸರ್ಕಾರಿ ನೌಕರನ ವಿರುದ್ಧ ದೂರು ಬಂದ ಸಂದರ್ಭದಲ್ಲಿ ದೂರನ್ನು ಸ್ವೀಕರಿಸಿ ಅದರ ಆಧಾರದ ಮೇಲೆ ತನಿಖೆಯನ್ನು ನಡೆಸಿ, ನಂತರ ಸರ್ಕಾರಕ್ಕೆ ಅಥವಾ ಆಪಾದಿತ

(ತಪ್ಪಿತಸ್ಥ) ನೌಕರ ಕಾರ್ಯನಿರ್ವಹಿಸುತ್ತಿರುವ ಇಲಾಖಾ ಮುಖ್ಯಸ್ಥರಿಗೆ ತೆಗೆದುಕೊಳ್ಳಬಹುದಾದ ಶಿಸ್ತಿನ ಕ್ರಮಗಳ ಬಗ್ಗೆ ಶಿಫಾರಸ್ಸು ಮಾಡುತ್ತಿತ್ತು. ನಂತರದಲ್ಲಿ ಸರ್ಕಾರ ಈ ದೂರುಗಳನ್ನು ಪರಿಶೀಲಿಸಿ, ಸಮರ್ಪಕವಾದ ಕ್ರಮಗಳನ್ನು ತೆಗೆದುಕೊಳ್ಳುತ್ತಿತ್ತು,

೪. ಜಾಗೃತ ಆಯೋಗವು ಲಂಚ ಸ್ವೀಕರಿಸುವ ನೌಕರರನ್ನು ಪ್ರತ್ಯಕ್ಷವಾಗಿ ಹಾಗೂ ಸಾಕ್ಷಿ ಸಮೇತ ಬಲೆ ಬೀಸಿ ಹಿಡಿಯುವ ಕೆಲಸವನ್ನು ಮಾಡುತ್ತಿತ್ತು. ಅಲ್ಲದೆ ಆದಾಯಕ್ಕಿಂತ ಹೆಚ್ಚಿನ ಆಸ್ತಿಯನ್ನು ಹೊಂದಿರುವ ಸರ್ಕಾರಿ ನೌಕರರ ವಿರುದ್ಧ ತನಿಖೆ ನಡೆಸಿ ಅವರ ವಿರುದ್ಧ ಶಿಸ್ತಿನ ಕ್ರಮ ಕೈಗೊಳ್ಳುತ್ತಿತ್ತು,

೫. ಜಾಗೃತ ಆಯೋಗವು ತಾನೇ ಸ್ವಯಂ ಪ್ರೇರಿತವಾಗಿ ತನಿಖೆ ಮಾಡಲು ಸ್ವಯಂ ಅಧಿಕಾರವನ್ನು ನಿಹಿತಗೊಳಿಸಿಕೊಂಡಿತ್ತು,

೬. ಇದು ತನ್ನ ವಾರ್ಷಿಕ ವರದಿಯನ್ನು ಸರ್ಕಾರಕ್ಕೆ ಸಲ್ಲಿಸುವ ಕಾರ್ಯವನ್ನು ಮಾಡುತ್ತಿತ್ತು

ಉತ್ತಮ ಆಡಳಿತಕ್ಕೆ ಪೂರಕವೆನಿಸುವಂತೆ ಸರ್ಕಾರವು ೨೦೦೯-೧೦ರಿಂದ ೨೦೧೧-೧೨ನೆಯ ಸಾಲಿನ ಭ್ರಷ್ಟಾಚಾರಕ್ಕೆ ಸಂಬಂಧಿಸಿದ ಆರೋಪದ ಮೇಲೆ ಸರ್ಕಾರಿ ಸಿಬ್ಬಂದಿಯ ವಿರುದ್ಧ ಸಾಕಷ್ಟು ಪ್ರಮಾಣದಲ್ಲಿ ಕಾರ್ಯಾಚರಣೆ ಜರುಗಿರುವುದನ್ನು ಕಾಣಬಹುದು. ಪೊಲೀಸ್, ಕಂದಾಯ, ಶಿಕ್ಷಣ ಹಾಗೂ ಲೋಕೋಪಯೋಗಿ ಇಲಾಖೆಗಳು ಭ್ರಷ್ಟಾಚಾರದ ಪ್ರಮಾಣದಲ್ಲಿ ಅತಿ ಹೆಚ್ಚಿನ ಪಾಲನ್ನು ಹೊಂದಿದ್ದು, ಕುಂದುಕೊರತೆಗಳಿಗೆ ಸಂಬಂಧಿಸಿದಂತೆ ಅನುಕ್ರಮವಾಗಿ ಶೇಕಡ ೯ ರಷ್ಟು, ಶೇಕಡ ೧೨.೭೯ರಷ್ಟು, ಶೇಕಡ. ೩೧.೭೫ರಷ್ಟು ಹಾಗೂ ಲೋಕೋಪಯೋಗಿ ಇಲಾಖೆಯಲ್ಲಿ ಶೇಕಡ ೯ರಷ್ಟು ಪ್ರಕರಣಗಳು ದಾಖಲಾಗಿವೆ. ಅಲ್ಲದೆ ಜಾಗೃತ ಆಯೋಗದಿಂದ ಬಲೆ ಬೀಸಿದ ಪ್ರಕರಣಗಳು ಅನುಕ್ರಮವಾಗಿ ಶೇಕಡ ೨.೯೦ರಷ್ಟು, ಶೇಕಡ ೧೨.೯೦, ಶೇಕಡ ೪.೯೮ ಮತ್ತು ೦.೫೮ರಷ್ಟು ದಾಖಲಾಗಿವೆ. ಅದೇ ರೀತಿ ಅಧಿಕಾರಿಗಳ ಮೇಲೆ ಕಂದಾಯ ಇಲಾಖೆಯಲ್ಲಿ ಶೇಕಡ ೨೮.೭೧ರಷ್ಟು ಪೊಲೀಸ್ ಇಲಾಖೆಯಲ್ಲಿ ಶೇಕಡ ೭.೭೮ರಷ್ಟು ಶಿಕ್ಷಣ ಇಲಾಖೆಯಲ್ಲಿ ೮.೫೧ರಷ್ಟು ಹಾಗೂ ಲೋಕೋಪಯೋಗಿ ಇಲಾಖೆಯಲ್ಲಿ ೧.೨೭ರಷ್ಟು ಪ್ರಕರಣಗಳು ದಾಖಲಾಗಿವೆ. ಇಲ್ಲಿ ಗಮನಾರ್ಹ ಅಂಶವೆಂದರೆ, ಈ ಹಿಂದಿನ ಅವಧಿಯಲ್ಲಿ ಭ್ರಷ್ಟಾಚಾರಕ್ಕೆ ಖ್ಯಾತವಾದ ಇಲಾಖೆಗಳೇ ಇಲ್ಲೂ ಸಹ ತಮ್ಮ ಖ್ಯಾತಿಯನ್ನು ಉಳಿಸಿಕೊಂಡಿವೆ. ಇನ್ನುಳಿದ ಇತರೆ ಇಲಾಖೆಗಳಲ್ಲಿಯೂ ಸಹ ಭ್ರಷ್ಟಾಚಾರ ದಿನಕಳೆದಂತೆ ತನ್ನ ವ್ಯಾಪ್ತಿಯನ್ನು ಹೆಚ್ಚಿಸಿಕೊಳ್ಳುತ್ತಾ ಹೋಗುತ್ತಿದೆ.

ಮೇಲ್ಕಂಡ ಇಲಾಖೆಗಳಲ್ಲಿ ಭ್ರಷ್ಟಾಚಾರಕ್ಕೆ ಸಂಬಂಧಿಸಿದಂತೆ ಕುಂದುಕೊರತೆಗಳ, ಬಲೆ ಬೀಸಿದ ಪ್ರಕರಣಗಳ ಹಾಗೂ ಶಿಕ್ಷೆ ಅಥವಾ ಕ್ರಮಕ್ಕೆ ಸಂಬಂಧಿಸಿದಂತೆ ೨೦೦೯-೧೦ರಿಂದ ೨೦೧೧-೧೨

ನೆಯ ಸಾಲಿನಲ್ಲಿ ಶೇಕಡ ೬೫ರ ಪ್ರಮಾಣದಲ್ಲಿ ಕಾರ್ಯನಿರ್ವಹಣೆಯಾಗಿದೆ. ಈ ೨೦೦೯-೧೦ ರಿಂದ ೨೦೧೧-೧೨ನೆಯ ಸಾಲಿನ ಅಂಕಿ-ಅಂಶ ಹಾಗೂ ವಿಷಯಗಳನ್ನು ಅಧಿಕಾರಿಗಳು ಲಂಚ ಪಡೆಯುವಾಗ ಬಲೆಗೆ ಬಿದ್ದ ಅಂಶಗಳನ್ನು ಮತ್ತು ಅಧಿಕಾರಿಗಳ ವಿರುದ್ಧ ಸ್ವೀಕೃತವಾದ ದೂರು, ಭ್ರಷ್ಟಾಚಾರದ ಆರೋಪದ ಆಧಾರದ ಮೇಲೆ ಶಿಕ್ಷೆಗೊಳಗಾದ ಅಂಕಿ-ಅಂಶಗಳನ್ನಾಧರಿಸಿ ವಿಶ್ಲೇಷಿಸಲಾಗಿದೆ. ಈ ಅವಧಿಯಲ್ಲಿ ಒಟ್ಟು ೧೧೯ ಗೆಜೆಟೆಡ್ ಶ್ರೇಣಿಯ ಅಧಿಕಾರಿಗಳು ಭ್ರಷ್ಟಾಚಾರದ ಆರೋಪಕ್ಕೆ ಒಳಗಾಗಿದ್ದಾರೆ. ಈ ಗೆಜೆಟೆಡ್ ಅಧಿಕಾರಿಗಳಲ್ಲಿ ವೈದ್ಯಾಧಿಕಾರಿಗಳು, ಶಸ್ತ್ರ ಚಿಕಿತ್ಸಕರು, ಸಹಾಯಕ ಶಸ್ತ್ರ ಚಿಕಿತ್ಸಕರು ಹಾಗೂ ಪ್ರಾಧ್ಯಾಪಕರುಗಳು, ಭೂ ಸ್ವಾಧೀನಾಧಿಕಾರಿ, ತಹಶೀಲ್ದಾರ್‌ರ ಪ್ರಮಾಣ ಅನುಕ್ರಮವಾಗಿ ಶೇಕಡ ೧೧.೭೬ಇದ್ದರೆ. ಮತ್ತೊಂದೆಡೆ ವಾಣಿಜ್ಯ ತೆರಿಗೆ ಅಧಿಕಾರಿ ಮತ್ತು ಸಹಾಯಕ ವಾಣಿಜ್ಯ ತೆರಿಗೆ ಅಧಿಕಾರಿಗಳ ಪ್ರಮಾಣ ಶೇಕಡ ೬.೭೨ರಷ್ಟು. ಇವರುಗಳು ಕೆಳಕಂಡ ಅಧಿಕಾರಿಗಳ ಅನುಸರಣೆಯಲ್ಲಿ ಸರಾಸರಿ ಪ್ರಮಾಣವನ್ನು ಕಾಯ್ದುಕೊಳ್ಳುವವರಾಗಿದ್ದಾರೆ.

ನಾನ್ ಗೆಜೆಟೆಡ್ ಶ್ರೇಣಿಯ ನೌಕರರ ಅಂಕಿ-ಅಂಶಗಳನ್ನು ಗಮನಿಸಿದಾಗ, ಕಂದಾಯ ಇಲಾಖೆಗೆ ಸಂಬಂಧಿಸಿದಂತೆ, ಗ್ರಾಮ ಲೆಕ್ಕಿಗರು, ಕಂದಾಯ ನಿರೀಕ್ಷಕರು ಮತ್ತು ಕಂದಾಯ ಇಲಾಖೆ ಗುಮಾಸ್ತರನ್ನೊಳಗೊಂಡಂತೆ ಶೇಕಡ ೧/೩ರಷ್ಟು ಸಿಬ್ಬಂದಿ ವರ್ಗದವರು ಭ್ರಷ್ಟಾಚಾರ ಆರೋಪಕ್ಕೆ ಒಳಗಾಗಿದ್ದಾರೆ. ಇದರಲ್ಲಿ ಗ್ರಾಮ ಲೆಕ್ಕಿಗರ ಹಾಗೂ ಕಂದಾಯ ನಿರೀಕ್ಷಕರ ಪ್ರಮಾಣವು ಅನುಕ್ರಮವಾಗಿ ಶೇ. ೧೭.೬೮ ಮತ್ತು ಶೇ. ೧೨.೫೮ರಷ್ಟು. ನಂತರದ ಸ್ಥಾನವು ಪೊಲೀಸ್ ಇಲಾಖೆ ಹಾಗೂ ಶಿಕ್ಷಣ ಇಲಾಖೆ ಸಿಬ್ಬಂದಿಯದ್ದು. ಸರಿಸುಮಾರು ಶೇಕಡ ೭.೪ರಷ್ಟು ಉಪ ಆರಕ್ಷಕ ನಿರೀಕ್ಷಕರು, ಶೇಕಡ ೩.೪ರಷ್ಟು ಪೇದೆಗಳು, ಅರಣ್ಯ ಇಲಾಖೆ, ವಾಣಿಜ್ಯ ತೆರಿಗೆ, ಅಬಕಾರಿ, ರಸ್ತೆ ಸಾರಿಗೆ ಮತ್ತು ಸಮುದಾಯ ಅಭಿವೃದ್ಧಿ ಇಲಾಖೆ. ಇವುಗಳಿಗೆ ದೃಷ್ಟಾಂತವಾಗಿ ಕೆಳಕಂಡ ಹುದ್ದೆಗಳ ಅಧಿಕಾರಿಗಳನ್ನು ಕಾಣಬಹುದು. ವಲಯ ಅರಣ್ಯ ಅಧಿಕಾರಿ, ಅರಣ್ಯಾಧಿಕಾರಿ ಅಥವಾ ಅರಣ್ಯ ಪಾಲಕರ ಪ್ರಮಾಣ ಸರಿಸುಮಾರು ಶೇಕಡ ೪.೦೮ರಷ್ಟು ಇದೆ. ಇದೇ ಪ್ರಮಾಣದ ಅನುಸರಣೆಯಲ್ಲಿ, ವಿಸ್ತರಣಾಧಿಕಾರಿ ಶೇಕಡ ೩.೦೬, ಕಿರಿಯ ಅಭಿಯಂತರ ಅಥವಾ ಫೋರ್‌ಮನ್ ಶೇಕಡ ೨.೭೨, ಮೋಟಾರು ವಾಹನ ನಿರೀಕ್ಷಕರು ಶೇಕಡ ೧.೩೬, ಭೂಮಾಪನ ಅಧಿಕಾರಿ ಶೇಕಡ ೧.೩೬, ಸಮಾಜ ಕಲ್ಯಾಣ ನಿರೀಕ್ಷಕರು ಶೇಕಡ ೧.೩೬, ಕಾರ್ಮಿಕ ನಿರೀಕ್ಷಕರು ಶೇಕಡ ೧.೩೬, ಉಪ ನೋಂದಣಾಧಿಕಾರಿ ಶೇಕಡ ೧೬೨ ಮತ್ತು ಆಹಾರ ನಿರೀಕ್ಷಕರು ಶೇಕಡ ೦.೬೮ರಷ್ಟರ ಸರಾಸರಿಯಲ್ಲಿದ್ದಾರೆ.

ಪ್ರಮಾಣ ಪತ್ರಗಳು ಪ್ರಮುಖವಾಗಿ ಜಾತಿ ಮತ್ತು ವರಮಾನ ದೃಢೀಕರಣ, ವಾಹನ ನೋಂದಣಿ ಮತ್ತು ಆಕ್ಷೇಪಣೆ ಅಥವಾ ತಕರಾರು ರಹಿತ ಪ್ರಮಾಣ ಪತ್ರಗಳನ್ನು ಮುಖ್ಯವಾಗಿ ಒಳಗೊಂಡಿರುತ್ತವೆ.

ಪರವಾನಗಿ ಪತ್ರಗಳು ಪ್ರಮುಖವಾಗಿ ವಾಹನ ಚಾಲನಾ ಪರವಾನಗಿ, ಸಾರಾಯಿ ಅಥವಾ ಮದ್ಯದ ಅಂಗಡಿಗಳ ವ್ಯವಹಾರಕ್ಕೆ ಪಡೆಯುವ ಪರವಾನಗಿ ಪತ್ರ, ಅಕ್ಕಿ ಗಿರಣಿಗಳನ್ನು ನಡೆಸಲು ಪಡೆಯುವ ಪರವಾನಗಿ ಪತ್ರಗಳು ಇತ್ಯಾದಿಗಳು. ಅನುಜ್ಞಾ ಪತ್ರಗಳು ಪ್ರಮುಖವಾಗಿ ಮರಗಳನ್ನು ಕಡಿಯಲು ಹಾಗೂ ಸಾಗಿಸಲು, ಗಣಿಗಾರಿಕೆ ಹಾಗೂ ಕಲ್ಲುಗಳ ಶೇಖರಣೆ ಅಥವಾ ಸಂಗ್ರಹಣೆಗಾಗಿ, ಅನಧಿಕೃತವಾದ ರಹದಾರಿಗಳಲ್ಲಿ ಬಸ್ಸುಗಳನ್ನು ಓಡಿಸಲು ಮತ್ತು ಇತ್ಯಾದಿಗಳಿಗೋಸ್ಕರ ಅನುಜ್ಞಾ ಪತ್ರಗಳನ್ನು ಮಾಡಿಸಲಾಗುತ್ತದೆ ಲೋಕಾಯುಕ್ತ ವರದಿ ಪ್ರಕಾರ ಈ ಪರವಾನಗಿ ಪತ್ರಗಳು ಮತ್ತು ಅನುಜ್ಞಾ ಪತ್ರಗಳು ಇದರ ಮುಖ ಬೆಲೆಗಿಂತ ಅಥವಾ ನಿಗದಿ ದರಕ್ಕಿಂತ ಶೇಕಡ ೧೦೦ರಿಂದ ೫೦೦ ಪಟ್ಟು ಹೆಚ್ಚಿನ ಬೆಲೆಗೆ ಮಾರಾಟವಾಗುತ್ತವೆ ಎಂಬುದಾಗಿ ಹೇಳಲಾಗಿದೆ.

ಭ್ರಷ್ಟಾಚಾರದ ಇನ್ನೊಂದು ಪ್ರಮುಖ ಸ್ವರೂಪವೆಂದರೆ 'ಸರ್ಕಾರದಿಂದ ಲಭ್ಯವಾಗುವ ಸೇವೆಗಳಿಗೆ ಹಾಗೂ ಸೌಲಭ್ಯಗಳಿಗೆ ಅನಧಿಕೃತ ಹಾಗೂ ಕಾನೂನುಬಾಹಿರವಾಗಿ ಹಣವನ್ನು ನಿಗದಿಪಡಿಸಿ, ವಸೂಲಿ ಮಾಡುವುದು. ಈ ರೀತಿಯಲ್ಲಾಗುವ ಭ್ರಷ್ಟಾಚಾರದ ಪ್ರಮಾಣ ಸರಿಸುಮಾರು ಶೇಕಡ ೧೧ರಷ್ಟು. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಶಿಕ್ಷಣ ಇಲಾಖೆ, ಸಹಕಾರ ಇಲಾಖೆ, ಖಜಾನೆ ಇಲಾಖೆ ಮತ್ತು ಪೊಲೀಸ್ ಇಲಾಖೆಗಳಂತಹ ವ್ಯವಸ್ಥೆಗಳಲ್ಲಿ ಈ ರೀತಿಯ ಭ್ರಷ್ಟಾಚಾರ ಅತಿ ಹೆಚ್ಚು. ಇದರಲ್ಲಿ ಶೇಕಡ ೫೪.೦೫ರಷ್ಟು ಭ್ರಷ್ಟಾಚಾರವು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗಳಲ್ಲಿರುವುದನ್ನು ಗುರುತಿಸಬಹುದು. ಇಂತಹ ಇಲಾಖೆಗಳಲ್ಲಿ ರೋಗಿಯನ್ನು ಆಸ್ಪತ್ರೆಗೆ ದಾಖಲು ಮಾಡಿಕೊಳ್ಳುವುದರಿಂದ ಹಿಡಿದು, ಚಿಕಿತ್ಸೆಯನ್ನು ಒದಗಿಸುವಲ್ಲಿ ಔಷಧಿ ಮತ್ತು ಚುಚ್ಚುಮದ್ದನ್ನು ನೀಡುವಲ್ಲಿ ಹಾಗೂ ಸ್ತ್ರೀ ಗರ್ಭಧರಿಸಿದಾಗಿನಿಂದ ಹಿಡಿದು ಪ್ರಸವದವರೆಗೂ ಪ್ರತಿ ಹಂತದಲ್ಲೂ ಲಂಚವನ್ನು ವಾರ್ಡನ್‌ನಿಂದ ಹಿಡಿದು ಹಿರಿಯ ವೈದ್ಯರುಗಳವರೆಗೂ ವಸೂಲಿ ಮಾಡುತ್ತಾರೆ.

ಅಂತೆಯೇ ನೇಮಕಾತಿ ಪ್ರಕ್ರಿಯೆಯಲ್ಲಿ, ವರ್ಗಾವಣೆಯನ್ನು ಖಾತ್ರಿಗೊಳಿಸುವಲ್ಲಿ, ಬಾಕಿಯನ್ನು ಸಂದಾಯ ಮಾಡುವಾಗ ಮತ್ತು ಪಿಂಚಣಿಯನ್ನು ಬಿಡುಗಡೆ ಮಾಡಲು, ಶಿಕ್ಷಣ ಇಲಾಖೆಯಲ್ಲಿ ಕಾಯ್ದೆಗಳನ್ನು ಪಾಸು ಮಾಡಲು, ಪೊಲೀಸ್ ಠಾಣೆಯಲ್ಲಿ ಪ್ರಥಮ ವರ್ತಮಾನದ ವರದಿಯನ್ನು ದಾಖಲು ಮಾಡಲು, ಜನರನ್ನು ಜಾಮೀನಿನ ಆದೇಶದ ಮೇರೆಗೆ ಬಿಡುಗಡೆ ಮಾಡಲು, ಕಳ್ಳತನವಾಗಿ ಸಿಕ್ಕಂತಹ ಮಾಲುಗಳು ಅಥವಾ ವಸ್ತುಗಳನ್ನು ಜನರಿಗೆ ವಾಪಸ್ಸು ಕೊಡಲು, ಪಶುಸಂಗೋಪನಾ ಇಲಾಖೆಯಲ್ಲಿ ಪ್ರಾಣಿಗಳನ್ನು ಸಂತೈಸುವ ರೀತಿ, ದಸ್ತಾವೇಜುಗಳ ನೊಂದಣೀಕರಣದಲ್ಲಿ ಆಗುವ ಭ್ರಷ್ಟಾಚಾರದ ಕೃತ್ಯಗಳನ್ನು ಇಲ್ಲಿ ಪ್ರಮುಖವಾಗಿ ಹೆಸರಿಸಬಹುದು.

ಕೆಲವು ಇಲಾಖೆಗಳಿಗೆ ಸಾಮಾನ್ಯವಾಗಿರುವಂತಹ ಭ್ರಷ್ಟಾಚಾರದ ವಿಧವೆಂದರೆ, ಸರ್ಕಾರದ ಸಂಪನ್ಮೂಲಗಳಾದ ಭೂಮಿ ಹಂಚಿಕೆ, ಸಾಲ ಮತ್ತು ಅನುದಾನಗಳನ್ನು ಬಿಡುಗಡೆ ಮಾಡುವುದು ಮತ್ತು ವಂತಿಗೆಗಳನ್ನು ನೀಡುವುದು, ಈ ವಿಷಯಗಳಿಗೆ ಸಂಬಂಧಿಸಿದಂತೆ, ಭ್ರಷ್ಟಾಚಾರದ ಪ್ರಮಾಣ ಸರಿಸುಮಾರು ಶೇಕಡ ೫.೧೩. ಈ ರೀತಿಯ ಭ್ರಷ್ಟಾಚಾರದ ಸ್ವರೂಪವು ಮತ್ತು ನಾಗರೀಕ ಸರಬರಾಜು, ಕೈಗಾರಿಕೆ, ಕಂದಾಯ, ಸಹಕಾರ ಮತ್ತು ಕೃಷಿ ಇಲಾಖೆಗಳಂತಹವುಗಳಲ್ಲಿ ಶೇಕಡ ೫೦ರ ಪ್ರಮಾಣದಲ್ಲಿದೆ. ತದ್ರೂಪವಾಗಿ ಕೆಲವು ಇಲಾಖೆಗಳಲ್ಲಿ ಸಾಮಾನ್ಯವಾಗಿ ಪ್ರಚಲಿತದಲ್ಲಿರುವ ಭ್ರಷ್ಟಾಚಾರದ ವಿಧವೆಂದರೆ, ದಾಖಲೆಗಳಲ್ಲಿ ಬದಲಾವಣೆಗಳನ್ನು ಮಾಡುವುದು ಅಥವಾ ದಾಖಲೆಗಳನ್ನು ತಿದ್ದುವುದು. ಈ ಪ್ರಕ್ರಿಯೆ ಪ್ರಮುಖವಾಗಿ ಕೆಲವು ಹೆಸರುಗಳನ್ನು ದಾಖಲೆಗಳಲ್ಲಿ ಹೊಸದಾಗಿ ಸೇರಿಸುವುದು ಅಥವಾ ಈಗಾಗಲೇ ಇರುವಂತಹ ಹೆಸರುಗಳನ್ನು ತೆಗೆದುಹಾಕುವುದು. ಎಲ್ಲಾ ಇಲಾಖೆಗಳನ್ನೊಳಗೊಂಡಂತೆ ಇದರ ಪ್ರಮಾಣ ಸರಿಸುಮಾರು ಶೇಕಡ ೭.೩೩ರಷ್ಟು, ಇದು ಮುಖ್ಯವಾಗಿ ಕಂದಾಯ ಇಲಾಖೆಯಲ್ಲಿ ವಿಶೇಷವಾಗಿ ಕೆಳಹಂತದ ವ್ಯವಸ್ಥೆಯಲ್ಲಿ ಈ ರೀತಿಯ ಅವ್ಯವಹಾರಗಳು ಹೆಚ್ಚು, (ಉದಾ: ಪಹಣಿ ಅಥವಾ ಖಾತೆಗಳಲ್ಲಿ ಹೆಸರುಗಳನ್ನು ಬದಲಾಯಿಸುವುದು ಇತ್ಯಾದಿ). ಇಂತಹ ಕೃತ್ಯಗಳ ಪ್ರಮಾಣದಲ್ಲಿ ಶೇಕಡ ೧೭ರಷ್ಟು ಗ್ರಾಮ ಲೆಕ್ಕಿಗರು ಮತ್ತು ಕಂದಾಯ ನಿರೀಕ್ಷಕರುಗಳು ಖಾತೆಗಳ ವರ್ಗಾವಣೆಯಲ್ಲಿ ಸರ್ಕಾರದ ನಿಗದಿತ ಶುಲ್ಕಕ್ಕಿಂತ ೩೦೦ ರಿಂದ ೪೦೦ ರೂ.ಗಳವರೆಗೆ ಹೆಚ್ಚಿನ ಅನಧಿಕೃತ ಹಣವನ್ನು ಪಡೆಯುತ್ತಾರೆ.

ಇದೇ ಲಕ್ಷಣಗಳು ಸಾರಿಗೆ ಇಲಾಖೆಯಲ್ಲಿ ವಾಹನಗಳ ನೊಂದಣಿ ಪ್ರಕ್ರಿಯೆಯಲ್ಲಿ ನೋಂದಣಾಧಿಕಾರಿಯವರ ಕಛೇರಿಯಲ್ಲಿ ದಸ್ತಾವೇಜುಗಳ ನೋಂದಣಿಯ ಸಂದರ್ಭದಲ್ಲಿ ವಾಣಿಜ್ಯ ತೆರಿಗೆ ಇಲಾಖೆಯ ವ್ಯಾಪಾರದ ನೋಂದಣೀಕರಣದಲ್ಲಿ ಈ ವಿಧದ ಭ್ರಷ್ಟಾಚಾರವನ್ನು ಕಾಣಬಹುದು. ಕಾನೂನುಬಾಹಿರವಾಗಿ ಮಾಹಿತಿಗಳ ಪೂರೈಕೆ ಅಥವಾ ದಾಖಲೆಗಳನ್ನು ಒದಗಿಸುವುದು ಸಹ ಇನ್ನೊಂದು ಪ್ರಕಾರದ ಭ್ರಷ್ಟಾಚಾರ ಎನ್ನಬಹುದು. ಒಟ್ಟಾರೆ ಭ್ರಷ್ಟಾಚಾರದ ಸ್ವರೂಪದಲ್ಲಿ ಇದರ ಒಟ್ಟಾರೆ ಪ್ರಮಾಣ ಸುಮಾರು ಶೇಕಡ ೬.೮೮ರಷ್ಟು, ಇದರಲ್ಲೂ ಸಹ ಕಂದಾಯ ಇಲಾಖೆ ಹೆಚ್ಚಿನ ಪ್ರಮಾಣವನ್ನು ಹೊಂದಿದೆ. ಹೆಚ್ಚೂ ಕಡಿಮೆ ಶೇಕಡ ೧/೩ರಷ್ಟು ಈ ಪ್ರಕಾರದ ಭ್ರಷ್ಟಾಚಾರ ಕಂದಾಯ ಇಲಾಖೆಯಲ್ಲಿದೆ ಎನ್ನಲಾಗಿದೆ. ಕಂದಾಯ ನಿರೀಕ್ಷಕರು ಮತ್ತು ಗ್ರಾಮ ಲೆಕ್ಕಾಧಿಕಾರಿಗಳು ಪಹಣಿ ಹಾಗೂ ಇತರೆ ದಾಖಲೆಗಳನ್ನು ಒದಗಿಸಲು ೧೦೦ ರಿಂದ ೧೫೦ ರೂ. ಗಳವರೆಗೆ ಹಣ ವಸೂಲಿ ಮಾಡುತ್ತಾರೆ.

ಕೆಳ ಗುಣಮಟ್ಟದ ಕಾಮಗಾರಿಗಳನ್ನು ಅಥವಾ ಸರಕುಗಳನ್ನು ಅನುಮೋದಿಸುವುದು ಅಥವಾ ಖರೀದಿ ಮಾಡುವುದು ಸಹ ಭ್ರಷ್ಟಾಚಾರದ ಮತ್ತೊಂದು ಬಗೆಯಾಗಿದೆ. ಇಂತಹ ಬಗೆಯ ಭ್ರಷ್ಟಾಚಾರವು ಸಾರ್ವಜನಿಕ ಕಾಮಗಾರಿ ಇಲಾಖೆ ಮತ್ತು ಖರೀದಿ ಇಲಾಖೆಗಳಲ್ಲಿ ಹೆಚ್ಚು ಪ್ರಚಲಿತದಲ್ಲಿದೆ. ಲೋಕೋಪಯೋಗಿ ಇಲಾಖೆಯು ಇಂತಹ ಭ್ರಷ್ಟಾಚಾರದಲ್ಲಿ ಹೆಚ್ಚು ಮುಂದಿದೆ. ಖರೀದಿ ಮತ್ತು ಮಾರಾಟಗಾರರಿಂದ, ಕಟ್ಟಡ ನಿರ್ಮಾಣ ಕಾಮಗಾರಿಯ ಗುತ್ತಿಗೆದಾರರಿಂದ ಇಂತಿಷ್ಟು ಶೇಕಡವಾರು ಪ್ರಮಾಣದಲ್ಲಿ ಲಂಚವನ್ನು ಈ ಇಲಾಖೆಯ ಅಧಿಕಾರಿಗಳು ಪಡೆಯುತ್ತಾರೆ. ಕಾಮಗಾರಿಗಳನ್ನು ಕಾರ್ಯರೂಪಕ್ಕೆ ತರಲು ಗುತ್ತಿಗೆದಾರರು ಅಥವಾ ಸರಕುಗಳನ್ನು ಸಾಗಣೆ ಮಾಡುವ ವ್ಯಾಪಾರಿಗಳಿಂದ ಅಧಿಕ ವೇತನ ಪಡೆಯುವುದು ಸಹ ಮತ್ತೊಂದು ಬಗೆಯ ಭ್ರಷ್ಟಾಚಾರವಾಗಿದೆ. ಈ ಬಗೆಯ ಭ್ರಷ್ಟಾಚಾರದ ಸರಿಸುಮಾರು ಶೇ. ೭.೩೩ ರಷ್ಟು. ಹಾಗಿದ್ದರೂ ಇದರ ಪ್ರಮಾಣವು ಎಲ್ಲಾ ಇಲಾಖೆಯನ್ನೊಳಗೊಂಡಂತೆ ಶೇ. ೨೨. ಲೋಕಾಯುಕ್ತ ಪ್ರಕಾರ ಈ ಮೇಲ್ಕಂಡ ಅವಧಿಯಲ್ಲಿ ಕಡಿಮೆ ತೆರಿಗೆ ನಿರ್ಧಾರ ಮಾಡುವ ಅಥವಾ ತೆರಿಗೆಯನ್ನು ಕಡಿಮೆ ಮಾಡುವ ಅಥವಾ ದಂಡ ವಿಧಿಸುವ, ಸರ್ಕಾರಿ ಆಸ್ತಿಯನ್ನು ಕಡಿಮೆ ಬೆಲೆಗೆ ಗುತ್ತಿಗೆ ಕೊಡುವುದು ಅಥವಾ ಮಾರಾಟ ಮಾಡುವುದು ಭ್ರಷ್ಟಾಚಾರದ ಮಗದೊಂದು ಸ್ವರೂಪವಾಗಿದೆ. ಎಲ್ಲಾ ಇಲಾಖೆಗಳ ಒಟ್ಟಾರೆ ಪ್ರಕರಣಗಳಲ್ಲಿ ಈ ರೀತಿಯ ಭ್ರಷ್ಟಾಚಾರದ ಪ್ರಮಾಣ ಶೇಕಡ ೩.೬೬ರಷ್ಟಿದೆ. ಇಂತಹ ಭ್ರಷ್ಟಾಚಾರದಲ್ಲಿ ವಾಣಿಜ್ಯ ತೆರಿಗೆ ಇಲಾಖೆಯು ಪ್ರಥಮ ಸ್ಥಾನ ಪಡೆದಿದೆ ಶೇಕಡ ೬೪.೭೦. ಅಲ್ಲದೆ ಇದು ನಗರಪಾಲಿಕೆಗಳಲ್ಲಿ ಮತ್ತು ಸಾರಿಗೆ ಇಲಾಖೆಗಳಲ್ಲಿ ಅನುಕ್ರಮವಾಗಿ ಶೇಕಡ ೪೨.೮೫ ಮತ್ತು ೨೮.೫೭ರ ಪ್ರಮಾಣವನ್ನು ಹೊಂದಿದೆ. ಕಾನೂನು ಬಾಹಿರ ಚಟುವಟಿಕೆಗಳಿಂದ ಸಂಭವಿಸುವ ಭ್ರಷ್ಟಾಚಾರದ ಪ್ರಮಾಣ ಒಟ್ಟು ಸಮತಲದಲ್ಲಿ ಸರಿಸುಮಾರು ಶೇಕಡ ೩.೨೧ರಷ್ಟಿದೆ. ಪೊಲೀಸ್ ಇಲಾಖೆಯು ಇದರಲ್ಲಿ ಮುಂಚೂಣಿ ಸ್ಥಾನದಲ್ಲಿದೆ (ಶೇಕಡ ೪೧.೩೭) ಹಾಗೂ ಅಬಕಾರಿ ಇಲಾಖೆಯು ಸಹ ಪೊಲೀಸ್ ಇಲಾಖೆಯ ಸರಿಸಮದಲ್ಲಿದೆ (ಶೇಕಡ ೪೦). ಈ ಇಲಾಖೆಗಳು ಸ್ಮಗ್ಲಿಂಗ್, ಮಾದಕ ವಸ್ತುಗಳ ಸಾಗಣೆ, ಕಪ್ಪು ಮಾರುಕಟ್ಟೆಗೆ ಉತ್ತೇಜನ ನೀಡುವುದು, ಕಳ್ಳಭಟ್ಟಿ ತಯಾರಿಕೆಗೆ ಪ್ರೋತ್ಸಾಹ ಮುಂತಾದ ಕೃತ್ಯಗಳಿಗೆ ಪರೋಕ್ಷವಾಗಿ ಉತ್ತೇಜನ ನೀಡುತ್ತವೆ.

ವೇತನ ನಿರ್ಧಾರಕ್ಕೆ ಸಂಬಂಧಿಸಿದಂತೆ ಶೇಕಡ ೧೪.೬೨ರಷ್ಟು, ಸಂಬಳದ ಬಟವಾಡೆ ಮತ್ತು ಬಿಡುಗಡೆಗೆ ಸಂಬಂಧಿಸಿದಂತೆ ಶೇಕಡ ೧೪.೬೨ರಷ್ಟು, ಬಡ್ತಿ ಶೇಕಡ ೧೦.೩೭ರಷ್ಟು, ಭತ್ಯೆ ಅಥವಾ ಸಾರಿಗೆ ಭತ್ಯೆ ಅಥವಾ ದಿನ ಭತ್ಯೆ ಅಥವಾ ವೈದ್ಯಕೀಯ ಖರ್ಚು ತುಂಬಿಕೊಡುವಿಕೆಗೆ ಸಂಬಂಧಿಸಿದಂತೆ, ಶೇಕಡ ೧೨.೭೩, ಸಿಬ್ಬಂದಿಯ ಪುನರ್ ನೇಮಕಕ್ಕೆ ಸಂಬಂಧಿಸಿದಂತೆ ಶೇಕಡ ೦೦.೯೪ರಷ್ಟು

ಹಾಗೂ ವರ್ಗಾವಣೆ ಪಡೆಯುವಲ್ಲಿನ ತೊಂದರೆಗೆ ಸಂಬಂಧಿಸಿದಂತೆ ಶೇಕಡ ೦.೪೭ರಷ್ಟು ಕುಂದುಕೊರತೆಗಳು ಲೋಕಾಯುಕ್ತಕ್ಕೆ ದಾಖಲಾಗಿವೆ. ಇಲ್ಲಿ ಗಮನಾರ್ಹ ಅಂಶವೆಂದರೆ ಸರ್ಕಾರಿ ಸಿಬ್ಬಂದಿಯು ತಮ್ಮ ಕರ್ತವ್ಯಕ್ಕೆ ಸಂಬಂಧಿಸಿದ ವೈಯಕ್ತಿಕ ವಿಷಯಗಳಿಗೆ ಸಂಬಂಧಿಸಿದ ಕುಂದುಕೊರತೆಗಳ ಬಗ್ಗೆ ದೂರನ್ನು ನೀಡಿದ್ದಾರೆ ಹೊರತು ತಮ್ಮ ಸಹೋದ್ಯೋಗಿಗಳಿಂದಾಗುವ ಅಥವಾ ಮೇಲಧಿಕಾರಿಗಳಿಂದ ಉಂಟಾಗುವ ಕುಂದುಕೊರತೆಗಳ ಬಗ್ಗೆ ಯಾವುದೇ ಪ್ರಕರಣ ದಾಖಲಾಗಿಲ್ಲ.

ಇನ್ನು ಸಾರ್ವಜನಿಕರಿಂದ ಜಾಗೃತ ಆಯೋಗಕ್ಕೆ ನೀಡಲ್ಪಟ್ಟ ಪ್ರಕರಣಗಳನ್ನು ಗಮನಿಸುವುದಾದರೆ ವಿದ್ಯಾರ್ಥಿವೇತನ ಮತ್ತು ಅಂಕಗಳ ಮರು ಎಣಿಕೆಗೆ ಸಂಬಂಧಿಸಿದಂತೆ ಶೇಕಡ ೧೨.೩೫, ಮರಣ ಪ್ರಮಾಣ ಪತ್ರ ನೀಡಿಕೆಯಲ್ಲಿನ ವಿಳಂಬಕ್ಕೆ ಸಂಬಂಧಿಸಿದಂತೆ ಶೇಕಡ ೦೦.೯೪ರಷ್ಟು, ತಿರಸ್ಕೃತ ಚೆಕ್‌ಗಳಿಗೆ ಸಂಬಂಧಿಸಿದಂತೆ ಶೇಕಡ ೦೦.೪೭ರಷ್ಟು, ಭೂಸ್ವಾಧೀನದಿಂದಾದ ಪರಿಹಾರ ಕೋರಿಕೆಗೆ ಸಂಬಂಧಿಸಿದಂತೆ ಶೇಕಡ ೦೦.೯೪ರಷ್ಟು, ಪರವಾನಗಿ ಮತ್ತು ಅನುಜ್ಞಾ ಪತ್ರಗಳ ಮಂಜೂರಾತಿಗಾಗಿ ಶೇಕಡ ೦೦.೯೪ರಷ್ಟು, ವಿಮೆಯ ಮಂಜೂರಾತಿಗೆ ಸಂಬಂಧಿಸಿದಂತೆ ೦೨.೮೩ರಷ್ಟು ಹಾಗೂ ಸಾರ್ವಜನಿಕರಿಗೆ ಆಡಳಿತ ಅಥವಾ ಸರ್ಕಾರಿ ಸಿಬ್ಬಂದಿಯಿಂದಾಗುವ ಶೋಷಣೆ ಅಥವಾ ಅನ್ಯಾಯದಿಂದ ರಕ್ಷಣೆ ಕೋರಿಕೆಗೆ ಸಂಬಂಧಿಸಿದಂತೆ ಶೇಕಡ ೦೧.೪೧ರಷ್ಟು ಪ್ರಮಾಣದಲ್ಲಿ ಕುಂದುಕೊರತೆಗಳು ಸ್ವೀಕೃತವಾಗಿವೆ.

ದಿನ ಕಳೆದಂತೆ ಕರ್ನಾಟಕದಲ್ಲಿ ಭ್ರಷ್ಟಾಚಾರವು ಒಂದು ಗಂಭೀರ ಸ್ವರೂಪದ ಸಮಸ್ಯೆಯಾಗಿ ಬೆಳೆಯುತ್ತಿದ್ದು, ಈ ಹಿಂದೆ ಸ್ಥಾಪಿಸಿದ ರಾಜ್ಯ ಜಾಗೃತ ಆಯೋಗ ಹೆಚ್ಚುತ್ತಿರುವ ಭ್ರಷ್ಟಾಚಾರವನ್ನು ಹಾಗೂ ದುರಾಡಳಿತವನ್ನು ನಿಯಂತ್ರಿಸುವಲ್ಲಿ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುವಲ್ಲಿ ವಿಫಲವಾಯಿತು. ಇದಕ್ಕೆ ರಾಜಕೀಯವಾಗಿ ಹಾಗೂ ಆಡಳಿತಾತ್ಮಕವಾಗಿ ಹಲವಾರು ಕಾರಣಗಳು ಹಿನ್ನೆಲೆಯಾಗಿವೆ. ಆಳವಾಗಿ ಬೇರೂರುತ್ತಿರುವ ಭ್ರಷ್ಟಾಚಾರವನ್ನು ನಿಯಂತ್ರಣ ಮಾಡುವಲ್ಲಿ ಕರ್ನಾಟಕ ಸರ್ಕಾರ ಕೈಗೊಂಡ ಪ್ರಮುಖ ಕ್ರಮಗಳಲ್ಲಿ ಲೋಕಾಯುಕ್ತ ಸಂಸ್ಥೆಯ ಸ್ಥಾಪನೆಯು ಒಂದು ಪ್ರಮುಖವಾದ ಪ್ರಯತ್ನವಾಗಿದೆ ಎನ್ನಬಹುದು. ಈ ಪ್ರಯತ್ನ ೧೯೮೬ ರಿಂದೀಚೆಗೆ ಆದ ಅತ್ಯಂತ ಗಮನಾರ್ಹವಾದ ಪ್ರಯತ್ನವಾಗಿದೆ. ಏಕೆಂದರೆ ಭ್ರಷ್ಟಾಚಾರ ನಿರ್ಮೂಲನೆಗೆ ವೈಜ್ಞಾನಿಕ ನೆಲೆಗಟ್ಟಿನಲ್ಲಿ, ಕಾನೂನಿನ ನೆಲೆಗಟ್ಟಿನಲ್ಲಿ ಒಂದು ಸಮರ್ಪಕವಾದ ಹಾಗೂ ಸುಭದ್ರ ಬುನಾದಿಯನ್ನು ಹಾಕಿಕೊಟ್ಟ ಅವಧಿ ಇದಾಗಿದೆ. ರಾಜ್ಯ ಜಾಗೃತ ಆಯೋಗದ ಸ್ಥಾನದಲ್ಲಿ ರಚಿತವಾದ ಕರ್ನಾಟಕ ಲೋಕಾಯುಕ್ತಕ್ಕೆ ಒಂದು ನಿರ್ದಿಷ್ಟವಾದ ಕಾಯ್ದೆಯ ಸ್ವರೂಪ ದೊರಕಿ ತನ್ನದೇ ಕಾರ್ಯ ವೈಖರಿಯ ಪ್ರಭಾವದಿಂದ

ಸರ್ಕಾರಿ ಸಿಬ್ಬಂದಿಯ ದುರಾಡಳಿತ ಹಾಗೂ ಭ್ರಷ್ಟಾಚಾರದ ವಿರುದ್ಧ ಕಾರ್ಯಾಚರಣೆ ಮಾಡಲು ಹೆಚ್ಚಿನ ಶಕ್ತಿಯನ್ನು ವರ್ಧಿಸಿಕೊಂಡಿದ್ದಿತು.

ದುರಾಡಳಿತದ ಪ್ರಭಾವದಿಂದ ಉಂಟಾಗುತ್ತಿದ್ದ ಕುಂದುಕೊರತೆಗಳನ್ನು ನಿವಾರಿಸಲು 'ಸಾರ್ವಜನಿಕ ಕುಂದು-ಕೊರತೆ ನಿವಾರಣಾ ಸಂಸ್ಥೆ' (Public Grievances Organization) ಗಳನ್ನು ಸ್ಥಾಪಿಸಲಾಗಿದ್ದಿತು. ೧೯೮೩ರಲ್ಲಿ ಇದನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯಲ್ಲಿ ಸ್ಥಾಪಿಸಲಾಯಿತು. ಸರ್ಕಾರದ ಮುಖ್ಯ ಕಾರ್ಯದರ್ಶಿ ಈ ಸಂಸ್ಥೆಯ ಒಟ್ಟಾರೆ ಜವಾಬ್ದಾರಿಯನ್ನು ಹೊಂದಿದ್ದು, ಇವರು ಇದರ ಮುಖ್ಯಸ್ಥರಾಗಿದ್ದರು. ಕುಂದುಕೊರತೆಗಳ ನಿವಾರಣೆಯ ಅಧಿಕಾರಿಗಳು ಸಚಿವಾಲಯ ಹಂತದ ಮತ್ತು ಕ್ಷೇತ್ರ ಹಂತದ ಇಲಾಖೆಗಳಿಗೆ ನಾಮಾಂಕಿತಗೊಳ್ಳುತ್ತಿದ್ದರು. ಡೆಪ್ಯೂಟಿ ಕಮೀಷನರ್, ಅಸಿಸ್ಟೆಂಟ್ ಕಮೀಷನರ್ ಹಾಗೂ ತಹಶೀಲ್ದಾರ್‌ರು ತಮ್ಮ ಅಧಿಕಾರ ವ್ಯಾಪ್ತಿಯಲ್ಲಿ ಬರುವ ಕುಂದು ಕೊರತೆಗಳ ನಿವಾರಣಾ ಜವಾಬ್ದಾರಿಯನ್ನು ಹೊಂದಿರುವ ಅಧಿಕಾರಿಗಳಾಗಿ ಕಾರ್ಯನಿರ್ವಹಿಸುತ್ತಿದ್ದರು. ಇವರುಗಳು ಜನರಿಂದ ಕುಂದುಕೊರತೆಗಳಿಗೆ ಸಂಬಂಧಿಸಿದಂತೆ ದೂರನ್ನು ಪಡೆದ ನಂತರ ಸಂಬಂಧಿಸಿದ ಇಲಾಖೆಗಳ ಗಮನಕ್ಕೆ ತಂದು ಜನರ ಹಾಗೂ ಇಲಾಖೆಗಳ ನಡುವೆ ನಿರಂತರ ಸಂಪರ್ಕವನ್ನು ಏರ್ಪಡುವಂತೆ ಮಾಡುತ್ತಿರಬೇಕು. ಸಂಬಂಧಿಸಿದ ಇಲಾಖೆಯ ಕುಂದುಕೊರತೆಗಳ ನಿವಾರಣಾ ಅಧಿಕಾರಿಗಳಿಗೆ ಹಾಗೂ ದೂರು ಕೊಟ್ಟ ಸಾರ್ವಜನಿಕರಿಗೆ, ಆಪಾದಿತ ಸಿಬ್ಬಂದಿಯ ವಿರುದ್ಧ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂಬ ಮಾಹಿತಿಯನ್ನು ನಿಗದಿತ ಸಮಯದಲ್ಲಿ ಒದಗಿಸಬೇಕು. ಕುಂದುಕೊರತೆಗಳ ನಿವಾರಣಾ ಅಧಿಕಾರಿಯು ವಿಲೇವಾರಿಯಾಗುವಂತಹ ದೂರುಗಳನ್ನು, ಈ ನಿಟ್ಟಿನಲ್ಲಾದ ಕಾರ್ಯ ಸಾಧನೆಯನ್ನು ನಿಯತಕಾಲಿಕವಾಗಿ ಪರಿಶೀಲನೆಯನ್ನು ಮಾಡಬೇಕು. ನಂತರದ ಅವಧಿಯಲ್ಲಿ ಅಂದರೆ, ೧೯೮೬ರಲ್ಲಿ ರಾಮಕೃಷ್ಣ ಹೆಗಡೆಯವರ ಅವಧಿಯಲ್ಲಿ ಲೋಕಾಯುಕ್ತ ಸಂಸ್ಥೆಯು ಅಸ್ತಿತ್ವಕ್ಕೆ ಬಂದಿತು.

ಇದೇ ಹಂತದಲ್ಲಿ ಭ್ರಷ್ಟಾಚಾರ ನಿಯಂತ್ರಣದ ಉದ್ದೇಶದಿಂದ ಇನ್ನೂ ಹಲವು ಪ್ರಮುಖ ಕ್ರಮಗಳನ್ನು ಕೈಗೊಳ್ಳಲಾಯ್ತು. ಇಂತಹ ನಿಟ್ಟಿನಲ್ಲಿ ಈ ಹಿಂದಿದ್ದ, **'ದಕ್ಷತ ಪರಿಶೋಧನೆ ಮತ್ತು ಜಾಗೃತ ದಳ'** (Efficiency Audit and Vigilance Bureau) ಈ ಸಂಸ್ಥೆಯನ್ನು ಮತ್ತೆ ಕರ್ನಾಟಕ ಸರ್ಕಾರವು ೧೯೯೦ರಲ್ಲಿ ಸ್ಥಾಪಿಸಿತು. ಇದರ ಮುಖ್ಯ ಉದ್ದೇಶ ಭ್ರಷ್ಟಾಚಾರವನ್ನು ಕಿತ್ತೊಗೆಯುವುದು ಹಾಗೂ ಆಡಳಿದಲ್ಲಿ ದಕ್ಷತೆಯನ್ನು ಹಾಗೂ ಹೊಣೆಗಾರಿಕೆಯನ್ನು, ಜವಾಬ್ದಾರಿಯನ್ನು ತರುವುದಾಗಿದೆ. ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳು ಇದರ ಮುಖ್ಯಸ್ಥರಾಗಿದ್ದು, ಐಜಿಪಿ ಶ್ರೇಣಿಯ ಹಿರಿಯ ಪೊಲೀಸ್ ಅಧಿಕಾರಿ ಹಾಗೂ ಹಿರಿಯ 'ಎ' ದರ್ಜೆಯ ಹಣಕಾಸಿನ ಇಲಾಖೆಯ ಅಧಿಕಾರಿ ಈ

ಸಂಸ್ಥೆಯ ಇನ್ನಿತರೆ ಸದಸ್ಯರುಗಳಾಗಿರುತ್ತಾರೆ. ಈ ಸಂಸ್ಥೆಯು ಪ್ರಮುಖವಾಗಿ ಸರ್ಕಾರಿ ಕಛೇರಿಗಳಲ್ಲಿನ ಹಾಗೂ ಇಲಾಖೆಗಳಲ್ಲಿನ ಭ್ರಷ್ಟಾಚಾರಕ್ಕೆ ಸಂಬಂಧಿಸಿದ ಪ್ರಕರಣಗಳು, ಆಡಳಿತದಲ್ಲಿ ಅಲಕ್ಷ್ಯ ಅಥವಾ ಅಜಾಗರೂಕತೆಯ ಬಗ್ಗೆ, ಅಧಿಕಾರದ ಸ್ಥಾನಮಾನಕ್ಕೆ ಚ್ಯುತಿ ಉಂಟಾಗುವಂತೆ ಮಾಡುವ ಕೃತ್ಯಗಳ ಬಗ್ಗೆ, ಅದಕ್ಷತೆ ಮತ್ತು ಅನಾವಶ್ಯಕ ವೆಚ್ಚಗಳ ಬಗ್ಗೆ ಹಾಗೂ ಬೇಜವಾಬ್ದಾರಿತನದ ಬಗ್ಗೆ ತನಿಖೆ ಹಾಗೂ ವಿಚಾರಣೆ ಮಾಡುವ ಕಾರ್ಯ ನಿರ್ವಹಿಸುತ್ತದೆ.

ಭ್ರಷ್ಟಾಚಾರದ ಆರೋಪದ ಮೇಲೆ ಸರ್ಕಾರಿ ಸಿಬ್ಬಂದಿಯ ವಿರುದ್ಧ ತನಿಖೆಯನ್ನು ಮಾಡುವ, ದುರಾಡಳಿತ ಹಾಗೂ ಸರ್ಕಾರಿ ಹಣದ ದುರುಪಯೋಗಕ್ಕೆ ಪ್ರೇರಣೆ ನೀಡುವ ಹಾಗೂ ಪಡೆಯುವ ಸರ್ಕಾರಿ ಅಧಿಕಾರಿಗಳ ವಿರುದ್ಧ ವಿಚಾರಣೆಯನ್ನು ನಡೆಸುತ್ತದೆ. ಅಲ್ಲದೆ EAVBಯು ಸಾರ್ವಜನಿಕ ಹಿತಾಸಕ್ತಿ ಪ್ರಕರಣಗಳಾದಂತಹ ಮಹಿಳೆಯರು, ಅಲ್ಪ ಸಂಖ್ಯಾತರು, ಪರಿಶಿಷ್ಟ ಜಾತಿ ಅಥವಾ ಪಂಗಡಕ್ಕೆ ಸೇರಿದ ವ್ಯಕ್ತಿಗಳ ಮೇಲೆ ದೌರ್ಜನ್ಯ, ನಿಂದನೆಗಳಂತಹ ಆರೋಪಗಳ ಬಗ್ಗೆ, ಸಾಮಾಜಿಕ, ಆರ್ಥಿಕ ಸಮಸ್ಯೆಗಳ ಬಗ್ಗೆ ತನಿಖೆಯುನ್ನು ನಡೆಸಿ, ಅದಕ್ಕೆ ಸಂಬಂಧಿಸಿದ ಸೂಕ್ತ ಪರಿಹಾರೋಪಾಯಗಳನ್ನು, ಸಲಹೆಗಳನ್ನು ನೀಡುವ ಕಾರ್ಯನಿರ್ವಹಿಸುತ್ತದೆ. ಇಂತಹ ತನಿಖೆ ಅಥವಾ ವಿಚಾರಣೆಗಳು ಗುರುತರ ಪ್ರಕರಣಗಳಿಗೆ ಮಾತ್ರ ಸೀಮಿತವಾಗಿರುತ್ತದೆ.

ಸರ್ಕಾರಿ ಕಛೇರಿಗಳಿಗೆ ಅನಿರೀಕ್ಷಿತ ಅಥವಾ ಹಠಾತ್ ಭೇಟಿಗಳನ್ನು ನೀಡಿ ಕಛೇರಿಯ ಕಾರ್ಯದಕ್ಷತೆಯ ಬಗ್ಗೆ ವಿಚಾರಣೆ ಮಾಡುವ ಹಾಗೂ ಆಡಳಿತದಲ್ಲಿ ದಕ್ಷತೆಯನ್ನು ತರುವ ಉದ್ದೇಶದಿಂದ ಪ್ರಸ್ತುತದಲ್ಲಿರುವ ಕಾನೂನು, ನಿಯಮಾವಳಿಗಳ ಮತ್ತು ಕಾರ್ಯವಿಧಾನದ ಸೂಕ್ತ ಬದಲಾವಣೆಗೆ ಸಲಹೆಗಳನ್ನು ನೀಡುತ್ತದೆ. ಇದು ಸರ್ಕಾರಿ ಕಾರ್ಯಕ್ರಮಗಳ ಮತ್ತು ಯೋಜನೆಗಳ ಗುರಿಸಾಧನೆಯ ಬಗ್ಗೆ ಅರಿಯಲು ಹಾಗೂ ಇಂತಹ ಕಾರ್ಯಕ್ರಮಗಳು ಮತ್ತು ಯೋಜನೆಗಳು ಯಶಸ್ವಿಯಾಗಲು ಅಗತ್ಯವಿರುವ ಸಲಹೆಗಳನ್ನು ನೀಡಲು ಕಾರ್ಯನಿರ್ವಹಣಾ ಪರಿಶೋಧನೆಯನ್ನು ನಡೆಸುತ್ತವೆ. ಉದಾಹರಣೆಗೆ; ೧೯೯೧ರಲ್ಲಿ ಜವಹಾರ್‌ಲಾಲ್ ರೋಜ್‌ಗಾರ್ ಯೋಜನೆ (ಜೆಆರ್‌ವೈ), ಸಮಗ್ರ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮ (ಐಆರ್‌ಡಿಪಿ) ಗಳಂತಹ ಕಾರ್ಯಕ್ರಮಗಳ ಕಾರ್ಯರೂಪಕ್ಕೆ ಸಂಬಂಧಿಸಿದಂತೆ ಹಲವು ಬಾರಿ ತಪಾಸಣೆಯನ್ನು ಮಾಡಿದ್ದಿತು.

ಮೇಲ್ಕಂಡಂತೆ ಕರ್ನಾಟಕ ಸರ್ಕಾರವು ಭ್ರಷ್ಟಾಚಾರ ನಿರ್ಮೂಲನೆಗಾಗಿ ಹಲವಾರು ರೀತಿಯ ಕ್ರಮಗಳನ್ನು ಕೈಗೊಂಡಿದ್ದು, ಭ್ರಷ್ಟಾಚಾರದ ಬಗ್ಗೆ ಜನರಲ್ಲಿ ಅರಿವು ಮೂಡಿಸಲು ಹಾಗೂ ಅಧಿಕಾರಿಗಳಲ್ಲಿ ಜಾಗೃತಿ ಮೂಡಿಸಲು ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿರುವುದನ್ನು ಇಂದಿಗೂ ಸಹ ಕಾಣಬಹುದು. ಆಡಳಿತದಲ್ಲಿ ಪಾರದರ್ಶಕತೆಯನ್ನು, ದಕ್ಷತೆಯನ್ನು, ವೇಗವನ್ನು ತರುವ ಪ್ರಯತ್ನದ

ಮೂಲಕ ದುರಾಡಳಿತವನ್ನು ದೂರ ಮಾಡಿ, ಭ್ರಷ್ಟಾಚಾರವನ್ನು ನಿಯಂತ್ರಿಸಲು ವಿವಿಧ ಕ್ರಮಗಳನ್ನು ಕೈಗೊಳ್ಳುತ್ತಿದೆ.

ಈ ರೀತಿಯ ಪ್ರಯತ್ನದ ಹಂತದಲ್ಲಿ (೧೯೪೬ ರಿಂದ ೧೯೬೫), **'ದಕ್ಷತಾ ಮತ್ತು ಪರಿಶೋಧನಾ ವಿಭಾಗ'**ದ ಸ್ಥಾಪನೆ ಪ್ರಮುಖವಾದುದಾಗಿದೆ. ಈ ಹಂತದಲ್ಲಿ ಭ್ರಷ್ಟಾಚಾರವನ್ನು ನಿಯಂತ್ರಿಸುವ ಸಲುವಾಗಿ ಆರೋಪಿತ ಸರ್ಕಾರಿ ಸಿಬ್ಬಂದಿ ಅಥವಾ ಅಧಿಕಾರಿಗೆ, ಸೂಕ್ತ ತನಿಖೆಯ ನಂತರ ಶಿಕ್ಷೆ ವಿಧಿಸುವ ಪರಿಕಲ್ಪನೆಯನ್ನು ಕಾಣಬಹುದು. ಸರ್ಕಾರಿ ಇಲಾಖೆಗಳಲ್ಲಿ ನಡೆಯುವ ಅಕ್ರಮಗಳನ್ನು, ದುಷ್ಕೃತ್ಯಗಳನ್ನು ಪತ್ತೆ ಹಚ್ಚಿ ಅದರ ವಿರುದ್ಧ ಕ್ರಮಗಳನ್ನು ಕೈಗೊಳ್ಳುವ ಕಾರ್ಯವನ್ನು ದಕ್ಷತಾ ಮತ್ತು ಪರಿಶೋಧನಾ ವಿಭಾಗ ನಿರ್ವಹಿಸುತ್ತಿತ್ತು ಹಾಗೂ ಆಡಳಿದಲ್ಲಿ ದಕ್ಷತೆಯನ್ನು ಸಾಧಿಸಲು ಅಸ್ತಿತ್ವದಲ್ಲಿರುವ ಸರ್ಕಾರಿ ನಿಯಮಾವಳಿಗಳನ್ನು, ಕ್ರಿಯಾ ವಿಧಾನಗಳನ್ನು ಪರಿಶೀಲಿಸಿ ಅಗತ್ಯವಿರುವ ಬದಲಾವಣೆಗಾಗಿ ಸಲಹೆಗಳನ್ನು ನೀಡುವ ಕಾರ್ಯನಿರ್ವಹಿಸುತ್ತಿತ್ತು. ಆದರೆ ಈ ಸಂಸ್ಥೆಗೆ ಭ್ರಷ್ಟಾಚಾರದ ವಿರುದ್ಧ ಸಮಗ್ರವಾಗಿ ಕಾರ್ಯಪ್ರವೃತ್ತವಾಗಲು ಅಗತ್ಯವಾದ ಸ್ವಾಯತ್ತ ಅಧಿಕಾರವಾಗಲೀ ಅಥವಾ ಸ್ವತಂತ್ರ ಸ್ಥಾನಮಾನವಾಗಲೀ ಇಲ್ಲದಿದ್ದದ್ದು, ಇದರ ಕೊರತೆಗಳಲ್ಲಿ ಕಂಡುಬರುವ ಪ್ರಮುಖ ಅಂಶಗಳಾಗಿವೆ.

ದ್ವಿತೀಯ ಹಂತದಲ್ಲಿ (೧೯೬೫ ರಿಂದ ೧೯೮೬), ದುರಾಡಳಿತದಿಂದ ಉದ್ಭವವಾಗುತ್ತಿದ್ದ ಕುಂದು-ಕೊರತೆಗಳು ಹಾಗೂ ಭ್ರಷ್ಟಾಚಾರವನ್ನು ನಿಯಂತ್ರಿಸುವ ಸಲುವಾಗಿ **ರಾಜ್ಯ ಜಾಗೃತದಳವನ್ನು** (State Vigilance Commission) ಸ್ಥಾಪಿಸಲಾಯಿತು. ಭ್ರಷ್ಟಾಚಾರ ನಿಯಂತ್ರಣಕ್ಕೋಸ್ಕರ ಈಗಾಗಲೇ ಅಸ್ತಿತ್ವದಲ್ಲಿದ್ದ ಭ್ರಷ್ಟಾಚಾರ ವಿರೋಧ ದಳ ಇದರೊಂದಿಗೆ ಸಮ್ಮಿಳಿತಗೊಂಡಿತು. ಜಾಗೃತ ಆಯೋಗಕ್ಕೆ ಸರ್ಕಾರಿ ಅಧಿಕಾರಿಗಳ ವಿರುದ್ಧ ತನಿಖೆ ನಡೆಸಿ, ಸರ್ಕಾರಕ್ಕೆ ವರದಿ ಸಲ್ಲಿಸುವ ಹಾಗೂ ಕ್ರಮಕ್ಕೆ ಅಥವಾ ಶಿಕ್ಷೆಗೆ ಶಿಫಾರಸ್ಸು ಮಾಡುವ ಅಧಿಕಾರವಿದ್ದರೂ ಸಹ ಇದಕ್ಕೆ ಯಾವುದೇ ರೀತಿಯ ಕಾಯ್ದೆಯ ಸ್ವರೂಪದ ಹಾಗೂ ಸಂವಿಧಾನಿಕ ಸ್ಥಾನಮಾನಗಳು ಇಲ್ಲದ ಕಾರಣ ಇದು ಸಹ ಹೆಚ್ಚು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗಲಿಲ್ಲ ಎನ್ನಬಹುದು.

ತೃತೀಯ ಹಂತದಲ್ಲಿ (೧೯೮೬) **ಲೋಕಾಯುಕ್ತ** ಸಂಸ್ಥೆಯ ಸ್ಥಾಪನೆಯ ಮೂಲಕ ಭ್ರಷ್ಟಾಚಾರ ನಿಯಂತ್ರಣದ ಸಲುವಾಗಿ ಪ್ರಮುಖ ಪ್ರಯತ್ನಗಳು ನಡೆದಿವೆ. ಅಂತಹ ಪ್ರಯತ್ನದಲ್ಲಿ ಲೋಕಾಯುಕ್ತ ಸಂಸ್ಥೆಯ ಸ್ಥಾಪನೆ ಒಂದು ಪ್ರಮುಖವಾದ ಪ್ರಯತ್ನ ಎನ್ನಬಹುದು. ಲೋಕಾಯುಕ್ತ ಸಂಸ್ಥೆಯನ್ನು ಸ್ಥಾಪಿಸುವುದರ ಮೂಲಕ ಕರ್ನಾಟಕ ಸರ್ಕಾರವು ಭ್ರಷ್ಟಾಚಾರದ ವಿರುದ್ಧ ಬೃಹತ್ ಸಮರವನ್ನು ಸಾರಿತು ಎನ್ನಬಹುದು. ಲೋಕಾಯುಕ್ತರು ಹಾಗೂ ಉಪಲೋಕಾಯುಕ್ತರು ಅನುಕ್ರಮವಾಗಿ ಲೋಕಾಯುಕ್ತ ಸಂಸ್ಥೆಯ ಉನ್ನತ ಸ್ಥಾನಗಳನ್ನು ಅಲಂಕರಿಸಿದ್ದು, ಭ್ರಷ್ಟಾಚಾರದ ನಿಯಂತ್ರಣದಲ್ಲಿ

ಇವರ ಜವಾಬ್ದಾರಿ ಅತ್ಯಂತ ಪ್ರಮುಖವಾದುದಾಗಿದೆ. ೧೯೮೬ರಲ್ಲಿ ಕಾರ್ಯರೂಪಕ್ಕೆ ಬಂದಾಗಿನಿಂದ ಹಿಡಿದು ಪ್ರಸ್ತುತ ಅವಧಿಯಲ್ಲಿಯೂ ಸಹ ಲೋಕಾಯುಕ್ತ ಸಂಸ್ಥೆಯು ಸರ್ಕಾರಿ ಸಿಬ್ಬಂದಿಯಲ್ಲಿ ನಡುಕ ಹುಟ್ಟಿಸಿದೆ. ಆದರೆ ಇದಕ್ಕೂ ಸಹ 'ಸ್ವಯಂ ಪ್ರೇರಿತ' ಅಧಿಕಾರವಿಲ್ಲದಿರುವುದು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗದಿರುವುದಕ್ಕೆ ಕಾರಣವಾಗಿದೆ.

ಭ್ರಷ್ಟಾಚಾರ ನಿಯಂತ್ರಣದ ಸಲುವಾಗಿ ೧೯೯೦ರಲ್ಲಿ ಸ್ಥಾಪಿತವಾದ EAVB (Efficiency Audit and Vigilence Bureau) ಸಹ ಒಂದು ಪ್ರಮುಖ ಪ್ರಯತ್ನವಾಗಿದೆ. ಇದು ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳ ಮುಖ್ಯಸ್ಥಿಕೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಆಡಳಿತದಲ್ಲಿ ದಕ್ಷತೆಯನ್ನು ಸಾಧಿಸಲು, ಪ್ರಚಲಿತದಲ್ಲಿರುವ ಆಡಳಿತಾತ್ಮಕ ನಿಯಮಾವಳಿಗಳನ್ನು ಮತ್ತು ಕಾರ್ಯವಿಧಾನಗಳನ್ನು ಸರಳೀಕರಣಗೊಳಿಸಿ, ಸುಗಮವಾಗಿ ಆಡಳಿತಯಂತ್ರ ನಡೆದುಕೊಂಡು ಹೋಗುವ ನಿಟ್ಟಿನಲ್ಲಿ ಅಗತ್ಯವಿರುವ ಸಲಹೆಗಳನ್ನು ನೀಡುತ್ತದೆ. ಆದರೆ ಈ ಸಂಸ್ಥೆಗೂ ಸಹ ದುರಾಡಳಿದ ವಿರುದ್ಧವಾಗಲೀ ಅಥವಾ ಭ್ರಷ್ಟಾಚಾರದ ವಿರುದ್ಧವಾಗಲೀ ಯಾವುದೇ ರೀತಿಯಲ್ಲಿ ಸಮಗ್ರ ತನಿಖೆಯನ್ನು ಕೈಗೊಳ್ಳುವುದಕ್ಕಾಗಲೀ ಅಥವಾ ಸ್ವಯಂ ಪ್ರೇರಿತವಾಗಿ ಕ್ರಮ ಕೈಗೊಳ್ಳುವುದಕ್ಕಾಗಲೀ ಅವಕಾಶವಿಲ್ಲ. ಆದುದರಿಂದ ಭ್ರಷ್ಟಾಚಾರದ ನಿಯಂತ್ರಣದ ನಿಟ್ಟಿನಲ್ಲಿ ಸರ್ಕಾರ ಇದುವರೆಗೂ ಸ್ಥಾಪಿಸಿದ ಯಾವುದೇ ಸಂಸ್ಥೆಗೆ 'ಸ್ವಯಂ ಪ್ರೇರಿತ ಅಧಿಕಾರ' ಇಲ್ಲದಿರುವುದು. ಭ್ರಷ್ಟ ಅಧಿಕಾರಿಗಳು ದಿನೇ ದಿನೇ ಶ್ರೀಮಂತರಾಗುತ್ತಿರುವುದಕ್ಕೆ, ದುರಾಡಳಿತ ಹೆಚ್ಚಾಗುತ್ತಿರುವುದಕ್ಕೆ, ಆಡಳಿತದಲ್ಲಿ ಅದಕ್ಷತೆ ಮೂಡುತ್ತಿರುವುದಕ್ಕೆ ಕಾರಣವಾಗಿದೆ ಎನ್ನಬಹುದು. ಭ್ರಷ್ಟಾಚಾರದ ನಿಯಂತ್ರಣ ಸಂಸ್ಥೆಗಳಿಗೆ ಸ್ವಯಂಪ್ರೇರಿತ ಅಧಿಕಾರ ನೀಡದೆ ಇದ್ದರೆ, ಈ ನಿಟ್ಟಿನಲ್ಲಿ ಕೈಗೊಳ್ಳುವ ಪ್ರಯತ್ನಗಳೆಲ್ಲವೂ ಅಪ್ರಯೋಜಕವಾಗುತ್ತದೆ. ಆದುದರಿಂದ ಭ್ರಷ್ಟಾಚಾರ ನಿಯಂತ್ರಣದ ನಿಟ್ಟಿನಲ್ಲಿ ಸ್ಥಾಪಿತವಾಗಿ ಅಸ್ತಿತ್ವದಲ್ಲಿರುವ ಸಂಸ್ಥೆಗಳಿಗೆ ಸ್ವಯಂಪ್ರೇರಿತ ಅಧಿಕಾರವನ್ನು ನೀಡುವುದು ಅತ್ಯಂತ ಸೂಕ್ತ.

ಉತ್ತಮ ಆಡಳಿತ ಪಡೆಯುವುದು ನಮ್ಮೆಲ್ಲರ ಹಕ್ಕು ಎಂಬ ಘೋಷಣೆಯೊಂದಿಗೆ ಲೋಕಾಯುಕ್ತವು ಜನವರಿ ೧೦, ೨೦೧೪ ಲೋಕಾಯುಕ್ತ ಸಂಸ್ಥಾಪನಾ ದಿನ ಆಚರಿಸಿತು. ಉತ್ತಮ ಆಡಳಿತ ಪ್ರವರ್ಧನೆ ಇದರ ಮುಖ್ಯ ಆಶಯವಾಗಿತ್ತು.

ಅಭಿವೃದ್ಧಿ ಯೋಜನೆಗಳ ಪ್ರಯೋಜನಗಳು ಸಾಮಾನ್ಯ ಜನಸಮುದಾಯಗಳಿಗೆ ಅದರಲ್ಲೂ ಮುಖ್ಯವಾಗಿ ಅವಕಾಶ ವಂಚಿತ ವರ್ಗಗಳಿಗೆ ತಲುಪಿಸುತ್ತಿರುವುದನ್ನು ಖಾತ್ರಿಪಡಿಸಿಕೊಳ್ಳಲು ಉತ್ತಮ ಆಡಳಿತ ಅತ್ಯಗತ್ಯ. ಒಂದು ಪರಿಣಾಮಕಾರಿಯಾದ ಕ್ರಿಯಾಶೀಲವಾದ ಜಾಗರೂಕತಾ ವ್ಯವಸ್ಥೆಯು ಆಡಳಿತದ ಗುಣಮಟ್ಟವನ್ನು ಉತ್ತಮ ಪಡಿಸಲು ಸಾಕಷ್ಟು ಕೊಡುಗೆಗಳನ್ನು ನೀಡಬಲ್ಲುದು. ಇದರಿಂದ

ಸಾರ್ವಜನಿಕ ಸೇವಕರಲ್ಲಿ ಹಾಗೂ ನಾಗರಿಕರಲ್ಲಿ ಹೆಚ್ಚಿನ ಜಾಗೃತಿ ಮೂಡಿಸಲು, ಹಾಗೆಯೇ ಭ್ರಷ್ಟಾಚಾರದ ದುಷ್ಪರಿಣಾಮಗಳ ಕುರಿತು ಮನವರಿಕೆ ಮಾಡಿಸಲು ಮತ್ತು ಆಡಳಿತವನ್ನು ಸುಧಾರಣೆಯ ಅಗತ್ಯತೆಯನ್ನು ಮನಗಾಣಿಸಲು ನೆರವಾಗುತ್ತದೆ. ಭ್ರಷ್ಟಾಚಾರವನ್ನು ಬದುಕಿನ ಎಲ್ಲ ಸ್ತರಗಳಲ್ಲಿ ನಿರ್ಮೂಲನೆ ಮಾಡಿ, ಪಾರದರ್ಶಕತೆ, ಸಬಲೀಕರಣ, ಹೊಣೆಗಾರಿಕೆ, ಪರಸ್ಪರ ವಿಶ್ವಾಸ ಮೂಡಿಸಿ ಉತ್ತಮ ಆಡಳಿತಕ್ಕೆ ಪ್ರೇರಣೆಯಾಗಲಿದೆ ಎಂಬುದು ಈ ಸಂಸ್ಥಾಪನಾ ದಿನದ ಉದ್ದೇಶವಾಗಿತ್ತು. ತಿಳುವಳಿಕೆ ಮೂಡಿಸುವ ದಿಸೆಯಲ್ಲಿ ಹೊಂದಿರುವ ಬದ್ಧತೆಯನ್ನು ಪುನರ್ ಪ್ರತಿಪಾದಿಸುವುದು ಹಾಗೂ ಭ್ರಷ್ಟಾಚಾರದ ವಿರುದ್ಧ ಹೋರಾಡುವ ಉದ್ದೇಶಕ್ಕೆ ಸ್ವಯಂ ಪುನರ್ ಸಮರ್ಪಣೆ ಮಾಡಿಕೊಳ್ಳುವುದು ಕೂಡ ಆ ದಿನದ ಪ್ರಮುಖ ಧ್ಯೇಯವಾಗಿತ್ತು. ಈ ಹೋರಾಟದಲ್ಲಿ ಸಂಬಂಧಪಟ್ಟವರೆಲ್ಲರೂ ಸಕ್ರಿಯವಾಗಿ ಪಾಲಗೊಳ್ಳದ ಹೊರತು ಭ್ರಷ್ಟಾಚಾರ ಎಂಬ ಪೆಡಂಭೂತವನ್ನು ಗಮನಾರ್ಹವಾಗಿ ತಹಬಂದಿಗೆ ತರುವುದು ಅಸಾಧ್ಯ. ಆದ ಪ್ರಯುಕ್ತ ಸರ್ಕಾರ, ಸಚಿವಾಲಯಗಳು, ಇಲಾಖೆಗಳು, ಇತರೆ ಎಜೆನ್ಸಿಗಳು, ಸಾರ್ವಜನಿಕ ವಲಯದ ಉದ್ದಿಮೆಗಳು ಮತ್ತು ಸಮಸ್ತ ನಾಗರಿಕ ಸಮಾಜ ಜಾಗೃತಿ ಪ್ರಕ್ರಿಯೆಯಲ್ಲಿ ಪೂರ್ಣ ಮನಸ್ಸಿನಿಂದ ಪಾಲ್ಗೊಳ್ಳಬೇಕಾಗಿತ್ತು. ದೇಶವು ನಡೆಸುತ್ತಿರುವ ಭ್ರಷ್ಟಾಚಾರ ವಿರೋಧಿ ಹೋರಾಟವನ್ನು ಇನ್ನೂ ನಿರಂತರವಾಗಿ ಸುಧಾರಣೆ ಮಾಡಲು ನೆರವಾಗುವಂತಹ ರೀತಿಯಲಿ ರೂಪಿಸುವುದು. ಆ ದಿನದ ಪ್ರಮುಖ ಆಶಯವಾಗಿತ್ತು.

ಪ್ರಸಕ್ತ ವರ್ಷದಲ್ಲಿ ಲೋಕಾಯುಕ್ತವು ಉತ್ತಮ ಆಡಳಿತ ಪ್ರವರ್ಧನೆ ವಿಚಾರವನ್ನು ಸಂಸ್ಥಾಪನಾ ದಿನದ ಕೇಂದ್ರ ಬಿಂದುವನ್ನಾಗಿ ಆಯ್ಕೆ ಮಾಡಿಕೊಂಡಿತ್ತು. ಸಾರ್ವಜನಿಕ ವಲಯದಲ್ಲಿ ಉತ್ತಮ ಆಡಳಿತ ವ್ಯವಸ್ಥೆಯನ್ನು ಜಾರಿಗೊಳಿಸುವುದು ಇಂದಿನ ಅವಶ್ಯಕತೆಗಳಲ್ಲಿ ಒಂದು.ಜಾಗೃತಿ ಅರಿವು ಉತ್ತಮ ಆಡಳಿತದಲ್ಲಿ ಪರಿಣಾಮಕಾರಿ ಹಾಗೂ ಪ್ರಗತಿಗಾಮಿ ಪಾತ್ರ ವಹಿಸುವುದು. ಇದು ರಾಜ್ಯ ಸರ್ಕಾರಗಳಲ್ಲಿ ಭ್ರಷ್ಟಾಚಾರ ತಡೆಯಲು ನೆರವಾಗುತ್ತದೆ. ಸಂಸ್ಥಾಪನಾ ದಿನದ ತರುವಾಯದಲ್ಲೂ ಸಹ ಉತ್ತಮ ಆಡಳಿತದ ತತ್ವಗಳು ಮತ್ತು ನೀತಿಗಳನ್ನು ಸಾರ್ವಜನಿಕರಿಗೆ ಮನವರಿಕೆ ಮಾಡಿಕೊಡಲು ಪ್ರಚಾರ ನಡೆಸುವ ಅಗತ್ಯ ಇರುತ್ತದೆ. ಈ ದಿಸೆಯಲ್ಲಿ ಸರ್ಕಾರಿ ನೌಕರರು ತಮ್ಮ ಕಾರ್ಯದಲ್ಲಿ ಹೆಚ್ಚಿನ ಪಾರದರ್ಶಕತೆಯನ್ನು ಅನುಸರಿಸಬೇಕು. ಯಾವುದೇ ತೀರ್ಮಾನ ಕೈಗೊಳ್ಳುವಾಗ ನ್ಯಾಯ ಸಮ್ಮತ ಹಾಗೂ ಸಮರ್ಪಕ ಆಲೋಚನೆಗೆ ಆದ್ಯತೆ ಕೊಡಬೇಕು. ಉತ್ತಮ ಕಾರ್ಯವಿಧಾನಗಳನ್ನು ರೂಪಿಸಿಕೊಂಡು ಅದನ್ನು ಎಲ್ಲರೂ ಪರಿಭಾವಿಸಿಕೊಳ್ಳಬೇಕು. ಆಡಳಿತದ ಗುಣಮಟ್ಟದ ಪರಿಣಾಮಕಾರಿ ಸುಧಾರಣೆಗೆ ಜ್ಞಾನ ಮತ್ತು ಕೌಶಲ್ಯವನ್ನು ಉನ್ನತೀಕರಿಸಿಕೊಳ್ಳಬೇಕು. ಸಾರ್ವಜನಿಕರಿಗೆ ಅತ್ಯುತ್ತಮ ಸೇವೆ ಸಲ್ಲಿಸಲು ಇದು ಪ್ರೇರಣೆಯಾಗಬೇಕು.

ಅಧ್ಯಾಯ ಐದು

ಸಾಮಾಜಿಕ ಪರಿಣಾಮಗಳ ವಿಶ್ಲೇಷಣೆ

ಅಧ್ಯಾಯ ಐದು

ಸಾಮಾಜಿಕ ಪರಿಣಾಮಗಳ ವಿಶ್ಲೇಷಣೆ

೫.೧. ಪ್ರಸ್ತಾವನೆ


ಲೋಕಾಯುಕ್ತದ ಕಾರ್ಯಕ್ಷಮತೆಯ ಬಗ್ಗೆ ವ್ಯಾಪಕವಾದ ಸಮೀಕ್ಷೆ ನಡೆಸುವ ಮೂಲಕ ಜನ ಸಾಮಾನ್ಯರ ಮೇಲೆ ಬೀರಿರುವ ಸಾಮಾಜಿಕ ಪರಿಣಾಮಗಳ ಬಗ್ಗೆ ಈ ಅಧ್ಯಾಯದಲ್ಲಿ ವಿಶ್ಲೇಷಣೆ ಮಾಡಲಾಗಿದೆ. ರಾಜ್ಯದ ನಾಲ್ಕು ಆಡಳಿತ ವಿಭಾಗಗಳಾದ ಗುಲ್ಬರ್ಗ, ಮೈಸೂರು, ಬೆಳಗಾವಿ ಹಾಗೂ ಬೆಂಗಳೂರು ಭಾಗಗಳಲ್ಲಿ ಲೋಕಾಯುಕ್ತ ಕಾರ್ಯಕ್ಷಮತೆ ಕುರಿತಂತೆ ಜನಸಾಮಾನ್ಯರಿಂದ ಆಯ್ದ ಪ್ರಶ್ನಾವಳಿಯ ಮೂಲಕ ಕ್ಷೇತ್ರಕಾರ್ಯ ನಡೆಸಿ ಮಾಹಿತಿಯನ್ನು ಕಲೆಹಾಕಲಾಗಿದೆ. ಹಾಗೇನೇ ಮಹಿಳೆಯರು, ಅನಕ್ಷರಸ್ಥರು, ನಿರುದ್ಯೋಗಿಗಳು, ಗ್ರಾಮೀಣ ಪ್ರದೇಶದವರು ಮತ್ತು ವಿವಿಧ ಸ್ತರದ ಆರ್ಥಿಕತೆಯನ್ನು ಹೊಂದಿರುವ ಹಾಗೂ ವಿವಿಧ ವಯೋಮಾನದವರನ್ನು ಸಂದರ್ಶನ ಮಾಡುವುದರ ಮೂಲಕ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಜೊತೆಗೆ ಭ್ರಷ್ಟಾಚಾರ ಆರೋಪಿತ ಐವತ್ತು ಜನ ನೌಕರರನ್ನು ಮತ್ತು ಸಮಾಜದ ಪ್ರಮುಖರನ್ನು ಸಂದರ್ಶನಕ್ಕೊಳಪಡಿಸಿ ಲೋಕಾಯುಕ್ತ ಬೀರಿರುವ ಸಾಮಾಜಿಕ ಪರಿಣಾಮಗಳ ವಿಶ್ಲೇಷಣೆ ಮಾಡಲಾಗಿದೆ.

೫.೨. ಜನಸಾಮಾನ್ಯರ ನೆಲೆಯಲ್ಲಿ ಸಾಮಾಜಿಕ ಪರಿಣಾಮಗಳು.

ರಾಜ್ಯದಲ್ಲಿ ಲೋಕಾಯುಕ್ತ ಎಂಬ ಸಂಸ್ಥೆ ಇರುವುದು ನಿಮಗೆ ಗೊತ್ತೆ? ಎಂಬ ಪ್ರಶ್ನೆಗೆ ಗೊತ್ತು ಎಂದು ಉತ್ತರಿಸಿದವರ ಸಂಖ್ಯೆ ಶೇಕಡ ೨೭.೭೫. ಆಶ್ಚರ್ಯವೆನ್ನುವಂತೆ ಗೊತ್ತಿಲ್ಲದವರ ಸಂಖ್ಯೆ

ಶೇಕಡ ೭೨.೨೫ರಷ್ಟಿದೆ. ಗುಲ್ಬರ್ಗ ವಿಭಾಗದ ಶೇಕಡ ೨೧, ಬೆಳಗಾವಿ ವಿಭಾಗದ ಶೇಕಡ ೨೬, ಮೈಸೂರು ವಿಭಾಗದ ಶೇಕಡ ೩೦ ಹಾಗೂ ಬೆಂಗಳೂರು ವಿಭಾಗದ ಶೇಕಡ ೩೪ ಜನರು ಮಾತ್ರ ಈ ಸಂಸ್ಥೆಯನ್ನು ಬಲ್ಲವರಾಗಿದ್ದಾರೆ. ಎಸ್‌ಎಸ್‌ಎಲ್‌ಸಿ ಮೇಲ್ಪಟ್ಟ ವಿದ್ಯಾವಂತರಲ್ಲಿ ಲೋಕಾಯುಕ್ತ ಸಂಸ್ಥೆ ಗೊತ್ತಿದ್ದವರ ಸಂಖ್ಯೆ ಶೇಕಡ ೩೯, ಆದರೆ ಗೊತ್ತಿಲ್ಲದವರ ಸಂಖ್ಯೆ ಶೇಕಡ ೬೧. ಎಸ್‌ಎಸ್‌ಎಲ್‌ಸಿಗಿಂತ ಕಡಿಮೆ ವಿದ್ಯಾಭ್ಯಾಸ ಪಡೆದವರಲ್ಲಿ ಇದರ ಬಗ್ಗೆ ಅರಿವು ಹೊಂದಿದವರು ಶೇಕಡ ೧೭ ಜನರು ಮಾತ್ರ. ಶೇಕಡ ೫೭ರಷ್ಟು ಪುರುಷರಿಗೆ ಇದು ಪರಿಚಿತ ಸಂಸ್ಥೆಯಾದರೆ, ಮಹಿಳೆಯರಲ್ಲಿ ಇದರ ಬಗ್ಗೆ ಬಲ್ಲವರ ಸಂಖ್ಯೆ ಶೇಕಡ ೩೯ಕ್ಕೆ ಸೀಮಿತ. ಗ್ರಾಮೀಣ ಪ್ರದೇಶದ ಶೇಕಡ ೩೨ ಜನರು ಇದರ ಬಗ್ಗೆ ಕೇಳಿ ಬಲ್ಲರು. ನಗರ ಪ್ರದೇಶದ ಶೇಕಡ ೪೭ ಜನರಿಗೆ ಈ ಸಂಸ್ಥೆಯ ಪರಿಚಯವೇ ಇಲ್ಲ.

ಲೋಕಯುಕ್ತ ಸಂಸ್ಥೆ ಬಗ್ಗೆ ಅರಿವಿದ್ದವರ ಶೇಕಡ ಪ್ರಮಾಣವನ್ನು ಪ್ರದೇಶವಾರು ಹಾಗೂ ವಿಭಾಗವಾರು ನೀಡಲಾಗಿದೆ.



೧. ಹಾಗೇನೇ ಲೋಕಾಯುಕ್ತ ಸಂಸ್ಥೆ ಇರುವುದರ ಬಗೆಗೆ ಹೇಗೆ ತಿಳಿಯಿತು ಎಂಬ ನಮ್ಮ ಪ್ರಶ್ನೆಗೆ ಪತ್ರಿಕೆಗಳ ಮೂಲಕ ಗೊತ್ತು ಎಂದು ಉತ್ತರಿಸಿದವರ ಸಂಖ್ಯೆ ಶೇಕಡ ೪೪.೭೫ರಷ್ಟಿದ್ದರೆ, ಟಿ.ವಿ ಮಾಧ್ಯಮದ ಮೂಲಕ ಬಲ್ಲೆವು ಎಂದು ಉತ್ತರಿಸಿದವರು ಶೇಕಡ ೫೩. ಅದೇ ರೀತಿ ಇತರ ಮಾರ್ಗದ ಪ್ರಕಾರ ಲೋಕಾಯುಕ್ತವನ್ನು ಬಲ್ಲವರ ಸಂಖ್ಯೆಯು ಶೇಕಡ ೨.೨೫ ರಷ್ಟಿದೆ. ಶೇಕಡ ೪೬ರಷ್ಟು ಪುರುಷರು ಇದನ್ನು ಪತ್ರಿಕೆಗಳ ಮೂಲಕ ತಿಳಿದಿದ್ದರೆ. ಶೇಕಡ ೫೨ ಪುರುಷರು ಇದನ್ನು ಟಿ.ವಿ ಮೂಲಕ ಬಲ್ಲವರಾಗಿದ್ದಾರೆ. ಇನ್ನು ಉಳಿದ ಶೇಕಡ ೨

ಪುರುಷರು ಬೇರೆ ಮಾರ್ಗಗಳ ಮೂಲಕ ಇದನ್ನು ಕೇಳಿ ಬಲ್ಲರು. ಇನ್ನು ಮಹಿಳೆಯರ ವಿಷಯಕ್ಕೆ ಬಂದರೆ, ಶೇಕಡ ೩೪ರಷ್ಟು ಮಹಿಳೆಯರಿಗೆ ಪತ್ರಿಕೆಯ ಮೂಲಕ ಲೋಕಾಯುಕ್ತ ಸಂಸ್ಥೆ ಇರುವುದು ತಿಳಿದಿದೆ ಎಂಬ ಉತ್ತರ ನೀಡಿರುತ್ತಾರೆ. ಅದರಂತೆ ಶೇಕಡ ೬೪ರಷ್ಟು ಮಹಿಳೆಯರು ಟಿ.ವಿ ಮಾಧ್ಯಮದ ಮೂಲಕ ಈ ಕುರಿತು ತಿಳಿದುಕೊಂಡಿದ್ದಾರೆ. ಕೇವಲ ಶೇಕಡ ೩ರಷ್ಟು ಮಹಿಳೆಯರು ಇತರೆ ಮಾರ್ಗದ ಮೂಲಕ ಇದನ್ನು ಕೇಳಿ ಬಲ್ಲರು. ಎಸ್‌ಎಸ್‌ಎಲ್‌ಸಿ ಗಿಂತ ಕಡಿಮೆ ವಿದ್ಯಾಭ್ಯಾಸ ಪಡೆದವರು ಪತ್ರಿಕೆಗಿಂತ ಟಿ.ವಿ ಮಾಧ್ಯಮದ ಮೂಲಕ ಇದನ್ನು ಅರಿತವರಾಗಿದ್ದಾರೆ. ಇವರಲ್ಲಿ ಶೇಕಡ ೨೦ ಜನರಿಗೆ ಮಾತ್ರ ಪತ್ರಿಕೆಯ ಮೂಲಕ ಇರುವುದು ತಿಳಿದಿದ್ದರೆ, ಶೇಕಡ ೭೫ ಜನರಿಗೆ ಇದನ್ನು ಟಿ.ವಿ ಮಾಧ್ಯಮದ ಮೂಲಕ ತಿಳಿದುಕೊಂಡಿದ್ದಾರೆ. ಇನ್ನುಳಿದ ಶೇಕಡ ೫ ಜನರು ಇದನ್ನು ಕೇಳಿ ಬಲ್ಲರು. ಎಸ್‌ಎಸ್‌ಎಲ್‌ಸಿ ಮೇಲ್ಪಟ್ಟ ವಿದ್ಯಾವಂತರಲ್ಲಿ ಶೇಕಡ ೫೨ ಜನ ಇದನ್ನು ಪತ್ರಿಕೆಗಳ ಮೂಲಕ ಬಲ್ಲವರಾದರೆ. ಶೇಕಡ ೪೮ ಜನರು ಟಿ.ವಿ ಮಾಧ್ಯಮದ ಮೂಲಕ ತಿಳಿದುಕೊಂಡಿದ್ದಾರೆ. ಇನ್ನು ಗ್ರಾಮೀಣ ಪ್ರದೇಶದ ವಿಷಯಕ್ಕೆ ಬಂದಾಗ ಶೇಕಡ ೩೩ ಗ್ರಾಮೀಣ ಪ್ರದೇಶವು ಲೋಕಾಯುಕ್ತ ಸಂಸ್ಥೆಯ ಕುರಿತು ಪತ್ರಿಕೆಗಳ ಮೂಲಕ ತಿಳಿದುಕೊಂಡಿದ್ದರೆ, ಇನ್ನುಳಿದ ಶೇಕಡ ೬೪ರಷ್ಟು ಜನರು ಟಿ.ವಿ ಮಾಧ್ಯಮದ ಮೂಲಕ ಈ ಕುರಿತು ಅರಿವು ಮೂಡಿಸಿಕೊಂಡಿದ್ದಾರೆ. ಶೇಕಡ ೩ರಷ್ಟು ಗ್ರಾಮೀಣ ಜನರು ಇದನ್ನು ಇತರರಿಂದ ಕೇಳಿ ಬಲ್ಲರು. ನಗರ ಪ್ರದೇಶದಲ್ಲಿ ಶೇಕಡ ೪೮ ಜನರು ಪತ್ರಿಕೆಯ ಮೂಲಕ, ಶೇಕಡ ೫೦ ಜನರು ಟಿ.ವಿ ಮಾಧ್ಯಮದ ಮೂಲಕ, ಶೇಕಡ ೨ರಷ್ಟು ಇತರರ ಮೂಲಕ ಕೇಳಿ ಬಲ್ಲರು. ಇನ್ನು ೪೫ ವರ್ಷದೊಳಗಿನವರಲ್ಲಿ ಲೋಕಾಯುಕ್ತ ಸಂಸ್ಥೆಯನ್ನು ಪತ್ರಿಕೆಯ ಮೂಲಕ ಬಲ್ಲವರು ಶೇಕಡ ೫೧, ಹಾಗೆಯೇ ಟಿ.ವಿ ಮಾಧ್ಯಮದ ಮೂಲಕ ಅರಿತು ಕೊಂಡವರ ಸಂಖ್ಯೆ ಶೇಕಡ ೪೯. ೪೫ ವರ್ಷಕ್ಕಿಂತ ಮೇಲ್ಪಟ್ಟವರಲ್ಲಿ ಈ ಸಂಸ್ಥೆಯ ಕುರಿತು ಪತ್ರಿಕೆಯ ಮೂಲಕ ಅರಿತವರು ಶೇಕಡ ೪೮. ಆದರೆ, ಟಿ.ವಿ ಮಾಧ್ಯಮದ ಮೂಲಕ ಬಲ್ಲವರು ಶೇಕಡ ೫೨. ಇನ್ನು ವಿಭಾಗವಾರು ಮಟ್ಟದ ಸಮೀಕ್ಷೆಯಲ್ಲಿ ಗುಲ್ಬರ್ಗ ವಿಭಾಗದ ಶೇಕಡ ೪೧ ಜನರು ಈ ಸಂಸ್ಥೆಯನ್ನು ಪತ್ರಿಕೆಗಳ ಮೂಲಕ, ಶೇಕಡ ೫೫ ಜನರು ಟಿ.ವಿ ಮಾಧ್ಯಮದ ಮೂಲಕ ಶೇಕಡ ೪ರಷ್ಟು ಜನ ಇತರರ ಮೂಲಕ ಅರಿತವರಾಗಿದ್ದಾರೆ. ಬೆಳಗಾವಿ ವಿಭಾಗದಲ್ಲಿ ಶೇಕಡ ೪೪ರಷ್ಟು ಜನರು ಇದನ್ನು ಪತ್ರಿಕೆಗಳ ಮೂಲಕ ತಿಳಿದುಕೊಂಡಿದ್ದರೆ. ಶೇಕಡ ೫೩ರಷ್ಟು ಜನರು ಇದನ್ನು ಟಿ.ವಿ ಮಾಧ್ಯಮದ ಮೂಲಕ ಬಲ್ಲರು. ಕೇವಲ ಶೇಕಡ ೩ರಷ್ಟು

ಜನರು ಮಾತ್ರ ಇದನ್ನು ಇತರರಿಂದ ಕೇಳಿ ತಿಳಿದಿದ್ದಾರೆ. ಮೈಸೂರು ಭಾಗದಲ್ಲಿ ಲೋಕಾಯುಕ್ತ ಸಂಸ್ಥೆಯು ಪತ್ರಿಕೆಗಳ ಮೂಲಕ ಶೇಕಡ ೪೬ರಷ್ಟು ಜನರಿಗೆ ಪರಿಚಿತವಾಗಿದ್ದರೆ, ಶೇಕಡ ೫೨ರಷ್ಟು ಜನರಿಗೆ ಇದು ಟಿ.ವಿ ಮಾಧ್ಯಮದ ಮೂಲಕ ಪರಿಚಯವಾಗಿದೆ. ಕೇವಲ ಶೇಕಡ ೨ರಷ್ಟು ಜನರು ಇದನ್ನು ಇತರರಿಂದ ಕೇಳಿ ತಿಳಿದವರಾಗಿದ್ದಾರೆ. ಬೆಂಗಳೂರು ಭಾಗದಲ್ಲಿ ಪತ್ರಿಕೆಗಳ ಮೂಲಕ ಶೇಕಡ ೪೮ ಜನರಿಗೆ ಹಾಗೂ ಟಿ.ವಿ ಮಾಧ್ಯಮದ ಮೂಲಕ ಶೇಕಡ ೫೨ ಜನರಿಗೆ ಈ ಲೋಕಾಯುಕ್ತ ಸಂಸ್ಥೆಯು ಪರಿಚಿತವಾಗಿದೆ.

೨. ನೀವು ಲೋಕಾಯುಕ್ತ ಸಂಸ್ಥೆಯನ್ನು ಯಾವಾಗಲಾದರೂ ಸಂಪರ್ಕಿಸಿದ್ದೀರಾ? ಎಂಬ ಪ್ರಶ್ನೆಗೆ ಹೌದು ಎಂದು ಉತ್ತರಿಸಿದವರು ಶೇಕಡ ೨. ಇನ್ನುಳಿದ ಶೇಕಡ ೯೮ ಜನ ಸಂಪರ್ಕಿಸಿಯೇ ಇಲ್ಲವಂತೆ. ಪುರುಷರಲ್ಲಿ ಶೇಕಡ ೧ರಷ್ಟು ಜನ ಸಂಪರ್ಕಿಸಿದ್ದರೆ, ಮಹಿಳೆಯರಲ್ಲಿ ಇದು ತುಂಬಾ ನಗಣ್ಯ. ಅಂದರೆ ಕೇವಲ ಶೇಕಡ ೦.೧ರಷ್ಟು ಮಹಿಳೆಯರು ಮಾತ್ರ ಲೋಕಾಯುಕ್ತ ಕಚೇರಿಯನ್ನು ಸಂಪರ್ಕಿಸಿದ್ದಾರೆ. ಎಸ್‌ಎಸ್‌ಎಲ್‌ಸಿ ಮೇಲ್ಪಟ್ಟವರಲ್ಲಿ ಲೋಕಾಯುಕ್ತ ಕಚೇರಿಯನ್ನು ಸಂಪರ್ಕಿಸಿದವರ ಪ್ರಮಾಣ ಶೇಕಡ ೦.೩ರಷ್ಟಿದ್ದರೆ, ಅದಕ್ಕಿಂತ ಕಡಿಮೆ ಓದಿದವರಲ್ಲಿ ಇದರ ಪ್ರಮಾಣ ಶೇಕಡ ೦.೧ಕ್ಕಿಂತ ಕಡಿಮೆ. ಗ್ರಾಮೀಣ ಜನತೆಗೂ ಲೋಕಾಯುಕ್ತ ಕಚೇರಿಗೂ ಬಹುದೂರ. ಇವರಲ್ಲಿಯೂ ಲೋಕಾಯುಕ್ತ ಕಚೇರಿಯನ್ನು ಸಂಪರ್ಕಿಸಿದವರ ಪ್ರಮಾಣ ಶೇಕಡ ೦.೧ಕ್ಕಿಂತ ಕಡಿಮೆ. ನಗರ ಪ್ರದೇಶದಲ್ಲಿಯೂ ಸಹ ಪರಿಸ್ಥಿತಿ ಭಿನ್ನವಾಗಿಲ್ಲ. ಇಲ್ಲಿ ಶೇಕಡ ೦.೭ರಷ್ಟು ಜನ ಲೋಕಾಯುಕ್ತ ಕಚೇರಿಯನ್ನು ಸಂಪರ್ಕಿಸಿದ್ದಾರೆ. ಇನ್ನು ೪೫ ವರ್ಷದೊಳಗಿನ ನಾಗರಿಕರಲ್ಲಿ ಲೋಕಾಯುಕ್ತ ಕಚೇರಿಯನ್ನು ಸಂಪರ್ಕಿಸಿದವರ ಪ್ರಮಾಣ ಶೇಕಡ ೦.೬ರಷ್ಟಿದೆ. ಇದಕ್ಕಿಂತ ಮೇಲ್ಪಟ್ಟ ವಯಸ್ಸಿನ ನಾಗರಿಕರಲ್ಲಿ ಇದರ ಪ್ರಮಾಣ ಶೇಕಡ ೧ರಷ್ಟಿದೆ. ಇನ್ನು ಗುಲಬರ್ಗ ವಿಭಾಗದಲ್ಲಿ ಶೇಕಡ ೦.೨ ಜನ ಲೋಕಾಯುಕ್ತ ಸಂಸ್ಥೆಯನ್ನು ಸಂಪರ್ಕಿಸಿದ್ದರೆ, ಬೆಳಗಾವಿಯಲ್ಲಿ ಇವರ ಪ್ರಮಾಣ ಶೇಕಡ ೦.೮ರಷ್ಟಿದೆ. ಅಂತೆಯೇ ಮೈಸೂರಿನಲ್ಲಿ ಲೋಕಾಯುಕ್ತ ಕಚೇರಿಯನ್ನು ಸಂಪರ್ಕಿಸಿದವರ ಪ್ರಮಾಣ ಶೇಕಡ ೦.೫ರಷ್ಟಿದ್ದರೇ, ಬೆಂಗಳೂರಿನಲ್ಲಿ ಈ ಪ್ರಮಾಣ ಶೇಕಡ ೦.೭ರಷ್ಟಿದೆ.

೩. ಲೋಕಾಯುಕ್ತ ಕಚೇರಿಯನ್ನು ಸಂಪರ್ಕಿಸಿದ ವಿಧಾನದ ಬಗೆಗೆ ಮಾಹಿತಿದಾರರಲ್ಲಿ ಕೇಳಿದಾಗ ಪತ್ರದ ಮೂಲಕ ಎಂದು ಉತ್ತರಿಸಿದವರ ಪ್ರಮಾಣ ಶೇಕಡ ೬೭ ಹಾಗೂ ಖುದ್ದು ಕಚೇರಿಗೆ ಭೇಟಿ ನೀಡಿದ್ದೇವೆ ಎಂದು ಹೇಳಿದವರು ಶೇಕಡ ೩೩.೫ ಹಾಗೂ ಶೇಕಡ ೬೬.೫ರಷ್ಟು ಪುರುಷರು ಪತ್ರದ ಮೂಲಕ ಸಂಪರ್ಕಿಸಿದ್ದರೆ. ಇನ್ನುಳಿದ ಶೇಕಡ ೨೬ರಷ್ಟು ಪುರುಷರು


ನೇರವಾಗಿಯೇ ಕಚೇರಿಗೆ ಭೇಟಿ ನೀಡಿದ್ದಾರೆ. ಇನ್ನು ಮಹಿಳೆಯರಲ್ಲಿ ಶೇಕಡ ೯೧ರಷ್ಟು ಮಂದಿ ಪತ್ರದ ಮೂಲಕ ಲೋಕಾಯುಕ್ತ ಕಚೇರಿಯನ್ನು ಸಂಪರ್ಕಿಸಿದ್ದಾರೆ. ಎಸ್‌ಎಸ್‌ಎಲ್‌ಸಿ ಮೇಲ್ಪಟ್ಟವರಲ್ಲಿ ಶೇಕಡ ೬೮ ಜನ ಪತ್ರದ ಮೂಲಕ ಹಾಗೂ ಎಸ್‌ಎಸ್‌ಎಲ್‌ಸಿ ಗಿಂತ ಕಡಿಮೆ ಓದಿದವರಲ್ಲಿ ಶೇಕಡ ೫೨ರಷ್ಟು ಜನ ಪತ್ರದ ಮೂಲಕ ಲೋಕಾಯುಕ್ತ ಕಚೇರಿಯನ್ನು ಸಂಪರ್ಕಿಸಿದ್ದಾರೆ. ಇನ್ನು ಗ್ರಾಮೀಣ ಜನತೆಯ ವಿಷಯಕ್ಕೆ ಬಂದರೆ ಪತ್ರದ ಮೂಲಕ ಲೋಕಾಯುಕ್ತ ಕಚೇರಿಯನ್ನು ಸಂಪರ್ಕಿಸಿದವರು ಶೇಕಡ ೭೬ ಹಾಗೂ ಖುದ್ದು ಕಚೇರಿಗೆ ಭೇಟಿ ನೀಡಿದವರು ಶೇಕಡ ೨೪. ನಗರಪ್ರದೇಶದಲ್ಲಿ ಪತ್ರದ ಮೂಲಕ ಶೇಕಡ ೫೭ ಹಾಗೂ ನೇರವಾಗಿ ಕಚೇರಿಯನ್ನು ಸಂಪರ್ಕಿಸಿದವರು ಶೇಕಡ ೫೩. ಅದೇ ರೀತಿ ೪೫ ವರ್ಷದೊಳಗಿನ ಜನರಲ್ಲಿ ಲೋಕಾಯುಕ್ತ ಕಚೇರಿಯನ್ನು ಪತ್ರದ ಮೂಲಕ ಸಂಪರ್ಕಿಸಿದವರು ಶೇಕಡ ೮೫. ಹಾಗೇಯೇ ೪೫ ವರ್ಷ ಮೇಲ್ಪಟ್ಟವರಲ್ಲಿ ಕಚೇರಿಯನ್ನು ನೇರವಾಗಿ ಸಂಪರ್ಕಿಸಿದವರು ಕೇವಲ ಶೇಕಡ ೮. ಇನ್ನು ವಿಭಾಗವಾರು ಮಟ್ಟದ ಸಮೀಕ್ಷೆಯಲ್ಲಿಯೂ ಸಹ ಪತ್ರದ ಮೂಲಕ ಸಂಪರ್ಕಿಸಿರುವುದು ಎದ್ದು ಕಾಣುತ್ತದೆ. ಗುಲ್ಬರ್ಗ ವಿಭಾಗದಲ್ಲಿ ಶೇಕಡ ೭೮, ಬೆಳಗಾವಿ ವಿಭಾಗದಲ್ಲಿ ಶೇಕಡ ೬೬, ಮೈಸೂರು ವಿಭಾಗದಲ್ಲಿ ಶೇಕಡ ೬೨, ಬೆಂಗಳೂರು ವಿಭಾಗದಲ್ಲಿ ಶೇಕಡ ೬೦ ಜನ ಲೋಕಾಯುಕ್ತ ಕಚೇರಿಯನ್ನು ಪತ್ರದ ಮೂಲಕವೇ ಸಂಪರ್ಕಿಸಿದ್ದಾರೆ.

೪. ಲೋಕಾಯುಕ್ತ ಗೊತ್ತಿದವರನ್ನು ಸಂಸ್ಥೆ ಕೈಗೊಳ್ಳುತ್ತಿರುವ ಕಾರ್ಯ ನಿಮ್ಮ ಗಮನಕ್ಕೆ ಬಂದಿದೆಯೇ? ಎಂಬ ಪ್ರಶ್ನೆಗೆ ಹೌದು ಎಂದು ಉತ್ತರಿಸಿದವರು ಶೇಕಡ ૩೪.೫. ಇದಕ್ಕೆ ಇಲ್ಲ ಎಂದು ಉತ್ತರಿಸಿದವರು ಶೇಕಡ ೬೫.೫ ಜನ. ಶೇಕಡ ೪೫ರಷ್ಟು ಪುರುಷರಿಗೆ ಲೋಕಾಯುಕ್ತ ಸಂಸ್ಥೆ ಕೈಗೊಳ್ಳುತ್ತಿರುವ ಕಾರ್ಯದ ಕುರಿತು ಅರಿವಿದ್ದರೆ, ಮಹಿಳೆಯರಲ್ಲಿ ಇದರ ಕುರಿತು ಅರಿವಿರುವುದು ಕೇವಲ ಶೇಕಡ ೨೭ ಜನಕ್ಕೆ ಮಾತ್ರ. ಎಸ್‌ಎಸ್‌ಎಲ್‌ಸಿ ಮೇಲ್ಪಟ್ಟವರಲ್ಲಿ ಶೇಕಡ ೫೮ ಹಾಗೂ ಎಸ್‌ಎಸ್‌ಎಲ್‌ಸಿ ಗಿಂತ ಕಡಿಮೆ ಇರುವವರಲ್ಲಿ ಶೇಕಡ ೮೫ ಜನರಿಗೆ ಲೋಕಾಯುಕ್ತ ಸಂಸ್ಥೆಯ ಕಾರ್ಯಗಳ ಕುರಿತು ಯಾವುದೇ ಗಮನವಿಲ್ಲ. ಇನ್ನು ಗ್ರಾಮೀಣ ವಿಷಯಕ್ಕೂ ಬಂದಾಗಲೂ ಸಹ ಶೇಕಡ ೧೭ರಷ್ಟು ಗ್ರಾಮೀಣರಿಗೆ ಲೋಕಾಯುಕ್ತ ಕಚೇರಿಯ ಕಾರ್ಯದ ಕುರಿತು ಅರಿವಿದ್ದರೆ, ಶೇಕಡ ೪೮ರಷ್ಟು ನಗರ ಪ್ರದೇಶದವರಿಗೆ ಲೋಕಾಯುಕ್ತ ಸಂಸ್ಥೆಯು ಕೈಗೊಳ್ಳುತ್ತಿರುವ ಕಾರ್ಯವು ಗಮನಕ್ಕೆ ಬಂದಿದೆ. ೪೫ ವರ್ಷದೊಳಗಿನವರಲ್ಲಿ ಲೋಕಾಯುಕ್ತ ಸಂಸ್ಥೆಯ ಕಾರ್ಯವನ್ನು ಅರಿತವರು ಶೇಕಡ ೫೨. ಇನ್ನು ೪೫ ವರ್ಷ

ಮೇಲ್ಪಟ್ಟವರಲ್ಲಿ ಇದರ ಕಾರ್ಯವನ್ನು ಗಮನಿಸಲಾರದವರು ಶೇಕಡ ೫೪ ಜನ. ಗುಲ್ಬರ್ಗ ವಿಭಾಗದಲ್ಲಿ ಶೇಕಡ ೭೪, ಬೆಳಗಾವಿ ವಿಭಾಗದಲ್ಲಿ ಶೇಕಡ ೭೦, ಮೈಸೂರು ವಿಭಾಗದಲ್ಲಿ ಶೇಕಡ ೬೨, ಹಾಗೂ ಬೆಂಗಳೂರು ವಿಭಾಗದಲ್ಲಿ ಶೇಕಡ ೫೬ರಷ್ಟು ಜನರಿಗೆ ಲೋಕಾಯುಕ್ತ ಸಂಸ್ಥೆ ಕೈಗೊಳ್ಳುತ್ತಿರುವ ಕಾರ್ಯವು ಗಮನಕ್ಕೆ ಬಂದಿಲ್ಲ ಎಂಬುದು ಆಶ್ಚರ್ಯದ ಸಂಗತಿಯಾಗಿದೆ.

೫. ಸರಕಾರಿ ಕೆಲಸಗಳು ಲಂಚ ಕೊಡದೇ ಆಗುವುದಿಲ್ಲವೇ? ಎಂಬ ಪ್ರಶ್ನೆಗೆ ಇಲ್ಲ ಎಂದು ಉತ್ತರಿಸಿದವರು ಕೇವಲ ಶೇಕಡ ೯. ಪುರುಷರಲ್ಲಿ ಶೇಕಡ ೯೧ರಷ್ಟು ಜನ ಲಂಚ ಕೊಟ್ಟರೆ ಮಾತ್ರ ಕೆಲಸ ಆಗುವುದು ಎಂದು ಹೇಳಿದರೆ, ಶೇಕಡ ೯೨ರಷ್ಟು ಮಹಿಳೆಯರು ಲಂಚ ಕೊಟ್ಟರೇ ಮಾತ್ರ ಕೆಲಸ ಆಗುತ್ತದೆ ಎಂದು ಹೇಳಿದ್ದಾರೆ. ಎಸ್‌ಎಸ್‌ಎಲ್‌ಸಿ ಮೇಲ್ಪಟ್ಟವರಲ್ಲಿ ಶೇಕಡ ೯೪ ಮತ್ತು ಎಸ್‌ಎಸ್‌ಎಲ್‌ಸಿಗಿಂತ ಕಡಿಮೆ ಒದಿದವರಲ್ಲಿ ಶೇಕಡ ೯೫ರಷ್ಟು ಜನ ಲಂಚ ಕೊಟ್ಟರೆ ಮಾತ್ರ ಸರಕಾರಿ ಕೆಲಸ ಆಗುತ್ತದೆ ಎಂಬ ಅಭಿಪ್ರಾಯ ಹೊಂದಿದ್ದಾರೆ. ಇನ್ನು ಗ್ರಾಮೀಣ ಪ್ರದೇಶದಲ್ಲಿ ಲಂಚದ ಪ್ರಮಾಣವೇನೂ ಕಡಿಮೆ ಇಲ್ಲ. ಅಲ್ಲಿ ಶೇಕಡ ೯೬ ಜನ ಲಂಚ ಕೊಟ್ಟರೆ ಮಾತ್ರ ಕೆಲಸ ಆಗುತ್ತದೆ ಎಂದು ಹೇಳಿದರೆ, ನಗರ ಪ್ರದೇಶದಲ್ಲಿ ಶೇಕಡ ೯೪ರಷ್ಟು ತಮ್ಮ ಸರಕಾರಿ ಕೆಲಸಗಳು ಕಾರ್ಯರೂಪಕ್ಕೆ ಬರಲು ಲಂಚ ನೀಡುವುದೇ ಸೂಕ್ತ ಎಂದು ಒಪ್ಪಿಕೊಂಡಿದ್ದಾರೆ. ೪೫ ವರ್ಷದೊಳಗಿನವರಲ್ಲಿ ಶೇಕಡ ೯೨ ಹಾಗೂ ಮೇಲ್ಪಟ್ಟವರಲ್ಲಿ ಶೇಕಡ ೯೫ರಷ್ಟು ಸರಕಾರಿ ಕಚೇರಿಯಲ್ಲಿ ಈ ಲಂಚಾವತಾರ ಸಹಜ ಎಂದು ಒಪ್ಪಿಕೊಂಡಿದ್ದಾರೆ. ಇನ್ನು ಗುಲ್ಬರ್ಗ ವಿಭಾಗದಲ್ಲಿ ಶೇಕಡ ೯೩, ಬೆಳಗಾವಿ ವಿಭಾಗದಲ್ಲಿ ಶೇಕಡ ೯೧, ಮೈಸೂರು ಮತ್ತು ಬೆಂಗಳೂರು ವಿಭಾಗದಲ್ಲಿ ಶೇಕಡ ೯೦ರಷ್ಟು ಜನ ಈ ಸರಕಾರಿ ಕೆಲಸದಲ್ಲಿ ಲಂಚ ಪದ್ಧತಿಯನ್ನು ಒಪ್ಪಿಕೊಂಡಿದ್ದಾರೆ.

ಲಂಚ ನೀಡಿದವರ ವಿವರವನ್ನು ಶೇಕಡವಾರು, ಲಿಂಗವಾರು, ಪ್ರಾದೇಶಿಕವಾರು ಹಾಗೂ ವಿಭಾಗವಾರು ನೀಡಲಾಗಿದೆ.



೬. ನೀವು ಎಂದಾದರೂ ಲಂಚ ನೀಡಿರುವ ಪ್ರಸಂಗವಿದೆಯೇ? ಎಂಬ ಪ್ರಶ್ನೆಗೆ ಹೌದು ಉತ್ತರಿಸಿದವರು ಶೇಕಡ ೬೭.೨೫. ಮತ್ತು ಮಹಿಳೆಯರಲ್ಲಿ ಶೇಕಡ ೪೧ರಷ್ಟು ಲಂಚ ನೀಡಿದ್ದರೆ, ಎಸ್‌ಎಸ್‌ಎಲ್‌ಸಿ ಮೇಲ್ಪಟ್ಟವರಲ್ಲಿ ಶೇಕಡ ೫೬ ಮತ್ತು ಅದಕ್ಕಿಂತ ಕಡಿಮೆ ಓದಿದವರಲ್ಲಿ ಶೇಕಡ ೮೫ರಷ್ಟು ಜನರು ತಾವು ಲಂಚ ನೀಡಿದ್ದಾಗಿ ಒಪ್ಪಿಕೊಂಡಿದ್ದಾರೆ. ಗ್ರಾಮೀಣರಲ್ಲಿ ಕೇವಲ ಶೇಕಡ ೧೬ ಜನ ತಾವು ಲಂಚ ನೀಡಿಲ್ಲ ಎಂದರೆ, ನಗರ ಪ್ರದೇಶದಲ್ಲಿ ಲಂಚ ನೀಡಿದವರು ಶೇಕಡ ೭೩. ೪೫ ವರ್ಷದೊಳಗಿನವರಲ್ಲಿ ಶೇಕಡ ೬೫ ಹಾಗೂ ಅದಕ್ಕಿಂತ ಮೇಲ್ಪಟ್ಟವರಲ್ಲಿ ಶೇಕಡ ೬೯ ಈ ಲಂಚ ನೀಡಿಕೆಯಲ್ಲಿ ಪಾಲ್ಗೊಂಡಿದ್ದಾರೆ. ಇನ್ನು ವಿಭಾಗವಾರು ಮಟ್ಟದಲ್ಲಿ ಗುಲ್ಬರ್ಗ ವಿಭಾಗದಲ್ಲಿ ಶೇಕಡ ೭೪, ಬೆಳಗಾವಿ ವಿಭಾಗದಲ್ಲಿ ಶೇಕಡ ೭೦, ಮೈಸೂರು ವಿಭಾಗದಲ್ಲಿ ಶೇಕಡ ೬೨, ಬೆಂಗಳೂರು ವಿಭಾಗದಲ್ಲಿ ಶೇಕಡ ೬೩ ಜನ ತಮ್ಮ ಕಾರ್ಯ ಸಾಧಿಸಲು ಲಂಚ ನೀಡಿರುವುದಾಗಿ ಈ ಸಮೀಕ್ಷೆಯಲ್ಲಿ ಒಪ್ಪಿಕೊಂಡಿದ್ದಾರೆ.

೭. ಯಾವ ಕಚೇರಿಯಲ್ಲಿ ಲಂಚ ನೀಡಿದ್ದೀರಿ ಎಂಬ ಪ್ರಶ್ನೆಗೆ ಕಂದಾಯ ಇಲಾಖೆಯಲ್ಲಿ ಶೇಕಡ ೩೫ರಷ್ಟು ಮಂದಿ ಲಂಚ ನೀಡಿದ್ದರೇ, ಪೊಲೀಸ್ ಇಲಾಖೆಯಲ್ಲಿ ಶೇಕಡ ೨೬.೭೫ರಷ್ಟು ಜನರು ಲಂಚ ನೀಡಿದ್ದಾರೆ. ಇನ್ನು ಆರೋಗ್ಯ ಇಲಾಖೆಯೂ ಲಂಚ ಪಡೆಯುವಲ್ಲಿ ಹಿಂದೆ ಬಿದ್ದಿಲ್ಲ. ಅಲ್ಲಿ ಶೇಕಡ ೧೪.೫ ಲಂಚವಿದ್ದರೆ, ಆರ್‌ಟಿಒನಲ್ಲಿ ಶೇಕಡ ೧೩ರಷ್ಟು ಹಾಗೂ ಇತರ ಇಲಾಖೆಗಳಲ್ಲಿ ಶೇಕಡ ೧೦.೭೫ರಷ್ಟು ಲಂಚಾವತಾರವಿದೆ. ಪುರುಷರಲ್ಲಿ ಶೇಕಡ ೪೩ ಜನರು ಕಂದಾಯ ಇಲಾಖೆಗೆ ಲಂಚ ನೀಡಿರುವುದಾಗಿ ಹೇಳಿದ್ದಾರೆ. ಅವರಲ್ಲಿ ಶೇಕಡ ೧೮ ಪೊಲೀಸರಿಗೆ, ಶೇಕಡ ೧೪ ಆರೋಗ್ಯ ಇಲಾಖೆಗೆ, ಆರ್‌ಟಿಒ ಇಲಾಖೆಗೆ ಶೇಕಡ ೧೨ ಲಂಚ ನೀಡಿದ್ದರೆ, ಇತರೆ ಇಲಾಖೆಗೆ ಲಂಚ ನೀಡಿದ ಪುರುಷರು ಶೇಕಡ ೧೦ರಷ್ಟು. ಇನ್ನು ಮಹಿಳೆಯರಲ್ಲಿ ಕಂದಾಯ ಇಲಾಖೆಗೆ ಶೇಕಡ ೪೩, ಪೊಲೀಸ್ ಇಲಾಖೆಗೆ ೮, ಆರೋಗ್ಯ ಇಲಾಖೆಗೆ ಶೇಕಡ ೨೬, ಆರ್‌ಟಿಒ ಇಲಾಖೆಗೆ ಶೇಕಡ ೧೧ ಹಾಗೂ ಇತರೆ ಇಲಾಖೆಗೆ ಶೇಕಡ ೧೩ರಷ್ಟು ಲಂಚ ನೀಡಿರುವುದಾಗಿ ಒಪ್ಪಿಕೊಂಡಿದ್ದಾರೆ. ಎಸ್‌ಎಸ್‌ಎಲ್‌ಸಿ ಮೇಲ್ಪಟ್ಟವರಲ್ಲಿ ಶೇಕಡ ೩೭ ಕಂದಾಯ ಇಲಾಖೆಗೆ, ಶೇಕಡ ೨೮ರಷ್ಟು ಪೊಲೀಸರಿಗೆ, ಶೇಕಡ ೧೨ ಆರೋಗ್ಯ ಇಲಾಖೆಗೆ, ಶೇಕಡ ೧೦ ಆರೋಗ್ಯ ಇಲಾಖೆ ಕಚೇರಿಗಳಿಗೆ ಲಂಚ ನೀಡಿರುವುದಾಗಿ ಹೇಳಿದ್ದಾರೆ. ಎಸ್‌ಎಸ್‌ಎಲ್‌ಸಿಗಿಂತ ಕಡಿಮೆ ಓದಿದವರು ಸಹ ಈ ಲಂಚ ನೀಡುವುದರಲ್ಲಿ ಹಿಂದೆ ಬಿದ್ದಿಲ್ಲ ಇವರಲ್ಲಿ ಶೇಕಡ ೪೫ರಷ್ಟು ಜನ ಕಂದಾಯ ಇಲಾಖೆಯ ಕಚೇರಿಗಳಿಗೆ ಲಂಚ ಕೊಟ್ಟಿದ್ದಾರೆ. ಅದರಂತೆ ಶೇಕಡ ೨೩ ಪೊಲೀಸ್‌ರಿಗೆ. ಶೇಕಡ ೧೭ ಆರೋಗ್ಯ

ಇಲಾಖೆಯ ಕಚೇರಿಗಳಿಗೆ ಹಾಗೂ ಶೇಕಡ ೮ರಷ್ಟು ಆರ್‌ಟಿಒ ಮತ್ತು ಶೇಕಡ ೭ರಷ್ಟು ಇತರೆ ಇಲಾಖೆಗೆ ಲಂಚ ಕೊಟ್ಟಿದ್ದಾರೆ. ಇನ್ನು ಗ್ರಾಮೀಣ ಪ್ರದೇಶಕ್ಕೆ ಬಂದಾಗ ಶೇಕಡ ೪೭ರಷ್ಟು ಗ್ರಾಮೀಣ ಜನತೆ ಕಂದಾಯ ಇಲಾಖೆಗೆ ಲಂಚ ಕೊಟ್ಟಿದ್ದರೇ, ಪೋಲಿಸ್ ಇಲಾಖೆಗೆ ಲಂಚ ಕೊಟ್ಟ ಗ್ರಾಮೀಣರು ಶೇಕಡ ೨೨. ಅದರಂತೆ ಆರೋಗ್ಯ ಇಲಾಖೆಯಲ್ಲಿ ಶೇಕಡ ೧೯ರಷ್ಟು ಗ್ರಾಮೀಣರು ಲಂಚ ಕೊಟ್ಟಿದ್ದರೇ ಆರ್‌ಟಿಒ ಇಲಾಖೆಯಲ್ಲಿ ಮತ್ತು ಇತರೆ ಇಲಾಖೆಯಲ್ಲಿ ಗ್ರಾಮೀಣರ ಲಂಚದ ಪ್ರಮಾಣ ಕ್ರಮವಾಗಿ ಶೇಕಡ ೭ ಮತ್ತು ಶೇಕಡ ೫. ಇನ್ನು ನಗರಪ್ರದೇಶದಲ್ಲಿ ಶೇಕಡ ೩೯ರಷ್ಟು ಜನ ಕಂದಾಯ ಇಲಾಖೆಗೆ ಲಂಚ ನೀಡಿದ್ದರೇ, ಪೊಲೀಸ್ ಇಲಾಖೆಗೆ ಲಂಚ ನೀಡಿದವರ ಪ್ರಮಾಣ ಶೇಕಡ ೨೬. ಇನ್ನು ನಗರಪ್ರದೇಶದಲ್ಲಿ ಶೇಕಡ ೧೬ ಜನ ಆರೋಗ್ಯ ಇಲಾಖೆಗೆ, ಶೇಕಡ ೧೧ ಜನ ಆರೋಗ್ಯ ಇಲಾಖೆಗೆ ಹಾಗೂ ಶೇಕಡ ೮ ಜನ ಇತರೆ ಇಲಾಖೆಗೆ ಲಂಚ ನೀಡಿರುವುದಾಗಿ ಈ ಸಮೀಕ್ಷೆಯಲ್ಲಿ ತಿಳಿಸಿದ್ದಾರೆ. ೪೫ ವರ್ಷದೊಳಗಿನವರಲ್ಲಿ ಶೇಕಡ ೪೨ರಷ್ಟು ಕಂದಾಯ ಇಲಾಖೆಗೆ. ಶೇಕಡ ೨೨ರಷ್ಟು ಪೊಲೀಸ್ ಇಲಾಖೆಗೆ, ಶೇಕಡ ೧೫ರಷ್ಟು ಆರೋಗ್ಯ ಇಲಾಖೆಗೆ, ಶೇಕಡ ೧೨ರಷ್ಟು ಆರ್‌ಟಿಒ ಇಲಾಖೆಗೆ ಲಂಚ ನೀಡಿದ್ದರೇ, ಶೇಕಡ ೯ ಜನ ಇತರೆ ಇಲಾಖೆಗೆ ಲಂಚ ನೀಡಿದ್ದಾರೆ. ಇನ್ನು ೪೫ ವರ್ಷ ಮೇಲ್ಪಟ್ಟವರಲ್ಲಿ ಕಂದಾಯ ಇಲಾಖೆ, ಪೊಲೀಸ್ ಇಲಾಖೆ, ಆರೋಗ್ಯ ಇಲಾಖೆ, ಆರ್‌ಟಿಒ ಇಲಾಖೆ ಮತ್ತು ಇತರ ಇಲಾಖೆಗಳಿಗೆ ಅನುಕ್ರಮವಾಗಿ ಶೇಕಡ ೩೯, ಶೇಕಡ ೧೮, ಶೇಕಡ ೧೪, ಶೇಕಡ ೧೦, ಶೇಕಡ ೧೦ರಷ್ಟು ಲಂಚ ನೀಡಿರುವುದಾಗಿ ಒಪ್ಪಿಕೊಂಡಿದ್ದಾರೆ. ಇನ್ನು ಬೆಳಗಾವಿ ವಿಭಾಗದಲ್ಲಿ ಶೇಕಡ ೩೬ ಕಂದಾಯ ಇಲಾಖೆಗೆ, ಶೇಕಡ ೨೬ ಆರೋಗ್ಯ ಇಲಾಖೆಗೆ, ಶೇಕಡ ೧೫, ಆರ್‌ಟಿಒ ಇಲಾಖೆಗೆ ಶೇಕಡ ೧೨ ಮತ್ತು ಇತರೆ ಇಲಾಖೆಗೆ ಶೇಕಡ ೧೧ರಷ್ಟು ಲಂಚ ನೀಡಿದ್ದಾರೆ ಎಂಬ ಸಂಗತಿ ಈ ಸಮೀಕ್ಷೆಯಲ್ಲಿ ಬಹಿರಂಗಗೊಂಡಿದೆ. ಇನ್ನು ಗುಲ್ಬರ್ಗ ವಿಭಾಗದಲ್ಲಿಯೂ ಸಹ ಶೇಕಡ ೩೭ರಷ್ಟು, ಕಂದಾಯ ಇಲಾಖೆಗೆ ಶೇಕಡ ೨೭, ಪೊಲೀಸ್ ಇಲಾಖೆಗೆ ಶೇಕಡ ೧೬, ಆರೋಗ್ಯ ಇಲಾಖೆಗೆ ಶೇಕಡ ೧೧ರಷ್ಟು ಲಂಚ ನೀಡಿದ್ದಾರೆ. ಮೈಸೂರು ವಿಭಾಗದಲ್ಲಿ ಕಂದಾಯ ಇಲಾಖೆಗೆ ಶೇಕಡ ೩೪, ಪೊಲೀಸರಿಗೆ ಶೇಕಡ ೨೭, ಆರೋಗ್ಯ ಇಲಾಖೆಗೆ ಶೇಕಡ ೧೪, ಆರಟಿಒ ಇಲಾಖೆಗೆ ಶೇಕಡ ೧೨ರಷ್ಟು ಲಂಚ ನೀಡಿರುವುದಾಗಿ ಅಲ್ಲಿಯ ಜನತೆ ಹೇಳಿದ್ದಾರೆ. ಬೆಂಗಳೂರು ವಿಭಾಗದಲ್ಲಿ ಈ ಲಂಚದ ಶೇಕಡವಾರು ಪ್ರಮಾಣ ಈ ರೀತಿಯಾಗಿದೆ. ಇಲ್ಲಿಯ ಜನತೆ ಕಂದಾಯ ಇಲಾಖೆಗೆ ಶೇಕಡ ೩೩ರಷ್ಟು ಲಂಚ ಕೊಟ್ಟರೇ. ಪೊಲೀಸರಿಗೆ ಲಂಚ ಕೊಟ್ಟವರ

ಪ್ರಮಾಣ ಶೇಕಡ ೨೭. ಹಾಗೇಯೇ ಆರೋಗ್ಯ ಮತ್ತು ಆರ್‌ಟಿಒ ಇಲಾಖೆಗೆ ಲಂಚ ಕೊಟ್ಟವರ ಪ್ರಮಾಣ ಕ್ರಮವಾಗಿ ಶೇಕಡ ೧೩, ೧೭ ಹಾಗೂ ಶೇಕಡ ೧೦ರಷ್ಟಿದೆ.

೮. ಲಂಚ ನೀಡಿದ ನಂತರ ಕೆಲಸ ಆಗಿದೆಯೇ? ಎಂಬ ಪ್ರಶ್ನೆಗೆ ಹೌದು ಎಂದು ಉತ್ತರಿಸಿದವರ ಪ್ರಮಾಣ ಶೇಕಡ ೮೯.೫. ಶೇಕಡ ೮೮ರಷ್ಟು ಪುರುಷರು ಲಂಚ ನೀಡಿದ ನಂತರ ಕೆಲಸ ಆಯಿತು ಎಂದು ಹೇಳಿದರೆ, ಶೇಕಡ ೯೪ರಷ್ಟು ಮಹಿಳೆಯರು ಲಂಚ ನೀಡಿದ ನಂತರ ಕೆಲಸ ಆಗಿರುವುದನ್ನು ಒಪ್ಪಿಕೊಂಡಿದ್ದಾರೆ. ಎಸ್‌ಎಸ್‌ಎಲ್‌ಸಿ ಮೇಲ್ಪಟ್ಟವರಲ್ಲಿ ಇವರ ಪ್ರಮಾಣ ಶೇಕಡ ೯೧ರಷ್ಟಿದ್ದರೆ, ಎಸ್‌ಎಸ್‌ಎಲ್‌ಸಿಗಿಂತ ಕಡಿಮೆ ಓದಿದವರಲ್ಲಿ ಲಂಚ ನೀಡಿದ ನಂತರ ಕೆಲಸ ಪಡೆದವರ ಪ್ರಮಾಣ ಶೇಕಡ ೯೪. ಇನ್ನು ಗ್ರಾಮೀಣ ಪ್ರದೇಶದಲ್ಲಿ ಶೇಕಡ ೬ರಷ್ಟು ಜನ ಮಾತ್ರ ಲಂಚ ನೀಡಿದ ನಂತರವೂ ಕೆಲಸ ಆಗಿಲ್ಲ ಎಂದು ಬೇಸರ ವ್ಯಕ್ತಪಡಿಸಿದ್ದರೆ, ನಗರದಲ್ಲಿ ಶೇಕಡ ೮ರಷ್ಟು ಜನ ಮಾತ್ರ ಈ ಲಂಚ ನೀಡಿದ ಮೇಲೆಯೂ ಸಹ ಕೆಲಸ ಆಗಲಿಲ್ಲ ಎಂದು ಅಲವತ್ತುಕೊಂಡಿದ್ದಾರೆ. ೪೫ ವರ್ಷದೊಳಗೇ ಶೇಕಡ ೯೧ ಜನ ಲಂಚದ ಮೂಲಕವೇ ಕೆಲಸ ಮಾಡಿಸಿಕೊಂಡಿದ್ದರೆ, ಇನ್ನು ೪೫ ಮೇಲ್ಪಟ್ಟವರಲ್ಲಿ ಲಂಚದ ಮೂಲಕ ಕಾರ್ಯ ಸಾಧಿಸಿದವರ ಪ್ರಮಾಣ ಶೇಕಡ ೮೯ರಷ್ಟು. ಇನ್ನು ವಿಭಾಗವಾರು ಮಟ್ಟದಲ್ಲಿ ಗುಲ್ಬರ್ಗದಲ್ಲಿ ಶೇಕಡ ೯೨, ಬೆಳಗಾವಿಯಲ್ಲಿ ಶೇಕಡ ೯೦, ಮೈಸೂರಿನಲ್ಲಿ ಶೇಕಡ ೮೯ ಹಾಗೂ ಬೆಂಗಳೂರಿನಲ್ಲಿ ಶೇಕಡ ೮೭ರಷ್ಟು ಜನತೆ ಲಂಚದ ಮೂಲಕವೇ ತಮ್ಮ ಕಾರ್ಯವನ್ನು ಸಾಧಿಸುವಲ್ಲಿ ಸಫಲತೆಯನ್ನು ಕಂಡಿದ್ದಾರೆ. ಒಟ್ಟಿನಲ್ಲಿ ಲಂಚ ನೀಡಿದ ನಂತರ ಕೆಲಸವನ್ನು ಮಾಡಿಸಿಕೊಂಡವರ ಶೇಕಡವಾರು ಪ್ರಮಾಣ ಹೆಚ್ಚಾಗಿದೆ.

ಲಂಚಕೇಳಿದ ನೌಕರರ ಶೇಕಡವಾರು ಪ್ರಮಾಣ




೯. ನಿಮ್ಮಿಂದ ಲಂಚ ಕೇಳಿದ ಸರಕಾರಿ ನೌಕರನ ಹುದ್ದೆ ಯಾವುದು ಎಂಬ ಪ್ರಶ್ನೆಗೆ ಗುಮಾಸ್ತ ಎಂದು ಉತ್ತರಿಸಿದವರ ಪ್ರಮಾಣ ಶೇಕಡ ೩೮.೫. ಅಧೀಕ್ಷಕ ಎಂದು ಉತ್ತರಿಸಿದವರ

ಪ್ರಮಾಣ ಶೇಕಡ ೨೧.೨೫ ಮತ್ತು ಶೇಕಡ ೨೨ರಷ್ಟು ಜನ ಕಿರಿಯ ಅಧಿಕಾರಿ ಎಂದು ಹೇಳಿದರೇ ಶೇಕಡ ೧೮.೨೫ರಷ್ಟು ಜನ ಹಿರಿಯ ಅಧಿಕಾರಿ ಎಂದು ಹೇಳಿದ್ದಾರೆ. ಪುರುಷರಲ್ಲಿ ಶೇಕಡ ೪೩ರಷ್ಟು ಜನ ಗುಮಾಸ್ತರಿಗೆ ಲಂಚ ನೀಡಿದರೆ, ಶೇಕಡ ೨೧ರಷ್ಟು ಪುರುಷರು ಅಧೀಕ್ಷಕರಿಗೆ ಲಂಚ ನೀಡಿದ್ದಾರೆ. ಅಂತೆಯೇ ಇವರಿಂದ ಕಿರಿಯ ಅಧಿಕಾರಿ ಶೇಕಡ ೧೯ ಮತ್ತು ಹಿರಿಯ ಅಧಿಕಾರಿ ಶೇಕಡ ೧೭ರಷ್ಟು ಲಂಚ ಕೇಳಿದ್ದಾರೆ. ಇನ್ನು ಮಹಿಳೆಯರಿಂದ ಶೇಕಡ ೪೪ರಷ್ಟು ಗುಮಾಸ್ತರು ಲಂಚ ಕೇಳಿದರೇ ಶೇಕಡ ೧೯ರಷ್ಟು ಅಧೀಕ್ಷಕರು ಲಂಚ ಕೇಳಿದ್ದಾರೆ. ಕಿರಿಯ ಅಧಿಕಾರಿಗಳಲ್ಲಿ ಶೇಕಡ ೨೧ ಮತ್ತು ಹಿರಿಯ ಅಧಿಕಾರಿಗಳಲ್ಲಿ ಶೇಕಡ ೧೬ರಷ್ಟು ಜನ ಮಹಿಳೆಯರಿಂದ ಲಂಚ ಪಡೆದಿರುತ್ತಾರೆ. ಇನ್ನು ಎಸ್‌ಎಸ್‌ಎಲ್‌ಸಿ ಮಟ್ಟದಲ್ಲಿ ಶೇಕಡ ೪೬ ಗುಮಾಸ್ತರು ಲಂಚ ಕೇಳಿದ್ದರೇ, ಶೇಕಡ ೨೦ ಅಧೀಕ್ಷಕರು ಲಂಚ ಕೇಳಿದ್ದಾರೆ. ಶೇಕಡ ೧೭ರಷ್ಟು ಕಿರಿಯ ಅಧಿಕಾರಿ ಹಾಗೂ ಶೇಕಡ ೧೭ರಷ್ಟು ಹಿರಿಯ ಅಧಿಕಾರಿಗಳು ಈ ಲಂಚದ ಆಸೆಗೆ ಬಲೆ ಬಿದ್ದಿದ್ದಾರೆ. ಎಸ್‌ಎಸ್‌ಎಲ್‌ಸಿಗಿಂತ ಕಡಿಮೆ ಓದಿದವರಲ್ಲಿ ಗುಮಾಸ್ತರಿಗೆ ಲಂಚ ಕೊಟ್ಟವರು ಶೇಕಡ ೪೩. ಅಂತೇಯೇ ಅಧೀಕ್ಷಕರು ಶೇಕಡ ೨೩. ಕಿರಿಯ ಅಧಿಕಾರಿಗಳು ಶೇಕಡ ೨೧ ಮತ್ತು ಹಿರಿಯ ಅಧಿಕಾರಿಗಳು ಶೇಕಡ ೧೪ರಷ್ಟು ಜನ ಈ ಲಂಚಕ್ಕಾಗಿ ಬೇಡಿಕೆಯನ್ನು ಇಟ್ಟಿದ್ದರಂತೆ. ಇನ್ನು ಗ್ರಾಮೀಣ ಪ್ರದೇಶದಲ್ಲಿ ಶೇಕಡ ೪೫ರಷ್ಟು ಗುಮಾಸ್ತರು ಲಂಚ ಕೇಳಿದರೇ, ಶೇಕಡ ೨೧ರಷ್ಟು ಅಧೀಕ್ಷಕರು ಸಹ ಕೇಳಿದ್ದಾರೆಂದು ತಿಳಿಸಿದ್ದಾರೆ. ಕಿರಿಯ ಅಧಿಕಾರಿಗಳಲ್ಲಿ ಶೇಕಡ ೧೯ರಷ್ಟು ಲಂಚ ಕೇಳಿದರೆ, ಹಿರಿಯ ಅಧಿಕಾರಿಗಳು ಶೇಕಡ ೧೫ರಷ್ಟು ಲಂಚ ಕೇಳಿದ್ದಾಗಿ ಸಮೀಕ್ಷೆಯಲ್ಲಿ ಭಾಗವಹಿಸಿದವರು ಹೇಳಿದ್ದಾರೆ. ಇನ್ನು ನಗರಪ್ರದೇಶದಲ್ಲಿ ಶೇಕಡ ೪೩ ಜನರಿಗೆ ಗುಮಾಸ್ತರು ಲಂಚ ಕೇಳಿದ್ದರೆ, ಇಲ್ಲಿ ಅಧೀಕ್ಷಕರ ಪ್ರಮಾಣ ಶೇಕಡ ೨೨. ನಗರದಲ್ಲಿ ಲಂಚ ಕೇಳಿದ ಕಿರಿಯ ಅಧಿಕಾರಿಗಳ ಪ್ರಮಾಣ ಶೇಕಡ ೨೧ರಷ್ಟಿದ್ದರೆ, ಹಿರಿಯ ಅಧಿಕಾರಿಗಳ ಪ್ರಮಾಣ ಶೇಕಡ ೧೪. ೪೫ ವರ್ಷದೊಳಗಿನವರಿಗೆ ಶೇಕಡ ೪೪ರಷ್ಟು ಜನ ಗುಮಾಸ್ತರು, ಶೇಕಡ ೨೧ರಷ್ಟು ಜನ ಅಧೀಕ್ಷಕರು, ಶೇಕಡ ೧೯ ಜನ ಕಿರಿಯ ಅಧಿಕಾರಿಗಳು, ಶೇಕಡ ೧೬ರಷ್ಟು ಹಿರಿಯ ಅಧಿಕಾರಿಗಳು ಲಂಚದ ಬೇಡಿಕೆ ಇಟ್ಟಿದ್ದಾರಂತೆ. ಇನ್ನು ೪೫ ವರ್ಷ ಮೇಲ್ಪಟ್ಟವರಲ್ಲಿ ಶೇಕಡ ೪೪ರಷ್ಟು ಗುಮಾಸ್ತರು, ಶೇಕಡ ೨೧ರಷ್ಟು ಅಧೀಕ್ಷಕರು ಮತ್ತು ಶೇಕಡ ೧೯ ಕಿರಿಯ ಅಧಿಕಾರಿಗಳು, ಶೇಕಡ ೧೬ರಷ್ಟು ಹಿರಿಯ ಅಧಿಕಾರಿಗಳು ಲಂಚದ ಮೊರೆ ಹೋಗಿದ್ದಾರೆ. ವಿಭಾಗವಾರು ಮಟ್ಟದಲ್ಲಿ ಗುಲ್ಬರ್ಗದಲ್ಲಿ ಶೇಕಡ ೩೯ ಗುಮಾಸ್ತರು. ಶೇಕಡ ೨೨ ಅಧೀಕ್ಷಕರು. ಶೇಕಡ ೨೦ ಕಿರಿಯ

ಅಧಿಕಾರಿಗಳು ಮತ್ತು ಶೇಕಡ ೧೯ ಹಿರಿಯ ಅಧಿಕಾರಿಗಳು ಕೆಲಸವನ್ನು ಮಾಡಿಕೊಡಲು ಲಂಚದ ಪ್ರಸ್ತಾಪ ಇಟ್ಟಿದ್ದರು. ಇನ್ನು ಬೆಳಗಾವಿ ವಿಭಾಗದಲ್ಲಿ ಶೇಕಡ ೩೮ ಗುಮಾಸ್ತರು, ಶೇಕಡ ೨೧ರಷ್ಟು ಅಧೀಕ್ಷಕರು, ಶೇಕಡ ೨೩ರಷ್ಟು ಕಿರಿಯ ಅಧಿಕಾರಿಗಳು ಹಾಗೂ ಶೇಕಡ ೧೮ ಹಿರಿಯ ಅಧಿಕಾರಿಗಳು ಈ ಲಂಚದ ಆಸೆಯನ್ನು ಹೊಂದಿದ್ದರು. ಮೈಸೂರು ಮತ್ತು ಬೆಂಗಳೂರು ವಿಭಾಗದಲ್ಲಿ ಪರಿಸ್ಥಿತಿ ಏನೂ ಭಿನ್ನವಾಗಿಲ್ಲ. ಮೈಸೂರು ವಿಭಾಗದಲ್ಲಿ ಶೇಕಡ ೩೯ರಷ್ಟು ಗುಮಾಸ್ತರು, ಶೇಕಡ ೨೧ರಷ್ಟು ಅಧೀಕ್ಷಕರು, ಶೇಕಡ ೨೨ ಕಿರಿಯ ಅಧಿಕಾರಿಗಳು ಹಾಗೂ ಶೇಕಡ ೧೮ರಷ್ಟು ಹಿರಿಯ ಅಧಿಕಾರಿಗಳು ಯಾವುದೇ ಮುಜುಗರವಿಲ್ಲದೇ ಲಂಚಕ್ಕೆ ಬೇಡಿಕೆ ಇಟ್ಟಿದ್ದಾರೆ. ಬೆಂಗಳೂರು ವಿಭಾಗದಲ್ಲಿ ಶೇಕಡ ೩೮ ಗುಮಾಸ್ತರು, ಶೇಕಡ ೨೧ರಷ್ಟು ಅಧೀಕ್ಷಕರು, ಶೇಕಡ ೨೩ರಷ್ಟು ಕಿರಿಯ ಅಧಿಕಾರಿಗಳು ಹಾಗೂ ಶೇಕಡ ೧೮ರಷ್ಟು ಹಿರಿಯ ಅಧಿಕಾರಿಗಳು ಸರಕಾರಿ ಕೆಲಸ ಮಾಡಿಕೊಡಲು ಲಂಚದ ಪ್ರಸ್ತಾಪ ಮಾಡಿದ ಸಂಗತಿ ಈ ಸಮೀಕ್ಷೆಯಲ್ಲಿ ಬಹಿರಂಗಗೊಂಡಿದೆ.

೧೧. ಲಂಚ ನೀಡುವುದನ್ನು ನೀವು ಒಪ್ಪುತ್ತೀರಾ? ಎಂಬ ಪ್ರಶ್ನೆಗೆ ಹೌದು ಎಂದು ಉತ್ತರಿಸಿದವರು ಶೇಕಡ ೪೪.೭೫ರಷ್ಟು. ಇಲ್ಲ ಅಂದವರ ಸಂಖ್ಯೆ ಶೇಕಡ ೫೫.೨೫ ಮತ್ತು ಶೇಕಡ ೩೬ರಷ್ಟು ಪುರುಷರು ಲಂಚ ನೀಡುವುದನ್ನು ಒಪ್ಪಿಕೊಂಡರೆ, ಶೇಕಡ ೩೪ರಷ್ಟು ಮಹಿಳೆಯರು ಲಂಚಕ್ಕೆ ಅಸ್ತು ಅಂದಿದ್ದಾರೆ. ಇನ್ನು ಎಸ್‌ಎಸ್‌ಎಲ್‌ಸಿ ಮೇಲ್ಪಟ್ಟವರಲ್ಲಿ ಈ ಲಂಚ ನೀಡುವುದನ್ನು ಒಪ್ಪಿಕೊಂಡವರ ಪ್ರಮಾಣ ಶೇಕಡ ೩೫ರಷ್ಟಿದ್ದರೆ, ಅದಕ್ಕಿಂತ ಕಡಿಮೆ ಓದಿದವರಲ್ಲಿ ಇದನ್ನು ಒಪ್ಪಿಕೊಂಡವರ ಪ್ರಮಾಣ ಶೇಕಡ ೪೦. ಇನ್ನು ಗ್ರಾಮೀಣ ಪ್ರದೇಶದಲ್ಲಿ ಶೇಕಡ ೫೮ ಜನ ಲಂಚ ಕೊಡುವುದನ್ನು ಒಪ್ಪುವುದಿಲ್ಲ. ನಗರ ಪ್ರದೇಶದಲ್ಲಿಯೂ ಸಹ ಶೇಕಡ ೬೨ರಷ್ಟು ಜನತೆ ಲಂಚ ನೀಡುವುದನ್ನು ತಪ್ಪು ಎಂದು ಭಾವಿಸುತ್ತಾರೆ. ೪೫ ವರ್ಷದೊಳಗಿನವರಲ್ಲಿ ಶೇಕಡ ೪೪ ಜನ ಲಂಚ ನೀಡುವುದಕ್ಕೆ ತಲೆ ಬಾಗಿದರೆ, ಅದಕ್ಕಿಂತ ಮೇಲ್ಪಟ್ಟವರಲ್ಲಿ ಶೇಕಡ ೪೭ರಷ್ಟು ಜನ ಲಂಚ ನೀಡುವುದು ಸಹಜ ಎಂದು ಭಾವಿಸಿದ್ದಾರೆ. ಇನ್ನು ಗುಲ್ಬರ್ಗ ವಿಭಾಗದಲ್ಲಿ ಶೇಕಡ ೪೬, ಬೆಳಗಾವಿ ವಿಭಾಗದಲ್ಲಿ ಶೇಕಡ ೪೫. ಮೈಸೂರು ವಿಭಾಗದಲ್ಲಿ ಶೇಕಡ ೪೩, ಬೆಂಗಳೂರು ವಿಭಾಗದಲ್ಲಿ ಶೇಕಡ ೪೫ರಷ್ಟು ನಾಗರಿಕರು ಈ ಲಂಚ ನೀಡುವ ಪದ್ಧತಿಯನ್ನು ಒಪ್ಪಿಕೊಂಡಿದ್ದಾರೆ.

ಲಂಚ ನೀಡಲು ಕಾರಣವಾದ ಅಂಶಗಳು ಮತ್ತು ಅದರ ಶೇಕಡವಾರು ಪ್ರಮಾಣ



೧೨. ಲಂಚ ನೀಡಲು ಒಪ್ಪುವುದಕ್ಕೆ ಪ್ರಮುಖ ಕಾರಣ? ಎಂಬ ಪ್ರಶ್ನೆಗೆ 'ಬೇಗ ಕೆಲಸವಾಗಲು' ಎಂದು ಹೇಳಿದವರ ಪ್ರಮಾಣ ಶೇಕಡ ೪೫ರಷ್ಟಿದೆ. ಅಂತೇಯೇ ನೌಕರರ ಬೇಡಿಕೆಯಿಂದಾಗಿ ಶೇಕಡ ೪೬.೨೫ ಜನ ಲಂಚ ನೀಡಲು ಒಪ್ಪಿಕೊಂಡಿದ್ದರೆ, ಕಾನೂನು ಬಾಹಿರ ಕೆಲಸಕ್ಕಾಗಿ ಶೇಕಡ ೮.೭೫ ಜನ ಲಂಚ ನೀಡಲು ಅಸ್ತು ಎಂದಿದ್ದಾರೆ. ಇನ್ನು ಪುರುಷರಲ್ಲಿ ಬೇಗ ಕೆಲಸವಾಗಲು ಶೇಕಡ ೪೨, ನೌಕರನ ಬೇಡಿಕೆಯಿಂದಾಗಿ ಶೇಕಡ ೫೨, ಕಾನೂನು ಬಾಹಿರ ಕೆಲಸಕ್ಕಾಗಿ ಶೇಕಡ ೬ರಷ್ಟು ಲಂಚ ನೀಡಲು ಒಪ್ಪಿಕೊಂಡಿದ್ದಾರೆ. ಶೇಕಡ ೪೫ರಷ್ಟು ಮಹಿಳೆಯರು ಬೇಗ ಕೆಲಸವಾಗಲು, ಶೇಕಡ ೫೧ರಷ್ಟು ಮಹಿಳೆಯರು ನೌಕರನ ಬೇಡಿಕೆಯಿಂದಾಗಿ ಹಾಗೂ ಶೇಕಡ ೪ರಷ್ಟು ಮಹಿಳೆಯರು ಕಾನೂನು ಬಾಹಿರ ಕೆಲಸಕ್ಕಾಗಿ ಲಂಚ ನೀಡಿರುವುದಾಗಿ ಒಪ್ಪಿಕೊಂಡಿದ್ದಾರೆ. ಇನ್ನು ಎಸ್‌ಎಸ್‌ಎಲ್‌ಸಿ ಮೇಲ್ಪಟ್ಟವರಲ್ಲಿ ಬೇಗ ಕೆಲಸವಾಗಲು ಶೇಕಡ ೪೫, ನೌಕರನ ಬೇಡಿಕೆಯಿಂದಾಗಿ ಶೇಕಡ ೫೦ರಷ್ಟು, ಇತರೆ ಕಾನೂನು ಬಾಹಿರ ಕೆಲಸಕ್ಕಾಗಿ ಶೇಕಡ ೫ರಷ್ಟು ಜನ ಲಂಚ ನೀಡಿರುವ ಕಾರಣಗಳಾಗಿವೆ. ಇನ್ನು ಎಸ್‌ಎಸ್‌ಎಲ್‌ಸಿಗಿಂತ ಕಡಿಮೆ ಓದಿದವರಲ್ಲಿ ಶೇಕಡ ೪೧ರಷ್ಟು ಬೇಗ ಕೆಲಸವಾಗಲು ಲಂಚ ನೀಡಿದರೇ, ಅದೇ ರೀತಿ ನೌಕರನ ಬೇಡಿಕೆಯಿಂದಾಗಿ ಶೇಕಡ ೫೬ರಷ್ಟು ಲಂಚ ಕೊಟ್ಟಿದ್ದಾರೆ. ಕಾನೂನು ಬಾಹಿರ ಕೆಲಸಕ್ಕಾಗಿ ಲಂಚ ನೀಡಿದವರ ಪ್ರಮಾಣ ಶೇಕಡ ೩ ಗ್ರಾಮೀಣ ಪ್ರದೇಶದಲ್ಲಿ ನೌಕರನ ಬೇಡಿಕೆಯಿಂದಾಗಿ ಶೇಕಡ ೫೪ ಮತ್ತು ಬೇಗ ಕೆಲಸವಾಗಲು ಶೇಕಡ ೪೨, ಲಂಚ ನೀಡಿರುತ್ತಾರೆ. ಇನ್ನು ನಗರ ಪ್ರದೇಶದಲ್ಲಿ ಶೇಕಡ ೪೪ರಷ್ಟು ಜನ ಬೇಗ ಕೆಲಸವಾಗಲು, ಶೇಕಡ ೫೦ ನೌಕರನ ಬೇಡಿಕೆಯಿಂದಾಗಿ ಲಂಚ ನೀಡಿರುವುದಾಗಿ ಒಪ್ಪಿಕೊಂಡಿದ್ದಾರೆ. ಇನ್ನು ೪೫ ವರ್ಷದೊಳಗಿನವರಲ್ಲಿ ಬೇಗ ಕೆಲಸವಾಗಲು ಲಂಚ ನೀಡಲು ಒಪ್ಪಿಕೊಂಡವರ

ಪ್ರಮಾಣ ಶೇಕಡ ೪೫, ನೌಕರನ ಬೇಡಿಕೆಯಿಂದಾಗಿ ಒಪ್ಪಿಕೊಂಡವರ ಪ್ರಮಾಣ ಶೇಕಡ ೪೮. ಇತರೆ ಕಾನೂನುಬಾಹಿರ ಕೆಲಸಕ್ಕಾಗಿ ಲಂಚ ಕೊಟ್ಟವರು ಶೇಕಡ ೭. ೪೫ ವರ್ಷ ಮೇಲ್ಪಟ್ಟವರಲ್ಲಿ ಶೇಕಡ ೪೬ ಬೇಗ ಕೆಲಸವಾಗುವ ಕಾರಣದಿಂದ ಲಂಚ ಕೊಡಲು ಅಸ್ತು ಎಂದಿದ್ದರೇ, ಇನ್ನು ನೌಕರನ ಬೇಡಿಕೆಯ ಕಾರಣದಿಂದಾಗಿ ಒಪ್ಪಿಕೊಂಡವರ ಪ್ರಮಾಣ ಶೇಕಡ ೪೫. ಕಾನೂನು ಬಾಹಿರ ಕೆಲಸಕ್ಕಾಗಿ ಒಪ್ಪಿಕೊಂಡವರ ಪ್ರಮಾಣ ಶೇಕಡ ೭. ಗುಲ್ಬರ್ಗ ವಿಭಾಗದಲ್ಲಿ ಬೇಗ ಕೆಲಸವಾಗಲು ಶೇಕಡ ೪೩ ಜನ ಲಂಚ ನೀಡಿದರೇ, ನೌಕರನ ಬೇಡಿಕೆಯಿಂದಾಗಿ ಶೇಕಡ ೪೭, ಕಾನೂನು ಬಾಹಿರ ಕೆಲಸಕ್ಕಾಗಿ ಶೇಕಡ ೧೦ರಷ್ಟು ಜನ ಲಂಚ ನೀಡುತ್ತಾರೆ. ಇನ್ನು ಬೆಳಗಾವಿಯಲ್ಲಿಯೂ ಸಹ ನೌಕರನ ಬೇಡಿಕೆಯೇ ಪ್ರಮುಖ ಕಾರಣ. ಇಲ್ಲಿ ನೌಕರರ ಬೇಡಿಕೆಯಿಂದಾಗಿ ಶೇಕಡ ೪೬ರಷ್ಟು ಮಂದಿ ಲಂಚ ನೀಡಿದರು. ಕಾನೂನು ಬಾಹಿರ ಕೆಲಸಕ್ಕಾಗಿ ಶೇಕಡ ೯ರಷ್ಟು ಜನ ಲಂಚ ನೀಡುತ್ತಾರೆ. ಇನ್ನು ಬೇಗ ಕೆಲಸವಾಗಲು ಲಂಚ ನೀಡುವವರ ಪ್ರಮಾಣ ಶೇಕಡ ೪೫. ಮೈಸೂರಿನಲ್ಲಿ ಪರಿಸ್ಥಿತಿಯೇನೂ ಭಿನ್ನವಾಗಿಲ್ಲ. ಇಲ್ಲಿಯೂ ಸಹ ನೌಕರನ ಬೇಡಿಕೆಯಿಂದಾಗಿ ಶೇಕಡ ೪೭ರಷ್ಟು ಜನ ಲಂಚ ನೀಡುತ್ತಾರೆ. ಇನ್ನು ಬೇಗ ಕೆಲಸವಾಗಲು ಶೇಕಡ ೪೫ ಹಾಗೂ ಇತರೆ ಕಾನೂನು ಬಾಹಿರ ಕೆಲಸಕ್ಕಾಗಿ ಶೇಕಡ ೮ ಜನ ಲಂಚ ಕೊಟ್ಟಿರುವುದಾಗಿ ಒಪ್ಪಿಕೊಂಡಿದ್ದಾರೆ. ಬೆಂಗಳೂರಿನಲ್ಲಿ ಬೇಗ ಕೆಲಸವಾಗಲು ಶೇಕಡ ೪೭, ನೌಕರನ ಬೇಡಿಕೆಯಿಂದಾಗಿ ಶೇಕಡ ೪೫ ಹಾಗೂ ಕಾನೂನು ಬಾಹಿರ ಕೆಲಸದ ಕಾರಣಕ್ಕಾಗಿ ಶೇಕಡ ೮ರಷ್ಟು ನಾಗರಿಕರು ಲಂಚ ನೀಡಿರುವುದಾಗಿ ಈ ಸಮೀಕ್ಷೆಯಲ್ಲಿ ತಿಳಿಸಿದ್ದಾರೆ.

೧೩. ಲಂಚ ನೀಡಲು ಒಪ್ಪದಿರಲು ಕಾರಣ? ಎಂಬ ಪ್ರಶ್ನೆಗೆ ನಮ್ಮದು ನ್ಯಾಯ ಸಮ್ಮತ ಕೆಲಸ ಎಂದು ಹೇಳಿದವರು ಶೇಕಡ ೩೩.೭೫. ಅಂತೆಯೇ ಕೆಲಸದ ಬಗ್ಗೆ ಅವಸರವಿಲ್ಲ ಎಂದು ಹೇಳಿದವರ ಶೇಕಡ ೩೨. ಇದು ಅವರ ಕರ್ತವ್ಯ ಎಂದು ಹೇಳಿದವರ ಪ್ರಮಾಣ ಶೇಕಡ ೩೪.೫. ಪುರುಷರಲ್ಲಿ ಶೇಕಡ ೩೮ ಜನ ನ್ಯಾಯ ಸಮ್ಮತ ಕೆಲಸ ಎಂದು ಹೇಳಿದರೆ, ಶೇಕಡ ೨೪ರಷ್ಟು ಪುರುಷರು ಕೆಲಸದ ಬಗ್ಗೆ ಅವಸರವಿಲ್ಲ ಎಂಬ ಅಭಿಪ್ರಾಯ ನೀಡಿದ್ದಾರೆ. ಇದು ಅವರ ಕರ್ತವ್ಯ ಎಂದು ಹೇಳಿದವರ ಪ್ರಮಾಣ ಶೇಕಡ ೩೮. ಇನ್ನು ಮಹಿಳೆಯರಲ್ಲಿ ನೀವು ಲಂಚ ನೀಡಲು ಒಪ್ಪದಿರಲು ಮುಖ್ಯ ಕಾರಣ ಏನು? ಎಂದು ಕೇಳಿದಾಗ ಇದು ಅವರ ಕರ್ತವ್ಯ ಎಂದು ಹೇಳಿದವರ ಪ್ರಮಾಣ ಶೇಕಡ ೩೫ರಷ್ಟಿದ್ದರೆ, ಕೆಲಸಕ್ಕೆ ಅವಸರವಿಲ್ಲ ಎಂದು ಕಾರಣ ಹೇಳಿದ ಮಹಿಳೆಯರ ಪ್ರಮಾಣ ಶೇಕಡ ೨೩. ನಮ್ಮದು ನ್ಯಾಯ ಸಮ್ಮತವಾದ

ಕೆಲಸ ಎಂದು ಶೇಕಡ ೪೨ರಷ್ಟು ಮಹಿಳೆಯರು ಹೇಳಿದ್ದಾರೆ. ಇನ್ನು ಎಸ್‌ಎಸ್‌ಎಲ್‌ಸಿಗಿಂತ ಕಡಿಮೆ ಓದಿದವರಲ್ಲಿ ನ್ಯಾಯ ಸಮ್ಮತವಾದ ಕೆಲಸ ಎಂದು ಶೇಕಡ ೩೭, ಕೆಲಸದ ಬಗ್ಗೆ ಅವಸರವಿಲ್ಲ ಎಂದು ಶೇಕಡ ೨೮, ಇದು ಅವರ ಕರ್ತವ್ಯ ಎಂದು ಶೇಕಡ ೩೩ ಜನ ಹೀಗೆ ಲಂಚ ನೀಡಲು ಒಪ್ಪದಿರುವ ಕಾರಣಗಳ ಕುರಿತು ತಿಳಿಸಿದ್ದಾರೆ. ಅಂತೆಯೇ ಅದಕ್ಕಿಂತ ಹೆಚ್ಚು ಓದಿದವರಲ್ಲಿ ಶೇಕಡ ೪೦ ಜನ ನ್ಯಾಯ ಸಮ್ಮತವಾದ ಕೆಲಸ ಎಂದು ಕಾರಣ ಹೇಳಿದರೇ, ಇದು ಅವರ ಕರ್ತವ್ಯ ಎಂದು ಹೇಳಿದವರ ಪ್ರಮಾಣ ಶೇಕಡ ೩೩. ಕೆಲಸದ ಬಗ್ಗೆ ಅವಸರವಿಲ್ಲ ಎಂದು ಹೇಳಿದವರು ಶೇಕಡ ೨೭ರಷ್ಟು ಜನ. ಇನ್ನು ಗ್ರಾಮೀಣ ಪ್ರದೇಶದಲ್ಲಿ ನಮ್ಮದು ನ್ಯಾಯ ಸಮ್ಮತ ಕೆಲಸ ಎಂದು ಕಾರಣ ಕೊಟ್ಟವರು ಶೇಕಡ ೪೦ ಜನ. ಅಂತೇಯೇ ಕೆಲಸದ ಕುರಿತು ಅವಸರವಿಲ್ಲ ಎಂದು ಹೇಳಿದ ಗ್ರಾಮೀಣ ಜನತೆಯ ಪ್ರಮಾಣ ಶೇಕಡ ೨೬. ನಮ್ಮ ಕೆಲಸ ಮಾಡಿಕೊಡುವುದು ಅವರ ಕರ್ತವ್ಯ ಎಂದು ಹೇಳಿದ ಗ್ರಾಮೀಣರ ಪ್ರಮಾಣ ಶೇಕಡ ೩೩. ಅಂತೆಯೇ ನಗರ ಪ್ರದೇಶಕ್ಕೆ ಬಂದಾಗ ಶೇಕಡ ೩೭ರಷ್ಟು ಜನ ನ್ಯಾಯ ಸಮ್ಮತ ಕೆಲಸಕ್ಕಾಗಿ, ಶೇಕಡ ೨೫ರಷ್ಟು ಜನ ಕೆಲಸದ ಕುರಿತು ಅವಸರ ಇಲ್ಲದೇ ಇರುವ ಕಾರಣಕ್ಕಾಗಿ, ಹಾಗೆಯೇ ಶೇಕಡ ೩೮ರಷ್ಟು ಜನ ಇದು ಅವರ ಕರ್ತವ್ಯ ಎಂಬ ಕಾರಣಕ್ಕಾಗಿ ಲಂಚ ನೀಡಲು ಒಪ್ಪುವುದಿಲ್ಲ ಎಂದು ಅಭಿಪ್ರಾಯ ತಿಳಿಸಿದ್ದಾರೆ. ಇನ್ನು ೪೫ ವರ್ಷದೊಳಗಿನವರಲ್ಲಿ ನ್ಯಾಯ ಸಮ್ಮತ ಕೆಲಸದ ಕಾರಣದಿಂದಾಗಿ ಶೇಕಡ ೩೪ರಷ್ಟು ಜನ ಲಂಚ ನೀಡುವುದನ್ನು ಒಪ್ಪುವುದಿಲ್ಲ. ಅಂತೇಯೇ ಇವರಲ್ಲಿ ಶೇಕಡ ೩೧ರಷ್ಟು ಕೆಲಸದ ಕುರಿತು ಅವಸರವಿಲ್ಲ ಎಂಬ ಕಾರಣ ನೀಡುತ್ತಾರೆ. ಇದು ಅವರ ಕರ್ತವ್ಯ ಎಂದು ಹೇಳಿದವರು ಶೇಕಡ ೩೫. ಇನ್ನು ೪೫ ವರ್ಷಕ್ಕಿಂತ ಮೇಲ್ಪಟ್ಟವರಲ್ಲಿ ನ್ಯಾಯ ಸಮ್ಮತ ಕೆಲಸದ ಕಾರಣದಿಂದಾಗಿ ಲಂಚ ನೀಡಲು ಒಪ್ಪದೇ ಇರುವವರ ಪ್ರಮಾಣ ಶೇಕಡ ೩೩ರಷ್ಟಿದ್ದರೆ, ಕೆಲಸದ ಕುರಿತು ಅವಸರವಿಲ್ಲದವರ ಪ್ರಮಾಣ ಶೇಕಡ ೩೫ ಹಾಗೂ ಇದು ಅವರ ಕರ್ತವ್ಯ ಎಂದು ಹೇಳಿದವರ ಪ್ರಮಾಣ ಶೇಕಡ ೩೨. ಇನ್ನು ಗುಲ್ಬರ್ಗ ವಿಭಾಗದಲ್ಲಿ ನ್ಯಾಯ ಸಮ್ಮತವಾದ ಕೆಲಸ ಎಂದು ಶೇಕಡ ೩೬, ಕೆಲಸದ ಬಗ್ಗೆ ಅವಸರವಿಲ್ಲ ಎಂದು ಶೇಕಡ ೩೪, ಹಾಗೂ ಇದು ಅವರ ಕರ್ತವ್ಯ ಎಂದು ಶೇಕಡ ೩೦ ಜನ ಹೇಳಿದ್ದಾರೆ. ಇನ್ನು ಬೆಳಗಾವಿ ವಿಭಾಗದಲ್ಲಿ ನ್ಯಾಯ ಸಮ್ಮತ ಕೆಲಸ ಎಂದು ಹೇಳಿದವರ ಪ್ರಮಾಣ ಶೇಕಡ ೩೪ ಮತ್ತು ಕೆಲಸದ ಬಗ್ಗೆ ಅವಸರವಿಲ್ಲ ಎಂದು ಹೇಳಿದವರು ಶೇಕಡ ೩೨ರಷ್ಟು ಜನ. ಮೈಸೂರು ವಿಭಾಗದಲ್ಲಿ ಶೇಕಡ ೩೭ ಜನ ಇದು ಅವರ ಕರ್ತವ್ಯ ಎಂಬ ಕಾರಣ ನೀಡಿದರೇ, ಶೇಕಡ

೩೦ರಷ್ಟು ಜನ ನಮಗೆ ಕೆಲಸದ ಕುರಿತು ಅವಸರವಿಲ್ಲ ಎಂದು ಹೇಳಿದ್ದಾರೆ. ಅಂತೆಯೇ ಶೇಕಡ ೩೩ ಜನ ತಮ್ಮದು ನ್ಯಾಯಸಮ್ಮತ ಕೆಲಸ ಎಂಬ ಕಾರಣ ನೀಡಿ ತಾವು ಲಂಚ ನೀಡುವುದನ್ನು ಒಪ್ಪುವುದಿಲ್ಲ ಎಂದು ಹೇಳಿದ್ದಾರೆ. ಇನ್ನು ಬೆಂಗಳೂರು ವಿಭಾಗದಲ್ಲಿ ಶೇಕಡ ೩೨ರಷ್ಟು ಜನ ನ್ಯಾಯ ಸಮ್ಮತ ಕೆಲಸಕ್ಕಾಗಿ, ಶೇಕಡ ೩೨ರಷ್ಟು ಜನ ಕೆಲಸದ ಕುರಿತು ಅವಸರ ಇಲ್ಲದೇ ಇರುವ ಕಾರಣಕ್ಕಾಗಿ, ಹಾಗೆಯೇ ಶೇಕಡ ೩೬ರಷ್ಟು ಜನ ಇದು ಅವರ ಕರ್ತವ್ಯ ಎಂಬ ಕಾರಣಕ್ಕಾಗಿ ಲಂಚ ನೀಡಲು ಒಪ್ಪುವುದಿಲ್ಲ ಎಂದು ತಮ್ಮ ಅಭಿಪ್ರಾಯ ತಿಳಿಸಿದ್ದಾರೆ.

೧೪. ಲಂಚ ನೀಡಲು ಎಲ್ಲಿಂದ ಹಣ ಪಡೆದಿರಿ? ಎಂಬ ಪ್ರಶ್ನೆಗೆ ನಮ್ಮದು ಸ್ವಂತ ಹಣ ಎಂದು ಉತ್ತರಿಸಿದವರು ಶೇಕಡ ೪೪.೨೫. ಸಾಲದ ಹಣ ಎಂದು ಹೇಳಿದವರ ಪ್ರಮಾಣ ಶೇಕಡ ೩೪.೭೫. ಇತರೆ ಮಾರ್ಗದ ಮೂಲಕ ಹಣ ತಂದವರು ಶೇಕಡ ೨೧. ಪುರುಷರಲ್ಲಿ ಶೇಕಡ ೪೨ ಸ್ವಂತ ಹಣದಿಂದಲೂ, ಶೇಕಡ ೩೮ ಸಾಲದಿಂದಲೂ, ಶೇಕಡ ಇತರೆ ಮಾರ್ಗದಿಂದಲೂ ಹಣ ತಂದು ಲಂಚ ರೂಪದಲ್ಲಿ ನೀಡಿದ್ದಾರೆ. ಅದರಂತೆ ಮಹಿಳೆಯರಲ್ಲಿ ಶೇಕಡ ೪೧ರಷ್ಟು ಹಣವನ್ನು ಸಾಲದ ರೂಪದಲ್ಲಿ ತಂದರೆ, ಶೇಕಡ ೪೩ರಷ್ಟು ಮಹಿಳೆಯರು ತಮ್ಮ ಸ್ವಂತ ಹಣದಿಂದಲೇ ಸಾಲ ನೀಡಿದ್ದಾರೆ. ಇನ್ನು ಇತರ ಮಾರ್ಗದಿಂದ ಹಣ ತಂದು ಲಂಚ ನೀಡಿದ ಮಹಿಳೆಯರ ಪ್ರಮಾಣ ಶೇಕಡ ೧೬. ಎಸ್‌ಎಸ್‌ಎಲ್‌ಸಿ ಮೇಲ್ಪಟ್ಟವರಲ್ಲಿ ಲಂಚದ ರೂಪದಲ್ಲಿ ಸ್ವಂತ ಹಣವನ್ನು ನೀಡಿದವರು ಶೇಕಡ ೩೯. ಇವರಲ್ಲಿ ಶೇಕಡ ೪೨ರಷ್ಟು ಸಾಲದ ರೂಪದಲ್ಲಿ ಮತ್ತು ಶೇಕಡ ೧೯ ಇತರ ಮಾರ್ಗದ ಮೂಲಕ ನೀಡಬೇಕಾದ ಲಂಚದ ಹಣವನ್ನು ಪಡೆದಿದ್ದಾರೆ. ಎಸ್‌ಎಸ್‌ಎಲ್‌ಸಿಗಿಂತ ಕಡಿಮೆ ಓದಿದವರಲ್ಲಿ ನಮ್ಮದು ಸ್ವಂತ ಹಣ ಎಂದು ಉತ್ತರಿಸಿದವರ ಪ್ರಮಾಣ ಶೇಕಡ ೩೭. ನಮ್ಮದು ಸಾಲ ಮಾಡಿ ತಂದು ನೀಡಿದ ಲಂಚದ ಹಣ ಎಂದು ಹೇಳಿದವರು ಶೇಕಡ ೪೬. ಮತ್ತು ಇತರ ಮಾರ್ಗದ ಮೂಲಕ ಲಂಚದ ಹಣವನ್ನು ತಂದವರ ಪ್ರಮಾಣ ಶೇಕಡ ೧೭. ಇನ್ನು ಗ್ರಾಮೀಣ ಪ್ರದೇಶದಲ್ಲಿ ಶೇಕಡ ೩೩ ಜನ ತಮ್ಮದು ಸ್ವಂತ ಹಣವೆಂತಲೂ, ಶೇಕಡ ೪೮ರಷ್ಟು ನಾವು ಸಾಲ ರೂಪದಲ್ಲಿ ತಂದೆವು ಎಂದು ಹೇಳಿದ್ದಾರೆ. ನಗರ ಜನತೆಯಲ್ಲಿ ಈ ಕುರಿತು ಪ್ರಶ್ನೆ ಕೇಳಿದಾಗ ಶೇಕಡ ೪೪ ಜನ ತಮ್ಮದು ಸ್ವಂತ ಹಣ ಎಂದು ಹೇಳಿದರೇ, ಶೇಕಡ ೩೭ ಜನ ಮಾತ್ರ ತಮ್ಮದು ಸಾಲದ ಹಣ ಎಂದು ಹೇಳಿದ್ದಾರೆ. ೪೫ ವರ್ಷದೊಳಗಿನವರಲ್ಲಿ ತಮ್ಮ ಸ್ವಂತ ಹಣದಿಂದ ಲಂಚ ಕೊಟ್ಟವರ ಪ್ರಮಾಣ ಶೇಕಡ ೪೩

ರಷ್ಟಿದ್ದರೆ, ಸಾಲದ ರೂಪದಲ್ಲಿ ಲಂಚ ಕೊಟ್ಟವರ ಪ್ರಮಾಣ ಶೇಕಡ ೩೪. ಅಂತೆಯೇ ಇತರ ಮಾರ್ಗದ ಮೂಲಕ ಲಂಚ ನೀಡಲು ಹಣ ತಂದವರ ಪ್ರಮಾಣ ಶೇಕಡ ೨೩. ೪೫ ವರ್ಷಕ್ಕಿಂತ ಮೇಲ್ಪಟ್ಟವರಲ್ಲಿ ಶೇಕಡ ೩೭ರಷ್ಟು ಜನ ಸಾಲದ ರೂಪದಲ್ಲಿ ಲಂಚದ ಹಣವನ್ನು ತಂದರೆ, ಶೇಕಡ ೪೫ರಷ್ಟು ಜನ ಸ್ವಂತ ಹಣದಿಂದಲೇ ಲಂಚದ ಹಣ ನೀಡಿದ್ದಾರೆ. ಶೇಕಡ ೧೮ರಷ್ಟು ಮಾತ್ರ ಇತರ ಮಾರ್ಗದ ಮೂಲಕ ಲಂಚ ನೀಡಿದ್ದಾರೆ. ಇನ್ನು ವಿಭಾಗವಾರು ಮಟ್ಟದ ಸಮೀಕ್ಷೆಯಲ್ಲಿ ಗುಲ್ಬರ್ಗ ವಿಭಾಗದಲ್ಲಿ ಶೇಕಡ ೪೩ರಷ್ಟು ಜನ ಲಂಚ ನೀಡಲು ತಮ್ಮ ಸ್ವಂತ ಹಣವನ್ನು ಬಳಸಿದರೇ, ಶೇಕಡ ೩೬ ಜನತೆ ಇದಕ್ಕಾಗಿ ಸಾಲ ಮಾಡುತ್ತಾರೆ. ಶೇಕಡ ೨೧ರಷ್ಟು ಗುಲ್ಬರ್ಗ ಜನತೆ ಬೇರೆ ಮಾರ್ಗದ ಮೂಲಕ ಲಂಚದ ಹಣವನ್ನು ತರುತ್ತಾರೆ. ಬೆಳಗಾವಿ ವಿಭಾಗದಲ್ಲಿಯೂ ಸಹ ಶೇಕಡ ೪೪ರಷ್ಟು ಜನ ತಮ್ಮ ಸ್ವಂತ ಹಣವನ್ನು, ಶೇಕಡ ೩೪ರಷ್ಟು ಸಾಲ ರೂಪದ ಹಣವನ್ನು, ಶೇಕಡ ೨೨ರಷ್ಟು ಇತರ ಮಾರ್ಗದ ಮೂಲಕ ಹಣವನ್ನು ತರುತ್ತಾರೆ. ಮೈಸೂರು ಮತ್ತು ಬೆಂಗಳೂರು ವಿಭಾಗದಲ್ಲಿ ಶೇಕಡ ೪೫ರಷ್ಟು ಲಂಚಕ್ಕೆ ತಮ್ಮ ಸ್ವಂತ ಹಣವನ್ನೇ ನೀಡಿದರೆ, ಮೈಸೂರಿನಲ್ಲಿ ಸಾಲದ ರೂಪದಲ್ಲಿ ಲಂಚದ ಹಣವನ್ನು ತರುವವರ ಪ್ರಮಾಣ ಶೇಕಡ ೩೫. ಅದೇ ರೀತಿ ಬೆಂಗಳೂರಿನಲ್ಲಿ ಶೇಕಡ ೩೪. ಮೈಸೂರು ಮತ್ತು ಬೆಂಗಳೂರಿನಲ್ಲಿ ಇತರ ಮಾರ್ಗದ ಮೂಲಕ ಲಂಚದ ಹಣ ತಂದವರ ಪ್ರಮಾಣ ಕ್ರಮವಾಗಿ ಶೇಕಡ ೨೦ ಮತ್ತು ಶೇಕಡ ೨೧ರಷ್ಟು.

೧೫. ನೀವು ವರ್ಷದಲ್ಲಿ ಎಷ್ಟು ರೂಪಾಯಿಯನ್ನು ಲಂಚವಾಗಿ ಕೊಟ್ಟೀರುತ್ತೀರಿ? ಎಂಬ ಪ್ರಶ್ನೆಗೆ ಶೇಕಡ ೫೩.೩೦ರಷ್ಟು ಜನ ನಾವು ೦ ರಿಂದ ೧೦೦೦ಗಳ ವರೆಗೆ ಲಂಚ ನೀಡಿದ್ದೇವೆ ಎಂದು ಉತ್ತರಿಸಿದ್ದಾರೆ. ಶೇಕಡ ೪೪.೫೦ರಷ್ಟು. ತಾವು ವರ್ಷದಲ್ಲಿ ೧೦೦೦ ರಿಂದ ೨೫,೦೦೦ಗಳ ವರೆಗೆ ಲಂಚ ನೀಡಿದ್ದೇವೆ ಎಂದು ಹೇಳಿದ್ದಾರೆ. ಶೇಕಡ ೨.೨೦ ಜನ ತಾವು ವರ್ಷದಲ್ಲಿ ನೀಡಿದ ಲಂಚ ೨೫೦೦೦ ರಿಂದ ೫೦೦೦೦ಗಳ ವರೆಗೆ ಎಂದು ತಿಳಿಸಿದ್ದಾರೆ. ಶೇಕಡ ೫೧ರಷ್ಟು ಪುರುಷರು ತಾವು ವರ್ಷದಲ್ಲಿ ೦ ರಿಂದ ೧೦೦೦ಗಳ ವರೆಗೆ ಲಂಚ ನೀಡಿದ್ದೇವೆ ಎಂದರೇ, ವರ್ಷಕ್ಕೆ ೧೦೦೦ ರಿಂದ ೨೫,೦೦೦ಗಳ ವರೆಗೆ ಲಂಚ ನೀಡಿರುವ ಪ್ರಮಾಣ ಶೇಕಡ ೩೨. ಕೇವಲ ಶೇಕಡ ೧ರಷ್ಟು ಪುರುಷರು ತಾವು ೨೫,೦೦೦ ರಿಂದ ೫೦,೦೦೦ದ ವರೆಗೆ ಲಂಚ ನೀಡಿದ್ದಾಗಿಯೂ ತಿಳಿಸಿದ್ದಾರೆ. ಮಹಿಳೆಯರಲ್ಲಿ ವರ್ಷಕ್ಕೆ ಶೇಕಡ ೪೫ರಷ್ಟು ೦ ರಿಂದ ೧೦೦೦ ರವರೆಗೆ, ಶೇಕಡ ೫೫ರಷ್ಟು ೧೦೦೦ ರಿಂದ ೨೫.೦೦೦ಗಳ ವರೆಗೆ ಲಂಚ ಕೊಟ್ಟಿರುತ್ತಾರೆ. ಎಸ್ಎಸ್ಎಲ್‌ಸಿ ಮೇಲ್ಪಟ್ಟವರಲ್ಲಿ ೦ ರಿಂದ ೧೦೦೦ಗಳ

ವರೆಗೆ ಲಂಚ ಕೊಟ್ಟವರ ಪ್ರಮಾಣ ಶೇಕಡ ೪೮. ಆದರೆ ೧೦೦೦ ರಿಂದ ೨೫,೦೦೦ಗಳ ವರೆಗೆ ಲಂಚ ಕೊಟ್ಟವರ ಪ್ರಮಾಣ ೫೧. ಇನ್ನು ಶೇಕಡ ೧ರಷ್ಟು ಮಾತ್ರ ೨೫,೦೦೦ ರಿಂದ ೫೦,೦೦೦ಗಳ ವರೆಗೆ ಲಂಚ ಕೊಟ್ಟಿದ್ದಾಗಿಯೂ ತಿಳಿದು ಬಂದಿದೆ. ಇನ್ನು ಎಸ್‌ಎಸ್‌ಎಲ್‌ಸಿಗಿಂತ ಕಡಿಮೆ ಓದಿದವರಲ್ಲಿ ಶೇಕಡ ೪೯ರಷ್ಟು ನಾಗರಿಕರು ೦ ರಿಂದ ೧೦೦೦ಗಳ ವರೆಗೆ ಹಾಗೂ ಶೇಕಡ ೫೧ರಷ್ಟು ನಾಗರಿಕರು ವರ್ಷದಲ್ಲಿ ತಾವು ೧೦೦೦ ರಿಂದ ೨೫,೦೦೦ಗಳ ವರೆಗೆ ಲಂಚ ನೀಡಿರುವುದಾಗಿಯೂ ತಿಳಿಸಿದ್ದಾರೆ. ಇನ್ನು ಗ್ರಾಮೀಣ ಪ್ರದೇಶದಲ್ಲಿ ಪರಿಸ್ಥಿತಿ ವಿಭಿನ್ನವಾಗಿದ್ದು ಅಲ್ಲಿ ವರ್ಷಕ್ಕೆ ೦ ರಿಂದ ೧೦೦೦ದ ವರೆಗೆ ಲಂಚ ನೀಡಿದವರ ಪ್ರಮಾಣ ಶೇಕಡ ೭೪. ೧೦೦೦ ರಿಂದ ೨೫,೦೦೦ಗಳ ವರೆಗೆ ಲಂಚ ನೀಡಿದವರ ಪ್ರಮಾಣ ಶೇಕಡ ೨೬. ನಗರ ಪ್ರದೇಶಕ್ಕೆ ಬಂದರೆ ಅಲ್ಲಿ ಶೇಕಡ ೫೨ರಷ್ಟು ಜನ ವರ್ಷಕ್ಕೆ ೦ ರಿಂದ ೧೦೦೦ಗಳ ವರೆಗೆ ಲಂಚ ಕೊಡುತ್ತಾರೆ ಎಂದು ತಿಳಿಸಿರುತ್ತಾರೆ. ನಗರ ಪ್ರದೇಶದ ಶೇಕಡ ೪೭.೨ರಷ್ಟು ಜನರು ೧೦೦೦ ರಿಂದ ೨೫,೦೦೦ಗಳ ವರೆಗೆ ಲಂಚ ನೀಡಿದರೆ, ಕೇವಲ ೦.೮ರಷ್ಟು ಜನ ಮಾತ್ರ ೨೫,೦೦೦ ರಿಂದ ೫೦,೦೦೦ದ ವರೆಗೆ ಲಂಚ ನೀಡಿದ್ದಾಗಿಯೂ ಮಾಹಿತಿ ನೀಡಿದ್ದಾರೆ. ೪೫ ವರ್ಷದೊಳಗಿನವರಲ್ಲಿ ಶೇಕಡ ೪೮ ಜನ ೦ ರಿಂದ ೧೦೦೦ಗಳ ವರೆಗೆ ಹಾಗೂ ಶೇಕಡ ೫೧.೭ರಷ್ಟು ಜನ ೧೦,೦೦೦ ರಿಂದ ೨೫,೦೦೦ದ ವರೆಗೆ ಹಾಗೂ ಶೇಕಡ ೦.೩ ಜನ ೨೫,೦೦೦ ರಿಂದ ೫೦,೦೦೦ದ ವರೆಗೆ ಲಂಚ ನೀಡಿದ್ದಾರೆ. ಇನ್ನು ೪೫ ವರ್ಷ ಮೇಲ್ಪಟ್ಟವರಲ್ಲಿ ವರ್ಷಕ್ಕೆ ೦ ರಿಂದ ೧೦೦೦ಗಳ ವರೆಗೆ ಲಂಚ ಕೊಟ್ಟವರ ಪ್ರಮಾಣ ಶೇಕಡ ೪೯ ಇದ್ದರೆ, ೧೦೦೦ ರಿಂದ ೨೫,೦೦೦ದ ವರೆಗೆ ಲಂಚ ಕೊಟ್ಟವರ ಪ್ರಮಾಣ ಶೇಕಡ ೫೦.೮. ಇವರಲ್ಲಿ ಶೇಕಡ ೦.೨ರಷ್ಟು ಮಾತ್ರ ೨೫,೦೦೦ ರಿಂದ ೫೦,೦೦೦ದ ವರೆಗೆ ಲಂಚ ಕೊಟ್ಟಿದ್ದಾರೆ. ಇನ್ನು ವಿಭಾಗವಾರು ಮಟ್ಟದಲ್ಲಿ ಗುಲ್ಬರ್ಗದಲ್ಲಿ ೦ ರಿಂದ ೧೦೦೦ಗಳ ವರೆಗೆ ಲಂಚ ಕೊಟ್ಟವರ ಪ್ರಮಾಣ ಶೇಕಡ ೪೮. ಇಲ್ಲಿ ಶೇಕಡ ೫೧.೩ರಷ್ಟು ಜನ ೧೦೦೦ ರಿಂದ ೨೫,೦೦೦ದ ವರೆಗೆ ಲಂಚ ನೀಡಿದ್ದರೆ, ಶೇಕಡ ೦.೭ರಷ್ಟು ಜನರು ೨೫,೦೦೦ ರಿಂದ ೫೦,೦೦೦ದ ವರೆಗೆ ಲಂಚ ನೀಡಿದ್ದಾರೆ. ಬೆಳಗಾವಿ ವಿಭಾಗದಲ್ಲಿ ಶೇಕಡ ೪೬ ಜನ ೦ ರಿಂದ ೧೦೦೦ಗಳ ವರೆಗೆ ಹಾಗೂ ಶೇಕಡ ೫೩.೪ರಷ್ಟು ಜನ ೧೦೦೦ ರಿಂದ ೨೫,೦೦೦ದ ವರೆಗೆ ಹಾಗೂ ಶೇಕಡ ೦.೬ ಜನ ೨೫,೦೦೦ ರಿಂದ ೫೦,೦೦೦ದ ವರೆಗೆ ಲಂಚ ನೀಡಿದ್ದಾರೆ. ಮೈಸೂರಿನಲ್ಲಿ ಶೇಕಡ ೪೫ರಷ್ಟು ಜನ ವರ್ಷಕ್ಕೆ ೦ ರಿಂದ ೧೦೦೦ಗಳ ವರೆಗೂ ಲಂಚ ಕೊಡುತ್ತಾರಂತೆ. ಇಲ್ಲಿಯ ಶೇಕಡ ೫೪.೬ ಜನರು ೧೦೦೦ ರಿಂದ

೨೫,೦೦೦ದ ವರೆಗೆ ಲಂಚ ನೀಡಿದರೆ, ಕೇವಲ ೦.೪ರಷ್ಟು ಜನ ಮಾತ್ರ ೨೫,೦೦೦ ರಿಂದ ೫೦,೦೦೦ದ ವರೆಗೆ ಲಂಚ ಕೊಡಬೇಕಾಗಿ ಬಂದಿರುವುದಾಗಿ ತಿಳಿಸಿದ್ದಾರೆ. ಇನ್ನು ಬೆಂಗಳೂರು ವಿಭಾಗದಲ್ಲಿ ಶೇಕಡ ೪೫ ಜನ ೦ ರಿಂದ ೧೦೦೦ಗಳ ವರೆಗೆ ಹಾಗೂ ಶೇಕಡ ೫೪.೫ರಷ್ಟು ಜನ ೧೦೦೦ ರಿಂದ ೨೫,೦೦೦ದ ವರೆಗೆ ಹಾಗೂ ಶೇಕಡ ೦.೫ ಜನ ೨೫,೦೦೦ ರಿಂದ ೫೦,೦೦೦ದ ವರೆಗೆ ಲಂಚ ನೀಡಿದ್ದಾಗಿ ಸಮೀಕ್ಷೆಯಲ್ಲಿ ತಿಳಿದು ಬಂದಿದೆ.

೧೬. ನೀವು ಈವರೆಗೆ ಅಂದಾಜು ಎಷ್ಟು ಸಲ ಲಂಚವನ್ನು ಕೊಟ್ಟಿದ್ದೀರಿ? ಎಂದು ಕೇಳಿದಾಗ ೧ ರಿಂದ ೫ ಸಲ ಎಂದು ಉತ್ತರಿಸಿದವರ ಪ್ರಮಾಣ ಶೇಕಡ ೪೬.೭. ೫ ರಿಂದ ೮ ಸಲ ಎಂದು ಉತ್ತರಿಸಿದವರ ಪ್ರಮಾಣ ಶೇಕಡ ೪೫.೭೫. ಶೇಕಡ ೭.೫ರಷ್ಟು ಜನ ಮಾತ್ರ ೮ ಸಲಕ್ಕಿಂತ ಹೆಚ್ಚು ಲಂಚ ಕೊಟ್ಟಿರುವುದಾಗಿ ಮಾಹಿತಿ ನೀಡಿದ್ದಾರೆ. ಪುರುಷರಲ್ಲಿ ಶೇಕಡ ೫೨ರಷ್ಟು ಪುರುಷರು ೧ ರಿಂದ ೫ ಸಲ, ಶೇಕಡ ೪೨ರಷ್ಟು ಪುರುಷರು ೫ ರಿಂದ ೮ ಸಲ, ಕೇವಲ ಶೇಕಡ ೬ರಷ್ಟು ಪುರುಷರು ೮ಕ್ಕಿಂತ ಹೆಚ್ಚು ಬಾರಿ ಲಂಚ ನೀಡಿರುವುದಾಗಿ ತಿಳಿದು ಬಂದಿದೆ. ಇನ್ನು ಮಹಿಳೆಯರಲ್ಲಿ ೧ ರಿಂದ ೫ ಸಲ ಕೊಟ್ಟವರ ಪ್ರಮಾಣ ಶೇಕಡ ೫೧ರಷ್ಟಿದ್ದರೆ, ೫ ರಿಂದ ೮ ಸಲ ಕೊಟ್ಟವರ ಪ್ರಮಾಣ ಶೇಕಡ ೪೫. ಹಾಗೆಯೆ ಶೇಕಡ ೪ರಷ್ಟು ಮಹಿಳೆಯರು ಮಾತ್ರ ೮ ಸಲಕ್ಕಿಂತ ಹೆಚ್ಚು ಲಂಚ ಕೊಟ್ಟಿದ್ದಾರೆ. ಇನ್ನು ಎಸ್‌ಎಸ್‌ಎಲ್‌ಸಿ ಮೇಲ್ಪಟ್ಟವರಲ್ಲಿ ಈ ಪ್ರಮಾಣ ಈ ರೀತಿಯಾಗಿದೆ. ಇವರಲ್ಲಿ ೧ ರಿಂದ ೫ ಸಲ ಲಂಚ ಕೊಟ್ಟವರ ಪ್ರಮಾಣ ಶೇಕಡ ೫೦ ರಷ್ಟಿದ್ದರೇ, ಶೇಕಡ ೪೫ರಷ್ಟು ಜನರು ತಾವು ೫ ರಿಂದ ೮ ಸಲ ಲಂಚ ಕೊಟ್ಟಿರುವುದಾಗಿ ತಿಳಿಸಿದ್ದಾರೆ. ಶೇಕಡ ೫ರಷ್ಟು ಜನ ಮಾತ್ರ ತಾವು ೮ ಸಲಕ್ಕಿಂತ ಹೆಚ್ಚು ಲಂಚ ಕೊಟ್ಟಿರುವುದಾಗಿ ಒಪ್ಪಿಕೊಂಡಿದ್ದಾರೆ.ಅದಕ್ಕಿಂತ ಕಡಿಮೆ ಓದಿದವರಲ್ಲಿ ಶೇಕಡ ೫೪ರಷ್ಟು ಜನ ೧ ರಿಂದ ೫ ಸಲ, ಶೇಕಡ ೪೨ರಷ್ಟು ಜನ ೫ ರಿಂದ ೮ ಸಲ, ಶೇಕಡ ೪ರಷ್ಟು ಜನ ೮ ಸಲಕ್ಕಿಂತ ಹೆಚ್ಚು ಸಲ ಲಂಚ ನೀಡಿರುವುದಾಗಿ ತಿಳಿದು ಬಂದಿದೆ. ಇನ್ನು ಗ್ರಾಮೀಣ ಪ್ರದೇಶದಲ್ಲಿ ಶೇಕಡ ೫೬ರಷ್ಟು ಜನ ೧ ರಿಂದ ೫ ಸಲ ಲಂಚ ಕೊಟ್ಟಿರುವುದಾಗಿ ತಿಳಿಸಿದ್ದಾರೆ. ಇಲ್ಲಿ ೫ ರಿಂದ ೮ ಸಲ ಲಂಚ ಕೊಟ್ಟವರ ಪ್ರಮಾಣ ಶೇಕಡ ೪೨. ಆದರೆ ಕೇವಲ ಶೇಕಡ ೨ರಷ್ಟು ಗ್ರಾಮೀಣ ಜನತೆ ೮ ಸಲಕ್ಕಿಂತ ಹೆಚ್ಚು ಸಲ ಲಂಚ ನೀಡಿರುವುದಾಗಿ ತಿಳಿಸಿದ್ದಾರೆ. ಇನ್ನು ನಗರ ಪ್ರದೇಶಕ್ಕೆ ಬಂದರೆ ೧ ರಿಂದ ೫ ಸಲ ಲಂಚ ಕೊಟ್ಟವರ ಪ್ರಮಾಣ ಶೇಕಡ ೫೦ ರಷ್ಟಿದ್ದರೇ, ಶೇಕಡ ೪೪ರಷ್ಟು ಜನರು ತಾವು ೫ ರಿಂದ ೮ ಸಲ ಲಂಚ ಕೊಟ್ಟಿರುವುದಾಗಿ ತಿಳಿಸಿದ್ದಾರೆ. ಶೇಕಡ ೬ರಷ್ಟು ಜನ ಮಾತ್ರ ತಾವು ೮ ಸಲಕ್ಕಿಂತ

ಹೆಚ್ಚು ಲಂಚ ಕೊಟ್ಟಿರುವುದಾಗಿ ಒಪ್ಪಿಕೊಂಡಿದ್ದಾರೆ. ಇನ್ನು ೪೫ ವರ್ಷದೊಳಗಿನವರಲ್ಲಿ ಈ ಪ್ರಮಾಣ ಈ ರೀತಿಯಾಗಿದೆ. ಅವರಲ್ಲಿ ಶೇಕಡ ೪೮ರಷ್ಟು ಜನ ೧ ರಿಂದ ೫ ಸಲ, ಶೇಕಡ ೪೭ರಷ್ಟು ಜನ ೫ ರಿಂದ ೮ ಸಲ, ಶೇಕಡ ೫ರಷ್ಟು ಜನ ೮ ಸಲಕ್ಕಿಂತ ಹೆಚ್ಚು ಸಲ ಲಂಚ ನೀಡಿರುವುದಾಗಿ ತಿಳಿದು ಬಂದಿದೆ. ಇನ್ನು ೪೫ ವರ್ಷ ಮೇಲ್ಪಟ್ಟವರಲ್ಲಿ ಈ ಪ್ರಶ್ನೆ ಕೇಳಿದಾಗ ೧ ರಿಂದ ೫ ಸಲ ಎಂದು ಉತ್ತರಿಸಿದವರ ಪ್ರಮಾಣ ಶೇಕಡ ೪೭. ೫ ರಿಂದ ೮ ಸಲ ಎಂದು ಉತ್ತರಿಸಿದವರ ಪ್ರಮಾಣ ಶೇಕಡ ೪೬. ಶೇಕಡ ೭ರಷ್ಟು ಜನ ಮಾತ್ರ ೮ ಸಲಕ್ಕಿಂತ ಹೆಚ್ಚು ಲಂಚ ಕೊಟ್ಟಿರುವುದಾಗಿ ಮಾಹಿತಿ ನೀಡಿದ್ದಾರೆ. ವಿಭಾಗವಾರು ಮಟ್ಟದಲ್ಲಿ ಸಮೀಕ್ಷೆ ನಡೆಸಿದಾಗ ತಿಳಿದು ಬಂದಿರುವ ಸಂಗತಿ ಎಂದರೇ ಗುಲ್ಬರ್ಗದಲ್ಲಿ ಶೇಕಡ ೪೭ರಷ್ಟು ಜನರು ೧ ರಿಂದ ೫ ಸಲ, ಶೇಕಡ ೪೫ರಷ್ಟು ಜನರು ೫ ರಿಂದ ೮ ಸಲ ಮತ್ತು ಶೇಕಡ ೮ರಷ್ಟು ಜನ ೮ ಸಲಕ್ಕಿಂತ ಹೆಚ್ಚು ನೀಡಿರುವುದಾಗಿ ಒಪ್ಪಿಕೊಂಡಿದ್ದಾರೆ. ಇನ್ನು ಬೆಳಗಾವಿ ವಿಭಾಗದಲ್ಲಿ ೧ ರಿಂದ ೫ ಸಲ ಲಂಚ ಕೊಟ್ಟವರ ಪ್ರಮಾಣ ಶೇಕಡ ೪೮ ರಷ್ಟಿದ್ದರೇ, ಶೇಕಡ ೪೬ರಷ್ಟು ಜನರು ತಾವು ೫ ರಿಂದ ೮ ಸಲ ಲಂಚ ಕೊಟ್ಟಿರುವುದಾಗಿ ತಿಳಿಸಿದ್ದಾರೆ. ಶೇಕಡ ೬ರಷ್ಟು ಜನ ಮಾತ್ರ ತಾವು ೮ ಸಲಕ್ಕಿಂತ ಹೆಚ್ಚು ಲಂಚ ಕೊಟ್ಟಿರುವುದಾಗಿ ಒಪ್ಪಿಕೊಂಡಿದ್ದಾರೆ. ಇನ್ನು ಮೈಸೂರು ವಿಭಾಗದಲ್ಲಿ ಶೇಕಡ ೪೭ರಷ್ಟು ಜನ ೧ ರಿಂದ ೫ ಸಲ, ಶೇಕಡ ೪೫ರಷ್ಟು ಜನ ೫ ರಿಂದ ೮ ಸಲ, ಶೇಕಡ ೮ರಷ್ಟು ನಾಗರಿಕರು ೮ ಸಲಕ್ಕಿಂತ ಹೆಚ್ಚು ಸಲ ಲಂಚ ನೀಡಿರುವ ಸಂಗತಿ ಸಮೀಕ್ಷೆಯಿಂದ ತಿಳಿದು ಬಂದಿದೆ. ಹಾಗೆಯೇ ಬೆಂಗಳೂರು ವಿಭಾಗದಲ್ಲಿ ಸಮೀಕ್ಷೆ ನಡೆಸಿದಾಗ ಶೇಕಡ ೪೫ರಷ್ಟು ಜನ ೧ ರಿಂದ ೫ ಸಲ ಲಂಚ ಕೊಟ್ಟಿರುವುದಾಗಿ ತಿಳಿಸಿದ್ದಾರೆ. ಇಲ್ಲಿ ೫ ರಿಂದ ೮ ಸಲ ಲಂಚ ಕೊಟ್ಟವರ ಪ್ರಮಾಣ ಶೇಕಡ ೪೭. ಆದರೆ ಶೇಕಡ ೮ರಷ್ಟು ಇಲ್ಲಿನ ಜನತೆ ೮ ಸಲಕ್ಕಿಂತ ಹೆಚ್ಚು ಸಲ ಲಂಚ ನೀಡಿರುವುದಾಗಿ ಈ ಸಮೀಕ್ಷೆಯಲ್ಲಿ ತಿಳಿಸಿದ್ದಾರೆ.


ಲೋಕಾಯುಕ್ತ ದಾಳಿಯ ಕುರಿತು

೧. ನಿಮ್ಮ ಸಂಬಂಧಿಕರು ಲೋಕಾಯುಕ್ತ ದಾಳಿಗೆ ಒಳಗಾಗಿದ್ದಾರೆಯೇ? ಎಂಬ ಪ್ರಶ್ನೆಗೆ ಹೌದು ಎಂದು ಉತ್ತರಿಸಿದವರ ಪ್ರಮಾಣ ಕೇವಲ ಶೇಕಡ ೧೨. ಅಂತೆಯೇ ಇಲ್ಲ ಎಂದವರ ಪ್ರಮಾಣ ಶೇಕಡ ೮೮. ಶೇಕಡ ೧೬ ಪುರುಷರು ನಮ್ಮ ಸಂಬಂಧಿಕರು ಲೋಕಾಯುಕ್ತ ದಾಳಿಗೆ ಒಳಗಾಗಿದ್ದಾರೆ ಎಂದು ತಿಳಿಸಿದರೆ, ಶೇಕಡ ೮ರಷ್ಟು ಮಹಿಳೆಯರು ಸಹ ನಮ್ಮ ಲೋಕಾಯುಕ್ತ ದಾಳಿಗೆ ನಮ್ಮ ಸಂಬಂಧಿಕರು ಒಳಗಾಗಿದ್ದಾರೆ ಎಂದಿದ್ದಾರೆ. ಈ ದಾಳಿಯ

ಪ್ರಮಾಣ ಎಸ್‌ಎಸ್‌ಎಲ್‌ಸಿಗಿಂತ ಮೇಲ್ಪಟ್ಟವರಲ್ಲಿ ಶೇಕಡ ೧೨ರಷ್ಟಿದ್ದರೇ, ಅದಕ್ಕಿಂತ ಕಡಿಮೆ ಓದಿದವರಲ್ಲಿ ಈ ಪ್ರಮಾಣ ಶೇಕಡ ೯ರಷ್ಟಿದೆ. ಇನ್ನು ಗ್ರಾಮೀಣ ಪ್ರದೇಶದಲ್ಲಿ ಲೋಕಾಯುಕ್ತ ದಾಳಿಗೆ ಒಳಗಾದ ಸಂಬಂಧಿಕರ ಪ್ರಮಾಣ ಶೇಕಡ ೭. ಅಂತೆಯೇ ನಗರ ಪ್ರದೇಶದಲ್ಲಿ ಈ ಪ್ರಮಾಣ ಶೇಕಡ ೧೧. ೪೫ ದೊಳಗಿನವರೆಗೆ ಈ ಕುರಿತು ಪ್ರಶ್ನಿಸಿದಾಗ ಅವರಲ್ಲಿ ಶೇಕಡ ೧೨ರಷ್ಟು ಜನ ನಮ್ಮ ಸಂಬಂಧಿಕರಲ್ಲಿ ಲೋಕಾಯುಕ್ತ ದಾಳಿಗೆ ಒಳಗಾಗಿದ್ದಾರೆ ಎಂದು ಉತ್ತರಿಸಿದ್ದಾರೆ. ೪೫ ವರ್ಷಕ್ಕಿತ ಮೇಲ್ಪಟ್ಟವರಲ್ಲಿ ಶೇಕಡ ೯ರಷ್ಟು ಸಂಬಂಧಿಕರು ಲೋಕಾಯುಕ್ತ ದಾಳಿಗೆ ಒಳಗಾಗಿದ್ದಾರೆ. ಇನ್ನು ಗುಲ್ಬರ್ಗದಲ್ಲಿ ಇದರ ಪ್ರಮಾಣ ಹೆಚ್ಚಾಗಿದ್ದು ಅಲ್ಲಿ ಶೇಕಡ ೧೫ರಷ್ಟು ಜನರ ಸಂಬಂಧಿಕರು ಲೋಕಾಯುಕ್ತ ದಾಳಿಗೆ ಒಳಗಾಗಿದ್ದಾರೆ. ಮೈಸೂರಿನಲ್ಲಿ ಈ ದಾಳಿಯ ಪ್ರಮಾಣ ಶೇಕಡ ೯ ರಷ್ಟಿದ್ದರೆ, ಬೆಳಗಾವಿಯಲ್ಲಿ ಶೇಕಡ ೧೩ ಮತ್ತು ಬೆಂಗಳೂರಿನಲ್ಲಿ ಶೇಕಡ ೧೧ ರಷ್ಟಿದೆ.

೨. ನಿಮ್ಮ ಪರಿಚಯದವರು/ಸಂಬಂಧಿಕರು/ಊರವರು ಲೋಕಾಯುಕ್ತದಿಂದ ಶಿಕ್ಷಿಸಲ್ಪಟ್ಟಿದ್ದಾರೆಯೇ ಎಂಬ ಪ್ರಶ್ನೆಗೆ ಕೇವಲ ಶೇಕಡ ೭.೭೫ರಷ್ಟು ಹೌದು ಎಂದಿದ್ದಾರೆ. ಶೇಕಡ ೧೧ರಷ್ಟು ಪುರುಷರು ತಮ್ಮ ಸಂಬಂಧಿಕರು/ಪರಿಚಯದವರು/ಊರವರು ಲೋಕಾಯುಕ್ತದಿಂದ ಶಿಕ್ಷಿಸಲ್ಪಟ್ಟಿದ್ದಾರೆ ಎಂದು ಹೇಳಿದರೇ, ಶೇಕಡ ೫ರಷ್ಟು ಮಹಿಳೆಯರು ಇದನ್ನು ಒಪ್ಪಿಕೊಂಡಿದ್ದಾರೆ. ಎಸ್‌ಎಸ್‌ಎಲ್‌ಸಿ ಮೇಲ್ಪಟ್ಟವರಲ್ಲಿ ಶೇಕಡ ೬ ಮತ್ತು ಅದಕ್ಕಿಂತ ಕಡಿಮೆ ಓದಿದವರಲ್ಲಿ ಶೇಕಡ ೪ರಷ್ಟು ನಮ್ಮ ಪರಿಚಯದವರು/ಸಂಬಂಧಿಕರು ಲೋಕಾಯುಕ್ತದಿಂದ ಶಿಕ್ಷಿಸಲ್ಪಟ್ಟಿದ್ದಾರೆ ಎಂದು ಹೇಳಿದ್ದಾರೆ. ಗ್ರಾಮೀಣ ಪ್ರದೇಶದಲ್ಲಿ ಶೇಕಡ ೩ ಮತ್ತು ನಗರ ಪ್ರದೇಶದಲ್ಲಿ ಶೇಕಡ ೮ರಷ್ಟು ಜನ ಇದೇ ರೀತಿಯ ಅಭಿಪ್ರಾಯವನ್ನು ವ್ಯಕ್ತ ಪಡಿಸಿದ್ದಾರೆ. ೪೫ ವರ್ಷದೊಳಗಿನವರಲ್ಲಿ ಶೇಕಡ ೫ರಷ್ಟು ಜನ ತಮ್ಮ ಪರಿಚಯ/ಸಂಬಂಧಿಕರು/ಊರವರು ಲೋಕಾಯುಕ್ತ ಶಿಕ್ಷೆಗೆ ಒಳಗಾಗಿದ್ದಾರೆ ಎಂದು ತಿಳಿಸಿದರೆ, ೪೫ ವರ್ಷದ ಮೇಲ್ಪಟ್ಟವರಲ್ಲಿ ಇಂತಹವರ ಪ್ರಮಾಣ ಶೇಕಡ ೩. ಇನ್ನು ವಿಭಾಗವಾರು ಮಟ್ಟದ ಸಮೀಕ್ಷೆಯಲ್ಲಿ ಗುಲ್ಬರ್ಗದಲ್ಲಿ ಶೇಕಡ ೯, ಬೆಳಗಾವಿ ಮತ್ತು ಮೈಸೂರಿನಲ್ಲಿ ಶೇಕಡ ೭, ಹಾಗೂ ಬೆಂಗಳೂರಿನಲ್ಲಿ ಶೇಕಡ ೮ರಷ್ಟು ಜನ ತಮ್ಮ ಸಂಬಂಧಿಕರು/ ಪರಿಚಯದವರು/ಊರವರು ಲೋಕಾಯುಕ್ತ ಶಿಕ್ಷೆಗೆ ಒಳಗಾಗಿದ್ದಾರೆ ಎಂದು ತಿಳಿಸಿದ್ದಾರೆ.


ಲಂಚಗುಳಿತನಕ್ಕೆ ಒಳಪಡುವ ಪ್ರಮುಖರು ಮತ್ತು ಅವರ ಶೇಕಡವಾರು ಪ್ರಮಾಣ



೩. ನಿಮ್ಮ ಅಭಿಪ್ರಾಯದಲ್ಲಿ ಲಂಚ ವ್ಯಾಪಕವಾಗಿ ಹರಡಲು ಕಾರಣ ಯಾರಾಗಿರಬಹುದು? ಎಂದು ಕೇಳಿದರೇ ಸರ್ಕಾರಿ ನೌಕರ ಎಂದು ಹೇಳಿದವರ ಪ್ರಮಾಣ ಶೇಕಡ ೪೫.೨೫. ರಾಜಕಾರಣಿ ಅಂತ ಹೇಳಿದವರ ಪ್ರಮಾಣ ಶೇಕಡ ೫೪.೭೫. ಶೇಕಡ ೩೯ರಷ್ಟು ಪುರುಷರು ಸರ್ಕಾರಿ ನೌಕರನೇ ಕಾರಣ ಎಂದು ಹೇಳಿದರೇ, ಶೇಕಡ ೬೪ರಷ್ಟು ಲಂಚ ಇಷ್ಟು ವ್ಯಾಪಕವಾಗಿ ಹರಡಲು ರಾಜಕಾರಣವೇ ಕಾರಣ ಎಂದು ತಮ್ಮ ಅಭಿಪ್ರಾಯ ತಿಳಿಸಿದ್ದಾರೆ. ಎಸ್‌ಎಸ್‌ಎಲ್‌ಸಿ ಮೇಲ್ಪಟ್ಟವರಲ್ಲಿ ಲಂಚದ ವ್ಯಾಪಕತೆಗೆ ಸರ್ಕಾರಿ ನೌಕರನೇ ಕಾರಣ ಎಂದು ಹೇಳಿದವರು ಶೇಕಡ ೩೭ರಷ್ಟಿದ್ದರೇ, ಇನ್ನು ಅದಕ್ಕಿಂತ ಕಡಿಮೆ ಓದಿದವರಲ್ಲಿ ಇದರ ಪ್ರಮಾಣ ಶೇಕಡ ೪೨ರಷ್ಟಿದೆ. ಶೇಕಡ ೫೮ರಷ್ಟು ಗ್ರಾಮೀಣ ಜನತೆಯಲ್ಲಿ ಲಂಚ ವ್ಯಾಪಕವಾಗಿ ಹರಡಲು ರಾಜಕಾರಣವೇ ಕಾರಣ ಎಂಬ ಅಭಿಪ್ರಾಯವಿದ್ದರೆ, ನಗರ ಪ್ರದೇಶದಲ್ಲಿ ಶೇಕಡ ೬೦ ಜನರು ಇದೇ ಅಭಿಪ್ರಾಯವನ್ನು ಹೊಂದಿದವರಾಗಿದ್ದಾರೆ. ೪೫ ವರ್ಷದೊಳಗಿನವರಲ್ಲಿ ಶೇಕಡ ೪೪ ಜನ ಲಂಚದ ವ್ಯಾಪಕತೆಗೆ ಸರ್ಕಾರಿ ನೌಕರನೇ ಕಾರಣ ಎಂದು ಉತ್ತರಿಸಿದರೆ, ಅದಕ್ಕಿಂತ ಮೇಲ್ಪಟ್ಟವರಲ್ಲಿ ಶೇಕಡ ೫೩ ಜನ ಇದಕ್ಕೆ ರಾಜಕಾರಣವೇ ಕಾರಣ ಎಂದಿದ್ದಾರೆ. ಇನ್ನು ಗುಲ್ಬರ್ಗದಲ್ಲಿ ಶೇಕಡ ೪೮ ಮತ್ತು ಬೆಳಗಾವಿಯಲ್ಲಿ ಶೇಕಡ ೪೬ರಷ್ಟು ಲಂಚ ಜನ ಇಷ್ಟು ತೀವ್ರವಾಗಿ ಹರಡಲು ಸರ್ಕಾರಿ ನೌಕರಿಯೇ ಕಾರಣ ಎಂದು ಹೇಳಿದರೇ, ಮೈಸೂರಿನಲ್ಲಿ ಶೇಕಡ ೫೭ ಮತ್ತು ಬೆಂಗಳೂರಿನಲ್ಲಿ ಶೇಕಡ ೫೬ರಷ್ಟು ಜನ ಇದಕ್ಕೆ ರಾಜಕಾರಣ ಕಾರಣ ಎಂದು ಸ್ಪಷ್ಟವಾಗಿ ಈ ಸಮೀಕ್ಷೆಯಲ್ಲಿ ತಿಳಿಸಿದ್ದಾರೆ.

೪. ನೌಕರರು ಬಯಸದೇ ಇದ್ದರೂ ನೀವಾಗಿಯೇ ಲಂಚ ಕೊಡುವುದು ಸರಿಯೇ? ಎಂಬ ಪ್ರಶ್ನೆಗೆ ಸರಿ ಎಂದು ಉತ್ತರಿಸಿದವರ ಪ್ರಮಾಣ ಶೇಕಡ ೧೩. ಹಾಗೂ ಇದು ತಪ್ಪು ಎಂದು ಉತ್ತರಿಸಿದವರ ಪ್ರಮಾಣ ಶೇಕಡ ೮೭. ಶೇಕಡ ೧೬ರಷ್ಟು ಪುರುಷರು ಇದನ್ನು ಸರಿ ಎಂದರೇ, ಶೇಕಡ ೮೯ರಷ್ಟು ಮಹಿಳೆಯರು ಇದನ್ನು ತಪ್ಪು ಎಂದು ಹೇಳಿದ್ದಾರೆ. ಇನ್ನು ಎಸ್‌ಎಸ್‌ಎಲ್‌ಸಿ ಮೇಲ್ಪಟ್ಟವರಲ್ಲಿ ಈ ಕುರಿತು ಪ್ರಶ್ನಿಸಿದಾಗ ಅವರಲ್ಲಿ ಶೇಕಡ ೧೩ರಷ್ಟು ಜನ ಇದನ್ನು ಸರಿ ಎಂದಿದ್ದರೆ, ಅದಕ್ಕಿಂತ ಕಡಿಮೆ ಓದಿದವರಲ್ಲಿ ಶೇಕಡ ೧೨ರಷ್ಟು ನೌಕರರು ಬಯಸದೇ ಇದ್ದರೂ ತಾವಾಗಿಯೇ ಲಂಚ ಕೊಡುವುದು ಸರಿ ಎಂದು ಒಪ್ಪಿಕೊಂಡಿದ್ದಾರೆ. ಗ್ರಾಮೀಣ ಪ್ರದೇಶದಲ್ಲಿ ಶೇಕಡ ೮೫ರಷ್ಟು ಜನ ಇದನ್ನು ತಪ್ಪೆಂದರೆ, ನಗರ ಪ್ರದೇಶದಲ್ಲಿ ಇದನ್ನು ತಪ್ಪು ಎಂದವರ ಪ್ರಮಾಣ ಶೇಕಡ ೮೨. ನೌಕರರು ಬಯಸದೇ ಇದ್ದರೂ ತಾವಾಗಿಯೇ ಲಂಚ ಕೊಡುವುದು ಸರಿ ಎಂದು ಸಮರ್ಥಿಸಿಕೊಂಡ ೪೫ ವರ್ಷದೊಳಗಿನವರ ಪ್ರಮಾಣ ಶೇಕಡ ೧೬ ರಷ್ಟಾದರೇ, ಇದನ್ನು ತಪ್ಪು ಎಂದು ಸಮರ್ಥಿಸಿಕೊಂಡ ೪೫ ವರ್ಷದ ಮೇಲ್ಪಟ್ಟವರ ಪ್ರಮಾಣ ಶೇಕಡ ೮೬. ಇನ್ನು ಗುಲ್ಬರ್ಗದಲ್ಲಿ ಶೇಕಡ ೧೫, ಬೆಳಗಾವಿ ಮತ್ತು ಮೈಸೂರಿನಲ್ಲಿ ಶೇಕಡ ೧೨, ಹಾಗೂ ಬೆಂಗಳೂರಿನಲ್ಲಿ ಶೇಕಡ ೧೩ರಷ್ಟು ಜನ ನೌಕರರು ಬಯಸದೇ ಇದ್ದರೂ ತಾವಾಗಿಯೇ ಲಂಚ ಕೊಡುವುದು ಸರಿ ಎಂದು ಈ ಸಮೀಕ್ಷೆಯಲ್ಲಿ ತಿಳಿಸಿದ್ದಾರೆ.


ಲಂಚಕೋರರಲ್ಲಿ ಲೋಕಾಯುಕ್ತ ಬಲಗೆ ಸಿಲುಕಿದ್ದಾರೆಯೇ ಎಂಬ ಪ್ರಶ್ನೆಗೆ ಉತ್ತರಿಸಿದವರ ಶೇಕಡವಾರು ಪ್ರಮಾಣ



೫. ಲಂಚಕೋರರೆಲ್ಲ ಲೋಕಾಯುಕ್ತ ಬಲೆಗೆ ಸಿಲುಕಿದ್ದಾರೆಯೇ? ಹೌದು ಎಂದವರ ಪ್ರಮಾಣ ಕೇವಲ ಶೇಕಡ ೩. ಶೇಕಡ ೯೭ರಷ್ಟು ಜನತೆ ಲಂಚಕೋರರೆಲ್ಲ ಲೋಕಾಯುಕ್ತ ಬಲೆಗೆ ಸಿಲುಕುವುದಿಲ್ಲ ಎಂಬ ಅಭಿಪ್ರಾಯ ಹೊಂದಿದ್ದಾರೆ. ಪುರಷರಲ್ಲಿ ಶೇಕಡ ೩. ಮಹಿಳೆಯರಲ್ಲಿ

ಶೇಕಡ ೧ರಷ್ಟು ಜನ ಲಂಚಕೋರರು ಮಾತ್ರ ಲೋಕಾಯುಕ್ತ ಬಲೆಗೆ ಸಿಲುಕುವವರು ಎಂದರೆ, ಎಸ್‌ಎಸ್‌ಎಲ್‌ಸಿ ಮೇಲ್ಪಟ್ಟವರಲ್ಲಿ ಶೇಕಡ ೯೮ ಮತ್ತು ಅದಕ್ಕಿಂತ ಕಡಿಮೆ ಓದಿದವರಲ್ಲಿ ಶೇಕಡ ೯೯ರಷ್ಟು ಜನ ಲಂಚಕೋರರು ಲೋಕಾಯುಕ್ತ ದಾಳಿಗೆ ಒಳಗಾಗುವುದಿಲ್ಲ ಎಂಬ ಅಭಿಪ್ರಾಯ ಹೊಂದಿದ್ದಾರೆ. ಇನ್ನು ಗ್ರಾಮೀಣ ಪ್ರದೇಶದಲ್ಲಿ ಶೇಕಡ ೯೯ ಮತ್ತು ನಗರ ಪ್ರದೇಶದಲ್ಲಿ ಶೇಕಡ ೯೭ರಷ್ಟು ಇದೇ ಅಭಿಪ್ರಾಯವನ್ನು ಹೊಂದಿದ್ದಾರೆ. ಲಂಚಕೋರರೆಲ್ಲ ಲೋಕಾಯುಕ್ತ ದಾಳಿಗೆ ಸಿಲುಕುತ್ತಾರೆ ಎಂದು ಭಾವಿಸಿದ ೪೫ ವರ್ಷದೊಳಗಿನವರ ಮತ್ತು ಅದಕ್ಕಿಂತ ಮೇಲ್ಪಟ್ಟವರ ಪ್ರಮಾಣ ಕೇವಲ ಶೇಕಡ ೨. ವಿಭಾಗವಾರುಮಟ್ಟದಲ್ಲಿ ಗುಲ್ಬರ್ಗದಲ್ಲಿ ಶೇಕಡ ೪, ಬೆಳಗಾವಿ ಮತ್ತು ಬೆಂಗಳೂರಿನಲ್ಲಿ ಶೇಕಡ ೩, ಮೈಸೂರಿನಲ್ಲಿ ಶೇಕಡ ೨ರಷ್ಟು ಜನ ಲಂಚಕೋರರೆಲ್ಲ ಲೋಕಾಯುಕ್ತ ಬಲೆಗೆ ಸಿಲುಕುವುದಿಲ್ಲ ಎಂಬ ಅಭಿಪ್ರಾಯ ಹೊಂದಿದ್ದಾರೆ ಎಂಬ ವಿಷಯ ಈ ಸಮೀಕ್ಷೆಯಲ್ಲಿ ತಿಳಿದು ಬಂದಿದೆ.

ಭ್ರಷ್ಟರು ಸಿಕ್ಕಿ ಹಾಕಿಕೊಳ್ಳದೆಯಿರಲು ಕಾರಣ ಮತ್ತು ಅದರ ಶೇಕಡವಾರು ಪ್ರಮಾಣ




೬. ಲಂಚ ಪಡೆದು ಸಹ ಸಿಕ್ಕಿಕೊಳ್ಳದಿರಲು ಕಾರಣ ಏನು? ಎಂದು ಕೇಳಿದಾಗ ಲೋಕಾಯುಕ್ತದ ನಿರ್ಲಿಪ್ತತೆಯೇ ಇದಕ್ಕೆ ಕಾರಣ ಎಂದು ಹೇಳಿದವರು ಶೇಕಡ ೧೨ರಷ್ಟು ನಾಗರಿಕರು. ಇದು ಕಾನೂನು ದೌರ್ಬಲ್ಯದ ಪರಿಣಾಮ ಎಂದವರು ಶೇಕಡ ೪೪.೫ ಪ್ರಜೆಗಳು. ಶೇಕಡ ೪೩.೫ರಷ್ಟು ಜನ ದೂರು ಸಲ್ಲಿಸದೇ ಇರುವುದೇ ಕಾರಣ ಎಂದಿದ್ದಾರೆ. ಇನ್ನು ಪುರುಷರಲ್ಲಿ ಶೇಕಡ ೧೮ರಷ್ಟು ಲೋಕಾಯುಕ್ತದ ನಿರ್ಲಿಪ್ತತೆಯೇ ಇದಕ್ಕೆ ಕಾರಣವೆಂದರೇ ಶೇಕಡ

೪೩ರಷ್ಟು ಜನ ಪುರುಷರು ಇದಕ್ಕೆ ಕಾನೂನು ದೌರ್ಬಲ್ಯವೇ ಕಾರಣ ಎಂದು ಹೇಳುತ್ತಾರೆ. ಶೇಕಡ ೩೯ರಷ್ಟು ಪುರುಷರು ಇದಕ್ಕೆ ದೂರು ಸಲ್ಲಿಸದೇ ಇರುವುದೇ ಕಾರಣ ಎನ್ನುತ್ತಾರೆ. ಇನ್ನು ಮಹಿಳೆಯರಲ್ಲಿ ಶೇಕಡ ೧೫ರಷ್ಟು ಇದು ಲೋಕಾಯುಕ್ತದ ನಿರ್ಲಿಪ್ತತೆಯ ಪ್ರಭಾವ ಎಂದರೆ, ಶೇಕಡ ೩೯ರಷ್ಟು ಮಹಿಳೆಯರು ಕಾನೂನಿನ ದೌರ್ಬಲ್ಯ ಎಂದು, ಶೇಕಡ ೪೬ರಷ್ಟು ಮಹಿಳೆಯರು ದೂರು ಸಲ್ಲಿಸದೇ ಇರುವುದೇ ಮುಖ್ಯ ಕಾರಣ ಎಂದು ಹೇಳುತ್ತಾರೆ. ಇನ್ನು ಎಸ್‌ಎಸ್‌ಎಲ್‌ಸಿ ಮೇಲ್ಪಟ್ಟವರಲ್ಲಿ ಶೇಕಡ ೧೪ರಷ್ಟು ಮಾತ್ರ ಲೋಕಾಯುಕ್ತದ ನಿರ್ಲಿಪ್ತತೆ ಇದಕ್ಕೆ ಕಾರಣ ಎಂದು ಒಪ್ಪಿಕೊಳ್ಳುತ್ತಾರೆ. ಇನ್ನು ಉಳಿದ ಶೇಕಡ ೪೧ ಮತ್ತು ಶೇಕಡ ೪೫ರಷ್ಟು ಜನರು ಕ್ರಮವಾಗಿ ಇದಕ್ಕೆ ಕಾನೂನಿನಲ್ಲಿರುವ ದೌರ್ಬಲ್ಯ ಮತ್ತು ದೂರು ಸಲ್ಲಿಸದೇ ಇರುವುದು ಎಂದು ಅಭಿಪ್ರಾಯ ಪಡುತ್ತಾರೆ. ಎಸ್‌ಎಸ್‌ಎಲ್‌ಸಿ ಗಿಂತ ಕಡಿಮೆ ಓದಿದವರಲ್ಲಿ ಶೇಕಡ ೧೧ ಜನಕ್ಕೆ ಲೋಕಾಯುಕ್ತದ ನಿರ್ಲಿಪ್ತತೆಯೇ ಲಂಚ ಪಡೆದು ಸಿಕ್ಕಿಕೊಳ್ಳದಿರಲು ಮುಖ್ಯ ಕಾರಣ ಎಂಬ ಅಭಿಪ್ರಾಯವಿದೆ. ಹಾಗೂ ಅವರಲ್ಲಿ ಶೇಕಡ ೩೫ ಜನರು ಇದಕ್ಕೆ ಕಾನೂನು ದೌರ್ಬಲ್ಯವೇ ಕಾರಣ ಎಂದು ಹೇಳಿದರೇ, ಶೇಕಡ ೫೪ರಷ್ಟು ದೂರು ಸಲ್ಲಿಸದೇ ಇರುವ ಅಂಶವನ್ನು ಗಂಭೀರವಾಗಿ ಪರಿಗಣಿಸಿದ್ದಾರೆ. ಆಶ್ಚರ್ಯ ಎಂಬಂತೆ ಗ್ರಾಮೀಣ ಪ್ರದೇಶದಲ್ಲಿ ಕೇವಲ ಶೇಕಡ ೧೦ ಮತ್ತು ಶೇಕಡ ೩೦ರಷ್ಟು ನಾಗರಿಕರು ಮಾತ್ರ ಕ್ರಮವಾಗಿ ಲೋಕಾಯುಕ್ತದ ನಿರ್ಲಿಪ್ತತೆ ಮತ್ತು ಕಾನೂನಿನ ದೌರ್ಬಲ್ಯ ಸರ್ಕಾರಿ ನೌಕರರು ಲಂಚ ಪಡೆದು ಸಹ ಸಿಕ್ಕಿಕೊಳ್ಳದಿರಲು ಕಾರಣ ಎಂದು ಭಾವಿಸಿದ್ದಾರೆ. ಆದರೆ ಶೇಕಡ ೬೦ರಷ್ಟು ಗ್ರಾಮೀಣರು ದೂರು ಸಲ್ಲಿಸದೇ ಇರುವುದೇ ಪ್ರಮುಖ ಕಾರಣ ಎಂದು ಸಮೀಕ್ಷೆಯಲ್ಲಿ ತಿಳಿಸಿದ್ದಾರೆ. ಇನ್ನು ನಗರ ಪ್ರದೇಶದಲ್ಲಿ ಶೇಕಡ ೧೬ರಷ್ಟು ಜನ ಲೋಕಾಯುಕ್ತದ ನಿರ್ಲಿಪ್ತತೆ, ಶೇಕಡ ೪೧ರಷ್ಟು ಜನ ಕಾನೂನಿನಲ್ಲಿರುವ ದೌರ್ಬಲ್ಯ, ಶೇಕಡ ೪೩ ಜನ ದೂರು ಸಲ್ಲಿಸದೇ ಇರುವ ಕಾರಣ ನೀಡಿದ್ದಾರೆ. ಇನ್ನು ೪೫ ವರ್ಷದೊಳಗಿನವರಲ್ಲಿ ಈ ಪ್ರಶ್ನೆ ಕೇಳಿದಾಗ ಲೋಕಾಯುಕ್ತದ ನಿರ್ಲಿಪ್ತತೆಯೇ ಇದಕ್ಕೆ ಕಾರಣ ಎಂದು ಹೇಳಿದವರು ಶೇಕಡ ೧೭ರಷ್ಟು ನಾಗರಿಕರು. ಇದು ಕಾನೂನು ದೌರ್ಬಲ್ಯದ ಪರಿಣಾಮ ಎಂದವರು ಶೇಕಡ ೪೩ ಪ್ರಜೆಗಳು. ಶೇಕಡ ೪೦ರಷ್ಟು ಜನ ದೂರು ಸಲ್ಲಿಸದೇ ಇರುವುದೇ ಕಾರಣ ಎಂದಿದ್ದಾರೆ. ಅದಕ್ಕಿಂತ ಮೇಲ್ಪಟ್ಟ ವಯಸ್ಸಿನವರಲ್ಲಿ ಈ ಕುರಿತು ವಿಚಾರಿಸಿದಾಗ ಅವರು ಹೇಳಿದ ಮಾಹಿತಿ ಈ ರೀತಿಯಾಗಿದೆ. ಶೇಕಡ ೧೪ ಜನಕ್ಕೆ ಲೋಕಾಯುಕ್ತದ ನಿರ್ಲಿಪ್ತತೆಯೇ ಲಂಚ ಪಡೆದು ಸಿಕ್ಕಿಕೊಳ್ಳದಿರಲು ಮುಖ್ಯ ಕಾರಣ ಎಂಬ ಅಭಿಪ್ರಾಯವಿದೆ. ಹಾಗೂ ಅವರಲ್ಲಿ ಶೇಕಡ ೪೫

ಜನರು ಇದಕ್ಕೆ ಕಾನೂನು ದೌರ್ಬಲ್ಯವೇ ಕಾರಣ ಎಂದು ಹೇಳಿದರೇ, ಶೇಕಡ ೪೧ರಷ್ಟು ದೂರು ಸಲ್ಲಿಸದೇ ಇರುವ ಕಾರಣವನ್ನು ಒಪ್ಪಿದ್ದಾರೆ. ಇನ್ನು ಗುಲ್ಬರ್ಗದಲ್ಲಿ ಶೇಕಡ ೧೨ರಷ್ಟು ನಾಗರಿಕರು ಲೋಕಾಯುಕ್ತದ ನಿರ್ಲಿಪ್ತತೆ ಇದಕ್ಕೆ ಕಾರಣ ಎಂದರೇ, ಶೇಕಡ ೪೩ ಜನರು ಕಾನೂನಿನ ದೌರ್ಬಲ್ಯವೇ ಇದಕ್ಕೆ ಕಾರಣ ಎಂಬ ಅಭಿಪ್ರಾಯ ನೀಡಿದ್ದಾರೆ. ಶೇಕಡ ೪೫ ಜನರು ದೂರು ಸಲ್ಲಿಸದೇ ಇರುವುದು ಲಂಚ ಪಡೆದು ಸಹ ಸಿಕ್ಕಿಕೊಳ್ಳದಿರಲು ಪ್ರಮುಖ ಕಾರಣ ಎಂಬ ಭಾವನೆ ಹೊಂದಿದ್ದಾರೆ. ಬೆಳಗಾವಿ ವಿಭಾಗದಲ್ಲಿ ಶೇಕಡ ೧೧ ಜನಕ್ಕೆ ಲೋಕಾಯುಕ್ತದ ನಿರ್ಲಿಪ್ತತೆಯೇ ಲಂಚ ಪಡೆದು ಸಿಕ್ಕಿಕೊಳ್ಳದಿರಲು ಮುಖ್ಯ ಕಾರಣ ಎಂಬ ಅಭಿಪ್ರಾಯವಿದ್ದರೆ, ಅವರಲ್ಲಿ ಶೇಕಡ ೪೬ ಜನರು ಇದಕ್ಕೆ ಕಾನೂನು ದೌರ್ಬಲ್ಯವೇ ಕಾರಣ ಎಂದು ಹೇಳಿದ್ದಾರೆ. ಶೇಕಡ ೪೩ರಷ್ಟು ದೂರು ಸಲ್ಲಿಸದೇ ಇರುವ ಕಾರಣವನ್ನು ಒಪ್ಪಿದ್ದಾರೆ. ಮೈಸೂರು ವಿಭಾಗದಲ್ಲಿ ಶೇಕಡ ೪೪ರಷ್ಟು ಜನರು ಇದಕ್ಕೆ ಕಾನೂನಿನ ದೌರ್ಬಲ್ಯ ಮತ್ತು ಶೇಕಡ ೪೪ರಷ್ಟು ದೂರು ಸಲ್ಲಿಸದೇ ಇರುವುದೇ ಲಂಚ ಪಡೆದು ಸಹ ಸಿಕ್ಕಿಕೊಳ್ಳದಿರಲು ಮುಖ್ಯ ಕಾರಣ ಎಂಬ ಸಮ ಅಭಿಪ್ರಾಯವನ್ನು ಹೊಂದಿದ್ದಾರೆ. ಇಲ್ಲಿ ಕೇವಲ ಶೇಕಡ ೧೨ರಷ್ಟು ಮಾತ್ರ ಲೋಕಾಯುಕ್ತದ ನಿರ್ಲಿಪ್ತತೆಯೇ ಇದಕ್ಕೆ ಕಾರಣ ಎಂದು ತಮ್ಮ ಅಭಿಪ್ರಾಯವನ್ನು ಸಮೀಕ್ಷೆಯ ವೇಳೆಯಲ್ಲಿ ತಿಳಿಸಿದ್ದಾರೆ. ಇನ್ನು ಬೆಂಗಳೂರು ವಿಭಾಗದಲ್ಲಿ ಈ ಪ್ರಶ್ನೆ ಕೇಳಿದಾಗ ಲೋಕಾಯುಕ್ತದ ನಿರ್ಲಿಪ್ತತೆಯೇ ಇದಕ್ಕೆ ಕಾರಣ ಎಂದು ಹೇಳಿದವರು ಶೇಕಡ ೧೩ರಷ್ಟು ನಾಗರಿಕರು. ಇದು ಕಾನೂನು ದೌರ್ಬಲ್ಯದ ಪರಿಣಾಮ ಎಂದವರು ಶೇಕಡ ೪೫ ಪ್ರಜೆಗಳು. ಶೇಕಡ ೪೨ರಷ್ಟು ಜನ ದೂರು ಸಲ್ಲಿಸದೇ ಇರುವುದೇ ಕಾರಣ ಎಂದಿರುವ ವಿಚಾರವು ಈ ಸಮೀಕ್ಷೆಯಿಂದ ತಿಳಿದು ಬಂದಿದೆ.

ಲೋಕಾಯುಕ್ತ ದಾಳಿ ಕಣ್ಣೊರೆಸುವ ತಂತ್ರವೇ



೭. ಲೋಕಾಯುಕ್ತ ದಾಳಿಯು ಕೇವಲ ಕಣ್ಣೊರೆಸುವ ತಂತ್ರವೇ? ಎಂಬ ಪ್ರಶ್ನೆಗೆ ಹೌದು ಎಂದವರು ಶೇಕಡ ೭೬.೫ರಷ್ಟು ಜನ. ಪುರುಷರಲ್ಲಿ ಶೇಕಡ ೮೦ ಜನ ಲೋಕಾಯುಕ್ತ ದಾಳಿಯನ್ನು ಕೇವಲ ಕಣ್ಣೊರೆಸುವ ತಂತ್ರ ಎಂದು ಹೇಳಿದರೇ, ಶೇಕಡ ೭೭ರಷ್ಟು ಮಹಿಳೆಯರು ಇದೇ ಅಭಿಪ್ರಾಯ ಅಭಿಪ್ರಾಯ ಹೊಂದಿದ್ದಾರೆ. ಎಸ್‌ಎಸ್‌ಎಲ್‌ಸಿ ಮೇಲ್ಪಟ್ಟವರಲ್ಲಿ ಶೇಕಡ ೨೦ರಷ್ಟು ಜನ ಮಾತ್ರ ಇದು ಕಣ್ಣೊರೆಸುವ ತಂತ್ರವಲ್ಲ ಎಂದು ಹೇಳಿದರೇ, ಅದಕ್ಕಿಂತ ಕಡಿಮೆ ಓದಿದವರಲ್ಲಿ ಶೇಕಡ ೨೭ರಷ್ಟು ಜನ ಈ ಮಾತನ್ನೇ ಪುನರುಚ್ಚರಿಸಿದ್ದಾರೆ. ಗ್ರಾಮೀಣ ಪ್ರದೇಶದಲ್ಲಿ ಶೇಕಡ ೭೦ ಮತ್ತು ನಗರ ಪ್ರದೇಶದಲ್ಲಿ ಶೇಕಡ ೭೬ರಷ್ಟು ಜನ ಲೋಕಾಯುಕ್ತ ದಾಳಿಯನ್ನು ಒಂದು ನಾಟಕ ಎಂದೇ ಭಾವಿಸಿದ್ದಾರೆ. ೪೫ ವರ್ಷದೊಳಗಿನವರಲ್ಲಿ ಶೇಕಡ ೨೦ ಮತ್ತು ಅದಕ್ಕಿಂತ ಮೇಲ್ಪಟ್ಟವರಲ್ಲಿ ಶೇಕಡ ೨೨ರಷ್ಟು ಲೋಕಾಯುಕ್ತ ದಾಳಿಯು ಕೇವಲ ಕಣ್ಣೊರೆಸುವ ತಂತ್ರವಲ್ಲ ಎಂಬ ಅಭಿಪ್ರಾಯವನ್ನು ನೀಡಿದ್ದಾರೆ. ಗುಲ್ಬರ್ಗ ಭಾಗದಲ್ಲಿ ಶೇಕಡ ೮೨, ಬೆಳಗಾವಿನಲ್ಲಿ ಶೇಕಡ ೭೬, ಹಾಗೂ ಬೆಂಗಳೂರು ಮತ್ತು ಮೈಸೂರು ಕಡೆಗಳಲ್ಲಿ ಶೇಕಡ ೭೪ರಷ್ಟು ಜನತೆ ಲೋಕಾಯುಕ್ತ ದಾಳಿಯನ್ನು ಒಂದು ಕಣ್ಣೊರೆಸುವ ತಂತ್ರ ಎಂಬ ಅನಿಸಿಕೆಯನ್ನು ಹೊಂದಿದ್ದಾರೆ.

೮. ಸಾರ್ವಜನಿಕರಿಂದ ಲಂಚ ಪಡೆಯುವುದಕ್ಕಿಂತಲೂ ಸರ್ಕಾರಿ ಯೋಜನೆಯ ಹಣವನ್ನು ಲಪಟಾಯಿಸುವವರು ಹೆಚ್ಚಿದ್ದಾರೆಯೇ? ಎಂದು ಕೇಳಿದಾಗ ಶೇಕಡ ೮೬.೫ರಷ್ಟು ಜನ ಹೌದು ಎಂದು ಉತ್ತರಿಸಿದವರು. ಇಲ್ಲ ಎಂದವರು ಕೇವಲ ಶೇಕಡ ೧೩.೫ರಷ್ಟು ಜನ. ಇನ್ನು ಪುರುಷರಲ್ಲಿ ಶೇಕಡ ೮೯ರಷ್ಟು ಜನ ಸಾರ್ವಜನಿಕರಿಂದ ಲಂಚ ಪಡೆಯುವುದಕ್ಕಿಂತಲೂ ಸರ್ಕಾರಿ ಯೋಜನೆಯ ಹಣವನ್ನು ಲಪಟಾಯಿಸುವವರು ಹೆಚ್ಚಿದ್ದಾರೆ ಎಂಬ ಅಭಿಪ್ರಾಯ ಹೊಂದಿದ್ದಾರೆ. ಶೇಕಡ ೮೪ರಷ್ಟು ಮಹಿಳೆಯರು ಈ ಮಾತನ್ನೇ ಒಪ್ಪಿದ್ದಾರೆ. ಇನ್ನು ಎಸ್‌ಎಸ್‌ಎಲ್‌ಸಿ ಮೇಲ್ಪಟ್ಟವರಲ್ಲಿ ಶೇಕಡ ೮೮ ಜನರು ಇದನ್ನು ಒಪ್ಪಿಕೊಂಡರೆ, ಅದಕ್ಕಿಂತ ಕಡಿಮೆ ಓದಿದವರಲ್ಲಿ ಶೇಕಡ ೧೮ರಷ್ಟು ಜನ 'ಸಾರ್ವಜನಿಕರಿಂದ ಲಂಚ ಪಡೆಯುವುದಕ್ಕಿಂತಲೂ ಸರ್ಕಾರಿ ಯೋಜನೆಯ ಹಣವನ್ನು ಲಪಟಾಯಿಸುವವರು ಹೆಚ್ಚಿದ್ದಾರೆ' ಎಂಬ ಮಾತನ್ನು ಒಪ್ಪುವುದಿಲ್ಲ. ಆದರೆ ಗ್ರಾಮೀಣರಲ್ಲಿ ಶೇಕಡ ೭೯ ಮತ್ತು ನಗರದಲ್ಲಿ ಶೇಕಡ ೮೪ರಷ್ಟು ಜನ ಈ ಮಾತನ್ನು ಒಪ್ಪುತ್ತಾರೆ. ಇನ್ನು ೪೫ ವರ್ಷದೊಳಗಿನವರಲ್ಲಿ ಶೇಕಡ ೮೬ ಅದಕ್ಕಿಂತ ಮೇಲ್ಪಟ್ಟವರಲ್ಲಿ ಶೇಕಡ ೮೨ ಸರ್ಕಾರಿ ಯೋಜನೆಯ ಹಣವನ್ನು ಲಪಟಾಯಿಸುವವರೇ ಹೆಚ್ಚು ಎಂಬ ಒಮ್ಮತದ ಅಭಿಪ್ರಾಯವನ್ನು ಹೊಂದಿದ್ದಾರೆ. ಇನ್ನು


ಗುಲ್ಬರ್ಗ ವಿಭಾಗದಲ್ಲಿ ಶೇಕಡ ೮೮, ಬೆಳಗಾವಿಯಲ್ಲಿ ಶೇಕಡ ೮೬, ಮೈಸೂರಿನಲ್ಲಿ ಶೇಕಡ ೮೫, ಹಾಗೂ ಬೆಂಗಳೂರಿನಲ್ಲಿ ಶೇಕಡ ೮೭ರಷ್ಟು ಜನತೆ ಸಾರ್ವಜನಿಕರಿಂದ ಲಂಚ ಪಡೆಯುವುದಕ್ಕಿಂತಲೂ ಸರ್ಕಾರಿ ಯೋಜನೆಯ ಹಣವನ್ನು ಲಪಟಾಯಿಸುವವರು ಹೆಚ್ಚಿದ್ದಾರೆ ಎಂಬ ಭಾವನೆಯನ್ನು ಹೊಂದಿದ್ದಾರೆ.

೯. ಪ್ರೊಸಿಜರ್ ಲ್ಯಾಪ್ಸ್ ಅಂದರೆ ನಿಯಮಗಳನ್ನು ಪಾಲಿಸದೇಯಿರುವುದು ಭ್ರಷ್ಟಾಚಾರಕ್ಕೆ ಹೆದ್ದಾರಿಯೇ? ಎಂಬ ಪ್ರಶ್ನೆಗೆ ಹೌದು ಎಂದು ಉತ್ತರಿಸಿದವರ ಪ್ರಮಾಣ ಶೇಕಡ ೮೫.೫. ಶೇಕಡ ೮೭ರಷ್ಟು ಪುರುಷರು ಮತ್ತು ಶೇಕಡ ೮೫ರಷ್ಟು ಮಹಿಳೆಯರು ಈ ಪ್ರಶ್ನೆಗೆ ಹೌದು ಎಂದು ಉತ್ತರಿಸಿದ್ದಾರೆ. ಈ ಪ್ರಶ್ನೆಯನ್ನು ಎಸ್‌ಎಸ್‌ಎಲ್‌ಸಿ ಮೇಲ್ಪಟ್ಟವರಲ್ಲಿ ಕೇಳಿದಾಗ ಶೇಕಡ ೧೪ ಮತ್ತು ಅದಕ್ಕಿಂತ ಕಡಿಮೆ ಓದಿದವರಲ್ಲಿ ಶೇಕಡ ೧೫ರಷ್ಟು ಜನ ಮಾತ್ರ ನಿಯಮಗಳ ಉಲ್ಲಂಘನೆ ಭ್ರಷ್ಟಾಚಾರಕ್ಕೆ ಹೆದ್ದಾರಿ ಅಲ್ಲ ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಇನ್ನು ಗ್ರಾಮೀಣರಲ್ಲಿ ಈ ಕುರಿತು ಕೇಳಿದಾಗ ಶೇಕಡ ೮೦ರಷ್ಟು ಜನ ನಿಯಮಗಳ ಉಲ್ಲಂಘನೆ ಭ್ರಷ್ಟಾಚಾರಕ್ಕೆ ಹೆದ್ದಾರಿ ಎಂಬ ಭಾವನೆಯನ್ನೇ ಹೊಂದಿದ್ದಾರೆ. ನಗರ ಪ್ರದೇಶದಲ್ಲಿ ಈ ಭಾವನೆಯನ್ನು ಹೊಂದಿದವರ ಪ್ರಮಾಣ ಶೇಕಡ ೮೨. ಆಶ್ಚರ್ಯ ಎಂಬಂತೇ ಶೇಕಡ ೮೬ರಷ್ಟು ೪೫ ವರ್ಷದೊಳಗಿನವರು ಮತ್ತು ಶೇಕಡ ೮೩ರಷ್ಟು ೪೫ ವರ್ಷಕ್ಕಿಂತ ಮೇಲ್ಪಟ್ಟವರಲ್ಲಿ ನಿಯಮಗಳ ಉಲ್ಲಂಘನೆ ಭ್ರಷ್ಟಾಚಾರಕ್ಕೆ ಹೆದ್ದಾರಿ ಎಂಬ ಅಭಿಪ್ರಾಯ ಹೊಂದಿದ್ದಾರೆ. ಗುಲ್ಬರ್ಗದಲ್ಲಿ ಶೇಕಡ ೮೫, ಬೆಳಗಾವಿಯಲ್ಲಿ ಶೇಕಡ ೮೪, ಮೈಸೂರಿನಲ್ಲಿ ಶೇಕಡ ೮೬ ಹಾಗೂ ಬೆಂಗಳೂರಿನಲ್ಲಿ ಶೇಕಡ ೮೭ರಷ್ಟು ನಾಗರಿಕರ ಅಭಿಪ್ರಾಯ ಮತ್ತು ಅನಿಸಿಕೆ ಇದೇ ಆಗಿದೆ.

೧೦. ನೌಕರರನ್ನು ವರ್ಗಾವಣೆ ಮಾಡಲು ರಾಜಕಾರಣಿಗಳು ಲಂಚ ಪಡೆಯುತ್ತಾರೆಯೇ? ಎಂಬ ಪ್ರಶ್ನೆಗೆ ಶೇಕಡ ೮೭.೫ರಷ್ಟು ನಾಗರಿಕರು ಹೌದು ಎಂದು ಉತ್ತರಿಸಿದರೇ, ಕೇವಲ ಶೇಕಡ ೧೨.೫ರಷ್ಟು ಜನತೆ ಇಲ್ಲ ಎಂದು ಉತ್ತರಿಸಿ ಆಶ್ಚರ್ಯ ಮೂಡಿಸಿದ್ದಾರೆ. ಶೇಕಡ ೯೦ ಪುರುಷರು ನೌಕರರನ್ನು ವರ್ಗಾವಣೆ ಮಾಡಲು ರಾಜಕಾರಣಿಗಳು ಲಂಚ ಪಡೆಯುತ್ತಾರೆ ಎಂದು ಹೇಳಿದರೇ, ಶೇಕಡ ೧೩ರಷ್ಟು ಮಹಿಳೆಯರು ಮಾತ್ರ ಲಂಚ ಪಡೆಯುವುದಿಲ್ಲ ಎಂಬ ಅಭಿಪ್ರಾಯ ಹೊಂದಿದ್ದಾರೆ. ಎಸ್‌ಎಸ್‌ಎಲ್‌ಸಿ ಮೇಲ್ಪಟ್ಟವರಲ್ಲಿ ಶೇಕಡ ೮೯ ಮತ್ತು ಅದಕ್ಕಿಂತ ಕಡಿಮೆ ಓದಿದವರಲ್ಲಿ ಶೇಕಡ ೮೫ರಷ್ಟು ಜನ ನೌಕರರನನ್ನು ವರ್ಗಾವಣೆ ಮಾಡಲು ರಾಜಕಾರಣಿಗಳು ಲಂಚ ಪಡೆಯುತ್ತಾರೆ ಎಂಬ ಮಾತನ್ನು ಸಮರ್ಥಿಸಿದ್ದಾರೆ.

ಇದೇ ಅಭಿಪ್ರಾಯ ಗ್ರಾಮೀಣ ಪ್ರದೇಶದಲ್ಲಿ ಶೇಕಡ ೮೩ ಮತ್ತು ನಗರ ಪ್ರದೇಶದಲ್ಲಿ ಶೇಕಡ ೮೮ರಷ್ಟಿದೆ. ಇನ್ನು ೪೫ ವರ್ಷದೊಳಗಿನವರಲ್ಲಿ ನೌಕರರನ್ನು ವರ್ಗ ಮಾಡಲು ರಾಜಕಾರಣಿಗಳು ಲಂಚ ಪಡೆಯುವುದಿಲ್ಲ ಎಂಬ ಅಭಿಪ್ರಾಯವನ್ನು ಶೇಕಡ ೧೩ರಷ್ಟು ಜನ ಹೊಂದಿದ್ದರೇ, ೪೫ ವರ್ಷಕ್ಕಿಂತ ಮೇಲ್ಪಟ್ಟವರಲ್ಲಿ ಇದೇ ಅಭಿಪ್ರಾಯವನ್ನು ಹೊಂದಿದವರು ಶೇಕಡ ೧೨ರಷ್ಟು ಜನ. ಗುಲ್ಬರ್ಗದಲ್ಲಿ ಶೇಕಡ ೯೦, ಮೈಸೂರಿನಲ್ಲಿ ಶೇಕಡ ೮೬, ಮತ್ತು ಬೆಳಗಾವಿ ಮತ್ತು ಬೆಂಗಳೂರಿನಲ್ಲಿ ಶೇಕಡ ೮೭ರಷ್ಟು ಜನರು ನೌಕರರನ್ನು ವರ್ಗಾವಣೆ ಮಾಡಲು ರಾಜಕಾರಣಿಗಳು ಲಂಚ ಪಡೆಯುತ್ತಾರೆ ಎಂಬ ಅಭಿಪ್ರಾಯವನ್ನು ಹೊಂದಿದ ಸಂಗತಿ ಈ ಸಮೀಕ್ಷೆಯಲ್ಲಿ ಬಹಿರಂಗಗೊಂಡಿದೆ.

ಭ್ರಷ್ಟಾಚಾರ ನಿಯಂತ್ರಣ ಸಾಧ್ಯವಾಗುವ ಅಂಗಗಳು ಮತ್ತು ಅದರ ಶೇಕಡವಾರು ಪ್ರಮಾಣ



೧೧. ನಿಮ್ಮ ಅಭಿಪ್ರಾಯದಲ್ಲಿ ಭ್ರಷ್ಟಾಚಾರ ನಿಯಂತ್ರಣ ಯಾರಿಂದ ಸಾಧ್ಯ? ಎಂಬ ಪ್ರಶ್ನೆಯನ್ನು ಸಮೀಕ್ಷೆಯ ಸಂದರ್ಭದಲ್ಲಿ ಕೇಳಿದಾಗ ಭ್ರಷ್ಟಾಚಾರದ ನಿಯಂತ್ರಣ ಶಾಸಕಾಂಗದಿಂದ ಸಾಧ್ಯ ಎಂಬ ಅಭಿಪ್ರಾಯ ಹೇಳಿದವರು ಶೇಕಡ ೯.೭೫ ಶೇಕಡ ೨೪.೫ರಷ್ಟು ನಾಗರಿಕರು ಕಾರ್ಯಾಂಗದಿಂದ ನಿಯಂತ್ರಣ ಸಾಧ್ಯ ಎಂಬ ಅಭಿಪ್ರಾಯ ನೀಡಿದರೆ, ಆಶ್ಚರ್ಯ ಎಂಬಂತೆ ಶೇಕಡ ೬೫.೭೫ರಷ್ಟು ಜನ ನ್ಯಾಯಾಂಗದಿಂದ ಭ್ರಷ್ಟಾಚಾರ ನಿಯಂತ್ರಣ ಸಾಧ್ಯ ಎಂಬ ಅಭಿಪ್ರಾಯಪಟ್ಟಿದ್ದಾರೆ. ಶೇಕಡ ೧೧ರಷ್ಟು ಪುರುಷರು ಭ್ರಷ್ಟಾಚಾರದ ನಿಯಂತ್ರಣ ಶಾಸಕಾಂಗದಿಂದ ಸಾಧ್ಯ ಎಂದರೇ, ಶೇಕಡ ೨೮ರಷ್ಟು ಪುರುಷರು ಕಾರ್ಯಾಂಗದಿಂದ.

ಶೇಕಡ ೬೧ರಷ್ಟು ಪುರುಷರು ನ್ಯಾಯಾಂಗದಿಂದ ಸಾಧ್ಯ ಎಂಬ ಸ್ಪಷ್ಟ ಅಭಿಪ್ರಾಯವನ್ನು ಹೊಂದಿದ್ದಾರೆ. ಇನ್ನು ಮಹಿಳೆಯರಲ್ಲಿ ಶೇಕಡ ೯ರಷ್ಟು ಶಾಸಕಾಂಗದಿಂದ, ಶೇಕಡ ೨೫ರಷ್ಟು ಕಾರ್ಯಾಂಗದಿಂದ, ಶೇಕಡ ೬೬ರಷ್ಟು ನ್ಯಾಯಾಂಗದಿಂದ ಭ್ರಷ್ಟಾಚಾರ ನಿಯಂತ್ರಣ ಸಾಧ್ಯ ಎಂಬ ಅಭಿಪ್ರಾಯವನ್ನು ವ್ಯಕ್ತ ಪಡಿಸಿದ್ದಾರೆ. ಎಸ್ಎಸ್ಎಲ್ಸಿ ಮೇಲ್ಪಟ್ಟವರಲ್ಲಿ ಶೇಕಡ ೧೦ರಷ್ಟು ಜನ ಶಾಸಕಾಂಗವೇ ಭ್ರಷ್ಟಾಚಾರವನ್ನು ನಿಯಂತ್ರಿಸುತ್ತದೆ ಎಂದರೆ ಶೇಕಡ ೨೭ರಷ್ಟು ಜನರು ಕಾರ್ಯಾಂಗವೇ ಇದಕ್ಕೆ ಸರಿಯಾದ ಮದ್ದು ಎಂಬ ಅಭಿಪ್ರಾಯವನ್ನು ಹೊಂದಿದ್ದಾರೆ. ಅಂತೆಯೇ ಇವರಲ್ಲಿ ಶೇಕಡ ೬೩ ಜನರು ಭ್ರಷ್ಟಾಚಾರದ ನಿಯಂತ್ರಣಕ್ಕಾಗಿ ನ್ಯಾಯಾಂಗದ ಮೊರೆ ಹೋಗಿದ್ದಾರೆ. ಅದಕ್ಕಿಂತ ಕಡಿಮೆ ಓದಿದವರಲ್ಲಿ ಶೇಕಡ ೮ರಷ್ಟು ಭ್ರಷ್ಟಾಚಾರ ನಿಯಂತ್ರಣಕ್ಕೆ ಶಾಸಕಾಂಗವೇ ಸರಿ ಎಂದರೇ, ಶೇಕಡ ೨೨ ಜನರು ಕಾರ್ಯಾಂಗ ಮತ್ತು ಶೇಕಡ ೭೦ರಷ್ಟು ಜನರು ನ್ಯಾಯಾಂಗವೇ ಸರಿ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಗ್ರಾಮೀಣ ಪ್ರದೇಶದಲ್ಲಿ ಶೇಕಡ ೭ರಷ್ಟು ಜನರಿಗೆ ಶಾಸಕಾಂಗವೇ ಭ್ರಷ್ಟಾಚಾರ ನಿಯಂತ್ರಿಸಲು ಸರಿಯಾದ ದಾರಿ ಎಂಬ ಅಭಿಪ್ರಾಯವಿದ್ದರೇ, ಅವರಲ್ಲಿ ಶೇಕಡ ೨೫ ಗ್ರಾಮೀಣರಿಗೆ ಕಾರ್ಯಾಂಗದ ಮೇಲೆ ನಂಬಿಕೆ ಇದೆ. ಆದರೆ ಇಲ್ಲಿಯೂ ಸಹ ನ್ಯಾಯಾಂಗದ ಪ್ರಭಾವವೇ ಹೆಚ್ಚಾಗಿದ್ದು, ಶೇಕಡ ೬೯ರಷ್ಟು ಗ್ರಾಮೀಣರು ನ್ಯಾಯಾಂಗದ ಪರವಾಗಿದ್ದಾರೆ. ನಗರ ಪ್ರದೇಶದಲ್ಲಿ ಭ್ರಷ್ಟಾಚಾರದ ನಿಯಂತ್ರಣ ಶಾಸಕಾಂಗದಿಂದ ಸಾಧ್ಯ ಎಂಬ ಅಭಿಪ್ರಾಯ ಹೇಳಿದವರು ಶೇಕಡ ೧೦. ಶೇಕಡ ೨೬ರಷ್ಟು ನಾಗರಿಕರು ಕಾರ್ಯಾಂಗದಿಂದ ನಿಯಂತ್ರಣ ಸಾಧ್ಯ ಎಂಬ ಅಭಿಪ್ರಾಯ ನೀಡಿದರೆ, ಶೇಕಡ ೬೪ ನಾಗರಿಕರು ನ್ಯಾಯಾಂಗದಿಂದ ಭ್ರಷ್ಟಾಚಾರ ನಿಯಂತ್ರಣ ಸಾಧ್ಯ ಎಂಬ ಅಭಿಪ್ರಾಯ ಹೊಂದಿದ್ದಾರೆ. ೪೫ ವರ್ಷದೊಳಗಿನವರಲ್ಲಿ ಈ ಕುರಿತು ಪ್ರಶ್ನಿಸಿದಾಗ ಅವರಲ್ಲಿ ಶೇಕಡ ೧೧ರಷ್ಟು ಜನ ಭ್ರಷ್ಟಾಚಾರವನ್ನು ನಿಯಂತ್ರಿಸಲು ಶಾಸಕಾಂಗವೇ ಬೇಕು ಎಂಬ ಅಭಿಪ್ರಾಯ ಹೊಂದಿದ್ದರೇ, ಶೇಕಡ ೨೭ರಷ್ಟು ಜನರು ಕಾರ್ಯಾಂಗವೇ ಸೂಕ್ತ ಮಾರ್ಗ ಎಂದಿದ್ದಾರೆ. ಹಾಗೆಯೇ ಶೇಕಡ ೬೨ರಷ್ಟು ಜನರು ನ್ಯಾಯಾಂಗವೇ ಭ್ರಷ್ಟಾಚಾರ ನಿಯಂತ್ರಿಸಲು ಸೂಕ್ತ ಮಾರ್ಗ ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಅದಕ್ಕಿಂತ ಕಡಿಮೆ ವಯಸ್ಸಿನವರಲ್ಲಿ ಈ ಕುರಿತು ವಿಚಾರಿಸಿದಾಗ ಶೇಕಡ ೯ರಷ್ಟು ನಾಗರಿಕರು ಭ್ರಷ್ಟಾಚಾರದ ನಿಯಂತ್ರಣ ಶಾಸಕಾಂಗದಿಂದ ಸಾಧ್ಯ ಎಂದರೇ, ಶೇಕಡ ೨೪ರಷ್ಟು ಜನರು ಕಾರ್ಯಾಂಗದಿಂದ, ಶೇಕಡ ೬೭ರಷ್ಟು ಜನರು ನ್ಯಾಯಾಂಗದಿಂದ ಸಾಧ್ಯ ಎಂಬ ಸ್ಪಷ್ಟ ಅಭಿಪ್ರಾಯವನ್ನು ಹೊಂದಿದ್ದಾರೆ. ಇನ್ನು ಗುಲ್ಬರ್ಗದಲ್ಲಿ ಭ್ರಷ್ಟಾಚಾರ ನಿಯಂತ್ರಣಕ್ಕೆ ಶಾಸಕಾಂಗವೇ

ಸೂಕ್ತ ಎಂಬ ಅಭಿಪ್ರಾಯವನ್ನು ಹೊಂದಿದವರು ಶೇಕಡ ೧೧. ಶೇಕಡ ೨೬ರಷ್ಟು ಜನರು ಕಾರ್ಯಾಂಗ ಮತ್ತು ಶೇಕಡ ೬೩ರಷ್ಟು ನ್ಯಾಯಾಂಗವೇ ಇದಕ್ಕೆ ಸರಿಯಾದ ಮದ್ದು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಬೆಳಗಾವಿಯಲ್ಲಿ ಶೇಕಡ ೧೦ರಷ್ಟು ಜನ ಶಾಸಕಾಂಗದ ಪರವಾಗಿದ್ದರೆ, ಶೇಕಡ ೨೪ರಷ್ಟು ಕಾರ್ಯಾಂಗ ಮತ್ತು ಶೇಕಡ ೬೬ರಷ್ಟು ನ್ಯಾಯಾಂಗದ ಪರವಾಗಿರುವುದು ತಿಳಿದು ಬಂದಿದೆ. ಇನ್ನು ಮೈಸೂರು ವಿಭಾಗದಲ್ಲಿ ಭ್ರಷ್ಟಾಚಾರ ನಿಯಂತ್ರಣಕ್ಕೆ ಶಾಸಕಾಂಗದ ಮೇಲೆ ನಂಬಿಕೆ ಇಟ್ಟವರ ಸಂಖ್ಯೆ ಕೇವಲ ಶೇಕಡ ೯. ಇನ್ನು ಶೇಕಡ ೨೩ರಷ್ಟು ಮೈಸೂರು ಜನರಿಗೆ ಕಾರ್ಯಾಂಗದ ಮೇಲೆ ಮತ್ತು ಶೇಕಡ ೬೮ರಷ್ಟು ನಾಗರಿಕರಿಗೆ ನ್ಯಾಯಾಂಗದ ಮೇಲೆ ನಂಬಿಕೆ ಇದೆ. ಇನ್ನು ಬೆಂಗಳೂರು ವಿಭಾಗದಲ್ಲಿ ಶೇಕಡ ೯ರಷ್ಟು ಶಾಸಕಾಂಗದಿಂದ, ಶೇಕಡ ೨೫ರಷ್ಟು ಕಾರ್ಯಾಂಗದಿಂದ, ಶೇಕಡ ೬೬ರಷ್ಟು ನ್ಯಾಯಾಂಗದಿಂದ ಭ್ರಷ್ಟಾಚಾರ ನಿಯಂತ್ರಣ ಸಾಧ್ಯ ಎಂಬ ಅಭಿಪ್ರಾಯವನ್ನು ವ್ಯಕ್ತ ಪಡಿಸಿದ್ದಾರೆ.

ಸಮಾಜದ ಮೇಲೆ ಪರಿಣಾಮ ಉಂಟು ಮಾಡಿರುವ ವರ್ಗಗಳು ಹಾಗೂ ಶೇಕಡವಾರು ಪ್ರಮಾಣ




೧೨. ಸಮಾಜದ ಮೇಲೆ ನೇರವಾಗಿ ಪರಿಣಾಮ ಬೀರುವ ಭ್ರಷ್ಟಾಚಾರ ಯಾವುದು? ಎಂಬ ನಮ್ಮ ಪ್ರಶ್ನೆಗೆ ಸರ್ಕಾರಿ ನೌಕರರ ಭ್ರಷ್ಟಾಚಾರವೇ ಸಮಾಜದ ಮೇಲೆ ನೇರವಾಗಿ ಪರಿಣಾಮ ಬೀರುತ್ತದೆ ಎಂದು ಹೇಳಿದವರ ಪ್ರಮಾಣ ಶೇಕಡ ೬೨.೫. ಶೇಕಡ ೩೭.೫ರಷ್ಟು ಜನ ಮಾತ್ರ ರಾಜಕಾರಣಿಗಳ ಭ್ರಷ್ಟಾಚಾರ ಸಮಾಜದ ಮೇಲೆ ನೇರವಾಗಿ ಪರಿಣಾಮ ಬೀರುತ್ತದೆ ಎಂದು ಹೇಳಿದ್ದಾರೆ.ಶೇಕಡ ೬೫ರಷ್ಟು ಪುರುಷರು ಸರ್ಕಾರಿ ನೌಕರರ ಭ್ರಷ್ಟಾಚಾರವೇ ಕಾರಣ ಎಂದು ಹೇಳಿದರೇ, ಶೇಕಡ ೪೦ರಷ್ಟು ಮಹಿಳೆಯರು ರಾಜಕಾರಣಿಗಳ ಭ್ರಷ್ಟಾಚಾರವೇ ಹೆಚ್ಚು ಪ್ರಭಾವ ಬೀರುತ್ತದೆ ಎಂಬ ಅಭಿಪ್ರಾಯ ಪಟ್ಟಿದ್ದಾರೆ.ಇನ್ನು ಎಸ್‌ಎಸ್‌ಎಲ್‌ಸಿ ಮೇಲ್ಪಟ್ಟವರಲ್ಲಿ ಸರ್ಕಾರಿ ನೌಕರರ ಭ್ರಷ್ಟಾಚಾರವೇ ಕಾರಣ ಎಂದು ಶೇಕಡ ೬೩ರಷ್ಟು ಜನ ಹೇಳಿದರೇ, ಅದಕ್ಕಿಂತ ಕಡಿಮೆ ಓದಿದವರಲ್ಲಿ ಶೇಕಡ ೬೪ ಜನಕ್ಕೆ ಇದೇ ಅಭಿಪ್ರಾಯ ಇದೆ.

ಸಮಾಜದ ಮೇಲೆ ನೇರವಾಗಿ ಪರಿಣಾಮ ಬೀರುವ ಭ್ರಷ್ಟಾಚಾರ ಎಂದರೆ ರಾಜಕಾರಣಿಗಳ ಭ್ರಷ್ಟಾಚಾರ ಎಂದು ಹೇಳುವ ಗ್ರಾಮೀಣ ಜನತೆ ಶೇಕಡ ೩೯ ರಷ್ಟಿದ್ದರೆ, ಇದೇ ಅಭಿಪ್ರಾಯ ಹೊಂದಿರುವ ನಗರ ಜನತೆಯ ಪ್ರಮಾಣ ಶೇಕಡ ೪೨. ೪೫ ವರ್ಷದೊಳಗಿನ ಶೇಕಡ ೬೦ ಮತ್ತು ಅದಕ್ಕಿಂತ ಮೇಲ್ಪಟ್ಟವರಲ್ಲಿ ಶೇಕಡ ೬೨ ಜನರಿಗೆ ಸರಕಾರಿ ನೌಕರರ ಭ್ರಷ್ಟಾಚಾರ ಸಮಾಜದ ಮೇಲೆ ನೇರವಾಗಿ ಪರಿಣಾಮ ಬೀರುತ್ತದೆ ಎಂಬ ಒಮ್ಮತದ ಅಭಿಪ್ರಾಯವಿದೆ. ಗುಲಬರ್ಗದಲ್ಲಿ ಶೇಕಡ ೬೫, ಬೆಳಗಾವಿಯಲ್ಲಿ ಶೇಕಡ ೬೩ ಸರಕಾರಿ ನೌಕರರ ಭ್ರಷ್ಟಾಚಾರ ಸಮಾಜದ ಮೇಲೆ ನೇರವಾಗಿ ಪರಿಣಾಮ ಬೀರುತ್ತದೆ ಎಂಬ ಅಭಿಪ್ರಾಯವಿದ್ದರೇ, ಮೈಸೂರಿನಲ್ಲಿ ಶೇಕಡ ೩೮ ಬೆಂಗಳೂರಿನಲ್ಲಿ ಶೇಕಡ ೩೯ ರಾಜಕಾರಣಿಗಳ ಭ್ರಷ್ಟಾಚಾರವೇ ಇದಕ್ಕೆ ಮುಖ್ಯ ಕಾರಣ ಎಂಬ ನಂಬಿಕೆಯನ್ನು ಹೊಂದಿದ್ದಾರೆ.

೧೩. ಲಂಚಕೋರರು ತಮ್ಮ ಜಾತಿ, ಸಂಬಂಧಿ, ಹಾಗೂ ಪರಿಚಯದವರಿಂದಲೂ ಲಂಚ ಪಡೆಯುತ್ತಾರೆಯೇ? ಎಂದು ಕೇಳಿದಾಗ ಹೌದು ಎಂದವರು ಶೇಕಡ ೭೧.೫. ಇನ್ನು ಪುರುಷರಲ್ಲಿ ಶೇಕಡ ೭೮ ಜನ ಈ ಮಾತನ್ನು ಪುರಸ್ಕರಿಸಿದರೇ, ಮಹಿಳೆಯರಲ್ಲಿ ಈ ಮಾತನ್ನು ಒಪ್ಪಿದವರ ಪ್ರಮಾಣ ಶೇಕಡ ೭೪. ಎಸ್‌ಎಸ್‌ಎಲ್‌ಸಿ ಮೇಲ್ಪಟ್ಟವರಲ್ಲಿ ಶೇಕಡ ೭೬ ಜನಕ್ಕೆ ಲಂಚಕೋರರು ತಮ್ಮ ಜಾತಿ, ಸಂಬಂಧಿಯವರಿಂದಲೂ ಲಂಚ ಕೇಳುವುದನ್ನು ಬಿಡುವುದಿಲ್ಲ ಎಂಬ ಅಭಿಪ್ರಾಯವಿದೆ.ಅದಕ್ಕಿಂತ ಕಡಿಮೆ ಓದಿದವರಲ್ಲಿ ಶೇಕಡ ೭೨ ಜನಕ್ಕೆ ಇದೇ ಅಭಿಪ್ರಾಯವಿರುವುದು ಕಂಡು ಬಂದಿದೆ.ಗ್ರಾಮೀಣ ಜನತೆಯಲ್ಲಿ ಶೇಕಡ ೩೦ ಜನಕ್ಕೆ ಲಂಚಕೋರರು ತಮ್ಮ ಜಾತಿ, ಸಂಬಂಧಿಯವರಿಂದ ಲಂಚ ಕೇಳುವುದಿಲ್ಲ ಎಂಬ ಅಭಿಪ್ರಾಯವಿದ್ದರೆ, ನಗರ ಜನತೆಯಲ್ಲಿ ಅದಕ್ಕಿಂತ ಕಡಿಮೆ ಎಂದರೆ ಶೇಕಡ ೨೫ ನಾಗರಿಕರಿಗೆ ಈ ಅಭಿಪ್ರಾಯವಿದೆ. ೪೫ ವರ್ಷದೊಳಗಿನವರಲ್ಲಿ ಶೇಕಡ ೭೩ ಮತ್ತು ಅದಕ್ಕಿಂತ ಮೇಲ್ಪಟ್ಟವರಲ್ಲಿ ಶೇಕಡ ೭೫ರಷ್ಟು ಜನ ಲಂಚಕೋರರು ಯಾರನ್ನು ಬಿಡುವುದಿಲ್ಲ ಎಂಬ ಮಾತಿಗೆ ಸಮರ್ಥನೆ ನೀಡಿದ್ದಾರೆ. ಗುಲಬರ್ಗದಲ್ಲಿ ಶೇಕಡ ೭೩, ಬೆಳಗಾವಿಯಲ್ಲಿ ಶೇಕಡ ೭೨, ಮೈಸೂರಿನಲ್ಲಿ ಶೇಕಡ ೭೦, ಮತ್ತು ಬೆಂಗಳೂರಿನಲ್ಲಿ ಶೇಕಡ ೭೧ ಜನಕ್ಕೆ ಇದೇ ಅಭಿಪ್ರಾಯವಿದೆ ಎಂಬ ವಿಷಯ ಸಮೀಕ್ಷೆಯಿಂದ ಗೊತ್ತಾಗಿದೆ.

ಸೈದ್ಧಾಂತಿಕ ಹಿನ್ನೆಲೆಯ ಪ್ರಕಾರ ಭ್ರಷ್ಟಾಚಾರ ಹಾಗೂ ಲಂಚಗುಳಿತನ ಹೆಚ್ಚಾಗಲು ಕಾರಣಗಳ ವಿವರ ಮತ್ತು ಶೇಕಡವಾರು ಪ್ರಮಾಣ



೧೪. ಸರ್ಕಾರಿ ನೌಕರರ ಹಾಲಿ ಸಂಬಳವು ಸಾಮಾನ್ಯ ಜೀವನ ನಡೆಸಲು ಸಾಕಾಗದ ಕಾರಣ ಲಂಚಗುಳಿತನ ಹೆಚ್ಚಾಗಿದೆಯೇ? ಎಂದು ಕೇಳಿದಾಗ ಈ ಮಾತಿಗೆ ಹೌದು ಎಂದು ಉತ್ತರಿಸಿದವರು ಶೇಕಡ ೫೫.೨೫. ಇಲ್ಲ ಹಾಗೇನಿಲ್ಲ ಎಂದವರು ಶೇಕಡ ೪೪.೭೫ ಜನ. ಶೇಕಡ ೫೮ ಪುರುಷರು ಮತ್ತು ಶೇಕಡ ೫೫ ಮಹಿಳೆಯರು ಸರ್ಕಾರಿ ನೌಕರರ ಹಾಲಿ ಸಂಬಳವು ಸಾಮಾನ್ಯ ಜೀವನ ನಡೆಸಲು ಸಾಕಾಗುವುದಿಲ್ಲ. ಇದರಿಂದ ಲಂಚಗುಳಿತನ ಹೆಚ್ಚಾಗಿದೆ ಎಂಬ ಅಭಿಪ್ರಾಯವನ್ನು ಹೊಂದಿದ್ದಾರೆ.ಇನ್ನು ಎಸ್‌ಎಸ್‌ಎಲ್‌ಸಿ ಮೇಲ್ಪಟ್ಟವರಲ್ಲಿ ಶೇಕಡ ೫೭ ಮತ್ತು ಅದಕ್ಕಿಂತ ಕಡಿಮೆ ಓದಿದವರಲ್ಲಿ ಶೇಕಡ ೫೬ ಜನಕ್ಕೆ ಇದೇ ಅಭಿಪ್ರಾಯವಿದೆ.ಗ್ರಾಮೀಣ ಜನತೆಯಲ್ಲಿ ಸರ್ಕಾರಿ ನೌಕರರ ಹಾಲಿ ಸಂಬಳ ಸಾಮಾನ್ಯ ಜೀವನ ನಡೆಸಲು ಸಾಕಾಗುವುದಿಲ್ಲ ಎಂಬ ಅಭಿಪ್ರಾಯವನ್ನು ಹೊಂದಿದವರ ಪ್ರಮಾಣ ಶೇಕಡ ೫೪.ನಗರದಲ್ಲಿ ಶೇಕಡ ೫೬ ಜನಕ್ಕೆ ಈ ಅಭಿಪ್ರಾಯವಿದೆ. ೪೫ ವರ್ಷದೊಳಗಿನವರಲ್ಲಿ ಶೇಕಡ ೪೬ ಮತ್ತು ೪೫ ವರ್ಷ ಮೇಲ್ಪಟ್ಟವರಲ್ಲಿ ಶೇಕಡ ೪೮ ಜನರು ಮಾತ್ರ ಸರ್ಕಾರಿ ನೌಕರರ ಹಾಲಿ ಸಂಬಳವು ಸಾಮಾನ್ಯ ಜೀವನ ನಡೆಸಲು ಸಾಕಾಗುತ್ತದೆ. ಲಂಚಗುಳಿತನಕ್ಕೂ ಮತ್ತು ಈಗಿನ ಸರ್ಕಾರಿ ಸಂಬಳಕ್ಕೂ ಏನೇನೂ ಸಂಬಂಧವಿಲ್ಲ ಎಂಬ ಅಭಿಪ್ರಾಯ ಹೊಂದಿದ್ದಾರೆ.ಆದರೆ ಗುಲ್ಬರ್ಗದಲ್ಲಿ ಶೇಕಡ ೫೮, ಬೆಳಗಾವಿಯಲ್ಲಿ ಶೇಕಡ ೫೬, ಮೈಸೂರಿನಲ್ಲಿ

ಶೇಕಡ ೫೫ ಮತ್ತು ಬೆಂಗಳೂರಿನಲ್ಲಿ ಶೇಕಡ ೫೨ ನಾಗರಿಕರು ಸರ್ಕಾರಿ ನೌಕರರ ಹಾಲಿ ಸಂಬಳವು ಸಾಮಾನ್ಯ ಜೀವನ ನಡೆಸಲು ಸಾಕಾಗದ ಕಾರಣ ಲಂಚಗುಳಿತನ ಹೆಚ್ಚಾಗಿದೆ ಎಂಬ ಅಭಿಪ್ರಾಯದ ಪರವಾಗಿದ್ದಾರೆ.


೧೫. ಭ್ರಷ್ಟಾಚಾರವು ರಾಷ್ಟ್ರದ ಅಭಿವೃದ್ಧಿಗೆ ಮಾರಕವೆ? ಎಂಬ ಪ್ರಶ್ನೆಗೆ ಶೇಕಡ ೮೯.೨೫ರಷ್ಟು ಜನ ಹೌದು ಎಂದು ಪ್ರತಿಕ್ರಿಯಿಸಿದರೇ, ಆಶ್ಚರ್ಯ ಎಂಬಂತೆ ಶೇಕಡ ೧೦.೭೫ರಷ್ಟು ಜನ ಭ್ರಷ್ಟಾಚಾರದಿಂದ ರಾಷ್ಟ್ರದ ಅಭಿವೃದ್ಧಿಗೆ ಮಾರಕವಾಗುವುದಿಲ್ಲ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.ಪುರುಷರಲ್ಲಿ ಶೇಕಡ ೯೬ ಜನಕ್ಕೆ ಭ್ರಷ್ಟಾಚಾರವು ರಾಷ್ಟ್ರದ ಅಭಿವೃದ್ಧಿಗೆ ಮಾರಕವಾಗುತ್ತದೆ ಎಂಬ ಬಲವಾದ ಅನಿಸಿಕೆ ಇದೆ.ಮಹಿಳೆಯರಲ್ಲಿ ಇದೇ ಅಭಿಪ್ರಾಯವನ್ನು ಹೊಂದಿದವರ ಪ್ರಮಾಣ ಶೇಕಡ ೯೧. ಎಸ್‌ಎಸ್‌ಎಲ್‌ಸಿ ಮೇಲ್ಪಟ್ಟವರಲ್ಲಿ ಶೇಕಡ ೯೪ ನಾಗರಿಕರಿಗೆ ಹಾಗೂ ಅದಕ್ಕಿಂತ ಕಡಿಮೆ ಓದಿದವರಲ್ಲಿ ಶೇಕಡ ೮೭ ಜನಕ್ಕೆ ಭ್ರಷ್ಟಾಚಾರವು ರಾಷ್ಟ್ರದ ಅಭಿವೃದ್ಧಿಗೆ ಶತ್ರು ಎಂಬ ಸ್ಪಷ್ಟ ಅಭಿಪ್ರಾಯವಿದೆ. ಆಶ್ಚರ್ಯ ಎಂಬಂತೆ ಗ್ರಾಮೀಣ ಜನತೆಯಲ್ಲಿ ಶೇಕಡ ೧೫ರಷ್ಟು ಮಾತ್ರ ಭ್ರಷ್ಟಾಚಾರವು ರಾಷ್ಟ್ರದ ಅಭಿವೃದ್ದಿಗೆ ಮಾರಕವಲ್ಲ ಎಂಬ ಅಭಿಪ್ರಾಯವನ್ನು ಹೊಂದಿದ್ದಾರೆ. ಆದರೆ ನಗರದಲ್ಲಿ ಈ ಅಭಿಪ್ರಾಯವನ್ನು ಹೊಂದಿದವರ ಪ್ರಮಾಣ ಶೇಕಡ ೭.೪೫ ವರ್ಷದೊಳಗಿನವರಲ್ಲಿ ಶೇಕಡ ೯೦ ಮತ್ತು ಅದಕ್ಕಿಂತ ಮೇಲ್ಪಟ್ಟವರಲ್ಲಿ ಶೇಕಡ ೮೮ ನಾಗರಿಕರು ಭ್ರಷ್ಟಾಚಾರವೇ ರಾಷ್ಟ್ರದ ಅಭಿವೃದ್ಧಿಗೆ ಮಾರಕವಾಗಿದೆ, ಇದರಲ್ಲಿ ಸಂಶಯವಿಲ್ಲ ಎಂದು ಹೇಳಿದ್ದಾರೆ. ಇನ್ನು ವಿಭಾಗವಾರು ಮಟ್ಟದಲ್ಲಿ ಗುಲ್ಬರ್ಗದಲ್ಲಿ ಶೇಕಡ ೮೮, ಬೆಳಗಾವಿಯಲ್ಲಿ ಶೇಕಡ ೮೯, ಮೈಸೂರು ಮತ್ತು ಬೆಂಗಳೂರಿನಲ್ಲಿ ಶೇಕಡ ೯೦ ಜನರು ಭ್ರಷ್ಟಾಚಾರವು ರಾಷ್ಟ್ರದ ಅಭಿವೃದ್ಧಿಗೆ ಮಾರಕ ಎಂಬ ಅಂಶವನ್ನು ಬಲವಾಗಿ ಪುರಸ್ಕರಿಸಿದ್ದಾರೆ.

೧೬. ದೇಶಾಭಿಮಾನದ ಕೊರತೆಯಿಂದ ಭ್ರಷ್ಟಾಚಾರ ಹೆಚ್ಚಾಗಿದೆಯೆ? ಎಂಬ ನಮ್ಮ ಪ್ರಶ್ನೆಗೆ ಹೌದು ಎಂದು ಉತ್ತರಿಸಿದವರ ಪ್ರಮಾಣ ಶೇಕಡ ೬೫. ಇಲ್ಲ ಎಂದು ಉತ್ತರಿಸಿದವರ ಪ್ರಮಾಣ ಶೇಕಡ ೩೫. ಪುರುಷರಲ್ಲಿ ಶೇಕಡ ೭೦ರಷ್ಟು ದೇಶಾಭಿಮಾನದ ಕೊರತೆಯಿಂದ ಭ್ರಷ್ಟಾಚಾರ ಹೆಚ್ಚಾಗಿದೆ ಎಂಬ ಅಭಿಪ್ರಾಯದ ಪರವಾಗಿದ್ದರೆ, ಇದೇ ಅಭಿಪ್ರಾಯದ ಪರವಾಗಿರುವ ಮಹಿಳೆಯರ ಶೇಕಡ ಪ್ರಮಾಣ ಶೇಕಡ ೬೫. ಇನ್ನು ಎಸ್‌ಎಸ್‌ಎಲ್‌ಸಿ ಮೇಲ್ಪಟ್ಟವರಲ್ಲಿ ಶೇಕಡ ೬೮ ಜನ ದೇಶಾಭಿಮಾನದ ಕೊರತೆಯಿಂದ ಭ್ರಷ್ಟಾಚಾರ ಹೆಚ್ಚಾಗಿದೆ ಎಂದು ಹೇಳಿದ್ದಾರೆ. ಎಸ್‌ಎಸ್‌ಎಲ್‌ಸಿಗಿಂತ ಕಡಿಮೆ ಓದಿದವರಲ್ಲಿ ಇದೇ ಅಭಿಪ್ರಾಯವನ್ನು

ಹೊಂದಿದವರ ಪ್ರಮಾಣ ಶೇಕಡ ೬೪. ಗ್ರಾಮೀಣ ಪ್ರದೇಶದಲ್ಲಿ ಶೇಕಡ ೪೦ರಷ್ಟು ಮತ್ತು ನಗರ ಪ್ರದೇಶದಲ್ಲಿ ಶೇಕಡ ೩೨ರಷ್ಟು ನಾಗರಿಕರು ದೇಶಾಭಿಮಾನದ ಕೊರತೆಯಿಂದ ಭ್ರಷ್ಟಾಚಾರ ಹೆಚ್ಚಾಗಿಲ್ಲ ಎಂಬ ಅಭಿಪ್ರಾಯವನ್ನು ಹೊಂದಿದ್ದಾರೆ. ೪೫ ವರ್ಷದೊಳಗಿನವರಲ್ಲಿ ಶೇಕಡ ೬೬ರಷ್ಟು ಜನ ದೇಶಾಭಿಮಾನದ ಕೊರತೆಯಿಂದ ಖಂಡಿತ ಭ್ರಷ್ಟಾಚಾರ ಹೆಚ್ಚಾಗಿದೆ ಎಂದರೆ, ಅದಕ್ಕಿಂತ ಮೇಲ್ಪಟ್ಟವರಲ್ಲಿ ಶೇಕಡ ೩೬ರಷ್ಟು ಜನ ದೇಶಾಭಿಮಾನದ ಕೊರತೆಯಿಂದ ಖಂಡಿತ ಭ್ರಷ್ಟಾಚಾರ ಹೆಚ್ಚಾಗಿಲ್ಲ ಎಂದು ತಮ್ಮ ಅಭಿಪ್ರಾಯವನ್ನು ತಿಳಿಸಿದ್ದಾರೆ. ಗುಲ್ಬರ್ಗದಲ್ಲಿ ಶೇಕಡ ೬೨, ಬೆಳಗಾವಿಯಲ್ಲಿ ಶೇಕಡ ೬೪, ಮೈಸೂರಿನಲ್ಲಿ ಶೇಕಡ ೬೫, ಹಾಗೂ ಬೆಂಗಳೂರಿನಲ್ಲಿ ಶೇಕಡ ೬೯ರಷ್ಟು ನಾಗರಿಕರು ದೇಶಾಭಿಮಾನದ ಕೊರತೆಯಿಂದ ಭ್ರಷ್ಟಾಚಾರ ಹೆಚ್ಚಾಗಿದೆ ಎಂಬ ಸಾಮಾನ್ಯ ಅಭಿಪ್ರಾಯವನ್ನು ಹೊಂದಿದ್ದಾರೆ ಎಂದು ಸಮೀಕ್ಷೆಯಿಂದ ತಿಳಿದು ಬಂದಿದೆ.

೧೭. ಲಂಚವು ನಮ್ಮ ಸಾಮಾಜಿಕ ಜೀವನದಲ್ಲಿ ಹಾಸು ಹೊಕ್ಕಾಗಿದೆಯೆ? ಎಂದು ಕೇಳಿದರೆ ಹೌದು ಎಂದವರು ಶೇಕಡ ೭೭. ಹಾಗೆಯೇ ಇಲ್ಲ ಎಂದವರು ಸಹಜವಾಗಿ ಶೇಕಡ ೨೩. ಶೇಕಡ ೭೮ರಷ್ಟು ಪುರುಷರು ಲಂಚವು ನಮ್ಮ ಸಾಮಾಜಿಕ ಜೀವನದಲ್ಲಿ ಹಾಸು ಹೊಕ್ಕಾಗಿದೆ ಎಂದು ಹೇಳಿದರೇ, ಶೇಕಡ ೭೪ರಷ್ಟು ಮಹಿಳೆಯರು ಈ ಮಾತನ್ನು ಅನುಮೋದಿಸುತ್ತಾರೆ. ಎಸ್‌ಎಸ್‌ಎಲ್‌ಸಿ ಮೇಲ್ಪಟ್ಟವರಲ್ಲಿ ಶೇಕಡ ೭೭ ಮತ್ತು ಅದಕ್ಕಿಂತ ಕಡಿಮೆ ಓದಿದವರಲ್ಲಿ ಶೇಕಡ ೬೯ ಜನರು ಲಂಚವು ನಮ್ಮ ಸಾಮಾಜಿಕ ಜೀವನದಲ್ಲಿ ಹಾಸು ಹೊಕ್ಕಾಗಿದೆ ಎಂಬ ಅಭಿಪ್ರಾಯವನ್ನು ಹೊಂದಿದ್ದಾರೆ. ಗ್ರಾಮೀಣರಲ್ಲಿ ಶೇಕಡ ೬೮ ಜನ ಲಂಚವು ನಮ್ಮ ಸಾಮಾಜಿಕ ಜೀವನದಲ್ಲಿ ಹಾಸು ಹೊಕ್ಕಾಗಿದೆ ಎಂದು ಹೇಳಿದರೆ, ನಗರ ಪ್ರದೇಶದ ಶೇಕಡ ೭೮ ಜನ ಇದೇ ಅಂಶವನ್ನು ಪರಿಗಣಿಸಿದ್ದಾರೆ. ೪೫ ವರ್ಷದೊಳಗಿನವರಲ್ಲಿ ಶೇಕಡ ೭೫ ಮತ್ತು ಅದಕ್ಕಿಂತ ಮೇಲ್ಪಟ್ಟವರಲ್ಲಿ ಶೇಕಡ ೭೭ರಷ್ಟು ಜನ ಲಂಚವು ನಮ್ಮ ಸಾಮಾಜಿಕ ಜೀವನದಲ್ಲಿ ಹಾಸು ಹೊಕ್ಕಾಗಿದೆ ಎಂಬ ಅಭಿಪ್ರಾಯದ ಪರವಾಗಿದ್ದಾರೆ. ಗುಲ್ಬರ್ಗದಲ್ಲಿ ಶೇಕಡ ೭೯, ಮೈಸೂರಿನಲ್ಲಿ ಶೇಕಡ ೭೫ ಹಾಗೂ ಬೆಳಗಾವಿ ಮತ್ತು ಬೆಂಗಳೂರಿನಲ್ಲಿ ಶೇಕಡ ೭೭ರಷ್ಟು ನಾಗರಿಕರು ಲಂಚವು ನಮ್ಮ ಸಾಮಾಜಿಕ ಜೀವನದಲ್ಲಿ ಹಾಸು ಹೊಕ್ಕಾಗಿದೆ ಎಂದು ಸ್ಪಷ್ಟವಾಗಿ ಹೇಳಿದ್ದಾರೆ.

ಸಕಾಲ ಯೋಜನೆ ಭ್ರಷ್ಟಾಚಾರ ನಿಯಂತ್ರಿಸಲು ಸಹಕಾರಿಯೆ ಎಂಬ ವಿಷಯಕ್ಕೆ ಶೇಕಡವಾರು ಪ್ರಮಾಣ




೧೮. ಸರ್ಕಾರದ ಸಕಾಲ ಯೋಜನೆಗಳು ಭ್ರಷ್ಟಾಚಾರ ನಿರ್ಮೂಲನೆಗೆ ಪೂರಕವಾಗಿದೆಯೆ? ಎಂಬ ನಮ್ಮ ಪ್ರಶ್ನೆಗೆ ಹೌದು ಎಂದು ಉತ್ತರಿಸಿದವರು ಶೇಕಡ ೬೫. ಇಲ್ಲ ಎಂದು ಉತ್ತರಿಸಿದವರ ಪ್ರಮಾಣ ಶೇಕಡ ೩೫. ಪುರುಷರಲ್ಲಿ ಶೇಕಡ ೭೦ರಷ್ಟು ಸರ್ಕಾರದ ಸಕಾಲ ಯೋಜನೆಗಳು ಭ್ರಷ್ಟಾಚಾರ ನಿರ್ಮೂಲನೆಗೆ ಪೂರಕವಾಗಿದೆ ಎಂಬ ಅಭಿಪ್ರಾಯದ ಪರವಾಗಿದ್ದರೆ, ಇದೇ ಅಭಿಪ್ರಾಯದ ಪರವಾಗಿರುವ ಮಹಿಳೆಯರ ಶೇಕಡ ಪ್ರಮಾಣ ಶೇಕಡ ೬೫. ಇನ್ನು ಎಸ್‌ಎಸ್‌ಎಲ್‌ಸಿ ಮೇಲ್ಪಟ್ಟವರಲ್ಲಿ ಶೇಕಡ ೬೪ ಜನ ಸರ್ಕಾರದ ಸಕಾಲ ಯೋಜನೆಗಳು ಭ್ರಷ್ಟಾಚಾರ ನಿರ್ಮೂಲನೆಗೆ ಪೂರಕವಾಗಿದೆ ಎಂದು ಹೇಳಿದ್ದಾರೆ. ಎಸ್‌ಎಸ್‌ಎಲ್‌ಸಿಗಿಂತ ಕಡಿಮೆ ಓದಿದವರಲ್ಲಿ ಇದೇ ಅಭಿಪ್ರಾಯವನ್ನು ಹೊಂದಿದವರ ಪ್ರಮಾಣ ಶೇಕಡ ೬೮.ಗ್ರಾಮೀಣ ಪ್ರದೇಶದಲ್ಲಿ ಶೇಕಡ ೪೦ರಷ್ಟು ಮತ್ತು ನಗರ ಪ್ರದೇಶದಲ್ಲಿ ಶೇಕಡ ೩.೨ರಷ್ಟು ಪ್ರಜೆಗಳು ಸರ್ಕಾರದ ಸಕಾಲ ಯೋಜನೆಗಳು ಭ್ರಷ್ಟಾಚಾರ ನಿರ್ಮೂಲನೆಗೆ ಪೂರಕವಾಗಿಲ್ಲ ಎಂಬ ಅಭಿಪ್ರಾಯವನ್ನು ಹೊಂದಿದ್ದಾರೆ. ४೫ ವರ್ಷದೊಳಗಿನವರಲ್ಲಿ ಶೇಕಡ ೬೬.೨ರಷ್ಟು ಜನ

ಸರ್ಕಾರದ ಸಕಾಲ ಯೋಜನೆಗಳು ಭ್ರಷ್ಟಾಚಾರ ನಿರ್ಮೂಲನೆಗೆ ಪೂರಕವಾಗಿದೆ ಎಂದರೆ, ಅದಕ್ಕಿಂತ ಮೇಲ್ಪಟ್ಟವರಲ್ಲಿ ಶೇಕಡ ೩೬ರಷ್ಟು ಜನ. ಸರ್ಕಾರದ ಸಕಾಲ ಯೋಜನೆಗಳು ಭ್ರಷ್ಟಾಚಾರ ನಿರ್ಮೂಲನೆಗೆ ಪೂರಕವಾಗಿಲ್ಲ ಎಂದು ತಮ್ಮ ಅಭಿಪ್ರಾಯುವನ್ನು ತಿಳಿಸಿದ್ದಾರೆ.ಗುಲ್ಬರ್ಗದಲ್ಲಿ ಶೇಕಡ ೬೨, ಬೆಳಗಾವಿಯಲ್ಲಿ ಶೇಕಡ ೬೪, ಮೈಸೂರಿನಲ್ಲಿ ಶೇಕಡ ೬೬, ಹಾಗೂ ಬೆಂಗಳೂರಿನಲ್ಲಿ ಶೇಕಡ ೬೮ರಷ್ಟು ನಾಗರಿಕರು ಸರ್ಕಾರದ ಸಕಾಲ ಯೋಜನೆಗಳು ಭ್ರಷ್ಟಾಚಾರ ನಿರ್ಮೂಲನೆಗೆ ಪೂರಕವಾಗಿದೆ ಎಂಬ ಸಾಮಾನ್ಯ ಅಭಿಪ್ರಾಯವನ್ನು ಹೊಂದಿದ್ದಾರೆ ಎಂದು ಸಮೀಕ್ಷೆಯಿಂದ ಗೊತ್ತಾಗಿದೆ.

೧೯. ಸಾಮಾನ್ಯ ಜನರ ಒಳತಿಗಾಗಿ ಯಾವ ಮಟ್ಟದ ಭ್ರಷ್ಟಾಚಾರ ನಿರ್ಮೂಲನೆ ಅಗತ್ಯ? ಎಂಬ ನಮ್ಮ ಪ್ರಶ್ನೆಗೆ ಮೇಲ್ಮಟ್ಟದ ಭ್ರಷ್ಟಾಚಾರ ಎಂದು ಹೇಳಿದವರ ಪ್ರಮಾಣ ಶೇಕಡ ೬೨.೭೫. ಶೇಕಡ ೩೭.೨೫ರಷ್ಟು ಜನ ಮಾತ್ರ ಕೆಳಮಟ್ಟದ ಭ್ರಷ್ಟಾಚಾರ ಎಂದು ಹೇಳಿದ್ದಾರೆ. ಶೇಕಡ ೬೫ರಷ್ಟು ಪುರುಷರು ಸಾಮಾನ್ಯ ಜನರ ಒಳತಿಗಾಗಿ ಮೇಲ್ಮಟ್ಟದ ಭ್ರಷ್ಟಾಚಾರದ ನಿರ್ಮೂಲನೆ ಎಂದು ಹೇಳಿದರೇ, ಶೇಕಡ ೪೦ರಷ್ಟು ಮಹಿಳೆಯರು ಕೆಳಮಟ್ಟದ ಭ್ರಷ್ಟಾಚಾರದ ನಿರ್ಮೂಲನೆ ಅಗತ್ಯ ಹೆಚ್ಚು ಎಂಬ ಅಭಿಪ್ರಾಯ ಪಟ್ಟಿದ್ದಾರೆ. ಇನ್ನು ಎಸ್‌ಎಸ್‌ಎಲ್‌ಸಿ ಮೇಲ್ಪಟ್ಟವರಲ್ಲಿ ಸಾಮಾನ್ಯ ಜನರ ಒಳತಿಗಾಗಿ ಮೇಲ್ಮಟ್ಟದ ಭ್ರಷ್ಟಾಚಾರದ ನಿರ್ಮೂಲನೆ ಅಗತ್ಯ ಎಂದು ಶೇಕಡ ೬೩ರಷ್ಟು ಜನ ಹೇಳಿದರೇ, ಅದಕ್ಕಿಂತ ಕಡಿಮೆ ಓದಿದವರಲ್ಲಿ ಶೇಕಡ ೬೪ ಜನಕ್ಕೆ ಇದೇ ಅಭಿಪ್ರಾಯ ಇದೆ. ಸಾಮಾನ್ಯ ಜನರ ಒಳತಿಗಾಗಿ ಕೆಳಮಟ್ಟದ ಭ್ರಷ್ಟಾಚಾರದ ನಿರ್ಮೂಲನೆ ಅಗತ್ಯ ಎಂದು ಹೇಳುವ ಗ್ರಾಮೀಣ ಜನತೆ ಶೇಕಡ ೩೯ ರಷ್ಟಿದ್ದರೆ, ಇದೇ ಅಭಿಪ್ರಾಯ ಹೊಂದಿರುವ ನಗರ ಜನತೆಯ ಪ್ರಮಾಣ ಶೇಕಡ ೪೨. ೪೫ ವರ್ಷದೊಳಗಿನ ಶೇಕಡ ೬೦ ಮತ್ತು ಅದಕ್ಕಿಂತ ಮೇಲ್ಪಟ್ಟವರಲ್ಲಿ ಶೇಕಡ ೬೨ ಜನರಿಗೆ ಮೇಲ್ಮಟ್ಟದ ಭ್ರಷ್ಟಾಚಾರ ನಿರ್ಮೂಲನೆ ಅಗತ್ಯ ಎಂಬ ಒಮ್ಮತದ ಅಭಿಪ್ರಾಯವಿದೆ. ಗುಲಬರ್ಗದಲ್ಲಿ ಶೇಕಡ ೬೫, ಬೆಳಗಾವಿಯಲ್ಲಿ ಶೇಕಡ ೬೩ ಜನರಿಗೆ ಸಾಮಾನ್ಯ ಜನರ ಒಳಿತಿಗಾಗಿ ಮೇಲ್ಮಟ್ಟದ ಭ್ರಷ್ಟಾಚಾರದ ನಿರ್ಮೂಲನೆ ಅಗತ್ಯ ಎಂಬ ಆಭಿಪ್ರಾಯವಿದ್ದರೇ, ಮೈಸೂರಿನಲ್ಲಿ ಶೇಕಡ ೩೮ ಬೆಂಗಳೂರಿನಲ್ಲಿ ಶೇಕಡ ೩೯ರಷ್ಟು ನಾಗರಿಕರು ಕೆಳಮಟ್ಟದ ಭ್ರಷ್ಟಾಚಾರದ ನಿರ್ಮೂಲನೆಗೆ ಹೆಚ್ಚು ಮಹತ್ವ ನೀಡಿದ್ದಾರೆ.

ಭ್ರಷ್ಟಾಚಾರಿಗಳಿಗೆ ಎಂತಹ ಶಿಕ್ಷೆ ವಿಧಿಸಬಹುದು ಎನ್ನುವುದರ ವಿವರ ಮತ್ತು ಪ್ರಮಾಣ



೨೦. ಭ್ರಷ್ಟಾಚಾರಿಗಳಿಗೆ ಎಂತಹ ಶಿಕ್ಷೆ ವಿಧಿಸಬೇಕು ಎಂದು ಕೇಳಿದಾಗ ಸಾಧಾರಣ ಶಿಕ್ಷೆ ಎಂದು ಹೇಳಿದವರು ಶೇಕಡ ೧೨.೭೫ರಷ್ಟು ನಾಗರಿಕರು. ಕಠಿಣ ಶಿಕ್ಷೆಯನ್ನು ವಿಧಿಸಬೇಕು ಎಂದವರು ಶೇಕಡ ೪೩.೭೫ ಪ್ರಜೆಗಳು.ಶೇಕಡ ೪೩.೫ರಷ್ಟು ಜನ ಗಲ್ಲು ಅಥವಾ ಜೀವಾವಧಿಯಂತಹ ಶಿಕ್ಷೆ ನೀಡಬೇಕು ಎಂದಿದ್ದಾರೆ. ಇನ್ನು ಪುರುಷರಲ್ಲಿ ಶೇಕಡ ೧೮ರಷ್ಟು ಜನ ಸಾಧಾರಣ ಶಿಕ್ಷೆ ಸಾಕು ಎಂದರೇ, ಶೇಕಡ ೪೩ರಷ್ಟು ಜನ ಪುರುಷರು ಕಠಿಣ ಶಿಕ್ಷೆಯೇ ಬೇಕು ಎಂಬ ಅಭಿಪ್ರಾಯ ಹೊಂದಿದ್ದಾರೆ. ಶೇಕಡ ೩೯ರಷ್ಟು ಪುರುಷರು ಮಾತ್ರ ಭ್ರಷ್ಟಾಚಾರಿಗಳಿಗೆ ಗಲ್ಲು/ಜೀವಾವಧಿಯಂತಹ ಶಿಕ್ಷೆ ಆಗಬೇಕು ಎನ್ನುತ್ತಾರೆ. ಇನ್ನು ಶೇಕಡ ೧೫ರಷ್ಟು ಮಹಿಳೆಯರಿಗೆ ಸಾಧಾರಣ ಶಿಕ್ಷೆ ಸಾಕು ಎಂಬ ಅಭಿಪ್ರಾಯವಿದ್ದರೆ, ಶೇಕಡ ೩೯ರಷ್ಟು ಮಹಿಳೆಯರು ಇಂತಹ ಅಪರಾಧಕ್ಕೆ ಕಠಿಣ ಶಿಕ್ಷೆ ಬೇಕೆಂದು, ಶೇಕಡ ೪೬ರಷ್ಟು ಮಹಿಳೆಯರು ಗಲ್ಲು ಅಥವಾ ಜೀವಾವಧಿ ಶಿಕ್ಷೆ ಬೇಕು ಎಂದು ಹೇಳುತ್ತಾರೆ. ಇನ್ನು ಎಸ್‌ಎಸ್‌ಎಲ್‌ಸಿ ಮೇಲ್ಪಟ್ಟವರಲ್ಲಿ ಶೇಕಡ ೧೪ರಷ್ಟು ಮಾತ್ರ ಸಾಧಾರಣ ಶಿಕ್ಷೆ ಸಾಕು ಎಂದು ಒಪ್ಪಿಕೊಳ್ಳುತ್ತಾರೆ. ಇನ್ನು ಉಳಿದ ಶೇಕಡ ೪೧ ಮತ್ತು ಶೇಕಡ ೪೫ರಷ್ಟು ಜನರು ಕ್ರಮವಾಗಿ ಇದಕ್ಕೆ ಕಠಿಣ ಶಿಕ್ಷೆ ಮತ್ತು ಗಲ್ಲು/ಜೀವಾವಧಿ ಶಿಕ್ಷೆಯೇ ಲೇಸು ಎಂದು ಅಭಿಪ್ರಾಯ ಪಡುತ್ತಾರೆ. ಎಸ್‌ಎಸ್‌ಎಲ್‌ಸಿ ಗಿಂತ ಕಡಿಮೆ ಓದಿದವರಲ್ಲಿ ಶೇಕಡ ೧೧ ಜನ ಭ್ರಷ್ಟಾಚಾರಿಗಳಿಗೆ ಸಾಧಾರಣ ಶಿಕ್ಷೆ ಸಾಕು ಎಂಬ ಅಭಿಪ್ರಾಯವಿದೆ. ಹಾಗೂ ಅವರಲ್ಲಿ ಶೇಕಡ ೩೫ ಜನರು ಕಠಿಣ ಶಿಕ್ಷೆ ಬೇಕು ಎಂದು



ಹೇಳಿದರೇ, ಶೇಕಡ ೫೪ರಷ್ಟು ಜನರು ಇಂತಹ ಭ್ರಷ್ಟಾಚಾರಿಗಳನ್ನು ನಿಗ್ರಹಿಸಲು ಜೀವಾವಧಿ/ ಗಲ್ಲು ಶಿಕ್ಷೆಯೇ ಸರಿಯಾದ ಮಾರ್ಗ ಎಂಬ ಅಂಶವನ್ನು ಗಂಭೀರವಾಗಿ ಪರಿಗಣಿಸಿದ್ದಾರೆ. ಆಶ್ಚರ್ಯ ಎಂಬಂತೆ ಗ್ರಾಮೀಣ ಪ್ರದೇಶದಲ್ಲಿ ಕೇವಲ ಶೇಕಡ ೧೫ ಮತ್ತು ಶೇಕಡ ೩೦ರಷ್ಟು ನಾಗರಿಕರು ಮಾತ್ರ ಕ್ರಮವಾಗಿ ಸಾಧಾರಣ ಶಿಕ್ಷೆ ಮತ್ತು ಕಠಿಣ ಶಿಕ್ಷೆಯ ಪರವಾಗಿದ್ದಾರೆ. ಆದರೆ ಶೇಕಡ ೫೫ರಷ್ಟು ಗ್ರಾಮೀಣರು ಗಲ್ಲು ಅಥವಾ ಜೀವಾವಧಿ ಶಿಕ್ಷೆಯೇ ಭ್ರಷ್ಟಾಚಾರಿಗಳಿಗೆ ತಕ್ಕ ಶಾಸ್ತಿ ಎಂಬ ಅಭಿಪ್ರಾಯವನ್ನು ಸಮೀಕ್ಷೆಯಲ್ಲಿ ತಿಳಿಸಿದ್ದಾರೆ. ಇನ್ನು ನಗರ ಪ್ರದೇಶದಲ್ಲಿ ಶೇಕಡ ೧೬ರಷ್ಟು ಜನ ಸಾಧಾರಣ ಶಿಕ್ಷೆ, ಶೇಕಡ ೪೧ರಷ್ಟು ಜನ ಕಠಿಣ ಶಿಕ್ಷೆ, ಶೇಕಡ ೪೩ ಜನ ಗಲ್ಲು ಅಥವಾ ಜೀವಾವಧಿಯ ಶಿಕ್ಷೆಯ ಪರವಾಗಿದ್ದಾರೆ. ಇನ್ನು ೪೫ ವರ್ಷದೊಳಗಿನವರಲ್ಲಿ ಈ ಪ್ರಶ್ನೆ ಕೇಳಿದಾಗ ಭ್ರಷ್ಟಾಚಾರಿಗಳಿಗೆ ಸಾಧಾರಣ ಶಿಕ್ಷೆ ಸಾಕು ಎಂದು ಹೇಳಿದವರು ಶೇಕಡ ೧೭ರಷ್ಟು ನಾಗರಿಕರು. ಇಷ್ಟು ಸಾಕಾಗುವುದಿಲ್ಲ ಕಠಿಣ ಶಿಕ್ಷೆಯೇ ಬೇಕು ಎಂದವರು ಶೇಕಡ ೪೩ ಪ್ರಜೆಗಳು. ಇವರಲ್ಲಿ ಶೇಕಡ ೪೦ರಷ್ಟು ಜನ ಜೀವಾವಧಿ ಮತ್ತು ಗಲ್ಲು ಶಿಕ್ಷೆಯ ಪರವಾಗಿದ್ದಾರೆ. ಅದಕ್ಕಿಂತ ಮೇಲ್ಪಟ್ಟ ವಯಸ್ಸಿನವರಲ್ಲಿ ಈ ಕುರಿತು ವಿಚಾರಿಸಿದಾಗ ಈ ಮಾಹಿತಿ ತಿಳಿದು ಬಂದಿದೆ. ಇವರಲ್ಲಿ ಶೇಕಡ ೧೪ ಜನ ಭ್ರಷ್ಟಾಚಾರಿಗಳಿಗೆ ಸಾಧಾರಣ ಶಿಕ್ಷೆ ಸಾಕು ಎಂಬ ಅಭಿಪ್ರಾಯವಿದೆ. ಹಾಗೂ ಅವರಲ್ಲಿ ಶೇಕಡ ೪೫ ಜನರು ಇಂತಹ ಅಪರಾಧಗಳಿಗೆ ಕಠಿಣ ಶಿಕ್ಷೆ ಬೇಕು ಎಂದು ಹೇಳಿದರೇ, ಶೇಕಡ ೪೧ರಷ್ಟು ಜನರು ಜೀವಾವಧಿ ಅಥವಾ ಗಲ್ಲು ಶಿಕ್ಷೆಯ ಪರವಾಗಿದ್ದಾರೆ. ಇನ್ನು ಗುಲ್ಬರ್ಗದಲ್ಲಿ ಶೇಕಡ ೧೫ರಷ್ಟು ನಾಗರಿಕರು ಸಾಧಾರಣ ಶಿಕ್ಷೆ ಸಾಕು ಎಂದರೇ, ಶೇಕಡ ೪೦ ಜನರು ಕಠಿಣ ಶಿಕ್ಷೆ ಬೇಕು ಎಂಬ ಅಭಿಪ್ರಾಯ ನೀಡಿದ್ದಾರೆ. ಶೇಕಡ ೪೫ ಜನರು ಗಲ್ಲು ಅಥವಾ ಜೀವಾವಧಿ ಶಿಕ್ಷೆಯೇ ಸೂಕ್ತ ಎಂಬ ಭಾವನೆ ಹೊಂದಿದ್ದಾರೆ. ಬೆಳಗಾವಿ ವಿಭಾಗದಲ್ಲಿ ಶೇಕಡ ೧೧ ಜನ ಸಾಧಾರಣ ಶಿಕ್ಷೆಯೇ ಎಂಬ ಅಭಿಪ್ರಾಯವಿದ್ದರೆ, ಅವರಲ್ಲಿ ಶೇಕಡ ೪೬ ಜನರು ಕಠಿಣ ಶಿಕ್ಷೆಯ ಪರವಾಗಿದ್ದಾರೆ. ಶೇಕಡ ೪೩ರಷ್ಟು ನಾಗರಿಕರು ಜೀವಾವಧಿ ಅಥವಾ ಗಲ್ಲು ಶಿಕ್ಷೆಯನ್ನು ಬೆಂಬಲಿಸಿದ್ದಾರೆ. ಮೈಸೂರು ವಿಭಾಗದಲ್ಲಿ ಶೇಕಡ ೪೪ರಷ್ಟು ಜನರು ಭ್ರಷ್ಟಾಚಾರಿಗಳಿಗೆ ಕಠಿಣ ಶಿಕ್ಷೆ ಬೇಕೆಂದು ಮತ್ತು ಶೇಕಡ ೪೪ರಷ್ಟು ಜನರು ಜೀವಾವಧಿ ಅಥವಾ ಗಲ್ಲು ಶಿಕ್ಷೆಯೇ ಆಗಬೇಕು ಎಂಬ ಸಮ ಅಭಿಪ್ರಾಯವನ್ನು ಹೊಂದಿದ್ದಾರೆ. ಇಲ್ಲಿ ಕೇವಲ ಶೇಕಡ ೧೨ರಷ್ಟು ಜನ ಮಾತ್ರ ಸಾಧಾರಣ ಶಿಕ್ಷೆ ಬೇಕೆಂದು ತಮ್ಮ ಅಭಿಪ್ರಾಯವನ್ನು ಸಮೀಕ್ಷೆಯ ವೇಳೆಯಲ್ಲಿ ತಿಳಿಸಿದ್ದಾರೆ. ಇನ್ನು ಬೆಂಗಳೂರು ವಿಭಾಗದಲ್ಲಿ ಈ ಪ್ರಶ್ನೆ ಕೇಳಿದಾಗ ಸಾಧಾರಣ ಶಿಕ್ಷೆ ಸಾಕು ಎಂದು

ಹೇಳಿದವರು ಶೇಕಡ ೧೩ರಷ್ಟು ನಾಗರಿಕರು. ಇನ್ನು ಕಠಿಣ ಶಿಕ್ಷೆ ಬೇಕು ಎಂದವರು ಶೇಕಡ ೪೫ ಪ್ರಜೆಗಳು. ಬೆಂಗಳೂರಿನಲ್ಲಿ ಶೇಕಡ ೪೨ರಷ್ಟು ಜನರು ಭ್ರಷ್ಟಾಚಾರಿಗಳಿಗೆ ಜೀವಾವಧಿ/ಗಲ್ಲು ಇಂತಹ ಶಿಕ್ಷೆಯೇ ಆಗಬೇಕು ಎಂಬ ಅಭಿಪ್ರಾಯಪಟ್ಟಿದ್ದಾರೆ ಎಂಬ ಸಂಗತಿ ಸಮೀಕ್ಷೆಯಿಂದ ತಿಳಿದು ಬಂದಿದೆ.

೨೧. ಲೋಕಾಯುಕ್ತ ಕಾನೂನಿನಡಿಯಲ್ಲಿ ಲಂಚಕೋರರಿಗೆ ವಿಧಿಸುವ ಹಾಲಿ ಶಿಕ್ಷೆ ಸಾಕೇ? ಇನ್ನೂ ಹೆಚ್ಚಾಗಬೇಕೆ? ಎಂದು ನಾವು ಸಮೀಕ್ಷೆಯಲ್ಲಿ ಭಾಗವಹಿಸಿದವರನ್ನು ಕೇಳಿದಾಗ ಸಾಕು ಎಂದವರ ಪ್ರಮಾಣ ಶೇಕಡ ೩. ಆದರೆ ಶೇಕಡ ೯೭ರಷ್ಟು ಜನತೆ ಲೋಕಾಯುಕ್ತ ಕಾನೂನಿನಡಿಯಲ್ಲಿ ಲಂಚಕೋರರಿಗೆ ವಿಧಿಸುವ ಹಾಲಿ ಶಿಕ್ಷೆ ಇನ್ನೂ ಹೆಚ್ಚಾಗಬೇಕು ಎಂಬ ಅಭಿಪ್ರಾಯ ಹೊಂದಿದ್ದಾರೆ. ಪುರಷರಲ್ಲಿ ಶೇಕಡ ೩, ಮಹಿಳೆಯರಲ್ಲಿ ಶೇಕಡ ೧ರಷ್ಟು ಜನ ಮಾತ್ರ ಪ್ರಸ್ತುತ ಲಂಚಕೋರರಿಗೆ ಲೋಕಾಯುಕ್ತ ಕಾನೂನು ಅಡಿಯಲ್ಲಿ ವಿಧಿಸುವ ಶಿಕ್ಷೆ ಸಾಕು ಎಂದರೆ, ಎಸ್‌ಎಸ್‌ಎಲ್‌ಸಿ ಮೇಲ್ಪಟ್ಟವರಲ್ಲಿ ಶೇಕಡ ೯೮ ಮತ್ತು ಅದಕ್ಕಿಂತ ಕಡಿಮೆ ಓದಿದವರಲ್ಲಿ ಶೇಕಡ ೯೯ರಷ್ಟು ಜನ ಈ ಹಾಲಿ ಶಿಕ್ಷೆ ಲಂಚಕೋರರಿಗೆ ಸಾಕಾಗುವುದಿಲ್ಲ ಎಂಬ ಅಭಿಪ್ರಾಯ ಹೊಂದಿದ್ದಾರೆ. ಇನ್ನು ಗ್ರಾಮೀಣ ಪ್ರದೇಶದಲ್ಲಿ ಶೇಕಡ ೯೯ ಮತ್ತು ನಗರ ಪ್ರದೇಶದಲ್ಲಿ ಶೇಕಡ ೯೭ರಷ್ಟು ಇದೇ ಅಭಿಪ್ರಾಯವನ್ನು ಹೊಂದಿದ್ದಾರೆ. ಸದ್ಯಕ್ಕೆ ಲೋಕಾಯುಕ್ತ ಕಾನೂನಿನಡಿಯಲ್ಲಿ ಲಂಚಕೋರರಿಗೆ ವಿಧಿಸುತ್ತಿರುವ ಶಿಕ್ಷೆ ಸಾಕಾಗುತ್ತದೆ ಎಂದು ಭಾವಿಸಿದ ೪೫ ವರ್ಷದೊಳಗಿನವರ ಮತ್ತು ಅದಕ್ಕಿಂತ ಮೇಲ್ಪಟ್ಟವರ ಪ್ರಮಾಣ ಶೇಕಡ ೨. ವಿಭಾಗವಾರು ಮಟ್ಟದಲ್ಲಿ ಗುಲ್ಬರ್ಗದಲ್ಲಿ ಶೇಕಡ ೯೫, ಬೆಳಗಾವಿ ಮತ್ತು ಬೆಂಗಳೂರಿನಲ್ಲಿ ಶೇಕಡ ೯೭, ಮೈಸೂರಿನಲ್ಲಿ ಶೇಕಡ ೯೯ರಷ್ಟು ಜನರಿಗೆ ಲಂಚಕೋರರಿಗೆ ಈ ಶಿಕ್ಷೆ ಇನ್ನೂ ಹೆಚ್ಚಾಗಬೇಕು ಎಂಬ ಅಭಿಪ್ರಾಯ ಹೊಂದಿದ್ದಾರೆ ಎಂಬ ವಿಷಯ ಈ ಸಮೀಕ್ಷೆಯಲ್ಲಿ ತಿಳಿದು ಬಂದಿದೆ.

೨೨. ಲೋಕಾಯುಕ್ತ ಸಂಸ್ಥೆಯನ್ನು ಸರ್ಕಾರವು ದುರ್ಬಲ ಮಾಡಲು ಬಯಸುತ್ತಿದೆಯೆ? ಎಂಬ ಪ್ರಶ್ನೆಗೆ ಇಲ್ಲ ಎಂದು ಉತ್ತರಿಸಿದವರು ಶೇಕಡ ೯. ಆದರೆ ಹೌದು ಎಂದು ಉತ್ತರಿಸಿದವರ ಪ್ರಮಾಣ ಶೇಕಡ ೯೧. ಪುರುಷರಲ್ಲಿ ಶೇಕಡ ೯೫ರಷ್ಟು ಜನರಿಗೆ ಲೋಕಾಯುಕ್ತ ಸಂಸ್ಥೆಯನ್ನು ಸರ್ಕಾರವು ದುರ್ಬಲ ಮಾಡಲು ಬಯಸುತ್ತದೆ ಎಂಬ ಅಭಿಪ್ರಾಯವಿದೆ. ಶೇಕಡ ೯೨ರಷ್ಟು ಮಹಿಳೆಯರು ಸಹ ಇದೇ ಅಭಿಪ್ರಾಯವನ್ನು ಹೊಂದಿರುವುದಾಗಿ ಸಮೀಕ್ಷೆಯಲ್ಲಿ ತಿಳಿದು ಬಂದಿದೆ. ಎಸ್‌ಎಸ್‌ಎಲ್‌ಸಿ ಮೇಲ್ಪಟ್ಟವರಲ್ಲಿ ಶೇಕಡ ೯೪ ಮತ್ತು ಎಸ್‌ಎಸ್‌ಎಲ್‌ಸಿಗಿಂತ

ಕಡಿಮೆ ಓದಿದವರಲ್ಲಿ ಶೇಕಡ ೯೫ರಷ್ಟು ಜನ ಲೋಕಾಯುಕ್ತ ಸಂಸ್ಥೆಯನ್ನು ಸರ್ಕಾರವು ದುರ್ಬಲ ಮಾಡಲು ಬಯಸುತ್ತದೆ ಎಂಬ ಅಭಿಪ್ರಾಯ ಹೊಂದಿದ್ದಾರೆ. ಇನ್ನು ಗ್ರಾಮೀಣ ಪ್ರದೇಶದಲ್ಲಿ ಶೇಕಡ ೯೬ ಜನ ಲೋಕಾಯುಕ್ತ ಸಂಸ್ಥೆಯನ್ನು ಸರ್ಕಾರವು ದುರ್ಬಲ ಮಾಡಲು ಬಯಸುತ್ತದೆ ಎಂದು ಹೇಳಿದರೆ, ನಗರ ಪ್ರದೇಶದಲ್ಲಿ ಶೇಕಡ ೯೪ರಷ್ಟು ಜನ ಇದನ್ನೇ ಒಪ್ಪಿಕೊಂಡಿದ್ದಾರೆ. ೪೫ ವರ್ಷದೊಳಗಿನವರಲ್ಲಿ ಶೇಕಡ ೯೭ ಹಾಗೂ ಮೇಲ್ಪಟ್ಟವರಲ್ಲಿ ಶೇಕಡ ೯೫ ಲೋಕಾಯುಕ್ತ ಸಂಸ್ಥೆಯನ್ನು ಸರ್ಕಾರವು ದುರ್ಬಲ ಮಾಡಲು ಬಯಸುತ್ತದೆ ಎಂದು ಒಪ್ಪಿಕೊಂಡಿದ್ದಾರೆ. ಇನ್ನು ಗುಲ್ಬರ್ಗ ವಿಭಾಗದಲ್ಲಿ ಶೇಕಡ ೯೩, ಬೆಳಗಾವಿ ವಿಭಾಗದಲ್ಲಿ ಶೇಕಡ ೯೧, ಮೈಸೂರು ಮತ್ತು ಬೆಂಗಳೂರು ವಿಭಾಗದಲ್ಲಿ ಶೇಕಡ ೯೦ರಷ್ಟು ಜನ ಲೋಕಾಯುಕ್ತ ಸಂಸ್ಥೆಯನ್ನು ಸರ್ಕಾರವು ದುರ್ಬಲ ಮಾಡಲು ಬಯಸುತ್ತದೆ ಎಂದು ಒಮ್ಮತದಿಂದ ಒಪ್ಪಿಕೊಂಡಿದ್ದಾರೆ.

೨೩. ಲೋಕಾಯುಕ್ತ ಕಾನೂನನ್ನು ಇನ್ನಷ್ಟು ಬಲ ಪಡಿಸಬೇಕಾಗಿದೆಯೆ? ಎಂದು ಸಮೀಕ್ಷೆಯಲ್ಲಿ ಕೇಳಿದಾಗ ನಮಗೆ ಹೌದು ಎಂದು ಉತ್ತರಿಸಿದವರ ಪ್ರಮಾಣ ಶೇಕಡ ೯೧. ಪುರುಷರಲ್ಲಿ ಶೇಕಡ ೯೫ರಷ್ಟು ಜನರಿಗೆ ಲೋಕಾಯುಕ್ತ ಕಾನೂನನ್ನು ಇನ್ನಷ್ಟು ಬಲ ಪಡಿಸಬೇಕು ಎಂಬ ಅಭಿಪ್ರಾಯವಿದೆ. ಶೇಕಡ ೯೭ರಷ್ಟು ಮಹಿಳೆಯರು ಸಹ ಇದೇ ಅಭಿಪ್ರಾಯದ ಪರವಾಗಿದ್ದಾರೆ. ಎಸ್‌ಎಸ್‌ಎಲ್‌ಸಿ ಮೇಲ್ಪಟ್ಟವರಲ್ಲಿ ಶೇಕಡ ೯೫ ಮತ್ತು ಎಸ್‌ಎಸ್‌ಎಲ್‌ಸಿಗಿಂತ ಕಡಿಮೆ ಓದಿದವರಲ್ಲಿ ಶೇಕಡ ೯೪ರಷ್ಟು ಜನ ಲೋಕಾಯುಕ್ತ ಕಾನೂನನ್ನು ಇನ್ನಷ್ಟು ಬಲ ಪಡಿಸಬೇಕು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಇನ್ನು ಗ್ರಾಮೀಣ ಪ್ರದೇಶದಲ್ಲಿ ಶೇಕಡ ೯೪ ಜನರು ಲೋಕಾಯುಕ್ತ ಕಾನೂನನ್ನು ಇನ್ನಷ್ಟು ಬಲ ಪಡಿಸಬೇಕು ಎಂದು ಹೇಳಿದರೆ, ನಗರ ಪ್ರದೇಶದಲ್ಲಿ ಶೇಕಡ ೯೬ರಷ್ಟು ಜನ ಕೂಡ ಇದನ್ನೇ ಒಪ್ಪಿಕೊಂಡಿದ್ದಾರೆ. ೪೫ ವರ್ಷದೊಳಗಿನವರಲ್ಲಿ ಶೇಕಡ ೯೫ ಹಾಗೂ ಮೇಲ್ಪಟ್ಟವರಲ್ಲಿ ಶೇಕಡ ೯೭ ಲೋಕಾಯುಕ್ತ ಕಾನೂನನ್ನು ಇನ್ನಷ್ಟು ಬಲ ಪಡಿಸಬೇಕು ಎಂದು ಒಪ್ಪಿಕೊಂಡಿದ್ದಾರೆ. ಇನ್ನು ಗುಲ್ಬರ್ಗ ವಿಭಾಗದಲ್ಲಿ ಶೇಕಡ ೯೩, ಬೆಳಗಾವಿ ವಿಭಾಗದಲ್ಲಿ ಶೇಕಡ ೯೧, ಮೈಸೂರು ಮತ್ತು ಬೆಂಗಳೂರು ವಿಭಾಗದಲ್ಲಿ ಶೇಕಡ ೯೦ರಷ್ಟು ನಾಗರಿಕರು ಲೋಕಾಯುಕ್ತ ಕಾನೂನನ್ನು ಇನ್ನಷ್ಟು ಬಲ ಪಡಿಸಬೇಕು ಎಂಬ ಅಭಿಪ್ರಾಯದ ಪರವಾಗಿದ್ದಾರೆ ಎಂಬುದು ಸಮೀಕ್ಷೆಯಲ್ಲಿ ತಿಳಿದು ಬಂದಿದೆ.

೨೪. ರಾಜ್ಯದಲ್ಲಿ ಲೋಕಾಯುಕ್ತ ಮತ್ತು ಉಪಲೋಕಾಯುಕ್ತ ಹುದ್ದೆಗಳನ್ನು ಈ ಹಿಂದೆ ಬಹಳ ದಿನಗಳ ಕಾಲ ಖಾಲಿ ಇಟ್ಟಿದ್ದು ಸರಿಯೆ? ಎಂಬ ನಮ್ಮ ಪ್ರಶ್ನೆಗೆ ತಪ್ಪು ಎಂದು ಪ್ರತಿಕ್ರಿಯಿಸಿದವರ ಪ್ರಮಾಣ ಶೇಕಡ ೮೯.೨೫ ಆಶ್ಚರ್ಯ ಎಂಬಂತೇ ಶೇಕಡ ೯.೭೫ರಷ್ಟು ಜನ ಇದು ಸರಿ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಪುರುಷರಲ್ಲಿ ಶೇಕಡ ೯೬ ಜನಕ್ಕೆ ರಾಜ್ಯದಲ್ಲಿ ಲೋಕಾಯುಕ್ತ ಮತ್ತು ಉಪಲೋಕಾಯುಕ್ತ ಹುದ್ದೆಗಳನ್ನು ಈ ಹಿಂದೆ ಬಹಳ ದಿನಗಳ ಕಾಲ ಖಾಲಿ ಇಟ್ಟಿದ್ದು ತಪ್ಪು ಎಂಬ ಬಲವಾದ ಅನಿಸಿಕೆ ಇದೆ. ಮಹಿಳೆಯರಲ್ಲಿ ಇದೇ ಅಭಿಪ್ರಾಯವನ್ನು ಹೊಂದಿದವರ ಪ್ರಮಾಣ ಶೇಕಡ ೯೧.ಎಸ್ಎಸ್ಎಲ್ಸಿ ಮೇಲ್ಪಟ್ಟವರಲ್ಲಿ ಶೇಕಡ ೯೪ ನಾಗರಿಕರಿಗೆ ಹಾಗೂ ಅದಕ್ಕಿಂತ ಕಡಿಮೆ ಓದಿದವರಲ್ಲಿ ಶೇಕಡ ೮೭ ಜನಕ್ಕೆ ರಾಜ್ಯದಲ್ಲಿ ಲೋಕಾಯುಕ್ತ ಮತ್ತು ಉಪಲೋಕಾಯುಕ್ತ ಹುದ್ದೆಗಳನ್ನು ಈ ಹಿಂದೆ ಬಹಳ ದಿನಗಳ ಕಾಲ ಖಾಲಿ ಇಟ್ಟಿದ್ದು ತಪ್ಪು ಎಂಬ ಸ್ಪಷ್ಟ ಅಭಿಪ್ರಾಯವಿದೆ. ಆಶ್ಚರ್ಯ ಎಂಬಂತೆ ಗ್ರಾಮೀಣ ಜನತೆಯಲ್ಲಿ ಶೇಕಡ ೧೫ರಷ್ಟು ಮಾತ್ರ ಇದು ತಪ್ಪಲ್ಲ ಎಂಬ ಅಭಿಪ್ರಾಯವನ್ನು ಹೊಂದಿದ್ದಾರೆ. ಆದರೆ ನಗರದಲ್ಲಿ ಈ ಅಭಿಪ್ರಾಯವನ್ನು ಹೊಂದಿದವರ ಪ್ರಮಾಣ ಶೇಕಡ ೭.೪೫ ವರ್ಷದೊಳಗಿನವರಲ್ಲಿ ಶೇಕಡ ೯೦ ಮತ್ತು ಅದಕ್ಕಿಂತ ಮೇಲ್ಪಟ್ಟವರಲ್ಲಿ ಶೇಕಡ ೮೮ ನಾಗರಿಕರು ರಾಜ್ಯದಲ್ಲಿ ಲೋಕಾಯುಕ್ತ ಮತ್ತು ಉಪಲೋಕಾಯುಕ್ತ ಹುದ್ದೆಗಳನ್ನು ಈ ಹಿಂದೆ ಬಹಳ ದಿನಗಳ ಕಾಲ ಖಾಲಿ ಇಟ್ಟಿದ್ದು ತಪ್ಪುಎನ್ನುವುದರಲ್ಲಿ ಸಂಶಯವಿಲ್ಲ ಎಂದು ಹೇಳಿದ್ದಾರೆ. ಇನ್ನು ವಿಭಾಗವಾರು ಮಟ್ಟದಲ್ಲಿ ಗುಲ್ಬರ್ಗದಲ್ಲಿ ಶೇಕಡ ೮೮, ಬೆಳಗಾವಿಯಲ್ಲಿ ಶೇಕಡ ೮೯, ಮೈಸೂರು ಮತ್ತು ಬೆಂಗಳೂರಿನಲ್ಲಿ ಶೇಕಡ ೯೦ ಜನರು ರಾಜ್ಯದಲ್ಲಿ ಲೋಕಾಯುಕ್ತ ಮತ್ತು ಉಪಲೋಕಾಯುಕ್ತ ಹುದ್ದೆಗಳನ್ನು ಈ ಹಿಂದೆ ಬಹಳ ದಿನಗಳ ಕಾಲ ಖಾಲಿ ಇಟ್ಟಿದ್ದು ತಪ್ಪು ಎಂಬ ಅಂಶವನ್ನು ಬಲವಾಗಿ ಪುರಸ್ಕರಿಸಿದ್ದಾರೆ.

೨೫. ಲೋಕಾಯುಕ್ತ ಹಾಗೂ ಉಪಲೋಕಾಯುಕ್ತರ ನೇಮಕವು ರಾಜಕೀಯ ಪ್ರೇರಿತವಾಗಿದೆಯೆ? ಎಂಬ ಪ್ರಶ್ನೆಗೆ ಹೌದು ಎಂದು ಉತ್ತರಿಸಿದವರ ಪ್ರಮಾಣ ಶೇಕಡ ೮೬.೫. ಹಾಗೂ ಇಲ್ಲ ಎಂದು ಉತ್ತರಿಸಿದವರ ಪ್ರಮಾಣ ಶೇಕಡ ೧೩.೫. ಶೇಕಡ ೧೬ರಷ್ಟು ಪುರುಷರು ಈ ಹುದ್ದೆಗಳು ರಾಜಕೀಯ ಪ್ರೇರಿತವಾಗಿಲ್ಲ ಎಂದರೆ, ಶೇಕಡ ೮೯ರಷ್ಟು ಮಹಿಳೆಯರು ಈ ಹುದ್ದೆಗಳು ರಾಜಕೀಯ ಪ್ರೇರಿತವಾಗಿವೆ ಎಂದು ಹೇಳಿದ್ದಾರೆ. ಇನ್ನು ಎಸ್ಎಸ್ಎಲ್ಸಿ ಮೇಲ್ಪಟ್ಟವರಲ್ಲಿ ಈ ಕುರಿತು ಪ್ರಶ್ನಿಸಿದಾಗ ಅವರಲ್ಲಿ ಶೇಕಡ ೧೩ರಷ್ಟು ಜನ ಈ ಹುದ್ದೆಗಳು ರಾಜಕೀಯ ಪ್ರೇರಿತವಾಗಿಲ್ಲ ಎಂದಿದ್ದರೆ, ಅದಕ್ಕಿಂತ ಕಡಿಮೆ ಓದಿದವರಲ್ಲಿ ಶೇಕಡ ೧೨ರಷ್ಟು

ಜನರು ಸಹ ಇದೇ ಅಭಿಪ್ರಾಯವನ್ನು ಹೊಂದಿದ್ದಾರೆ. ಗ್ರಾಮೀಣ ಪ್ರದೇಶದಲ್ಲಿ ಶೇಕಡ ೭೫ರಷ್ಟು ಜನಕ್ಕೆ ಲೋಕಾಯುಕ್ತ ಮತ್ತು ಉಪಲೋಕಾಯುಕ್ತ ಹುದ್ದೆಗಳು ರಾಜಕೀಯ ಪ್ರೇರಿತವಾಗಿವೆ ಎಂಬ ಅಭಿಪ್ರಾಯವಿದ್ದರೆ, ನಗರ ಪ್ರದೇಶದಲ್ಲಿ ಇದೇ ಅಭಿಪ್ರಾಯವಿರುವವರ ಪ್ರಮಾಣ ಶೇಕಡ ೮೨. ಈ ಹುದ್ದೆಗಳು ರಾಜಕೀಯ ಪ್ರೇರಿತವಾಗಿಲ್ಲ ಎಂದು ಸಮರ್ಥಿಸಿಕೊಂಡ ೪೫ ವರ್ಷದೊಳಗಿನವರ ಪ್ರಮಾಣ ಶೇಕಡ ೧೬ರಷ್ಟಾದರೆ, ಈ ಅಭಿಪ್ರಾಯ ತಪ್ಪು. ಈ ಹುದ್ದೆಗಳು ಖಂಡಿತವಾಗಿಯೂ ರಾಜಕೀಯ ಪ್ರೇರಿತವಾಗಿವೆ ಎಂದು ಸಮರ್ಥಿಸಿಕೊಂಡ ೪೫ ವರ್ಷದ ಮೇಲ್ಪಟ್ಟವರ ಪ್ರಮಾಣ ಶೇಕಡ ೮೬.ಇನ್ನು ಗುಲ್ಬರ್ಗದಲ್ಲಿ ಶೇಕಡ ೧೫, ಬೆಳಗಾವಿ ಮತ್ತು ಮೈಸೂರಿನಲ್ಲಿ ಶೇಕಡ ೧೨, ಹಾಗೂ ಬೆಂಗಳೂರಿನಲ್ಲಿ ಶೇಕಡ ೧೩ರಷ್ಟು ಜನ ಮಾತ್ರ ಈ ಹುದ್ದೆಗಳು ರಾಜಕೀಯ ಪ್ರೇರಿತವಾಗಿಲ್ಲ ಎಂಬ ಅಭಿಪ್ರಾಯವನ್ನು ಈ ಸಮೀಕ್ಷೆಯಲ್ಲಿ ತಿಳಿಸಿದ್ದಾರೆ.

೨೬. ರಾಜಕೀಯ ಪಕ್ಷಗಳು ಲೋಕಾಯುಕ್ತ ಸಂಸ್ಥೆಯನ್ನು ಬಲಪಡಿಸುವ ಇಚ್ಛಾಶಕ್ತಿಯನ್ನು ಹೊಂದಿದ್ದಾವೆಯೆ? ಎಂಬ ನಮ್ಮ ಪ್ರಶ್ನೆಗೆ ಇಲ್ಲ ಎಂದು ಉತ್ತರಿಸಿದವರ ಪ್ರಮಾಣ ಶೇಕಡ ೮೫.೫. ಶೇಕಡ ೮೭ರಷ್ಟು ಪುರುಷರು ಮತ್ತು ಶೇಕಡ ೮೫ರಷ್ಟು ಮಹಿಳೆಯರು ಈ ಪ್ರಶ್ನೆಗೆ ಇಲ್ಲ ಎಂದು ಉತ್ತರಿಸಿದ್ದಾರೆ.ಈ ಪ್ರಶ್ನೆಯನ್ನು ಎಸ್‌ಎಸ್‌ಎಲ್‌ಸಿ ಮೇಲ್ಪಟ್ಟವರಲ್ಲಿ ಕೇಳಿದಾಗ ಶೇಕಡ ೧೪ ಮತ್ತು ಅದಕ್ಕಿಂತ ಕಡಿಮೆ ಓದಿದವರಲ್ಲಿ ಶೇಕಡ ೧೫ರಷ್ಟು ಜನ ಮಾತ್ರ ರಾಜಕೀಯ ಪಕ್ಷಗಳು ಲೋಕಾಯುಕ್ತ ಸಂಸ್ಥೆಯನ್ನು ಬಲ ಪಡಿಸುವ ಇಚ್ಛಾಶಕ್ತಿ ಹೊಂದಿರುವುವು ಎಂಬ ಅಭಿಪ್ರಾಯ ವ್ಯಕ್ತ ಪಡಿಸಿದ್ದಾರೆ.ಇನ್ನು ಗ್ರಾಮೀಣರಲ್ಲಿ ಈ ಕುರಿತು ಕೇಳಿದಾಗ ಶೇಕಡ ೮೦ರಷ್ಟು ಜನ ರಾಜಕೀಯ ಪಕ್ಷಗಳು ಲೋಕಾಯುಕ್ತ ಸಂಸ್ಥೆಯನ್ನು ಬಲ ಪಡಿಸುವ ಇಚ್ಛಾಶಕ್ತಿ ಹೊಂದಿಲ್ಲ ಎಂಬ ಭಾವನೆಯನ್ನೇ ಹೊಂದಿದ್ದಾರೆ. ನಗರ ಪ್ರದೇಶದಲ್ಲಿ ಈ ಭಾವನೆಯನ್ನು ಹೊಂದಿದವರ ಪ್ರಮಾಣ ಶೇಕಡ ೮೨. ಶೇಕಡ ೮೩ರಷ್ಟು ೪೫ ವರ್ಷದೊಳಗಿನವರು ಮತ್ತು ೪೫ ವರ್ಷಕ್ಕಿಂತ ಮೇಲ್ಪಟ್ಟವರಲ್ಲಿ ಶೇಕಡ ೮೬ರಷ್ಟು ನಾಗರಿಕರು ರಾಜಕೀಯ ಪಕ್ಷಗಳು ಲೋಕಾಯುಕ್ತ ಸಂಸ್ಥೆಯನ್ನು ಬಲ ಪಡಿಸುವ ಇಚ್ಛಾಶಕ್ತಿ ಹೊಂದಿಲ್ಲ ಎಂಬ ಅಭಿಪ್ರಾಯ ಹೊಂದಿದ್ದಾರೆ. ಗುಲ್ಬರ್ಗದಲ್ಲಿ ಶೇಕಡ ೮೫, ಬೆಳಗಾವಿಯಲ್ಲಿ ಶೇಕಡ ೮೪, ಮೈಸೂರಿನಲ್ಲಿ ಶೇಕಡ ೮೬ ಹಾಗೂ ಬೆಂಗಳೂರಿನಲ್ಲಿ ಶೇಕಡ ೮೭ರಷ್ಟು ನಾಗರಿಕರ ಅಭಿಪ್ರಾಯ ಮತ್ತು ಅನಿಸಿಕೆ ಇದೇ ಆಗಿರುತ್ತದೆ.

೨೭. ಸರ್ಕಾರದ ಉನ್ನತ ಹುದ್ದೆಗಳಲ್ಲಿರುವವರ ವಿರುದ್ಧ ಸ್ವಯಂ ಪ್ರೇರಿತರಾಗಿ ಮೊಕದ್ದಮೆಗಳನ್ನು ದಾಖಲಿಸಿ ತನಿಖೆ ಮಾಡುವ ಅಧಿಕಾರ ಲೋಕಾಯುಕ್ತ ಸಂಸ್ಥೆಗೆ ಕೊಡುವುದು ಉಚಿತವೆ? ಎಂಬ ನಮ್ಮ ಪ್ರಶ್ನೆಗೆ ಹೌದು ಎಂದು ಉತ್ತರಿಸಿದವರ ಪ್ರಮಾಣ ಕೇವಲ ಶೇಕಡ ೮೮. ಅಂತೆಯೇ ಇಲ್ಲ ಎಂದವರ ಪ್ರಮಾಣ ಶೇಕಡ ೧೨. ಶೇಕಡ ೮೪ ಪುರುಷರು ಮಾತ್ರ ಇದು ಉಚಿತ ಎಂದು ತಿಳಿಸಿದರೇ, ಶೇಕಡ ೯೨ರಷ್ಟು ಮಹಿಳೆಯರು ಸಹ ಇದೇ ಅಭಿಪ್ರಾಯ ಹೊಂದಿದ್ದಾರೆ. ಎಸ್‌ಎಸ್‌ಎಲ್‌ಸಿಗಿಂತ ಮೇಲ್ಪಟ್ಟವರಲ್ಲಿ ಶೇಕಡ ೮೮ ಜನಕ್ಕೆ ಸರ್ಕಾರದ ಉನ್ನತ ಹುದ್ದೆಗಳಲ್ಲಿರುವವರ ವಿರುದ್ಧ ಸ್ವಯಂ ಪ್ರೇರಿತರಾಗಿ ಮೊಕದ್ದಮೆಗಳನ್ನು ದಾಖಲಿಸಿ ತನಿಖೆ ಮಾಡುವ ಅಧಿಕಾರ ಲೋಕಾಯುಕ್ತ ಸಂಸ್ಥೆಗೆ ಕೊಡುವುದು ಉಚಿತ ಎಂಬ ಅಭಿಪ್ರಾಯವಿದೆ. ಅದಕ್ಕಿಂತ ಕಡಿಮೆ ಓದಿದವರಲ್ಲಿ ಈ ಪ್ರಮಾಣ ಶೇಕಡ ೯೧ರಷ್ಟು ನಾಗರಿಕರಿಗೆ ಇದೇ ಅಭಿಪ್ರಾಯವಿರುವುದು ಕಂಡು ಬಂದಿದೆ. ಇನ್ನು ಗ್ರಾಮೀಣ ಪ್ರದೇಶದಲ್ಲಿ ಇದು ಉಚಿತವಲ್ಲ ಎಂದು ಹೇಳಿದವರ ಪ್ರಮಾಣ ಕೇವಲ ಶೇಕಡ ೭. ಅಂತೆಯೇ ನಗರ ಪ್ರದೇಶದಲ್ಲಿ ಈ ಪ್ರಮಾಣ ಶೇಕಡ ೧೧.೪೫ ದೊಳಗಿನವರೆಗೆ ಈ ಕುರಿತು ಪ್ರಶ್ನಿಸಿದಾಗ ಅವರಲ್ಲಿ ಶೇಕಡ ೮೮ರಷ್ಟು ಜನ ಸರ್ಕಾರದ ಉನ್ನತ ಹುದ್ದೆಗಳಲ್ಲಿರುವವರ ವಿರುದ್ಧ ಸ್ವಯಂ ಪ್ರೇರಿತರಾಗಿ ಮೊಕದ್ದಮೆಗಳನ್ನು ದಾಖಲಿಸಿ ತನಿಖೆ ಮಾಡುವ ಅಧಿಕಾರ ಲೋಕಾಯುಕ್ತ ಸಂಸ್ಥೆಗೆ ಕೊಡುವುದು ಉಚಿತ ಎಂದು ಉತ್ತರಿಸಿದ್ದಾರೆ. ೪೫ ವರ್ಷಕ್ಕಿತ ಮೇಲ್ಪಟ್ಟವರಲ್ಲಿ ಶೇಕಡ ೯೧ ನಾಗರಿಕರಿಗೆ ಇದೇ ಅಭಿಪ್ರಾಯವಿರುವುದು ತಿಳಿದು ಬಂದಿದೆ. ಇನ್ನು ಗುಲ್ಬರ್ಗದಲ್ಲಿ ಶೇಕಡ ೮೫, ಮೈಸೂರಿನಲ್ಲಿ ಶೇಕಡ ೯೧, ಬೆಳಗಾವಿಯಲ್ಲಿ ಶೇಕಡ ೮೭ ಮತ್ತು ಬೆಂಗಳೂರಿನಲ್ಲಿ ಶೇಕಡ ೮೯ರಷ್ಟು ಜನರಿಗೆ ಸರ್ಕಾರದ ಉನ್ನತ ಹುದ್ದೆಗಳಲ್ಲಿರುವವರ ವಿರುದ್ಧ ಸ್ವಯಂ ಪ್ರೇರಿತರಾಗಿ ಮೊಕದ್ದಮೆಗಳನ್ನು ದಾಖಲಿಸಿ ತನಿಖೆ ಮಾಡುವ ಅಧಿಕಾರ ಲೋಕಾಯುಕ್ತ ಸಂಸ್ಥೆಗೆ ಕೊಡುವುದು ಉಚಿತ ಎಂಬ ಒಮ್ಮತದ ಅಭಿಪ್ರಾಯವಿದೆ ಎಂಬುದು ಸಮೀಕ್ಷೆಯಿಂದ ಬಹಿರಂಗಗೊಂಡಿದೆ.

೨೮. ನಿಮ್ಮ ದೃಷ್ಟಿಯಲ್ಲಿ ದಕ್ಷ ಲೋಕಾಯುಕ್ತ ಯಾರು? ಎಂಬ ನಮ್ಮ ಪ್ರಶ್ನೆಗೆ ನ್ಯಾ. ಸಂತೋಷ ಹೆಗ್ಡೆ ಎಂದು ಉತ್ತರಿಸಿದವರು ಶೇಕಡ ೬೫. ನ್ಯಾ ಎನ್. ವೆಂಕಟಾಚಲ ಎಂದು ಉತ್ತರಿಸಿದವರ ಪ್ರಮಾಣ ಶೇಕಡ ೩೫. ಪುರುಷರಲ್ಲಿ ಶೇಕಡ ೭೦ರಷ್ಟು ನ್ಯಾ. ಸಂತೋಷ ಹೆಗ್ಡೆ ಅವರ ಪರವಾಗಿದ್ದರೆ, ಇದೇ ಅಭಿಪ್ರಾಯದ ಪರವಾಗಿರುವ ಮಹಿಳೆಯರ ಶೇಕಡ ಪ್ರಮಾಣ ಶೇಕಡ ೬೫. ಇನ್ನು ಎಸ್‌ಎಸ್‌ಎಲ್‌ಸಿ ಮೇಲ್ಪಟ್ಟವರಲ್ಲಿ ಶೇಕಡ ೬೪ ಜನ ನ್ಯಾ. ಸಂತೋಷ ಹೆಗ್ಡೆ ಅವರಿಗೆ ಬೆಂಬಲ ಸೂಚಿಸಿದ್ದಾರೆ. ಎಸ್‌ಎಸ್‌ಎಲ್‌ಸಿ ಗಿಂತ ಕಡಿಮೆ ಓದಿದವರಲ್ಲಿ ಇದೇ

ಅಭಿಪ್ರಾಯವನ್ನು ಹೊಂದಿದವರ ಪ್ರಮಾಣ ಶೇಕಡ ೬೮. ಗ್ರಾಮೀಣ ಪ್ರದೇಶದಲ್ಲಿ ಶೇಕಡ ೪೦ರಷ್ಟು ಮತ್ತು ನಗರ ಪ್ರದೇಶದಲ್ಲಿ ಶೇಕಡ ೩೨ರಷ್ಟು ಪ್ರಜೆಗಳು ನ್ಯಾ. ಎನ್ ವೆಂಕಟಾಚಲ ದಕ್ಷ ಲೋಕಾಯುಕ್ತ ಎಂಬ ಅಭಿಪ್ರಾಯವನ್ನು ಹೊಂದಿದ್ದಾರೆ. ೪೫ ವರ್ಷದೊಳಗಿನವರಲ್ಲಿ ಶೇಕಡ ೬೬ರಷ್ಟು ಜನ ನ್ಯಾ. ಸಂತೋಷ ಹೆಗ್ಡೆ ಅವರಿಗೆ ಬೆಂಬಲ ಸೂಚಿಸಿದರೆ, ಅದಕ್ಕಿಂತ ಮೇಲ್ಪಟ್ಟವರಲ್ಲಿ ಶೇಕಡ ೩೬ರಷ್ಟು ಜನ ನಾವು ನ್ಯಾ. ಎನ್. ವೆಂಕಟಾಚಲರವರ ಪರವಾಗಿದ್ದೇವೆ ಎಂದು ತಮ್ಮ ಅಭಿಪ್ರಾಯವನ್ನು ತಿಳಿಸಿದ್ದಾರೆ. ಗುಲ್ಬರ್ಗದಲ್ಲಿ ಶೇಕಡ ೬೨, ಬೆಳಗಾವಿಯಲ್ಲಿ ಶೇಕಡ ೬೪, ಮೈಸೂರಿನಲ್ಲಿ ಶೇಕಡ ೬೬, ಹಾಗೂ ಬೆಂಗಳೂರಿನಲ್ಲಿ ಶೇಕಡ ೬೮ರಷ್ಟು ನಾಗರಿಕರು ನ್ಯಾ. ಸಂತೋಷ ಹೆಗ್ಡೆ ಅವರನ್ನು ದಕ್ಷ ಲೋಕಾಯುಕ್ತರು ಎಂದು ಗೌರವಿಸಿದ್ದಾರೆ.

೨೯. ಲೋಕಾಯುಕ್ತ ಸಂಸ್ಥೆ ಬಂದ ನಂತರ ಸರಕಾರಿ ನೌಕರರಲ್ಲಿ ಭಯ ಉಂಟಾಗಿದೆಯೆ? ಎಂಬ ಪ್ರಶ್ನೆಗೆ ಹೌದು ಎಂದು ಉತ್ತರಿಸಿದವರ ಪ್ರಮಾಣ ಶೇಕಡ ೧೩. ಹಾಗೂ ಇಲ್ಲ ಎಂದು ಉತ್ತರಿಸಿದವರ ಪ್ರಮಾಣ ಶೇಕಡ ೮೭. ಶೇಕಡ ೧೬ರಷ್ಟು ಪುರುಷರು ಭಯ ಉಂಟಾಗಿದೆ ಎಂದರೇ, ಶೇಕಡ ೮೯ರಷ್ಟು ಮಹಿಳೆಯರು ಲೋಕಾಯುಕ್ತ ಸಂಸ್ಥೆ ಬಂದ ನಂತರ ಸರಕಾರಿ ನೌಕರರಲ್ಲಿ ಭಯ ಉಂಟಾಗಿಲ್ಲ ಎಂದು ಹೇಳಿದ್ದಾರೆ. ಇನ್ನು ಎಸ್‌ಎಸ್‌ಎಲ್‌ಸಿ ಮೇಲ್ಪಟ್ಟವರಲ್ಲಿ ಈ ಕುರಿತು ಪ್ರಶ್ನಿಸಿದಾಗ ಅವರಲ್ಲಿ ಶೇಕಡ ೧೩ರಷ್ಟು ಜನ ಮತ್ತು ಅದಕ್ಕಿಂತ ಕಡಿಮೆ ಓದಿದವರಲ್ಲಿ ಶೇಕಡ ೧೨ರಷ್ಟು ಜನರು ಲೋಕಾಯುಕ್ತ ಸಂಸ್ಥೆ ಬಂದ ನಂತರ ಸರಕಾರಿ ನೌಕರರಲ್ಲಿ ಭಯ ಉಂಟಾಗಿದೆ ಎಂಬ ಅಭಿಪ್ರಾಯ ಹೊಂದಿದ್ದಾರೆ. ಗ್ರಾಮೀಣ ಪ್ರದೇಶದಲ್ಲಿ ಶೇಕಡ ೮೫ರಷ್ಟು ಜನಕ್ಕೆ ಭಯ ಉಂಟಾಗಿಲ್ಲ ಎಂಬ ಅಭಿಪ್ರಾಯವಿದ್ದರೆ, ನಗರ ಪ್ರದೇಶದಲ್ಲಿ ಪ್ರಮಾಣ ಶೇಕಡ ೮೨ ಜನರಿಗೆ ಇದೇ ಅಭಿಪ್ರಾಯವಿದೆ. ೪೫ ವರ್ಷದೊಳಗಿನವರ ಶೇಕಡ ೧೬ರಷ್ಟು ನಾಗರಿಕರಿಗೆ ಲೋಕಾಯುಕ್ತ ಸಂಸ್ಥೆ ಬಂದ ನಂತರ ಸರಕಾರಿ ನೌಕರರಲ್ಲಿ ಭಯ ಉಂಟಾಗಿದೆ ಎನ್ನುವ ಅಭಿಪ್ರಾಯವಿದೆ. ಖಂಡಿತವಾಗಿಯೂ ಭಯವಾಗಿಲ್ಲ ಎಂದು ಸಮರ್ಥಿಸಿಕೊಂಡ ೪೫ ವರ್ಷದ ಮೇಲ್ಪಟ್ಟವರ ಪ್ರಮಾಣ ಶೇಕಡ ೮೬.ಇನ್ನು ಗುಲ್ಬರ್ಗದಲ್ಲಿ ಶೇಕಡ ೧೫, ಬೆಳಗಾವಿ ಮತ್ತು ಮೈಸೂರಿನಲ್ಲಿ ಶೇಕಡ ೧೨, ಹಾಗೂ ಬೆಂಗಳೂರಿನಲ್ಲಿ ಶೇಕಡ ೧೩ರಷ್ಟು ಲೋಕಾಯುಕ್ತ ಸಂಸ್ಥೆ ಬಂದ ನಂತರ ಸರಕಾರಿ ನೌಕರರಲ್ಲಿ ಭಯ ಉಂಟಾಗಿದೆ ಎಂಬ ಅಭಿಪ್ರಾಯವನ್ನು ಈ ಸಮೀಕ್ಷೆಯಲ್ಲಿ ತಿಳಿಸಿದ್ದಾರೆ.

೩೦. ಲೋಕಾಯುಕ್ತ ಸಂಸ್ಥೆ ಬಂದ ನಂತರವೂ ಜನ ಸಾಮಾನ್ಯರು ಹೆಚ್ಚಿನ ಲಂಚ ನೀಡುತ್ತಿದ್ದಾರೆಯೇ?ಎಂಬ ನಮ್ಮ ಪ್ರಶ್ನೆಗೆ ಹೌದು ಎಂದು ಉತ್ತರಿಸಿದವರ ಪ್ರಮಾಣ ಶೇಕಡ

೮೮. ಅಂತೇಯೇ ಇಲ್ಲ ಎಂದವರ ಪ್ರಮಾಣ ಶೇಕಡ ೧೨. ಶೇಕಡ ೮೪ ಪುರುಷರು ಲೋಕಾಯುಕ್ತ ಸಂಸ್ಥೆ ಬಂದ ನಂತರವೂ ಜನ ಸಾಮಾನ್ಯರು ಹೆಚ್ಚಿನ ಲಂಚ ನೀಡುತ್ತಿದ್ದಾರೆ ಎಂದು ತಿಳಿಸಿದರೆ, ಶೇಕಡ ೯೨ರಷ್ಟು ಮಹಿಳೆಯರು ಸಹ ಇದೇ ಅಭಿಪ್ರಾಯ ಹೊಂದಿದ್ದಾರೆ. ಎಸ್‌ಎಸ್‌ಎಲ್‌ಸಿಗಿಂತ ಮೇಲ್ಪಟ್ಟವರಲ್ಲಿ ಶೇಕಡ ೮೮ ಜನಕ್ಕೆ ಲೋಕಾಯುಕ್ತ ಸಂಸ್ಥೆ ಬಂದ ನಂತರವೂ ಜನ ಸಾಮಾನ್ಯರು ಹೆಚ್ಚಿನ ಲಂಚ ನೀಡುತ್ತಿದ್ದಾರೆ ಎಂಬ ಅಭಿಪ್ರಾಯವಿದೆ. ಅದಕ್ಕಿಂತ ಕಡಿಮೆ ಓದಿದವರಲ್ಲಿ ಶೇಕಡ ೯೧ರಷ್ಟು ನಾಗರಿಕರಿಗೆ ಇದೇ ಅಭಿಪ್ರಾಯವಿರುವುದು ಕಂಡು ಬಂದಿದೆ.ಇನ್ನು ಗ್ರಾಮೀಣ ಪ್ರದೇಶದಲ್ಲಿ ಲೋಕಾಯುಕ್ತ ಸಂಸ್ಥೆ ಬಂದ ನಂತರವೂ ಜನ ಸಾಮಾನ್ಯರು ಹೆಚ್ಚಿನ ಲಂಚ ನೀಡುತ್ತಿಲ್ಲ ಎಂದು ಹೇಳಿದವರ ಪ್ರಮಾಣ ಕೇವಲ ಶೇಕಡ ೭. ಅಂತೆಯೇ ನಗರ ಪ್ರದೇಶದಲ್ಲಿ ಈ ಪ್ರಮಾಣ ಶೇಕಡ ೧೧. ೪೫ ದೊಳಗಿನವರೆಗೆ ಈ ಕುರಿತು ಕೇಳಿದಾಗ ಅವರಲ್ಲಿ ಶೇಕಡ ೮೮ರಷ್ಟು ಜನ ಲೋಕಾಯುಕ್ತ ಸಂಸ್ಥೆ ಬಂದ ನಂತರ ಜನ ಸಾಮಾನ್ಯರು ಹೆಚ್ಚಿನ ಲಂಚ ನೀಡುತ್ತಿದ್ದಾರೆ ಎಂದು ಉತ್ತರಿಸಿದ್ದಾರೆ. ೪೫ ವರ್ಷಕ್ಕಿತ ಮೇಲ್ಪಟ್ಟವರಲ್ಲಿ ಶೇಕಡ ೯೧ ನಾಗರಿಕರಿಗೆ ಇದೇ ಅಭಿಪ್ರಾಯವಿದೆ. ಇನ್ನು ಗುಲ್ಬರ್ಗದಲ್ಲಿ ಶೇಕಡ ೮೫, ಮೈಸೂರಿನಲ್ಲಿ ಶೇಕಡ ೯೧, ಬೆಳಗಾವಿಯಲ್ಲಿ ಶೇಕಡ ೮೭ ಮತ್ತು ಬೆಂಗಳೂರಿನಲ್ಲಿ ಶೇಕಡ ೮೯ರಷ್ಟು ಜನರಿಗೆ ಲೋಕಾಯುಕ್ತ ಸಂಸ್ಥೆ ಬಂದ ನಂತರವೂ ಜನ ಸಾಮಾನ್ಯರು ಹೆಚ್ಚಿನ ಲಂಚ ನೀಡುತ್ತಿದ್ದಾರೆ ಎಂಬ ಒಮ್ಮತದ ಅಭಿಪ್ರಾಯವಿದೆ ಎಂಬುದು ಸಮೀಕ್ಷೆಯಿಂದ ತಿಳಿದು ಬಂದಿದೆ.

೩೧. ಲೋಕಾಯುಕ್ತ ದಾಳಿಗಳು ನಡೆಯುತ್ತಿದ್ದಾಗ್ಯೂ ಸಹ ಹೆದರಿಕೆಯಿಲ್ಲದೇ ಲಂಚ ಸ್ವೀಕರಿಸುತ್ತಿರುವ ಪ್ರಕರಣಗಳು ಕಂಡು ಬರುತ್ತಿಲ್ಲವೆ? ಎಂಬ ನಮ್ಮ ಪ್ರಶ್ನೆಗೆ ಹೌದು ಎಂದು ಉತ್ತರಿಸಿದವರ ಪ್ರಮಾಣ ಶೇಕಡ ೮೫.೫. ಇಲ್ಲ ಎಂದು ಉತ್ತರಿಸಿದವರ ಪ್ರಮಾಣ ಶೇಕಡ ೧೪.೫.ಶೇಕಡ ೮೭ರಷ್ಟು ಪುರುಷರು ಮತ್ತು ಶೇಕಡ ೮೫ರಷ್ಟು ಮಹಿಳೆಯರು ಈ ಪ್ರಶ್ನೆಗೆ ಹೌದು ಎಂದು ಉತ್ತರಿಸಿದ್ದಾರೆ.ಈ ಪ್ರಶ್ನೆಯನ್ನು ಎಸ್‌ಎಸ್‌ಎಲ್‌ಸಿ ಮೇಲ್ಪಟ್ಟವರಲ್ಲಿ ಕೇಳಿದಾಗ ಶೇಕಡ ೧೪ ಮತ್ತು ಅದಕ್ಕಿಂತ ಕಡಿಮೆ ಓದಿದವರಲ್ಲಿ ಶೇಕಡ ೧೫ರಷ್ಟು ಜನ ಮಾತ್ರ ಇಲ್ಲ ಎಂಬ ಅಭಿಪ್ರಾಯ ವ್ಯಕ್ತ ಪಡಿಸಿದ್ದಾರೆ.ಇನ್ನು ಗ್ರಾಮೀಣರಲ್ಲಿ ಈ ಕುರಿತು ಕೇಳಿದಾಗ ಶೇಕಡ ೮೦ರಷ್ಟು ಜನ ಲೋಕಾಯುಕ್ತ ದಾಳಿಗಳು ನಡೆಯುತ್ತಿದ್ದಾಗ್ಯೂ ಸಹ ಹೆದರಿಕೆಯಿಲ್ಲದೇ ಲಂಚ ಸ್ವೀಕರಿಸುತ್ತಿರುವ ಪ್ರಕರಣಗಳು ಕಂಡು ಬರುತ್ತಿವೆ ಎಂಬ ಭಾವನೆಯನ್ನೇ ಹೊಂದಿದ್ದಾರೆ.ನಗರ ಪ್ರದೇಶದಲ್ಲಿ ಈ ಭಾವನೆಯನ್ನು ಹೊಂದಿದವರ ಪ್ರಮಾಣ ಶೇಕಡ ೮೨. ಶೇಕಡ ೮೩ರಷ್ಟು

೪೫ ವರ್ಷದೊಳಗಿನವರು ಮತ್ತು ೪೫ ವರ್ಷಕ್ಕಿಂತ ಮೇಲ್ಪಟ್ಟವರಲ್ಲಿ ಶೇಕಡ ೮೬ರಷ್ಟು ನಾಗರಿಕರು ಲೋಕಾಯುಕ್ತ ದಾಳಿಗಳು ನಡೆಯುತ್ತಿದ್ದಾಗ್ಯೂ ಸಹ ಹೆದರಿಕೆಯಿಲ್ಲದೆ ಲಂಚ ಸ್ವೀಕರಿಸುತ್ತಿರುವ ಪ್ರಕರಣಗಳು ಕಂಡು ಬರುತ್ತಿವೆ ಎಂದು ಒಪ್ಪಿಕೊಂಡಿದ್ದಾರೆ. ಗುಲ್ಬರ್ಗದಲ್ಲಿ ಶೇಕಡ ೮೫, ಬೆಳಗಾವಿಯಲ್ಲಿ ಶೇಕಡ ೮೪, ಮೈಸೂರಿನಲ್ಲಿ ಶೇಕಡ ೮೬ ಹಾಗೂ ಬೆಂಗಳೂರಿನಲ್ಲಿ ಶೇಕಡ ೮೭ರಷ್ಟು ನಾಗರಿಕರ ಅಭಿಪ್ರಾಯ ಮತ್ತು ಅನಿಸಿಕೆ ಇದೆ.

೩೨. ಹಣದ ಹೊರತಾಗಿ ಭ್ರಷ್ಟಾಚಾರಿಗಳು ಸಾರ್ವಜನಿಕರಿಂದ ಮತ್ತೇನನ್ನು ಬಯಸುವರು ಎಂಬ ಪ್ರಶ್ನೆಗೆ ಶೇಕಡ ೩೫ರಷ್ಟು ಜನ ಪಾರ್ಟಿ ಎಂದರೆ, ಶೇಕಡ ೨೬.೭೫ರಷ್ಟು ಜನರು ಪ್ರವಾಸ ಎಂದಿದ್ದಾರೆ. ಶೇಕಡ ೧೪.೭೫ರಷ್ಟು ಜನ ಗಿಫ್ಟ್ ಕೇಳುತ್ತಾರೆ ಎಂದು ಹೇಳಿದರೆ, ಉಳಿದ ಜನ ಇತರೆ ಬಯಸುತ್ತಾರೆ ಎಂದು ಹೇಳಿದ್ದಾರೆ.. ಪುರುಷರಲ್ಲಿ ಶೇಕಡ ೪೩ ಜನರು ಪಾರ್ಟಿಎಂದು ಹೇಳಿದರೆ, ಅವರಲ್ಲಿ ಶೇಕಡ ೧೮ ಪ್ರವಾಸ, ಶೇಕಡ ೧೪ ಗಿಫ್ಟ್, ಉಳಿದ ಪುರುಷರು ಇತರೆ ಅಮಿಷ ಎಂದಿದ್ದಾರೆ. ಇನ್ನು ಮಹಿಳೆಯರಲ್ಲಿ ಶೇಕಡ ೪೩ ಜನ ಪಾರ್ಟಿ, ಶೇಕಡ ೮ ಪ್ರವಾಸ, ಶೇಕಡ ೨೬ ಜನ ಗಿಫ್ಟ್, ಉಳಿದ ಮಹಿಳೆಯರು ಇತರೆ ಅಮಿಷಗಳು ಎಂದು ಹೇಳಿದ್ದಾರೆ. ಎಸ್‌ಎಸ್‌ಎಲ್‌ಸಿ ಮೇಲ್ಪಟ್ಟವರಲ್ಲಿ ಶೇಕಡ ೩೭ ಜನ ಪಾರ್ಟಿ ಎಂದರೆ, ಶೇಕಡ ೨೮ರಷ್ಟು ಜನ ಪ್ರವಾಸ ಎಂದಿದ್ದಾರೆ, ಉಳಿದವರು ಜನ ಇತರೆ ಅಮಿಷಗಳು ಎಂದು ಹೇಳಿದ್ದಾರೆ. ಎಸ್‌ಎಸ್‌ಎಲ್‌ಸಿಗಿಂತ ಕಡಿಮೆ ಓದಿದವರಲ್ಲಿ ಶೇಕಡ ೪೫ರಷ್ಟು ಜನ ಪಾರ್ಟಿ ಎಂದರೆ, ಶೇಕಡ ೨೩ ಜನ ಪ್ರವಾಸ ಎಂದಿದ್ದಾರೆ. ಶೇಕಡ ೧೭ರಷ್ಟು ಗಿಫ್ಟ್ ಎಂದು ಹೇಳಿದ್ದಾರೆ. ಅಂತೆಯೇ ಉಳಿದ ಜನ ಇತರೆ ಅಮಿಷಗಳು ಬಯಸುತ್ತಾರೆ ಎಂದು ಹೇಳಿದ್ದಾರೆ. ಇನ್ನು ಗ್ರಾಮೀಣ ಪ್ರದೇಶಕ್ಕೆ ಬಂದಾಗ ಶೇಕಡ ೪೭ರಷ್ಟು ಗ್ರಾಮೀಣ ಜನತೆ ಇತರೆ ಅಮಿಷಗಳನ್ನು ಕೇಳುತ್ತಾರೆ ಎಂದು ಹೇಳಿದರೆ, ಪಾರ್ಟಿ ಎಂದು ಹೇಳಿಕೆ ಕೊಟ್ಟ ಗ್ರಾಮೀಣರು ಶೇಕಡ ೨೨. ಉಳಿದವರು ಗಿಫ್ಟ್ ಬಯಸುತ್ತಾರೆ ಎಂದು ಗ್ರಾಮೀಣರು ಹೇಳುತ್ತಾರೆ. ಇನ್ನು ನಗರ ಪ್ರದೇಶದಲ್ಲಿ ಶೇಕಡ ೩೯ರಷ್ಟು ಜನ ಪಾರ್ಟಿ ಎಂದರೆ, ಪ್ರವಾಸ ಎಂದವರ ಪ್ರಮಾಣ ಶೇಕಡ ೨೬. ಶೇಕಡ ೧೬ ಜನ ಗಿಫ್ಟ್ ಬಯಸುತ್ತಾರೆ ಎಂದು ಹೇಳಿದರೆ, ಉಳಿದವರು ಇತರೆ ಅಮಿಷಗಳು ಬಯಸುತ್ತಾರೆ ಎಂದು ಈ ಸಮೀಕ್ಷೆಯಲ್ಲಿ ತಿಳಿಸಿದ್ದಾರೆ. ೪೫ ವರ್ಷದೊಳಗಿನವರಲ್ಲಿ ಶೇಕಡ ೪೨ರಷ್ಟು ಪಾರ್ಟಿಗೆ.ಶೇಕಡ ೨೨ರಷ್ಟು ಜನ ಪ್ರವಾಸಕ್ಕೆ, ಶೇಕಡ ೧೫ರಷ್ಟು ಜನ ಗಿಫ್ಟ್ ಎಂದು. ಉಳಿದವರು ಇತರೆ ಅಮಿಷಗಳನ್ನು ಕೇಳುತ್ತಾರೆ ಎಂದು ಹೇಳಿದ್ದಾರೆ. ಇನ್ನು ೪೫ ವರ್ಷ ಮೇಲ್ಪಟ್ಟವರಲ್ಲಿ

ಪಾರ್ಟಿ, ಪ್ರವಾಸ, ಗಿಫ್ಟ್, ಮತ್ತು ಇತರೆ ಅಮಿಷಗಳನ್ನು ಕ್ರಮವಾಗಿ ಶೇಕಡ ೩೯, ಶೇಕಡ ೧೮, ಶೇಕಡ ೧೪, ಶೇಕಡ ೨೯ರಷ್ಟು ಬಯಸುತ್ತಾರೆ ಎಂದು ಒಪ್ಪಿಕೊಂಡಿದ್ದಾರೆ. ಇನ್ನು ಬೆಳಗಾವಿ ವಿಭಾಗದಲ್ಲಿ ಶೇಕಡ ೩೬ ಜನ ಪಾರ್ಟಿಗೆ ಶೇಕಡ ೨೬ರಷ್ಟು ಜನ ಪ್ರವಾಸಕ್ಕೆ, ಶೇಕಡ ೨೩ರಷ್ಟು ಜನ ಇತರೆ ಅಮಿಷಗಳಿಗೆ ಶೇಕಡ ೧೨ ಜನ ಗಿಫ್ಟ್ ಬಯಸುತ್ತಾರೆ. ಇನ್ನು ಗುಲ್ಬರ್ಗ ವಿಭಾಗದಲ್ಲಿಯೂ ಸಹ ಶೇಕಡ ೩೭ರಷ್ಟು ಜನ ಪಾರ್ಟಿಗೆ ಸೈ ಎಂದರೆ, ಶೇಕಡ ೨೭ ಜನ ಪ್ರವಾಸ ಎಂದಿದ್ದಾರೆ. ಶೇಕಡ ೧೬ರಷ್ಟು ಜನ ಗಿಫ್ಟ್ ಬಯಸುತ್ತಾರೆ ಎಂದು ಹೇಳಿದರೆ, ಶೇಕಡ ೨೨ರಷ್ಟು ಇತರೆ ಅಮಿಷಗಳನ್ನು ಕೇಳುತ್ತಾರೆ ಎಂದು ಅಭಿಪ್ರಾಯ ಪಟ್ಟಿದ್ದಾರೆ. ಮೈಸೂರು ವಿಭಾಗದಲ್ಲಿ ಶೇಕಡ ೩೪ ಜನ ಪಾರ್ಟಿ ಎಂದು ಹೇಳಿದರೆ, ಶೇಕಡ ೨೭ರಷ್ಟು ಜನ ಪ್ರವಾಸ ಎಂದು ಹೇಳುತ್ತಾರೆ. ಶೇಕಡ ೧೪ರಷ್ಟು ಜನ ಗಿಫ್ಟ್ ಎಂದರೆ, ಇತರೆ ಅಮಿಷಗಳು ಎಂದು ಹೇಳಿದವರು ಶೇಕಡ ೨೪ರಷ್ಟು ಜನತೆ. ಬೆಂಗಳೂರು ವಿಭಾಗದಲ್ಲಿ ಶೇಕಡ ೩೩ರಷ್ಟು ಜನ ಪಾರ್ಟಿ, ಶೇಕಡ ೨೭ರಷ್ಟು ಜನ ಪ್ರವಾಸ ಬಯಸುತ್ತಾರೆ ಎಂದು ಹೇಳುತ್ತಾರೆ. ಹಾಗೇಯೇ ಗಿಫ್ಟ್ ಮತ್ತು ಇತರೆ ಅಮಿಷಗಳನ್ನು ಕೇಳಿದವರ ಪ್ರಮಾಣಕ್ರಮವಾಗಿ ಶೇಕಡ ೧೭ ಮತ್ತು ಶೇಕಡ ೨೫. ಆಗಿರುತ್ತದೆ.


೩೨. ಲಂಚ ನೀಡದಂತೆ ಜನರನ್ನು ಜಾಗೃತಗೊಳಿಸಲು ಈ ಕೆಳಕಂಡ ಯಾವ ಕ್ರಮ ಅನುಸರಿಸಬೇಕು? ಎಂಬ ಪ್ರಶ್ನೆ ಕೇಳಿದಾಗ ಶೇಕಡ ೧೨ರಷ್ಟು ಜನ ಸಾರ್ವಜನಿಕ ಸ್ಥಳದಲ್ಲಿ ಜಾಹೀರಾತು ಫಲಕ ಹಾಕುವುದು ಸರಿ ಎಂದರೆ, ಶೇಕಡ ೪೪.೨೫ರಷ್ಟು ಜನ ಕರಪತ್ರ ಹಂಚುವುದೇ ಉತ್ತಮ ಎಂದಿದ್ದಾರೆ. ಶೇಕಡ ೪೩.೭೫ರಷ್ಟು ಜನ ಲಂಚ ನೀಡದಂತೆ ಜನರನ್ನು ಜಾಗೃತಗೊಳಿಸಲು ಪತ್ರ್ಯ ಆಳವಡಿಕೆ ಮತ್ತು ಟಿ.ವಿ ಮಾಧ್ಯಮದ ಮೂಲಕ ಜಾಹಿರಾತು ನೀಡುವುದೇ ಉತ್ತಮ ಮಾರ್ಗ ಎಂದು ಹೇಳಿದ್ದಾರೆ. ಇನ್ನು ಪುರುಷರ ವಿಷಯದಲ್ಲಿ ಶೇಕಡ ೧೮ರಷ್ಟು ಪುರುಷರು ಸಾರ್ವಜನಿಕ ಸ್ಥಳದಲ್ಲಿ ಜಾಹಿರಾತು ಫಲಕ ಹಾಕುವುದಕ್ಕೆ ಸಹಿ ಎಂದರೆ, ಶೇಕಡ ೪೩ರಷ್ಟು ಪುರುಷರು ಕರಪತ್ರ ಹಂಚುವುದಕ್ಕೆ ಒಪ್ಪಿಗೆ ನೀಡಿದ್ದಾರೆ. ಶೇಕಡ ೩೯ರಷ್ಟು ಪುರುಷರು ಪತ್ರ್ಯ ಅಳವಡಿಕೆ ಮತ್ತು ಟಿ.ವಿ ಮಾಧ್ಯಮದ ಜಾಹಿರಾತಿಗೆ ಮನ ಸೋತಿದ್ದಾರೆ. ಮಹಿಳೆಯರನ್ನು ಈ ಕುರಿತು ಪ್ರಶ್ನಿಸಿದಾಗ ದೊರೆತ ಮಾಹಿತಿ ಈ ರೀತಿಯಾಗಿದೆ. ಶೇಕಡ ೧೫ರಷ್ಟು ಮಹಿಳೆಯರು ಸಾರ್ವಜನಿಕ ಸ್ಥಳದಲ್ಲಿ ಜಾಹಿರಾತು ಫಲಕ ಹಾಕುವುದಕ್ಕೆ, ಶೇಕಡ ೩೯ರಷ್ಟು ಹೆಣ್ಣು ಮಕ್ಕಳು ಕರಪತ್ರ ಹಂಚುವುದಕ್ಕೆ. ಶೇಕಡ ೪೬ರಷ್ಟು ಮಹಿಳೆಯರು ಪತ್ರ್ಯ ಅಳವಡಿಕೆ ಮತ್ತು ಟಿ.ವಿ ಮಾಧ್ಯಮದ ಜಾಹಿರಾತಿಗೆ

ಮಹತ್ವ ನೀಡಿದ್ದಾರೆ. ಇನ್ನು ಎಸ್‌ಎಸ್‌ಎಲ್‌ಸಿ ಮೇಲ್ಪಟ್ಟವರಲ್ಲಿ ಶೇಕಡ ೧೪ರಷ್ಟು ಜನ ಸಾರ್ವಜನಿಕ ಸ್ಥಳದಲ್ಲಿ ಜಾಹೀರಾತು ಫಲಕ ಹಾಕುವುದು, ಶೇಕಡ ೪೧ರಷ್ಟು ಜನ ಕರಪತ್ರ ಹಂಚುವುದು ಮತ್ತು ಶೇಕಡ ೪೫ರಷ್ಟು ಜನ ಪತ್ರ್ಯ ಅಳವಡಿಕೆ ಮತ್ತು ಟಿ.ವಿ ಮಾಧ್ಯಮಬ ಜಾಹೀರಾತುಗಳ ಪರವಾಗಿ ಇದ್ದಾರೆ. ಇನ್ನು ಅದಕ್ಕಿಂತ ಕಡಿಮೆ ಓದಿದವರಲ್ಲಿ ಇದರ ಪ್ರಮಾಣ ಈ ರೀತಿಯಾಗಿದೆ. ಅವರಲ್ಲಿ ಶೇಕಡ ೧೧ರಷ್ಟು ಜನ ಸಾರ್ವಜನಿಕ ಸ್ಥಳದಲ್ಲಿ ಜಾಹೀರಾತು ಫಲಕ ಹಾಕುವುದು ಸರಿ ಎಂದರೆ, ಶೇಕಡ ೪೦ರಷ್ಟು ಜನ ಕರಪತ್ರ ಹಂಚುವುದೇ ಉತ್ತಮ ಎಂದಿದ್ದಾರೆ. ಶೇಕಡ ೪೯ರಷ್ಟು ಜನ ಲಂಚ ನೀಡದಂತೆ ಜನರನ್ನು ಜಾಗೃತಗೊಳಿಸಲು ಪತ್ರ್ಯ ಆಳವಡಿಕೆ ಮತ್ತು ಟಿ.ವಿ ಮಾಧ್ಯಮದ ಮೂಲಕ ಜಾಹಿರಾತು ನೀಡುವುದೇ ಉತ್ತಮ ಮಾರ್ಗ ಎಂದು ಹೇಳಿದ್ದಾರೆ. ಇನ್ನು ಗ್ರಾಮೀಣ ಪ್ರದೇಶದಲ್ಲಿ ಶೇಕಡ ೧೨ರಷ್ಟು ಜನ ಸಾರ್ವಜನಿಕ ಸ್ಥಳದಲ್ಲಿ ಜಾಹೀರಾತು ಫಲಕ ಹಾಕುವುದು ಒಳ್ಳೆಯದು ಎಂದರೆ, ಶೇಕಡ ೩೦ರಷ್ಟು ಜನ ಕರಪತ್ರ ಹಂಚುವುದು ಉತ್ತಮ ಎಂದಿದ್ದಾರೆ. ಶೇಕಡ ೫೮ರಷ್ಟು ಜನ ಟಿ.ವಿ ಮಾಧ್ಯಮದ ಜಾಹಿರಾತು ಮತ್ತು ಪತ್ರ್ಯ ಅಳವಡಿಕೆಗೆ ಸೈ ಎಂದಿದ್ದಾರೆ. ನಗರ ಪ್ರದೇಶದಲ್ಲಿ ಈ ಪ್ರಮಾಣ ಈ ರೀತಿಯಾಗಿದೆ. ಶೇಕಡ ೧೬ರಷ್ಟು ಸಾರ್ವಜನಿಕ ಸ್ಥಳದಲ್ಲಿ ಜಾಹಿರಾತು ಫಲಕ ಹಾಕುವುದು, ಶೇಕಡ ೪೧ರಷ್ಟು ಜನ ಕರಪತ್ರ ಹಂಚುವುದು, ಶೇಕಡ ೪೩ರಷ್ಟು ಜನ ಪತ್ರ್ಯ ಅಳವಡಿಕೆ ಮತ್ತು ಟಿ.ವಿ ಜಾಹಿರಾತು ಪರವಾಗಿದ್ದಾರೆ ಎಂದು ಸಮೀಕ್ಷೆಯ ಫಲಿತಾಂಶ ಹೇಳುತ್ತದೆ. ಇನ್ನು ೪೫ ರೊಳಗೆ ಶೇಕಡ ೧೬ರಷ್ಟು ಜನ ಸಾರ್ವಜನಿಕ ಸ್ಥಳದಲ್ಲಿ ಜಾಹೀರಾತು ಫಲಕ ಹಾಕವುದು, ಶೇಕಡ ೪೪ರಷ್ಟು ಜನ ಕರಪತ್ರ ಹಂಚುವುದು ಸರಿ ಎಂದರೆ ಶೇಕಡ ೪೦ರಷ್ಟು ಜನ ಪತ್ರ್ಯ ಅಳವಡಿಕೆ ಮತ್ತು ಟಿ.ವಿ ಜಾಹಿರಾತಿಗೆ ಒಪ್ಪಿಗೆ ನೀಡಿದ್ದಾರೆ. ೪೫ಕ್ಕಿಂತ ಮೇಲ್ಪಟ್ಟವರಲ್ಲಿ ಶೇಕಡ ೧೪ರಷ್ಟು ನಾಗರಿಕರು ಸಾರ್ವಜನಿಕ ಸ್ಥಳದಲ್ಲಿ ಜಾಹೀರಾತು ಫಲಕ ಹಾಕುವುದಕ್ಕೆ ಸಹಿ ಎಂದರೆ, ಶೇಕಡ ೪೪ರಷ್ಟು ಜನರು ಕರಪತ್ರ ಹಂಚುವುದಕ್ಕೆ ಒಪ್ಪಿಗೆ ನೀಡಿದ್ದಾರೆ. ಶೇಕಡ ೪೨ ರಷ್ಟು ಜನರು ಪತ್ರ್ಯ ಅಳವಡಿಕೆ ಮತ್ತು ಟಿ.ವಿ ಜಾಹಿರಾತಿಗೆ ಮನಸೋತಿದ್ದಾರೆ. ಇನ್ನು ವಿಭಾಗವಾರು ಮಟ್ಟದಲ್ಲಿ ಈ ಕುರಿತು ಸಮೀಕ್ಷೆ ನಡೆಸಿದಾಗ ಗುಲ್ಬರ್ಗ ವಿಭಾಗದಲ್ಲಿ ಶೇಕಡ ೧೨ರಷ್ಟು ಜನತೆ ಸಾರ್ವಜನಿಕ ಸ್ಥಳದಲ್ಲಿ ಜಾಹಿರಾತು ಫಲಕ ಹಾಕುವುದು, ಶೇಕಡ ೪೩ರಷ್ಟು ಜನತೆ ಕರಪತ್ರ ಹಂಚುವುದು ಸರಿ ಎಂದರೆ, ಶೇಕಡ ೪೫ರಷ್ಟು ಜನ ಪತ್ರ್ಯ ಅಳವಡಿಕೆ ಮತ್ತು ಟಿ.ವಿ ಜಾಹಿರಾತು ಸರಿ ಎಂದು ಹೇಳಿದ್ದಾರೆ. ಇನ್ನು ಬೆಳಗಾವಿ ವಿಭಾಗದಲ್ಲಿ ಶೇಕಡ ೧೧ರಷ್ಟು ಜನ ಸಾರ್ವಜನಿಕ ಸ್ಥಳದಲ್ಲಿ ಜಾಹಿರಾತು

ಫಲಕ ಹಾಕುವುದಕ್ಕೆ, ಶೇಕಡ ೪೫ ರಷ್ಟು ಜನ ಕರಪತ್ರ ಹಂಚುವುದಕ್ಕೆ, ಶೇ.೪೪ರಷ್ಟು ಜನ ಪತ್ರ್ಯ ಅಳವಡಿಕೆ ಮತ್ತು ಟಿ.ವಿ ಜಾಹಿರಾತಿಗೆ ಮಹತ್ವ ನೀಡಿದ್ದಾರೆ. ಇನ್ನು ಮೈಸೂರು ವಿಭಾಗದಲ್ಲಿ ಶೇಕಡ ೧೨ರಷ್ಟು ಜನ ಸಾರ್ವಜನಿಕ ಸ್ಥಳದಲ್ಲಿ ಜಾಹಿರಾತಿಗೆ ಸೈ ಎಂದರೆ, ಶೇಕಡ ೪೪ರಷ್ಟು ಜನ ಕರಪತ್ರ ಹಂಚುವುದಕ್ಕೆ ಮತ್ತು ಶೇಕಡ ೪೪ರಷ್ಟು ಜನ ಪತ್ರ್ಯ ಅಳವಡಿಕೆ, ಟಿ.ವಿ ಜಾಹಿರಾತಿಗೆ ಸಮ ಪ್ರಮಾಣದಲ್ಲಿ ಸೈ ಎಂದಿದ್ದಾರೆ. ಇನ್ನು ಕೊನೆಯದಾಗಿ ಬೆಂಗಳೂರು ವಿಭಾಗದಲ್ಲಿ ಶೇಕಡ ೪೫ರಷ್ಟು ಕರಪತ್ರ ಹಂಚುವುದರ ಪರವಾಗಿ ಇದ್ದರೆ, ಶೇಕಡ ೪೨ರಷ್ಟು ಜನ ಪತ್ರ್ಯ ಅಳವಡಿಕೆ ಮತ್ತು ಟಿ.ವಿ ಜಾಹಿರಾತೀನ ಪರವಾಗಿದ್ದಾರೆ ಎಂದು ಸಮೀಕ್ಷೆಯಲ್ಲಿ ತಿಳಿದು ಬಂದಿದೆ.

೫.೩. ಆರೋಪಿತರ ನೆಲೆಯಲ್ಲಿ ಸಾಮಾಜಿಕ ಪರಿಣಾಮಗಳು


ರಾಜ್ಯದ ವಿವಿಧ ಭಾಗಗಳಲ್ಲಿ ಸೇವೆಸಲ್ಲಿಸುತ್ತಿದ್ದಾಗ ಲೋಕಾಯುಕ್ತರಿಂದ ಲಂಚದ ಆರೋಪ ಹೊತ್ತ ಐವತ್ತು ಜನರನ್ನು ಪ್ರಶ್ನಾವಳಿಯ ಮೂಲಕ ಇಲ್ಲಿ ಸಂದರ್ಶಿಸಲಾಯಿತು. ಈ ಐವತ್ತು ಜನರಲ್ಲಿ ಕೇವಲ ನಾಲ್ಕು ಮಹಿಳೆಯರಿದ್ದರು ಎಂಬುದು ಗಮನಾರ್ಹ. ತಾಲ್ಲೂಕು ಕಚೇರಿ ಹಾಗೂ ಅದಕ್ಕಿಂತ ಕಡಿಮೆ ದರ್ಜೆಯ ಕಚೇರಿಗಳಲ್ಲಿ ಕೆಲಸ ಮಾಡುವ ಶೇಕಡ ೬೭ ಜನರು ಇಂತಹ ಆರೋಪಕ್ಕೆ ಗುರಿಯಾಗಿದ್ದರು. ಸಾಮಾನ್ಯವಾಗಿ ನೌಕರಿಗೆ ಸೇರಿದ ೨ ವರ್ಷಗಳ ನಂತರ ಶೇಕಡ ೫೯ ಜನ ಭ್ರಷ್ಟಾಚಾರದಲ್ಲಿ ತೊಡಗಿರುವುದನ್ನು ಇಲ್ಲಿ ಗಮನಿಸಲಾಗಿದೆ.



ಶೇಕಡ ೫೩ರಷ್ಟು ಜನ ಸಿ ದರ್ಜೆಯ ನೌಕರರು ಹಾಗೂ ಶೇಕಡ ೩೯ರಷ್ಟು ಜನ ಬಿ ದರ್ಜೆಯ ನೌಕರರು ಹಾಗೂ ಶೇಕಡ ೮ರಷ್ಟು ಜನ ಎ ದರ್ಜೆಗೆ ಸೇರಿದ ನೌಕರರು ಭ್ರಷ್ಟಾಚಾರದಲ್ಲಿ ನಿರತರಾಗಿದ್ದಾರೆ.




ಶೇಕಡ ೪೨ರಷ್ಟು ಜನ ಗುಲಬರ್ಗಾ ವಿಭಾಗದಲ್ಲಿ ಲಂಚ ಪಡೆದರೆ, ನಂತರದ ಸ್ಥಾನದಲ್ಲಿ ಅದಾದ ನಂತರ ಬೆಳಗಾವಿ, ಬೆಂಗಳೂರು ಹಾಗೂ ಮೈಸೂರು ವಿಭಾಗದಲ್ಲಿ ಕ್ರಮವಾಗಿ ಲಂಚಕೋರರಿದ್ದಾರೆ. ಶೇಕಡ ೮೯ರಷ್ಟು ಜನ ತಾವು ಲಂಚ ಪಡೆದಿಲ್ಲ. ತಮ್ಮನ್ನು ಬಲಿ ಪಶುವನ್ನಾಗಿಸಿದ್ದಾರೆ ಎಂದು ಹೇಳಿದರೆ ಶೇಕಡ ೯ ಜನ ತಮ್ಮ ಮೇಲಾಧಿಕಾರಿಗೆ ಹಣ ಕೊಡಲು ಹಾಗೂ ಅವರ ಆದೇಶದಂತೆ ಈ ಲಂಚ ಸ್ವೀಕರಿಸಿದ್ದೆ ಎಂದು ಹೇಳಿದ್ದಾರೆ.




ತಮ್ಮ ಪರಿಚಿತರೆ ಬೇರೆ ಹಗೆತನವಿಟ್ಟುಕೊಂಡು ತಮ್ಮನ್ನು ಲಂಚದ ಹಗರಣದಲ್ಲಿ ಸಿಲುಕಿಸಿದ್ದಾರೆ ಎಂದು ಹೇಳುವವರು ಶೇಕಡ ೭೬ ಜನರಿದ್ದಾರೆ. ಲಂಚ ಪಡೆದು ಬಂಧನವಾದಾಗ ಈ ಜೀವನವೇ ಸಾಕು ಆತ್ಮಹತ್ಯೆ ಮಾಡಿಕೊಳ್ಳೋಣ ಎಂದವರು ಶೇಕಡ ೧೫ ಜನ. ಇನ್ನು ಮುಂದೆ ಲಂಚ ಪಡೆಯುವುದಿಲ್ಲ ಎಂದು ಪ್ರತಿಜ್ಞೆ ಮಾಡಿದವರ ಸಂಖ್ಯೆ ಶೇಕಡ ೪೭ ಜನ. ಬಂದಿದ್ದು ಬರಲಿ ಗಟ್ಟಿ ಧೈರ್ಯ ಮಾಡಿ ಎದುರಿಸಿಯೇ ಬಿಡೋಣ ಎಂದವರು ಶೇಕಡ ೩೮ ಜನ. ಮಾಧ್ಯಮಗಳಲ್ಲಿ ಲಂಚ ಪಡೆದಿರುವುದನ್ನು ಬಿತ್ತರಗೊಂಡಿದ್ದೇ ನಮಗೆ ಕೊಟ್ಟ ದೊಡ್ಡ ಶಿಕ್ಷೆ ಎಂದವರು ಶೇಕಡ ೯೩ ಹೇಳಿದ್ದಾರೆ. ಅದೇ ಭರದಲ್ಲಿ ಮಾಧ್ಯಮದ ವರದಿಗಳು ಉತ್ಪ್ರೇಕ್ಷೆಯಿಂದ ಕೂಡಿದ್ದವು ಎಂದವರು ಶೇಕಡ ೮೮ರಷ್ಟು ಜನ.


ಆಶ್ಚರ್ಯವೆಂದರೆ, ಲಂಚ ಪಡೆದ ಹಣವನ್ನು ಶೇಕಡ ೩೬ರಷ್ಟು ಜನ ಧರ್ಮಾರ್ಥಕ್ಕೆ ಬಳಸಿದರೆ, ಶೇಕಡ ೨೦ರಷ್ಟು ಜನ ದುಂದು ಹಾಗೂ ದುಶ್ಚಟಗಳಿಗೆ ಬಳಸಿದ್ದಾರೆ. ಶೇಕಡ ೧೭ ಜನ ಆಭರಣಗಳ ಖರೀದಿಗೆ ವ್ಯಯಿಸಿದರೆ, ಶೇಕಡ ೧೫ರಷ್ಟು ಜನ ಪ್ರವಾಸಕ್ಕೆ ಹಾಗೂ ಶೇಕಡ ೧೨ ಜನ ಇನ್ನಿತರ ವಿಷಯಗಳಿಗೆ ವ್ಯಯಿಸಿದ್ದಾರೆ. ಲೋಕಾಯುಕ್ತದಿಂದ ಪ್ರಕರಣ ಖುಲಾಸೆ ಮಾಡಲು ಶೇಕಡ ೨೮ರಷ್ಟು ಜನ ಮಧ್ಯಸ್ಥರ ಮೂಲಕ ಲೋಕಾಯುಕ್ತ ಕಚೇರಿಯ ಸಿಬ್ಬಂದಿಗೆ ಹಾಗೂ ಎದುರಾಳಿಗೆ ಲಂಚ ನೀಡಿರುವುದಾಗಿ ಒಪ್ಪಿಕೊಂಡಿದ್ದಾರೆ. ಭ್ರಷ್ಟಾಚಾರಿ ಎಂದು ಆರೋಪ ಹೊತ್ತಾದ ಮೇಲೂ ಸಮಾಜದಲ್ಲಿ ಶೇಕಡ ೩೦ರಷ್ಟು ಜನ ತಿರಸ್ಕಾರದಿಂದ ನೋಡಿದರೆ, ಶೇಕಡ ೬೫ರಷ್ಟು ಜನ ತಮಗೆ ಮೊದಲು ನೀಡುತ್ತಿದ್ದ ಗೌರವ ಮರ್ಯಾದೆಗಳನ್ನೇ ನೀಡುತ್ತಿದ್ದರು. ಶೇಕಡ ೫ ಜನ ಮಾತ್ರ ಯಾವುದೇ ರೀತಿಯ ಪ್ರತಿಕ್ರಿಯೆ ತೋರ್ಪಡಿಸುತ್ತಿರಲಿಲ್ಲ ಎಂದು ಈ ಸರ್ವೆಯಲ್ಲಿ ಕಂಡು ಬಂದಿದೆ.



ತಾವು ಸರ್ಕಾರಿ ನೌಕರಿಗೆ ಸೇರುವಾಗ ತಮ್ಮ ಆರ್ಥಿಕ ಸ್ಥಿತಿ ಬಡತನದಿಂದ ಕೂಡಿತ್ತು ಎಂದು ಉತ್ತರಿಸಿದವರು ಶೇಕಡ ೬೮ ಜನರಾದರೆ,ತಾವು ಲಂಚ ನೀಡಿ ಸರ್ಕಾರಿ ನೌಕರಿ ಸೇರಿದ್ದೇವೆ ಎಂದವರು ಶೇಕಡ ೬೭ ಜನ. ಆಯಕಟ್ಟಿನ ಜಾಗಗಳಿಗೆ ವರ್ಗಾವಣೆಗೊಳ್ಳಲು ಲಂಚ ನೀಡಿದವರ ಸಂಖ್ಯೆ ಶೇಕಡ ೭೩ ಜನ ಎಂಬುದು ಈ ಸರ್ವೆಯಲ್ಲಿ ವ್ಯಕ್ತವಾಗಿದೆ.

ರಾಜ್ಯ ಲೋಕಾಯುಕ್ತವು ಆರಂಭವಾದ ೧-೪-೧೯೮೬ ರಿಂದ ೩೧-೦೩-೨೦೧೩ ವರೆಗೂ ನಡೆದ ದಾಳಿ ಹಾಗೂ ಟ್ರ್ಯಾಪ್ ಪ್ರಕರಣಗಳಲ್ಲಿ ೧೪೪೭ ಪ್ರಕರಣಗಳು ಖುಲಾಸೆಗೊಂಡಿವೆ. ಇನ್ನೂ ವಿವಿಧ ನ್ಯಾಯಾಲಯದಲ್ಲಿ ೧೫೬೧ ಪ್ರಕರಣಗಳು ವಿಲೇವಾರಿಗಾಗಿ ಕಾದಿವೆ. ಅಲ್ಲಿಂದ ಇಲ್ಲಿಯವರೆಗೆ ೫೧೩ ಪ್ರಕರಣಗಳಲ್ಲಿ ಮಾತ್ರ ಶಿಕ್ಷೆ ಜಾರಿಯಾಗಿದೆ. ಟ್ರ್ಯಾಪ್ ಪ್ರಕರಣದಲ್ಲಿ ಸಿಲುಕಿದ ಮಂಗಳೂರಿನ ಗ್ರಾಮ ಲೆಕ್ಕಾಧಿಕಾರಿ ವಾಸುದೇವರಾವ್‌ರು ಲೋಕಾಯುಕ್ತದಿಂದ ಶಿಕ್ಷೆಗೆ ಗುರಿಯಾದ ಮೊದಲಿಗರು. ೧೯೮೮ ರಲ್ಲಿ ಇವರಿಗೆ ೨ ವರ್ಷ ಶಿಕ್ಷೆ ಹಾಗೂ ೨೦೦೦ ರೂ ದಂಡ ವಿಧಿಸಲಾಯ್ತು. ಇವರ ನಂತರ ಎರಡು ವರ್ಷದವರೆಗೆ ಒಬ್ಬರಿಗೂ ಶಿಕ್ಷೆ ಜಾರಿಯಾಗಲಿಲ್ಲ.೨೦೦೪ ರಲ್ಲಿ ಕೊಳ್ಳೇಗಾಲದ ಭಾಗೀರಥಿಯವರು ಶಿಕ್ಷೆಗೊಳಗಾದ ಮೊದಲನೇಯ ಮಹಿಳೆ ಅಂದಿನಿಂದ ಇಂದಿನವರೆಗೂ ೨೫ ಮಹಿಳೆಯರು ಶಿಕ್ಷೆಗೊಳಗಾಗಿದ್ದಾರೆ.





ಅತೀ ಹೆಚ್ಚು ಶಿಕ್ಷೆ ಜಾರಿಯಾದ ವರ್ಷವೆಂದರೆ ೨೦೧೧. ಆ ವರ್ಷ ಶಿಕ್ಷೆಯಾದವರ ಸಂಖ್ಯೆ ೯೫. ಆಶ್ಚರ್ಯವೆಂದರೆ ೧೮ ಜನ ಒಂದಕ್ಕಿಂತಲೂ ಹೆಚ್ಚು ಬಾರಿ ಲೋಕಾಯುಕ್ತ ಟ್ರ್ಯಾಪ್‌ನಲ್ಲಿ ಸಿಲುಕಿದ್ದಾರೆ. ಆರೋಗ್ಯ, ಸ್ಥಳೀಯ ಸಂಸ್ಥೆ, ಪೊಲೀಸ್, ಕಂದಾಯ, ಸಮಾಜ ಕಲ್ಯಾಣ. ಇಲಾಖೆಯವರು ಅತೀ ಹೆಚ್ಚು ಶಿಕ್ಷೆಗೆ ಒಳಗಾಗಿದ್ದಾರೆ. ಮಹಿಳಾ ನೌಕರರಲ್ಲಿ ಶೇಕಡ ೯ರಷ್ಟು ಭ್ರಷ್ಟಾಚಾರಿಗಳಿದ್ದಾರೆಂದು ಸರ್ವೆ ಹೇಳಿದ್ದರೂ ಸಹ ಶಿಕ್ಷೆಗೊಳಪಟ್ಟವರಲ್ಲಿ ಶೇಕಡ ೧೨.೫ರಷ್ಟು ಮಹಿಳಾ ನೌಕರರಾಗಿರುವುದು ಕಂಡು ಬಂದಿದೆ. ಅಂದರೆ ಮಹಿಳಾ ಲಂಚಕೋರ ನೌಕರರು, ಪುರುಷ ಲಂಚಕೋರ ನೌಕರರಗಿಂತಲೂ ಸುಲಭವಾಗಿ ಲೋಕಾಯುಕ್ತಕ್ಕೆ ಸಿಕ್ಕಿ ಬೀಳುತ್ತಾರೆ ಎನ್ನುವುದು ಅಧ್ಯಯನದಿಂದ ತಿಳಿದು ಬಂದಿದೆ.

ಲೋಕಾಯುಕ್ತ ಸಂಸ್ಥೆಯ ಇಲಾಖೆಯ ಅಧಿಕಾರಿಗಳು ಪ್ರಶ್ನಾವಳಿಯ ಮೂಲಕ ಉತ್ತರಿಸಲು ಸ್ಪಷ್ಟವಾಗಿ ನಿರಾಕರಿಸಿದರು. ಲೋಕಾಭಿರಾಮವಾಗಿ ಮಾತನಾಡುತ್ತ ಹಲವಾರು ವಿಷಯಗಳನ್ನು ಅವರಿಂದ ಪಡೆಯಲಾಯಿತು. ಅವಶ್ಯ ಬಿದ್ದ ಮಾಹಿತಿಯನ್ನು ಮಾಹಿತಿ ಹಕ್ಕು ಕಾಯ್ದೆಯಡಿ ಕೇಳಿ ಸಂಗ್ರಹಿಸಿ ವಿವರಿಸಲಾಗಿದೆ.

೫.೪. ಪ್ರಮುಖರ ನೆಲೆಯಲ್ಲಿ ಸಾಮಾಜಿಕ ಪರಿಣಾಮಗಳು.

ಭ್ರಷ್ಟಾಚಾರವು ದೇಶದ ನಾಗರಿಕರನ್ನು ತೊಂದರೆ ಹಾಗೂ ಸಮಸ್ಯೆಗಳಿಗೆ ದೂಡುತ್ತಿದೆ. ಭ್ರಷ್ಟಾಚಾರ ಎಂಬುದು ಘೋರ ದುಃಸ್ವಪ್ನದಂತೆ ಕಾಡುತ್ತಿದೆ. ಭ್ರಷ್ಟಾಚಾರವು ಮಾನವ ಹಕ್ಕುಗಳ ಮೌಲ್ಯವನ್ನು ಕಡಿಮೆಗೊಳಿಸುತ್ತದೆ. ಇದು ಸಂವಿಧಾನದ ಪೀಠಿಕೆಯಲ್ಲಿ ಹೇಳಲಾದ ಅಭಿವೃದ್ಧಿ. ಪ್ರಗತಿ, ಸಮಾನತೆ, ನ್ಯಾಯ, ಸ್ವಾತಂತ್ರ್ಯವನ್ನು ಕುಂಠಿತಗೊಳಿಸುತ್ತದೆ. ಒಟ್ಟಾರೆಯಾಗಿ ಇದರ ಪರಿಣಾಮಗಳು ಭೀಕರವಾಗಿವೆ. ಒಂದು ಸಮಾಜದಲ್ಲಿ ಭ್ರಷ್ಟಾಚಾರ ತಾಂಡವಾಡುತ್ತಿದ್ದರೆ, ಅಲ್ಲಿ

ಸಹಜವಾಗಿ ನೈತಿಕ ಮತ್ತು ಸಾಮಾಜಿಕ ಮೌಲ್ಯಗಳು ಕುಸಿಯುತ್ತವೆ. ಪರಿಸ್ಥಿತಿ ಹೀಗಿದ್ದಾಗ ಉತ್ತಮ ಆಡಳಿತ ನೀಡಲು ಹೇಗೆ ಸಾಧ್ಯ? ಭಾರತದ ಜನರು ಇಂದಿನ ಸಮಾಜದ ಕುರಿತು ಸಿನಿಕತನ ಬೆಳೆಸಿಕೊಳ್ಳುತ್ತಿರುವುದು ಇನ್ನೂ ದುರಂತ ಎಂದೆನ್ನುತ್ತಾರೆ ಹಿರಿಯ ನ್ಯಾಯವಾದಿ ಪ್ರೊ. ರವಿವರ್ಮಕುಮಾರ.

ಭ್ರಷ್ಟಾಚಾರವು ಆರ್ಥಿಕ ಪ್ರಗತಿಯನ್ನು ಕುಂಠಿತಗೊಳಿಸುತ್ತದೆ ಎಂದು ಸಾಬೀತು ಪಡಿಸಲು ನಮ್ಮ ಆರ್ಥಿಕ ತಜ್ಞರು ಅನೇಕ ಸ್ಪಷ್ಟ ಪುರಾವೆಗಳನ್ನು ಒದಗಿಸುತ್ತಾರೆ. ಈಗಿನ ಮಾರುಕಟ್ಟೆ ತುಂಬಾ ಸ್ಪರ್ಧಾತ್ಮಕವಾಗಿರುವುದರಿಂದ ಭ್ರಷ್ಟಾಚಾರಕ್ಕೆ ಕುಮ್ಮಕ್ಕು ದೊರೆಯುತ್ತಿದೆ. ಒಂದು ಉದ್ಯಮದ ಬೆಳವಣಿಗೆ ಮತ್ತು ಬಂಡವಾಳ ಹೂಡಿಕೆಯಲ್ಲಿ ಲಂಚ ಎಂಬುದು ಬಹುಮುಖ್ಯವಾದ ಪಾತ್ರವನ್ನು ವಹಿಸದೇಯಿರಲಾರದು. ಭ್ರಷ್ಟಾಚಾರವು ಆರ್ಥಿಕ ಪ್ರಗತಿಯನ್ನು ಕುಂಠಿತಗೊಳಿಸುತ್ತದೆ. ಇದು ಸ್ಥಳೀಯ ಮತ್ತು ವಿದೇಶಿ ಬಂಡವಾಳದ ಮೇಲೂ ಪರಿಣಾಮವನ್ನು ಬೀರುತ್ತದೆ. ಇದು ಸಾರ್ವಜನಿಕ ಆದಾಯ ಕಡಿಮೆಗೊಳಿಸುವುದು ಅಲ್ಲದೇ ಸಾರ್ವಜನಿಕ ಬಂಡವಾಳವನ್ನು ಕೂಡ ಕುಂಠಿತಗೊಳಿಸುತ್ತದೆ.

ಇಷ್ಟೇ ಅಲ್ಲ, ಭ್ರಷ್ಟಾಚಾರ ಎಂಬುದು ಸರ್ಕಾರದ ಸ್ಥಿರತೆಯನ್ನು ಅಲ್ಲಾಡಿಸುವುದಲ್ಲದೇ ಅದರ ಪ್ರಾಮಾಣಿಕತೆಯನ್ನೇ ಪ್ರಶ್ನಿಸುತ್ತದೆ. ಒಬ್ಬ ರಾಜಕಾರಣಿ, ಸಚಿವ, ಶಾಸಕ, ಸಂಸದ ಲಂಚದ ಹಗರಣದಲ್ಲಿ ಸಿಕ್ಕಿಬಿದ್ದರೆ ಅವನು ಸೇರಿದ ಪಕ್ಷ ಅಥವಾ ಸರಕಾರವು ಆ ಬಗ್ಗೆ ಉತ್ತರ ನೀಡಬೇಕಾಗುತ್ತದೆ. ಹೀಗಾಗಿ ಇಂತಹ ಹಗರಣಗಳು ಒಬ್ಬ ವ್ಯಕ್ತಿಗೆ ಸಂಬಂಧಿಸಿರುವುದ್ದಿಲ್ಲ. ಎಷ್ಟೋ ಸಲ ಭ್ರಷ್ಟಾಚಾರ ಪ್ರಕರಣಗಳಿಗೆ ಸಂಬಂಧಿಸಿದಂತೆ ಸರಕಾರಕ್ಕೆ ಕುತ್ತು ಬಂದದ್ದು ಉಂಟು ಎನ್ನುವ ವಾದ ಹಿರಿಯ ಅರ್ಥತಜ್ಞ ಅಬ್ದುಲ ಅಜೀಜ ಅವರದು.

ಈ ಬಗ್ಗೆ ಹಿರಿಯ ಸಮಾಜ ಸೇವಕ ಎಸ್.ಆರ್. ಹೀರೇಮಠರ ಅಭಿಪ್ರಾಯವೇನೆಂದರೆ, ಭಾರತದಲ್ಲಿ ಭ್ರಷ್ಟಾಚಾರ ಎಂಬುದು ರಾಜಕೀಯ, ಅಧಿಕಾರಶಾಹಿ ಮತ್ತು ಅಪರಾಧಿಗಳ ನಡುವೆ ಇರುವ ಗಾಢ ಸಂಬಂಧಗಳಿಂದ ಜನ್ಮತಳೆದಿದೆ. ರಾಜಕೀಯ ಭ್ರಷ್ಟಾಚಾರ ಎಂಬುದು ನಮ್ಮ ಭ್ರಷ್ಟಾಚಾರ ವ್ಯವಸ್ಥೆಯ ಕೀರಿಟ ಎಂದೆನ್ನಬಹುದು. ಮಹಾಯುದ್ಧ ಎಂದೇ ಕರೆಯಬಹುದಾದ ಚುನಾವಣೆಗಳಲ್ಲಿ ಕಪ್ಪು ಹಣ ಚಲಾವಣೆಯಾಗುವುದು ಎಲ್ಲರಿಗೂ ಗೊತ್ತಿರುವ ವಿಷಯವಾಗಿದೆ. ಈ ನಿಟ್ಟಿನಲ್ಲಿ ಚುನಾವಣಾ ನೀತಿ ನಿಯಮಗಳನ್ನು ಇನ್ನೂ ಸುಧಾರಿಸುವುದು ಅಗತ್ಯ. ಪಕ್ಷದ, ಅಭ್ಯರ್ಥಿಗಳ ಲೆಕ್ಕ ಪತ್ರಗಳನ್ನು, ಆದಾಯ ತೆರಿಗೆಗಳನ್ನು ಇನ್ನಷ್ಟು ಕಟ್ಟುನಿಟ್ಟಾಗಿ ಪರೀಶಿಲಿಸಬೇಕು.ಅಪರಾಧಿಗಳಿಗೆ ಚುನಾವಣೆಯಲ್ಲಿ ಭಾಗವಹಿಸಲು ಅವಕಾಶ ಕೊಡಬಾರದು. ಪ್ರಚಾರದ ಅವಧಿಯನ್ನು ಇನ್ನಷ್ಟು ಕಡಿಮೆ ಮಾಡಬೇಕು. ಜೊತೆಗೆ ತಮ್ಮ ಪ್ರಚಾರಕ್ಕಾಗಿ ಎಲೆಕ್ಟ್ರಾನಿಕ್ ಮಾಧ್ಯಮಗಳನ್ನು ಬಳಸಲು

ಅವಕಾಶ ಕೊಡಬಾರದು. ಇನ್ನು ಇಂತಹ ಅನೇಕ ನಿಯಮಗಳನ್ನು ಚುನಾವಣಾ ಆಯೋಗವು ಮಾಡಬೇಕು. ಜವಾಬ್ದಾರಿತನ, ಬದ್ಧತೆ ಮತ್ತು ಪಾರದರ್ಶಕತೆ ಈ ಮೂರು ಭ್ರಷ್ಟಾಚಾರ ನಿವಾರಣೆಯಲ್ಲಿ ಬಹು ಮುಖ್ಯವಾದ ಪಾತ್ರವನ್ನು ವಹಿಸುತ್ತವೆ. ನಾಗರಿಕರು ಹೆಚ್ಚು ಸಂವೇದನಾಶೀಲರಾಗಬೇಕು. ಭ್ರಷ್ಟಾಚಾರದ ವಿರುದ್ಧ ಚಳುವಳಿಯು ಹೆಚ್ಚು ಶಕ್ತಿಯುತವಾಗಿ ಮತ್ತು ವ್ಯಾಪಕವಾಗುವಂತೆ ನೋಡಿಕೊಳ್ಳಬೇಕು.

ಹಿರಿಯ ಗಾಂಧಿವಾದಿ ಎಚ್.ಎಸ್. ದೊರೆಸ್ವಾಮಿಯವರ ಅಭಿಪ್ರಾಯ ಸ್ವಲ್ಪ ಭಿನ್ನ. ಅವರ ಅನಿಸಿಕೆ ಏನೆಂದರೆ, ಭ್ರಷ್ಟರನ್ನು ಶಿಕ್ಷಿಸುವುದು ಪ್ರಾಯೋಗಿಕವಾಗಿ ಕಾರ್ಯ ಸಾಧುವಲ್ಲ ಎಂದು ಕರ್ನಾಟಕದ ಲೋಕಾಯುಕ್ತದ ಅನುಭವ ಹೇಳುತ್ತಿದೆ. ದೇಶಕ್ಕೆ ಮಾದರಿಯಾಗಬಹುದಾದ ಕರ್ನಾಟಕ ಲೋಕಾಯುಕ್ತವನ್ನು ನ್ಯಾಯದಾನ ವ್ಯವಸ್ಥೆಯ ಕೊರತೆಗಳು ಹೇಗೆ ವಿಫಲಗೊಳಿಸಿವೆ ಎಂಬುದನ್ನು ಅನುಭವದಿಂದ ಅರಿತುಕೊಂಡಿದ್ದೇವೆ. ಅಜೀಂ ಪ್ರೇಂಜೀ ವಿಶ್ವವಿದ್ಯಾಲಯದ ಸಂಶೋಧಕರ ತಂಡ ಲೋಕಾಯುಕ್ತದ ಕುರಿತಾದ ಚರ್ಚೆಗೆ ಹೊಸತೊಂದು ಆಯಾಮವನ್ನು ನೀಡಲು ಪ್ರಯತ್ನಿಸುತ್ತಿದೆ. ಆದರೆ, ಈ ಮೂಲಭೂತ ಅಗತ್ಯವನ್ನು ಪೂರೈಸುವುದಕ್ಕೆ ಸಂಬಂಧಿಸಿದಂತೆ ಇಡೀ ಚರ್ಚೆಯ ಒಂದು ಸರಳೀಕೃತ ತೀರ್ಮಾನದತ್ತ ಹೊರಳಿಬಿಟ್ಟಿದೆ. ಭ್ರಷ್ಟಾಚಾರಿಗಳ ವಿರುದ್ಧ ಕಾನೂನುಕ್ರಮ ಜರುಗಿಸಿ ಶಿಕ್ಷೆಗೆ ಗುರಿಪಡಿಸುವ ಅಧಿಕಾರವಿರುವ ಒಂದು ಪ್ರಭಲ ವ್ಯವಸ್ಥೆಯೊಂದನ್ನು ರೂಪಿಸಿದರೆ ಭ್ರಷ್ಟಾಚಾರವನ್ನು ಸುಲಭವಾಗಿ ನಿಯಂತ್ರಿಸಬಹುದು ಎನ್ನುವುದೇ ಇದರ ತಾತ್ಪರ್ಯ ಎನ್ನುತ್ತಾರೆ ದೊರೆಸ್ವಾಮಿಯವರು.

ನಾಗರಿಕರ ದೂರುಗಳಿಗೆ ಸ್ಪಂದಿಸಿ ಭ್ರಷ್ಟಾಚಾರಿಗಳನ್ನು ಲಂಚ ಸ್ವೀಕರಿಸುವಾಗಲೇ ಬಂಧಿಸುವ ಅಧಿಕಾರ ಲೋಕಾಯುಕ್ತ ಪೊಲೀಸರಿಗೆ ಇದೆ. ೨೦೧೦-೨೦೧೨ರ ಅವಧಿಯಲ್ಲಿ ಕರ್ನಾಟಕ ಲೋಕಾಯುಕ್ತ ೧೧೨ ದಾಳಿಗಳನ್ನಷ್ಟೇ ನಡೆಸಿದೆ. ಇದೇ ಅವಧಿಯಲ್ಲಿ ೧೨೫೫೦ ದೂರುಗಳನ್ನು ಸ್ವೀಕರಿಸಿ, ೮,೬೮೧ ಅಧಿಕಾರಿಗಳ ವಿರುದ್ಧ ಕೇಸು ದಾಖಲಿಸಿದೆ. ಈ ಮೂರು ವರ್ಷಗಳಲ್ಲಿ ಲೋಕಾಯುಕ್ತ ನಡೆಸುವ ದಾಳಿ ಪ್ರಕರಣಗಳು ನಾಗರಿಕರ ದೂರಿಗೆ ಸ್ಪಂದಿಸುವ ಪ್ರಕರಣಗಳೊಂದಿಗಿನ ಹೋಲಿಕೆಯಲ್ಲಿ ವರ್ಷದಿಂದ ವರ್ಷಕ್ಕೆ ಕಡಿಮೆಯಾಗುತ್ತಲೇ ಹೋಗಿವೆ. ಅಂದರೆ ಭ್ರಷ್ಟಾಚಾರಿಗಳ ವಿರುದ್ಧ ಕ್ರಮ ಕೈಗೊಳ್ಳಲು ಒಂದು ಪ್ರಬಲ ಸಾಂಸ್ಥಿಕ ವ್ಯವಸ್ಥೆಯೊಂದನ್ನು ರೂಪಿಸಿಬಿಟ್ಟರೆ ಅದು ಕ್ರಿಯಾಶೀಲವಾಗಿ ಕಾರ್ಯನಿರ್ವಹಿಸುತ್ತದೆ ಎಂಬುದನ್ನು ಕರ್ನಾಟಕದ ಲೋಕಾಯುಕ್ತ ಸಮರ್ಥಿಸುವುದಿಲ್ಲ. ಅತ್ಯಂತ ಕ್ರಿಯಾಶೀಲ ಎಂದು ಹೇಳಬಹುದಾದ ಕರ್ನಾಟಕ ಲೋಕಾಯುಕ್ತ ಕೂಡಾ ಮೂಲತಃ ನಾಗರಿಕರ ದೂರುಗಳಿಗೆ ಸ್ಪಂದಿಸಿ ಕ್ರಮ ಕೈಗೊಂಡದ್ದೇ ಹೆಚ್ಚು ಕರ್ನಾಟಕದ ಉದಾಹರಣೆ ಹೇಳುತ್ತಿರುವಂತೆ

ಲೋಕಾಯುಕ್ತ ಸಂಸ್ಥೆಯ ಕ್ರಿಯಾಶೀಲತೆಯನ್ನು ಅದರ ನಾಯಕತ್ವ ನಿರ್ಧರಿಸುತ್ತಿರುತ್ತದೆ. ಕಳೆದ ಹದಿನಾರು ವರ್ಷಗಳಲ್ಲಿ ನಡೆದ ದಾಳಿಗಳಲ್ಲಿ ಶೇಕಡ ೬೬ರಷ್ಟು ದಾಳಿಗಳು ೨೦೦೬ ರಿಂದ ೨೦೧೧ರ ಅವಧಿಯಲ್ಲಿ ನಡೆದಿದೆ. ಈ ಅವಧಿಯಲ್ಲಿ ಲೋಕಾಯುಕ್ತಕ್ಕೆ ನ್ಯಾಯಮೂರ್ತಿ ಸಂತೋಷ ಹೆಗ್ಡೆಯವರ ನಾಯಕತ್ವವಿತ್ತು ಎಂಬುದು ಇಲ್ಲಿ ಗಮನಾರ್ಹ ಎಂದು ಲೋಕಾಯುಕ್ತದ ನ್ಯಾಯಾಧೀಶರಾದ ಎನ್.ಎಸ್. ನೇಗಿನಾಳರವರ ಅಭಿಪ್ರಾಯ.

ಹಿಂದಿನ ಲೋಕಾಯುಕ್ತರಾದ ನ್ಯಾಯಮೂರ್ತಿ ನಾಡೋಜ ಸಂತೋಷ ಹೆಗ್ಡೆ ಅವರ ಸ್ಪಷ್ಟ ಅಭಿಪ್ರಾಯವೇನೆಂದರೆ,

ಭ್ರಷ್ಟಾಚಾರವನ್ನು ಇಲಾಖಾವಾರು ಅಂದಾಜಿಸುವ ಹಲವು ಪ್ರಯತ್ನಗಳು ಈ ತನಕ ನಡೆದಿವೆ. ಇವುಗಳಲ್ಲಿ ಹೆಚ್ಚಿನವು ವಿವಿಧ ಸಮೀಕ್ಷೆಗಳನ್ನು ಆಧಾರವಾಗಿ ಇಟ್ಟುಕೊಂಡಿವೆ. ಇಲ್ಲವೇ ಸಾರ್ವಜನಿಕರು ಬಹಿರಂಗ ಪಡಿಸುವ ಮಾಹಿತಿಗಳನ್ನು ಒಳಗೊಂಡಿವೆ. ಲೋಕಾಯುಕ್ತ ಪೊಲೀಸರು ನಡೆಸಿರುವ ಟ್ರ್ಯಾಪ್ ಮತ್ತು ದಾಳಿ ಪ್ರಕರಣಗಳನ್ನು ಇಲಾಖಾವಾರು ವಿಂಗಡಿಸಿದಾಗ ಸಿಗುವ ಚಿತ್ರಣ ಭಿನ್ನವಾಗಿದೆ. ಶೇಕಡ ೮೦ರಷ್ಟು ಟ್ರ್ಯಾಪ್ ಪ್ರಕರಣಗಳು ಸರ್ಕಾರದ ಅಗತ್ಯ ಸೇವೆಗಳಿಗೆ ಸಂಬಂಧಿಸಿದ ಇಲಾಖೆಗಳವು. ಇದರಲ್ಲಿ ಸ್ಥಳೀಯ ಆಡಳಿತ ಸಂಸ್ಥೆಗಳ ನೌಕರರ ಸಂಖ್ಯೆ ಶೇಕಡ ೨೪.೦೬ರಷ್ಟಿದೆ. ತಾಲೂಕು ಮತ್ತು ಜಿಲ್ಲಾಡಳಿತ, ಪೊಲೀಸ್, ನ್ಯಾಯಾಲಯ, ತೆರಿಗೆ, ಕಂದಾಯ ಇಲಾಖೆಗಳಿಗೆ ಸಂಬಂಧಪಟ್ಟ ಪ್ರಕರಣಗಳು ಶೇಕಡ ೩೭.೬೫ರಷ್ಟಿದ್ದರೆ, ಕಲ್ಯಾಣ ಕಾರ್ಯಕ್ರಮಗಳನ್ನು ಜಾರಿಗೆ ತರುವ ಇಲಾಖೆಗಳಿಗೆ ಸೇರಿದ ಪ್ರಕರಣಗಳ ಪ್ರಮಾಣ ಶೇಕಡ ೧೭.೬೧. ಉಳಿದಂತೆ ಕೃಷಿ ಮತ್ತು ನೀರಾವರಿಗೆ ಸಂಬಂಧಿಸಿದ ಇಲಾಖೆಗಳಿಗೆ ಸಂಬಂಧಪಟ್ಟವು ೧೨.೭೫ರಷ್ಟಿವೆ.

ದಾಳಿ ಪ್ರಕರಣಗಳ ಹಂಚಿಕೆಯೂ ಇದನ್ನೇ ಹೋಲುತ್ತದೆ. ಸ್ಥಳೀಯಾಡಳಿತ ಸಂಸ್ಥೆಗಳ ನೌಕರರ ಪ್ರಮಾಣ ೧೮.೨೧ರಷ್ಟಿದ್ದರೆ ತಾಲೂಕು, ಜಿಲ್ಲಾಡಳಿತ, ಪೊಲೀಸ್, ನ್ಯಾಯಾಲಯ, ತೆರಿಗೆ, ಕಂದಾಯ ಇಲಾಖೆಗಳನ್ನು ಒಳಗೊಂಡಿರುವ ವಿಭಾಗದಲ್ಲಿ ಈ ಪ್ರಮಾಣ ಶೇಕಡ ೩೩.೨೪ರಷ್ಟಿದೆ. ಕಲ್ಯಾಣ ಕಾರ್ಯಕ್ರಮಗಳನ್ನು ಜಾರಿಗೆ ತರುವ ಇಲಾಖೆಯ ನೌಕರರ ಪ್ರಮಾಣ ಶೇಕಡ ೮.೦೯, ನಿಯಂತ್ರಣಾಧಿಕಾರವಿರುವ ಇಲಾಖೆಗಳಿಂದ ಶೇಕಡ ೧೧.೫೬, ನೀರಾವರಿ ಮತ್ತು ಕೃಷಿ ಸಂಬಂಧಿ ಇಲಾಖೆಗಳ ನೌಕರರ ಪ್ರಮಾಣ ಶೇಕಡ ೮.೦೯, ಅರಣ್ಯ ಇಲಾಖೆ ಮತ್ತು ಆರ್ಥಿಕ ಚಟುವಟಿಕೆಗಳನ್ನು ನಡೆಸುವ ಇಲಾಖೆಗಳಿಗೆ ಸೇರಿದ ನೌಕರರ ಪ್ರಮಾಣ ಕ್ರಮವಾಗಿ ಶೇ.ಕಡಾ ೩.೪೭ ಮತ್ತು ೧೭.೩೪ರಷ್ಟಿದೆ. ಕೆಳ ಹಂತಗಳಲ್ಲಿನ ಭ್ರಷ್ಟಾಚಾರ ಮತ್ತು ಮೇಲುಸ್ತರಗಳಲ್ಲಿರುವ ಭ್ರಷ್ಟಾಚಾರದ ಕುರಿತಂತೆ ಈ ತನಕ ಸಾಕಷ್ಟು ಚರ್ಚೆಗಳು ನಡೆದಿವೆ. ಕಳೆದ ಮೂರು ವರ್ಷಗಳ ಅಂಕಿ ಅಂಶಗಳನ್ನು ವಿವಿಧ ವರ್ಗದ

ನೌಕರರಿಗೆ ಅನುಗುಣವಾಗಿ ಇನ್ನೂ ವಿಂಗಡಿಸಿಲ್ಲವಾದರೂ ಸ್ಥೂಲ ಪರಿಶೀಲನೆಗಳು ಕೆಳಸ್ತರದ ನೌಕರರ ಕುರಿತು ಹೆಚ್ಚಿನ ದೂರುಗಳು ಬರುತ್ತವೆ ಎಂಬುದನ್ನು ಸ್ಪಷ್ಟ ಪಡಿಸುತ್ತಿವೆ.

ತನಿಖಾ ಪ್ರಕ್ರಿಯೆಯ ಸಮಸ್ಯೆ

ಭ್ರಷ್ಟ ಅಧಿಕಾರಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವುದಕ್ಕೆ ಸರ್ಕಾರ ಅನುಮತಿ ನಿರಾಕರಿಸುವುದರಿಂದ ಎಷ್ಟೋ ವೇಳೆ ತನಿಖೆಯನ್ನೇ ಪೂರ್ಣಗೊಳಿಸಲಾಗದಂತಹ ಸ್ಥಿತಿ ಎದುರಾಗುತ್ತದೆ ಎಂಬುದನ್ನು ಗಮನದಲ್ಲಿಟುಕೊಂಡು ಈ ವಾದವನ್ನು ಮಂಡಿಸಲಾಗಿದೆ. ಕರ್ನಾಟಕದ ಉದಾಹರಣೆಯನ್ನು ಪರಿಗಣಿಸಿದರೆ ಇದು ಅಂಥ ಸಮಸ್ಯೆಯೇನೂ ಅಲ್ಲ ಅನಿಸುತ್ತದೆ. ಒಟ್ಟು ಪ್ರಕರಣಗಳ ಶೇಕಡ ೬೫.೯ರಷ್ಟು ಟ್ರ್ಯಾಪ್ ಪ್ರಕರಣಗಳು ಹಾಗೂ ಶೇಕಡ ೪೩.೩ರಷ್ಟು ದಾಳಿ ಪ್ರಕರಣಗಳಲ್ಲಿ ಕಾನೂನು ಕ್ರಮಕ್ಕೆ ಅಗತ್ಯವಿರುವ ಸರ್ಕಾರಿ ಅನುಮೋದನೆ ದೊರೆತಿದೆ. ತನಿಖೆ ಪೂರ್ಣಗೊಂಡಿರುವ ಪ್ರಕರಣಗಳಲ್ಲಂತೂ ಈ ಅನುಮೋದನೆಯ ಪ್ರಮಾಣ ಟ್ರ್ಯಾಪ್ ಪ್ರಕರಣಗಳಲ್ಲಿ ಶೇಕಡ ೯೪ರಷ್ಟಿದ್ದರೆ ದಾಳಿ ಪ್ರಕರಣಗಳಲ್ಲಿ ಶೇಕಡ ೯೦ರಷ್ಟಿದೆ. ಕಾನೂನು ಕ್ರಮಕ್ಕೆ ಅನುಮೋದನೆ ದೊರಕಬೇಕಾಗಿರುವ ಪ್ರಕರಣಗಳ ಪ್ರಮಾಣ ಟ್ರ್ಯಾಪನಲ್ಲಿ ಶೇಕಡ ೧.೬೩ರಷ್ಟಿದ್ದರೆ ದಾಳಿಯಲ್ಲಿ ಶೇಕಡ ೨.೧೪ರಷ್ಟಿದೆ. ಈ ಬಗೆಯ ಅನುಮೋದನೆಗಳಿಗೆ ಸರಾಸರಿ ೨ ವರ್ಷಗಳ ಅವಧಿ ಬೇಕಾಗುತ್ತದೆ. ದಾಳಿ ಪ್ರಕರಣಗಳಲ್ಲಿ ಕ್ರಮ ಕೈಗೊಳ್ಳಲು ಸರ್ಕಾರದ ಅನುಮೋದನೆಗೆ ಕಾಯುತ್ತಿರುವ ಹೆಚ್ಚಿನ ಪ್ರಕರಣಗಳು ಹಿರಿಯ ಅಧಿಕಾರಿಗಳಿಗೆ ಅಂದರೆ ಐಎಎಸ್, ಐಪಿಎಸ್, ಐಎಫ್‌ಎಸ್ ಮತ್ತು ಕೆಎಎಸ್ ಅಧಿಕಾರಿಗಳಿಗೆ ಮತ್ತು ಮುಖ್ಯ ಇಂಜನಿಯರುಗಳಿಗೆ ಸಂಬಂಧಿಸಿದವುಗಳಾಗಿವೆ.

ಕರ್ನಾಟಕ ಲೋಕಾಯುಕ್ತಕ್ಕೆ ನಿಯಮಬದ್ಧವಾಗಿ ದೊರೆತಿರುವ ಅಧಿಕಾರ ಮತ್ತು ಆಡಳಿತಾತ್ಮಕ ಸಾಮರ್ಥ್ಯಗಳ ಹಿನ್ನೆಲೆಯಲ್ಲಿ ತನಿಖಾ ಪ್ರಕ್ರಿಯೆಯನ್ನು ವಿಶ್ಲೇಷಿಸಿದಾಗ ಶೇಕಡ ೮೦.೫ರಷ್ಟು ಟ್ರ್ಯಾಪ್ ಪ್ರಕರಣಗಳು ಹಾಗೂ ಶೇಕಡ ೫೪.೪ರಷ್ಟು ದಾಳಿ ಪ್ರಕರಣಗಳ ತನಿಖೆ ಪೂರ್ಣಗೊಂಡಿವೆ. ತನಿಖಾ ಪ್ರಕ್ರಿಯೆಯನ್ನು ಪೂರ್ಣಗೊಳಿಸುವ ಕ್ರಿಯೆಯಲ್ಲಿ ಆರೋಪಿ ಅಧಿಕಾರಿ ಯಾವ ಸ್ತರದವನು ಎಂಬುದು ಅಷ್ಟೇನೂ ಮುಖ್ಯ ಪಾತ್ರವಹಿಸಿಲ್ಲ. ಕೆಲವು ಅತ್ಯುನ್ನತ ಅಧಿಕಾರಿಗಳ ಮಟ್ಟಿಗಷ್ಟೇ ಇದು ಸ್ವಲ್ಪ ಮಟ್ಟಿಗೆ ಪರಿಣಾಮ ಬೀರಿದೆ. ಅಷ್ಟೇ ಅಲ್ಲ ತನಿಖೆಯನ್ನು ಪೂರ್ಣಗೊಳಿಸಿ ಆರೋಪ ಪಟ್ಟಿಯನ್ನು ಸಲ್ಲಿಸುವ ಪ್ರಕ್ರಿಯೆ ಕೂಡಾ ಅಪರಾಧ ಪ್ರಕರಣಗಳ ನಿರ್ವಹಣೆಯ ರಾಷ್ಟ್ರೀಯ ಸರಾಸರಿಯೊಂದಿಗೆ ಇದೆ. ಇದನ್ನು ಗಮನದಲ್ಲಿಟ್ಟುಕೊಂಡಾಗ ಕರ್ನಾಟಕ ಲೋಕಾಯುಕದ ಕಾನೂನು ಮತ್ತು ಆಡಳಿತಾತ್ಮಕ ಚೌಕಟ್ಟಿನೊಳಗೆ ತನಿಖೆ ಮತ್ತು ಆರೋಪ ಪಟ್ಟಿಯನ್ನು ಸಲ್ಲಿಸುವ ಕ್ರಿಯೆಗೆ ಅಂಥ ಅಡಚಣೆಗಳೇನೂ ಇಲ್ಲ ಎಂಬುದು ಸ್ಪಷ್ಟವಾಗುತ್ತದೆ. ಅಸಾಮಾನ್ಯ ತನಿಖಾ ಅಧಿಕಾರವನ್ನು ನೀಡಿದರಷ್ಟೇ ಅದು

ಯಶಸ್ವಿಯಾಗಬಹುದು ಎಂಬ ವಾದವನ್ನು ಕರ್ನಾಟಕ ಲೋಕಾಯುಕ್ತದ ಅನುಭವ ಸಮರ್ಥಿಸುವುದಿಲ್ಲ.

ನ್ಯಾಯದಾನ ವ್ಯವಸ್ಥೆಯ ಸಮಸ್ಯೆ

ವಿಶೇಷ ನ್ಯಾಯಾಲಯದಲ್ಲಿ ಆರೋಪ ಪಟ್ಟಿಯನ್ನು ಸಲ್ಲಿಸುವುದರೊಂದಿಗೆ ಲೋಕಾಯುಕ್ತ ವ್ಯವಸ್ಥೆ ತನಿಖೆ ಮಾಡಿದ ಭ್ರಷ್ಟಾಚಾರದ ಪ್ರಕರಣಗಳನ್ನು ಅಪರಾಧ ನ್ಯಾಯ ವ್ಯವಸ್ಥೆಯೊಳಗೆ ಪ್ರವೇಶ ಪಡೆಯುತ್ತವೆ. ದೂರುಗಳ ನಿರ್ವಹಣೆ, ತನಿಖೆ, ಆರೋಪ ಪಟ್ಟಿಯನ್ನು ಸಲ್ಲಿಸುವ ಪ್ರಕ್ರಿಯೆಯಲ್ಲಿ ಬಹಳ ಪರಿಣಾಮಕಾರಿ ಎಂಬಂತೆ ಕಾಣಿಸುವ ಕರ್ನಾಟಕ ಲೋಕಾಯುಕ್ತ ಈ ಹಂತದಲ್ಲಿ ಸಂಪೂರ್ಣವಾಗಿ ಸೋತು ಬಿಡುತ್ತದೆ. ಶೇಕಡ ೯೫.೭ರಷ್ಟು ಟ್ರ್ಯಾಪ್ ಪ್ರಕರಣಗಳಲ್ಲಿ ಮತ್ತು ಶೇಕಡ ೯೫.೬ರಷ್ಟು ದಾಳಿ ಪ್ರಕರಣಗಳಲ್ಲಿ ಈಗಾಗಲೇ ಆರೋಪಪಟ್ಟಿಯನ್ನು ಸಲ್ಲಿಸಲಾಗಿದೆ. ಆದರೆ ಇವುಗಳ ವಿಚಾರಣೆಯ ಗತಿ ಬಹಳ ನಿರಾಶದಾಯಕವಾಗಿದೆ. ನ್ಯಾಯಾಲಯದಲ್ಲಿ ಇನ್ನೂ ವಿಚಾರಣ ಹಂತದಲ್ಲಿಯೇ ಉಳಿದುಕೊಂಡಿರುವ ಟ್ರ್ಯಾಪ್ ಪ್ರಕರಣಗಳು ಸರಾಸರಿ ೫ ವರ್ಷಗಳಷ್ಟು ಹಳೆಯದಾಗಿದ್ದರೆ, ದಾಳಿ ಪ್ರಕರಣಗಳು ಸರಾಸರಿ ೮ ವರ್ಷಗಳಷ್ಟು ಹಳೆಯವು. ಇವುಗಳಲ್ಲಿ ಶಿಕ್ಷೆ ದೊರೆತಿರುವ ಪ್ರಕರಣಗಳ ಸಂಖ್ಯೆ ಇನ್ನೂ ನಿರಾಶದಾಯಕವಾಗಿದೆ. ಶೇಕಡ ೨೦ ಟ್ರ್ಯಾಪ್ ಪ್ರಕರಣಗಳಲ್ಲಿ ಹಾಗೂ ಶೇಕಡ ೨೦ ದಾಳಿ ಪ್ರಕರಣಗಳಲ್ಲಷ್ಟೇ ಆರೋಪಿಗಳಿಗೆ ಶಿಕ್ಷೆಯಾಗಿದೆ. ಭ್ರಷ್ಟಾಚಾರ ಪ್ರಕರಣಗಳಲ್ಲಿ ಶಿಕ್ಷೆಯ ಪ್ರಮಾಣದ ರಾಷ್ಟ್ರೀಯ ಸರಾಸರಿ ಶೇಕಡ ೩೪ ರಿಂದ ೪೦ರಷ್ಟಿದೆ.(ಎನ್‌ಸಿಆರ್‌ಬಿ ಅಂಕಿ ಅಂಶಗಳು: ೨೦೧೦, ೨೦೧೧ ಮತ್ತು ೨೦೧೨). ಅಂದರೆ ಭ್ರಷ್ಟಾಚಾರ ಪ್ರಕರಣಗಳನ್ನು ಅಪರಾಧ ನ್ಯಾಯ ವ್ಯವಸ್ಥೆಯೊಳಗೆ ನಿರ್ವಹಿಸಲಾಗುವ ವಿಧಾನವೇ ಇಲ್ಲಿ ಬಹುಮುಖ್ಯ ಸಮಸ್ಯೆಯಾಗಿದೆ. ದೂರು ಮತ್ತು ತನಿಖಾ ಪ್ರಕ್ರಿಯೆಯಲ್ಲಿ ಯಾವುದೇ ಸುಧಾರಣೆಗಳನ್ನು ತಂದರೂ ನ್ಯಾಯಾಂಗ ವಿಚಾರಣೆಯ ವಿಧಾನವನ್ನು ಸುಧಾರಿಸದೇ ಇದ್ದರೆ ಅದು ಪರಿಣಾಮಕಾರಿಯಾಗುವುದಿಲ್ಲ ಎಂಬುದನ್ನು ಕರ್ನಾಟಕ ಲೋಕಾಯುಕ್ತದ ಉದಾಹರಣೆ ಸಮರ್ಥಿಸುತ್ತಿದೆ.

ಹಿರಿಯ ಪತ್ರಕರ್ತರಾದ ನಾಡೋಜ ಪಾಟೀಲ ಪುಟ್ಟಪ್ಪನವರ ಅಭಿಪ್ರಾಯವೇನೆಂದರೆ

ಭ್ರಷ್ಟಾಚಾರಿಗಳಿಗೆ ಯಾವ ಪ್ರಮಾಣದಲ್ಲಿ ಶಿಕ್ಷೆಯಾಗಿದೆ ಎಂಬುದನ್ನಷ್ಟೇ ಪರಿಗಣಿಸಿದರೆ ಕರ್ನಾಟಕ ಲೋಕಾಯುಕ್ತದ ಮಾದರಿಯನ್ನು ವಿಫಲ ಮಾದರಿಗಳ ಪಟ್ಟಿಗೇ ಸೇರಿಸಬೇಕಾಗುತ್ತದೆ. ಲೋಕಾಯುಕ್ತ ತನ್ನ ವಿಶೇಷ ನ್ಯಾಯಾಲಯಗಳನ್ನು ಆಡಳಿತಾತ್ಮಕವಾಗಿ ನಿಯಂತ್ರಿಸುವುದಿಲ್ಲ ಜೊತೆಗೆ ಅಪರಾಧ ನ್ಯಾಯವ್ಯವಸ್ಥೆಯಲ್ಲಿ ಇದಕ್ಕೆ ವಿಶೇಷ ಪಾತ್ರವೇನೂ ಇಲ್ಲ ಎಂಬುದನ್ನೂ ಇಲ್ಲಿ ಗಮನಿಸಬೇಕಾಗುತ್ತದೆ. ಆದ್ದರಿಂದ ಕೇವಲ ಶಿಕ್ಷೆಯಾಗುವ ಪ್ರಕರಣಗಳ ಪ್ರಮಾಣವನ್ನಷ್ಟೇ ಗಮನಿಸದೇ ಲೋಕಾಯುಕ್ತರ

ಕಾರ್ಯನಿರ್ವಹಣೆಗೆ ಇರುವ ಸಾಂಕೇತಿಕ ಮತ್ತು ರಾಜಕೀಯ ಮಹತ್ವವನ್ನು ಗಮನದಲ್ಲಿಟ್ಟುಕೊಂಡು ಈ ವ್ಯವಸ್ಥೆ ಎಷ್ಟು ಪರಿಣಾಮಕಾರಿಕಾಗಿದೆ ಎಂಬುದನ್ನು ನೋಡಬೇಕಾಗುತ್ತದೆ. ಈ ಬಗೆಯ ಸಾಂಕೇತಿಕ ಹಾಗೂ ಸಾಮಾಜಿಕ ಪರಿಣಾಮಗಳನ್ನು ಅಳೆಯುವ ಪರಿಕರಗಳು ಸದ್ಯ ನಮ್ಮ ಬಳಿ ಇಲ್ಲ. ಆದರೆ ದಾಳಿಗಳು ಮಾಧ್ಯಮಗಳಲ್ಲಿ ಪಡೆಯುತ್ತಿರುವ ಮಹತ್ವ ಮತ್ತು ಮುಖ್ಯಮಂತ್ರಿಯೊಬ್ಬರು ಸ್ಥಾನ ತ್ಯಜಿಸಬೇಕಾಗಿ ಬಂದ ರಾಜಕೀಯ ಪರಿಣಾಮಗಳನ್ನು ನೋಡಿದಾಗ ಲೋಕಾಯುಕ್ತರ ಕಾರ್ಯನಿರ್ವಹಣೆಯ ಸಾಂಕೇತಿಕ ಪರಿಣಾಮಗಳು ಕಡಿಮೆಯದ್ದೇನೂ ಅಲ್ಲ ಎನ್ನಬಹುದು. ಆದರೆ ಮೇಲಿಂದ ಮೇಲೆ ನಡೆದ ಈ ಹಿಂದೆ ನಡೆದ ಉಪಚುನಾವಣೆಗಳಲ್ಲಿ ಆಡಳಿತ ಪಕ್ಷವೇ ಮತ್ತೆ ಮತ್ತೆ ಗೆಲುವು ಸಾಧಿಸಿದ್ದನ್ನು ನೋಡಿದರೆ ಈ ಸಾಧನೆಗೆ ಎಷ್ಟು ಮಹತ್ವ ನೀಡಬೇಕೆಂಬ ಪ್ರಶ್ನೆಯೂ ಉದ್ಭವಿಸುತ್ತದೆ. ಭ್ರಷ್ಟಾಚಾರಿಗಳನ್ನು ಶಿಕ್ಷಿಸುವಂಥ ವ್ಯವಸ್ಥೆಯೊಂದನ್ನು ರೂಪಿಸುವುದರ ಮೂಲಕ ಭ್ರಷ್ಟಾಚಾರವನ್ನು ತಡೆಯಬಹುದೆಂಬ ಪರಿಕಲ್ಪನೆ ಕರ್ನಾಟಕ ಲೋಕಾಯುಕ್ತ ವಿಷಯದಲ್ಲಿ ವಿಫಲವಾಗಿದೆ. ನ್ಯಾಯದಾನ ವ್ಯವಸ್ಥೆಯಲ್ಲಿ ಬಹುಮುಖ್ಯ ಸುಧಾರಣೆಗಳಾಗದ ಹೊರತು ಲೋಕಾಯುಕ್ತ ಪರಿಣಾಮಕಾರಿಯಾಗಲಾರದು.

ಹಿಂದಿನ ಲೋಕಾಯುಕ್ತರಾದ ನ್ಯಾಯಮೂರ್ತಿ ಎನ್. ವೆಂಕಟಾಚಲರವರು ಹೇಳುವುದೇನೆಂದರೆ, ಸರಕಾರಿ ಯೋಜನೆಗಳ ಲಾಭ ಪಡೆಯಲು ನಾಗರಿಕರು ನೌಕರರ ಕೈ ಬಿಸಿ ಮಾಡುವುದು ಅನಿವಾರ್ಯವಾಗಿದೆ ಎಂಬ ಅಂಶ ಇಂಡಿಯಾ ಫೆರೊನಿಕ್ ಸಂಸ್ಥೆ ನಡೆಸಿದ ಸಮೀಕ್ಷೆಯಿಂದ ಬಹಿರಂಗಗೊಂಡಿದೆ. ನಾನಾ ವಲಯಗಳಲ್ಲಿ ೫೭೭೧ ಪಿಂಚಣಿದಾರರನ್ನು ಸಂದರ್ಶಿಸಿ ಅವರ ಅಭಿಪ್ರಾಯವನ್ನು ಸಂಗ್ರಹಿಸಿ ಬಳಿಕ ಈ ನಿರ್ಣಯಕ್ಕೆ ಬರಲಾಗಿದೆ. ಪಿಂಚಣಿ ಅಗತ್ಯ ದಾಖಲೆ ಪಡೆಯಲು ಸಾರ್ವಜನಿಕರು ೫೦೨ರೂ ಖರ್ಚು ಮಾಡಿದ್ದಾರೆ. ಮೈಸೂರು ವಿಭಾಗದಲ್ಲಿ ಗರಿಷ್ಠ ೭೭೦ರೂ ಲಂಚ ನೀಡಿದ್ದಾರೆ. ಒಟ್ಟಾರೆ ಪಿಂಚಣಿ ಮಂಜೂರಾತಿ ಪಡೆಯಲು ಶೇಕಡ ೩೨ರಷ್ಟು ಮಂದಿ ಲಂಚ ಪಾವತಿಸಿದ್ದಾರೆ. ಸರಕಾರಿ ನೌಕರರ ಮನಸ್ಥಿತಿ ಬದಲಾಗುವವರೆಗೆ ಭ್ರಷ್ಟಾಚಾರಕ್ಕೆ ಕಡಿವಾಣ ಹಾಕುವುದು ಕಷ್ಟ. ಲಂಚದಿಂದ ಗ್ರಾಮೀಣ ಪ್ರದೇಶದ ಬಡವರು ತೀವ್ರ ತೊಂದರೆಗೆ ಒಳಗಾಗುತ್ತಿದ್ದಾರೆ. ಭ್ರಷ್ಟಾಚಾರ ನಿಯಂತ್ರಣಕ್ಕೆ ಕಾನೂನುಗಳಿದ್ದರೂ ಪ್ರಯೋಜನವಾಗುತ್ತಿಲ್ಲ. ಲಂಚದ ಆರೋಪ ಎದುರಾದರೆ ಅಂತಹ ಅಧಿಕಾರಿಗಳ ವಿರುದ್ಧ ಸಿವಿಲ್ ಹಾಗೂ ಕ್ರಿಮಿನಲ್ ವಿಚಾರಣೆ ಏಕಕಾಲಕ್ಕೆ ಆರಂಭವಾಗಬೇಕು. ದೇಶದ ದುರ್ದೈವ ಮತ್ತು ವ್ಯಂಗ್ಯವೆಂದರೆ, ಈ ಕ್ರಿಮಿನಲ್‌ಗಳೇ ನಮ್ಮ ದೇಶದ ಕಾನೂನನ್ನು ರೂಪಿಸುವವರು ಎಂಬುದು. ೧೬೧ ಎಂ.ಪಿ.ಗಳು (೩೦ ಪ್ರತಿಶತ) ಇಂದು ಕ್ರಿಮಿನಲ್ ಕೇಸಗಳನ್ನು ಎದುರಿಸುತ್ತಿದ್ದಾರೆ. ಅದರಲ್ಲಿ ೭೦ ಮಂದಿಯ ವಿರುದ್ಧ ಗಂಭಿರ

ಆರೋಪಗಳಿವೆ. ಹಾಗಂತ ಇನ್ನುಳಿದ ೭೦ ಪ್ರತಿಶತ ಎಂ.ಪಿ.ಗಳೇನು ಸಂಭಾವಿತರಲ್ಲ. ಸ್ವಹಿತಾಸಕ್ತಿಯ ವಿಷಯ ಬಂದಾಗಲಂತೂ ತಮ್ಮ ರಾಜಕೀಯ ಬೇಧವನ್ನು ಮರೆತು ಒಂದೇ ಬಳ್ಳಿಯ ಹೂಗಳಂತೆ ಇವರೆಲ್ಲ ವರ್ತಿಸುತ್ತಾರೆ. 'ಸ್ಥಳೀಯ ಪ್ರದೇಶದ ಅಭಿವೃದ್ಧಿಯ' ಹೆಸರಲ್ಲಿ ಇವರುಗಳ ಹುಂಡಿಗೆ ಬಂದು ಬೀಳುವ ಹಣದ ಪ್ರಮಾಣ ೧೯೯೩ಕ್ಕೆ ಹೋಲಿಸಿದರೆ ಈಗ ಐದು ಪಟ್ಟು ಹೆಚ್ಚಾಗಿದೆ. ಸುಮಾರು ೨ ಕೋಟಿಗೆ ಇದ್ದ ಆ ಮೊತ್ತ ಈಗ ೫ ಕೋಟಿ ಆಗಿದೆ. ಹಾಗಂತ ಈ ಹಣವೆಲ್ಲ ಸದ್ಬಳಕೆ ಆಗುತ್ತಿದೆ ಎಂದು ಕೊಳ್ಳುವುದು ಮೂರ್ಖತನವಾದೀತು. ಏಕೆಂದರೆ ಇದರಲ್ಲಿ ಬಹುಪಾಲು ಮೊತ್ತ ನಿಯಮಗಳಿಗೆ ವಿರುದ್ಧವಾಗಿ ರಾಜಕಾರಣಿಗಳ ಖಾಸಗಿ ಯೋಜನೆಗಳಿಗೆ ವಿನಿಯೋಗವಾಗುತ್ತದೆ. ಇದು ಸಮೂಹ ಗುಣವಾಗಿದ್ದು ಒಂದು ಚುನಾವಣೆ ಅಥವಾ ಸರ್ಕಾರದ ಬದಲಾವಣೆಯಿಂದ ಈ ಗುಣ ಬದಲಾಗುವಂಥದ್ದಲ್ಲ. ರಾಜಕೀಯ ವೈಖರಿ ಜನತೆಯ ವಿರೋಧಿಯಾಗಿಯೇ ಮುಂದುವರಿಯಲಿದೆ. ಬಂಗಾಳಿಗಳು ಕಮ್ಯುನಿಷ್ಟ್ ಪಕ್ಷದ ಬದಲು ತೃಣಮೂಲಕ್ಕೆ ಜಾಗ ಕೊಟ್ಟಾಗ ಏನಾಯಿತು? ಉತ್ತರ ಪ್ರದೇಶದಲ್ಲಿ ಮಾಯಾವತಿಯ ಸರ್ಕಾರ ಉರುಳಿಬಿದ್ದು ಮುಖ್ಯ ಪೀಠದಲ್ಲಿ ಯಾದವರು ಬಂದು ಕುಳಿತಾಗ ಏನಾಯಿತು? ಪಕ್ಷಗಳು ಬದಲಾದವಷ್ಟೇ ಹೊರತು ಹಳವಂಡಗಳಲ್ಲಿ ಬದಲಾವಣೆಯಾಗಲಿಲ್ಲ.

ಹಾಲಿ ಲೋಕಾಯುಕ್ತ ವೈ.ಭಾಸ್ಕರರಾವರ ಹೇಳಿಕೆಯ ವಿವರವೇನೆಂದರೆ, ರಾಜಕೀಯ ಪಕ್ಷಗಳ ಭ್ರಷ್ಟಾಚಾರ ಮೊದಲನೆಯ ಸ್ಥಾನದಲ್ಲಿದ್ದರೆ, ಪೊಲೀಸ್ ಇಲಾಖೆಯ ಭ್ರಷ್ಟಾಚಾರ ಎರಡನೆಯ ಸ್ಥಾನದಲ್ಲಿದೆ. ಸರ್ಕಾರಿ ಅಧಿಕಾರಿಗಳು, ನೌಕರರು ಶಾಸಕರು, ಸಂಸದರು ಹೆಚ್ಚಿನ ಭ್ರಷ್ಟಾಚಾರದಲ್ಲಿ ತೊಡಗಿದ್ದಾರೆ. ಅತಿ ಕಡಿಮೆ ಭ್ರಷ್ಟಾಚಾರ ಮಿಲಿಟರಿಯಲ್ಲಿದೆ ಎಂದು ಅವರ ವಿವರಣೆ. ಭ್ರಷ್ಟಾಚಾರ ಎನ್ನುವುದು ವ್ಯಾಪಕವಾಗಿ ಎಲ್ಲ ಕ್ಷೇತ್ರಗಳನ್ನು ಹಬ್ಬಿದ್ದು, ಅದನ್ನು ತೊಡೆದು ಹಾಕಲು ಎಲ್ಲರೂ ತಮ್ಮ ವೃತ್ತಿಗೆ ನಿಷ್ಟರಾಗಿ ಸೇವಾ ಭಾವನೆ ಬದ್ಧತೆಯಿಂದ ಕೆಲಸ ಮಾಡಬೇಕಾಗಿದೆ. ದೇಶದ ೧೨೦ ಕೋಟಿ ಜನಸಂಖ್ಯೆಯಲ್ಲಿ ೩೦ ವರ್ಷ ಒಳಪಟ್ಟವರೇ ಶೇಕಡ ೫೦ ಸಂಖ್ಯೆಯಲ್ಲಿದ್ದಾರೆ. ಇಷ್ಟು ದೊಡ್ಡ ಜನಸಂಖ್ಯೆ ಇದ್ದರೂ ೧೮೦ ದಶಲಕ್ಷ ಮನೆಗಳಿವೆ. ಶೇಕಡ ೪೦ ಕುಟುಂಬಗಳು ಈಗಲೂ ಒಂದೇ ರೂಮ್‌ನಲ್ಲಿ ವಾಸವಾಗಿವೆ. ಅಚ್ಚರಿ ಎಂದರೆ ಶಾಲಾ, ಕಾಲೇಜು ಆಸ್ಪತ್ರೆಗಳಿಗಿಂತ ದೇವಸ್ಥಾನ, ಮಸೀದಿ, ಚರ್ಚುಗಳು ೨.೪ ದಶಲಕ್ಷದಷ್ಟು ತಲುಪಿವೆ. ಜನಸಂಖ್ಯೆಯನುಗುಣವಾಗಿ ಇನ್ನೂ ದೇಶ ಅಭಿವೃದ್ಧಿ ಕಾಣಲು ಸಾಧ್ಯವಾಗಿಲ್ಲ . ಕರ್ನಾಟಕದಲ್ಲಿ ಈಗ ಕೇವಲ ೫.೫೩ ಲಕ್ಷ ಜನರು ಮಾತ್ರ ಸರ್ಕಾರಿ ನೌಕರರಿದ್ದಾರೆ. ಖಾಲಿ ಇರುವ ೧.೪೦ ಲಕ್ಷ ಹುದ್ದೆಗಳನ್ನು ಸರ್ಕಾರ ತುಂಬಿಲ್ಲ. ಅದ್ದರಿಂದ ನೌಕರರ ಮೇಲೆ ಕೆಲಸದ ಒತ್ತಡ ಹೆಚ್ಚುತ್ತಿದ್ದು, ಭ್ರಷ್ಟಾಚಾರಕ್ಕೆ ಪರೋಕ್ಷವಾಗಿ ದಾರಿ ಮಾಡಿಕೊಟ್ಟಂತಾಗಿದೆ.

ಹಾಲಿಯಿರುವ ವರ್ಗಾವಣೆ ನೀತಿಯಿಂದ ಸರ್ಕಾರಿ ನೌಕರರು ರೋಸಿ ಹೋಗಿದ್ದಾರೆ. ವರ್ಗಾವಣೆಗಾಗಿಯೇ ಪ್ರತ್ಯೇಕ ಕಾಯ್ದೆಯನ್ನು ರೂಪಿಸಬೇಕು.

ರಾಜ್ಯದ ಪ್ರತಿ ನಾಗರಿಕನು ಸರಾಸರಿ ಪ್ರತಿವರ್ಷ ಲಂಚದ ರೂಪದಲ್ಲಿ ಸರ್ಕಾರಿ ಅಧಿಕಾರಿಗಳಿಗೆ ರೂ.೨೦೦೦ ಹಣ ನೀಡುತ್ತಿದ್ದಾನೆ ಎಂದು ಲೋಕಾಯುಕ್ತ ನ್ಯಾಯಮೂರ್ತಿ ವೈ. ಭಾಸ್ಕರರಾವ್ ಹೇಳುತ್ತಾರೆ. ಈ ಸಮೀಕ್ಷೆಯಲ್ಲಿ ಈಗ ಹೊರಬಂದಿರುವ ಸಾವಿರಾರು ಕೋಟಿ ಮೊತ್ತದ ಹಗರಣಗಳು ಸೇರಿಲ್ಲ. ಕಳೆದೊಂದು ದಶಕದಲ್ಲಿ ಭ್ರಷ್ಟಾಚಾರದಿಂದ ಸುಮಾರು ರೂ.೫.೫೦ ಲಕ್ಷ ಕೋಟಿ ಹಣ ಪೋಲಾಗಿದೆ. ಇವೆಲ್ಲ ಲಂಚದ ಹಣಗಳು ವಿದೇಶಿ ಬ್ಯಾಂಕಗಳಿಗೆ ರವಾನೆಯಾಗಿದೆ. ವಿಪರ್ಯಾಸ ಎಂದರೆ ಸಾರ್ವಜನಿಕರ ಜೀವನಕ್ಕೆ ಅಗತ್ಯವಗಿರುವ ಸರ್ಕಾರಿ ಸೇವೆಗಳಲ್ಲಿಯೇ ಅತಿ ಹೆಚ್ಚು ಭ್ರಷ್ಟಾಚಾರ ನಡೆಯುತ್ತಿದೆ. ಸರ್ಕಾರಿ ನೌಕರರು ಈ ಬಗ್ಗೆ ಕಾಳಜಿ ತೋರಬೇಕಿದೆ. ಪಿಂಚಣಿ, ಆರೋಗ್ಯ ಸೇವೆ, ಪಡಿತರ ಹಂಚಿಕೆಯಲ್ಲಿ ವ್ಯಾಪಕ ಭ್ರಷ್ಟಾಚಾರವಾಗುತ್ತಿದೆ. ಗ್ರಾಮ ಮಟ್ಟದಲ್ಲಿ ಇದನ್ನು ನೋಡಿದಾಗ ಸಣ್ಣ ಪ್ರಮಾಣದ ಹಣದಂತೆ ಅನಿಸಬಹುದು. ಅದರೆ ರಾಜ್ಯಮಟ್ಟದ ಅಂಕಿ ಸಂಖ್ಯೆಯನ್ನು ತುಲನೆ ಮಾಡಿದಾಗ ಇದು ಕೋಟಿಗಟ್ಟಲೇ ಮೊತ್ತವಾಗುತ್ತದೆ. ರಾಜ್ಯದ ಬೊಕ್ಕಸಕ್ಕೆ ಹಾಗೂ ಬಡಜನರಿಗೆ ಸರ್ಕಾರಿ ನೌಕರರು ಹೀಗೆ ಮೋಸ ಮಾಡುವುದರಿಂದ ಸಮಸ್ಯೆಗಳು ಮತ್ತಷ್ಟು ಉಲ್ಬಣವಾಗುತ್ತವೆ. ಈ ನಿಟ್ಟಿನಲ್ಲಿ ಪ್ರತಿಯೊಬ್ಬರು ಗಂಭೀರವಾಗಿ ಚಿಂತನೆ ಮಾಡಬೇಕು.

ತಾವು ಏನೇ ಕುಕೃತ್ಯ ಎಸಗಿದರೂ ತಮಗಿರುವ ಅಧಿಕಾರವನ್ನು ಬಳಸಿಕೊಂಡು ಕಾನೂನಿನ ಛಡಿಯೇಟಿನಿಂದ ತಪ್ಪಿಸಿಕೊಳ್ಳಬಹುದು ಎಂಬ ಗ್ರಹಿಕೆ ಹಿಂದೊಮ್ಮೆ ಅಧಿಕಾರಸ್ಥ ರಾಜಕಾರಣಿಗಳು, ಪ್ರಭಾವಿಗಳಲ್ಲಿ ಮನೆ ಮಾಡಿತ್ತು. ಆದರೆ ಕಾನೂನಿನ ಮುಂದೆ ಎಲ್ಲರೂ ಸಮಾನರು, ಯಾರೂ ದೊಡ್ಡವರಲ್ಲ ಎಂಬುದನ್ನು ಮನವರಿಕೆ ಮಾಡಿಕೊಡುವಂಥ ಒಂದೊಂದೇ ತೀರ್ಪುಗಳು ಇತ್ತೀಚೆಗೆ ಹೊರಬರುತ್ತಿವೆ. ಹೆಚ್ಚೆಚ್ಚು ಶಿಕ್ಷೆಗಳು ಕೂಡ ಪ್ರಕಟಗೊಳ್ಳುತ್ತಿವೆ.

ಪಿಂಚಣಿ ಸೇವೆ, ಪಡಿತರ ಅವ್ಯವಸ್ಥೆ ಹಾಗೂ ಆರೋಗ್ಯ ಸೇವೆಗಳಲ್ಲಿ ಭ್ರಷ್ಟಾಚಾರ ಮೀತಿ ಮೀರಿದ್ದು, ಸೇವೆ ಪಡೆಯಲು ಬರುವ ಜನ ಸಾಮಾನ್ಯರಿಂದ ಸರಕಾರಿ ನೌಕರರು ದಿನನಿತ್ಯ ಲಂಚಕ್ಕಾಗಿ ಪೀಡಿಸುವುದು ಸಾಮಾನ್ಯ. ಕೈಗೆ ಹಣ ಕೊಟ್ಟರೆ ಮಾತ್ರ ಸೇವೆ ಲಭ್ಯ.ಇದು ಲಂಚಗುಳಿತನದ ಕುರಿತು ರಾಜ್ಯದ ನಾಲ್ಕು ಕಂದಾಯ ವಿಭಾಗಗಳ ಆಯ್ದ ಎಂಟು ಜಿಲ್ಲೆಗಳಲ್ಲಿ ನಡೆಸಿದ ಸಮೀಕ್ಷೆಯಿಂದ ಬೆಳಕಿಗೆ ಬಂದಿರುವ ಅಂಶ. ಸರಕಾರಿ ಕಚೇರಿಗಳಲ್ಲಿ ಭ್ರಷ್ಟಾಚಾರ ನಿಯಂತ್ರಣಕ್ಕೆ ಬರುವ ಬದಲಿಗೆ ಸರಕಾರದ ನಾನಾ ಯೋಜನೆಗಳನ್ನು ಪಡೆಯಲು ಬರುವ ಫಲಾನುಭವಿಗಳನ್ನು ಸುಲಿಗೆ ಮಾಡಲಾಗುತ್ತಿದೆ. ಭ್ರಷ್ಟಾಚಾರ ಇಳಿಮುಖವಾಗುವ ಬದಲಿಗೆ ದಿನೇ ದಿನೇ ಅದರ ಪ್ರಮಾಣ

ಏರಿಕೆಯಾಗುತ್ತಿದೆ. ಈ ಮಾಹಿತಿ ಬಹಿರಂಗ ಪಡಿಸಿದವರು ಬೇರೆ ಯಾರೂ ಅಲ್ಲ. ರಾಜ್ಯದಲ್ಲಿ ಭ್ರಷ್ಟಾಚಾರಕ್ಕೆ ಕಡಿವಾಣ ಹಾಕುವ ಹೊಣೆ ಹೊತ್ತಿರುವ ಲೋಕಾಯುಕ್ತ ನ್ಯಾ.ವೈ. ಭಾಸ್ಕರರಾವ್. ವೃದ್ಧರು, ವಿಕಲಚೇತನರು, ಅಬಲೆಯರಿಗೆ ಆರ್ಥಿಕ ನೆರವು ನೀಡಲು ಸರಕಾರ ಸಾಮಾಜಿಕ ಪಿಂಚಣಿ ಯೋಜನೆ ಜಾರಿಗೆ ತಂದಿದೆ. ಈ ಸೌಲಭ್ಯ ಪಡೆಯಲು ಜನರು ಸರಕಾರಿ ಕಚೇರಿಗಳಿಗೆ ಅಲೆಯಬೇಕು. ಲಂಚ ಕೊಟ್ಟರೆ ಯೋಜನೆಗೆ ಹೆಸರು ಸೇರ್ಪಡೆಗೊಳಿಸಲಾಗುತ್ತದೆ. ಇಲ್ಲದಿದ್ದರೆ ನಾನಾ ಕಾರಣ ನೀಡಿ ಅಲೆದಾಡಿಸಲಾಗುತ್ತದೆ.ಇಂತಹ ಕೆಟ್ಟ ಚಾಳಿಯನ್ನು ಸಾಮಾಜಿಕ ಪಿಂಚಣಿ ಸೇವೆ ನೀಡುವ ನೌಕರರು ರೂಢಿ ಮಾಡಿಕೊಂಡಿದ್ದಾರೆ. ಪಿಂಚಣಿ, ಮಂಜೂರಾತಿಗಾಗಿ ಗುಲ್ಬರ್ಗ ವಲಯದಲ್ಲಿ ಗರಿಷ್ಠ ೮೧೧ರೂ. ಬೆಳಗಾವಿ ವಲಯದಲ್ಲಿ ೭೩೫ರೂ ಮೈಸೂರು ವಲಯದಲ್ಲಿ ೬೦೦ ರೂ.ಮತ್ತು ಬೆಂಗಳೂರು ವಲಯದಲ್ಲಿ ೨೯೭ ರೂ ಲಂಚ ಪಡೆಯಲಾಗುತ್ತಿದೆ. ಸಮೀಕ್ಷೆಯಿಂದ ವೇದ್ಯವಾಗಿರುವ ಗಮನಾರ್ಹ ಅಂಶವೆಂದರೆ, ಸಿಬ್ಬಂದಿಯ ಬೇಡಿಕೆ ಮೇರೆಗೆ ಲಂಚ ನೀಡಿರುವುದು. ಬಡತನ ರೇಖೆಗಿಂತ ಕೆಳಗಿನವರೆಗೆ ಜೀವನ ಧಾರವಾಗಿರುವ ಪಡಿತರ ವ್ಯವಸ್ಥೆಯಲ್ಲೂ ವ್ಯಾಪಕ ಲಂಚಗುಳಿತನವಿದೆ. ಅನ್ನಭಾಗ್ಯ ಯೋಜನೆ ಜಾರಿಗೆ ಬರುವ ಮುನ್ನ ಸರಕಾರ ೩ರೂಗೆ ಒಂದು ಕೆ.ಜಿ ಅಕ್ಕಿಯನ್ನು ನೀಡುತ್ತಿತ್ತು. ಅದು ಜನಸಾಮಾನ್ಯರಿಗೆ ತಲುಪುವ ಹೊತ್ತಿಗೆ ೩.೪೧ರೂ ಆಗಿರುತ್ತಿತ್ತು. ಅಂದರೆ ಲಂಚ ೪೧ ಪೈಸೆ ಕೊಡಬೇಕಾಗಿತ್ತು. ಅದೇ ರೀತಿ ಗೋಧಿಗೆ ಮೂಲಬೆಲೆಗಿಂತ ೧೬ ಪೈಸೆ ಲಂಚ, ಸೀಮೆ ಎಣ್ಣೆಗೆ ೭೧ ಪೈಸೆ ಲಂಚ ನಿಡಬೇಕಾಗಿತ್ತು.

ರಾಜ್ಯದಲ್ಲಿ ೪೪.೯ ಲಕ್ಷ ಬಿಪಿಎಲ್ ಕುಟುಂಬಗಳಿಗೆ ೯೭.೭ ಲಕ್ಷ ಪಡಿತರ ಕಾರ್ಡ, ೭೫.೩ ಲಕ್ಷ ಎಪಿಎಲ್ ಕುಟುಂಬಗಳಿಗೆ ೫೩ ಲಕ್ಷ ಕಾರ್ಡುಗಳನ್ನು ನೀಡಲಾಗಿದೆ. ಇದರಿಂದ ೧೪೫.೮ ಕೋಟಿ ನಷ್ಟವಾಗುತ್ತಿದೆ. ಪ್ರಾಥಮಿಕ ಆರೋಗ್ಯ ಸೇವೆಗಳಾದ ಚಿಕಿತ್ಸೆ, ಔಷಧ ಹಾಗೂ ಪ್ರಯೋಗಾಲಯ ಸೇವೆ ಪಡೆಯಲು ಸಾರ್ವಜನಿಕರು ಯಾವುದೇ ದುಡ್ಡು ನೀಡಬೇಕಾಗಿಲ್ಲ. ಆದರೂ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಲಂಚಗುಳಿತನ ತಾಂಡವವಾಡುತ್ತಿದೆ. ಬಹುತೇಕ ಸಾರ್ವಜನಿಕರು ೯೪ರೂಗಳನ್ನು ಚಿಕಿತ್ಸೆಗಾಗಿ ಲಂಚದ ರೂಪದಲ್ಲಿ ನೀಡುತ್ತಾರೆ. ಅದೇ ರೀತಿ ಔಷಧ ಪಡೆಯಲು ೯೦ರೂ ಮತ್ತು ಪ್ರಯೋಗಾಲಯ ಸೇವೆಗೆ ೮೯ರೂ ಲಂಚ ನೀಡುತ್ತಾರೆ.

ಅಧ್ಯಯನದಿಂದ ದೃಢಪಟ್ಟ ಇನ್ನೊಂದು ಅಂಶವೆಂದರೆ, ವಾಹನ ಚಾಲಕರು ಪ್ರತಿವರ್ಷ ಸಂಚಾರಿ ಪೊಲೀಸರು ಮತ್ತು ಸಾರಿಗೆ ಇಲಾಖೆ ಅಧಿಕಾರಿಗಳಿಗೆ ಕೊಡುವ ಲಂಚ ಬರೋಬ್ಬರಿ ೨೨೦೦ ಕೋಟಿ ರೂ. ಚೆಕ್ ಪೋಸ್ಟ್‌ಗಳಲ್ಲಿ ವಾಹನಗಳನ್ನು ನಿಲ್ಲಿಸುವುದೇ ಲಂಚ ವಸೂಲಿ ಮಾಡಲು ಅಧಿಕಾರಿಗಳ ಲಂಚಗುಳಿತನಕ್ಕೆ ಅತಿ ಹೆಚ್ಚು ಬಲಿಪಶುಗಳಾಗುವುದು ಟ್ರಕ್ ಚಾಲಕರು.

ಶೇಕಡ ೬೦ ಪ್ರಕರಣಗಳಲ್ಲಿ ಸಂಚಾರಿ ಪೊಲೀಸರು ಮತ್ತು ಸಾರಿಗೆ ಇಲಾಖೆಯ ಅಧಿಕಾರಿಗಳು ವಾಹನಗಳನ್ನು ಯಾವುದೇ ಕಾರಣವಿಲ್ಲದೇ ತಡೆದು ನಿಲ್ಲಿಸಿ ಲಂಚ ವಸೂಲಿ ಮಾಡುತ್ತಾರೆ. ಇದರಲ್ಲಿ ಶೇಕಡ ೯೦ರಷ್ಟು ಮೊತ್ತ ಹೋಗುವುದು ಪೊಲೀಸರಿಗೆ ಮತ್ತು ಸಾರಿಗೆ ಇಲಾಖೆಯ ಅಧಿಕಾರಿಗಳಿಗೆ.

ಅಧ್ಯಯನದಲ್ಲಿ ಕಂಡುಬಂದ ಕುತುಹೂಲಕಾರಿ ಅಂಶಗಳು

- ಶೇಕಡ ೬೦ ಪ್ರಕರಣಗಳಲ್ಲಿ ಅಧಿಕಾರಿಗಳು ಯಾವ ಕಾರಣಕ್ಕೆ ವಾಹನ ನಿಲ್ಲಿಸಿದ್ದೇವೆ ಎಂದು ಹೇಳುವುದಿಲ್ಲ. ಬದಲಾಗಿ ನೇರವಾಗಿ ಲಂಚ ಕೇಳುತ್ತಾರೆ.
- ಭ್ರಷ್ಟಾಚಾರದ ಶೇಕಡವಾರು ಇಂತಿದೆ: ಪೊಲೀಸರು ಶೇಕಡ ೪೫, ಆರ್‌ಟಿಓ ಶೇಕಡ ೪೩ ಮತ್ತು ಇತರರು ಶೇಕಡ ೧೨.

ಭ್ರಷ್ಟಾಚಾರ, ಅಧಿಕಾರ ದುರ್ಬಳಕೆ ಮತ್ತಿತರ ಆರೋಪ ಎದುರಿಸುತ್ತಿರುವ ಸರ್ಕಾರಿ ನೌಕರರು ಮತ್ತು ಚುನಾಯಿತ ಪ್ರತಿನಿಧಿಗಳ ವಿರುದ್ಧ ವಿಚಾರಣೆಗೆ ಅನುಮತಿ ನೀಡುವ ವಿಷಯದಲ್ಲಿ ಸರ್ಕಾರ ವಿಳಂಬ ಧೋರಣೆ ಅನುಸರಿಸುತ್ತಿರುವ ಕುರಿತು ಅಸಮಾಧಾನ ವ್ಯಕ್ತಪಡಿಸಿರುವ ಲೋಕಾಯುಕ್ತ ನ್ಯಾಯಮೂರ್ತಿ ವೈ. ಭಾಸ್ಕರ ರಾವ್ ಅವರು, ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ಪತ್ರ ಬರೆದು ಬಿಸಿ ಮುಟ್ಟಿಸಿದ್ದಾರೆ. ಡಿಸೆಂಬರ್ ೩೧, ೨೦೧೩ರ ಅಂತ್ಯಕ್ಕೆ ಒಟ್ಟು ೯೩ ಪ್ರಕರಣಗಳು ಸರ್ಕಾರದ ಅನುಮತಿಗೆ ಕಾದಿವೆ. ಲಂಚ ಪಡೆಯುತ್ತಿರುವಾಗ ಸಿಕ್ಕಿ ಬಿದ್ದ ಆರೋಪಕ್ಕೆ ಸಂಬಂಧಿಸಿದಂತೆ ೫೮ ಪ್ರಕರಣಗಳಲ್ಲಿ ಆರೋಪಿಗಳ ವಿಚಾರಣೆಗೆ ಸರ್ಕಾರ ಅನುಮತಿ ನೀಡಬೇಕಿದೆ. ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿರುವ ಆರೋಪ ಎದುರಿಸುತ್ತಿರುವ ೨೧ ಸರ್ಕಾರಿ ಅಧಿಕಾರಿಗಳ ವಿರುದ್ಧ ಆರೋಪಪಟ್ಟಿ ಸಲ್ಲಿಕೆಗೆ ಅನುಮತಿ ಕೋರಿರುವ ಪ್ರಸ್ತಾವಗಳನ್ನು ಸರ್ಕಾರ ತನ್ನ ಬಳಿಯೇ ಇರಿಸಿಕೊಂಡಿದೆ. ಅಧಿಕಾರ ದುರ್ಬಳಕೆ ಆರೋಪಕ್ಕೆ ಸಂಬಂಧಿಸಿದ ೧೪ ಪ್ರಕರಣಗಳಿಗೆ ಅನುಮತಿ ನೀಡುವ ವಿಚಾರದಲ್ಲೂ ಸರ್ಕಾರ ಸುಮ್ಮನಿದೆ. ೨೫ ಪ್ರಕರಣಗಳಲ್ಲಿ ಆರೋಪ ಪಟ್ಟಿ ಸಲ್ಲಿಸಲು ಅನುಮತಿ ನೀಡುವಂತೆ ಕೋರಿ ಲೋಕಾಯುಕ್ತ ಪೊಲೀಸರು ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಿ ಒಂದು ವರ್ಷಕ್ಕೂ ಹೆಚ್ಚು ಅವಧಿ ಮುಗಿದಿದೆ. ೨೪ ಪ್ರಕರಣಗಳಲ್ಲಿ ಪ್ರಸ್ತಾವ ಸಲ್ಲಿಕೆಯಾಗಿ ೬ ರಿಂದ ೧೨ ತಿಂಗಳಾಗಿದೆ. ೩೩ ಪ್ರಕರಣಗಳಲ್ಲಿ ಆರೋಪಪಟ್ಟಿ ಸಲ್ಲಿಸಲು ಅನುಮತಿ ಕೋರಿ ತನಿಖಾಧಿಕಾರಿಗಳು ಪ್ರಸ್ತಾವ ಸಲ್ಲಿಸಿ ೩ ರಿಂದ ೬ ತಿಂಗಳುಗಳಾಗಿವೆ. ೧೩ ಪ್ರಕರಣಗಳಲ್ಲಿ ಆರೋಪಪಟ್ಟಿ ಸಲ್ಲಿಸಲು ಒಪ್ಪಿಗೆ ನೀಡುವಂತೆ ಕೇಳಿ ಪ್ರಸ್ತಾವಗಳು ಮೂರು ತಿಂಗಳಿಂದ ಈಚೆಗೆ ಸರ್ಕಾರಕ್ಕೆ ಸಲ್ಲಿಕೆಯಾಗಿವೆ.ಸರ್ಕಾರ ವಿಳಂಬ

ನೀತಿ ಅನುಸರಿಸುತ್ತಿರುವುದಕ್ಕೆ ಲೋಕಾಯುಕ್ತ ನ್ಯಾಯಮೂರ್ತಿ ಡಾ. ವೈ. ಭಾಸ್ಕರರಾವ ಅವರು ಅಸಮಧಾನಗೊಂಡಿದ್ದಾರೆ. ನೇರವಾಗಿ ಸರ್ಕಾರದ ಮುಖ್ಯ ಕಾರ್ಯದರ್ಶಿ ಕೌಶಿಕ್ ಮುಖರ್ಜಿ ಅವರಿಗೆ ಪತ್ರ ಬರೆದುತಮ್ಮ ಅಸಮಾಧಾನ ಹೊರಹಾಕಿದ್ದಾರೆ. ಆರೋಪಿತ ನೌಕರರು ಸಕ್ಷಮ ಪ್ರಾಧಿಕಾರಿಗಳಿಗೆ ನೇರವಾಗಿ ಮನವಿ ಸಲ್ಲಿಸಿ ಲೋಕಾಯುಕ್ತರ ಪ್ರಸ್ತಾವವನ್ನು ತಿರಸ್ಕರಿಸುವಂತೆ ಕೋರಿದ್ದಾರೆ. ಈ ಮನವಿಗಳನ್ನೇ ವಿಳಂಭಧೋರಣೆಗೆ ಪೂರಕವಾಗಿ ಬಳಸಿಕೊಳ್ಳಲಾಗುತ್ತಿದೆ.

ಆರೋಪಿತ ಸಾರ್ವಜನಿಕ ನೌಕರರ ವಿರುದ್ಧ ವಿಚಾರಣೆ ಆರಂಭಿಸಲು ಅನುಮತಿ ನೀಡುವಂತೆ ಕೋರಿ ತನಿಖಾ ಸಂಸ್ಥೆಗಳು ಸಲ್ಲಿಸುವ ಪ್ರಸ್ತಾವವನ್ನು ಮೂರು ತಿಂಗಳೊಳಗೆ ವಿಲೇವಾರಿ ಮಾಡಬೇಕು ಎಂದು ಸುಪ್ರೀಂಕೋರ್ಟ್ ಹಲವಾರು ಬಾರಿ ಹೇಳಿದೆ. ೧೯೯೮ರಲ್ಲಿ ವಿನೀತ ನಾರಾಯಣ್ ಮತ್ತು ಕೇಂದ್ರ ಸರ್ಕಾರದ ನಡುವಣ ಪ್ರಕರಣದ ಆದೇಶದಲ್ಲಿ ಸುಪ್ರಿಕೋರ್ಟ ಈ ವಿಷಯವನ್ನು ಸ್ಪಷ್ಟ ಪಡಿಸಿತ್ತು. ಆ ನಂತರ ಹಲವು ಬಾರಿ ನ್ಯಾಯಾಲಯ ಈ ಮಾತನ್ನು ಪುನರುಚ್ಚರಿಸಿತ್ತು. ಸರ್ಕಾರಿ ಅಧಿಕಾರಿಗಳು ಮತ್ತು ಚುನಾಯಿತ ಪ್ರತಿನಿಧಿಗಳ ವಿರುದ್ಧ ವಿಚಾರಣೆಗೆ ಅನುಮತಿ ನೀಡುವ ಪ್ರಸ್ತಾವಗಳನ್ನು ಮೂರು ತಿಂಗಳೊಳಗೆ ವಿಲೇವಾರಿ ಮಾಡಬೇಕು ಎಂದು ಸೂಚಿಸಿ ೨೦೧೧ರಲ್ಲಿ ಆಗಿನ ಮುಖ್ಯ ಕಾರ್ಯದರ್ಶಿ ಎಸ್.ವಿ ರಂಗನಾಥ್ ಅವರು ಎಲ್ಲ ಇಲಾಖೆಗಳ ಮುಖ್ಯಸ್ಥರಿಗೆ ಸುತ್ತೋಲೆ ಹೊರಡಿಸಿದ್ದರು. ಈ ಸುತ್ತೋಲೆಯಲ್ಲೂ ವಿನೀತ ನಾರಾಯಣ ಪ್ರಕರಣದಲ್ಲಿ ಸುಪ್ರಿಂ ಕೋರ್ಟ ನೀಡಿರುವ ಆದೇಶವನ್ನೂ ನೆನೆಪಿಸಿದ್ದರು

೫.೫. ಸಾಮಾಜಿಕ ಪರಿಣಾಮಗಳ ವಿಶ್ಲೇಷಣೆ

೧. ಲಂಚ ಪಡೆಯುವವನಲ್ಲಿ ಹಾಗೂ ಕೊಡುವವನಲ್ಲಿ ನೈತಿಕತೆ ಹಾಗೂ ಪ್ರಾಮಾಣಿಕತೆ ಕ್ಷೀಣಿಸುತ್ತದೆ. ಅಲ್ಲದೆ ಅವರಲ್ಲಿರುವ ಒಳ್ಳೆಯ ಗುಣವನ್ನು ನಾಶಮಾಡುತ್ತದೆ,

೨. ಕಾನೂನನ್ನು ಕೈಗೆತ್ತಿಕೊಳ್ಳುವ ಶಕ್ತಿ ಹಾಗೂ ತಮಗೆ ಬೇಕಾದ ರೀತಿಯಲ್ಲಿ ಕಾನೂನನ್ನು ತಿರುಚುವ ಸಾಮರ್ಥ್ಯ ಭ್ರಷ್ಟರಿಗೆ ಇರುವುದರಿಂದ ಸಮಾಜದಲ್ಲಿ ಅರಾಜಕತೆ ಮೂಡುತ್ತದೆ.

೩. ಭ್ರಷ್ಟಾಚಾರವು ಅದಕ್ಷತೆ, ಸೋಮಾರಿತನವನ್ನು ಬೆಳೆಸಿ ಆಡಳಿತದ ಎಲ್ಲಾ ಕ್ಷೇತ್ರಗಳಲ್ಲಿಯೂ ಅಶಿಸ್ತನ್ನು ಉಂಟುಮಾಡಿ, ಜನಸಾಮಾನ್ಯನ ಜೀವನವನ್ನು ದುಃಖಮಯಗೊಳಿಸುತ್ತದೆ. ಸಾರ್ವಜನಿಕ ಕಾರ್ಯಗಳು ಹಿಮ್ಮುಖಗೊಳ್ಳುತ್ತವೆ. ಲಂಚ ಪಡೆಯುವ ನೌಕರ ಅಥವಾ ಅಧಿಕಾರಿ ಜನರಿಂದ ಸದಾ ಹಣದ ನಿರೀಕ್ಷೆಯನ್ನೇ ಹೊಂದಿರುತ್ತಾನೆ. ಇಂತಹ ನೌಕರರಲ್ಲಿ ಕ್ರಿಯಾಶೀಲತೆಗೆ

ಅವಕಾಶವಿರುವುದಿಲ್ಲ, ಜನಸಾಮಾನ್ಯರ ದೃಷ್ಟಿಯಲ್ಲಿ ಅಧಿಕಾರಿಗಳ ಹಾಗೂ ಸರ್ಕಾರದ ವಿಶ್ವಾಸಾರ್ಹತೆಯನ್ನು ಕಡಿಮೆಗೊಳಿಸುತ್ತದೆ,

೪. ಭ್ರಷ್ಟಾಚಾರದ ಆರೋಪದ ಮೇಲೆ ಹಲವು ಮಂತ್ರಿಗಳು ಹಾಗೂ ಮುಖ್ಯಮಂತ್ರಿಗಳು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿರುವ ನಿದರ್ಶನಗಳು ನಮ್ಮಲ್ಲಿ ಸಾಕಷ್ಟು ಇವೆ, ಈ ಘಟನೆಗಳು ಮೇಲಿಂದ ಮೇಲೆ ಪುನರಾವರ್ತನೆಯಾಗುವುದರಿಂದ ದೇಶದಲ್ಲಿ ರಾಜಕೀಯ, ಆರ್ಥಿಕ ಹಾಗೂ ಆಡಳಿತಾತ್ಮಕ ಅರಾಜಕತೆ ಉಂಟಾಗುತ್ತದೆ. ಹಲವಾರು ಜನರ ರಾಜಕೀಯ ಜೀವನವೇ ಕೊನೆಗೊಳ್ಳುತ್ತದೆ.

೫. ಭ್ರಷ್ಟಾಚಾರದ ಹಾವಳಿಯಿಂದ ಸರ್ಕಾರಿ ಸವಲತ್ತುಗಳನ್ನು ಬಹುಪಾಲು ಲಂಚಕೊಡುವ ಸಾಮರ್ಥ್ಯವಿರುವ ಶ್ರೀಮಂತರೇ ಪಡೆಯುತ್ತಾರೆ. ಬಡವನಿಗೆ ಲಂಚ ಕೊಡುವ ಸಾಮರ್ಥ್ಯವಿರುವುದಿಲ್ಲ. ಹೀಗಾಗಿ ಸರ್ಕಾರದ ಯಾವ ಸವಲತ್ತುಗಳು ಅವನಿಗೆ ಸುಲಭವಾಗಿ ದೊರೆಯುವುದಿಲ್ಲ. ಪರಿಣಾಮವಾಗಿ ಬಡವ-ಶ್ರೀಮಂತನೆಂಬ ತಾರತಮ್ಯ ಹೆಚ್ಚುತ್ತದೆ,

೬. ಲಂಚ ರುಷುವತ್ತುಗಳನ್ನು ಪಡೆದು ಸಿಕ್ಕಿ ಹಾಕಿಕೊಂಡಾಗ ಸಮಾಜದಲ್ಲಿ ಘನತೆ ಹಾಗೂ ಗೌರವ ಕಡಿಮೆಯಾಗುತ್ತದೆ. ಮಾಧ್ಯಮಗಳಲ್ಲಿ ಸದರಿ ಘಟನೆ ಪ್ರಕಟಗೊಂಡಾಗ ಅವರ ಕುಟುಂಬವು ತೀವ್ರ ಅವಮಾನ ಹಾಗೂ ಸಂಕಟ ಅನುಭವಿಸಬೇಕಾಗುತ್ತದೆ

೭. ಲೋಕಾಯುಕ್ತ ಇತ್ತೀಚಿನ ದಿನಗಳಲ್ಲಿ ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಿದೆ. ಮುಖ್ಯಮಂತ್ರಿ, ಮಾಜಿ ಮುಖ್ಯಮಂತ್ರಿ, ಮಂತ್ರಿ, ಶಾಸಕರ ವಿರುದ್ಧ ಕ್ರಮ ತೆಗೆದುಕೊಳ್ಳುತ್ತಿದೆ ಎಂದು ಜನರಲ್ಲಿ ನಂಬಿಕೆ ಬಂದಿದ್ದೇ ತಡ ಸಾಮಾನ್ಯ ಜನರಿಂದ ಹಲವಾರು ಶಾಸಕರ ವಿರುದ್ಧ ಕರ್ನಾಟಕ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ ೧೯೮೮ರ ಅನುಸಾರ ಲೋಕಾಯುಕ್ತ ವಿಶೇಷ ಕೋರ್ಟ್‌ನಲ್ಲಿ ಮೊಕದ್ದಮೆ ದಾಖಲಾಗುತ್ತಿವೆ. ಲೋಕಾಯುಕ್ತ ಸಂಸ್ಥೆಯಲ್ಲಿ ಪ್ರಾಮಾಣಿಕವಾಗಿ ದುಡಿಯುತ್ತಿರುವ ಅಧಿಕಾರಿಗಳು ಬಲಾಢ್ಯ ರಾಜಕಾರಣಿಗಳಿಂದ ಧಮಕಿ ಕೇಳಬೇಕಾಗುತ್ತದೆ. ನ್ಯಾಯಾಧೀಶರ ಮೇಲೆ ರಾಜಕೀಯ ಪ್ರೇರಿತ ಅರೋಪ ಮಾಡಲಾಗುತ್ತಿದೆ.

೮. ಭ್ರಷ್ಟಾಚಾರ ಹಗರಣಗಳಲ್ಲಿ ಸಿಲುಕಿ ಜೈಲಿಗೆ ಹೋದ ಗಣ್ಯರನ್ನು ನಾಡಿನ ಹಿರಿಯ ಸ್ವಾಮೀಜೀಗಳು, ಅಧಿಕಾರಿಗಳು ಜೈಲಲ್ಲಿ ಭೇಟಿಮಾಡಿ ಅವರ ಬೆಂಬಲಕ್ಕೆ ನಿಲ್ಲುವುದು. ಜೈಲಿನಿಂದ ಜಾಮೀನಿನ ಮೇಲೆ ಬಿಡುಗಡೆಯಾಗುತ್ತಿರುವುವರನ್ನು ಮೆರವಣಿಗೆಯ ಮೂಲಕ ಕರೆತರುವುದು ಮುಂತಾದ ವರ್ತನೆಗಳು ಸಮಾಜದ ಮೇಲೆ ಬಲವಾಗಿ ದುಷ್ಪರಿಣಾಮ ಬೀರುತ್ತಿವೆ.

೯ ಲೋಕಸಭೆಯಲ್ಲಿ ಇತ್ತೀಚೆಗೆ ಅಂಗೀಕರಿಸಿದ ಭ್ರಷ್ಟಾಚಾರವನ್ನು ಬಯಲಿಗೆಳೆಯುವವರ ರಕ್ಷಣೆ ಮಸೂದೆಯಲ್ಲಿ ಭ್ರಷ್ಟಾಚಾರದ ಬಗ್ಗೆ ಮಾಹಿತಿ ಬಹಿರಂಗ ಪಡಿಸುವ ವ್ಯಕ್ತಿಗಳಿಗೆ ಸೂಕ್ತ ರಕ್ಷಣೆ ನೀಡಲು ಅವಕಾಶ ಕಲ್ಪಿಸಿರುವುದರಿಂದ ಜನ ಈಗ ಧೈರ್ಯದಿಂದ ಲೋಕಾಯುಕ್ತರನ್ನು ಸಂಪರ್ಕಿಸಿ ಭ್ರಷ್ಟರ ವಿರುದ್ಧ ಮಾಹಿತಿ ನೀಡಬಹುದು.

೨೦೦೯ರ ಏಪ್ರೀಲ್ ೧ ರಿಂದ ಮಾರ್ಚ್ ೩೧, ೨೦೧೨ ತನಕ, ಅಂದರೆ ಮೂರು ವರ್ಷಗಳಲ್ಲಿ ಅಫಿಡಿವೆಟ್ ಸಮೇತ ಬಂದ ದೂರುಗಳು ಸಂಖ್ಯೆ ೧೨೫೫೦. ದಾಳಿಗೊಳಗಾದವರ ಸಂಖ್ಯೆ ೧೧೨ ಹಾಗೂ ಬಲೆಗೆ ಬಿದ್ದವರ ಸಂಖ್ಯೆ ೧೦೭೮.ಈ ಒಟ್ಟು ದಾಳಿಗಳಲ್ಲಿ ಶೇಕಡ ೬೬ರಷ್ಟು ಸಂತೋಷ ಹೆಗ್ಡೆಯವರ ಕಾಲದಲ್ಲಿ ನಡೆದಿವೆ ಎಂಬುದಿಲ್ಲಿ ಗಮನಾರ್ಹ. ಶೇಕಡ ೮೦ರಷ್ಟು ಬಲೆಗೆ ಬಿದ್ದವರು ಅಗತ್ಯ ಸೇವಾ ಇಲಾಖೆಯ ನೌಕರರು ಎಂಬುದಿಲ್ಲಿ ಉಲ್ಲೇಖನೀಯ. ಹಿರಿಯ ಅಧಿಕಾರಿಗಳ ಮೇಲೆ ಶೇಕಡ ೦.೮ರಷ್ಟು ಮಾತ್ರ ಭ್ರಷ್ಟಾಚಾರ ಪ್ರಕರಣಗಳು ನೋಂದಾವಣೆಗೊಂಡರೆ, ಉಳಿದೆಲ್ಲ ಪ್ರಕರಣಗಳಿರುವುದು ಕೆಳಸ್ತರದ ನೌಕರರ ಮೇಲೆ. ಅಂದರೆ ಒಟ್ಟು ೭೨೮ ನೌಕರರ ಮೇಲೆ ಭ್ರಷ್ಟಾಚಾರ ಪ್ರಕರಣಗಳಿದ್ದರೆ ಅವುಗಳಲ್ಲಿ ಐಎಎಸ್ ಮತ್ತು ಐಪಿಎಸ್ ಹಾಗೂ ಕೆಎಎಸ್ ಅಧಿಕಾರಿಗಳ ಸಂಖ್ಯೆ ಕೇವಲ ೨೪ ಎಂಬುದಿಲ್ಲಿ ಗಮನಾರ್ಹ. ಒಟ್ಟು ಬಲೆಗೆ ಬಿದ್ದವರ ಪ್ರಕರಣಗಳ ಶೇಕಡ ೬೫.೯ರಷ್ಟು ಹಾಗೂ ದಾಳಿ ಪ್ರಕರಣಗಳ ಶೇಕಡ ೪೩.೩ರಷ್ಟಕ್ಕೆ ಮಾತ್ರ ಕಾನೂನು ಕ್ರಮ ಕೈಗೊಳ್ಳಲು ಸರ್ಕಾರ ಅನುಮತಿ ನೀಡಿದ್ದು ನಿಜಕ್ಕೂ ದುರಂತ. ಶೇಕಡ ೯೫.೬ರಷ್ಟು ಪ್ರಕರಣಗಳಲ್ಲಿ ಆರೋಪ ಪಟ್ಟಿ ಸಲ್ಲಿಸಲಾಗಿದೆ. ಸರಾಸರಿ ಆರೂವರೆ ವರ್ಷಗಳಿಂದ ಪ್ರಕರಣಗಳು ನ್ಯಾಯಾಲಯದಲ್ಲಿ ಬಾಕಿಯಿವೆ. ಅಂತಿಮವಾಗಿ ಶೇಕಡ ೨೦ ಪ್ರಕರಣಗಳಲ್ಲಿ ಮಾತ್ರ ಶಿಕ್ಷೆ ನೀಡಲಾಗಿದೆ. ಇದೆಲ್ಲ ಅವಲೋಕಿಸಿದಾಗ ಕರ್ನಾಟಕ ಲೋಕಾಯುಕ್ತ ಸಾಮಾಜಿಕವಾಗಿ ಪರಿಣಾಮ ಬೀರಿದೆಯೋ ಹೇಗೆ ಎಂಬುದೇ ಇಲ್ಲಿ ಪ್ರಶ್ನಾರ್ಹ.

ನ್ಯಾಯಮೂರ್ತಿ ಎನ್. ವೆಂಕಟಾಚಲ ತಮ್ಮ ಅಧಿಕಾರವಧಿಯಲ್ಲಿ ಭ್ರಷ್ಟಾಚಾರ ನಿಯಂತ್ರಣಕ್ಕೆ ಹಾಗೂ ಜನರಿಗೆ ಉತ್ತಮ ಆಡಳಿತ ನೀಡುವಂತೆ ಸರ್ಕಾರದ ಮೇಲೆ ನಿಗಾವಹಿಸಲು ಲೋಕಾಯುಕ್ತ ಸಂಸ್ಥೆಯೊಂದಿದೆ ಎಂದು ರಾಜ್ಯದ ಜನರಿಗೆ ತೋರಿಸಿಕೊಟ್ಟಿದ್ದಲ್ಲದೇ, ಅಸಂಖ್ಯಾತ ಸರ್ಕಾರಿ ನೌಕರರನ್ನು ಭ್ರಷ್ಟಾಚಾರ ಎಸಗಿದ ಹಿನ್ನೆಲೆಯಲ್ಲಿ ಬಂಧಿಸಿ, ಅವರನ್ನು ಅಮಾನತ್ತಿನಲ್ಲಿಡುವ ಮೂಲಕ ಜನಜಾಗೃತಿ ಮೂಡಿಸಿದರು. ಅದಾದ ನಂತರ ಲೋಕಾಯುಕ್ತರಾಗಿ ಬಂದ ನ್ಯಾಯಮೂರ್ತಿ ಸಂತೋಷ ಹೆಗ್ಡೆಯವರು ಶಾಸಕರ ಲಂಚ ಪ್ರಕರಣ, ಕೆಐಎಡಿಬಿ ಹಗರಣ, ಗಣಿ ಹಗರಣ ಮುಂತಾದ ದೊಡ್ಡ ದೊಡ್ಡ ಹಗರಣಗಳನ್ನು ಬಯಲಿಗೆಳೆದು, ದಕ್ಷಿಣ ಭಾರತದ ಮೊದಲನೇಯ ಬಿಜೆಪಿ ಸರ್ಕಾರದ

ಮುಖ್ಯಮಂತ್ರಿಯನ್ನು ರಾಜೀನಾಮೆ ನೀಡಲು ಕಾರಣವಾಗಿದ್ದು ಹಾಗೂ ಹಲವಾರು ಶಾಸಕರನ್ನು ಮಂತ್ರಿಯನ್ನಾಗಿ ಮಾಡಲು ತಡೆಯೊಡ್ಡಿತು. ಈ ಘಟನೆಗಳು ಸಾಮಾಜಿಕವಾಗಿ ಗಂಭೀರ ಪರಿಣಾಮ ಬೀರಿದೆ ಎನ್ನುವುದರಲ್ಲಿ ಎರಡು ಮಾತಿಲ್ಲ. ಇಂತಹ ಸಂದರ್ಭದಲ್ಲಿ ಭ್ರಷ್ಟರ ವಿರುದ್ಧ ಕ್ರಮ ಕೈಗೊಳ್ಳುವಂತೆ ಮಾಡುವಲ್ಲಿ ಇರುವ ಒಂದು ಪ್ರಮುಖ ತಂತ್ರವೆಂದರೆ 'ನ್ಯಾಯಾಂಗ ಕ್ರಿಯಾಶೀಲತೆ' (Judicial Activism). ನ್ಯಾಯಾಂಗ ವ್ಯವಸ್ಥೆಯು ತನ್ನ ಕ್ರಿಯಾಶೀಲತೆಯ ಮೂಲಕ ಇಂತಹ ಭ್ರಷ್ಟರ ಹಾಗೂ ಅವರ ವಿರುದ್ಧ ಇರುವ ಆರೋಪಗಳಿಗೆ ಸಂಬಂಧಿಸಿದಂತೆ ಲಭ್ಯ ಮೂಲಗಳಿಂದ ಮಾಹಿತಿ ಪಡೆದು, ಅಗತ್ಯ ಕ್ರಮಕ್ಕೆ ಆದೇಶಗಳನ್ನು ಹೊರಡಿಸಬೇಕು. ಸಾರ್ವಜನಿಕ ಹಿತಾಸಕ್ತಿಯನ್ನು ಎತ್ತಿಹಿಡಿಯಲು ಹಾಗೂ ಗಣ್ಯಾತಿಗಣ್ಯ ಭ್ರಷ್ಟರನ್ನು, ಅಧಿಕಾರಿಗಳನ್ನು ಮಟ್ಟಹಾಕಲು 'ನ್ಯಾಯಾಂಗ ಕ್ರಿಯಾಶೀಲತೆ' ಪರಿಕಲ್ಪನೆ ಇಲ್ಲಿ ಪ್ರಮುಖವಾದುದಾಗಿದೆ. ಇದರಲ್ಲಿ ಸಾರ್ವಜನಿಕರ ಸಹಕಾರ ಮತ್ತು ಪಾತ್ರವೂ ಸಹ ಅಷ್ಟೇ ಮುಖ್ಯ.

ಲೋಕಾಯುಕ್ತ ಪೊಲೀಸರ ವರ್ಗಾವರ್ಗಿ ಕೂಡ ರಾಜಕಾರಣಿಗಳ ಕೈಯಲ್ಲಿರುತ್ತದೆ. ಹೀಗಾಗಿ ಪೊಲೀಸರು ಕೂಡ ರಾಜಕಾರಣಿಗಳ ಕೈಗೊಂಬೆಯಾಗಿಯೇ ಕೆಲಸ ಮಾಡುತ್ತಾರೆ. ಕೆಲಸಕ್ಕೆ ಬಾರದವರನ್ನೆಲ್ಲ ಲೋಕಾಯುಕ್ತ ಹಾಗೂ ಸಿಓಡಿಗೆ ವರ್ಗಾಯಿಸುವುದು ಮೊದಲಿನಿಂದಲೂ ರೂಢಿಸಿಕೊಂಡು ಬಂದಂತಹ ಚಾಳಿ. ಮೊದಲೇ ಹಸಿದು ಬಂದ ಈ ಪೊಲೀಪ್ ಪಡೆ ಹಳಿಸಿದ್ದಾದರೂ ಪರ್ವಾಯಿಲ್ಲ ಎಂದು ಲಂಚಕ್ಕಾಗಿ ಕೈ ಚಾಚುವುದು ಸಹಜ. ಹೀಗಿದ್ದಾಗ ಲೋಕಾಯುಕ್ತ ಸಂಸ್ಥೆಯಲ್ಲಿಯೇ ಅದಕ್ಷರು, ಪಕ್ಷಪಾತಿಗಳು ಹಾಗೂ ಲಂಚಕೋರರು ಇದ್ದಾರೆ ಎಂದು ಲೋಕಾಯುಕ್ತ ಸಂಸ್ಥೆಯಲ್ಲಿದ್ದ ಹಿರಿಯ ಐಎಎಸ್ ಅಧಿಕಾರಿ ಮಧುಕರಶೆಟ್ಟಿ ವಾದದಲ್ಲಿ ಅರ್ಥವಿಲ್ಲದೇಯಿಲ್ಲ. ಒಟ್ಟಾರೆ ಹೇಳಬೇಕೆಂದರೆ ರಾಜ್ಯದಲ್ಲಿ ಲೋಕಾಯುಕ್ತ ಸಂಸ್ಥೆ ಇದ್ದಾಗಲೂ ಸಹ ಲಂಚಗುಳಿತನ ನೀರಿಕ್ಷಿತ ಮಟ್ಟದಲ್ಲಿ ಕಡಿಮೆಯಾಗಿಲ್ಲ ಹಾಗೂ ಉತ್ತಮ ಆಡಳಿತ ಕೊಡಲಾಗುತ್ತಿಲ್ಲ. ಲಂಚ ಎಂಬುದು ಇಂದು ರಾಜ್ಯದಲ್ಲಿ ಅತ್ಯಂತ ಸಾಮಾನ್ಯ ವಿಷಯ (Common Factor) ಆಗಿದೆ. ಎಲ್ಲರೂ ಇದು ಅನಿವಾರ್ಯ (Casual) ಎಂಬಂತೆ ಪರಿಗಣನೆಗೆ ತೆಗೆದುಕೊಂಡಿರುವುದು ಒಂದು ದುರ್ದೈವದ ಸಂಗತಿಯೇ ಸರಿ. ಕರ್ನಾಟಕವು ರಾಷ್ಟ್ರದಲ್ಲಿನ ಭ್ರಷ್ಟಾಚಾರದ ಪಟ್ಟಿಯಲ್ಲಿ ೪ನೆಯ ಸ್ಥಾನವನ್ನು ಗಳಿಸಿದ್ದು ಇಲ್ಲಿ ಗಮನಿಸಬಹುದು.

ಕರ್ನಾಟಕದಲ್ಲಿ ಹೆಚ್ಚು ಭ್ರಷ್ಟಾಚಾರ ತಾಂಡವವಾಡುತ್ತಿರುವ ಹಾಗೂ ಹೆಚ್ಚು ಲೋಕಾಯುಕ್ತರ ದಾಳಿಗೆ ಒಳಗಾದ ಇಲಾಖೆಗಳೆಂದರೆ ಕಂದಾಯ ಇಲಾಖೆ, ಪೊಲೀಸ್ ಇಲಾಖೆ, ಲೋಕೋಪಯೋಗಿ ಇಲಾಖೆ, ಸಾರಿಗೆ ಇಲಾಖೆ ಹಾಗೂ ಆರೋಗ್ಯ ಇಲಾಖೆ ಮುಂತಾದವು. ತನ್ನ ಸಹಜ ಹಕ್ಕಾದ ಜಮೀನಿನ ಪಹಣಿ ಪಡೆಯಲೆಂದು ಬರುವ ರೈತನೊಬ್ಬ ಮೊದಲು ಶೋಷಣೆಗೆ ಒಳಗಾಗುವುದೇ

ಗ್ರಾಮ ಲೆಕ್ಕಿಗನಿಂದ! ಸ್ವಾತಂತ್ರ್ಯೋತ್ತರದ ನಂತರ ಕರ್ನಾಟಕದಲ್ಲಿ ಭ್ರಷ್ಟಾಚಾರ ಅಗಾಧವಾಗಿ ಬೆಳೆಯುತ್ತಾ ಇಂದು ಬೃಹತ್ ಪೀಡೆಯಾಗಿ ಪರಿಣಮಿಸಿದೆ. ನಮಗೆ ಇಂದು ಸವಾಲಾಗಿರುವುದು ಭಯೋತ್ಪಾದನೆ ಅಲ್ಲ. ಭವಿಷ್ಯದಲ್ಲಿ ಮುಂದಿನ ಪೀಳಿಗೆಯನ್ನು ದಟ್ಟ ದಾರಿದ್ರ್ಯರನ್ನಾಗಿಸಿ, ಬೀದಿಯಲ್ಲಿ ಬೆತ್ತಲೆಯಾಗಿ ನಿಲ್ಲಿಸುವ ಅಧಿಕಾರಿಗಳ ಮತ್ತು ರಾಜಕಾರಣಿಗಳ ಧನದಾಹವೇ ನಮ್ಮ ಮೊದಲ ಶತ್ರು, ಇದು ನಮ್ಮ ಮುಂದಿರುವ ದೊಡ್ಡ ಸವಾಲು ಕೂಡ.

ಈ ಎಲ್ಲ ಕಾರಣಗಳಿಗಾಗಿ ಇಂತಹ ಅನಿಷ್ಟಗಳನ್ನು ಮಟ್ಟ ಹಾಕಲು ಇಪ್ಪತ್ತೆಂಟು ವರ್ಷಗಳ ಹಿಂದೆ ಸ್ಥಾಪನೆಗೊಂಡ ಕರ್ನಾಟಕ ಲೋಕಾಯುಕ್ತ ಸಂಸ್ಥೆಯ ಪರಿಣಾಮಕಾರಿಯಾದ ಕಾರ್ಯನಿರ್ವಹಣೆಯ ಬಗ್ಗೆ ಈಗ ಮೌಲ್ಯಮಾಪನ ಮಾಡಲಾಗಿ ಲೋಕಾಯುಕ್ತ ಸಂಸ್ಥೆಗೆ ಕೊಟ್ಟ ಅಧಿಕಾರ ಸಾಲದು. ಲೋಕಾಯುಕ್ತ ಸಂಸ್ಥೆಯ ತನಿಖೆ ಹಾಗೂ ದಾಳಿಗಳಿಂದ ಬೆಳಕಿಗೆ ಬಂದಿರುವುದು ಸಣ್ಣ ಮಟ್ಟ ಲಂಚಗುಳಿತನದ ಪ್ರಕರಣಗಳೇ ಇರಬಹುದು, ದೊಡ್ಡ ದೊಡ್ಡ ಹಗರಣಗಳೇ ಇರಬಹುದು. ಇವು ರಾಜ್ಯದ ಸಾಮಾಜಿಕ ವ್ಯವಸ್ಥೆಯ ಮೇಲೆ ಖಂಡಿತವಾಗಿ ಗಣನೀಯ ಪ್ರಮಾಣದಲ್ಲಿ ಪ್ರಭಾವ ಬೀರಿವೆ ಎಂಬುದರಲ್ಲಿ ಎರಡು ಮಾತಿಲ್ಲ.

ಪ್ರಬಲ ಲೋಕಾಯುಕ್ತ ಇದ್ದ ಮಾತ್ರಕ್ಕೆ ಭ್ರಷ್ಟಾಚಾರವನ್ನು ಸಮಾಜದಿಂದ ಸಂಪೂರ್ಣವಾಗಿ ಕಿತ್ತೊಗೆಯಬಹುದು ಎಂಬುದಾಗಿ ಯಾರಾದರೂ ಭಾವಿಸಿದ್ದರೆ ಅಂಥವರು ತಾವೇ ಸೃಷ್ಟಿಸಿದ ಕನಸಿನ ರಮ್ಯ ಲೋಕದೊಳಗೆ ವಿಹರಿಸುತ್ತಿದ್ದಾರೆ ಎಂದರ್ಥ.ಮೊದಲನೇಯದಾಗಿ ಲಂಚಗುಳಿತನದ ಪ್ರಸಕ್ತ ಪರಿಸ್ಥಿತಿಯನ್ನು ಅರ್ಥ ಮಾಡಿಕೊಳ್ಳಲು ಯತ್ನಿಸೋಣ. ಹಾಂಕಾಂಗನ ಪೊಲಿಟಿಕಲ್ ಮತ್ತು ಎಕನಾಮಿಕ್ ರಿಸ್ಕ್ ಕನ್ಸಲ್‌ಟೆನ್ಸಿ ಪ್ರಕಾರ ಏಷ್ಯಾ ಫೆಸಿಫಿಕ್ ವಲಯದಲ್ಲಿರುವ ೧೬ ರಾಷ್ಟ್ರಗಳಲ್ಲಿ ಭಾರತ ೪ನೇ ಅತಿ ಭ್ರಷ್ಟ ರಾಷ್ಟ್ರವಾಗಿದೆ. ಕಾಂಬೋಡಿಯ ಒಂದನೇ ಸ್ಥಾನದಲ್ಲಿದ್ದರೆ, ಇಂಡೋನೇಷ್ಯಾ ಮತ್ತು ಫಿಲಿಪೆನ್ಸ್ ಕ್ರಮವಾಗಿ ೨ ಮತ್ತು ೩ ನೇ ಸ್ಥಾನದಲ್ಲಿದೆ. ಮೋಸದ ಪರೀಕ್ಷೆ, ಭದ್ರತೆ ಮತ್ತು ಅಪಾಯ ನಿರ್ವಹಣೆ ಮುಂತಾದ ಕ್ಷೇತ್ರಗಳಲ್ಲಿ ಮುಂಚೂಣಿಯಲ್ಲಿದ್ದು ಕಾರ್ಯನಿರ್ವಹಿಸುತ್ತಿರುವ ಪುಣೆ ಮೂಲದ ಇಂಡಿಯ ಫೋರೆನ್ಸಿಕ್ ಎಂಬ ಕಂಪನಿಯ ಅಧ್ಯಯನ ಹೇಳಿರುವಂತೆ, ಕಳೆದ ದಶಕದಲ್ಲಿ ಭ್ರಷ್ಟಾಚಾರವು ೧೫,೫೫,೦೦೦ ಕೋಟಿ ರೂ ಅವ್ಯವಹಾರಕ್ಕೆ ಕಾರಣವಾಗಿದೆ. ಈ ಅವಧಿಯಲ್ಲಿ ಭ್ರಷ್ಟರು ವಿದೇಶಗಳಿಗೆ ಸಾಗಿಸಿದ ಅಕ್ರಮ ಗಳಿಕೆ ಮೊತ್ತ, ೧೮, ೮೬,೦೦೦ ಕೋಟಿ ರೂ. ಈ ಎರಡನೇಯ ಮಾಹಿತಿಯು ನ್ಯಾಷನಲ್ ಕ್ರೈಂ ರಿಕಾರ್ಡ್ ಬ್ಯೂರೋ ನೀಡಿದ ಅಂಕಿ ಅಂಶಗಳನ್ನಾಧರಿಸಿದೆ. ಈ ಸಂಸ್ಥೆ ಇದುವರೆಗೂ ಅಂದರೆ, ೨೦೦೦ ರಿಂದ ೨೦೧೯ರ ನಡುವಿನ

ಅವಧಿಯಲ್ಲಿ ೭೦,೭೭೩ ಪ್ರಕರಣದ ವಿಚಾರಣೆ ನಡೆಸಲು ಸಾಧ್ಯವಾಗಿದೆ. ಇನ್ನೂ ಸಾವಿರಾರು ಪ್ರಕರಣಗಳು ಬಾಕಿ ಇವೆ.

ಭ್ರಷ್ಟತೆ ಸಾರ್ವತ್ರಿಕ ಪಿಡುಗು. ಇದರಲ್ಲಿ ಸರಕಾರಿ ಅಧಿಕಾರಿಗಳು ಪ್ರಪ್ರಥಮವಾಗಿ ಪರಿಣಿತರು. ಲಭ್ಯ ಅಂಕಿ ಅಂಶಗಳ ಪ್ರಕಾರ ಕಳೆದ ನಾಲ್ಕು ವರ್ಷಗಳಲ್ಲಿ ಭ್ರಷ್ಟ ಸರಕಾರಿ ಅಧಿಕಾರಿಗಳ ಸಂಖ್ಯೆ ಗಣನೀಯವಾಗಿ ಹೆಚ್ಚಿದೆ. ೨೦೦೮ರಲ್ಲಿ ಶೇಕಡ ೧೭.೬೮ರಷ್ಟಿದ್ದದ್ದು, ೨೦೧೧ರಲ್ಲಿ ಶೇಕಡ ೨೮.೩೯ರಷ್ಟಾಗಿದೆ. ೪ ವರ್ಷದಲ್ಲಿ ಸರಕಾರಿ ಅಧಿಕಾರಿಗಳು ಹಾಗೂ ಇತರ ವ್ಯಕ್ತಿಗಳ ವಿರುದ್ಧ ಸಿಬಿಐ ೩,೬೨೧ ಪ್ರಕರಣಗಳನ್ನು ದಾಖಲಿಸಿಕೊಂಡಿದೆ. ಕುತುಹೂಲದ ಸಂಗತಿ ಎಂದರೆ, ಭ್ರಷ್ಟಾಚಾರದಲ್ಲಿ ತೊಡಗಿಕೊಂಡ ಇತರ ವ್ಯಕ್ತಿಗಳ ಸಂಖ್ಯೆಯಲ್ಲಿ ಇಳಿಮುಖವಾಗಿರುವುದು. ಅಧಿಕೃತ ಅಂಕಿ ಅಂಶಗಳನ್ನಾಧಾರಿಸಿ ಹೇಳುವುದಾದರೆ ೨೦೦೮ರಲ್ಲಿ ಶೇಕಡ ೫೨.೮೬ರಷ್ಟಿದ್ದ ಇತರ ಭ್ರಷ್ಟ ವ್ಯಕ್ತಿಗಳ ಸಂಖ್ಯೆ ೨೦೧೧ ರಲ್ಲಿ ಶೇಕಡ ೪೧. ೯೭ಕ್ಕೆ ಕುಸಿದಿದೆ. ಅದೊಂದು ಸಣ್ಣ ಸಮಾಧಾನ ಅಷ್ಟೇ. ಆದರೇನು ಭ್ರಷ್ಟಾಚಾರ ಪ್ರಕರಣಗಳ ಇತ್ಯರ್ಥ ಬೇಸರದ ಸಂಗತಿಯೇ. ನಾವು ಇರುವುದನ್ನು ಇದ್ದಂತೆ ಒಪ್ಪಿಕೊಳ್ಳುತ್ತಿದ್ದೇವೆ. ಅಕ್ರಮವನ್ನು ಪ್ರಶ್ನಿಸುವ ಮನೋಭಾವನೆ ನಮ್ಮಲ್ಲಿ ಕ್ಷೀಣಿಸುತ್ತಿದೆ. ಭ್ರಷ್ಟಾಚಾರದಿಂದ ದೂರವಾಗಬೇಕು ಎಂಬ ಮನೋಭಾವ ಎಲ್ಲರಲ್ಲೂ ಮೂಡುವವರೆಗೆ ಆ ಪಿಡುಗು ದೂರವಾಗುವ ಲಕ್ಷಣಗಳಿಲ್ಲ.

ಕೇವಲ ನೂರು ರೂಪಾಯಿ ಪಡೆಯಲು ಹೋಗಿ ಕಾಬನ್‌ಸ್ಟೇಬಲಗಳು, ಸಿಪಾಯಿಗಳು ಸಿಕ್ಕಿಬಿದ್ದವರಿದ್ದಾರೆ. ಕಂದಾಯ ಇಲಾಖೆ, ಸಾರಿಗೆ ಇಲಾಖೆ, ಪೊಲೀಸ್ ಇಲಾಖೆ, ಆರೋಗ್ಯ ಇಲಾಖೆ, ಆಹಾರ ಹಾಗೂ ನಾಗರೀಕ ಸರಬರಾಜು ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಕೃಷಿ ಇಲಾಖೆ, ಲೋಕೋಪಯೋಗಿ ಇಲಾಖೆ, ಶಿಕ್ಷಣ ಇಲಾಖೆ, ಪಂಚಾಯತ್‌ರಾಜ್ ಇಲಾಖೆಗಳನ್ನು ರಾಜ್ಯದ ಅತೀ ಭ್ರಷ್ಟ ಹತ್ತು ಇಲಾಖೆಗಳೆಂದು ಹೇಳಲಾಗಿದೆ. ಇದರ ನೇರ ಮತ್ತು ಕೆಟ್ಟ ಪರಿಣಾಮ ಬಡವರ, ದೀನರ, ಅಶಿಕ್ಷಿತರ ಹಾಗೂ ಮಧ್ಯಮ ವರ್ಗದವರ ಮೇಲೆ ಆಗ್ತದೆ. ಭ್ರಷ್ಟಾಚಾರದ ವಿರುದ್ಧ ಹೋರಾಟ ಮಾಡಬೇಕೆಂಬ ನಿರ್ಧಾರ ತಳೆಯುವುದು ಎಲ್ಲರಿಂದಲೂ ಸಾಧ್ಯವಿಲ್ಲ. ಈ ಹಿಂದಿಗಿಂತಲೂ ಈಗ ಗ್ರಾಮಗಳಲ್ಲಿ ಭ್ರಷ್ಟಾಚಾರ ಜಾಸ್ತಿಯಾಗಿದೆ ಮತ್ತು ಹಳ್ಳಿಗರಲ್ಲಿ ಹೋರಾಟದ ಮನಸ್ಸಿದ್ದರೂ ಅವರಿಗೆ ಆ ಕುರಿತು ತಿಳುವಳಿಕೆ ಮತ್ತು ಸಹಾಯ ಸಿಗುತ್ತಿಲ್ಲ. ಲೋಕಾಯುಕ್ತ ಸಂಸ್ಥೆಯನ್ನು ಬಲಪಡಿಸುವ ಇಚ್ಛೆಯನ್ನು ರಾಜಕೀಯ ಪಕ್ಷಗಳು ಹೊಂದಿಲ್ಲ. ಲೋಕಾಯುಕ್ತ ಸಂಸ್ಥೆಯು ಭ್ರಷ್ಟಾಚಾರವನ್ನು ನಿಯಂತ್ರಿಸುವಲ್ಲಿ ಶೇಕಡ ೧೦ರಷ್ಟು ಮಾತ್ರ ಯಶಸ್ಸು ಕಂಡಿದೆ ಎಂದು ನ್ಯಾ. ಸಂತೋಷ ಹೆಗ್ಡೆ ಅವರು ಹೇಳಿದ್ದಾರೆ. ಈಗ ಗರಿಷ್ಠ ೭ ವರ್ಷದ ಶಿಕ್ಷೆ ಇದೆ. ಆದರೆ

ತ್ವರಿತವಾಗಿ ವಿಚಾರಣೆ ನಡೆಸಿ ಶಿಕ್ಷೆ ಕೊಡಬೇಕು. ಇದಕ್ಕಾಗಿ ತ್ವರಿತ ನ್ಯಾಯಾಲಯಗಳು ಸ್ಥಾಪನೆ ಆಗಬೇಕು. ಇದೇ ರೀತಿ ಜಾಗೃತಿ ಹೆಚ್ಚಾಗುತ್ತ ಹೋದರೆ ಭಾರತದಲ್ಲಿ ಇನ್ನು ೨೫ ವರ್ಷದಲ್ಲಿ ಭ್ರಷ್ಟಾಚಾರ ಸಾಕಷ್ಟು ಕಡಿಮೆ ಆಗಲಿದೆ.

ಈಗಿನ ಸರಕಾರಿ ಸಂಬಳ ಜೀವನ ನಡೆಸಲು ಸಾಕಾಗಲ್ಲ ಅಂತ ಹೇಳುವುದು ಶುದ್ಧ ಸುಳ್ಳು. ಈ ಪರಿಸ್ಥಿತಿ ೧೯೪೮ ರಿಂದ ೧೯೮೫ ರವರೆಗೂ ಇತ್ತು. ಈಗ ಜವಾನನ ಸಂಬಳವೇ ಕನಿಷ್ಟ ರೂ ೧೫೦೦೦ ಇದೆ. ಅಂದರೆ ಅದಕ್ಕಿಂತ ಹೆಚ್ಚಿನ ಹುದ್ದೆಯವರಿಗೆ ಖಂಡಿತ ಜಾಸ್ತಿ ಇದೆ. ಒಟ್ಟಾರೆ ಈಗಿನ ಸರಕಾರಿ ಸಂಬಳ ಜೀವನ ನಡೆಸಲು ಖಂಡಿತ ಸಾಕಾಗುತ್ತೆ. ಇದರ ಬಗ್ಗೆ ಸಂಶಯ ಬೇಡ. ಭ್ರಷ್ಟಾಚಾರ ಪ್ರಮಾಣ ಮೇಲಾಧಿಕಾರಿಗಳಲ್ಲಿ ಜಾಸ್ತಿ ಇದೆ. ಆದರೆ ಗುಮಾಸ್ತರ ಭ್ರಷ್ಟಾಚಾರವು ಬಡವರ ಹಾಗೂ ಮಧ್ಯಮ ವರ್ಗದವರ ಜೀವನವನ್ನು ಅಸಹನೀಯ ಹಾಗೂ ತುಂಬಾ ತೊಂದರೆದಾಯಕವನ್ನಾಗಿ ಮಾಡಿದೆ. ಈಗ ನ್ಯಾಯಾಂಗದಲ್ಲಿಯೂ ಭ್ರಷ್ಟಾಚಾರದ ಪ್ರಮಾಣ ಇತ್ತೀಚಿನ ಕೆಲವು ವರ್ಷಗಳಿಂದ ಹೆಚ್ಚಾಗುತ್ತಿದೆ. ಸಕಾಲ ಯೋಜನೆಯನ್ನು ಒಳ್ಳೆಯ ಉದ್ದೇಶಕ್ಕೆ ಜಾರಿಗೆ ತಂದಿದ್ದಾರೆ. ಮುಂಚೆ ಪತ್ರಿಕೆಗಳು ಸತ್ಯವನ್ನು, ಜನರ ಕಷ್ಟ ನೋವುಗಳ ಬಗ್ಗೆ ಬರೆಯುತ್ತಿದ್ದವು. ಈಗ ಪತ್ರಿಕೆಗಳನ್ನು ನಂಬುವುದೇ ಕಷ್ಟವಾಗಿದೆ. ಈಗ ಪೇಡ್ ನ್ಯೂಜ್ ಹಾವಳಿಯಿಂದಾಗಿ ಜನರಿಗೆ ತಪ್ಪು ಮಾಹಿತಿ ಸಿಗ್ತಾ ಇದೆ. ಎಸ್.ಆರ್. ಹಿರೇಮಠರಂತಹ 'ವಿಜಲ್ ಬ್ಲೋವರ್ಸ್'ಗಳಿರಬೇಕು. ಆದರೆ ಅವರ ಉದ್ದೇಶ ಒಳ್ಳೆಯದಾಗಿರಬೇಕು. ಕೆಲ ನ್ಯಾಯಾಧೀಶರು, ಮುಖ್ಯ ನ್ಯಾಯಾಧೀಶರು, ಮುಖ್ಯ ಅಧಿಕಾರಿಗಳು ನಿವೃತ್ತಿ ಆದ ತಕ್ಷಣವೇ ಕೆಲ ರಾಜಕೀಯ ಪಕ್ಷಗಳಿಗೆ ಸೇರುವುದು ತಪ್ಪು. ಇದರ ಹಿಂದೆ ಸ್ವಾರ್ಥ ಇರುತ್ತದೆ. ನಿವೃತ್ತಿ ಆದ ಮೇಲೆ ಕನಿಷ್ಠ ೩ ವರ್ಷ ಯಾವುದೇ ರಾಜಕೀಯ ಪಕ್ಷ, ಮತ್ತು ರಾಜಕೀಯ, ಇತರ ಉನ್ನತ ಹುದ್ದೆಗಳನ್ನು ಅಲಂಕರಿಸಬಾರದಂತಹ ಕಾನೂನು ತರಬೇಕು ಎನ್ನುತ್ತಾರೆ. ಹಿಂದಿನ ಲೋಕಾಯುಕ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆಯವರು.

ಮುಖ್ಯಮಂತ್ರಿ ಪಟ್ಟವೇರಿದ ಮೂರುವರೆ ತಿಂಗಳಲ್ಲಿಮಾಜಿ ಮುಖ್ಯಮಂತ್ರಿಯೊಬ್ಬರುರಾಜ್ಯದ ಅತ್ಯುನ್ನತ ಆಡಳಿತ ಹುದ್ದೆಗೆ ಬರುವುದಕ್ಕೆ ಪರೋಕ್ಷವಾಗಿ ಕಾರಣವಾದ ಪ್ರಬಲ ತನಿಖಾ ಸಂಸ್ಥೆ ಲೋಕಾಯುಕ್ತವನ್ನು ವ್ಯವಸ್ಥಿತವಾಗಿ ದುರ್ಬಲಗೊಳಿಸಿದರು. ಮಾಜಿ ಮುಖ್ಯಮಂತ್ರಿಯ ವಿರುದ್ಧದ ಪ್ರಮುಖ ಭ್ರಷ್ಟಾಚಾರದ ಪ್ರಕರಣದಲ್ಲಿ ತನಿಖೆಯನ್ನು ಆರಂಭಿಸಿದ ಲೋಕಾಯುಕ್ತ ಎಡಿಜಿಪಿ ಜೀವನಕುಮಾರ್ ಗಾಂವ್ಕರ್ ಅವರನ್ನು ಎರಡೇ ತಿಂಗಳಲ್ಲಿ ವರ್ಗಾಯಿಸಿದ ಕ್ರಮ ಇದಕ್ಕೆ ನಿದರ್ಶನ. ಅದು ತನಿಖೆಯನ್ನು ದುರ್ಬಲಗೊಳಿಸುವ ದುರುದ್ದೇಶದ ವರ್ಗಾವಣೆಯೆಂಬುದು ಸ್ಪಷ್ಟ ಸಂದೇಶ ಸಾರಿತು. ಬಳ್ಳಾರಿಯಲ್ಲಿ ಅಕ್ರಮ ಗಣಿಗಾರಿಕೆ ನಡೆಯುತ್ತಿದ್ದಾಗ ಕರ್ತವ್ಯ ಲೋಪ ಎಸಗಿದ ಹಾಗೂ

ಲೋಕಾಯುಕ್ತರಿಂದಲೇ ತನಿಖೆಗೆ ಒಳಪಟ್ಟು ಶಿಸ್ತುಕ್ರಮದ ತೂಗುಕತ್ತಿಯನ್ನು ಎದುರಿಸುತ್ತಿರುವ ಕಳಂಕಿತ ಪೊಲೀಸ್ ಅಧಿಕಾರಿಗಳನ್ನು ಲೋಕಾಯುಕ್ತದ ಈ ಉನ್ನತ ಹುದ್ದೆಗಳಿಗೆ ಸದಾನಂದಗೌಡರು ನೇಮಿಸಿದ ಕ್ರಮ ಪ್ರಶ್ನಾರ್ಹವಾಗಿತ್ತು. ಇದು ಅದಾಗಲೇ ನ್ಯಾಯಾಲಯಕ್ಕೆ ವರದಿ ಸಲ್ಲಿಸುವ ಹಂತಕ್ಕೆ ಬಂದಿದ್ದ ಹಿಂದಿನ ಮುಖ್ಯಮಂತ್ರಿ ಹಾಗೂ ಬಿಜೆಪಿಯ ಇತರ ಪ್ರಭಾವಿ ಆರೋಪಿಗಳಿಗೆ ಅನುಕೂಲಕರವಾಗುವಂತೆ ಮಾರ್ಪಡಿಸಿಕೊಳ್ಳುವ ತಂತ್ರವಾಗಿತ್ತು. ಅದೇ ರೀತಿ ಭ್ರಷ್ಟಾಚಾರ ನಡೆಸಿದವರ ವಿರುದ್ಧ ನಿಷ್ಪಕ್ಷಪಾತ ತನಿಖೆಗೆ ಆಗ್ರಹಿಸುತ್ತಿದ್ದ ಮಾಜಿ ಮುಖ್ಯಮಂತ್ರಿಯಾದವರೊಬ್ಬರು, ತಮ್ಮ ಪುತ್ರನಿಗೆ ಸಂಬಂಧಿಸಿದ ಆದಾಯ ಮೀರಿದ ಆಸ್ತಿ ಸಂಪಾದನೆ ಕುರಿತಾದ ಪ್ರಕರಣದಲ್ಲಿ ತನಿಖೆ ನಡೆಸುತ್ತಿದ್ದ ಲೋಕಾಯುಕ್ತ ಎಡಿಜಿಪಿ ಅವರಿಗೆ ದೂರವಾಣಿಯಲ್ಲಿ ಬೆದರಿಕೆ ಹಾಕಿದ ಆ ಘಟನೆ ವಾಸ್ತವ ಸ್ಥಿತಿಯ ನಿದರ್ಶನ. ಅಧಿಕಾರಿಯ ಕರ್ತವ್ಯ ನಿರ್ವಹಣೆಗೆ ಅಡ್ಡಿಪಡಿಸಿದ್ದಲ್ಲದೇ, ಜೀವ ಬೆದರಿಕೆ ಹಾಕಿದ ಈ ಪ್ರಕರಣ ಪಾಳೇಗಾರಿಕೆಯ ಮನಸ್ಥಿತಿಯ ದ್ಯೋತಕ. ಎಡಿಜಿಪಿ ದರ್ಜೆಯ ಅಧಿಕಾರಿ ಈ ಸಂಬಂಧದಲ್ಲಿ ಬರೆದ ಪತ್ರವನ್ನು ಸರ್ಕಾರ ಪೂರಕ ಸಾಕ್ಷ್ಯವಿಲ್ಲ ಎಂಬ ತಾಂತ್ರಿಕ ನೆಪ ಒಡ್ಡಿ ಹಗುರವಾಗಿ ಪರಿಗಣಿಸಿತು. ಅಧಿಕಾರಿಗಳಿಗೆ ಬೆದರಿಕೆ ಹಾಕಿದ ವ್ಯಕ್ತಿಗಳನ್ನು ಕಾಯ್ದೆ ವ್ಯಾಪ್ತಿಗೆ ತರುವ ದಿಟ್ಟತನವನ್ನು ಸರ್ಕಾರ ಪ್ರದರ್ಶಿಸದೇ ಹೋಯಿತು. ಈ ಪ್ರಕರಣಗಳು ರಾಷ್ಟ್ರೀಯ ಮಟ್ಟದಲ್ಲಿ ಭ್ರಷ್ಟಾಚಾರದ ವಿರುದ್ಧ ಹೋರಾಟದ ಪ್ರತಾಪ ಕೊಚ್ಚಿಕೊಳ್ಳುವ ಬಿಜೆಪಿಯನ್ನು ವಾಸ್ತವವಾಗಿ ಸಮಯಸಾಧಕ, ಅಪ್ರಾಮಾಣಿಕ ರಾಜಕೀಯ ಪಕ್ಷ ಎಂಬುದು ಬಿಂಬಿತವಾಯಿತು.

ಭ್ರಷ್ಟಾಚಾರವು ಕ್ಯಾನ್ಸರ್ ರೋಗವಿದ್ದಂತೆ. ಅದನ್ನು ಪ್ರತಿಯೊಬ್ಬ ಭಾರತೀಯನು ನಿವಾರಿಸಲು ಪ್ರಯತ್ನಿಸಬೇಕು. ಯಾವುದೇ ಪಕ್ಷ ಮತ್ತು ನಾಯಕರು ಚುನಾವಣೆ ಸಂದರ್ಭದಲ್ಲಿ ಮೊದಲು ಹೇಳುವುದೇ ನಾವು ಭ್ರಷ್ಟಾಚಾರವನ್ನು ನಿಯಂತ್ರಿಸುತ್ತೇವೆ ಎಂದು. ಆದರೆ ವಾಸ್ತವವಾಗಿ ಅಧಿಕಾರಕ್ಕೆ ಬಂದ ಮೇಲೆ ಜಾಣತನದಿಂದ ಮರೆತು ಬಿಡುತ್ತಾರೆ. ಅಷ್ಟೇ ಅಲ್ಲ ತಾವೇ ತಮ್ಮನ್ನು ಹೆಚ್ಚು ಹೆಚ್ಚು ಭ್ರಷ್ಟಾಚಾರದಲ್ಲಿ ತೊಡಗಿಸಿಕೊಳ್ಳುತ್ತಾರೆ. ಏಕೆಂದರೆ ಇಂತಹ ಜನರಿಗೆ ಯಾವುದೇ ರೀತಿಯ ನೈತಿಕ ಮೌಲ್ಯಗಳಾಗಲೀ ಸಾಮಾಜಿಕ ಮೌಲ್ಯಗಳಾಗಲೀ ಇರುವುದಿಲ್ಲ. ಇವರಿಗೆ ಹಣವೇ ಸರ್ವಸ್ವವಾಗಿರುತ್ತದೆ. ಎಲ್ಲ ಸಮಸ್ಯೆಗಳಿಗೆ ಹಣವೇ ಪರಿಹಾರ ಎಂದು ಇವರು ಭಾವಿಸಿರುತ್ತಾರೆ. ಈ ಕಾರಣಕ್ಕಾಗಿಯೇ ಇಂದು ಭ್ರಷ್ಟಾಚಾರವು ಪ್ರಜಾಪ್ರಭುತ್ವದ ಎಲ್ಲ ಅಂಗಗಳಿಗೂ ವ್ಯಾಪಿಸಿ ನಾಗರಿಕ ಸಮಾಜದ ಸ್ವಾಸ್ಥ್ಯವನ್ನೇ ಹಾಳು ಮಾಡುತ್ತಿದೆ. ಎಲ್ಲ ದಾರಿ ಮುಚ್ಚಿ ಹೋದಾಗ ಅನಿವಾರ್ಯವಾಗಿ ಈಗ ನ್ಯಾಯಾಂಗ ಮಾತ್ರ ಎಚ್ಚೆತ್ತಿಕೊಂಡು ಇನ್ನಷ್ಟು ಭ್ರಷ್ಟಾಚಾರ ನಿಯಂತ್ರಣಕ್ಕೆ ಮುಂದಾಗಬೇಕೆಂದು ಭ್ರಷ್ಟಾಚಾರ ಬೀರಿರುವ ಸಾಮಾಜಿಕ ಪರಿಣಾಮಗಳ ಅಧ್ಯಯನ ಹೇಳುತ್ತದೆ.

ಅಧ್ಯಾಯ ಆರು

ಸಮಾರೋಪ

ಅಧ್ಯಾಯ ಆರು
ಸಮಾರೋಪ

೬.೧. ಪ್ರಸ್ತಾವನೆ

ಅಭಿವೃದ್ಧಿ ಪ್ರಕ್ರಿಯೆಗೆ ಸಂಬಂಧಿಸಿ ಜಾಗತಿಕ ಮಟ್ಟದಲ್ಲಿ ವಿಶ್ವಸಂಸ್ಥೆಯು ೨೦೦೦ನೆಯ ಸಾಲಿನಲ್ಲಿ 'ಗೌರ್ನೆನ್ಸ್' ಅಂಶವನ್ನು ಯುಎನ್‌ಡಿಪಿ ಥೀಮ್ ಸಾರಿದೆ. ಈ ನಿಟ್ಟಿನಲ್ಲಿ ಗೌರ್ನೆನ್ಸ್ ಅಥವಾ ಉತ್ತಮ ಆಡಳಿತ ಜಾಗತಿಕ ಮಟ್ಟದಲ್ಲಿ ಹೆಚ್ಚು ವ್ಯಾಪಕತೆ ಪಡೆಯುತ್ತಿದೆ. ಭ್ರಷ್ಟಾಚಾರ ರಹಿತ ವ್ಯವಸ್ಥೆ, ಪ್ರಜಾಪ್ರಭುತ್ವ, ಉತ್ತರದಾಯಿತ್ವ ಮತ್ತು ನಾಗರೀಕ ಸ್ನೇಹಿ ಜನಾಡಳಿತ ವ್ಯವಸ್ಥೆ ಇರುವಂತೆ ನೋಡಿಕೊಳ್ಳುವುದು ಇದರ ಮುಖ್ಯ ಆದ್ಯತೆಯಾಗಿದೆ. ನಿರ್ದಿಷ್ಟ ಅವಧಿಗೆ ನಡೆಯುವ ಚುನಾವಣೆ, ಪ್ರಜಾಪ್ರಭುತ್ವ, ನಾಯಕತ್ವ, ಪಾರದರ್ಶಕತೆ, ಸಹಭಾಗಿತ್ವ, ಮತದಾನ ಮುಂತಾದ ಸಂಗತಿಗಳು ಇವುಗಳ ಸೂಚಕಗಳೆನಿಸಿವೆ. ಈ ನಿಟ್ಟಿನಲ್ಲಿ ಭಾರತದಲ್ಲಿ ಅಳವಡಿಸಿಕೊಂಡಿರುವ ಓಂಬಡ್ಸ್‌ಮನ್ ಅಥವಾ ಲೋಕಪಾಲ್ ಹಾಗೂ ರಾಜ್ಯಾದಲ್ಲಿರುವ ಲೋಕಾಯುಕ್ತ ಸಂಸ್ಥೆಗಳು ಯುಎನ್‌ಡಿಪಿ ಸೂಚಿಸಿರುವ ಉತ್ತಮ ಆಡಳಿತ ವ್ಯವಸ್ಥೆಗೆ ಮುನ್ನುಡಿ ಒದಗಿಸಲಾಗುತ್ತವೆ ಎಂದರೆ ತಪ್ಪಾಗಲಾರದು.

ಭಾರತದಲ್ಲಿ ಭ್ರಷ್ಟಾಚಾರ ತೀವ್ರ ಆಳವಾಗಿ ಬೇರುಬಿಟ್ಟಿರುವ ಜೊತೆಗೆ ಹೆಮ್ಮರವಾಗಿ ಬೆಳೆದಿದೆ. ಭ್ರಷ್ಟಾಚಾರವು ತನ್ನ ಅಸ್ತಿತ್ವವನ್ನು ವೃದ್ಧಿಸಿಕೊಂಡಿದ್ದು, ಬಹುತೇಕ ಮಟ್ಟಿಗೆ ಸರ್ವರಿಂದಲೂ ಸಮ್ಮತಿಸಲ್ಪಟ್ಟ ಹಾಗೂ ಸಾರ್ವಜನಿಕ ಮೌಲ್ಯಗಳಲ್ಲಿ ತನ್ನ ಸ್ಥಾನವನ್ನು ಪಡೆದುಕೊಂಡು ಜಾಗತೀಕರಣದಲ್ಲಿ ತಾನು ಕೂಡ ಒಂದು ಭಾಗ ಎನ್ನುವಷ್ಟರ ಮಟ್ಟಿಗೆ ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ. ಭ್ರಷ್ಟಾಚಾರವು ಹಲವಾರು ಮಜಲುಗಳನ್ನು ಹೊಂದಿದ್ದು, ಇದರ ಆಳ-ಅಗಲವನ್ನಾಗಲೀ ಅಥವಾ ವ್ಯಾಪ್ತಿಯನ್ನಾಗಲೀ ನಿರ್ಧರಿಸುವುದು ಅಸಾಧ್ಯವಾದ ಕಾರ್ಯವೆನಿಸಿದೆ.

ಭ್ರಷ್ಟಾಚಾರವು ಹೆಚ್ಚಿದಂತೆಲ್ಲ ಅದು ದುರಾಡಳಿತಕ್ಕೆ ಪ್ರೇರಣೆ ನೀಡುತ್ತದೆ, ಸರ್ಕಾರಿ ದಾಖಲೆ ಪತ್ರಗಳನ್ನು ನಾಶ ಮಾಡುವುದು, ಕಳ್ಳಸಾಗಣೆ, ಸರ್ಕಾರಿ ಆಸ್ತಿಯನ್ನು ಕದಿಯುವುದು, ಸಾರ್ವಜನಿಕ ನಿಧಿಗಳನ್ನು ಖಾಸಗೀಕರಣಗೊಳಿಸುವುದು, ಫೋರ್ಜರಿ ಮಾಡುವುದು, ಲೆಕ್ಕದಲ್ಲಿ ಹೆಚ್ಚು ಕಡಿಮೆ ಮಾಡುವುದು, ಕಂದಾಯದ ಲೆಕ್ಕಪರಿಶೋಧನೆ ಮಾಡಿಸದೇ ಇರುವುದು, ಕಾನೂನು ಬಾಹಿರವಾಗಿ ಮಾಫಿ ಮಾಡುವುದು, ಬೆದರಿಕೆ ಹಾಕುವುದು, ಕಿರುಕುಳ ನೀಡುವುದು, ಅಪರಾಧಿಕ ನಡವಳಿಕೆ, ಸುಳ್ಳು ಸಾಕ್ಷಿ ನೀಡುವುದು, ಕ್ಷುಲ್ಲಕತನ, ಆಂತರಿಕ ಜ್ಞಾನವನ್ನು ಮತ್ತು ಗೌಪ್ಯ ಮಾಹಿತಿಯನ್ನು ದುರುಪಯೋಗಪಡಿಸಿಕೊಳ್ಳುವುದು, ನಿರ್ಣಯ ಕೈಗೊಳ್ಳುವಿಕೆಯ ಪ್ರಕ್ರಿಯೆಯಲ್ಲಿ ಸ್ವಜನ ಪಕ್ಷಪಾತ ಧೋರಣೆ ಹೊಂದುವುದು, ನಿಧಾನಗತಿಯನ್ನು ಅನುಸರಿಸುವುದು, ನಿಯಮಗಳನ್ನು ನಿರ್ಲಕ್ಷಿಸುವುದು, ತೆರಿಗೆ ತಪ್ಪಿಸುವುದು, ಕಾನೂನುಬಾಹಿರ ಮೇಲ್ವಿಚಾರಣೆ, ಸರ್ಕಾರಿ ಪತ್ರಗಳ ಮತ್ತು, ಸರ್ಕಾರಿ ಉಪಕರಣಗಳ ಅಸಮರ್ಪಕ ಬಳಕೆ, ಕಾನೂನುಬಾಹಿರ ಹಾಗೂ ಅನೈತಿಕ ಕೃತ್ಯಗಳನ್ನು ಎಸಗುವುದು ಹಾಗೂ ಶಿಷ್ಟಾಚಾರಕ್ಕೆ ವಿರುದ್ಧವಾಗಿ ವರ್ತಿಸುವುದು ಮುಂತಾದ ಅಂಶಗಳನ್ನು ಒಳಗೊಂಡಿದೆ. ಇವುಗಳ ಜೊತೆಗೆ ಬೃಹತ್ ಹಗರಣಗಳಂತಹ ದೊಡ್ಡ ಸರಮಾಲೆಯೇ ಇದೆ. ಇಷ್ಟೆಲ್ಲಾ ಹಂತಗಳನ್ನು ದಾಟಿ ಭ್ರಷ್ಟಾಚಾರವೆಂಬ ಪಿಡುಗನ್ನು ಹೋಗಲಾಡಿಸುವುದು ಇಂದು ಪ್ರತಿಯೊಂದು ರಾಷ್ಟ್ರ-ರಾಜ್ಯಗಳ ಪ್ರಮುಖ ಕಾರ್ಯಸೂಚಿಯಾಗಿದೆ. ಇವೆಲ್ಲದರ ನಡುವೆ ಭ್ರಷ್ಟಾಚಾರ ನಿರ್ಮೂಲನೆಯ ಪ್ರಯತ್ನದಲ್ಲಿ ಎಷ್ಟರಮಟ್ಟಿಗೆ ಯಶಸ್ವಿಯಾಗಿದ್ದೇವೆಂಬುದು ಪ್ರಸ್ತುತ ಸಂದರ್ಭದಲ್ಲಿ ಯಕ್ಷಪ್ರಶ್ನೆಯಾಗಿದೆ.

ಭ್ರಷ್ಟಾಚಾರ ದಿನೇ ದಿನೇ ಹೆಚ್ಚಾಗುತ್ತಿರುವುದಕ್ಕೆ ಕಾರಣವಾಗಿರುವ ಪ್ರಮುಖ ಅಂಶಗಳೆಂದರೆ, ಮಾನವೀಯ ಮೌಲ್ಯಗಳ ಕುಸಿತ, ದಕ್ಷ ಮತ್ತು ಪ್ರಾಮಾಣಿಕ ಅಧಿಕಾರಿಗಳ ಕೊರತೆ, ಹಣ ಮತ್ತು ಪ್ರಭಾವಿಗಳ ಕಪಿಮುಷ್ಟಿಯಲ್ಲಿ ಕಾನೂನು ತತ್ವ ಸಿದ್ಧಾಂತಗಳಿಲ್ಲದ ರಾಜಕಾರಣ, ಸತ್ಯ, ನ್ಯಾಯ, ನಿಷ್ಠೆಗೆ ಬರ, ಸಾರ್ವಜನಿಕ ಹೊಣೆಗಾರಿಕೆಯಿಂದ ದೂರ ಉಳಿಯುವುದು ಮುಂತಾದವು. ಹಣದ ಆಸೆಯಿಂದ ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳು ಕಾನೂನುಬಾಹಿರ ಕೃತ್ಯಗಳಲ್ಲಿ ಶಾಮೀಲಾಗುವುದರಿಂದ ದೇಶ ಉತ್ತಮ ಆಡಳಿತದಿಂದ ವಂಚಿತವಾಗಿ ಜನರ ಸಂಕಷ್ಟಗಳನ್ನು ಹೆಚ್ಚಿಸಿದೆ. ಇದಕ್ಕೆ ಉತ್ತಮ ಉದಾಹರಣೆಗಳೆಂದರೆ, ಕಲ್ಲಿದ್ದಲು ಗಣಿಗಳ ಗುತ್ತಿಗೆ ಹಗರಣ, ೨ಜಿ ಹಗರಣ, ಕಾಮನ್‌ವೆಲ್ತ್ ಕ್ರೀಡಾ ಹಗರಣ, ಬೋಫೋರ್ಸ್ ಹಗರಣ, ಮೇವು ಹಗರಣ, ಹವಾಲ ಹಗರಣ, ರಾಜ್ಯಕ್ಕೆ ಬಂದರೆ ಅಕ್ರಮ ಅದಿರು ಹಗರಣ, ಕೆಐಎಡಿಬಿ ಹಗರಣ, ಬಿಬಿಎಮ್‌ಪಿ ಹಗರಣ, ಛಾಪಾ ಕಾಗದ ಹಗರಣ, ಕೃಷ್ಣಾ ಮೇಲ್ದಂಡೆ ಯೋಜನೆಯ ಅಕ್ರಮ

ತುಂಡುಗುತ್ತಿಗೆ ಹಗರಣ. ಹೀಗೆ ಹಲವಾರು ಹಗರಣಗಳನ್ನು ಉದಾಹರಿಸಬಹುದು. ಭ್ರಷ್ಟರ ಪರಸ್ಪರ ಸಹಕಾರ ಮತ್ತು ಒಪ್ಪಿಗೆ ಇಲ್ಲದೆ ಇಂತಹ ಬೃಹತ್ ಹಗರಣಗಳು ಸಂಭವಿಸಲು ಸಾಧ್ಯವೇ ಇಲ್ಲ. ಸರ್ಕಾರಿ ನೌಕರರು, ಜನಪ್ರತಿನಿಧಿಗಳು ಹೇಳಿದಂತೆ ಕೇಳುತ್ತಾರೆ. ಇವರು ತಮ್ಮ ಅಧಿಕಾರವನ್ನು ಭದ್ರಪಡಿಸಿಕೊಳ್ಳಲು ತಮ್ಮ ಸ್ಥಾನಮಾನಗಳನ್ನು ಉತ್ತಮಪಡಿಸಿಕೊಳ್ಳಲು ಹಾಗೂ ಹಣ ಸಂಪಾದನೆ ಮಾಡಲು ಮಂತ್ರಿಗಳು ಅಥವಾ ಜನಪ್ರತಿನಿಧಿಗಳು ಹೇಳುವ ಮಾತು, ಸರ್ಕಾರಿ ಅಧಿಕಾರಿಗಳ ಪಾಲಿಗೆ ವೇದ ವಾಕ್ಯ ಆಗುತ್ತದೆ. ಇದರ ಪರಿಣಾಮ ಜನಪರ ಕಾರ್ಯಗಳು ಮೂಲೆಗುಂಪಾಗುತ್ತಾ ಹೋಗುತ್ತವೆ. ಅಭಿವೃದ್ಧಿ ಕಾರ್ಯಕ್ರಮಗಳ ಬಗ್ಗೆ ಅಧಿಕಾರಿಗಳಾಗಲೀ, ಮಂತ್ರಿಗಳಾಗಲೀ ಅಥವಾ ಜನಪ್ರತಿನಿಧಿಯಾಗಲೀ ಅಥವಾ ಯಾವುದೇ ರಾಜಕಾರಣಿಯಾಗಲೀ ಗಮನ ನೀಡುವುದಿಲ್ಲ. ಪರಿಣಾಮವಾಗಿ ಜನರ ಸಮಸ್ಯೆ ಹಾಗೂ ಕುಂದುಕೊರತೆಗಳು ಬೃಹದಾಕಾರವಾಗಿ ಬೆಳೆಯುತ್ತಾ ಹೋಗಿ ಜನರ ಸಾಮಾನ್ಯ ಜೀವನವನ್ನು ಯಾತನಾಮಯವನ್ನಾಗಿ ಮಾಡಿವೆ.

ಭ್ರಷ್ಟಾಚಾರ ನಿಯಂತ್ರಣಕ್ಕಾಗಿ ಅಸ್ತಿತ್ವದಲ್ಲಿರುವ ಅಥವಾ ಭ್ರಷ್ಟರ ಮೇಲೆ ಕಣ್ಣಿಟ್ಟಿರುವ ತನಿಖಾ ಸಂಸ್ಥೆಗಳ ವೈಫಲ್ಯವೋ ಅಥವಾ ಸಾಕ್ಷಿ ಪುರಾವೆಗಳನ್ನು ರಾಜಕೀಯ ಒತ್ತಡದಿಂದ ತಿರುಚುವ ಕುತಂತ್ರೋಪಾಯಗಳ ಫಲವೋ, ಒಟ್ಟಿನಲ್ಲಿ ದೇಶದ ಭ್ರಷ್ಟಾತಿಭ್ರಷ್ಟರು ಶಿಕ್ಷೆಗೊಳಗಾಗದೇ, ಉಪಾಯದಿಂದ ತಪ್ಪಿಸಿಕೊಳ್ಳುತ್ತಿದ್ದಾರೆ. ಕೆಲವೊಮ್ಮೆ ಭ್ರಷ್ಟಾಚಾರದ ವಿರುದ್ಧ ಅಥವಾ ಅವ್ಯವಹಾರಗಳ ವಿರುದ್ಧ ಪ್ರಬಲವಾದ ಕೂಗು ಕೇಳಿಬಂದರೆ, ಅಂತಹ ಸಂದರ್ಭದಲ್ಲಿ ಸರ್ಕಾರಗಳು ಜನರ ಕಣ್ಣೊರೆಸಲು ಆಯೋಗವೊಂದನ್ನು ನೇಮಿಸಿ, ತನಿಖೆ ನಡೆಸುವ ಶಾಸ್ತ್ರವನ್ನು ಮುಗಿಸುತ್ತವೆ. ಆದರೆ ಇಲ್ಲಿ ಗಮನಿಸಬೇಕಾದ ಪ್ರಮುಖ ಸಂಗತಿಯೆಂದರೆ, ಭ್ರಷ್ಟಾಚಾರದ ಆರೋಪದ ಮೇರೆಗೆ ತನಿಖೆ ನಡೆಸಲು ನೇಮಕಗೊಂಡ ಯಾವುದೇ ಆಯೋಗದ ವರದಿಗಳು ಅಥವಾ ಶಿಫಾರಸ್ಸುಗಳು ಇದುವರೆಗೂ ಬಹುತೇಕ ಮಟ್ಟಿಗೆ ಜಾರಿಗೊಂಡ ನಿದರ್ಶನಗಳಿಲ್ಲ. ಇದಕ್ಕೆ ಉತ್ತಮ ದೃಷ್ಟಾಂತವೆಂದರೆ ಮಾಜಿ ಪ್ರಧಾನಿಯೊಬ್ಬರನ್ನು ರಕ್ಷಿಸಲು ಜೆ.ಎಚ್. ಪಟೇಲ್ ಸರ್ಕಾರವು, ಕೇಂದ್ರೀಯ ತನಿಖಾದಳ (ಸಿಬಿಐ)ಕ್ಕೆ ಮುಕ್ತ ಹಾಗೂ ನಿಷ್ಪಕ್ಷಪಾತ ತನಿಖೆಗೆ ನೀಡಲಾಗಿದ್ದ ಅನುಮತಿಯನ್ನು ಇದ್ದಕ್ಕಿದ್ದಂತೆ ವಾಪಾಸ್ ಪಡೆಯಿತು. ಕೃಷ್ಣ ಮೇಲ್ದಂಡೆ ಯೋಜನೆಯ ತುಂಡುಗುತ್ತಿಗೆಯಲ್ಲಿ ಅಕ್ರಮ ನಡೆದಿದೆ ಎಂಬುದಾಗಿ ವೈಜನಾಥ್ ಪಾಟೀಲ್ ನೇತೃತ್ವದ ಸದನ ಸಮಿತಿ ಸರ್ಕಾರಕ್ಕೆ ವರದಿ ಸಲ್ಲಿಸಿದ ಸಂದರ್ಭದಲ್ಲಿ ಜೆ.ಎಚ್. ಪಟೇಲ್‌ರ ಸರ್ಕಾರಕ್ಕೆ ಭಯ ಆರಂಭವಾಗಿ, ಈ ಪ್ರಕರಣವು ಸಿಬಿಐ ತನಿಖೆಗೊಳಪಟ್ಟರೆ ಸರ್ಕಾರಕ್ಕೆ ಕಂಟಕಪ್ರಾಯವಾದಿತೆಂದು ಭಾವಿಸಿ, ಸರ್ಕಾರವು ಕೇವಲ ೨೪

ಗಂಟೆಗಳಲ್ಲಿ ಸಿಬಿಐ ತನಿಖೆಗೆ ಮುಕ್ತವಾಗಿದ್ದ ಆದೇಶವನ್ನು ರದ್ದುಗೊಳಿಸಿತು. ಇದರರ್ಥ ಭ್ರಷ್ಟಾಚಾರದ ವಿರುದ್ಧ ಹೋರಾಡಲು ಅಥವಾ ಭ್ರಷ್ಟತೆಯನ್ನು ಹೊರಗೆಳೆಯಲು ಯಾವುದೇ ಸರ್ಕಾರಕ್ಕೆ ಮನಸ್ಸಾಗಲೀ, ಇಚ್ಛಾಶಕ್ತಿಯಾಗಲೀ ಇಲ್ಲ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ.

ಹೀಗೆ ಭ್ರಷ್ಟಾಚಾರವು, ರಾಷ್ಟ್ರದ ಎಲ್ಲಾ ರಂಗಗಳಲ್ಲಿಯೂ ಆಳವಾಗಿ ಬೇರೂರಿದ್ದು, ಬಹುದೊಡ್ಡ ದುಷ್ಟ ಶಕ್ತಿಯಾಗಿ ಪರಿಣಮಿಸಿದೆ. ಸರ್ವವ್ಯಾಪ್ತಿಯಾಗಿರುವ ಈ ಪಿಡುಗನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡುವುದು ಅಸಾಧ್ಯವಾದ ಕಾರ್ಯವಾದರೂ ಸಹ, ಸರ್ಕಾರವು ಈ ನಿಟ್ಟಿನಲ್ಲಿ ಇಚ್ಛಾಶಕ್ತಿಯನ್ನು ಹೊಂದಿ, ಪ್ರಾಮಾಣಿಕ ಪ್ರಯತ್ನ ನಡೆಸಿದರೆ ಖಂಡಿತವಾಗಿಯೂ ಭ್ರಷ್ಟಾಚಾರವನ್ನು ನಿಯಂತ್ರಣ ಮಾಡಬಹುದು. ಭ್ರಷ್ಟಾಚಾರವನ್ನು ನಿಯಂತ್ರಣ ಮಾಡುವ ಉದ್ದೇಶದಿಂದ ರೂಪಿಸಲಾದ ಹಾಗೂ ಅಸ್ತಿತ್ವದಲ್ಲಿರುವ ಕಾನೂನುಗಳು ಪರಿಣಾಮಕಾರಿಯಾಗಿಲ್ಲದ ಕಾರಣ ಇಂದು ಸರ್ಕಾರಿ ಸಿಬ್ಬಂದಿ ಮತ್ತು ರಾಜಕಾರಣಿಗಳು ಭ್ರಷ್ಟಾಚಾರದ ಕೂಪದಲ್ಲಿ ಮುಳುಗಿದ್ದಾರೆ. ಭ್ರಷ್ಟಾಚಾರಿಗಳ ವಿರುದ್ಧ ಕ್ರಮ ಕೈಗೊಳ್ಳಲು ಅನೇಕ ತೊಂದರೆ ಹಾಗೂ ತೊಡಕುಗಳು ನಮ್ಮ ವ್ಯವಸ್ಥೆಯಲ್ಲಿವೆ. ಇದಕ್ಕೆ ಮೂಲಪ್ರೇರಣೆ 'ವಿಧಾನಸೌಧ' ಎಂಬುದಾಗಿ ಹಿಂದಿನ ಲೋಕಾಯುಕ್ತರಾಗಿದ್ದ ನ್ಯಾಯಮೂರ್ತಿ ಎನ್. ವೆಂಕಟಾಚಲರವರು ಪತ್ರಿಕಾ ಸಂದರ್ಶನವೊಂದರಲ್ಲಿ ಹೇಳಿದ್ದರು. ಈ ಹೇಳಿಕೆಯು ಭ್ರಷ್ಟಾಚಾರ ಹಬ್ಬಿದ ವ್ಯಾಪ್ತಿ ಹಾಗೂ ಅದರ ಘೋರತೆಯನ್ನು ಸೂಚಿಸುತ್ತದೆ. ಆದುದರಿಂದ ಭ್ರಷ್ಟಾಚಾರವನ್ನು ನಿಯಂತ್ರಣ ಮಾಡುವ ನಿಟ್ಟಿನಲ್ಲಿ ಪ್ರಥಮವಾಗಿ ರಾಜಕಾರಣಿಗಳ ಭ್ರಷ್ಟತೆಯನ್ನು ಬಗ್ಗುಬಡಿಯಬೇಕು. ಈ ನಿಟ್ಟಿನಲ್ಲಿ ಅಗತ್ಯವಿರುವ ಕಾನೂನುಗಳನ್ನು, ಕಾಯ್ದೆಗಳನ್ನು ರೂಪಿಸಬೇಕು. ಈಗಾಗಲೇ ಅಸ್ತಿತ್ವದಲ್ಲಿರುವ ಕಾನೂನು ಕಾಯ್ದೆಗಳಲ್ಲಿನ ಲೋಪದೋಷಗಳನ್ನು ಸರಿಪಡಿಸಬೇಕು.

ಚುನಾವಣಾ ಪ್ರಕ್ರಿಯೆಯು ದೋಷಮುಕ್ತವಾಗಿ ನಿಷ್ಪಕ್ಷಪಾತವಾಗಿ ಹಣ, ಹೆಂಡ ಮುಂತಾದ ಆಮಿಷಗಳ ರಹಿತವಾಗಿ ನಡೆಯುವಂತೆ ಚುನಾವಣಾ ಆಯೋಗವು ದಿಟ್ಟ ಕ್ರಮ ಕೈಗೊಳ್ಳಬೇಕು. ಚುನಾವಣಾ ವೆಚ್ಚದ ಮೇಲೆ ಸಂಪೂರ್ಣ ನಿಯಂತ್ರಣ ವಿಧಿಸಬೇಕು. ಅಂದರೆ ಅನಿಯಮಿತ ವೆಚ್ಚಕ್ಕೆ ಕಡಿವಾಣ ಹಾಕಬೇಕು, ಅಷ್ಟೇ ಅಲ್ಲ ಚುನಾವಣಾ ವೆಚ್ಚವನ್ನು ನಿಗದಿಪಡಿಸಬೇಕು. ಈ ನಿಟ್ಟಿನಲ್ಲಿ ಅಗತ್ಯವಿರುವ ಚುನಾವಣಾ ಸುಧಾರಣೆಗಳನ್ನು ಕಾನೂನಿನ ಮೂಲಕ ಜಾರಿಗೆ ತರಬೇಕು. ಚುನಾವಣಾ ಪ್ರಕ್ರಿಯೆಯಲ್ಲಿ ಅಕ್ರಮ ಎಸಗುವ ಅಭ್ಯರ್ಥಿಗಳನ್ನು ಗುರ್ತಿಸಿ, ಶಾಶ್ವತವಾಗಿ ಚುನಾವಣೆಗಳಲ್ಲಿ ಸ್ಪರ್ಧಿಸದಂತೆ ಕಾನೂನು ರೂಪಿಸಬೇಕು. ಅಪರಾಧ ಹಿನ್ನೆಲೆಯುಳ್ಳ ಅಭ್ಯರ್ಥಿಗಳಿಗೆ ಸ್ಪರ್ಧಿಸುವ ಅವಕಾಶವನ್ನೇ ನೀಡಬಾರದು. ಸಚಿವರು, ಲೋಕಸಭಾ ಸದಸ್ಯರು, ವಿಧಾನಸಭಾ ಮತ್ತು ವಿಧಾನ ಪರಿಷತ್ ಸದಸ್ಯರು ಹೀಗೆ ಎಲ್ಲಾ ರೀತಿಯ ಜನಪ್ರತಿನಿಧಿಗಳಿಗೆ, ಆಚಾರ

ಸಂಹಿತೆಯನ್ನು ರೂಪಿಸಿ, ಕಟ್ಟುನಿಟ್ಟಾಗಿ ಜಾರಿಗೆ ಬರುವಂತೆ ಮಾಡಬೇಕು. ಯಾವುದೇ ಸಾರ್ವಜನಿಕ ಸೇವಕ ಅಥವಾ ಸಚಿವ ಅಥವಾ ಪ್ರಾಧಿಕಾರದ ಅಧ್ಯಕ್ಷರ ವಿರುದ್ಧ ತನಿಖೆ ನಡೆಯುತ್ತಿದ್ದರೆ ಅಂತಹ ವ್ಯಕ್ತಿಯು ತನ್ನ ಹುದ್ದೆಯನ್ನು ತಾತ್ಕಾಲಿಕವಾಗಿ ಅಂದರೆ ತನಿಖೆ ಮುಗಿಯುವವರೆಗೂ ತ್ಯಜಿಸಬೇಕು. ಏಕೆಂದರೆ ಆತನು ತನ್ನ ಹುದ್ದೆಯಲ್ಲಿಯೇ ಮುಂದುವರಿದರೆ ತನ್ನ ಅಧಿಕಾರದ ಅಥವಾ ಹಣದ ಬಲದಿಂದ ತನಿಖೆ ನಡೆಸುವ ವ್ಯಕ್ತಿಗಳ ಮೇಲೆ ಅಥವಾ ತನಿಖಾ ಸಂಸ್ಥೆಗಳ ಮೇಲೆ ಪ್ರಭಾವ ಬೀರಬಹುದು.

ಭ್ರಷ್ಟರ ವಿರುದ್ಧ ಕ್ರಮ ಕೈಗೊಳ್ಳುವಂತೆ ಮಾಡುವಲ್ಲಿ ಇರುವ ಒಂದು ಪ್ರಮುಖ ತಂತ್ರವೆಂದರೆ 'ನ್ಯಾಯಾಂಗ ಕ್ರಿಯಾಶೀಲತೆ' (Judicial Activism). ನ್ಯಾಯಾಂಗ ವ್ಯವಸ್ಥೆಯು ತನ್ನ ಕ್ರಿಯಾಶೀಲತೆಯ ಮೂಲಕ ಇಂತಹ ಭ್ರಷ್ಟರ ಹಾಗೂ ಅವರ ವಿರುದ್ಧ ಇರುವ ಆರೋಪಗಳಿಗೆ ಸಂಬಂಧಿಸಿದಂತೆ ಲಭ್ಯ ಮೂಲಗಳಿಂದ ಮಾಹಿತಿ ಪಡೆದು, ಅಗತ್ಯ ಕ್ರಮಕ್ಕೆ ಆದೇಶಗಳನ್ನು ಹೊರಡಿಸಬೇಕು. ಸಾರ್ವಜನಿಕ ಹಿತಾಸಕ್ತಿಯನ್ನು ಎತ್ತಿಹಿಡಿಯಲು ಹಾಗೂ ಗಣ್ಯಾತಿಗಣ್ಯ ಭ್ರಷ್ಟರನ್ನು, ಅಧಿಕಾರಿಗಳನ್ನು ಮಟ್ಟಹಾಕಲು 'ನ್ಯಾಯಾಂಗ ಕ್ರಿಯಾಶೀಲತೆ' ಪರಿಕಲ್ಪನೆ ಇಲ್ಲಿ ಪ್ರಮುಖವಾದುದಾಗಿದೆ.

ಭ್ರಷ್ಟಾಚಾರಕ್ಕೆ ಶಿಕ್ಷೆ ಇಲ್ಲವೆಂಬ ವಿಶ್ವಾಸವೇ ಭ್ರಷ್ಟರ ಸಂಖ್ಯೆ ಹೆಚ್ಚಳಕ್ಕೆ ಕಾರಣವಾಗಿದೆ. ಈ ಭಾವನೆಯನ್ನು ಹೋಗಲಾಡಿಸುವ ಕೆಲಸವನ್ನು ಸರ್ಕಾರ ಮಾಡಬೇಕು. ಸರ್ಕಾರವು ಯಾವುದೇ ಒತ್ತಡಕ್ಕೆ ಒಳಗಾಗದೆ, ಎಲ್ಲಾ ಭ್ರಷ್ಟಾಚಾರದ ಪ್ರಕರಣಗಳನ್ನು ತ್ವರಿತವಾಗಿ ವಿಚಾರಣೆಗೆ ಒಳಪಡಿಸಿ, ನ್ಯಾಯವನ್ನು ಕಾಪಾಡಬೇಕು. ಉನ್ನತ ಸ್ಥಾನದಲ್ಲಿರುವವರು ಗಳಿಸಿರುವ ಅಕ್ರಮ ಆಸ್ತಿಯನ್ನು ತನಿಖೆಗೆ ಒಳಪಡಿಸಿ, ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವಂಥ ಪರಿಸ್ಥಿತಿ ಏರ್ಪಟ್ಟರೆ ಹಾಗೂ ಭ್ರಷ್ಟಾಚಾರ ಆರೋಪ ಸಾಬೀತಾದ ವ್ಯಕ್ತಿಗೆ ತೀವ್ರ ಹಾಗೂ ಕಠಿಣ ಶಿಕ್ಷೆ ವಿಧಿಸಲ್ಪಡುವಂತಹ ಸಂದರ್ಭ ಸೃಷ್ಟಿಯಾದರೆ ಸರ್ವವ್ಯಾಪಿಯಾಗಿರುವ ಭ್ರಷ್ಟಾಚಾರ ನಿಯಂತ್ರಣಕ್ಕೆ ಬರಲು ಸಾಧ್ಯವಾದೀತು.

ಭ್ರಷ್ಟಾಚಾರವನ್ನು ನಿಯಂತ್ರಣ ಮಾಡುವಲ್ಲಿ, ಲೋಕಾಯುಕ್ತವು ಒಂದು ಉತ್ತಮ ಮತ್ತು ಪರಿಣಾಮಕಾರಿ ಸಂಸ್ಥೆಯಾಗಿದ್ದು, ಇದು ಬದ್ಧತೆಯಿಂದ ಕಾರ್ಯನಿರ್ವಹಿಸಲು ಅಗತ್ಯವಿರುವ ವಾತಾವರಣ ಸೃಷ್ಟಿಯಾಗದೇ ಇರುವುದು ಒಂದು ದುರ್ದೈವದ ಸಂಗತಿ. ಲೋಕಾಯುಕ್ತವು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುವಂತೆ ಮಾಡುವಲ್ಲಿ ಅಗತ್ಯವಿರುವ ಕೆಲವು ಪ್ರಮುಖ ಅಂಶಗಳೆಂದರೆ, ಪ್ರಮುಖವಾಗಿ ಲೋಕಾಯುಕ್ತ ಕಾಯ್ದೆಗೆ ತಿದ್ದುಪಡಿ ಮಾಡಬೇಕು. ಕಾಯ್ದೆಗೆ ತಿದ್ದುಪಡಿ ತರದೇ ಲೋಕಾಯುಕ್ತ ಸಂಸ್ಥೆಯು ವ್ಯವಸ್ಥಿತವಾಗಿ ಹಾಗೂ ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸಲು ಸಾಧ್ಯವಿಲ್ಲ. ಭ್ರಷ್ಟಾಚಾರ ನಿಯಂತ್ರಣಕ್ಕಾಗಿ ಸರ್ಕಾರ ರಚಿಸಿರುವ ಲೋಕಾಯುಕ್ತ

ಕಾಯ್ದೆಯಲ್ಲಿ ಕೆಲವು ಪ್ರಮುಖ ಲೋಪಗಳಿದ್ದು, ಇದರಿಂದಾಗಿ ಲೋಕಾಯುಕ್ತ ಮತ್ತು ಉಪಲೋಕಾಯುಕ್ತರಿಗೆ ನಿಗದಿಪಡಿಸಿರುವ ಅಧಿಕಾರ ವ್ಯಾಪ್ತಿಯಲ್ಲಿಯೂ ಸಹ ಕೆಲವು ದೋಷಗಳಿವೆ. ಪರಿಣಾಮವಾಗಿ ಇಬ್ಬರಿಗೂ ತಮ್ಮ ಕಾರ್ಯ ನಿರ್ವಹಣೆಯಲ್ಲಿ ದೂರಿನ ಮತ್ತು ಆಪಾದನೆಯ ಅನ್ವಯ ಸಮರ್ಪಕವಾಗಿ ಕ್ರಮ ಜರುಗಿಸಲು ಸಾಧ್ಯವಾಗದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಇದರಿಂದಾಗಿ ಸಕಾಲದಲ್ಲಿ ಸಾರ್ವಜನಿಕರ ನೆರವಿಗೆ ಧಾವಿಸಬೇಕಾದಂತಹ ಪ್ರಕರಣಗಳಲ್ಲಿ ತಕ್ಷಣ ಸ್ವಯಂ ಪ್ರೇರಣೆಯಿಂದ ಅಧಿಕಾರವನ್ನು ಚಲಾಯಿಸಲು ಕಾಯ್ದೆಯಲ್ಲಿ ಲೋಕಾಯುಕ್ತರಿಗೆ ಅವಕಾಶವೇ ಇಲ್ಲ. ಉಪಲೋಕಾಯುಕ್ತರಿಗೆ ಸ್ವಯಂ ಪ್ರೇರಣೆಯಿಂದ ಕ್ರಮ ತೆಗೆದುಕೊಳ್ಳುವ ಅಧಿಕಾರವಿದ್ದರೂ ಕಾಯ್ದೆ ಪ್ರಕಾರ ಲೋಕಾಯುಕ್ತರ ವ್ಯಾಪ್ತಿಗೆ ಒಳಪಡುವ ಅಧಿಕಾರಿಗಳ ವಿರುದ್ಧ ಏನೂ ಮಾಡಲಾಗದಂತಹ ಸ್ಥಿತಿ ಇದೆ. ಆದುದರಿಂದ ಈ ಲೋಪವನ್ನು ಸರಿಪಡಿಸಲು ಲೋಕಾಯುಕ್ತರ ವ್ಯಾಪ್ತಿಗೆ ಒಳಪಡುವ ಎ ದರ್ಜೆಯ ಹಿರಿಯ ಅಧಿಕಾರಿಗಳ ವಿರುದ್ಧ ಸ್ವಯಂ ಪ್ರೇರಣೆಯಿಂದ ಕ್ರಮ ಜರುಗಿಸಲು, ಕಾಯ್ದೆಯಲ್ಲಿ ಅವಕಾಶ ಮಾಡಿಕೊಡುವ ಅಗತ್ಯತೆ ಇದೆ.

ಲೋಕಾಯುಕ್ತ ಕಾಯ್ದೆಯ ಕಲಮು ೭(೧)ರ ಪ್ರಕಾರ, ಮುಖ್ಯಮಂತ್ರಿ (ಮೊದಲನೇ ವರ್ಗ), ಸಚಿವರು (ಎರಡನೇ ವರ್ಗ), ಶಾಸಕರು (ಮೂರನೇ ವರ್ಗ), ಸರ್ಕಾರದ ಕಾರ್ಯದರ್ಶಿಗಳು, ಹೆಚ್ಚುವರಿ ಕಾರ್ಯದರ್ಶಿಗಳು, ಜಂಟಿ ಕಾರ್ಯದರ್ಶಿಗಳು (ನಾಲ್ಕನೇ ವರ್ಗ), ಲೋಕಾಯುಕ್ತರ ವ್ಯಾಪ್ತಿಗೆ ಒಳಪಡುತ್ತಾರೆ. ಮೊದಲ ಮೂರು ವರ್ಗಗಳಿಗೆ ಸೇರಿದವರ ವಿರುದ್ಧ ಸ್ವಯಂಪ್ರೇರಿತರಾಗಿ ಕ್ರಮ ಜರುಗಿಸಲು ಅವಕಾಶ ನೀಡುವುದಕ್ಕೆ ಸಾಧ್ಯವಾಗದಿದ್ದರೂ ಪರವಾಗಿಲ್ಲ, ಆದರೆ ಕೊನೆಯ ಪಕ್ಷ ನಾಲ್ಕನೇ ವರ್ಗವನ್ನಾದರೂ ಸಹ ಈ ವ್ಯಾಪ್ತಿಗೆ ಒಳಪಡಿಸುವುದು ಅತ್ಯಂತ ಅವಶ್ಯಕ. ಸದರಿ ಕಾಯ್ದೆ ಪ್ರಕಾರ, ಈ ನಾಲ್ಕು ವರ್ಗಗಳಿಗೆ ಸೇರಿದವರ ವಿರುದ್ಧ ಲೋಕಾಯುಕ್ತರು ಯಾವುದೇ ಕ್ರಮ ಜರುಗಿಸಬೇಕಾದರೂ, ಜವಾಬ್ದಾರಿಯುತ ವ್ಯಕ್ತಿಯೊಬ್ಬರು ಗಂಭೀರ ಸ್ವರೂಪದ ಆರೋಪ ಮಾಡಿರಬೇಕು. ಅದೂ ಆರೋಪವನ್ನೊಳಗೊಂಡ ದೂರನ್ನು ನಿಗದಿತ ಪ್ರಮಾಣಪತ್ರದ ರೂಪದಲ್ಲಿಯೇ ಸಲ್ಲಿಸಬೇಕು. ಇದು ಸರಿಯಾದ ಕ್ರಮವೇ ಆಗಿದೆ. ಆದರೆ ಲೋಕಾಯುಕ್ತ ಕಾಯ್ದೆಯ ಕಲಮು ೭(೧)(೪) ಸಂಬಂಧ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಹೊರಡಿಸಿರುವ ಅಧಿಸೂಚನೆಯ ವ್ಯಾಪ್ತಿಯ ಅಧಿಕಾರಿಗಳ (ಐದನೇ ವರ್ಗ) ವಿರುದ್ಧ ಸ್ವಯಂ ಪ್ರೇರಣೆಯಿಂದ ಕ್ರಮ ಜರುಗಿಸಲು ಲೋಕಾಯುಕ್ತರಿಗೆ ಅಧಿಕಾರ ಇಲ್ಲದಿರುವುದರಿಂದ, ಭ್ರಷ್ಟಾಚಾರವನ್ನು ಹಾಗೂ ಸಾರ್ವಜನಿಕರ ಕುಂದುಕೊರತೆಗಳನ್ನು ನಿವಾರಣೆ ಮಾಡಲು ಲೋಕಾಯುಕ್ತರು ಅಶಕ್ತರಾಗಿದ್ದಾರೆ ಎಂದೇ ಹೇಳಬಹುದು.

ಲೋಕಾಯುಕ್ತ ಸಂಸ್ಥೆಯ ಶೇ. ೯೦ ರಷ್ಟು ಕಾರ್ಯಭಾರ ಉಪಲೋಕಾಯುಕ್ತರ ವ್ಯಾಪ್ತಿಗೆ ಬರುತ್ತದೆ. ಇವರ ವ್ಯಾಪ್ತಿಗೆ ಒಳಪಡುವ ನೌಕರರ ವಿರುದ್ಧ ತನಿಖೆ ಕೈಗೊಳ್ಳುವಂತೆ ಕೋರಿ ಬರುವ

ದೂರುಗಳ ಜತೆಗೆ ಮಾಧ್ಯಮಗಳ ವರದಿ, ದೂರವಾಣಿ ಮೂಲಕ ದೊರೆತ ಮಾಹಿತಿ, ಮೂಗರ್ಜಿಗಳನ್ನು ಆಧರಿಸಿಯೂ ತನಿಖೆ ನಡೆಸಲು ಕ್ರಮ ತೆಗೆದುಕೊಳ್ಳಬಹುದಾಗಿದೆ. ಸ್ವಯಂ ಪ್ರೇರಿತ ಅಧಿಕಾರ ಚಲಾವಣೆಯಿಂದ ಜನಸಾಮಾನ್ಯರಿಗೆ ಹೆಚ್ಚು ಅನುಕೂಲಕರವಾಗುತ್ತದೆ. ಆದ್ದರಿಂದ ಲೋಕಾಯುಕ್ತರಿಗೂ ಅವರ ವ್ಯಾಪ್ತಿಗೆ ಒಳಪಡುವ ನಾಲ್ಕನೇ ವರ್ಗದ (ಎ ದರ್ಜೆ) ಅಧಿಕಾರಿಗಳ ವಿರುದ್ಧ ಸ್ವಯಂ ಪ್ರೇರಿತರಾಗಿ ಕ್ರಮ ಜರುಗಿಸಲು ಅವಕಾಶ ಮಾಡಿಕೊಡಬೇಕಾಗಿದೆ. ಈ ನಿಟ್ಟಿನಲ್ಲಿ ಕಾಯ್ದೆಗೆ ಅವಶ್ಯ ತಿದ್ದುಪಡಿ ಮಾಡಬೇಕಾಗಿದೆ.

ಭ್ರಷ್ಟ ಅಧಿಕಾರಿಗಳ ವಿರುದ್ಧ ಕ್ರಮಕ್ಕೆ ಲೋಕಾಯುಕ್ತರಿಗೆ 'ಪರಮಾಧಿಕಾರ' ನೀಡದೇಯಿದ್ದರೂ ಹೆಚ್ಚಿನ ಅಧಿಕಾರ ನೀಡುವುದು ಅಗತ್ಯ ಹಾಗೂ ಅನಿವಾರ್ಯ ಆಗಿದೆ. ಕೇವಲ ಭ್ರಷ್ಟರನ್ನು ಹಿಡಿಯುವುದು ಮಾತ್ರ ಲೋಕಾಯುಕ್ತರ ಕೆಲಸ. ಭ್ರಷ್ಟರನ್ನು ಶಿಕ್ಷಿಸುವ ಅಥವಾ ಅವರ ವಿರುದ್ಧ ಕ್ರಮ ಜರುಗಿಸುವ ಅಧಿಕಾರ ಪ್ರಸ್ತುತದಲ್ಲಿ ಲೋಕಾಯುಕ್ತ ಸಂಸ್ಥೆಗೆ ಇಲ್ಲ. ಲೋಕಾಯುಕ್ತದ ಬಲೆಗೆ ಸಿಕ್ಕಿಬಿದ್ದ ಭ್ರಷ್ಟರು ಹೇಗೆ ತಪ್ಪಿಸಿಕೊಳ್ಳುತ್ತಾರೆ ಎಂಬುದಕ್ಕೆ ಒಂದು ಉತ್ತಮ ದೃಷ್ಟಾಂತವೆಂದರೆ, ಭ್ರಷ್ಟಾಚಾರದ ಆಪಾದನೆ ಹೊತ್ತ ಆರೋಪಿಗಳ ಮೇಲೆ ವಿಚಾರಣೆ ನಡೆಸಿ ಲೋಕಾಯುಕ್ತ ಸಂಸ್ಥೆಯಿಂದ ಲೋಕಾಯುಕ್ತ ಕಾಯ್ದೆ ಸೆಕ್ಷನ್ ೧೨(೩)ರ ಪ್ರಕಾರ ತನಿಖೆ ನಡೆಸಿ, ಮುಂದಿನ ಕ್ರಮಕ್ಕಾಗಿ ಸರ್ಕಾರಕ್ಕೆ ಶಿಫಾರಸ್ಸುಗಳನ್ನು ಸಲ್ಲಿಸಲಾಗುತ್ತದೆ. ಕೋಟ್ಯಾಂತರ ರೂಪಾಯಿಗಳ ಹಗರಣದಲ್ಲಿ ಸರ್ಕಾರ, ಭ್ರಷ್ಟ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಕೋರಿ, ೧ ಏಪ್ರಿಲ್ ೨೦೧೦ ರಿಂದ ೩೧ ಮಾರ್ಚ್ ೨೦೧೨ ರ ಅವಧಿಯಲ್ಲಿ ಲೋಕಾಯುಕ್ತ ಕಾಯಿದೆ ಸೆಕ್ಷನ್ ೧೨(೩)ರ ಅನ್ವಯ ಸಲ್ಲಿಕೆಯಾದ ವರದಿಗಳ ಸಂಖ್ಯೆ ೯೭೩. ಅದರಲ್ಲಿ ಸರ್ಕಾರದಿಂದ ಮುಂದಿನ ಕ್ರಮಕ್ಕಾಗಿ ಪ್ರಾಸಿಕ್ಯೂಷನ್‌ಗೆ ಅನುಮತಿ ದೊರೆತಿದ್ದು ಕೆಲವೇ ಪ್ರಕರಣಗಳಿಗೆ ಮಾತ್ರ‌ಳ 'ಬಿ' ರಿಪೋರ್ಟ್ ಸಲ್ಲಿಕೆಯಾಗಿದ್ದು, ೧೧೭ ಪ್ರಕರಣಗಳಿಗೆ, ಲೋಕಾಯುಕ್ತರು ಕಳುಹಿಸಿದ ವರದಿಗಳನ್ನಾಧರಿಸಿ, ಸರ್ಕಾರ ಮಾಡಬಹುದಾದ ಕ್ರಮಗಳೆಂದರೆ, ಎರಡನೆ ವಿಚಾರಣೆಗಾಗಿ ಮತ್ತೆ ಲೋಕಾಯುಕ್ತರಿಗೆ ಕಳುಹಿಸುವುದು ಹಾಗೂ ಎರಡನೆ ವಿಚಾರಣೆಯಲ್ಲೂ ಆರೋಪಗಳು ಸಾಬೀತಾದಲ್ಲಿ ಅಂತಹ ಅಧಿಕಾರಿಯನ್ನು ಸೇವೆಯಿಂದ ವಜಾ ಮಾಡುವುದು ಅಥವಾ ತೆಗೆದುಹಾಕುವುದು ಅಥವಾ ಪಿಂಚಣಿ ಕಡಿತಗೊಳಿಸುವುದು. ಆದರೆ ಇವೆಲ್ಲಾ ಕೇವಲ ದಂಡನಾರ್ಹ ಕ್ರಮಗಳು. ಲೋಕಾಯುಕ್ತರು ಸಲ್ಲಿಸುವ ಎಲ್ಲಾ ವರದಿಗಳ ಮೇಲೆ ಸರ್ಕಾರ ಕ್ರಮ ಕೈಗೊಳ್ಳಲೇಬೇಕೆಂಬ ನಿಯಮವಿಲ್ಲ. ಇದು ಸರ್ಕಾರದ ವಿವೇಚನೆಗೆ ಬಿಟ್ಟ ವಿಚಾರ. ಆದರೆ ಲೋಕಾಯುಕ್ತರು ಕಳುಹಿಸುವ ವರದಿಗಳನ್ನಾಧರಿಸಿ ಸರ್ಕಾರವು ಕಟ್ಟುನಿಟ್ಟಿನ ಶಿಸ್ತಿನ ಕ್ರಮ ಕೈಗೊಳ್ಳುವ ಮೂಲಕ ಆತ್ಮಸಾಕ್ಷಿಯನ್ನು ಹಾಗೂ ಎದೆಗಾರಿಕೆಯನ್ನು ಪ್ರದರ್ಶಿಸಬೇಕು. ಭ್ರಷ್ಟ ಅಧಿಕಾರಿಗಳಿಂದ

ಬರುವ ಒತ್ತಡಕ್ಕೆ ಮಣಿದು ಸರ್ಕಾರ ಭ್ರಷ್ಟರ ರಕ್ಷಣೆಗೆ ಮುಂದಾಗಬಾರದು. ಲೋಕಾಯುಕ್ತರ ಸಲಹೆಗಳನ್ನು ವಿಚಾರಣೆ ಮಾಡಿ ಅದರ ಆಧಾರದ ಮೇಲೆ ಸೂಕ್ತ ಕ್ರಮ ಕೈಗೊಳ್ಳಬೇಕು. ಹೀಗಾದಾಗ ಮಾತ್ರ ಸರ್ಕಾರಕ್ಕೆ ಸುಭದ್ರತೆ ಬರುತ್ತದೆ. ಜನರಲ್ಲಿ ಸರ್ಕಾರದ ಬಗ್ಗೆ ಹಾಗೂ ಲೋಕಾಯುಕ್ತ ಸಂಸ್ಥೆಯ ಬಗ್ಗೆ ಒಳ್ಳೆಯ ನಂಬಿಕೆ ಮೂಡುತ್ತದೆ.

ಲೋಕಾಯುಕ್ತವನ್ನು ಬಲಪಡಿಸುವಲ್ಲಿ ಇರುವ ಮತ್ತೊಂದು ಪ್ರಮುಖ ಅಂಶವೆಂದರೆ, ಲೋಕಾಯುಕ್ತರಿಗೆ 'ಸಂವಿಧಾನಬದ್ಧ' ಸ್ಥಾನಮಾನಗಳನ್ನು ನೀಡಬೇಕು. ಈ ಹಿನ್ನೆಲೆಯಲ್ಲಿ ಅಖಿಲಭಾರತ ಲೋಕಾಯುಕ್ತ ಹಾಗೂ ಉಪಲೋಕಾಯುಕ್ತರ ಸಂಘ ಕೇಂದ್ರ ಸರ್ಕಾರವನ್ನು ಒತ್ತಾಯಿಸಿದೆ. ೨೦೦೭ರಲ್ಲಿ ಬೆಂಗಳೂರಿನಲ್ಲಿ ನಡೆದ ಎರಡು ದಿನಗಳ ಈ ಸಮ್ಮೇಳನದಲ್ಲಿ ಮಾತನಾಡಿದ ಸಂಘದ ಅಧ್ಯಕ್ಷ ನ್ಯಾಯಮೂರ್ತಿ ಎಸ್.ಎಚ್.ಎ. ರಾಜಾರವರು ಈ ಬೇಡಿಕೆಯನ್ನು ಸರ್ಕಾರದ ಮುಂದಿಟ್ಟರು. ಭ್ರಷ್ಟಾಚಾರ ತಡೆ ಹಾಗೂ ಕುಲಗೆಟ್ಟ ಆಡಳಿತವನ್ನು ಸರಿಪಡಿಸಲು ಈ ಕ್ರಮ ಸಹಕಾರಿಯಾಗಲಿದೆ ಎಂದು ಹಾಗೂ ಲೋಕಾಯುಕ್ತರನ್ನು ಕೇವಲ ಪೇಪರ್ ಹುಲಿಗಳ ಮಟ್ಟಕ್ಕೆ ಸೀಮಿತ ಗೊಳಿಸಬಾರದು, ಅವರಿಗೆ ಹಲ್ಲು ಮತ್ತು ಉಗುರು ಮೂಡುವಂತಹ ಅಧಿಕಾರ ನೀಡಬೇಕು. ಹೀಗಾದರೆ ಮಾತ್ರ ಭ್ರಷ್ಟತೆಯ ಹತೋಟಿಗೆ ಹಾಗೂ ಲೋಕಾಯುಕ್ತರ ಪ್ರಯತ್ನಗಳಿಗೆ ಸಾರ್ಥಕತೆ ದೊರೆಯುತ್ತದೆ ಎಂಬುದಾಗಿ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಈ ಅಭಿಪ್ರಾಯಕ್ಕೆ ಸರ್ಕಾರವು ಮನ್ನಣೆ ಕೊಟ್ಟಿದ್ದೇ ಆದಲ್ಲಿ ನಿಜಕ್ಕೂ ಭ್ರಷ್ಟಾಚಾರದ ನಿಯಂತ್ರಣ ಪ್ರಕ್ರಿಯೆಯಲ್ಲಿ ಹೊಸ ಆಯಾಮವನ್ನು ಸೃಷ್ಟಿಸಿದಂತಾಗುತ್ತದೆ. ಜೊತೆಗೆ ಉತ್ತಮ ಆಡಳಿತಕ್ಕೆ ಪ್ರೋತ್ಸಾಹ ನೀಡಿದಂತಾಗುತ್ತದೆ.

ಲೋಕಾಯುಕ್ತ ಕಾಯ್ದೆಯನ್ನು ಬಲಗೊಳಿಸುವ ನಿಟ್ಟಿನಲ್ಲಿ 'ಸೇವಾ ನಿಯಮ'ಗಳನ್ನು ಬದಲಿಸಬೇಕು. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು, ಸರ್ಕಾರಿ ಅಧಿಕಾರಿಗಳನ್ನು, ಭ್ರಷ್ಟರನ್ನು ರಕ್ಷಿಸುವ ಉದ್ದೇಶದಿಂದ ಅವರಿಗೆ ಅನುಕೂಲವಾಗುವ ರೀತಿಯಲ್ಲಿ ಸೇವಾ ನಿಯಮಕ್ಕೆ ತಿದ್ದುಪಡಿ ಮಾಡುತ್ತಿವೆ. ಇದರಿಂದಾಗಿ ಕೇಂದ್ರೀಯ ತನಿಖಾದಳ, ಕೇಂದ್ರೀಯ ಜಾಗೃತದಳ ಹಾಗೂ ಲೋಕಾಯುಕ್ತದಂತಹ ತನಿಖಾ ಸಂಸ್ಥೆಗಳ ಅಧಿಕಾರವನ್ನು ಮೊಟಕುಗೊಳಿಸಿದಂತಾಗುತ್ತದೆ ಹಾಗೂ ಭ್ರಷ್ಟರನ್ನು ಹಿಡಿಯುವಲ್ಲಿ ಇವುಗಳ ಕೈಗಳನ್ನು ಕಟ್ಟಿಹಾಕಿದಂತಾಗುತ್ತದೆ. ಪರಿಣಾಮವಾಗಿ ಕೇವಲ ನೂರು ರೂಪಾಯಿಗಳನ್ನೋ ಅಥವಾ ಐನೂರು ರೂಪಾಯಿಗಳನ್ನೋ ಲಂಚ ಸ್ವೀಕರಿಸುವ ಗುಮಾಸ್ತನನ್ನು ಹಿಡಿದು ಅಮಾನತ್ತು ಗೊಳಿಸುವ ಸರ್ಕಾರ ಆದಾಯಕ್ಕೆ ಮೀರಿ ಕೋಟ್ಯಾಂತರ ರೂಪಾಯಿಗಳನ್ನು ಅಕ್ರಮವಾಗಿ ಸಂಪಾದಿಸುವ ಅಧಿಕಾರಿಗಳಿಗೆ ರಾಜಮರ್ಯಾದೆಯನ್ನು ನೀಡುತ್ತಿದೆ. ಇಂತಹವುಗಳನ್ನು ತಪ್ಪಿಸುವ ಸಲುವಾಗಿ

ಹಾಗೂ ಭ್ರಷ್ಟರಿಗೆ ಸರಿಯಾದ ಶಿಕ್ಷೆಯಾಗಬೇಕೆನ್ನುವ ಉದ್ದೇಶದಿಂದ, ಸರ್ಕಾರವು 'ಕರ್ನಾಟಕ ನಾಗರೀಕ ಸೇವಾ ನಿಯಮ ೧೯೫೭'ರ ೧೦ನೇ ಸೆಕ್ಷನ್‌ಗೆ ತಿದ್ದುಪಡಿ ತರುವುದು ಅತ್ಯಗತ್ಯವಾದುದಾಗಿದೆ. ಏಕೆಂದರೆ ಈ ನಿಯಮದ ಪ್ರಕಾರ ಕೇವಲ ಲಂಚ ತೆಗೆದುಕೊಳ್ಳುವಾಗ ಸಾಕ್ಷ್ಯ ಸಮೇತ ಬಲೆಗೆ ಬಿದ್ದ ನೌಕರರನ್ನು ಮಾತ್ರ ತಕ್ಷಣ ಸೇವೆಯಿಂದ ಅಮಾನತ್ತು ಮಾಡಲು ಸಾಧ್ಯವಿದೆ. ಆದರೆ ಆದಾಯಕ್ಕಿಂತ ಹೆಚ್ಚು ಆಸ್ತಿಯನ್ನು ಅಕ್ರಮವಾಗಿ, ಕಾನೂನುಬಾಹಿರವಾಗಿ ಸಂಪಾದಿಸುವ ಅಧಿಕಾರಿಗಳ ವಿರುದ್ಧ ದಾಳಿ ನಡೆದು, ಆರೋಪಪಟ್ಟಿ ಸಲ್ಲಿಸಿದ ಬಳಿಕ ಮಾತ್ರವೇ ಅಮಾನತ್ತು ಮಾಡಲು ಕಾನೂನಿನಲ್ಲಿ ಅವಕಾಶವಿದೆ.ಈ ಹಿನ್ನೆಲೆಯಲ್ಲಿ ಭ್ರಷ್ಟರ ವಿರುದ್ಧ ತ್ವರಿತವಾಗಿ ಕಾರ್ಯಾಚರಣೆ ಮಾಡಲು ಸದರಿ ನಿಯಮಕ್ಕೆ ತಿದ್ದುಪಡಿ ತರುವುದು ಸೂಕ್ತವಾಗಿದೆ.

ಕೆಲವು ಹೆಚ್ಚು ಭ್ರಷ್ಟಾಚಾರ ತಾಂಡವವಾಡುತ್ತಿರುವ ಇಲಾಖೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಭ್ರಷ್ಟರ ವಿರುದ್ಧ ನೇರ ತನಿಖೆಯನ್ನು ನಡೆಸುವ ಅಧಿಕಾರವನ್ನು ಲೋಕಾಯುಕ್ತಕ್ಕೆ ಸರ್ಕಾರ ನೀಡಬೇಕು. ಉದಾಹರಣೆಗೆ ಪ್ರಸ್ತುತದಲ್ಲಿ ಪೊಲೀಸ್ ಇಲಾಖೆಯು ಅತ್ಯಂತ ಹೆಚ್ಚು ಭ್ರಷ್ಟಾಚಾರದಲ್ಲಿ ಮುಳುಗಿರುವ ಇಲಾಖೆಯಾಗಿದ್ದು, ಇಂತಹ ಭ್ರಷ್ಟ ಅಧಿಕಾರಿಗಳ ವಿರುದ್ಧ ನಡೆಯುವ 'ಇಲಾಖಾ ತನಿಖೆ'ಗಳಿಂದ ಏನೂ ಪ್ರಯೋಜನವಿಲ್ಲ. ಇಲಾಖಾಮಟ್ಟದಲ್ಲಿ ತನಿಖೆಗಳನ್ನು ನಡೆಸುವ ಬದಲು ಲೋಕಾಯುಕ್ತರಿಗೆ ನೇರವಾಗಿ ತನಿಖೆ ನಡೆಸುವ ಅಧಿಕಾರವನ್ನು ನೀಡುವುದು ಅಗತ್ಯವಾಗಿದೆ. ಲೋಕಾಯುಕ್ತ ಸಂಸ್ಥೆಯಿಂದ ತನಿಖೆಗೆ ಒಳಗಾಗಿರುವ, ಅಂದರೆ ಭ್ರಷ್ಟಾಚಾರದ ಆರೋಪ ಎದುರಿಸುತ್ತಿರುವ ಅಧಿಕಾರಿಗಳನ್ನು ಆರೋಪಮುಕ್ತರೆಂದು ಘೋಷಿಸುವ ಮುನ್ನ ಸರ್ಕಾರವು, ಲೋಕಾಯುಕ್ತರ ಅಭಿಪ್ರಾಯವನ್ನು ಪಡೆಯುವುದು ಸೂಕ್ತ. ಏಕೆಂದರೆ ಹಲವು ಪ್ರಕರಣಗಳನ್ನು ಸಾಕ್ಷ್ಯಾಧಾರಗಳ ಕೊರತೆಯ ನೆಪದಲ್ಲಿ ಮುಚ್ಚಿಹಾಕುತ್ತಿರುವ ಹಾಗೂ ಪಕ್ಷಪಾತತೆಯ ಪ್ರಭಾವದಿಂದಾಗಿ ಪ್ರಕರಣಗಳ ತನಿಖೆ ದಾರಿ ತಪ್ಪುವ ಸಂದರ್ಭಗಳು ಇತ್ತೀಚೆಗೆ ಹೆಚ್ಚಾಗುತ್ತಿದೆ. ಇಂತಹ ದುರಂತಗಳನ್ನು ತಡೆಯಲು ಸರ್ಕಾರ ಲೋಕಾಯುಕ್ತದ ಸಲಹೆಗಳಿಗೆ ಸ್ಪಂದಿಸಬೇಕು. ಪ್ರಸ್ತುತದಲ್ಲಿ ಕರ್ನಾಟಕ ಲೋಕಾಯುಕ್ತ ಸಂಸ್ಥೆಯ ಸ್ವರೂಪ ಹಾಗೂ ಅದರ ರಚನೆ ವ್ಯವಸ್ಥಿತವಾಗಿದ್ದು, ಹಲವು ಗುಣಾತ್ಮಕ ಅಂಶಗಳನ್ನು ಹೊಂದಿದ್ದರೂ, ಸಂಸ್ಥೆಯು ಇನ್ನೂ ಪರಿಣಾಮಕಾರಿಯಾಗಿ ಭ್ರಷ್ಟಾಚಾರವನ್ನು ನಿಯಂತ್ರಣ ಮಾಡಬೇಕಾದರೆ, ಕೆಲವು ಮಾರ್ಪಾಡುಗಳನ್ನು ಮಾಡುವುದು ಸೂಕ್ತವಾಗಿದೆ. ಈ ನಿಟ್ಟಿನಲ್ಲಿ ಕರ್ನಾಟಕ ಲೋಕಾಯುಕ್ತ ಸಂಸ್ಥೆಗೆ ಮುಖ್ಯಸ್ಥರನ್ನಾಗಿ ನೇಮಕ ಮಾಡುವ ಲೋಕಾಯುಕ್ತರ ಹುದ್ದೆಗೆ ಹೊರರಾಜ್ಯದ ನ್ಯಾಯಮೂರ್ತಿಗಳನ್ನು ನೇಮಿಸಬಾರದು. ಹಾಗೂ ಉಪಲೋಕಾಯುಕ್ತರನ್ನು ನೇಮಕ

ಮಾಡುವಾಗಲೂ ಸಹ ಇದೇ ಅಂಶವನ್ನು ಅನುಸರಿಸಬೇಕು. ಏಕೆಂದರೆ ಒಂದೇ ರಾಜ್ಯಕ್ಕೆ ಸೇರಿದ ವ್ಯಕ್ತಿ, ಅಲ್ಲಿಯೇ ಉನ್ನತ ಹುದ್ದೆಯಾದ ಇದನ್ನು ಅಲಂಕರಿಸುವುದರಿಂದ, ಕೆಲವು ಸಂದರ್ಭದಲ್ಲಿ ಜಾತಿ, ಸ್ವಜನ ಹಿತಾಸಕ್ತಿ, ಸ್ನೇಹಿತ, ಬಂಧು-ಬಳಗ ಹೀಗೆ ಮುಂತಾದ ಪ್ರಭಾವಗಳಿಗೆ ಒಳಪಟ್ಟು ನಿಷ್ಪಕ್ಷಪಾತವಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗುವುದಿಲ್ಲ ಎಂಬ ಅಪವಾದವನ್ನು ಹೊರತು ಪಡಿಸಿದಂತೆ ರಾಜ್ಯದ ಜನಸಾಮಾನ್ಯರ ಭಾಷೆಯಾದ ಕನ್ನಡವನ್ನು ಬಲ್ಲವರಾಗಿರಬೇಕು. ಏಕೆಂದರೆ ಪ್ರತಿದಿನ ನೂರಾರು ಜನರೊಂದಿಗೆ ಲೋಕಾಯುಕ್ತರಾದವರು ಸಂಭಾಷಿಸಬೇಕಾಗುತ್ತದೆ.ಜನರ ಭಾಷೆಯನ್ನು ಅರ್ಥವಾದವರಿಗೆ ಅವರ ಸಮಸ್ಯೆಯು ಅರ್ಥವಾಗುತ್ತದೆ. ರಾಜ್ಯದವರೇಲೋಕಾಯುಕ್ತರಾಗಿ ಬಂದರೆ ಭಾಷೆಯ ಹಂಗಿಲ್ಲದೆ ಎಲ್ಲರೊಂದಿಗೆ ಬೆರೆತು ಕಾರ್ಯ ನಿರ್ವಹಣೆ ಮಾಡಬಹುದು.

ಲೋಕಾಯುಕ್ತ ಸಂಸ್ಥೆಯು ಇತರೆ ಸರ್ಕಾರಿ ಸಂಸ್ಥೆಗಳಿಗಿಂತ ಭಿನ್ನವಾಗಿದ್ದು, ಈ ಸಂಸ್ಥೆಯು ಆದಷ್ಟು ನಿಷ್ಪಕ್ಷಪಾತವಾಗಿ, ದಕ್ಷವಾಗಿ, ಪ್ರಾಮಾಣಿಕವಾಗಿ ಹಾಗೂ ಕಾನೂನುಬದ್ಧವಾಗಿ ಕಾರ್ಯ ನಿರ್ವಹಿಸಬೇಕು ಹಾಗೂ ಜನರ ಮನದಲ್ಲಿ ಇಂತಹ ಭಾವನೆಗಳನ್ನು ಮೂಡಿಸುತ್ತಿರುವಂತಹ ಹಾಗೂ ಸಂಸ್ಥೆಯ ಬಗ್ಗೆ ಆಳವಾಗಿ ನಂಬಿಕೆಯನ್ನು ಹುಟ್ಟಿಸುವ ರೀತಿ ಕೆಲಸ ಮಾಡಬೇಕು. ಈ ನಿಟ್ಟಿನಲ್ಲಿ ಅಗತ್ಯವಿರುವ ಅಂಶವೆಂದರೆ, ಸಂಸ್ಥೆಯ ಸಿಬ್ಬಂದಿಯ ಕಾರ್ಯವೈಖರಿ, ಈ ಸಂಸ್ಥೆಗೆ ಸಿಬ್ಬಂದಿಯನ್ನು ಸೇರ್ಪಡೆ ಮಾಡಿಕೊಳ್ಳುವ ಪೂರ್ವದಲ್ಲಿ, ಸಿಬ್ಬಂದಿಯ ಕರ್ತವ್ಯಕ್ಕೆ ಸಂಬಂಧಿಸಿದಂತೆ ಪೂರ್ವಾಪರ ವಿಚಾರಗಳನ್ನು ತಿಳಿಯಬೇಕು ಅಂದರೆ ಹಿಂದೆ ನಿರ್ವಹಿಸಿದ ಕರ್ತವ್ಯದ ಮತ್ತು ದಕ್ಷತೆಯ ಗುಣಮಟ್ಟವನ್ನು ಆಧರಿಸಿ ಉತ್ತಮ ಚಾರಿತ್ರ್ಯವುಳ್ಳ ಸಿಬ್ಬಂದಿಯನ್ನು ನೇಮಿಸಿಕೊಳ್ಳಬೇಕು. ಈ ಸಂಸ್ಥೆಗೆ ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳುವ ಅಧಿಕಾರವನ್ನು ಲೋಕಾಯುಕ್ತರಿಗೆ ನೀಡಬೇಕು. ಸರ್ಕಾರದಿಂದ ಈ ಸಂಸ್ಥೆಗೆ ಸಿಬ್ಬಂದಿಯು ನೇಮಕಗೊಂಡಿದ್ದೇ ಆದರೆ ಕೆಲವೊಮ್ಮೆ ಲೋಕಾಯುಕ್ತಕ್ಕೆ ಮುಳುವಾಗಬಹುದು. ಲೋಕಾಯುಕ್ತದ ತಾಂತ್ರಿಕ ವಿಭಾಗಕ್ಕೆ ಉತ್ತಮ ಅರ್ಹತೆ, ಸೇವಾನುಭವ ಮತ್ತು ಉತ್ತಮ ಹಿನ್ನೆಲೆಯುಳ್ಳ, ಪ್ರಾಮಾಣಿಕತೆಗೆ ಹೆಸರಾಗಿರುವ ಹಿರಿಯ ಅಧಿಕಾರಿಗಳನ್ನು ಮಾತ್ರ ನೇಮಿಸಿಕೊಳ್ಳಬೇಕು. ಪ್ರಸ್ತುತ ಸಂಸ್ಥೆಯಲ್ಲಿ ಆಡಳಿತ ವಿಭಾಗಕ್ಕೆ ನ್ಯಾಯಾಂಗ ಇಲಾಖೆಯಿಂದ ನಿಯೋಜಿಸಲ್ಪಟ್ಟ ಅಧಿಕಾರಿಗಳೇ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಆದರೆ ಆಡಳಿತ ನಿರ್ವಹಣೆಯಲ್ಲಿ ನ್ಯಾಯಾಂಗ ಕ್ಷೇತ್ರದ ಸಿಬ್ಬಂದಿಗಿಂತ, ಭಾರತೀಯ ಆಡಳಿತ ಸೇವೆ ಅಥವಾ ಕರ್ನಾಟಕ ಆಡಳಿತ ಸೇವೆಗೆ ಸೇರಿದ ಅನುಭವಿ ಅಧಿಕಾರಿಗಳನ್ನು ಆಯ್ಕೆ ಮಾಡಿಕೊಂಡರೆ ಸಂಸ್ಥೆಯ ಆಡಳಿತ ಇನ್ನೂ ಪರಿಣಾಮಕಾರಿಯಾಗಿರುತ್ತದೆ. ಇನ್ನು ಸಂಸ್ಥೆಯ ವಿಭಾಗದಲ್ಲಿ ಮುಖ್ಯಸ್ಥರಾಗಿ ಹೆಚ್ಚುವರಿ ಆರಕ್ಷಕ ಮಹಾನಿರೀಕ್ಷಕರು (ಎಡಿಜಿಪಿ)ಎಂಬ ಹುದ್ದೆಯು ಅಸ್ತಿತ್ವದಲ್ಲಿದೆ. ಇದಕ್ಕೆ ಬದಲಾಗಿ ಆರಕ್ಷಕ ಮಹಾ

ನಿರೀಕ್ಷಕರು (ಡಿಜಿಪಿ)ಎಂಬ ಸ್ವತಂತ್ರ ಹುದ್ದೆಯನ್ನು ಸ್ಥಾಪಿಸಬೇಕು. ಈ ವಿಭಾಗಕ್ಕೂ ಸಹ ಸಿಬ್ಬಂದಿ ನೇಮಕಾತಿಯನ್ನು ಲೋಕಾಯುಕ್ತರೇ ನೆರವೇರಿಸಬೇಕು. ಏಕೆಂದರೆ ಇಡೀ ಲೋಕಾಯುಕ್ತ ಸಂಸ್ಥೆಯ ಪರಿಣಾಮಕಾರಿ ಕಾರ್ಯವೈಖರಿ ಪೊಲೀಸ್ ವಿಭಾಗದ ಮೇಲೆ ಅವಲಂಬಿತವಾಗಿರುತ್ತದೆ ಹಾಗೂ ಈ ಸಂಸ್ಥೆಯು ನಡೆಸುವ ದಾಳಿಯ ಹಿಂದೆ ಪೊಲೀಸರ ಅಧಿಕ ಶ್ರಮವಿದ್ದು, ನ್ಯಾಯಾಲಯಗಳಲ್ಲಿ ಭ್ರಷ್ಟರಿಗೆ ಶಿಕ್ಷೆ ಆಗಬೇಕೆಂದರೆ, ಅದರ ತನಿಖೆ ನಡೆಸಿದ ಪೊಲೀಸರು ಹಾಕುವ ಚಾರ್ಜ್‌ಶೀಟ್ ಮೇಲೆ ಅವಲಂಬಿತವಾಗಿರುತ್ತದೆ. ಆದುದರಿಂದ ಪೊಲೀಸ್ ವಿಭಾಗವನ್ನು ಲೋಕಾಯುಕ್ತದ ಹೃದಯಕ್ಕೆ ಹೋಲಿಸಬಹುದು. ಆದ ಕಾರಣ ಸರ್ಕಾರ ಈ ನೇಮಕಾತಿ ಪ್ರಕ್ರಿಯೆಯನ್ನು ಲೋಕಾಯುಕ್ತರಿಗೆ ವಹಿಸಬೇಕು.

ಪೊಲೀಸ್ ವಿಭಾಗದಲ್ಲಿ ಪ್ರಸ್ತುತದಲ್ಲಿ ಪೊಲೀಸ್ ವರಿಷ್ಠರನ್ನಾಗಿ ಕರ್ನಾಟಕ ರಾಜ್ಯ ಪೊಲೀಸ್ ಸೇವೆಗೆ ಸೇರಿದ ಸಿಬ್ಬಂದಿಯನ್ನೋ ಅಥವಾ ಕೆಳಹಂತದಿಂದ ಬಡ್ತಿ ಹೊಂದಿದ ಪೊಲೀಸ್ ಅಧಿಕಾರಿಗಳನ್ನು ನೇಮಕ ಮಾಡಿಕೊಳ್ಳಲಾಗುತ್ತಿದೆ. ಆದರೆ ಈ ವಿಧಾನ, ಸಂಸ್ಥೆಯ ಭವಿಷ್ಯ ದೃಷ್ಟಿಯಿಂದ ಸರಿಯಾದುದಲ್ಲ. ಪೊಲೀಸ್ ವರಿಷ್ಠರ ಸ್ಥಾನಕ್ಕೆ ಭಾರತೀಯ ಆಡಳಿತ ಸೇವೆಗೆ ಸೇರಿದ ಅಧಿಕಾರಿಯನ್ನು ನಿಯೋಜನೆಯ ಮೇಲೆ ನೇಮಿಸಬೇಕು. ಬಡ್ತಿ ಹೊಂದಿದ ಅಧಿಕಾರಿಗಳಿಗೆ ಈ ಸ್ಥಾನ ನೀಡಿದರೆ, ಪಕ್ಷಪಾತ ಉಂಟಾಗಿ, ಸ್ಥಾನದ ದುರುಪಯೋಗವಾಗಲಿದೆ.

ಲೋಕಾಯುಕ್ತ ಸಂಸ್ಥೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಯಲ್ಲಿ ಬಹುತೇಕ ಮಂದಿ ನಿಯೋಜನೆ ಆಧಾರದ ಮೇಲೆ ಬಂದಿದ್ದಾರೆ. ಆದುದರಿಂದ ಇಂತಹ ಸಿಬ್ಬಂದಿಗೆ ಲೋಕಾಯುಕ್ತದಲ್ಲಿ ಸಮರ್ಪಕವಾಗಿ ಕಾರ್ಯನಿರ್ವಹಿಸಲು ಅಗತ್ಯವಿರುವ ವಿಶೇಷ ತರಬೇತಿಯನ್ನು ನೀಡುವುದು ಸೂಕ್ತ. ಈ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಯು, ವಿಶೇಷವಾಗಿ ಪೊಲೀಸ್ ಸಿಬ್ಬಂದಿಯು ಹಲವಾರು ವಿಷಯಗಳಲ್ಲಿ ಸಂಕಷ್ಟಗಳನ್ನು ಎದುರಿಸಬೇಕಾಗುತ್ತದೆ. ಹೇಗೆಂದರೆ ಲೋಕಾಯುಕ್ತಕ್ಕೆ ನಿಯೋಜನೆಗೊಂಡ ಮೇಲೆ ಭ್ರಷ್ಟರನ್ನು ಹಿಡಿದು, ಅವರ ಅಕ್ರಮಗಳನ್ನು ಬಯಲು ಮಾಡಬೇಕಾಗುತ್ತದೆ. ಇದರಿಂದಾಗಿ ಐಎಎಸ್, ಐಪಿಎಸ್ ಅಲ್ಲದೆ ಉನ್ನತ ಅಧಿಕಾರಿಗಳ ನಿಷ್ಠುರವನ್ನು ಕಟ್ಟಿಕೊಳ್ಳಬೇಕಾಗುತ್ತದೆ. ಲೋಕಾಯುಕ್ತ ಸಂಸ್ಥೆಯನ್ನು ಬಿಟ್ಟು ಮತ್ತೆ ಮಾತೃ ಸಂಸ್ಥೆಗೆ ಹೋದರೆ, ಭ್ರಷ್ಟರ ಗುಟ್ಟನ್ನು ರಟ್ಟು ಮಾಡಿದ ಲೋಕಾಯುಕ್ತ ಪೊಲೀಸರನ್ನು ಯಾವ ಹಿರಿಯ ಅಧಿಕಾರಿಯು ಹತ್ತಿರಕ್ಕೆ ಸೇರಿಸುವುದಿಲ್ಲ ಎಂಬ ಮನೋವ್ಯಥೆ ಕಾಡುತ್ತಿರುತ್ತದೆ. ಆದುದರಿಂದ ಲೋಕಾಯುಕ್ತ ಸಂಸ್ಥೆಗೆ ಬರುವುದಕ್ಕೆ ಕೆಲವು ಪ್ರಾಮಾಣಿಕ, ದಕ್ಷ ಅಧಿಕಾರಿಗಳು ಹಿಂದೇಟು ಹಾಕುತ್ತಾರೆ. ಇಂತಹ ವಾತಾವರಣವನ್ನು ಸರ್ಕಾರವು ದೂರಮಾಡುವಲ್ಲಿ ಅಗತ್ಯ ಕ್ರಮ ಕೈಗೊಳ್ಳುವುದು ಸೂಕ್ತ.

ಲೋಕಾಯುಕ್ತ ಸಂಸ್ಥೆಯು ಇತ್ತೀಚಿನ ವರ್ಷಗಳಲ್ಲಿ ಹೆಚ್ಚು ಬೆಳಕಿಗೆ ಬರುತ್ತಿದ್ದು, ಸಂಸ್ಥೆಗೆ ದಿನ ಬೆಳಗಾದರೆ ನೂರಾರು ದೂರುಗಳು ಬರುತ್ತಿವೆ. ಅಂದರೆ ಇತ್ತೀಚಿನ ದಿನಗಳಲ್ಲಿ ಲೋಕಾಯುಕ್ತಕ್ಕೆ ಬರುತ್ತಿರುವ ದೂರುಗಳ ಸಂಖ್ಯೆ ಹೆಚ್ಚಾಗುತ್ತಿದ್ದು, ಅವುಗಳನ್ನು ತ್ವರಿತವಾಗಿ ತನಿಖೆ ಮಾಡಲು, ತನ್ನದೇ ಆದ ವಿಶೇಷವಾದ 'ತನಿಖಾ ಏಜೆನ್ಸಿ'ಯನ್ನು ಹೊಂದಿರಬೇಕು. ಏಕೆಂದರೆ ತನಿಖಾ ಪ್ರಕ್ರಿಯೆಯಲ್ಲಿ ವಿಳಂಬತೆಯನ್ನು ದೂರಮಾಡಿ, ತ್ವರಿತಗತಿಯಲ್ಲಿ ಪ್ರಕರಣಗಳ ವಿಚಾರಣೆ ಮಾಡಲು ಈ ರೀತಿಯ ತನಿಖಾ ಏಜೆನ್ಸಿಗಳು ಅತ್ಯಗತ್ಯವಾಗಿವೆ. ಇಂತಹ ಏಜೆನ್ಸಿಗಳಿಗೆ ಕೇಂದ್ರೀಯ ತನಿಖಾ ದಳ ಅಥವಾ ಕೇಂದ್ರೀಯ ಜಾಗೃತದಳದಂತಹ ಸಂಸ್ಥೆಗಳಿಂದ ಅನುಭವಿ ಸಿಬ್ಬಂದಿಯನ್ನು ನಿಯೋಜನೆಯ ಮೇಲೆ ಕರೆತಂದಾಗ ಸಂಸ್ಥೆಯ ಕಾರ್ಯಾಚರಣೆ ಹೆಚ್ಚು ಪರಿಣಾಮಕಾರಿಯಾಗಿರುತ್ತದೆ ಹಾಗೂ ನಿಷ್ಪಕ್ಷಪಾತವಾಗಿರುತ್ತದೆ. ಲೋಕಾಯುಕ್ತ ಸಂಸ್ಥೆಗೆ ಅಗತ್ಯಬಿದ್ದಲ್ಲಿ ಯಾವುದೇ ಕಛೇರಿಗೆ ಸಂಬಂಧಿಸಿದ ದಾಖಲೆಗಳನ್ನು ವಶಪಡಿಸಿಕೊಳ್ಳುವ ಅಧಿಕಾರವನ್ನು ಸರ್ಕಾರವು ನೀಡಬೇಕು ಮತ್ತು ಭ್ರಷ್ಟ ಅಧಿಕಾರಿಗಳ ವಿರುದ್ಧ ಸಿಬಿಐ ಮಾದರಿಯಲ್ಲಿ ಪ್ರಾಥಮಿಕ ತನಿಖೆ ನಡೆಸುವ ಅಧಿಕಾರವನ್ನು 'ಲೋಕಾಯುಕ್ತ ಪೋಲೀಸರಿಗೂ' ನೀಡುವಂತಾಗಬೇಕು. ಇದರಿಂದಾಗಿ ಪ್ರಕರಣಗಳ ತನಿಖೆಯಲ್ಲಿ ಪ್ರಗತಿ ಸಾಧಿಸಲು ಸಾಧ್ಯವಾಗುತ್ತದೆ.

ಭ್ರಷ್ಟಾಚಾರದ ಕೂಪದಲ್ಲಿ ಮುಳುಗಿರುವವರು ಕೇವಲ ರಾಜ್ಯ ಲೋಕಸೇವಾ ಆಯೋಗದಿಂದ ಅಥವಾ ರಾಜ್ಯ ಸರ್ಕಾರದಿಂದ ಆಯ್ಕೆಯಾದ ನೌಕರರುಗಳಷ್ಟೇ ಅಲ್ಲ. ಐಎಎಸ್, ಐಪಿಎಸ್, ಐಎಫ್ಎಸ್‌ನಂತಹ ಕೇಂದ್ರ ಲೋಕಸೇವಾ ಆಯೋಗಗಳಿಂದ ಆಯ್ಕೆಯಾಗಿ ರಾಜ್ಯದಲ್ಲಿ ಸೇವೆ ಸಲ್ಲಿಸುತ್ತಿರುವ ಅಧಿಕಾರಿಗಳೂ ಸಹ ಭ್ರಷ್ಟಾಚಾರದಲ್ಲಿ ಮುಳುಗಿದ್ದಾರೆ. ಇಂತಹ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಲು ಅಥವಾ ದಾಳಿ ನಡೆಸಲು ಅಥವಾ ಇವರ ಚರಾಸ್ತಿ ಮತ್ತು ಸ್ಥಿರಾಸ್ತಿಗಳನ್ನು ಶೋಧಿಸಿ ವಶಪಡಿಸಿಕೊಳ್ಳಲು ನ್ಯಾಯಾಲಯಕ್ಕೆ ಚಾರ್ಜ್‌ಶೀಟ್ ಸಲ್ಲಿಸುವ ಮುನ್ನ ಸರ್ಕಾರದ ಅನುಮತಿ ಪಡೆಯಬೇಕಾಗಿರುವುದು ಲೋಕಾಯಕ್ತಕ್ಕೆ ಅಗತ್ಯವಿದೆ. ಈ ವಿಷಯದಲ್ಲಿ ಲೋಕಾಯುಕ್ತಕ್ಕೆ ಯಾವುದೇ ಪೂರ್ವಾನುಮತಿ ಪಡೆಯದೇ ನೇರವಾಗಿ ಕೇಂದ್ರ ಲೋಕಸೇವಾ ಆಯೋಗದಿಂದ ಆಯ್ಕೆಯಾಗಿ ಸೇವೆ ಸಲ್ಲಿಸುತ್ತಿರುವ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳುವ ಅಧಿಕಾರವನ್ನು ನೀಡುವುದು, ಭ್ರಷ್ಟಾಚಾರ ನಿಯಂತ್ರಣ ಹಾಗೂ ಲೋಕಾಯುಕ್ತದ ಬಲವರ್ಧನೆಯ ದೃಷ್ಟಿಯಿಂದ ಸೂಕ್ತವಾದುದಾಗಿದೆ. ಇತ್ತೀಚಿನ ದಿನಗಳಲ್ಲಿ ನ್ಯಾಯಾಂಗ ಇಲಾಖೆಯೂ ಸಹ ಭ್ರಷ್ಟಾಚಾರದಲ್ಲಿ ಮುಳುಗಿರುವ ಆರೋಪಗಳು ಕೇಳಿಬರುತ್ತಿವೆ. ನ್ಯಾಯಾಂಗ ಇಲಾಖೆಗೆ ಸಂಬಂಧಿಸಿದ ನ್ಯಾಯಾಧೀಶರನ್ನೊಳಗೊಂಡಂತೆ ಸಿಬ್ಬಂದಿ ವರ್ಗವೂ ಸಹ ಇಂದು ಸತ್ಯಾಸತ್ಯತೆಗಳನ್ನು ತಿರುಚುವ, ಅನ್ಯಾಯಕ್ಕೆ ಆಸ್ಪದ ಕೊಡುವ ಕಾರ್ಯದಲ್ಲಿ

ತೊಡಗಿದ್ದಾರೆ. ಇಂತಹ ಪ್ರಸಂಗಗಳನ್ನು ನಿಯಂತ್ರಣ ಮಾಡಬೇಕಾದರೆ ಸತ್ಯ, ಧರ್ಮ, ನ್ಯಾಯವನ್ನು ಉಳಿಸಬೇಕಾದರೆ, ನ್ಯಾಯಾಂಗ ಸಿಬ್ಬಂದಿ ವಿರುದ್ಧವೂ ಸಹ ತನಿಖೆ ನಡೆಸುವ ಅಧಿಕಾರವನ್ನು ಲೋಕಾಯುಕ್ತಕ್ಕೆ ನೀಡಬೇಕು.

ಸಾರ್ವಜನಿಕರು ಲೋಕಾಯುಕ್ತಕ್ಕೆ ನೀಡಿದ ದೂರುಗಳನ್ನು ತನಿಖೆ ಮಾಡಲು ಮತ್ತು ಅವರ ಕುಂದು ಕೊರತೆಗಳನ್ನು ನಿವಾರಿಸಲು ಒಂದು ನಿರ್ದಿಷ್ಟವಾದ ಸಮಯವನ್ನು ನಿಗದಿತಗೊಳಿಸಬೇಕು. ಜನರ ದುಃಖ ದುಮ್ಮಾನಗಳಿಗೆ ಶೀಘ್ರವಾಗಿ ಸ್ಪಂದಿಸಿದರೆ ಜನರಲ್ಲಿ ಲೋಕಾಯುಕ್ತ ಸಂಸ್ಥೆಯ ಬಗ್ಗೆ ವಿಶ್ವಾಸ ಮೂಡುತ್ತದೆ. ಲೋಕಾಯುಕ್ತವು ಇನ್ನೂ ಹೆಚ್ಚು ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸಬೇಕಾದರೆ, ರಾಜ್ಯದಲ್ಲಿ ಅಸ್ಥಿತ್ವದಲ್ಲಿರುವ ಜಾಗೃತ ಆಯೋಗಗಳು ಹಾಗೂ ಇಲಾಖಾ ಮಟ್ಟದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಜಾಗೃತ ನಿರ್ದೇಶನಾಲಯಗಳು ಅಥವಾ ವಿಭಾಗಗಳು ಲೋಕಾಯುಕ್ತದ ಸಹಭಾಗಿತ್ವದಲ್ಲಿ ಕಾರ್ಯನಿರ್ವಹಿಸುವಂತಾಗಬೇಕು. ಇದರಿಂದಾಗಿ ಪರಿಣಾಮಕಾರಿಯಾಗಿ ದುರಾಡಳಿತವನ್ನು ದೂರ ಮಾಡಲು ಸಾಧ್ಯ ಹಾಗೂ ಲೋಕಾಯುಕ್ತವನ್ನು ಬಲಪಡಿಸಲು ಸಾಧ್ಯ

ಲೋಕಾಯುಕ್ತ ಸಂಸ್ಥೆಯ ಕಾರ್ಯನಿರ್ವಹಣೆ ಜಟಿಲ ಹಾಗೂ ಸಂಕೀರ್ಣಮಯವಾಗಿದ್ದು, ಇದನ್ನು ನಿವಾರಿಸಿ, ಸುಗಮವಾಗಿ ಕಾರ್ಯನಿರ್ವಹಿಸಬೇಕಾದರೆ ಹಾಗೂ ಪರಿಪಕ್ವ ಕಾರ್ಯ ನೆರವೇರಬೇಕಾದರೆ, ಈ ಸಂಸ್ಥೆಯಲ್ಲಿ ಒಂದು 'ಸಲಹಾ ಸಮಿತಿ' (Advisory Body)ಯನ್ನು ನೇಮಿಸಬೇಕು. ಈ ಸಮಿತಿಗೆ ಭ್ರಷ್ಟಾಚಾರದ ನಿರ್ಮೂಲನೆಗೆ ಬದ್ಧತೆ ತೋರುವ ಬಗ್ಗೆ ನಿವೃತ್ತ ಹಿರಿಯ ಶ್ರೇಣಿಯ ಅಧಿಕಾರಿಗಳನ್ನು ಅಥವಾ ನ್ಯಾಯಾಧೀಶರುಗಳನ್ನು ನೇಮಿಸಿಕೊಂಡರೆ ಸೂಕ್ತ. ಲೋಕಾಯುಕ್ತ ತನಿಖೆ ನಂತರ ರೂಪಿಸಿದ ವರದಿಗಳನ್ನು ಈ ಸಮಿತಿಯು ಪರಿಶೀಲಿಸಿದ ಬಳಿಕ ಸರ್ಕಾರಕ್ಕೆ ಕಳುಹಿಸುವ ವ್ಯವಸ್ಥೆ ಇದ್ದರೆ, ಸಂಸ್ಥೆಯ ಕಾರ್ಯ ಕರಾರುವಕ್ಕಾಗಿ ಇರಲು ಸಾಧ್ಯವಾಗುತ್ತದೆ. ಲೋಕಾಯುಕ್ತವು ಸರ್ಕಾರಕ್ಕೆ ಕಳುಹಿಸಿದ ವರದಿಗಳನ್ನು ಸ್ವೀಕರಿಸಿ, ಅವುಗಳನ್ನು ಪರಿಶೀಲಿಸಲು, ಪ್ರತ್ಯೇಕವಾದ 'ಶಾಸನೀಯ ಸಮಿತಿ' ಯನ್ನು ಸರ್ಕಾರ ನೇಮಕ ಮಾಡಬೆಕು. ಈ ಸಮಿತಿಯು ಸರ್ಕಾರ ಮತ್ತು ಲೋಕಾಯುಕ್ತ ಸಂಸ್ಥೆಗಳ ನಡುವೆ ನಿರಂತರ ಸಂಪರ್ಕವೇರ್ಪಡುವಂತಹ ಕಾರ್ಯನಿರ್ವಹಿಸಬೇಕು ಹಾಗೂ ಇವೆರಡರ ನಡುವೆ ಉತ್ತಮ ಬಾಂಧವ್ಯವನ್ನು ವೃದ್ಧಿಸುವ ಕೊಂಡಿಯಂತಿರಬೇಕು.

ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯ ಅನ್ವಯ, ಆದಾಯ ಮತ್ತು ಆಸ್ತಿಯ ನಡುವೆ ಶೇಕಡ ೩೦ಕ್ಕಿಂತ ಹೆಚ್ಚಿನ ವ್ಯತ್ಯಾಸ ಕಂಡುಬಂದರೆ, ಅಂಥವರು ಭ್ರಷ್ಟಚಾರದಲ್ಲಿ ತೊಡಗಿದ್ದಾರೆ ಎಂಬುದು

ಮೇಲ್ನೋಟಕ್ಕೆ ಸಾಬೀತಾದಂತೆ ಆಗುತ್ತದೆ ಭ್ರಷ್ಟಾಚಾರದ ಮೂಲಕ ಗಳಿಸಿರುವ ಆಸ್ತಿಯನ್ನು ವಿಚಾರಣೆಯ ಸಂದರ್ಭದಲ್ಲಿ ಮುಟ್ಟುಗೋಲು ಹಾಕಿಕೊಳ್ಳುವ ಅಧಿಕಾರವನ್ನೂ ಲೋಕಾಯುಕ್ತಕ್ಕೆ ನೀಡಬೇಕು. ವಿಚಾರಣೆಯನ್ನು ೬೦ ದಿನಗಳಲ್ಲಿ ಪೂರ್ಣಗೊಳಿಸಬೇಕು. ತನಿಖೆಯನ್ನು ಆರು ತಿಂಗಳಲ್ಲಿ ಪೂರ್ಣಗೊಳಿಸಬೇಕು. ಸಾರ್ವಜನಿಕ ಸೇವಕರನ್ನು ವಿಚಾರಣೆಗೆ ಒಳಪಡಿಸಿದ ನಂತರವೇ ಲೋಕಾಯುಕ್ತರು ತನಿಖೆಗೆ ಆದೇಶಿಸಬೇಕು. ಪ್ರಕರಣವೊಂದಕ್ಕೆ ಸಂಬಂಧಿಸಿದ ತನಿಖಾ ವರದಿಯನ್ನು ಪರಿಶೀಲಿಸಿದ ಬಳಿಕ ಆರೋಪಪಟ್ಟಿ ಸಲ್ಲಿಸುವ ನಿರ್ಧಾರ ತೆಗೆದುಕೊಳ್ಳುವ ಅಧಿಕಾರ ಲೋಕಾಯುಕ್ತರಿಗೆ ನೀಡಬೇಕು. ಇದೆ ಭ್ರಷ್ಟಾಚಾರದ ವಿರುದ್ಧ ಧ್ವನಿ ಎತ್ತುವ ವ್ಯಕ್ತಿಗೆ ಸಂಪೂರ್ಣ ರಕ್ಷಣೆ ದೊರೆಯುವಂತೆ ಲೋಕಾಯುಕ್ತ ಕಾಯ್ದೆಗೆ ತಿದ್ದುಪಡಿ ತರಬೇಕು. ಲೋಕಾಯುಕ್ತ ತನಿಖೆ ನಡೆಸಲು ಯಾವುದೇ ಪೂರ್ವಾನುಮತಿ ಅಗತ್ಯವಿರಬಾರದು. ಭ್ರಷ್ಟ ಚುನಾಯಿತ ಪ್ರತಿನಿಧಿ, ಅಧಿಕಾರಿ, ನ್ಯಾಯಮೂರ್ತಿ ಯಾರೇ ಆಗಿರಲಿ, ಆರೋಪ ಸಾಬೀತಾದರೆ ಜೈಲು ಕಡ್ಡಾಯ. ಅಷ್ಟೇ ಅಲ್ಲ, ಭ್ರಷ್ಟರಿಂದ ಸರ್ಕಾರಕ್ಕೆ ಆದ ನಷ್ಟವನ್ನು ಶಿಕ್ಷೆಗೊಳಗಾದ ದಿನವೇ ಭರಿಸುವಂತಾಗಬೇಕು.

ಯಾವುದೇ ಪ್ರಕರಣ ವಿಚಾರಣೆ ಮಾಡಿದ ನಂತರ ಲೋಕಾಯುಕ್ತ ನಿರ್ಧಾರ ತೆಗೆದುಕೊಳ್ಳುವ ಮೊದಲು ಆರೋಪಿ ಅಧಿಕಾರಿಗೆ ತನ್ನನ್ನು ಸಮರ್ಥಿಸಿಕೊಳ್ಳುವ ಅವಕಾಶ ನೀಡುವಂತಾಗಬೇಕು. ಲೋಕಾಯುಕ್ತ ಸೂಚಿಸಿದ ಪ್ರಕರಣಗಳ ತನಿಖೆ ನಡೆಸುವ ಅಧಿಕಾರಿಗಳನ್ನು ವರ್ಗಾವಣೆ ಮಾಡುವಾಗ ಲೋಕಾಯುಕ್ತರ ಒಪ್ಪಿಗೆ ಪಡೆಯುವಂತಾಗಬೇಕು.ಭ್ರಷ್ಟಾಚಾರ ಪ್ರಕರಣಗಳಲ್ಲಿ ದೂರು ಸಲ್ಲಿಸಲು ಹಾಗೂ ದೂರುದಾರರಿಗೆ ಕಾನೂನು ನೆರವು ನೀಡಲು ಗ್ರಾಮ ಪಂಚಾಯ್ತಿ ಮಟ್ಟದಲ್ಲಿ ಕಾನೂನು ಸೇವಾ ಘಟಕಗಳನ್ನು ಪ್ರಾರಂಭಿಸುವಂತೆ ಮನವಿ ಮಾಡಿ ಹೈಕೋರ್ಟ ನ್ಯಾಯಮೂರ್ತಿಗಳಿಗೆ ಪತ್ರ ಬರೆಯಲಾಗಿದೆ. ಹಾಲಿಯಲ್ಲಿ ತಾಲೂಕಾ ಮಟ್ಟದ ಕಾನೂನು ಸಲಹಾ ಗ್ರಾಮ ಪಂಚಾಯ್ತಿ ವ್ಯಾಪ್ತಿಗೆ ವಿಸ್ತರಿಸಿದರೆ ಭ್ರಷ್ಟಾಚಾರ ನಿಯಂತ್ರಣಕ್ಕೆ ಸಹಕಾರಿಯಾಗಲಿದೆ. ಲೋಕಾಯುಕ್ತ ಕಾಯ್ದೆಯ ಕಲಂ ೧೨(೧)ರ ಅನ್ವಯ ಲೋಕಾಯುಕ್ತರು ರಾಜ್ಯಪಾಲರನ್ನು ಭೇಟಿಯಾಗಿ ಸರ್ಕಾರದ ಕುರಿತು ಮಾಹಿತಿ ನೀಡಿ, ತಕ್ಷಣ ಮಧ್ಯ ಪ್ರವೇಶಿಸುವಂತೆ ಲೋಕಾಯುಕ್ತರು ಮನವಿ ಮಾಡುವುದು ಅನಿವಾರ್ಯವೆನಿಸಿದೆ.

ಕರಪ್ಶನ್ ಪ್ರೆಸೆಪ್ಶನ್ ಇಂಡೆಕ್ಸ್ ೨೦೧೩ರ ಸಮೀಕ್ಷೆಯು ಪ್ರಸ್ತುತ ಜಗತ್ತನ್ನು ಧ್ವಂಸಗೊಳಿಸುತ್ತಿರುವ ಮತ್ತು ವ್ಯಾಪಕವಾಗಿ ಹರಡಿರುವ ಭ್ರಷ್ಟಾಚಾರದ ಕುರಿತು ವಿವರಿಸುತ್ತದೆ. ವಿವಿಧ ದೇಶಗಳಲ್ಲಿ ನಡೆದಿರುವ ಅಧಿಕಾರದ ದುರುಪಯೋಗ, ರಹಸ್ಯ ಒಪ್ಪಂದಗಳು, ಭಾರಿ ಲಂಚಗಳ ಕುರಿತು ಇದು ತಿಳಿಸುತ್ತದೆ. ಈ ಸಮೀಕ್ಷೆಯು ಈ ಬಾರಿ ಜಗತ್ತಿನ ೧೭೭ ದೇಶಗಳಲ್ಲಿ ಮತ್ತು ಇತರ ಪ್ರದೇಶಗಳಲ್ಲಿ ನಡೆಸಲಾಯ್ತು. ಇದರ ಮಾನಕವು ೦ (ಹೆಚ್ಚಿನ ಭ್ರಷ್ಟಾಚಾರ) ದಿಂದ ೧೦೦ (ಅತಿಕಡಿಮೆ ಭ್ರಷ್ಟಾಚಾರರದವರೆಗೆ)ವರೆಗೆ

ಇರುತ್ತದೆ. ಆದರೆ ಯಾವ ದೇಶಗಳು ಕೂಡ ನಿರ್ದಿಷ್ಟ ಅಂಕಗಳನ್ನು ಹೊಂದಿಲ್ಲ. ೨/೩ ದೇಶದ ಅಂಕಗಳು ೫೦ ಕ್ಕಿಂತ ಕಡಿಮೆ ಇವೆ. ಇದು ನಿಜಕ್ಕೂ ಆತಂಕಕಾರಿ ವಿಷಯವೇ ಸರಿ. ಜಗತ್ತಿನಲ್ಲಿ ಭ್ರಷ್ಟಾಚಾರವು ಎಷ್ಟು ವೇಗದಲ್ಲಿ ಬೆಳೆಯುತ್ತಿದೆ ಎಂಬುದನ್ನು ಇದು ಸೂಚಿಸುತ್ತದೆ.

ಕರಪ್ಶನ್ ಪ್ರೆಸೆಪ್ಶನ್ ಇಂಡೆಕ್ಸ್ ೨೦೧೩ರ ಇನ್ನೊಂದು ಸಮೀಕ್ಷೆಯ ಪ್ರಕಾರ ಈ ಕೆಳಗೆ ನೀಡಲಾಗಿರುವ ಕೋಷ್ಟಕವು ಭಾರತದ ಪ್ರಮುಖ ರಾಜ್ಯಗಳು ತಾವು ಕೈಗೊಂಡಿರುವ ಭ್ರಷ್ಟಾಚಾರ ವಿರೋಧಿ ಪ್ರಯತ್ನಗಳು ಮತ್ತು ಅದರಲ್ಲಿ ಕಂಡ ಯಶಸ್ಸಿನ ಕುರಿತು ಮಾಹಿತಿಯನ್ನು ಒದಗಿಸುತ್ತದೆ. ಈ ಕೋಷ್ಟಕದ ಅನುಗುಣವಾಗಿ ತಿಳಿದು ಬರುವುದು ಏನೆಂದರೆ ಪ್ರಸಕ್ತ ವರ್ಷದಲ್ಲಿ ಬಿಹಾರ ಮತ್ತು ಗುಜರಾತ್ ರಾಜ್ಯಗಳು ಭ್ರಷ್ಟಾಚಾರವನ್ನು ನಿಯಂತ್ರಿಸುವಲ್ಲಿ ಸಾಕಷ್ಟು ಪ್ರಮಾಣದಲ್ಲಿ ಯಶಸ್ವಿಯಾಗಿವೆ. ಇಲ್ಲಿ ಗಮನಾರ್ಹ ಸುಧಾರಣೆಗಳು ಕಂಡು ಬಂದಿವೆ. ಅದೇ ರೀತಿ ಆಸ್ಸಾಮ ಮತ್ತು ಪಶ್ಚಿಮ ಬಂಗಾಳಗಳಲ್ಲಿ ಪರಿಸ್ಥಿತಿ ಸಾಕಷ್ಟು ಶೋಚನೀಯವಾಗಿದೆ. ಅಲ್ಲಿ ಭ್ರಷ್ಟಾಚಾರ ನಿಯಂತ್ರಿಸುವಲ್ಲಿ ಯಾವುದೇ ಗಮನಾರ್ಹ ಕ್ರಮಗಳನ್ನು ತೆಗೆದುಕೊಳ್ಳಲಾಗಿಲ್ಲ. ಬಿಬಿಸಿ ನ್ಯೂಸ್ ರಿಪೋರ್ಟ ಸಹ ಬಿಹಾರ ಇತ್ತೀಚಿನ ವರ್ಷಗಳಲ್ಲಿ ಭ್ರಷ್ಟಾಚಾರ ನಿಯಂತ್ರಣ ವಿಷಯದಲ್ಲಿ ಸಾಕಷ್ಟು ಸುಧಾರಣೆ ಕಂಡಿದೆ. ಇದು ಈಗ ಭಾರತದಲ್ಲಿ ಅತಿಕಡಿಮೆ ಭ್ರಷ್ಟಾಚಾರ ಇರುವ ರಾಜ್ಯ ಎಂದು ಹೆಸರುವಾಸಿಯಾಗಿದೆ ಎಂದು ಹೇಳಿದೆ.

ಪ್ರಮುಖ ರಾಜ್ಯಗಳ ಕೋಷ್ಟಕ

ಕ್ರಸಂ	ರಾಜ್ಯ	೧೯೯೦–೯೫	೧೯೯೬–೦೦	೨೦೦೧–೦೫	೨೦೦೬–೧೦
೧	ಆಂಧ್ರಪ್ರದೇಶ	೦.೫೩	೦.೭೩	೦.೫೫	೦.೬೧
೨	ಆಸ್ಸಾಮ	೦.೨೧	೦.೦೨	೦.೧೪	೦.೧೭
೩	ಬಿಹಾರ	೦.೪೧	೦.೩೦	೦.೪೩	೦.೮೮
೪	ಗುಜರಾತ	೦.೪೮	೦.೫೭	೦.೬೪	೦.೭೯
೫	ಹರಿಯಾಣ	೦.೩೩	೦.೬೦	೦.೩೧	೦.೩೭
೬	ಹಿಮಾಚಲ ಪ್ರದೇಶ	೦.೨೬	೦.೧೪	೦.೨೩	೦.೩೫
೭	ಜಮ್ಮು ಕಾಶ್ಮೀರ	೦.೧೩	೦.೩೨	೦.೧೭	೦.೪೦
೮	ಕರ್ನಾಟಕ	೦.೨೪	೦.೧೯	೦.೨೦	೦.೨೯
೯	ಕೇರಳ	೦.೧೬	೦.೨೦	೦.೨೨	೦.೨೭

೧೦	ಮಧ್ಯಪ್ರದೇಶ	೦.೨೩	೦.೨೨	೦.೩೧	೦.೨೯
೧೧	ಮಹಾರಾಷ್ಟ್ರ	೦.೪೫	೦.೨೯	೦.೨೭	೦.೨೬
೧೨	ಒರಿಸ್ಸಾ	೦.೨೨	೦.೧೬	೦.೧೫	೦.೧೯
೧೩	ಪಂಜಾಬ್	೦.೩೨	೦.೪೬	೦.೪೬	೦.೬೦
೧೪	ರಾಜಸ್ಥಾನ	೦.೨೭	೦.೨೩	೦.೨೬	೦.೨೭
೧೫	ತಮಿಳುನಾಡು	೦.೧೯	೦.೨೦	೦.೨೪	೦.೨೯
೧೬	ಉತ್ತರ ಪ್ರದೇಶ	೦.೧೧	೦.೧೧	೦.೧೬	೦.೨೧
೧೭	ಪಶ್ಚಿಮ ಬಂಗಾಳ	೦.೧೧	೦.೦೮	೦.೦೩	೦.೦೧

ಒಟ್ಟಾರೆಯಾಗಿ ರಾಜ್ಯದಲ್ಲಿರುವ ಭ್ರಷ್ಟಾಚಾರವನ್ನು ತಡೆಯಲು ಬಹಳ ಮಹತ್ವಾಕಾಂಕ್ಷೆಯಿಂದ ಲೋಕಾಯುಕ್ತ ಸಂಸ್ಥೆಯನ್ನು ಹುಟ್ಟು ಹಾಕಲಾಗಿತ್ತು. ಭ್ರಷ್ಟಾಚಾರ ಅಳಿಸಿ ಉತ್ತಮ ಆಡಳಿತದ ಮಹೋನ್ನತ ಗುರಿ ಇಟ್ಟುಕೊಂಡು ಸ್ಥಾಪಿಸಲ್ಪಟ್ಟ ಲೋಕಾಯುಕ್ತ ಸಂಸ್ಥೆಗೆ ಇದೀಗ ೨೮ವರ್ಷ. ಇಷ್ಟು ದೀರ್ಘಕಾಲೀನ ಸಂಸ್ಥೆಯ ಪ್ರತಿ ಹಂತವನ್ನು ವಿಶ್ಲೇಷಣೆಗೆ ಗುರಿ ಪಡಿಸಿದರೆ ಇದು ತನ್ನ ಗುರಿ ಸಾಧನೆಯಲ್ಲಿ ವಿಫಲವಾಗಿದಷ್ಟೇ ಅಲ್ಲ ಇದೊಂದು ವಿಫಲ ಮಾದರಿ ಎನ್ನಬಹುದು. ಇದು ಕಚ್ಚಿದ್ದಕ್ಕಿಂತಲೂ ಗುಡುಗಿದ್ದೇ ಹೆಚ್ಚು. ಆದಾಗ್ಯೂ ಕೂಡ ಈ ಸಂಸ್ಥೆ ಸಾಮಾಜಿಕವಾಗಿ ಬೀರಿದ ಪರಿಣಾಮ ಮಾತ್ರ ಗಮನಾರ್ಹ. ಇದೊಂದು ವಿಫಲ ಸಂಸ್ಥೆಯೆಂದು ಪರಿಗಣಿಸಿದರೂ ಸಹ ಸರ್ಕಾರದ ಕೆಲಸದಲ್ಲಿ ವಿನೂತನ ಪದ್ಧತಿ, ನಾಗರೀಕ ಸ್ನೇಹಿ, ಗುಣಾತ್ಮಕ, ಭ್ರಷ್ಟಾಚಾರ ರಹಿತ ಹಾಗೂ ಚಿಂತನಶೀಲ ಆಡಳಿತ ನೀಡಲು ತನ್ನ ಸಿಬ್ಬಂದಿಗೆ ನೈತಿಕವಾಗಿ ಮಾರ್ಗದರ್ಶನ ಮಾಡುವ ಹೊಣೆಗಾರಿಕೆ ಈ ಸಂಸ್ಥೆಯ ಮೇಲಿದೆ ಎನ್ನಬಹುದು.

೬.೨ ಫಲಿತಗಳು

ಪ್ರತಿಯೊಬ್ಬ ವ್ಯಕ್ತಿಯು ಲಂಚದ ವಿರುದ್ಧ ಸಾರ್ವಜನಿಕ ಅಭಿಪ್ರಾಯವನ್ನು ಮೂಡಿಸಬೇಕು. ಈ ಬಗ್ಗೆ ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಪತ್ರ ಅಭಿಯಾನ ಮಾಡಬೇಕು. ಸಾರ್ವಜನಿಕರು ಇಂತಹ ಕಾರ್ಯ ಮಾಡುವುದರಿಂದಾದರೂ ಸರ್ಕಾರದ ಗಮನ ಸೆಳೆದು ಸ್ವಲ್ಪ ಪ್ರಮಾಣದಲ್ಲಿ ಭ್ರಷ್ಟಾಚಾರ ನಿಯಂತ್ರಣವಾದೀತೆಂಬ ಆಶಾಭಾವನೆ. ಭ್ರಷ್ಟಾಚಾರದ ದುಷ್ಪರಿಣಾಮಗಳ ಬಗ್ಗೆ ಜನರಲ್ಲಿ ಜಾಗೃತಿಯನ್ನು ಮೂಡಿಸಬೇಕಾದರೆ, ಈ ನಿಟ್ಟಿನಲ್ಲಿ ಸಭೆ, ಸಮ್ಮೇಳನಗಳು, ವಿಚಾರ

ಸಂಕಿರಣಗಳು, ಪ್ರಚಾರ, ಪ್ರಸಾರ ಅಗತ್ಯವಾಗಿದೆ. ಯುವಕರು, ಯುವ ಸಂಘಟನೆಗಳು ಮತ್ತು ಬುದ್ಧಿಜೀವಿಗಳ ಸಹಕಾರ ಈ ದಿಸೆಯಲ್ಲಿ ಅತ್ಯಗತ್ಯ. ರಾಜಕಾರಣಿಗಳು, ಆಡಳಿತ ಸೇವಾ ಸಿಬ್ಬಂದಿ ವರ್ಗ, ಪೊಲೀಸ್ ಸಿಬ್ಬಂದಿ, ವ್ಯಾಪಾರಸ್ಥರು, ಕೈಗಾರಿಕೋದ್ಯಮಿಗಳು ಸಾಧ್ಯವಾದಷ್ಟು ಪ್ರಮಾಣದಲ್ಲಿ ಪ್ರಾಮಾಣಿಕರಾಗಿರಬೇಕು. ಹಣ ಮತ್ತು ಸಂಪತ್ತಿನ ದುರಾಸೆ, ವಿಲಾಸಪ್ರಿಯತೆ, ಭೋಗ ಜೀವನದ ವ್ಯಾಮೋಹ, ದುಂದು ವೆಚ್ಚತನವನ್ನು ನಿಗ್ರಹಿಸಬೇಕು. ಜನರು, ರಾಜಕಾರಣಿಗಳು, ಅಧಿಕಾರಿಗಳು ನೀತಿವಂತರು, ತತ್ವನಿಷ್ಠರು, ಧರ್ಮವಂತರು ಆಗಿ ಮೌಲ್ಯಗಳ ರಕ್ಷಕರಾದರೆ, ಭ್ರಷ್ಟಾಚಾರವನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡಲಾಗದಿದ್ದರೂ ಅದನ್ನು ನಿಯಂತ್ರಣ ಮಾಡಲು ಸಾಧ್ಯ.

ಕಚೇರಿಗಳ ಮುಂದೆ ಕೇವಲ ಬೋರ್ಡ್ ಹಾಕುವುದರಿಂದ ಲೋಕಾಯುಕ್ತದ ಬಗ್ಗೆ ಸಾಕಷ್ಟು ಅರಿವು ಮೂಡಿಸಲಿಕ್ಕೆ ಆಗುವುದಿಲ್ಲ. ಲೋಕಾಯುಕ್ತದ ಕುರಿತು ಜಾಗೃತಿ ಮೂಡಿಸಲು ಬೀದಿ ನಾಟಕ, ಮಕ್ಕಳಿಗೆ ನಿಬಂಧ, ಭಾಷಣ ಸ್ಪರ್ಧೆ ಸಂಘಟಿಸಿ ಅರಿವು ಮೂಡಿಸಬಹುದು. ಕಾನೂನು ಕಾಲೇಜಿನ ವಿದ್ಯಾರ್ಥಿಗಳಿಗೆ ನಾಲ್ಕು ವಾರಗಳ ಕಾಲ ಇಂಟರ್ನಶಿಪ್ ಮಾಡಲಿಕ್ಕೆ ಅವಕಾಶ ಕಲ್ಪಿಸಿಕೊಡಬೇಕು. ಇದರಿಂದ ವಿದ್ಯಾರ್ಥಿಗಳು ಲೋಕಾಯುಕ್ತ ಸಂಸ್ಥೆಯಲ್ಲಿ ಸಹಭಾಗಿಯಾದ ಹೆಮ್ಮೆಯನ್ನು ಹೊಂದುತ್ತಾರೆ. ಅದೇ ರೀತಿ ಲೋಕಾಯುಕ್ತ ಸಂಸ್ಥೆಯ ಕೆಲ ಮೂಲಭೂತ ವೈಶಿಷ್ಟ್ಯಗಳನ್ನು ಕೂಡ ಗಮನಿಸಬೇಕು. ಲೋಕಾಯುಕ್ತರಾದವರು ನಿವೃತ್ತ ನ್ಯಾಯಮೂರ್ತಿ ಆಗಿದ್ದರೂ ಅವರು ನ್ಯಾಯಾಧೀಶರಲ್ಲ. ಅವರು ಪೋಲಿಸ ಇಲಾಖೆಯ ಮೂಲಕ ಕೆಲಸ ಮಾಡಿಸಿಕೊಳ್ಳಬೇಕಾದರೂ ಅವರು ಪೋಲಿಸ್ ಅಧಿಕಾರಿ ಅಲ್ಲ. ಅವರಿಗೆ ಕಾನೂನು, ಸರ್ಕಾರದ ವ್ಯವಹಾರವನ್ನು ಪರೀಶೀಲಿಸುವ, ಪ್ರಶ್ನಿಸುವ ಅಧಿಕಾರ ನೀಡುತ್ತದಾದರೂ ಅವರು ರಾಜಕೀಯ ನಾಯಕರಲ್ಲ. ಲೋಕಾಯುಕ್ತ ಜನಸೇವೆಗೆ ಅವಕಾಶ ನೀಡುವುದಾದರೂ ಲೋಕಾಯುಕ್ತರು ಜನನಾಯಕನಲ್ಲ, ಕೊನೆಗೆ ಒಬ್ಬ ಹೋರಾಟಗಾರ ಕೂಡ ಅಲ್ಲ. ಲೋಕಾಯುಕ್ತ ಇದೆಲ್ಲವೂ ಅಲ್ಲದೇ, ಇದೆಲ್ಲವೂ ಆಗಿ ವರ್ತಿಸಬೇಕಾದ ಒಂದು ವಿಚಿತ್ರವಾದ ಆಡಳಿತಾತ್ಮಕ ಅವಿಷ್ಕಾರ ಎಂದು ಹೇಳಬಹುದು.

೧. ಭ್ರಷ್ಟಾಚಾರವನ್ನು ಕೊನೆಗಾಣಿಸಲು ಅಥವಾ ನಿಯಂತ್ರಿಸುವ ಶಾಸನೀಯ ಸಂಸ್ಥೆಗಳಾದ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗದ ಜೊತೆಗೆ ಮಾಧ್ಯಮ ಮತ್ತು ನಾಗರೀಕ ಸಮಾಜದ ಕೊಡುಗೆ ಕೂಡ ಅಷ್ಟೇ ಪ್ರಮುಖವಾಗಿದೆ ಎಂದು ಸದರಿ ಅಧ್ಯಯನದ ಸಂದರ್ಭದಲ್ಲಿ ಕಂಡುಕೊಳ್ಳಲಾಗಿದೆ.

೨. ವಿವಿಧ ಅಧ್ಯಯಗಳಲ್ಲಿ ಸೂಚ್ಯವಾಗಿ ವಿವರಿಸಿದಂತೆ ರಾಜಕಾರಣ, ಅಧಿಕಾರಶಾಹಿ ಮತ್ತು ಅಪರಾಧಿಗಳ ನಡುವೆ ಒಂದುರೀತಿಯ ಅಘೋಷಿತ ಬಾಂಧವ್ಯ ಏರ್ಪಟ್ಟಂತಿರುವುದು ಭ್ರಷ್ಟಾಚಾರ ಮುಂದುವರಿಸುತ್ತಾ ಹೋಗುತ್ತಿದೆ. ತಮಗೆ ಅನುಕೂಲಕರ ವ್ಯಕ್ತಿ ಸಿಗುವವರೆಗೂ ಲೋಕಾಯುಕ್ತ ಹುದ್ದೆ ಖಾಲಿ ಬಿಟ್ಟಿರುವುದು ಜನಸಾಮಾನ್ಯರು ಒಪ್ಪುತ್ತಿಲ್ಲ.

೩. ಭ್ರಷ್ಟಾಚಾರವು ಕೇವಲ ಹಣದ ರೂಪದಲ್ಲಿ ಮಾತ್ರ ಬೆಳಕಿಗೆ ಬರುವುದು ಎಂದಿರುವ ಸಂಗತಿ ಹೆಚ್ಚು ಪ್ರಚಲಿತವಾಗಿದೆ. ಕಾಯ್ದೆ ಕೂಡ ಇದಕ್ಕೆ ಪುಷ್ಠಿ ನೀಡುತ್ತದೆ. ಆದರೆ ಹಣಕಾಸೇತರ ಆರೋಪಗಳಾದ ಕಾಣಿಕೆ, ಔತಣಕೂಟ, ಪ್ರವಾಸ ಇವು ಕೂಡ ಹಣಕಾಸಿನಷ್ಟೆ ಪ್ರಮಾಣದಲ್ಲಿ ಗಂಭೀರತೆಯನ್ನು ಪಡೆದಿರುವುದು ಇತ್ತೀಚಿನ ದಿನಗಳಲ್ಲಿ ಹೆಚ್ಚು ಕಂಡುಬರುತ್ತದೆ. ಜೇಮ್ಸ್ ಮ್ಯಾನರ್ ಹೇಳುವಂತೆ ನಮ್ಮ ಅಧ್ಯಯನದಲ್ಲೂ ಕೂಡ ಗ್ರಾಮೀಣ ಪ್ರದೇಶದ ಜನಕ್ಕೆ ಲಂಚಗುಳಿತನಕ್ಕೆ ಬಲಿಯಾಗಿದ್ದಾರೆಂಬುದು ಕಂಡುಬರುತ್ತದೆ.

೪. ಅಧ್ಯಯನದಲ್ಲಿ ಕಂಡುಬಂದಂತೆ ಅಧಿಕಾರಿಗಳು, ರಾಜಕಾರಣಿಗಳ ಹಾಗೇನೇ ಜನಗಳು ಕೂಡ ಭ್ರಷ್ಟಾಚಾರದ ಭಾಗವಾಗಿಯೇ ಕಂಡುಬರುತ್ತಿದ್ದಾರೆ. ಏಕೆಂದರೆ ಇದು ವ್ಯವಸ್ಥೆ ಜೊತೆ ಹಾಸುಹೊಕ್ಕಾಗಿ ಇರುವಂತೆ ಕಂಡುಬರುತ್ತಿದೆ. ಏಕೆಂದರೆ ನಮ್ಮ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಜನಗಳು ತಮ್ಮ ಕೆಲಸ ಶೀಘ್ರದಲ್ಲಿ ನೆರವೇರಲು ಮತ್ತು ನೌಕರರ ಬೇಡಿಕೆ ಹಿನ್ನೆಲೆಯಲ್ಲಿ ಹಾಗೂ ಕಾನೂನುಭಾಹಿರವಾದ ಕೆಲಸಕ್ಕೆ ಹೆಚ್ಚಾಗಿ ಲಂಚ ನೀಡುತ್ತಾರೆ ಎಂದು ತಿಳಿಸಿರುತ್ತಾರೆ. ಹಾಗಾಗಿ ಜನಸಾಮಾನ್ಯರು ಮತ್ತು ನಾಗರೀಕ ಸಮಾಜ ಎಲ್ಲಿ ಕ್ರಿಯಾಶೀಲವಿಲ್ಲವೋ ಅಲ್ಲಿ ಉತ್ತಮ ಸಮಾಜ ನಿರ್ಮಾಣ ಅಸಾಧ್ಯ ಎಂದು ಅಮರ್ತ್ಯಸೇನ್ ಅಂಥವರು ಅಭಿಪ್ರಾಯಪಟ್ಟಿದ್ದಾರೆ. ಹಾಗಾಗಿ ಬಹಳ ಮುಖ್ಯವಾಗಿ ಜನಸಾಮಾನ್ಯರು ಮತ್ತು ನಾಗರೀಕ ಸಮಾಜ ಒಂದು ನಿಯೋಗಿ ಪಾತ್ರವನ್ನು ವಹಿಸುವ ಮೂಲಕ ಭ್ರಷ್ಟಾಚಾರವನ್ನು ನಿಯಂತ್ರಿಸುವ ಅವಶ್ಯಕತೆ ಇದೆ.

೫. ಲೋಕಾಯುಕ್ತ ಸಂಸ್ಥೆಯ ಅಸ್ತಿತ್ವದ ಬಗೆಗೆ ಜನಸಾಮಾನ್ಯರ ತಿಳುವಳಿಕೆಯು ಬಹಳ ಮುಖ್ಯವಾದ ಸಂಗತಿಯೆಂದು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ. ಆದರೆ ದೊರೆತಿರುವ ಉತ್ತರ ನೇತ್ಯಾತ್ಮಕವಾಗಿದೆ. ಈ ಸಂಸ್ಥೆಯ ಇರುವಿಕೆಯ ಬಗೆಗೆ ರಾಜ್ಯದಲ್ಲಿ ಗೊತ್ತಿರುವವರ ಪ್ರಮಾಣ ಮತ್ತು ವಿಭಾಗವಾರು ಇದನ್ನು ತೌಲನಿಕವಾಗಿ ವಿಶ್ಲೇಷಿಸಿದಾಗ ಇದು ಇನ್ನಷ್ಟು ವೇದ್ಯವಾಗುತ್ತದೆ. ಜನಸಾಮಾನ್ಯರಿಗೆ ಲೋಕಾಯುಕ್ತ ಎನ್ನುವುದು ದೈನಂದಿನ ಜನಜೀವನದ ಭಾಗವಾಗಿರಬೇಕಿತ್ತು. ಜನಗಳ ಬದುಕಿನ ದಿನನಿತ್ಯದ ಪ್ರತಿರೋಧದಲ್ಲಿ ಲೋಕಾಯುಕ್ತ

ಮತ್ತು ಅದು ಕೊಡುವ ಉತ್ತಮ ಆಡಳಿತವು ಜನಜೀವನಕ್ಕೆ ನೇರ ಸಂಬಂಧಿಸಿದುದಾಗಿದೆ. ಹಾಗಾಗಿ ಜನಸಾಮಾನ್ಯರ ತಿಳುವಳಿಕೆಯು ಲೋಕಾಯುಕ್ತದ ಅಸ್ತಿತ್ವ ಮತ್ತು ಕಾರ್ಯ ನಿರ್ವಹಣೆಯ ಮೇಲೆ ಪ್ರಭಾವಬೀರುವ ಸಂಗತಿ ಎನಿಸಿದೆ. ಅದೇ ರೀತಿ ಲೋಕಾಯುಕ್ತದ ಬಗ್ಗೆ ನೌಕರರಲ್ಲಿ ಭಯವು ಇಲ್ಲ. ಭ್ರಷ್ಟ ನೌಕರರನ್ನು ಶಿಕ್ಷಿಸುವಲ್ಲಿ ನ್ಯಾಯಾಲಯದ ವಿಳಂಭನೀತಿ ಕೂಡ ಗುರ್ತಿಸಲಾಗಿದೆ.

೬. ಈ ಮಹಾ ಪ್ರಬಂಧದಲ್ಲಿ ಲೋಕಾಯುಕ್ತ ಕಾರ್ಯನಿರ್ವಹಣೆ ಕುರಿತಂತೆ ವ್ಯಾಪಕವಾದ ಪ್ರಶ್ನಾವಳಿಯನ್ನು ಬಳಸಿ ಕ್ಷೇತ್ರಕಾರ್ಯ ನಡೆಸುವ ಮೂಲಕ ಮಾಹಿತಿ ಸಂಗ್ರಹಿಸಲಾಗಿದೆ. ಬಹಳ ಮುಖ್ಯವಾಗಿ ಉತ್ತಮ ಆಡಳಿತ/ಭ್ರಷ್ಟಾಚಾರ ರಹಿತ ಮತ್ತು ಇವನ್ನು ಪಾಲಿಸಲು, ನಿರ್ವಹಿಸಲು ಕಾವಲುತರಹ ಲೋಕಾಯುಕ್ತ ಕಾರ್ಯನಿರ್ವಹಿಸುತ್ತದೆ ಎಂದು ಭಾವಿಸಲಾಗಿದೆ. ಈ ನಿಟ್ಟಿನಲ್ಲಿ ಒಂದು ಜನಸ್ನೇಹಿ ಲೋಕಾಯುಕ್ತ ವ್ಯವಸ್ಥೆ ಜನಗಳ ಕಷ್ಟ ಸುಖಗಳ ಬಗೆಗೆ ಯಾವ ರೀತಿಯ ನಿಲುವು ತೋರಿಸುತ್ತದೆ ಹಾಗೂ ಅದು ಬೀರಿದ ಸಾಮಾಜಿಕ ಪರಿಣಾಮಗಳೇನು ಎಂಬುದರ ಮೇಲೆ ಲೋಕಾಯುಕ್ತದ ಕಾರ್ಯನಿರ್ವಹಣೆಯನ್ನು ಗ್ರಹಿಸಬಹುದಾಗಿದೆ.

೭. ಒಟ್ಟಿನಲ್ಲಿ ಹೇಳಬೇಕೆಂದರೆ ಭ್ರಷ್ಟಾಚಾರಕ್ಕೆ ನೈತಿಕತೆಯೇ ಕೊರತೆ. ಕಾನೂನಿನಲ್ಲಿರುವ ಸಡಿಲತೆ, ದೇಶಾಭಿಮಾನದ ಕೊರತೆ, ನಾಗರೀಕ ಸಮಾಜದ ಉದಾಸೀನತೆ ಹಾಗೂ ಅನಕ್ಷರತೆ ಎಂಬ ಪಂಚ ಮೂಲಗಳನ್ನು ಗುರುತಿಸಲಾಗಿದೆ.

೬.೩ ಸಲಹೆ, ಸೂಚನೆಗಳು

ಭ್ರಷ್ಟಾಚಾರವನ್ನು ನಿಯಂತ್ರಣ ಮಾಡುವ ಪ್ರಕ್ರಿಯೆಯು ಯಶಸ್ವಿಯಾಗಬೇಕಾದರೆ ಹಾಗೂ ಲೋಕಾಯುಕ್ತವು ಉತ್ಸಾಹದಿಂದ ಕಾರ್ಯನಿರ್ವಹಿಸಬೇಕಾದರೆ, ಸರ್ಕಾರ ಮತ್ತು ಲೋಕಾಯುಕ್ತದ ನಡುವೆ ಉತ್ತಮ ಸಂಬಂಧವಿರಬೇಕು. ಸರ್ಕಾರ ಮತ್ತು ಅಧಿಕಾರಿಗಳು ಲೋಕಾಯುಕ್ತಕ್ಕೆ ಎಂದಿಗೂ ಸಹಕಾರ ನೀಡಿಲ್ಲ, ಎಂಬ ಆಪಾದನೆಯನ್ನು ಲೋಕಾಯುಕ್ತರು ಮಾಡುತ್ತಲೇ ಬಂದಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಲೋಕಾಯುಕ್ತದ ಗುರಿ ಸಾಧನೆ ಅಸಾಧ್ಯ. ಆದುದರಿಂದ ಸರ್ಕಾರವು ಲೋಕಾಯುಕ್ತಕ್ಕೆ ಸಕಾರಾತ್ಮಕವಾಗಿ ಸ್ಪಂದಿಸಬೇಕು. ಈ ಸಂಸ್ಥೆಯು ತನಿಖೆಮಾಡಿ ಸರ್ಕಾರಕ್ಕೆ ಕಳುಹಿಸಿದ ಉಲ್ಲೇಖಗಳನ್ನು ಸರ್ಕಾರವು ಆಸಕ್ತಿಯಿಂದ ಪರಿಶೀಲಿಸಿ, ಆರೋಪಿತ ಭ್ರಷ್ಟ ಅಧಿಕಾರಿಗಳ ವಿರುದ್ಧ ಸಮರ್ಪಕವಾದ ಶಿಸ್ತಿನ ಕ್ರಮ ಕೈಗೊಳ್ಳಬೇಕು, ಇಲ್ಲವಾದಲ್ಲಿ ಲೋಕಾಯುಕ್ತ ಪಟ್ಟ ಶ್ರಮವೆಲ್ಲವೂ ನಿರರ್ಥಕವಾಗುತ್ತದೆ.

ಲೋಕಾಯುಕ್ತವು ಜನಸಾಮಾನ್ಯರಿಗೆ ಹತ್ತಿರವಾಗುವ ರೀತಿಯಲ್ಲಿ ಕಾರ್ಯನಿರ್ವಹಿಸಬೇಕು. ಏಕೆಂದರೆ ಜನರ ಸಹಕಾರ ಇಲ್ಲದಿದ್ದಲ್ಲಿ ಸಂಸ್ಥೆಯು ಸಮರ್ಪಕವಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗುವುದಿಲ್ಲ. ಈಗಲೂ ಎಷ್ಟೋ ಜನಕ್ಕೆ ಲೋಕಾಯುಕ್ತವೆಂದರೆ, ಅದು ಸುಪ್ರೀಂ ಕೋರ್ಟ್‌ನ ಮತ್ತು ಹೈಕೋರ್ಟ್‌ನ ನ್ಯಾಯಾಧೀಶರಾಗಿದ್ದವರು ಹಾಗೂ ಹಿರಿಯ ಪೊಲೀಸ್ ಅಧಿಕಾರಿಗಳು ಇರುವ ಜಾಗ, ಅಲ್ಲಿ ನಮ್ಮಂಥ ಸಾಮಾನ್ಯರಿಗೆ ಪ್ರತಿಸ್ಪಂದಿಸುವಿಕೆ ಸಾಧ್ಯವೆ? ಎಂಬ ಭಾವನೆ ಇದೆ. ಇಂಥ ಭಾವನೆಯನ್ನು ಮೊದಲು ಹೋಗಲಾಡಿಸುವ ಕಾರ್ಯವನ್ನು ಮಾಡಬೇಕು. ಪ್ರತಿಯೊಬ್ಬ ಜನಸಾಮಾನ್ಯನು ಭ್ರಷ್ಟ ಸಾರ್ವಜನಿಕ ಸೇವಕನ ವಿರುದ್ಧ ಅಥವಾ ಅಂತಹ ಸರ್ಕಾರಿ ಸಿಬ್ಬಂದಿಯಿಂದಾಗುವ ಸಮಸ್ಯೆಗಳ ವಿರುದ್ಧ ದೂರು ನೀಡಲು ಮತ್ತು ತಮ್ಮ ಕುಂದು ಕೊರತೆಗಳನ್ನು ಸುಲಭವಾಗಿ ಪರಿಹರಿಸಿಕೊಳ್ಳಲು ಅಗತ್ಯವಿರುವ ವಾತಾವರಣವನ್ನು ಸೃಷ್ಟಿ ಮಾಡಬೇಕು. ಜನಸಾಮಾನ್ಯರಲ್ಲಿ ಲೋಕಾಯುಕ್ತ ಒಂದು ಉತ್ತಮ ಸಂಸ್ಥೆ ಎಂಬ ಭಾವನೆಯನ್ನು ತನ್ನ ಕಾರ್ಯವೈಖರಿಯ ಮೂಲಕ ಮೂಡಿಸಬೇಕು. ಹೀಗಾದಾಗ ಮಾತ್ರ ಲೋಕಾಯುಕ್ತದ ಬಗ್ಗೆ ವಿಶ್ವಾಸ ಹೊಂದಿ, ಭ್ರಷ್ಟಾಚಾರ ನಿರ್ಮೂಲನೆಯಲ್ಲಿ ಅಗತ್ಯವಿರುವ ಬೆಂಬಲವನ್ನು ನೀಡುತ್ತಾರೆ.

೧. ಲೋಕಾಯುಕ್ತ ಸ್ಥಾಪಿಸಿದ ಉದ್ದೇಶ ಭ್ರಷ್ಟಾಚಾರ ನಿರ್ಮೂಲನೆ ಮಾಡುವುದಷ್ಟೇ ಅಲ್ಲ ಉತ್ತಮ ಆಡಳಿತ ಜನತೆಗೆ ನೀಡುವುದಾಗಿದೆ. ದೂರು ನೀಡುವ ಪ್ರಸಕ್ತ ವಿಧಾನವು ಜಟಿಲವಾದ ಪ್ರಕ್ರಿಯೆಯಾಗಿದ್ದು, ಇದನ್ನು ಇನ್ನಷ್ಟು ಸರಳಗೊಳಿಸುವ ಪ್ರಯತ್ನವನ್ನು ಸಂಸ್ಥೆಯು ಮಾಡಬೇಕು. ಲೋಕಾಯುಕ್ತಕ್ಕೆ ಕೆಲವು ಸೆಕ್ಷನ್‌ಗಳ ಪ್ರಕಾರ, ನಿಗದಿತ ನಮೂನೆಯಲ್ಲಿ ದೂರನ್ನು ಕೊಟ್ಟಾಗ ಮಾತ್ರ ಅದು ಊರ್ಜಿತಗೊಳ್ಳುತ್ತದೆ ಹಾಗೂ ಮುಂದಿನ ಕ್ರಮಕ್ಕೆ ಅವಕಾಶವಾಗುತ್ತದೆ. ಆದರೆ ನಮ್ಮ ವ್ಯವಸ್ಥೆಯಲ್ಲಿ ಅಕ್ಷರಸ್ಥರಿಗಿಂತ ಅನಕ್ಷರಸ್ಥರೇ ಹೆಚ್ಚಾಗಿರುವಂತಹ ಸಂದರ್ಭದಲ್ಲಿ ಓದು ಬರಹ ಬಾರದೇ ಇರುವಂತಹವರು ಹೇಗೆ ದೂರು ನೀಡಲು ಸಾಧ್ಯ? ಆದುದರಿಂದ ಲೋಕಾಯುಕ್ತವು ಜನರಲ್ಲಿ ಈ ಪ್ರಕ್ರಿಯೆಯ ಬಗ್ಗೆ ಹಾಗೂ ಲೋಕಾಯುಕ್ತದ ಕಾರ್ಯವೈಖರಿ ಬಗ್ಗೆ ಸಾರ್ವಜನಿಕರಲ್ಲಿ ಅರಿವನ್ನು ಮೂಡಿಸುವ ಪ್ರಯತ್ನ ಮಾಡಬೇಕು. ಈ ಪ್ರಯತ್ನ ಗ್ರಾಮ ಮಟ್ಟದಿಂದ ಹಿಡಿದು ಎಲ್ಲಾ ಹಂತಗಳಲ್ಲೂ ಆಗಬೇಕು.

೨. ಸಾರ್ವಜನಿಕರು ತಮಗೆ ಸರ್ಕಾರಿ ಸಿಬ್ಬಂದಿಯಿಂದಾಗುವ ತೊಂದರೆಯನ್ನು ತಕ್ಷಣದಲ್ಲಿ ಲೋಕಾಯುಕ್ತದ ಗಮನಕ್ಕೆ ತರಲು ಸಾಧ್ಯವಾಗುವುದಿಲ್ಲ. ಇದಕ್ಕೆ ಭೌಗೋಳಿಕ, ಆರ್ಥಿಕ ಹೀಗೆ ಮುಂತಾದ ಕಾರಣಗಳುಂಟು. ಆದುದರಿಂದ ಲೋಕಾಯುಕ್ತವು ದೂರವಾಣಿಯ

ಮೂಲಕ ದೂರು ನೀಡಲು 'ಸಹಾಯವಾಣಿ' ವ್ಯವಸ್ಥೆಯನ್ನು ಪ್ರಾರಂಭ ಮಾಡಬೇಕು. ಸಹಾಯವಾಣಿ ಮೂಲಕ ಸಂಸ್ಥೆಯು ಜನರಿಗೆ ಹೆಚ್ಚು ಹತ್ತಿರವಾಗಲು ಸಹಕಾರಿಯಾಗಲಿದೆ ಮತ್ತು ಲೋಕಾಯುಕ್ತ ಕುರಿತು ಹೆಚ್ಚಿನ ವಿಶ್ವಾಸ ಮೂಡಿಸಲು ಸಹಾಯಕವಾಗುತ್ತದೆ. ಶಾಲಾ ಕಾಲೇಜುಗಳ ಪಠ್ಯಗಳಲ್ಲಿ ಲಂಚ ವಿರೋಧಿಸುವ ಬಗ್ಗೆ ಪಾಠವಿರಬೇಕು. ದೇಶಾಭಿಮಾನ ಹೆಚ್ಚಿಸುವಂತಹ ತರಬೇತಿಯನ್ನು ಸರ್ಕಾರಿ ನೌಕರರಿಗೆ ನೀಡಬೇಕು.

೩. ಸರ್ಕಾರವು ಲೋಕಾಯುಕ್ತವನ್ನು ಕೇವಲ ಭ್ರಷ್ಟ ಅಧಿಕಾರಿಗಳ ಮೇಲೆ ನಿಗಾ ಇಡಲು ಬಳಸಿಕೊಳ್ಳದೇ, ಉತ್ತಮ ಆಡಳಿತ ಹಾಗೂ ಸರ್ಕಾರಿ ಯೋಜನೆಗಳ ಸಮರ್ಪಕ ಅನುಷ್ಠಾನಕ್ಕೂ ಬಳಸಿಕೊಳ್ಳಬೇಕು. ಸರ್ಕಾರವು 'ಕಲ್ಯಾಣ ರಾಜ್ಯದ' ಗುರಿಯನ್ನು ಸಾಧಿಸುವ ನಿಟ್ಟಿನಲ್ಲಿ ಹಮ್ಮಿಕೊಳ್ಳಲಾಗುತ್ತಿರುವ ಹಲವಾರು ಕಾರ್ಯಕ್ರಮಗಳು, ಯೋಜನೆಗಳು ಸೂಕ್ತ ಫಲಾನುಭವಿಗಳಿಗೆ ದೊರಕುತ್ತಿಲ್ಲ. ಇವುಗಳಲ್ಲಿ ಸಾಕಷ್ಟು ಅಕ್ರಮಗಳಾಗುತ್ತಿವೆ. ಈ ನಿಟ್ಟಿನಲ್ಲಿ ಇಂತಹವುಗಳ ಮೇಲೆ ನಿಗಾವಹಿಸಲು ಲೋಕಾಯುಕ್ತ ಸಂಸ್ಥೆಯನ್ನು ಬಳಸಿಕೊಳ್ಳಬೇಕು. ಇಂತಹ ಕೆಲಸಗಳನ್ನು ಮಾಡಲು ಲೋಕಾಯುಕ್ತಕ್ಕೆ ಸರ್ಕಾರವು ಹೆಚ್ಚಿನ ಹಣಕಾಸಿನ ನೆರವನ್ನು ನೀಡಬೇಕು. ಹೀಗಾದಾಗ ಲೋಕಾಯುಕ್ತದ ಕಾರ್ಯವ್ಯಾಪ್ತಿ ವಿಸ್ತಾರಗೊಂಡು ಇದು ಒಂದು ಶಕ್ತಿಶಾಲಿ ತನಿಖಾ ಸಂಸ್ಥೆಯಾಗಿ ಹೊರಹೊಮ್ಮಲು ಸಾಧ್ಯವಾಗುತ್ತದೆ.

೪. ಶತ ಶತಮಾನಗಳಿಂದ ಬೇರುಬಿಟ್ಟ ಭ್ರಷ್ಟಾಚಾರ ಎಂಬ ಹೆಮ್ಮರವನ್ನು ಕೇವಲ ಕೆಲವೇ ವರ್ಷಗಳಲ್ಲಿ ನಿರ್ಮೂಲನೆ ಮಾಡಲು ಸಾಧ್ಯವಿಲ್ಲ. ಲೋಕಾಯುಕ್ತವು ಅಸ್ತಿತ್ವಕ್ಕೆ ಬಂದು ಸುಮಾರು ೨೮ ವರ್ಷಗಳು ಕಳೆದಿದ್ದರೂ ಸಹ ಅದರಲ್ಲೂ ಇತ್ತೀಚಿನ ವರ್ಷಗಳಲ್ಲಷ್ಟೆ ಭ್ರಷ್ಟಾಚಾರ ನಿರ್ಮೂಲನೆಗಾಗಿ ಇಂಥ ಒಂದು ಸಂಸ್ಥೆ ಇದೆ ಎಂಬುದು ಜನಸಾಮಾನ್ಯರಿಗೆ ಗೊತ್ತಾಗಿದೆ. ಇಂತಹ ಸಂಸ್ಥೆಯ ಬಗ್ಗೆ ಸರ್ಕಾರ ಜನರಲ್ಲಿ ಅರಿವು ಮೂಡಿಸುವ ಕೆಲಸವನ್ನು ಮಾಡದಿಲ್ಲದಿದ್ದದು ಒಂದು ವಿಪರ್ಯಾಸ. ಭ್ರಷ್ಟಾಚಾರವು ಸಮಾಜದಿಂದ ಕಿತ್ತೊಗೆಯಲು ಸಾಧ್ಯವಾಗದಂತಹ ಬೃಹತ್ ಹಿಮಾಲಯ ಪರ್ವತವೇನಲ್ಲ. ಮನಸ್ಸಿದ್ದರೆ ಮಾರ್ಗ ಎಂಬಂತೆ ಈ ಹೆಮ್ಮರವನ್ನು ಅಲುಗಾಡಿಸಬಹುದು, ಹಂತ ಹಂತವಾಗಿ ಪ್ರಯತ್ನಿಸಿದರೆ ಈ ಹೆಮ್ಮರದ ಬೇರುಗಳನ್ನು ಕೀಳಬಹುದು. ಜನಪರ ಕಾಳಜಿ ಮತ್ತು ಭ್ರಷ್ಟಾಚಾರ ನಿರ್ಮೂಲನೆ ಮಾಡಬೇಕೆನ್ನುವ ಇಚ್ಛಾಶಕ್ತಿ ಇದ್ದರೆ, ಲೋಕಾಯುಕ್ತ ಕೈ ಬಲಪಡಿಸುವ ದಿಟ್ಟ ನಿರ್ಧಾರವನ್ನು ಸರ್ಕಾರ ಮಾಡಬೇಕು. ಈ ನಿಟ್ಟಿನಲ್ಲಿ ಅಗತ್ಯವಿರುವ ಸ್ವಯಂಪ್ರೇರಿತ ಅಧಿಕಾರವನ್ನು ಲೋಕಾಯುಕ್ತಕ್ಕೆ ನೀಡಬೇಕು. ಲಂಚಕೋರರಿಗೆ ಕಠಿಣಶಿಕ್ಷೆ

ವಿಧಿಸಬೇಕು. ಆಗ ಮಾತ್ರ ಲೋಕಾಯುಕ್ತ ಸಂಸ್ಥೆಗೆ ನಿಜವಾದ ಅರ್ಥ ಬರಲು ಸಾಧ್ಯ ಹಾಗೂ ಸಂಸ್ಥೆಯ ಬಲ ಹೆಚ್ಚಲು ಸಾಧ್ಯ.

೫. ಭ್ರಷ್ಟಾಚಾರ ನಿಯಂತ್ರಣ ಪ್ರಕ್ರಿಯೆಯಲ್ಲಿ ಅಗತ್ಯವಿರುವ ಮತ್ತೊಂದು ಅಂಶವೆಂದರೆ ಮಾಹಿತಿ ಹಕ್ಕು ಕಾಯಿದೆ ಹಾಗೂ ಪಾರದರ್ಶಕ ಕಾಯಿದೆಯನ್ನು ಕಟ್ಟುನಿಟ್ಟಾಗಿ ಪಾಲಿಸುವುದು. ಈ ನಿಟ್ಟಿನಲ್ಲಿ ಭ್ರಷ್ಟಾಚಾರಕ್ಕೆ ತಕ್ಕಮಟ್ಟಿಗೆ ಕಡಿವಾಣವನ್ನು ಹಾಕಬಹುದು. ಸಾರ್ವಜನಿಕರು ಮಾಹಿತಿ ತಿಳಿಯುವ ಹಕ್ಕನ್ನು ಸಮರ್ಪಕವಾಗಿ ಉಪಯೋಗಿಸಿಕೊಂಡರೆ ಭ್ರಷ್ಟರ ಮುಖವಾಡಗಳನ್ನು ಕಳಚಲು ಸಾಧ್ಯವಾಗುತ್ತದೆ. ಲೋಕಾಯುಕ್ತರು ನಡೆಸುವ ದಾಳಿಯ ವಿವರಗಳನ್ನು ಬಹಿರಂಗಗೊಳಿಸಬಾರದು ಎಂಬುದಾಗಿ ಹಿರಿಯ ಅಧಿಕಾರಿಗಳು, ರಾಜ್ಯ ಸರ್ಕಾರಿ ನೌಕರರ ಒಕ್ಕೂಟ, ರಾಜ್ಯ ಸರ್ಕಾರಿ ಎಂಜಿನಿಯರ್‌ಗಳ ಒಕ್ಕೂಟ ಹೀಗೆ ಮುಂತಾದ ಸರ್ಕಾರಿ ನೌಕರರ ಸಂಘ ಸಂಸ್ಥೆಗಳು ಪ್ರತಿಪಾದಿಸುತ್ತಿದೆ. ಆದರೆ ಈ ವಾದ ಸಮರ್ಥನೀಯವಲ್ಲ. ದರೋಡೆ, ಭಯೋತ್ಪಾದನೆಯಲ್ಲಿ ಭಾಗಿಯಾದ ಆರೋಪಿಗಳನ್ನು ಬಂಧಿಸಿದ ಕೂಡಲೇ ಅವರ ಭಾವಚಿತ್ರ ಸಹಿತ ಮಾಹಿತಿಯನ್ನು ಮಾಧ್ಯಮಗಳಿಗೆ ನೀಡಬಹುದಾದರೆ, ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿದ ಅಧಿಕಾರಿಗಳ ಹೆಸರು ಬಹಿರಂಗಪಡಿಸುವುದರಲ್ಲಿ ತಪ್ಪೇನಿಲ್ಲ. ಲೋಕಾಯುಕ್ತರ ದಾಳಿ ವಿವರಗಳನ್ನು ಬಹಿರಂಗಪಡಿಸಬಾರದು ಎನ್ನುವ ವಾದ ಸಮರ್ಥನೀಯವಲ್ಲ ಹಾಗೂ ಈ ವಾದ ದುರುದ್ದೇಶಪೂರಿತವಾದುದಾಗಿದೆ. ಆದಾಯಕ್ಕಿಂತ ಹೆಚ್ಚು ಆಸ್ತಿಯನ್ನು ಅಕ್ರಮವಾಗಿ ಗಳಿಸಿರುವ ಅಧಿಕಾರಿ ಅಥವಾ ನೌಕರನಿಗೆ ಸಿಕ್ಕಿಬಿದ್ದ ಸುದ್ಧಿ ಬಹಿರಂಗವಾದಾಗ ಆಗುವ ಮುಜುಗರ ಮತ್ತು ಅವಮಾನವೇ ದೊಡ್ಡ ಶಿಕ್ಷೆ. ಸಮಾಜದಲ್ಲಿ, ಸ್ನೇಹಿತರ ವಲಯದಲ್ಲಿ, ಸಂಬಂಧಿಕರ ಎದುರು ಮಹಾನ್ ಪ್ರಾಮಾಣಿಕರಂತೆ ನಟಿಸುವವರ ಮುಖವಾಡ ಕಳಚಿ ಬೀಳುವುದು ಲೋಕಾಯುಕ್ತರ ದಾಳಿ ಮಾಡಿದ ವಿವರಗಳು ಮಾಧ್ಯಮಗಳಾದ ಪತ್ರಿಕೆ, ದೂರದರ್ಶನಗಳಲ್ಲಿ ಬಹಿರಂಗವಾದಾಗ ಮಾತ್ರ, ಈ ರೀತಿ ದಾಳಿ ಮಾಹಿತಿಗಳು ಬಹಿರಂಗವಾಗುವುದರಿಂದ ಸಮಾಜದ ಕಣ್ಣಿನಲ್ಲಿ 'ದೊಡ್ಡವರು' ಎಂಬ ಮುಖವಾಡ ಹೊತ್ತಿದ್ದ ಭ್ರಷ್ಟಾಚಾರಿಗಳು 'ಸಣ್ಣವರಾಗುತ್ತಾರೆ'. ಭ್ರಷ್ಟಾಚಾರ ಸಾಬೀತಾದರೂ ಶಿಕ್ಷೆಯಾಗದಂತಹ ಪರಿಸ್ಥಿತಿ ಇರುವಾಗ ಭ್ರಷ್ಟರ ಅಕ್ರಮಗಳನ್ನು, ಅಕೃತ್ಯಗಳನ್ನು ಬಹಿರಂಗಗೊಳಿಸುವುದು ಸರಿಯಾದ ಕ್ರಮವಾಗಿರುತ್ತದೆ.

೬. ಬಡತನದ ಬೇಗೆ ಕೂಡ ಒಂದು ಹಂತದಲ್ಲಿ ಭ್ರಷ್ಟಾಚಾರದ ಹೆಚ್ಚಳಕ್ಕೆ ಕಾರಣವಾಗುತ್ತದೆ. ಹೇಗೆಂದರೆ ಭಾರತೀಯ ಕುಟುಂಬಗಳಲ್ಲಿ ದುಡಿಯುವ ಕೈ ಒಂದಾದರೆ, ಉಣ್ಣುವ

ಕೈಗಳು ಹತ್ತು ಹಲವು. ಬರುವ ಸಂಬಳ ಒಪ್ಪೊತ್ತಿನ ಊಟಕ್ಕೂ ಸಾಲದ ಪರಿಸ್ಥಿತಿಯಲ್ಲಿ ಕೆಲವು ಸರ್ಕಾರಿ ನೌಕರರು ಬದುಕುತ್ತಿದ್ದಾರೆ. ಇದಕ್ಕೆ ಕಾರಣ ಬರುವ ಕಡಿಮೆ ಸಂಬಳ. ಇಂತಹ ಸಂದರ್ಭದಲ್ಲಿ ಕೆಲವು ವರ್ಗದ ಸಿಬ್ಬಂದಿಯ ಸಂಬಳವನ್ನು ಮತ್ತು ಭತ್ಯೆಗಳನ್ನು ಇನ್ನಷ್ಟು ಆಕರ್ಷಕವಾಗುವಂತಹ ರೀತಿಯಲ್ಲಿ ನೀಡಿದರೆ ಲಂಚಕ್ಕೆ ಕೈ ಒಡ್ಡುವ ಪ್ರಮೇಯ ತಪ್ಪುತ್ತದೆಯೇನೋ ಎಂಬುದು ಒಂದು ಆಶಾಭಾವನೆ.

ಇಂದು ನಮ್ಮ ಆಡಳಿತ ವ್ಯವಸ್ಥೆಯಲ್ಲಿ ಅಪ್ರಮಾಣಿಕ ಹಾಗೂ ಅದಕ್ಷ ಅಧಿಕಾರಿಗಳಿಗೆ ಎಲ್ಲಿಲ್ಲದ ಗೌರವ. ಇಂತಹ ಅಧಿಕಾರಿಗಳು ತಮ್ಮ ಅಧಿಕಾರದ, ಜಾತಿಯ, ಹಣದ ಹಾಗೂ ರಾಜಕೀಯ ಪ್ರಭಾವವನ್ನು ಬಳಸಿಕೊಂಡು, ಸರ್ಕಾರದ ಉನ್ನತಮಟ್ಟದ ಹಾಗೂ ಆಯಕಟ್ಟಿನ, ಸೂಕ್ಷ್ಮ ಮತ್ತು ಜವಾಬ್ದಾರಿಯುತ ಸ್ಥಾನಗಳನ್ನು ಅಲಂಕರಿಸುತ್ತಾರೆ. ಇಂತಹವರಿಂದಲೇ ಆಡಳಿತದಲ್ಲಿ ರಾಜಕೀಯದ ಹಸ್ತಕ್ಷೇಪ ಹೆಚ್ಚಾಗಲು ಕಾರಣವಾಗುತ್ತದೆ. ಆದುದರಿಂದ ಸರ್ಕಾರ ಇಂತಹ ಹಿನ್ನೆಲೆಯುಳ್ಳ ಅಧಿಕಾರಿಗಳನ್ನು ಗುರುತಿಸಿ, ಯಾವುದೇ ಮುಲಾಜಿಗೆ ಒಳಗಾಗದೇ ಇಂತಹ ಅಪ್ರಮಾಣಿಕರನ್ನು ಸೂಕ್ಷ್ಮ ಜಾಗಗಳಿಗೆ ನೇಮಿಸಬಾರದು, ಹೀಗೆ ಮಾಡಿದರೆ ಮಾತ್ರ ಸ್ವಲ್ಪ ಪ್ರಮಾಣದಲ್ಲಿ ಭ್ರಷ್ಟಾಚಾರವನ್ನು ನಿಯಂತ್ರಿಸಬಹುದು. ಲಂಚ ನೀಡದಂತೆ ಪತ್ರಿಕೆ, ಟಿ.ವಿ. ಮಾಧ್ಯಮಗಳಲ್ಲಿ ನಿರಂತರ ಜಾಹೀರಾತು ನೀಡಬೇಕು. ಉತ್ತಮ ಆಡಳಿತ ಪಡೆಯುವುದು ಪ್ರತಿಯೊಬ್ಬ ನಾಗರೀಕರ ಹಕ್ಕಾಗಬೇಕು.

೭. ಮುನ್ನೆಚ್ಚರಿಕೆ ವಹಿಸಿ ನಿಗ್ರಹಿಸುವುದು, ವಾಸಿ ಮಾಡುವುದಕ್ಕಿಂತ ಉತ್ತಮ ಎಂಬ ಮಾತಿನಂತೆ, ಸರ್ಕಾರ ಜನತಾ ಕಲ್ಯಾಣಕ್ಕಾಗಿ ಹಮ್ಮಿಕೊಳ್ಳುವ ಉತ್ತಮವಾದ ಯೋಜನೆಗಳು, ಕಾರ್ಯಕ್ರಮಗಳು ನಿಗದಿತ ಫಲಾನುಭವಿಗಳಿಗೆ ಸರಾಗವಾಗಿ ತಲುಪುವಂತೆ ಮಾಡಲು ಅಗತ್ಯವಿರುವ ಉತ್ತಮ, ಪ್ರಾಮಾಣಿಕ ಅಧಿಕಾರಿಗಳನ್ನು ಪ್ರಾರಂಭದಲ್ಲೇ ನೇಮಿಸುವುದು ಸೂಕ್ತ. ಇಲ್ಲವಾದರೆ 'ಕೊಳ್ಳೆ ಹೊಡೆದ ಮೇಲೆ ಕೋಟೆ ಬಾಗಿಲು ಹಾಕಿದರು' ಎಂಬ ಗಾದೆಮಾತಿನಂತೆ, ಯೋಜನೆಗಳು, ಕಾರ್ಯಕ್ರಮಗಳು ಭ್ರಷ್ಟಾಚಾರದ ಕೂಪಕ್ಕೆ ಬಿದ್ದ ನಂತರದಲ್ಲಿ ಅದರ ವಿರುದ್ಧ ತನಿಖೆ ಮಾಡುವುದರಿಂದ ಏನೂ ಪ್ರಯೋಜನವಿಲ್ಲ.

೮. ಭ್ರಷ್ಟಾಚಾರವನ್ನು ನಿಗ್ರಹ ಮಾಡುವಲ್ಲಿ ಕುಟುಂಬ ಹಾಗೂ ಶೈಕ್ಷಣಿಕ ವ್ಯವಸ್ಥೆ ಹಾಗೂ ಸಮಾಜವೂ ಸಹ ಅತ್ಯಂತ ಪ್ರಮುಖವಾದ ಜವಾಬ್ದಾರಿಯನ್ನು ಹೊಂದಿವೆ. 'ಬೆಳೆಯುವ ಸಿರಿ ಮೊಳಕೆಯಲ್ಲಿ' ಎಂಬ ಗಾದೆಯಂತೆ ವ್ಯಕ್ತಿಯ ವ್ಯಕ್ತಿತ್ವ ರೂಪಿತವಾಗುವುದು. ಆ ವ್ಯಕ್ತಿಯ ಕೌಟುಂಬಿಕ ಹಿನ್ನೆಲೆಯ ಪ್ರಭಾವದಿಂದ ಹೆತ್ತವರು, ಹಿರಿಯರು ತಮ್ಮ ಮಕ್ಕಳಿಗೆ

ಹುಟ್ಟಿನಿಂದಲೇ ಸತ್ಯ, ನ್ಯಾಯ, ಧರ್ಮದ ಹಾಗೂ ದೇಶಭಕ್ತಿಯಂತಹ ಪರಿಕಲ್ಪನೆಗಳನ್ನು ಕಲಿಸಬೇಕು, ಪೋಷಕರು ತಮ್ಮ ಮಕ್ಕಳಿಗಾಗಿ ಕೋಟಿ–ಕೋಟಿ ಆಸ್ತಿಯನ್ನು ಮಾಡುವ ಬದಲು ತಮ್ಮ ಮಕ್ಕಳನ್ನೇ ಆಸ್ತಿಯನ್ನಾಗಿ ಮಾಡಬೇಕು ಮತ್ತು ಮಕ್ಕಳನ್ನು ದೇಶದ ಆಸ್ತಿಯನ್ನಾಗಿಸುವ ಪ್ರಯತ್ನ ಮಾಡಬೇಕು. ಇವುಗಳ ಜೊತೆ ಪ್ರಾಮಾಣಿಕತೆ ಮತ್ತು ನೈತಿಕತೆಯ ಗುಣಗಳನ್ನು ಮಕ್ಕಳಲ್ಲಿ ಮೂಡಿಸುವ ಪ್ರಯತ್ನ ಮಾಡಬೇಕು. ಹೀಗಾದಾಗ ಮಾತ್ರ ಮಗು ಭವಿಷ್ಯದಲ್ಲಿ ಸತ್ಪ್ರಜೆಯಾಗಲು ಸಾಧ್ಯ. ಹಾಗೆಯೇ ಶಾಲೆಗಳು, ಕಾಲೇಜುಗಳು ಸಹ ವಿದ್ಯಾರ್ಥಿಗಳಲ್ಲಿ ದೇಶಭಕ್ತಿ, ದೇಶಪ್ರೇಮವನ್ನು ಮೂಡಿಸುವ ನೈತಿಕ ಹಾಗೂ ಮಾನವೀಯ ನೆಲೆಗಟ್ಟಿನಲ್ಲಿ ವಿದ್ಯೆಯನ್ನು ಕಲಿಸುವ ಪ್ರಯತ್ನವನ್ನು ಮಾಡಿದಾಗ, ವಿದ್ಯಾರ್ಥಿಗಳು ಭವಿಷ್ಯದಲ್ಲಿ ಕಾನೂನಿಗೆ ವಿಧೇಯರಾಗಿರುವಂತೆ ಮಾಡಲು ಹಾಗೂ ಭ್ರಷ್ಟಾಚಾರದಂತಹ ದುಷ್ಟ ಶಕ್ತಿಗಳ ವಿರುದ್ಧ ಜಾಗೃತರಾಗಿ ಇರುವಂತೆ ಮಾಡಲು ಸಾಧ್ಯವಾಗುತ್ತದೆ.

೯. ಲೋಕಾಯುಕ್ತವನ್ನು ಬಲಗೊಳಿಸುವ ಮೂಲಕ ಭ್ರಷ್ಟಾಚಾರವನ್ನು ಯಾವ ರೀತಿಯಲ್ಲಿ ನಿಯಂತ್ರಣ ಮಾಡುವುದು ಎಂಬ ಮೇಲಿನ ಅಂಶಗಳೊಂದಿಗೆ, ಈ ನಿಟ್ಟಿನಲ್ಲಿ ಸಾರ್ವಜನಿಕರ ಸಹಕಾರ ಏನು? ಎಂಬುದನ್ನು ಸಹ ಅರಿಯಬೇಕು. ಕೇವಲ ಭ್ರಷ್ಟಾಚಾರವನ್ನಲ್ಲದೇ ಯಾವುದೇ ರೀತಿಯ ಸಾಮಾಜಿಕ ಸಮಸ್ಯೆಯನ್ನು ಪರಿಹರಿಸುವುದರಲ್ಲಿ ಸಾರ್ವಜನಿಕರ ಸಹಕಾರವೂ ಸಹ ಅತ್ಯಗತ್ಯ ಹಾಗೂ ಪರಿಣಾಮಕಾರಿ ಕ್ರಮ. ಲಂಚವನ್ನು ಪಡೆಯುವ ಮಂದಿ ಕೆಲವರಾದರೆ, ಅದನ್ನು ನೀಡುವವರು ಅಸಂಖ್ಯ. ಕೊಡುವ ಕೈಗಳು ಇರುವವರೆಗೂ ಪಡೆಯುವ ಕೈಗಳು ಇದ್ದೇ ಇರುತ್ತವೆ. ಆದುದರಿಂದ ಸಾರ್ವಜನಿಕರು ಲಂಚ ನೀಡುವುದಿಲ್ಲ ಎಂದು ಪ್ರತಿಜ್ಞೆ ಮಾಡಬೇಕು. ಗ್ರಾಮ ಪಂಚಾಯ್ತಿ ಕಛೇರಿಯಿಂದ ಹಿಡಿದು, ತಾಲ್ಲೂಕು ಪಂಚಾಯ್ತಿ, ಜಿಲ್ಲಾ ಪಂಚಾಯ್ತಿ, ಮುನ್ಸಿಪಲ್ ಕಛೇರಿ, ಪೋಲೀಸ್ ಠಾಣೆ ಇಲ್ಲೆಲ್ಲಾ ಸಣ್ಣಪುಟ್ಟ ಕೆಲಸಗಳಿಗೂ 'ಮಾಮೂಲು' ನೀಡಬೇಕಾದ ಸಂದರ್ಭ ಬಂದಿದೆ. ಲಂಚಕ್ಕೆ ಬೇಡಿಕೆಯಿಡುವ ಭ್ರಷ್ಟ ಅಧಿಕಾರಿಯ ಬಗ್ಗೆ ಲೋಕಾಯುಕ್ತರಿಗೆ ದೂರನ್ನು ನೀಡುವ ಪರಿಪಾಠವನ್ನು ಜನರು ಬೆಳೆಸಿಕೊಳ್ಳಬೇಕು. ಒಬ್ಬ ಸಾಮಾನ್ಯ ರೈತ ಅಥವಾ ವ್ಯಕ್ತಿ ತನ್ನ ಜಮೀನಿನ ಖಾತೆ, ಪಹಣಿಯನ್ನು ಪಡೆಯಲು ಲಂಚ ಕೊಡಬೇಕು, ಸರ್ಕಾರಿ ಕಛೇರಿಗಳಲ್ಲಿ ಏನೇ ಕೆಲಸವಿದ್ದರೂ ಹಣ ಕೊಡದೆ ಕೆಲಸವಾಗುವುದಿಲ್ಲ ಎಂಬ ಪರಿಣಾಮ ಸಾಮಾಜಿಕವಾಗಿ ಬಹುದೊಡ್ಡ ಪ್ರಮಾಣದಲ್ಲಿ ಬೀರಿದೆ. ಇದನ್ನು ಹೋಗಲಾಡಿಸಿ, ಉತ್ತಮ ಆಡಳಿತ ನಿರ್ವಹಣೆ ಮಾಡಲು ಸರ್ಕಾರವು 'ವಿದ್ಯುನ್ಮಾನ ಆಡಳಿತ' (E-Governance) ವನ್ನು

ಸರ್ಕಾರಿ ಆಡಳಿತ ಎಲ್ಲಾ ಹಂತಗಳಲ್ಲೂ ಪರಿಣಾಮಕಾರಿಯಾಗಿ ಜಾರಿಗೆ ತರಬೇಕು. ಇದರಿಂದಾಗಿ ಆಡಳಿತದಲ್ಲಿ 'ತ್ವರಿತತೆ' ಮೂಡಲು ಹಾಗೂ ನಿಧಾನಗತಿ ದೂರವಾಗಲು ಸಹಕಾರಿಯಾಗುತ್ತದೆ. ಅಲ್ಲದೆ 'ಉತ್ತಮ ಆಡಳಿತ'ದ ಪರಿಕಲ್ಪನೆಯನ್ನು ಸರ್ಕಾರವು ಜಾರಿಗೆ ತರುವ ಪ್ರಯತ್ನ ಮಾಡಬೇಕು. ಹೀಗಾದಾಗ ಆಡಳಿತದಲ್ಲಿ ಉತ್ತಮ ಬೆಳವಣಿಗೆಗಳನ್ನು ನಿರೀಕ್ಷಿಸಬಹುದು.

ಪರಾಮರ್ಶನ ಗ್ರಂಥಗಳು

ಪರಾಮರ್ಶನ ಗ್ರಂಥಗಳು

ಇಂಗ್ಲಿಷ್ ಪುಸ್ತಕಗಳು

A. The Karnataka Lokayukta Acts. (Published by Karnataka law dept)

1. Karnataka Lokayukta Act, 1984.
2. Karnataka Lokayukta (Amendment) Act, 1986.
3. Karnataka Lokayukta (Amendment) Act, 1988.
4. Karnataka Lokayukta (Amendment) Act, 1991.
5. Karnataka Lokayukta(Amendment) Act , 2010
6. Karnataka Lokayukta Rules, 1985.,
7 Prevention of Corruption Act, 1988.

B. Reports.

1. Annual Reports of Karnataka Lokayukta, 2009-2012.
2. Annual Consolidated Reports on the Performance of the Lokayukta and Uplokayukta for the State of Karnataka.(published by Karnataka lokayukt) 2004
3. Report - Administrative Reform Commission, 1966. (Pulished by govt of India)
4. Report - Committee on the Prevention of Corruption - 1962.(Pulished by govt of India)
5. Report - Administrative Reform commission Report - 2008 (Pulished by govt of India)
6. Report Karnataka Lokayukta 2009-10 To 2011-12(published by Karnataka lokayukt)

ಕನ್ನಡ ಪುಸ್ತಕಗಳು

ಅಶೋಕ ಚಕ್ರವರ್ತಿ, ಏಡ್, ಇನ್ಸಿಟ್ಯೂಶನ್ಸ್ ಆಂಡ್ ಡೆವೆಲಪಮೆಂಟ್, ಓಯುಪಿ ಪಬ್ಲಿಕೇಶನ್ಸ್, ನವದೆಹಲಿ, ೨೦೦೫.

ಅಮಿತಾ ಸಿಂಗ್, ಎಡ್ಮಿಸ್ಟ್ರೇಟಿವ್ ರೀಪಾರ್ಮ್ಸ್, ಸಾಗೆ ಪಬ್ಲಿಕೇಶನ್ಸ್, ನವದೆಹಲಿ, ೨೦೦೫.

ಅಪ್ತಾಬ್ ಆಲ್ಂ, ಕ್ರೈಸಿಸ್ ಆಫ್ ಗವರ್ನಮೆಂಟ್, ರಾಜ್ ಪಬ್ಲಿಕೇಶನ್ಸ್, ನವದೆಹಲಿ, ೨೦೦೩.

ಅಮರ್ತ್ಯ ಸೇನ್, ರಿ ಡಿಸ್ಕೋರಿಂಗ್ ಎಂಪರೈರ್ ಅಶೋಕ, ಫ್ರೆಂಟಲೈನ್ ಪತ್ರಿಕೆ, ಮದ್ರಾಸ್, ೨೦೧೦.

ಅರವಿಂದ ಶರ್ಮಾ, ಬ್ಯುರಾಕ್ರಸಿ ಅಂಡ್ ಡಿಸೆಂಟ್ರಲೈಜೇಶನ್, ಮಿತ್ತಲ ಪಬ್ಲಿಕೇಷನ್, ನವದೆಹಲಿ, ೨೦೦೪.

ಆಚಾರ್ಯ ವಿನೋಬಾ, ಲೋಕನೀತಿ, ಪೌನಾರ ಆಶ್ರಮ, ಮಹಾರಾಷ್ಟ್ರ, ೧೯೬೦.

ಒಮೆನ್.ಟಿ.ಕೆ. ಡೆವಲಮೆಂಟ್ ಡಿಸ್ ಕೋರ್ಸ್ ಇಸ್ಯೂಜ್ ಆಂಡ್ ಕನ್ಸರ್ನ್, ರಿಜೇನ್ಸಿ ಪಬ್ಲಿಕೇಷನ್, ನವದೆಹಲಿ, ೨೦೦೪.

ಕರ್ನಾಟಕ ಗೃಹ ಇಲಾಖೆ ವಾರ್ಷಿಕ ವರದಿಗಳು (೧೯೮೪ ರಿಂದ ೨೦೧೦), ಬೆಂಗಳೂರು.

ಕರ್ನಾಟಕ ಲೋಕಾಯುಕ್ತ ಕಾಯ್ದೆ, ಕರ್ನಾಟಕ ಕಾನೂನು ಸಚಿವಾಲಯ, ರಾಜ್ಯ ಸರ್ಕಾರ, ಬೆಂಗಳೂರು, ೧೯೮೬.

ಕರ್ನಾಟಕ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ, ಕರ್ನಾಟಕ ಕಾನೂನು ಸಚಿವಾಲಯ, ರಾಜ್ಯ ಸರ್ಕಾರ, ಬೆಂಗಳೂರು, ೧೯೮೮.

ಕರ್ನಾಟಕದ ಅಂಕಿ ಅಂಶಗಳ ಇಲಾಖೆ, ಬೆಂಗಳೂರು.

ಕಪೂರ್ ಹೆಚ್.ಎಲ್. ಪ್ರಿವೆನ್ಷನ್ ಆಫ್ ಕರಪ್ಶನ್ ಆಕ್ಟ್, ಇಸ್ಟ್ ವೆಸ್ಟ್ ಪ್ರಿಂಟರ್ಸ್, ನವದೆಹಲಿ, ೧೯೯೩.

ಕುಲದೀಪ್ ನಯ್ಯರ್, ಒಂದು ಜೀವನ ಸಾಲದು, ನವಕರ್ನಾಟಕ ಪಬ್ಲಿಕೇಷನ್, ಬೆಂಗಳೂರು, ೨೦೧೨.

ಕುಲದೀಪ್ ಮಾಥೂರ್, ಡೆವಲಪ್‌ಮೆಂಟ್ ಪಾಲಿಸಿ ಆಂಡ್ ಎಡ್ಮಿನಿಸ್ಟ್ರೇಶನ್, ಸಾಗೆ ಪಬ್ಲಿಕೇಶನ್ಸ್, ನವದೆಹಲಿ, ೧೯೯೬.

ಕೃಷ್ಣ ಅಯ್ಯರ್ ವಿ.ಆರ್. ಸೊಶಿಯಲ್ ಮಿಷನ್ ಆಫ್ ಸರ್ವಿಸ್ ಮ್ಯಾಟರ್ಸ್, ಜಸ್ಟಿಸ್ ಪಬ್ಲಿಷರ್ಸ್, ನವದೆಹಲಿ, ೧೯೭೬.

ಕೃಷ್ಣ ಕೋಲಾರ ಕುಲಕರ್ಣಿ, ಆದಿಲ್‌ಶಾಹಿ ಆಡಳಿತ ಕಾನೂನು ವ್ಯವಸ್ಥೆ, ಕರ್ನಾಟಕ ಕಾನೂನು ಮತ್ತು ಸಂಸದೀಯ ಸುಧಾರಣಾ ಸಂಸ್ಥೆ, ಬೆಂಗಳೂರು, ೨೦೦೯.

ಕೃಷ್ಣಪ್ಪ ಎಂ.ಪಿ., ಎರಾಡಿಕೇಟ್ ಕರಪ್ಶನ್ ಅಂಡ್ ಸೇವ್ ದ ನೇಶನ್, ಕೃಷ್ಣಪ್ಪ ಪಬ್ಲಿಕೇಶನ್ಸ್, ಬೆಂಗಳೂರು, ೨೦೧೨.

ಕೃಷ್ಣಸಿಂಗ್ ಪಥೀ, ಕರಪ್ಶನ್ ಇನ್ ಪಾಲಿಟಿಕ್ಸ್; ಎ ಕೇಸ್ ಸ್ಟಡಿ, ಬಿ.ಆರ್. ಪಬ್ಲಿಷಿಂಗ್ ಕಾರ್ಪೋರೇಷನ್, ನವದೆಹಲಿ, ೧೯೮೬.

ಕೃಷ್ಣೇಗೌಡ. ಎಚ್.ಆರ್. ಆರ್ಥಿಕ ಬೆಳವಣಿಗೆ, ನಭಶ್ರೀ ಪ್ರಕಾಶನ, ಮೈಸೂರು, ೧೯೮೧.

ಕೊಟ್ರಸ್ವಾಮಿ ಎ.ಎಂ.ಎಂ. ಮಧ್ಯಕಾಲೀನ ಕರ್ನಾಟಕದ ಆಡಳಿತ ಕಾನೂನು ವ್ಯವಸ್ಥೆ, ಕರ್ನಾಟಕ ಕಾನೂನು ಮತ್ತು ಸಂಸದೀಯ ಸುಧಾರಣಾ ಸಂಸ್ಥೆ, ಬೆಂಗಳೂರು, ೨೦೦೮.

ಕೆರಳೀಕರ್ , ಲೋಕ ಅದಾಲತ್, ಕರ್ನಾಟಕ ವಿಶ್ವವಿದಾಲಯ, ಧಾರವಾಡ, ೧೯೯೯.

ಕೌಟಿಲ್ಯ ಕೌಟಿಲ್ಯನ ಅರ್ಥಶಾಸ್ತ್ರ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ೧೯೬೫.

ಗುನ್ನಾರ್ ಮಿರ್‌ಡಾಲ್, ಏಷ್ಯನ್ ಡ್ರಾಮ; ಆನ್ ಇನ್‌ಕ್ವೈಯರಿ ಇನ್ ಟು ದ ಪಾವರ್ಟಿ ಆಫ್ ನೇಷನ್ಸ್, ಸ್ಟಾರ್ ಪಬ್ಲಿಷರ್ಸ್, ಅಹಮದಾಬಾದ್, ೧೯೮೭.

ಗುಪ್ತ ಕೆ.ಎನ್. ಕರಪ್ಶನ್ ಇನ್ ಇಂಡಿಯಾ, ಅನಮೋಲ್ ಪಬ್ಲಿಕೇಷನ್ಸ್ ಪ್ರೈವೆಟ್ ಲಿಮಿಟೆಡ್, ಮುಂಬೈ, ೨೦೦೧.

ಗುರುಪಾಲ ಸಿಂಗ್, ಕರಪ್ಶನ್, ಟ್ರಾನ್ಸಪೆರೆನ್ಸಿ ಆ್ಯಂಡ್ ಗುಡ್ ಗವರ್ನನ್ಸ್, ಅಜೆಂಡಾ ಇನ್ ಇಂಡಿಯಾ, ನವದೆಹಲಿ, ೨೦೦೩.

ಗೋಪಿನಾಥ್ , ಸಿಂಪ್ಲಿ ಫ್ಲೈ ಎ ಡೆಕ್ಕನ್ ಓಡಿಸ್ಸಿ, ಕಾಲಿನ್ಸ್ ಬಿಜಿನೆಸ್ ಪಬ್ಲಿಷರ್ಸ್, ನವದೆಹಲಿ, ೨೦೧೦.

ಚಂದ್ರ ಪೂಜಾರಿ ಎಂ. ಸಂಶೋಧನೆ? ಏಕೆ? ಹೇಗೆ?, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦೯.

ಚಂದ್ರಶೇಖರ್ ಟಿ.ಆರ್.(ಸಂ), ವಿಜಾಪೂರ ಜಿಲ್ಲಾ ಮಾನವ ಅಭಿವೃದ್ಧಿ, ಗ್ರಾಮೀಣ ಅಭಿವೃದ್ಧಿ ವರದಿ, ಯೋಜನಾ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಕರ್ನಾಟಕ ಸರಕಾರ, ೨೦೧೦.

ಚಂದ್ರಶೇಖರ್ ಟಿ.ಆರ್. ಅಮರ್ತ್ಯ ಸೇನ್ ಅಭಿವೃದ್ಧಿ ಕಥನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ೧೯೯೯.

ಚೌಹಾಣ್ ಆರ್.ಜಿ. ದ ಕರ್ನಾಟಕ ಲೋಕಾಯುಕ್ತ ಆಕ್ಟ್ ೧೯೮೪, ಲಾ ಪಬಿಷರ್ಸ್, ಬೆಂಗಳೂರು, ೧೯೯೨.

ಜನಾರ್ದನ, ಕರ್ನಾಟಕದಲ್ಲಿ ಗ್ರಾಮೀಣ ಆರೋಗ್ಯ, (ಅಪ್ರಕಟಿತ ಪಿಎಚ್.ಡಿ.) ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೦.

ಜವಾಹರಲಾಲ್ ನೆಹರು, ಡಿಸ್ಕವರಿ ಆಫ್ ಇಂಡಿಯಾ, ನ್ಯಾಷನಲ್ ಬುಕ್ ಟ್ರಸ್ಟ್ ಆಫ್ ಇಂಡಿಯಾ, ನವದೆಹಲಿ, ೧೯೭೦.

ಜಗಮೋಹನ, ಮೈ ಪ್ರೋಜನ್ ಟ್ರರ್ಬುಲೆನ್ಸ್ ಇನ್ ಕಾಶ್ಮೀರ, ಅಲೈಡ್ ಪಬ್ಲಿಷರ್ಸ್ ಲಿಮಿಟೆಡ್, ನವದೆಹಲಿ, ೧೯೯೪.

ಜಾನ್ ಬಿ. ಮಾಂಟೆರಿಯೋ, ಕರಪ್ಷನ್; ಕಂಟ್ರೋಲ್ ಆಫ್ ಮಾಲ್‌ಅಡ್ಮಿನಿಸ್ಟ್ರೇಷನ್, ಮಾನಕ್‌ತಲಾಸ್, ಬಾಂಬೆ, ೧೯೬೬.

ತಿಂಗನ್ ಎಮ್.ಎಲ್.ಎಕನಾಮಿಕ್ಸ್ ಆಫ್ ಡೆವಲೆಪಮೆಂಟ್ ಆ್ಯಂಡ್ ಪ್ಲಾನಿಂಗ್, ಭಾರತ ಸರ್ಕಾರ, ನವದೆಹಲಿ, ೧೯೭೯.

ದ ಸೆಂಟ್ರಲ್ ಇನ್‌ಫಾರ್ಮೇಷನ್ ಕಮೀಷನ್, ನವದೆಹಲಿ, ೨೦೦೩.

ದ್ವಿವೇದಿ, ಸುರೇಂದ್ರನಾಥ, ಭಾರ್ಗವ ಜಿ.ಎಸ್., ಪೊಲಿಟಿಕಲ್ ಕರಪ್ಶನ್ ಇನ್ ಇಂಡಿಯಾ, ನವದೆಹಲಿ, ೧೯೬೭.

ನೂರಾನಿ ಎ.ಜಿ., ಮಿನಿಸ್ಟರ್ಸ್ ಮಿಸ್‌ಕಂಡಕ್ಟ್, ವಿಕಾಸ್ ಪಬ್ಲಿಷರ್ಸ್, ನವದೆಹಲಿ, ೧೯೭೩.

ಪ್ರಫುಲ್ ಬಿಸ್ವಿ, ಇಂಡಿಯಾ: ಲೀಗಲ್ ಸಿಸ್ಟಮ್ ಇನ್ ಡಾರ್ಕ್, ಅಲೈಡ್ ಪಬ್ಲಿಷರ್ಸ್, ನವದೆಹಲಿ, ೨೦೦೮.

ಪ್ರಕಾಶ ಎಮ್.ಜಿ., ಲೋಕಾಯುಕ್ತ ವರದಿ, ಶ್ರೀ ಬಿ.ಎಸ್. ಯಡಿಯೂರಪ್ಪ ಬಲಿಪಶು ಆದರೆ?, ಗಾಂಧಿನಗರ ಪ್ರಕಾಶನ, ಬೆಂಗಳೂರು, ೨೦೧೧.

ಪೀಟರ್ ಎಂ. ವರ್ಡ್, 'ಕರಪ್ಶನ್ ಡೆವಲಪ್‌ಮೆಂಟ್ ಅಂಡ್ ಇನ್‌ಈಕ್ವಾಲಿಟಿ', ರೌಟ್‌ಲೆಡ್ಜ್ ಪಬ್ಲಿಷರ್ಸ್. ಲಂಡನ್, ೧೯೮೯.

ಪುರಿ ಜಿ.ಜಿ. ಮತ್ತು ಜೋಷಿ ವಿ.ಟಿ., ಇಂಡಿಯಾ ಅಟ್ ದ ಕ್ರಾಸ್ ರೋಡ್ಸ್, ಪಾಪ್ಯುಲರ್ ಪಬ್ಲಿಷರ್ಸ್, ಮದ್ರಾಸ್, ೧೯೯೦.

ಪೊಲಿಟಿಕಲ್ ಆಫ್ ಎಕನಾಮಿಕ್ ರಿಸ್ಕ್ ಕನ್ಸಲ್ಟೆನ್ಸಿ ವರದಿ, ಹಾಂಕಾಂಗ್, ೨೦೧೧.

ಬಸವರಾಜು ಎಲ್.(ಸಂ), ಬಸವ ವಚನಾಮೃತ, ಬಸವ ಸಮಿತಿ, ಬೆಂಗಳೂರು, ೧೯೮೯.

ಬಿಜು ಪೌಲ್, ಗುಡ್ ಗವರ್ನೆನ್ಸ್, ಡೆಮಾಕ್ರಟಿಕ್ ಸೊಸೈಟಿಜ್ ಆಂಡ್ ಗ್ಲೋಬ್‌ಲೈಜೇಶನ್, ಸಾಗೆ ಪಬ್ಲಿಕೇಶನ್ಸ್, ನವದೆಹಲಿ, ೨೦೦೪.

ಬಾಲಸುಬ್ರಮಣ್ಯಮ್ ಆರ್. ಭ್ರಷ್ಟಾಚಾರವೆಂಬ ರೋಗವು ಮನುಷ್ಯರೆಂಬ ನಾವು, ವಿಸ್ಮಯ ಪ್ರಕಾಶನ, ಮೈಸೂರು, ೨೦೧೧.

ಬೈಬೆಕ್ ದಿಬ್ರೊ, ಅಜೆಂಡಾ ಪಾರ್ ಇಂಪ್ರೂವಿಂಗ್ ಗವರ್ನೆನ್ಸ್ ಅಕಾಡೆಮಿಕ್ ಪೌಡೇಶನ್, ನವದೆಹಲಿ, ೧೯೯೬.

ಭಟ್ನಾಗರ್. ಪಿ.ಎಸ್., ಇಂಡಿಯನ್ ಎಡ್ಮಿನಿಸ್ಟ್ರೆಶನ್: ಇಶ್ಯೂಜ್ ಆಂಡ್ ಆಪಶನ್ಸ್, ಮಂಗಲದೀಪ್ ಪಬ್ಲಿಕೇಶನ್, ಜೈಪುರ, ೨೦೦೩.

ಮಲ್ಲೇಪುರಂ ಜಿ. ವೆಂಕಟೇಶ (ಸಂ), ಕನ್ನಡ ವಾರ್ಷಿಕ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೧೯೯೨.

ಮುಜೀಬ ಅಹಮದ್ ಎಚ್.ಎಂ., ಆಡಳಿತಶಾಹಿ ಮತ್ತು ಬಸವಣ್ಣ, ಬಸವಪಥ ಸೆಪ್ಟಂಬರ್, ೨೦೧೩.

ಮಹಾತ್ಮಾ ಗಾಂಧಿ, ಬಂಚ್ ಅಪ್ ಲೆಟರ್ಸ್, ನವಜೀವನ ಟ್ರಸ್ಟ್, ಅಹಮದಾಬಾದ್, ೧೯೬೧.

ಮಾಹಿತಿ ಮೂಲ, ಕರ್ನಾಟಕ ಲೋಕಾಯುಕ್ತ ಕಛೇರಿ,(ಪ್ರಕರಣ ಸಂ.UPA-BCD ೧೭೩/೯೫-೯೬).

ಮಾಥೂರ. ಬಿ.ಪಿ., ಗವರ್ನೆನ್ಸ್ ರೀಫಾರ್ಮ್ ಫಾರ್ ವಿಜನ್ ಇಂಡಿಯಾ, ಮ್ಯಾಕ್‌ಮಿಲನ್ ಇಂಡಿಯಾ ಲಿಮಿಟೆಡ್, ನವದೆಹಲಿ, ೨೦೦೫.

ಮಾಧವ ಗೋಡಬೋಲೆ, ರಿಪೋರ್ಟ್ ಆಫ್ ಒನ್ ಮ್ಯಾನ್ ಕಮಿಟಿ ಆನ್ ಗುಡ್ ಗವರ್ನೆನ್ಸ್, ಮಹಾರಾಷ್ಟ್ರ ಸರ್ಕಾರ, ಮುಂಬೈ, ೨೦೦೩.

ಮೌಲಾನಾ ಸೈಯ್ಯದ್ ಅಲಾ ಮೌದೂದಿ, ಪೊಲಿಟಿಕಲ್ ಥಿಯರಿ ಆಫ್ ಇಸ್ಲಾಂ ಮಿಲ್ಲಿಯಾ ಪಬ್ಲಿಕೇಷನ್ಸ್, ನವದೆಹಲಿ, ೧೯೩೯.

ಮೊರಾರ್ಜಿ ದೇಸಾಯಿ, ಫಸ್ಟ್ ಆಡ್ಮಿನಿಸ್ಟ್ರೇಟಿವ್ ರಿಫಾರ್ಮ್ಸ್ ಕಮಿಟಿ ರಿಪೋರ್ಟ, ಗವರ್ನಮೆಂಟ್ ಆಫ್ ಇಂಡಿಯಾ, ನವದೆಹಲಿ, ೧೯೬೬.

ಮೈಕೆಲ್ ಕ್ಲಾರ್ಕ್, ಕರಪ್ಶನ್; ಕಾಸಸ್, ಕಾನ್ಸಿಕ್ವೆನ್ಸಸ್ ಅಂಡ್ ಕಂಟ್ರೋಲ್, ಫ್ರಾನ್ಸಿಸ್ ಪ್ರಿಂಟರ್, ಪಬ್ಲಿಷರ್ಸ್, ಲಂಡನ್, ೧೯೮೩.

ಮಿಖಾಯಿಲ್ ಗೋರ್ಬಚೆವ್, ಪೆರೆಸ್ತ್ರೋಯ್ಕ, ಯುಎಸ್‌ಎಸ್‌ಆರ್, ಮಾಸ್ಕೊ, ೧೯೮೮.

ರಾಬರ್ಟ್ ಶೆರಿಲ್, ಗವರ್ನಿಂಗ್ ಅಮೇರಿಕಾ, ಹರ್ ಕೋರ್ಟ್ ಬ್ರೆಸ್ ಜೊವನೊವಿಕ್, ಅಮೇರಿಕಾ, ೧೯೭೮.

ರಾಮಕೃಷ್ಣ ಪಿ.ವಿ., ಎ ಟ್ರೀಟೈಸ್ ಆನ್ ಆಂಟಿ ಕರಪ್ಶನ್ ಲಾಸ್ ಇನ್ ಇಂಡಿಯಾ, ಶಂಕರ್ ಪಬ್ಲಿಷರ್ಸ್, ಮದ್ರಾಸ್, ೧೯೮೮.

ರಾಮಾ ಜೋಯಿಸ್, ಘಟಿಕೋತ್ಸವ ಭಾಷಣ, ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೧೧.

ರಾಮಾ ಜೋಯಿಸ್, ಸರ್ವೀಸ್ ಮ್ಯಾಟರ್ಸ್, ಲಾ ಪಬ್ಲಿಷರ್ಸ್, ಬೆಂಗಳೂರು, ೧೯೯೫.

ರಾಜಸ್ವತ ಜೆ.ಎಸ್. (ಸ್ಪೇಷಲ್ ಪಬ್ಲಿಕ್ ಪ್ರಾಸಿಕ್ಯೂಟರ್, ಸಿ.ಬಿ.ಐ) ಮೀನ್ಸ್ ಆಫ್ ಕರಪ್ಶನ್: ಕಾಜಸ್ ಆಂಡ್ ಇಟ್ಸ್ ಕ್ಯೂರ್, ಕ್ರಿಮಿನಲ್ ಲಾ ಜರ್ನಲ್, ಸೆಪ್ಟಂಬರ್ ೨೦೧೩, ನಾಗ್ಪುರ.

ರಾಜೇಂದ್ರ, ಪಿ. ಭಲೇ ಲೋಕಾಯುಕ್ತ, ಭಾಗೀರಥಿ ಪ್ರಕಾಶನ, ಬೆಂಗಳೂರು, ೨೦೦೬, ಪುಟ ೩.

ರಾಜ್‌ಕುಮಾರ್ ಸಿ. ಕರಪ್ಶನ್ ಅಂಡ್ ಹ್ಯೂಮನ್‌ರೈಟ್ಸ್, ಎಕನಾಮಿಕಲ್ ಆಂಡ್ ಪೊಲಿಟಿಕಲ್ ವೀಕ್ಲಿ, ೨೦೦೯.

ರೇವಯ್ಯ ಒಡೆಯರ್, ರಾಜ್ಯಪಾಲ ಒಂದು ವಿಶ್ಲೇಷಣೆ, ಕರ್ನಾಟಕ ಕಾನೂನು ಮತ್ತು ಸಂಸದೀಯ ಸುಧಾರಣಾ ಸಂಸ್ಥೆ, ಬೆಂಗಳೂರು, ೨೦೦೮.

ರೇವಯ್ಯ ಒಡೆಯರ್, ಸಂಸದೀಯ ಇತಿಹಾಸ, ಕರ್ನಾಟಕ ಕಾನೂನು ಮತ್ತು ಸಂಸದೀಯ ಸುಧಾರಣಾ ಸಂಸ್ಥೆ, ಬೆಂಗಳೂರು, ೨೦೦೮.

ರೇವಯ್ಯ ಒಡೆಯರ್, ಭಾರತೀಯ ರಾಜಕೀಯ ಪಕ್ಷ ಪದ್ಧತಿ, ಕರ್ನಾಟಕ ಕಾನೂನು ಮತ್ತು ಸಂಸದೀಯ ಸುಧಾರಣಾ ಸಂಸ್ಥೆ, ಬೆಂಗಳೂರು, ೨೦೦೮.

ರೇವಯ್ಯ ಒಡೆಯರ್, ನಮ್ಮ ವಿಧಾನ ಮಂಡಲ, ಕರ್ನಾಟಕ ಕಾನೂನು ಮತ್ತು ಸಂಸದೀಯ ಸುಧಾರಣಾ ಸಂಸ್ಥೆ, ಬೆಂಗಳೂರು, ೨೦೦೮.

ರೇವಯ್ಯ ಒಡೆಯರ್. ಪ್ರಜಾಪ್ರಭುತ್ವ ಮತ್ತು ಚುನಾವಣಾ ಪದ್ಧತಿ, ಕರ್ನಾಟಕ ಕಾನೂನು ಮತ್ತು ಸಂಸದೀಯ ಸುಧಾರಣಾ ಸಂಸ್ಥೆ, ಬೆಂಗಳೂರು, ೨೦೦೮.

ರೇವಯ್ಯ ಒಡೆಯರ್, ಅಧ್ಯಕ್ಷೀಯ ಮತ್ತು ಸಂಸದೀಯ ಸರ್ಕಾರಗಳು; ಒಂದು ತೌಲನಿಕ ಅಧ್ಯಯನ, ಕರ್ನಾಟಕ ಕಾನೂನು ಮತ್ತು ಸಂಸದೀಯ ಸುಧಾರಣಾ ಸಂಸ್ಥೆ, ಬೆಂಗಳೂರು, ೨೦೦೮.

ರೇವಯ್ಯ ಒಡೆಯರ್, ಮಾನವ ಹಕ್ಕುಗಳು–ಮಾನವತೆಯ ಶಾಸನ ರೂಪ, ಕರ್ನಾಟಕ ಕಾನೂನು ಮತ್ತು ಸಂಸದೀಯ ಸುಧಾರಣಾ ಸಂಸ್ಥೆ, ಬೆಂಗಳೂರು, ೨೦೦೮.

ರೇವಯ್ಯ ಒಡೆಯರ್, ಹಕ್ಕು ಕರ್ತವ್ಯಗಳು: ಒಂದು ಪರಿಕಲ್ಪನಾತ್ಮಕ ಅದ್ಯಯನ, ಕರ್ನಾಟಕ ಕಾನೂನು ಮತ್ತು ಸಂಸದೀಯ ಸುಧಾರಣಾ ಸಂಸ್ಥೆ, ಬೆಂಗಳೂರು, ೨೦೦೯.

ರೇವಯ್ಯ ಒಡೆಯರ್, ಆಧುನಿಕ ಆಡಳಿತ ಕಾನೂನು ಭಾಗ–೧, ಕೇಂದ್ರ ಸರ್ಕಾರ, ಕರ್ನಾಟಕ ಕಾನೂನು ಮತ್ತು ಸಂಸದೀಯ ಸುಧಾರಣಾ ಸಂಸ್ಥೆ, ಬೆಂಗಳೂರು, ೨೦೦೯.

ರೇವಯ್ಯ ಒಡೆಯರ್, ಆಧುನಿಕ ಆಡಳಿತ ಕಾನೂನು ಭಾಗ–೨, ರಾಜ್ಯ ಸರ್ಕಾರ, ಕರ್ನಾಟಕ ಕಾನೂನು ಮತ್ತು ಸಂಸದೀಯ ಸುಧಾರಣಾ ಸಂಸ್ಥೆ, ಬೆಂಗಳೂರು, ೨೦೦೯.

ರೇವಯ್ಯ ಒಡೆಯರ್, ಆಧುನಿಕ ಆಡಳಿತ ಕಾನೂನು ಭಾಗ–೩, ಸ್ಥಳೀಯ ಸರ್ಕಾರಗಳು, ಕರ್ನಾಟಕ ಕಾನೂನು ಮತ್ತು ಸಂಸದೀಯ ಸುಧಾರಣಾ ಸಂಸ್ಥೆ, ಬೆಂಗಳೂರು, ೨೦೦೯.

ಟ್ರಾನ್ಸಪರೆನ್ಸಿ ಇಂಟರ್ ನ್ಯಾಷನಲ್, ವಾರ್ಷಿಕ ವರದಿ, ೨೦೧೧.

ಲೆಸ್ಲಿ ಪಾಲ್ಮರ್, ದ ಕಂಟ್ರೋಲ್ ಆಫ್ ಬ್ಯೂರೋಕ್ರೆಟಿಕ್ ಕರಪ್ಶನ್; ಕೇಸ್ ಸ್ಟಡಿ ಇನ್ ಏಷ್ಯಾ', ಅಲೈಡ್ ಪಬ್ಲಿಷರ್ಸ್ ನವದೆಹಲಿ, ೧೯೮೫.

ಲಕ್ಷ್ಮೀಕಾಂತ ಎಂ.ಎಲ್., ಅಭಿಮತ ಅಂಕಣ, ಉದಯವಾಣಿ ದಿನಪತ್ರಿಕೆ, ಮಂಗಳೂರು, ೨೦೧೧.

ಲಕ್ಷ್ಮಣ. ದು.ಗು. ಕಾಂಗ್ರೆಸ್ಸಿನ ಹಗರಣಗಳ ಚಾಳಿ, ಧ್ಯೇಯ ಕಮಲ, ಸೆಪ್ಟಂಬರ್ ೨೦೧೨.

ವಿಶ್ವಸಂಸ್ಥೆ ವರದಿ, ನ್ಯೂಯಾರ್ಕ್, ೨೦೦೩

ವಿಶ್ವೇಶ್ವರಯ್ಯ ಎಂ., ಮೆಮೊರಿಜ್ ಆಫ್ ಮೈ ಪಬ್ಲಿಕ್ ಲೈಫ್, ಸದರ್ನ್ ಪಬ್ಲಿಷರ್ಸ್, ಮದ್ರಾಸ್, ೧೯೫೧.

ವಿವೇಕ ರೈ ಬಿ.ಎ., ಪ್ರವಾಸಿ ಕಂಡ ವಿಜಯನಗರ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೦.

ವಿವೇಕಾನಂದ, ಥಾಟ್ಸ್ ಆಫ್ ಶ್ರೀ ವಿವೇಕಾನಂದ, ಶ್ರೀ ರಾಮಕೃಷ್ಣ ಆಶ್ರಮ, ಕಲ್ಕತ್ತಾ, ೧೯೬೭.

ವೀರಪ್ಪ ಮೊಯಿಲಿ, ಸೆಕೆಂಡ್ ಆಡ್ಮಿನಿಸ್ಟ್ರೇಟಿವ್ ರಿಫಾರ್ಮ್ಸ್ ಕಮೀಟಿ ರಿಪೋರ್ಟ, ಗವರ್ನಮೆಂಟ್ ಆಫ್ ಇಂಡಿಯಾ, ನವದೆಹಲಿ, ೨೦೦೮.

ವಿರೇಂದ್ರ ಗ್ರೋವರ್, ಪೊಲಿಟಿಕಲ್ ಸಿಸ್ಟಮ್ ಇನ್ ಇಂಡಿಯಾ, ಗ್ರೊವರ್ ಪಬ್ಲಿಷರ್ಸ್, ನವದೆಹಲಿ, ೧೯೯೫.

ವಿಠ್ಠಲ ಎನ್.ಕರಪ್ಶನ ಇನ್ ಇಂಡಿಯಾ; ದ ರೋಡ್ ಬ್ಯಾಕ್ ಟು ನ್ಯಾಷನಲ್ ಪ್ರಾಸ್ಪರಿಟಿ, ಅಕಾಡೆಮಿಕ್ ಫೌಂಡೇಶನ್, ನವದೆಹಲಿ, ೨೦೦೩.

ವೋರಾ ರಿಪೋರ್ಟ., ಗವರ್ನಮೆಂಟ್ ಆಫ್ ಇಂಡಿಯ, ನವದೆಹಲಿ, ೧೯೯೩.

ಶರ್ಮ ಎಂ.ಪಿ. ಹಾಗೂ ಸದನ ಬಿ.ಎಲ್., ಪಬ್ಲಿಕ್ ಅಡ್ಮಿನಿಸ್ಟ್ರೇಷನ್ ಇನ್ ಥಿಯರಿ ಅಂಡ್ ಪ್ರಾಕ್ಟೀಸ್, ಸದರ್ನ್ ಪಬ್ಲಿಷರ್ಸ್, ಮದ್ರಾಸ್, ೧೯೯೭.

ಶೆಫಾಲಿ ಕಾಲಿಯಾ, ಗುಡ್ ಗವರ್ನೆನ್ಸ್ ಆಂಡ್ ಡೆವಲಪಮೆಂಟ್, ನ್ಯೂ ಸೆಂಚುರಿ ಪಬ್ಲೀಕೇಷನ್ಸ್, ನವದೆಹಲಿ, ೨೦೦೪.

ಶ್ರೀಧರ್ ಜಿ., ಸರ್ಕಾರದ ವ್ಯವಹರಣೆ ಮತ್ತು ಕಾರ್ಯಹಂಚಿಕೆ, ಕರ್ನಾಟಕ ಕಾನೂನು ಮತ್ತು ಸಂಸದೀಯ ಸುಧಾರಣಾ ಸಂಸ್ಥೆ, ಬೆಂಗಳೂರು, ೨೦೦೯.

ಸುಧೀರ್ ಕೃಷ್ಣಸ್ವಾಮಿ, ವಿಕಾಸ ಕುಮಾರ್ ಹಾಗೂ ಡಾ. ನಾರಾಯಣ ವಿ., ಕರ್ನಾಟಕ ಲೋಕಾಯುಕ್ತ ಸಾಧಕ ಭಾದಕಗಳ ವರದಿ, ಅಜೀಂ ಪ್ರೇಮಜಿ ವಿಶ್ವವಿದ್ಯಾಲಯ, ಬೆಂಗಳೂರು, ೨೦೧೧.

ಸುಭಾಷ್‌ಚಂದರ್ ಗುಪ್ತ, ಓಂಬುಡ್ಸ್‌ಮನ್, ಆನ್ ಇಂಡಿಯನ್ ಪರ್ಸ್‌ಪೆಕ್ಟಿವ್, ವೀಸಸ್, ಚಂದರ ಪಬ್ಲಿಷರ್ಸ್, ಕಲ್ಕತ್ತಾ, ೧೯೬೭.

ಸಂಜೀವ ಶರ್ಮಾ, ಗುಡ್ ಗವರ್ನೆನ್ಸ್ ಇನ್ ಎನಿಸಿಯೆಂಟ್ ಇಂಡಿಯಾ, ಚರಣಸಿಂಗ್ ಯುನಿವರ್ಸಿಟಿ. ಮಿರತ್, ೨೦೦೩.

ಸಂಜೀವ ಗುಹಾನ ಹಾಗೂ **ಸ್ಯಾಮುಯೆಲ್ ಪೌಲ್**, ಕರಪ್ಶನ್ ಇನ್ ಇಂಡಿಯಾ; ಅಜೆಂಡಾ ಫಾರ್ ಆ್ಯಂಕ್ಷನ್, ವಿಸನ್ ಬುಕ್ಸ್, ಮುಂಬೈ, ೧೯೯೭.

ಸುರೇಶ ಕೊಹ್ಲಿ, ಕರಪ್ಶನ್ ಇನ್ ಇಂಡಿಯ; ದಿ ಗ್ರೋವಿಂಗ್ ಇವಿಲ್ ಇಂಡಿಯ. ಚೇತನ ಪ್ರೈವೈಟ್ ಲಿ, ಮುಂಬೈ, ೧೯೭೫.

ಸುರೇಂದ್ರನಾಥ ದ್ವಿವೇದಿ ಹಾಗೂ **ಭಾರ್ಗವ ಜಿ.ಎಸ್**. ಪೊಲಿಟಿಕಲ್ ಕರಪ್ಶನ್, ಪಾಪುಲರ್ ಬುಕ್. ನ್ಯೂಡೆಲ್ಲಿ, ೧೯೮೭

ಸಂತಾನಂ ಕೆ.ಎ. ಭ್ರಷ್ಟಾಚಾರ ನಿವಾರಣಾ ಸಮಿತಿ, ಭಾರತೀಯ ಸಂಸತ್ತು, ನವ ದೆಹಲಿ, ೧೯೬೪.

ಸಂತೋಷ ಹೆಗಡೆ , ಗಣಿ ಹಗರಣ ವರದಿ, ಲೋಕಾಯುಕ್ತ ಸಂಸ್ಥೆ, ಬೆಂಗಳೂರು, ೨೦೧೧.

ಸಂತೋಷ್ ಹೆಗಡೆ, ೨೦೦೯-೧೦ರ ಕರ್ನಾಟಕ ಲೋಕಾಯುಕ್ತ ವಾರ್ಷಿಕ ವರದಿ, ಕರ್ನಾಟಕ ಸರ್ಕಾರ, ಬೆಂಗಳೂರು, ೨೦೧೧.

ಸಂತೋಷ ಹೆಗಡೆ, ಕೆಐಎಡಿಬಿ ಹಗರಣ ವರದಿ, ಲೋಕಾಯುಕ್ತ ಸಂಸ್ಥೆ, ಬೆಂಗಳೂರು, ೨೦೧೧

ಸಂಧ್ಯಾ ಎ., ಕೊಹಿನೂರು ಭಾರತದಲ್ಲಿರುವ ಏಕೈಕ ವಜ್ರವೆ? ಶೋಧ-ಪರಿಶೋಧ ಪತ್ರಿಕೆ, ಏಪ್ರಿಲ್ ೨೦೧೩, ಪುಟ ೧೦೫, ಕರ್ನಾಟಕ ಸಂಶೋಧಕರ ಒಕ್ಕೂಟ, ಬೆಂಗಳೂರು.

ಸೋಮಯ್ಯ ಸಿ.ಜಿ., ದ ಹಾನೆಸ್ಟ್ ಆಲವೇಜ್ ಸ್ಟ್ಯಾಂಡ ಅಲೋನ್, ನಿಯೋಗಿ ಬುಕ್ಸ್, ನವದೆಹಲಿ, ೨೦೧೦.

ಹಾಲಯ್ಯ ಎಂ. ಕರಪ್ಶನ್ ಇನ್ ಇಂಡಿಯಾ, ಅಫಿಲಿಯೇಟೆಡ್ ಇಸ್ಟ್-ವೆಸ್ಟ್ ಪ್ರೆಸ್, ಮುಂಬೈ, ೧೯೮೫.

ಹೊಳ್ಳ ಎ.ಎಸ್. ಹ್ಯಾಂಡ್‌ಬುಕ್ ಆನ್ ಡಿಸಿಪ್ಲೀನರಿ ಪ್ರೊಸೀಡಿಂಗ್ಸ್ ಎಗೆನೆಸ್ಟ್ ಗೌರ್ನಮೆಂಟ್ ಸರ್ವೆಂಟ್ಸ್ ಇನ್ ಕರ್ನಾಟಕ, ಲಾ ಪಬ್ಲಿಷರ್ಸ್, ಬೆಂಗಳೂರು, ೧೯೯೭.

ಹೈಡನ್ ಹೈಮರ್ ಎ.ಜೆ. ಪೊಲಿಟಿಕಲ್ ಕರಪ್ಶನ್; ರೀಡಿಂಗ್ ಇನ್ ಕಂಪಾರಿಟೀವ್ ಅನಾಲಿಸೀಸ್, ವಿಂಡ್‌ಸ್ಟೋನ್ ಪಬ್ಲಿಷರ್ಸ್, ನ್ಯೂಯಾರ್ಕ್, ೧೯೭೦.

ನಿಯತಕಾಲಿಕೆಗಳು

ಇಂಡಿಯಾ ಫೋರೆನ್ಸಿಕ್ ವರದಿ, ಪುಣೆ, ೨೦೧೧.

ಕೃಷ್ಣ ಪ್ರಸಾದ ಬಿ.ಎಸ್. ಸರ್ಕಾರದ ಕೆಲಸ ದೇವರ ಕೆಲಸ, ಕನ್ನಡಪ್ರಭ, ಪುಟ ೮, ಮೇ ೨೮, ೨೦೧೩.

ಗೌತಮ ನವಲಕ, ಲೋಕಪಾಲ್ ಮೂಮೆಂಟ್ ಆನ್ ಆನ್ಸರ್ಡ್ ಕೊಶ್ಚನ್ಸ್, ಎಕಾನಮಿಕಲ್, ಪೊಲಿಟಿಕಲ್ ವೀಕ್ಲಿ, ೨೦೧೧.

ಚಕ್ರವರ್ತಿ ಕೆ.ಕೆ. ಕರಪ್‌ಷನ್; ಮಿಸ್‌ಕಾನ್ಸ್‌ಸೆಪ್ಷನ್ ಎಬೌಟ್‌ದ ಡಿಸೀಜ್ ಅಂಡ್ ದ ಮೆಡಿಸನ್, ಎಕನಾಮಿಕಲ್ ಆಂಡ್ ಪೊಲಿಟಿಕಲ್ ವೀಕ್ಲಿ, ೨೦೦೭.

ಡೊನಾಲ್ಡ್ ಪೆರಿರಾ, ಹಿಡಿತ ತಪ್ಪಿದ ಮಾಧ್ಯಮವನ್ನು ಏಕೆ ನಿಯಂತ್ರಿಸಬಾರದು?, ಕನ್ನಡಪ್ರಭ, ದಿನಪತ್ರಿಕೆ, ಬೆಂಗಳೂರು, ೨೦೧೧.

ಜಾರ್ಜ್ ಟಿ.ಜೆ.ಎಸ್, ಒಂದೇ ಬಳ್ಳಿಯ ಹೂಗಳು, ಅಂತರಂಗ ಅಂಕಣ ಕನ್ನಡಪ್ರಭ, ಅಕ್ಟೋಬರ್ ೧೫, ೨೦೧೩.

ಜೀವನ್ ಗಾಂವಕರ್, ಮಾಜಿ ಪ್ರಧಾನ ಮಂತ್ರಿಯಿಂದ ಧಮಕಿ, ಪ್ರಜಾವಾಣಿ ದಿನಪತ್ರಿಕೆ, ಬೆಂಗಳೂರು, ೨೦೧೧.

ನೂರಾನಿ ಎ.ಜಿ. ಡಿಸ್ಸ್‌ಮಿಸ್ಸಿಂಗ್ ಎ ಚೀಫ್ ಮಿನಿಸ್ಟರ್, ಫ್ರಂಟ್‌ಲೈನ್ ಪತ್ರಿಕೆ, ಮದ್ರಾಸ್, ೨೦೧೧.

ನೇಹಾ ಖಟೋರ, ನಮ್ಮ ದೇಶಕ್ಕೆ ಎಂತಹ ನಾಯಕನ ಅಗತ್ಯವಿದೆ?, ಕನ್ನಡಪ್ರಭ, ಪು೭, ಸೆಪ್ಟೆಂಬರ್ ೨೦, ೨೦೧೩.

ನಿರ್ಮಲಾ ಸೀತಾರಾಮನ್, ಕ್ವಾಯಿಟ್ ಪ್ಲೋಜ್ ರಿಪಾರ್ಮ್ ಇನ್ ಉತ್ತರಖಂಡ, ಡೆಕ್ಕನ್ ಕ್ರಾನಿಕಲ್ ದಿನಪತ್ರಿಕೆ, ೨೦೧೧.

ಪಾಟೀಲ ಪುಟ್ಟಪ್ಪ, ಭ್ರಷ್ಟಾಚಾರಿಗಳಿಗೆ ಗಲ್ಲು ಯಾವಾಗ?, ಪ್ರಪಂಚ ಪತ್ರಿಕೆ, ಹುಬ್ಬಳ್ಳಿ, ೧೯೯೫.

ಫಾಲಿ ಎಸ್. ನಾರಿಮನ್, ದ ಕಸ್ಟೋಡಿಯನ್ ಆಫ್ ಪಬ್ಲಿಕ್ ಕಾನ್ಸನ್ಸ್, ಔಟಲುಕ್ ಪತ್ರಿಕೆ, ಮದ್ರಾಸ್, ೨೦೦೬.

ಬಾಲ್ಮೀಕಿ ಪ್ರಸಾದ ಸಿಂಹ, ದಿ ಚಾಲೆಂಜ್ ಆಫ್ ಗುಡ್ ಗವರ್ನೆನ್ಸ್ ಇನ್ ಇಂಡಿಯಾ; ನೀಡ್ ಫಾರ್ ಇನ್ನೋವೇಟಿವ್ ಅಪ್ರೋಚಿಸ್, ಆಕ್ಸಫರ್ಡ್ ಯುನಿವರ್ಸಿಟಿ ಪ್ರೆಸ್, ನವದೆಹಲಿ, ೨೦೦೮.

ಮಧುಕರ ಶೆಟ್ಟಿ ಆರ್. ಲೋಕಾಯುಕ್ತದಲ್ಲಿ ಎಲ್ಲವೂ ಸರಿಯಿಲ್ಲ, ಕನ್ನಡಪ್ರಭ ದಿನಪತ್ರಿಕೆ, ಬೆಂಗಳೂರು, ೨೦೧೧.

ಮೊಹಮ್ಮದ್ ಮೊಹಬ್ಬತ್ ಖಾನ್, ಪೊಲಿಟಿಕಲ್ ಅಂಡ್ ಅಡ್ಮಿನಿಸ್ಟ್ರೇಟಿವ್ ಕರಪ್ಶನ್; ಕಾನ್ಸೆಪ್ಟ್ಸ್, ಕಂಪಾರಿಟೀವ್ ಎಕ್ಸ್‌ಪೀರಿಯನ್ಸ್ ಅಂಡ್ ಬಾಂಗ್ಲಾದೇಶ್ ಕೇಸ್, ಢಾಕಾ ಟೈಮ್ಸ್, ೨೦೦೯.

ರವಿಶಂಕರ ಗುರೂಜಿ, ಬ್ರಹ್ಮಾಂಡವೆಲ್ಲಾ ಭ್ರಷ್ಟಾಚಾರ, ಸ್ಪೀಕಿಂಗ್ ಟ್ರೀ ಅಂಕಣ, ವಿಜಯ ಕರ್ನಾಟಕ, ಬೆಂಗಳೂರು, ೨೦೧೧.

ಲಕ್ಷ್ಮೀಕಾಂತ ಎಚ್.ಎಂ., ಲೋಕಾಯುಕ್ತ ಸಂಸ್ಥೆಯನ್ನೂ ಭ್ರಷ್ಟಗೊಳಿಸಿದ್ದು ಯಾರು?, ಉದಯವಾಣಿ, ಪುಟ ೮, ನವಂಬರ್ ೨೧, ೨೦೧೧.

ವಿಶ್ವನಾಥ ಪ್ರತಾಪ ಸಿಂಗ್, ಬೊಫೋರ್ಸ್ ಹಗರಣ ಹಾಗೂ ಸಾಮಾಜಿಕ ಪರಿಣಾಮ, ಫ್ರೆಂಟ್‌ಲೈನ್ ಪತ್ರಿಕೆ, ಮದ್ರಾಸ್, ೧೯೯೦.

ಶಿವಾನಂದ ಮೂಲಿನಮನಿ. ನಾವು ಬೇರೆಯವರಿಂದ ಯಾಕೆ ಕಲಿಯುವುದಿಲ್ಲ?, ಕನ್ನಡಪ್ರಭ, ಪುಟ ೨೨, ಸೆಪ್ಟೆಂಬರ್ ೨೦೧೩.

ಶಿವರಾಜ ಪಾಟೀಲ. ಪಿತೂರಿಗೆ ಬಲಿಯಾದೆ, ಉದಯವಾಣಿ ದಿನಪತ್ರಿಕೆ, ಬೆಂಗಳೂರು, ೨೦೧೧.

ಸಂಪಾದಕೀಯ, ಎಚ್ಚರಿಕೆಯ ಘಂಟೆ, ಪ್ರಜಾವಾಣಿ, ಪುಟ ೬, ೧ನೇ ಅಕ್ಟೋಬರ್ ೨೦೧೩,

ಸಂಗೀತ ಎಸ್.ಎನ್. ಆಂಟಿ ಕರಪ್ಶನ್ ಸ್ಟ್ರಾಟಜೀಸ್; ಎ ಪೊಲಿಟಿಕಲ್ ಪರ್‌ಸ್ಪೆಕ್ಟೀವ್, ದ ಹಿಂದೂ ದಿನಪತ್ರಿಕೆ, ೧೯೯೮.

ಸಂಗೀತ ಎಸ್.ಎನ್. ದ ಲೋಕಾಯುಕ್ತ ಇನ್ಸ್‌ಸ್ಟಿಟ್ಯೂಷನ್ ಇನ್ ಕರ್ನಾಟಕ; ಎ ಟ್ರೆಂಡ್ ಸೆಟ್ಟರ್ ಫಾರ್ ದ ತ್ರಿಟೈರ್ ಸ್ಟ್ರಕ್ಚರ್ ಓಂಬುಡ್ಸ್‌ಮನ್ ಇನ್ ಇಂಡಿಯಾ, ಟೈಮ್ಸ್ ಅಫ್ ಇಂಡಿಯಾ, ದಿನಪತ್ರಿಕೆ, ೨೦೦೫.

ಹರಿಪ್ರಸಾದ. ಭ್ರಷ್ಟಾಚಾರ ನಿಯಂತ್ರಣದಲ್ಲಿ ಲೋಕಾಯುಕ್ತದ ಪಾತ್ರ, ಕನ್ನಡಪ್ರಭ, ಪತ್ರಿಕೆ ೨೧.೯.೨೦೧೧.

ಕನ್ನಡ ವಿಶ್ವವಿದ್ಯಾಲಯ

ಮಾತೆಂಬುದು ಜ್ಯೋತಿರ್ಲಿಂಗ